# ಗಂಗಾಂಬಿಕೆ–ನೀಲಾಂಬಿಕೆ ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ)ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಶ್ರೀ ಮ.ನಿ.ಪ್ರ. ಹಿರಿಶಾಂತವೀರ ಮಹಾಸ್ವಾಮಿಗಳು

ಮಾರ್ಗದರ್ಶಕರು

ಡಾ. ಸುಚೇತ ನವರತ್ನ

ಸಹಾಯಕ ಪ್ರಾಧ್ಯಾಪಕರು



ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೩

# ಗಂಗಾಂಬಿಕೆ-ನೀಲಾಂಬಿಕೆ ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.) ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಶ್ರೀ ಮ.ನಿ.ಪ್ರ ಹಿರಿಶಾಂತವೀರ ಮಹಾಸ್ವಾಮಿಗಳು

ಮಾರ್ಗದರ್ಶಕರು
ಡಾ.ಸುಚೇತ ನವರತ್ನ
ಸಹಾಯಕ ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೩

# ಘೋಷಣಾ ಪತ್ರ

**ಡಾ.ಸುಚೇತ ನವರತ್ನ** ಅವರ ಮಾರ್ಗದರ್ಶನದಲ್ಲಿ **ಗಂಗಾಬಿಕೆ–ನೀಲಾಂಬಿಕೆ: ಒಂದು ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ **ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ** ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**ಶ್ರೀ ಮ.ನಿ.ಪ್ರ. ಹಿರಿಶಾಂತವೀರ ಮಹಾಸ್ವಾಮಿಗಳು**
ಸಂಶೋಧಕರು
**ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
**ವಿದ್ಯಾರಣ್ಯ ೫೮೩ ೨೭೬**

ಸ್ಥಳ:
ದಿನಾಂಕ:

## ಮಾರ್ಗದರ್ಶಕರ ಪ್ರಮಾಣ ಪತ್ರ

**ಶ್ರೀ ಮ.ನಿ.ಪ್ರ ಹಿರಿಶಾಂತವೀರ ಮಹಾಸ್ವಾಮಿಗಳು** ಇವರು ನನ್ನ ಮಾರ್ಗದರ್ಶನದಲ್ಲಿ **ಗಂಗಾಬಿಕೆ–ನೀಲಾಂಬಿಕೆ: ಒಂದು ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ.ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

S.N. Navaratna.

**ಡಾ.ಸುಚೇತ ನವರತ್ನ**
ಮಾರ್ಗದರ್ಶಕರು ಹಾಗೂ
ಸಹಾಯಕ ಪ್ರಾಧ್ಯಾಪಕರು
**ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
**ವಿದ್ಯಾರಣ್ಯ ೫೮೩ ೨೭೬**

ಸ್ಥಳ:
ದಿನಾಂಕ:

# ಪರಿವಿಡಿ

## ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಸಮೀಕ್ಷೆ

## ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಸಮೀಕ್ಷೆ

ಕರ್ನಾಟಕ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನದ ವಚನ ಚಳವಳಿ ಪರಿವರ್ತನೆಯ ಕಾಲಘಟ್ಟವಾಗಿದೆ. ಇಲ್ಲಿ ಮೂಲತಃ ಬಸವಾದಿ ಶಿವಶರಣರು ನಿಷ್ಠುರವಾದಿಗಳು ಜೊತೆಗೆ ಪರಂಪರೆಯನ್ನು ಕುರಿತು, ಧರ್ಮವನ್ನು ಕುರಿತು ಎಲ್ಲಕ್ಕೂ ಮಿಗಿಲಾಗಿ ತಮ್ಮನ್ನೇ ತಾವು ಪ್ರಶ್ನಿಸುವಂತದ್ದು. ಜೊತೆಗೆ ಸರಿಯಾದ ದಾರಿಗೆ ಹೋಗುವ ಮಾರ್ಗವನ್ನು ಅನುಭವ ಮಂಟಪದಲ್ಲಿ ಚರ್ಚೆಯ ಮೂಲಕ ಕಂಡುಕೊಳ್ಳುವ ಸೃಜನಶೀಲ ವ್ಯಕಿತ್ವ ಹೊಂದಿದವರು. ಅಲ್ಲದೆ ತಮ್ಮ ನಡೆನುಡಿಗಳಲ್ಲಿ ಎಚ್ಚೆತ್ತು, ಸಮಾಜದ ಸುವ್ಯವಸ್ಥೆಗೆ ಹೊಸ ಮೌಲ್ಯಗಳನ್ನು ಹುಟ್ಟುಹಾಕಲು ಕಾರಣರಾದರು. ಇಂತಹ ಕ್ರಾಂತಿಕಾರಿ ಚಳವಳಿಯಲ್ಲಿ ಎಲ್ಲ ಜಾತಿಯ ಜನಾಂಗ ಸೇರಿದ್ದು ವಿಶೇಷವೆನಿಸಿದೆ. ಇಲ್ಲಿ ಸೇರಿದ ಶರಣರಲ್ಲಿ ಜಾತಿ, ಭೇದ ಭಾವನೆಗಳು ದೂರವಾಗಿ ಸರ್ವರೂ ಸಮಾನರು ಎಂಬ ತತ್ವದ ನೆಲೆಯಲ್ಲಿ ಜೀವಿಸಿದ್ದು ಕಂಡುಬರುತ್ತದೆ. ಇಂತಹ ಶತಮಾನವನ್ನು ಶರಣಯುಗ, ಬಸವಯುಗ, ವೈಚಾರಿಕ ಯುಗ, ಸರ್ವಸಮತೆಯ ಯುಗ ಎಂದು ಕರೆಯಬಹುದು. ಈ ಯುಗಕ್ಕೆ ಆದಿಯಿದೆ ಅಂತ್ಯವಿಲ್ಲ. ಈ ಯುಗದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯ ಕ್ಷೇತ್ರಗಳಲ್ಲಿ ನಡೆದ ಬದಲಾವಣೆಗಳು ವರ್ಣಭೇದ, ವರ್ಗಭೇದ, ಲಿಂಗಭೇದ, ಜಾತಿಭೇದಗಳನ್ನು ಹೊಡೆದೋಡಿಸಲು ಪ್ರೇರಣೆಯಾದವು ಎನ್ನಬಹುದು. ಅಲ್ಲದೆ ರಾಜವರ್ಗ, ಪ್ರಜಾವರ್ಗ, ಪುರುಷ–ಸ್ತ್ರೀ, ಪುರೋಹಿತ, ಭವಿಭಕ್ತ ಬಡವ ಬಲ್ಲಿದ, ಸ್ಪರ್ಶ ಅಸ್ಪೃಶ್ಯಗಳೆಂಬ ಭೇದಗಳು ಹಾಸು ಹೊಕ್ಕಾಗಿದ್ದವು.

ಇಂತಹ ಪ್ರಕ್ಷುಬ್ಧ ಸ್ಥಿತಿಯ ಸಂದರ್ಭದಲ್ಲಿ ನವೀನತೆಯ ಸಾಹಸಬುದ್ಧಿಯಿಂದ ಸಮಾಜಕ್ಕೆ ದಾರಿ ತೋರಿ ಕೆಡುಕನ್ನು ತಿದ್ದಬಲ್ಲ ಮಹಾವ್ಯಕ್ತಿಗಳ ಉದಯದ ಆವಶ್ಯಕತೆಯಿತ್ತು. ಈ ಸಂದರ್ಭ ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಯೋಗ್ಯ ಸಮಯವೂ ಆಗಿತ್ತು. ಹಾಗೂ ಈ ಆವಶ್ಯಕತೆಯ ಗರ್ಭದಿಂದಲೇ ಉದಯಿಸಿ ಬಂದದ್ದು ವಚನ ಸಂಸ್ಕೃತಿ ಶರಣ ಸಂಸ್ಕೃತಿಯಾಗಿದೆ.

ಹೀಗಾಗಿ ೧೨ನೇ ಶತಮಾನದ ಮುಖ್ಯ ಉದ್ದೇಶ ಸರ್ವ ಸಮಾನತೆ, ಅಸ್ಪೃಶ್ಯೋದ್ಧಾರ, ಜಾತಿ, ಲಿಂಗ, ವೃತ್ತಿ, ಭೇದ, ನಿರಾಕರಣೆ, ಕಾಯಕ ದಾಸೋಹ, ತತ್ವಪ್ರತಿಪಾದನೆ, ಸ್ತ್ರೀಯರ ಉನ್ನತಿ, ಸಾಮಾಜಿಕ ಸಂಸ್ಕರಣ ಮುಂತಾದವುಗಳ ಮೂಲಕ ಸ್ವಾಸ್ಥ್ಯ ಸಮಾಜದ ಗುರಿ ಬಸವಾದಿ ಶಿವಶರಣದಾಗಿತ್ತು. ಶರಣ ಚಳವಳಿ ಉದ್ಭವಿಸಲು ಕಾರಣವಾದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಅರಾಜಕತೆಗಳು ಹೊಸ ಲೋಕವನ್ನು ಪ್ರವೇಶ ಮಾಡಿಸುತ್ತವೆ. ಸುಮಾರು ಹನ್ನೊಂದನೆಯ ಶತಮಾನದಿಂದಲೇ ಉತ್ತರ ಭಾರತದಲ್ಲಿ ಪ್ರಭುತ್ವದ ಸ್ಥಿತ್ಯಂತರಗಳಾಗಲಾರಂಭಿಸಿತ್ತು. ಈ ಬದಲಾವಣೆಗಳು ಭಾರತದ ಪರಂಪರೆ, ಧರ್ಮ, ಕಲೆ, ಸಂಸ್ಕೃತಿ ಸಮಾಜದ ಅರ್ಥವ್ಯವಸ್ಥೆಗಳ ಮೇಲೆ ಪರಿಣಾಮ ಬೀರಿದ್ದವು. ಇದರಿಂದ ದಕ್ಷಿಣದಲ್ಲಿ ಅದರಲ್ಲು ವಿಶೇಷವಾಗಿ ಕರ್ನಾಟಕದಲ್ಲಿ ಅನೇಕ ರೀತಿಯ ಸ್ಥಿತ್ಯಂತರಗಳಾದವು. ಕ್ರಿ.ಶ.೧೧೫೦ರ ಸುಮಾರಿಗೆ ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯ ತನ್ನ ಅಸ್ತಿತ್ವದ ಕೊನೆ ಹಂತ ತಲುಪಿತ್ತು. ಆಗ ರಾಜ್ಯವನ್ನುರುಳಿಸುವ ಸಂಚೊಂದು ಒಳಗೊಳಗೇ ರೂಪುಗೊಂಡು ಮೂರನೇ ತೈಲಪನ ಕಾಲದಲ್ಲಿ ಅದು ಸ್ಪಷ್ಟವಾಗಿ ರೂಪ ತಾಳಿತು. ಈ ಆಂತರಿಕ ಪ್ರಭುತ್ವದ ಕ್ರಾಂತಿಗೆ ಕೇಂದ್ರಬಿಂದುವಾದವನು ಎರಡನೇ ಬಿಜ್ಜಳ. ಈ ಚಾರಿತ್ರಿಕ ಹಾಗೂ ರಾಜಕೀಯ ಘಟ್ಟದಲ್ಲಿ ಆದ ಮಹತ್ವದ ಘಟನೆ ಎಂದರೆ ಬಸವಣ್ಣನ ನೇತೃತ್ವದಲ್ಲಿ ನಡೆದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಕ್ರಾಂತಿ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವುದನ್ನು ಪರಿಶೀಲಿಸಬಹುದು. ಅಪಾರ ಶರಣಸಮೂಹ ಬಸವಣ್ಣ ನಲ್ಲಿಟ್ಟ ನಂಬಿಕೆಗೆ ಪೂರಕವಾಗಿ, ಅನುಭಾವಿ ಅಲ್ಲಮಪ್ರಭುವಿನ ವೈಚಾರಿಕ ಸ್ಪರ್ಶದಲ್ಲಿ ಕೆಲಸ ಮಾಡುವುದನ್ನು ಗುರುತಿಸಬಹುದಾಗಿದೆ.

ಯಾವೊಬ್ಬ ಶರಣನೂ ಪ್ರಶ್ನಿಸದೆ ವಿಚಾರ ಒಪ್ಪುವುದಾಗಲಿ, ಕಾರ್ಯನಿರತನಾಗುವುದಾಗಲಿ ಅಂದು ನಡೆಯುತ್ತಿರಲಿಲ್ಲ. ಇಲ್ಲಿ ಅಲ್ಲಮ–ಬಸವಣ್ಣನವರೂ ಇತರೆ ವಚನಕಾರರ ವಿಮರ್ಶೆಯ ಒರೆಗಲ್ಲಿಗೆ ಸಿಕ್ಕವರೆ ಆಗಿದ್ದಾರೆ. ಸತ್ಯದ ಬೆಳಕಿನಲ್ಲಿ ವೈಚಾರಿಕತೆಯ ಅರಿವನ್ನು ಪಡೆದು ಸಮೂಹ ಶಕ್ತಿಯಾಗಿ ಬೆಳೆಯಲು ಶರಣ–ಶರಣೆಯರು ಕಂಕಣ ಕಟ್ಟಿ ಭಾಗಿಗಳಾಗಿದ್ದಾರೆ. ಇನ್ನೊಂದು ಮಹತ್ವದ ವಿಷಯವೆಂದರೆ ಶರಣ ಸಮುದಾಯದಲ್ಲಿ ವಿವಿಧ ವೃತ್ತಿಯವರು ವಿವಿಧ ಜಾತಿಯವರು, ವಿವಿಧ ವಯೋಮಾನದವರು, ಸ್ತ್ರೀ–ಪುರುಷರು, ಪಂಡಿತರು ಪಾಮರರೆಲ್ಲರೂ ಇದ್ದದ್ದು, ಇವರು ಬರೀ ಭಕ್ತಿಯ ನೆಲೆಯಲ್ಲಿ ನಿಂತು ಶಿವನ ಸಾನ್ನಿಧ್ಯಕ್ಕಾಗಿ ಮಾತ್ರ ಹಂಬಲಿಸಿದ ವರಲ್ಲ. ತಮ್ಮ ಈ ಆಧ್ಯಾತ್ಮಿಕ ನಿಷ್ಠೆಯಲ್ಲಿ ಯಾರೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಆಶಿವನ ಜೊತೆ ಸಂವಾದ ಮಾಡಿದ್ದು ಮಾತ್ರವಲ್ಲ ತಂತಮ್ಮ ಮಾನವತೆಯ ನೆಲೆಯಲ್ಲಿಯೇ ದೈವತ್ವದ ನೆಲೆಯನ್ನೂ ಕಂಡವರು. ಇವರ ಜೊತೆಗೆ ಇವರೆಲ್ಲ ಸಂಸಾರಿಗಳಾಗಿ ಕಾಯಕ ನಿಷ್ಠರಾಗಿ

ದಾಸೋಹಪ್ರೇಮಿಗಳಾಗಿ ಮಾನವ ಹಿತಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಈ ಚಳವಳಿಯಲ್ಲಿ ಶಿವಶರಣೆಯರು ಕೂಡ ಅಷ್ಟೇ ಮಹತ್ವದ ಪಾತ್ರವಹಿಸಿರುವುದನ್ನು ಕಾಣಬಹುದು.

ಶರಣೆಯರು ಕೂಡ ವೈಚಾರಿಕ ಚಿಂತನೆ, ಜೊತೆಗೆ ಅವಿರತವಾದ ಸಮಾಜ ಸೇವೆಗೆ ಕಂಕಣಬದ್ಧರಾಗಿದ್ದರು. ಇಂಥವರಲ್ಲಿ ಗಂಗಾಂಬಿಕೆ–ನೀಲಾಂಬಿಕೆಯರು ಪ್ರಮುಖರು. ಏಕೆಂದರೆ ಬಸವಣ್ಣನ ಎಲ್ಲ ಕಾರ್ಯಗಳಿಗೆ ಸ್ಫೂರ್ತಿ ಸೆಲೆಯಾದವರು ಈ ಶರಣೆಯರು. ಇವರಿಬ್ಬರ ವ್ಯಕ್ತಿತ್ವದ ಅಭಿಜ್ಞತೆ, ಪಾರಮಾರ್ಥಿಕತೆ ಅನುಪಮವಾಗಿದೆ. ಹಾಗೆಯೇ ಅವರ ಸಮರಸ ಜೀವನ, ಪರಿಪೂರ್ಣತೆಯ ಪರಿಣಾಮದ ಸ್ಥಿತಿ ಉನ್ನತ ಮಟ್ಟದ್ದಾಗಿದೆ. ಅಲ್ಲದೆ ಮೇಲ್ಮಟ್ಟದ ಚಿಂತನೆಗಳು ಇವರಲ್ಲಿರುವ ಮನಸ್ಥಿತಿಯ ಒರೆಕೊರೆಗಳನ್ನು ತಿಳಿಸುತ್ತವೆ. ಅದೇ ರೀತಿ ಲೌಕಿಕ ಅಲೌಕಿಕಗಳೆರಡರ ಸೃಷ್ಟಿಯಲ್ಲಿ ಗಂಗಾಂಬಿಕೆ–ನೀಲಾಂಬಿಕೆ–ಬಸವಣ್ಣನವರು ಅಪರೂಪದ ನೆಲೆಯಲ್ಲಿ ಕಂಡುಬರುತ್ತಾರೆ. ಹಾಗೆ ಬಸವಣ್ಣನಿಗೆ ಪ್ರೇರಕ ರೀತಿಯಲ್ಲಿ ಕಾಣುವಂತಹ ಇವರು ಆತನ ಸಾಧನರಂಗಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ.

### ಅಧ್ಯಯನದ ಉದ್ದೇಶ

ವಚನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯಕ ಚರಿತ್ರೆಯಲ್ಲಿ ಪ್ರಮುಖವಾದ ಸ್ಥಾನವಿದೆ. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಎರಡೂ ನೆಲೆಗಳಲ್ಲೂ ವಚನ ಚಳವಳಿ ತನ್ನದೇ ಆದ ಛಾಪು ಮೂಡಿಸಿದೆ. ಇಂತಹ ವಚನ ಚಳವಳಿಯ ಅಧ್ವೈರ್ಯು ಬಸವಣ್ಣನವರ ಸಹಜೀವಿಗಳಾದ ಗಂಗಾಬಿಕೆ ಮತ್ತು ನೀಲಾಂಬಿಕೆಯರು ಕೌಟುಂಬಿಕ ಮತ್ತು ಸಾಮಾಜಿಕ ಎರಡೂ ಹಂತಗಳಲ್ಲೂ ಪಾಲ್ಗೊಂಡವರು. ಇಂತಹ ಶರಣೆಯರ ಸಾಧನೆ–ಸಿದ್ಧಿಗಳನ್ನು ಕೇವಲ ಹುಟ್ಟು, ಬಾಲ್ಯ, ತಂದೆ–ತಾಯಿ, ವಿವಾಹ ದಾಂಪತ್ಯ, ಬದುಕು ಜೀವನಕ್ರಮವಾಗಿ ಗ್ರಹಿಸದೇ ಅವರ ಒಟ್ಟು ವ್ಯಕ್ತಿಚಿತ್ರವನ್ನು ನಿರ್ಮಿಸುವುದು ಅಧ್ಯಯನದ ಪ್ರಮುಖ ಉದ್ದೇಶ. ಎರಡನೆಯದಾಗಿ ಇವರು ಬಸವಣ್ಣನವರಿಗೆ ಆಪ್ತರಾಗಲು ಅವರ ಕುರಿತು ಬಂದಂತಹ ವಿಷಯಗಳು ಕೂಡ ಬಹಳಷ್ಟಿಲ್ಲ ಹಾಗೂ ಸಮಗ್ರವಾಗಿಲ್ಲ. ಅವರ ಜೀವನ, ಐಕ್ಯ ಕುರಿತು ಊಹಾಪೋಹಗಳೇ ಸಾಕಷ್ಟಿವೆ. ಇವುಗಳನ್ನು ಸಮಕಾಲೀನ ಶರಣರು, ಕವಿಗಳು ಗ್ರಹಿಸಿ ರಚಿಸಿದ ಸಾಹಿತ್ಯವಾಗಿ ಕಾವ್ಯ ಪುರಾಣಗಳಲ್ಲಿ ಅಷ್ಟಿಷ್ಟು ಕಾಣಬಹುದಾಗಿದೆ. ಈ ರೀತಿಯ ಕಾವ್ಯ ಪುರಾಣಗಳನ್ನು ಸಾಹಿತ್ಯಕವಾಗಿ ಗ್ರಹಿಸಿ, ಇನ್ನಿತರ ವಿವರಗಳನ್ನು ಚಾರಿತ್ರಿಕ, ಮೌಖಿಕ ಹಾಗೂ ಅಧ್ಯಯನಕಾರರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಪೂರಕ ಚರ್ಚೆ ಒದಗಿಸುವುದು. ಮೂರನೆಯದಾಗಿ ಗಂಗಾಂಬಿಕೆ ಹಾಗೂ ನೀಲಾಂಬಿಕೆಯರ ವಚನಗಳನ್ನು ವಿಶ್ಲೇಷಿಸುವುದು.

ನಾಲ್ಕನೆಯದಾಗಿ ಇವರ ವಚನಗಳಲ್ಲಿ ವ್ಯಕ್ತವಾಗುವ ತತ್ವಾನುಭವವನ್ನು ಗ್ರಹಿಸಿ ಹಾಗೂ ಪಾರಮಾರ್ಥಿಕ ನಿಲುವನ್ನು ವಿವೇಚಿಸಿ ತನ್ಮೂಲಕ ಅವರಿರ್ವರ ಸಾಧನಾಪಥವನ್ನು ವಿವರಿಸುವುದು.

**ಅಧ್ಯಯನದ ವ್ಯಾಪ್ತಿ**

ಕ್ರಿ.ಶ.೧೨ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೆ ವಿವಿಧ ಕವಿಗಳಿಂದ ರಚಿತಗೊಂಡಿರುವ ಕಾವ್ಯಗಳಿಗೆ ಮಾತ್ರ ಪ್ರಸ್ತುತ ಅಧ್ಯಯನ ಸೀಮಿತಗೊಳಿಸಿಕೊಳ್ಳಲಾಗಿದೆ.

**ಅಧ್ಯಯನ ವಿಧಾನ**

ವಿವಿಧ ಗ್ರಂಥಾಲಯಗಳಲ್ಲಿ ಮಾಹಿತಿ ಸಂಗ್ರಹ ವಿಧಾನದ ಮೂಲಕ ವಿಷಯವನ್ನು ಸಂಗ್ರಹಿಸಿ ಅವುಗಳನ್ನು ಗ್ರಹಿಸುವ ಹಾಗೂ ಆ ವಿಷಯಗಳಿಗೆ ಸ್ಪಷ್ಟತೆಯನ್ನು ಒದಗಿಸುವ ನಿಟ್ಟಿನಲ್ಲಿ ಕ್ಷೇತ್ರಕಾರ್ಯ ಅನುಸರಿಸಿ ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ. ಅಂದರೆ ಪ್ರಸ್ತುತ ಅಧ್ಯಯನಕ್ಕೆ ಮಾಹಿತಿ ಸಂಗ್ರಹ ವಿಧಾನ ಮತ್ತು ಕ್ಷೇತ್ರಕಾರ್ಯ ವಿಧಾನವನ್ನು ಅನುಸರಿಸಲಾಗಿದೆ.

**ಅಧ್ಯಯನದ ಸ್ವರೂಪ**

ಪ್ರಸ್ತುತ ಅಧ್ಯಯನವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಒಟ್ಟು ಉದ್ದೇಶ, ವ್ಯಾಪ್ತಿ, ಸ್ವರೂಪ, ಸಮೀಕ್ಷೆ ಒದಗಿಸಲಾಗಿದೆ. ಆ ಅಧ್ಯಯನಕ್ಕೆ ಇರುವ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ. ಒಟ್ಟು ಅಧ್ಯಯನವನ್ನು ವಿಭಜಿಸಿಕೊಂಡ ಬಗೆಯಾಗಿ ಸ್ವರೂಪವನ್ನು ವಿವರಿಸಲಾಗಿದೆ. ಹಾಗೆಯೇ ಅದಕ್ಕೆ ಅನುಸರಿಸಿದ ಅಧ್ಯಯನದ ಮಾದರಿಯನ್ನು ಹೇಳಲಾಗಿದೆ. ಇದು ಪ್ರಸ್ತುತ ಸಂದರ್ಭದಲ್ಲಿ ಯಾವ ಮಹತ್ವವನ್ನು ಪಡೆಯುತ್ತದೆ ಎಂಬುದನ್ನು ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ ವಚನ ಚಳವಳಿ ಸಂದರ್ಭವನ್ನು ವಿವರಿಸಲಾಗಿದೆ. ಚಳವಳಿ ಸ್ವರೂಪವನ್ನು ಸಾಮಾಜಿಕ ಇತ್ಯಾದಿ ಅಂಶಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಈ ಸಂದರ್ಭಕ್ಕೆ ಕಾರಣೀಭೂತವಾಗುವ ಅಂಶಗಳು ಹಾಗೂ ಸಾಂದರ್ಭಿಕ ಪರಿಣಾಮಗಳನ್ನು ಅಧ್ಯಯನದ ಪೂರ್ವಪೀಠಿಕೆಯಾಗಿ ನಿರೂಪಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಗಂಗಾಂಬಿಕಾ ಇತಿವೃತ್ತವನ್ನು ವಿವರಿಸಲಾಗಿದೆ. ಪ್ರಮುಖ ಸಾಹಿತ್ಯಕ ಆಕರಗಳಿಂದ ಕವಿ ಕಾವ್ಯಗಳಲ್ಲಿ ಉಲ್ಲೇಖಿತವಾದ ಜನನ, ಬಾಲ್ಯ, ವಿವಾಹ, ದಾಂಪತ್ಯಾದಿ ಅಂಶಗಳನ್ನು ಹಾಗೂ ಲಭ್ಯ ಚಾರಿತ್ರಿಕ, ಮೌಖಿಕ, ವಿಮರ್ಶಾತ್ಮಕ ಆಕರಗಳನ್ನು ಬಳಸಿಕೊಂಡು ಇದೊಂದು ಸಾಮಾನ್ಯ ಜೀವನಚರಿತ್ರೆಯಾಗದೇ, ವ್ಯಕ್ತಿತ್ವ ನಿರ್ಮಿತಿ ಸ್ವರೂಪದ ವ್ಯಕ್ತಿಚಿತ್ರವಾಗಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ನೀಲಾಂಬಿಕಾ ಇತಿವೃತ್ತವನ್ನು ವಿವರಿಸಲಾಗಿದೆ. ಪ್ರಮುಖ ಸಾಹಿತ್ಯಕ ಆಕರಗಳಿಂದ ಕವಿಕಾವ್ಯಗಳಲ್ಲಿ ಉಲ್ಲೇಖಿತವಾದ ಜನನ, ಬಾಲ್ಯ, ವಿವಾಹ, ದಾಂಪತ್ಯಾದಿ

ಅಂಶಗಳನ್ನು ಹಾಗೂ ಲಭ್ಯ ಚಾರಿತ್ರಿಕ, ಮೌಖಿಕ ವಿಮರ್ಶಾತ್ಮಕ ಆಕರಗಳನ್ನು ಬಳಸಿಕೊಂಡು ಇದೊಂದು ಸಾಮಾನ್ಯ ಜೀವನ ಚರಿತ್ರೆಯಾಗದೆ, ವ್ಯಕ್ತಿತ್ವ ನಿರ್ಮಿತಿ ಸ್ವರೂಪದ ವ್ಯಕ್ತಿಚಿತ್ರವಾಗಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಐದರಲ್ಲಿ ಗಂಗಾಂಬಿಕಾ ವಚನ ವಿಶ್ಲೇಷಣೆಯಲ್ಲಿ ಗಂಗಾಂಬಿಕೆಯ ೯ ವಚನಗಳ ವಿಶ್ಲೇಷಣೆಯನ್ನು, ಅವಳ ವಚನಗಳಲ್ಲಿ ವ್ಯಕ್ತವಾಗುವ ಕೆಲವು ವಿಶಿಷ್ಟ ಅಂಶಗಳ ಹಿನ್ನೆಲೆಯಲ್ಲಿ ಮಂಡಿಸಲಾಗಿದೆ. ಚಾರಿತ್ರಿಕ, ಸಮಕಾಲೀನ ಅಂಶಗಳನ್ನು ವಚನಗಳ ವಿಶ್ಲೇಷಣೆಯ ಸ್ವರೂಪವಾಗಿ ಗ್ರಹಿಸಲಾಗಿದೆ. ವಚನಗಳಲ್ಲಿ ಮೇಲ್ನೋಟದಲ್ಲಿ ಕಂಡುಬರುವ ಬಸವನಿಷ್ಠೆ, ವೈಯಕ್ತಿಕ ನಿವೇದನೆಗಳನ್ನು ಉಲ್ಲೇಖಗಳೊಂದಿಗೆ ವಿವರಿಸಲಾಗಿದೆ. ವಚನ ಚಳವಳಿಗೆ ಪೂರಕ, ಪ್ರೇರಕ ಅಂಶಗಳು ಜೊತೆಗೆ ಚಳವಳಿ ಸಂದರ್ಭದ ಘಟನೆಗಳಿಗೆ ಅಧಿಕೃತ ದಾಖಲೆಯಾಗಿ ವಚನಗಳು ಸಮಕಾಲೀನ ಸಂವೇದನೆಗಳಾದರೂ ಸಾರ್ವಕಾಲಿಕವಾಗಿ ತಾತ್ವಿಕ ಚಿಂತನೆಯ ಸ್ವರೂಪಗಳಾಗಿರು ವುದನ್ನು ಗುರುತಿಸಲಾಗಿದೆ. ಅಲ್ಲದೆ ದಾಖಲಾರ್ಹ ಅಂಶಗಳನ್ನು ಒಳಗೊಂಡಿವೆ ಎಂಬುದನ್ನು ಗ್ರಹಿಸಲಾಗಿದೆ.

ಅಧ್ಯಾಯ ಆರರಲ್ಲಿ ನೀಲಾಂಬಿಕಾ ವಚನಗಳ ವಿಶ್ಲೇಷಣೆಯಿದೆ. ಸ್ವರವಚನ ಹಾಗೂ ಕಾಲಜ್ಞಾನ ವಚನಗಳನ್ನು ಪ್ರತ್ಯೇಕ ಉಪಶೀರ್ಷಿಕೆಯಡಿಯಲ್ಲಿ ವಿವರಿಸಲಾಗಿದೆ. ಅವಳ ವಚನಗಳಲ್ಲಿ ವ್ಯಕ್ತವಾಗುವ ಬಾಹ್ಯ ಅಂಶಗಳನ್ನು, ಆಂತರಂಗಿಕ ಅಂಶಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಮೇಲ್ನೋಟಕ್ಕೆ ವೈಯಕ್ತಿಕ ಹಾಗೂ ಬಸವನಿಷ್ಠೆಯ ಪ್ರತಿಪಾದನೆಯಾಗಿ ಕಂಡುಬಂದರೂ ವಚನ ಸಂದರ್ಭದ ಹಲವಾರು ಅಂಶಗಳು, ಸಮಕಾಲೀನ ಪರಿಸರದ ಸಾಕಷ್ಟು ವಿವರಣೆಗಳನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿಯೂ ಕೂಡ ಸಮಕಾಲೀನ ಸಂವೇದನೆಗಳು ಸಾರ್ವಕಾಲಿಕ ಚಿಂತನಾ ಸ್ವರೂಪ ಪಡೆಯುವುದನ್ನು ಗುರುತಿಸಲಾಗಿದೆ.

ಅಧ್ಯಾಯ ಏಳರಲ್ಲಿ ಗಂಗಾಂಬಿಕೆ-ನೀಲಾಂಬಿಕೆ ಹಾಗೂ ಬಸವಣ್ಣ ಇವರ ನಡುವಣ ದಾಂಪತ್ಯ ಬದುಕು, ಸಾಮರಸ್ಯತೆ ಮೊದಲಾದ ಅಂಶಗಳನ್ನು ಕುರಿತು ದೊರೆತ ಆಕರಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಚರ್ಚೆಗೆ ಒಳಪಡಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಈ ಮೇಲ್ಕಂಡ ಏಳು ಅಧ್ಯಾಯಗಳ ಒಟ್ಟು ಸಾರಾಂಶವನ್ನು ಒದಗಿಸಲಾಗಿದೆ. ಅಲ್ಲದೆ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಆಧಾರ ಗ್ರಂಥಗಳ ವಿವರವನ್ನು ನೀಡಲಾಗಿದೆ. ಗಂಗಾಂಬಿಕೆ-ನೀಲಾಂಬಿಕೆ ಅವರಿಗೆ ಸಂಬಂಧಪಟ್ಟಂತೆ ಸಂಗ್ರಹಿಸಿದ ಛಾಯಾಚಿತ್ರ ಗಳನ್ನು ನೀಡಲಾಗಿದೆ.

## ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನದಲ್ಲಿ ಗಂಗಾಂಬಿಕೆ–ನೀಲಾಂಬಿಕೆಯರ ಕುರಿತು ಅಧ್ಯಯನ ಮಾಡಲಾಗಿದೆ. ಸಾಹಿತ್ಯ, ಚರಿತ್ರೆ, ಜಾನಪದ, ಮೌಖಿಕ ಮೊದಲಾದ ಆಕರಗಳ ಮೂಲಕ ಅವರಿರ್ವರ ಸಮಗ್ರ ವ್ಯಕ್ತಿಚಿತ್ರವನ್ನು ನಿರ್ಮಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಎಲ್ಲ ಕಡೆಗಳಲ್ಲೂ ಅಪೂರ್ಣ ಹಾಗೂ ಅತ್ಯಲ್ಪ ವಿವರಗಳಿರುವ ಹಿನ್ನೆಲೆಯಲ್ಲಿ ಎಲ್ಲ ಮೂಲಗಳಿಂದ ಮಾಹಿತಿ ಕ್ರೋಢೀಕರಿಸಿ ಸಮಗ್ರತೆ ರೂಪಿಸುವ ನಿಟ್ಟಿನಲ್ಲಿ ಈ ಪ್ರಯತ್ನ ಅತ್ಯಂತ ಮಹತ್ವದೆನಿಸುತ್ತದೆ.

## ಈವರೆಗಿನ ಅಧ್ಯಯನ ಸಮೀಕ್ಷೆ

೧೯೭೮ರಲ್ಲಿ ಡಾ.ಶೈಲಜಾ ಉಡಚಣ ಅವರು ಮಂಡಿಸಿದ ಮಹಾಪ್ರಬಂಧ 'ವಚನಕಾರರ ದೃಷ್ಟಿಯಲ್ಲಿ ಸ್ತ್ರೀ' ಈ ಪ್ರಬಂಧದಲ್ಲಿ ಶೈಲಜಾ ಅವರು ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ವಚನ ಗಳನ್ನು ಕುರಿತು ಚರ್ಚಿಸಿದ್ದಾರೆ. ೧೯೮೯ರಲ್ಲಿ ಮಂಡಿಸಲ್ಪಟ್ಟ ಸಂಶೋಧನಾ ಮಹಾಪ್ರಬಂಧ ಬಿ.ಸಿ. ಜವಳಿಯವರ 'ಹರಿಹರ ಕವಿಯ ಸ್ತ್ರೀ ಪಾತ್ರದರ್ಶನ' ಇದರಲ್ಲಿ ಗಂಗಾಂಬಿಕೆ ಮತ್ತು ಮಾಯಿದೇವಿಯರನ್ನು ಕುರಿತು ಚರ್ಚಿಸಿದ್ದಾರೆ. ವ್ಹಿ.ಜಿ.ಪೂಜಾರ ಅವರು ೧೯೮೩ರಲ್ಲಿ ಮಂಡಿಸಿದ ಸಂಶೋಧನ ಮಹಾಪ್ರಬಂಧ 'ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು'. ಇದರಲ್ಲಿ ಗಂಗಾಂಬಿಕೆ ನೀಲಾಂಬಿಕೆಯರ ಬದುಕಿನ ಕಥೆಯನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ. ಡಾ.ಹ.ನಂ.ವಿಜಯ ಕುಮಾರ ಅವರು ೧೯೮೩ರಲ್ಲಿ ಮಂಡಿಸಿದ ಮಹಾಪ್ರಬಂಧ 'ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ವ್ಯಕ್ತಿತ್ವ' ಇದರಲ್ಲಿ ಅವರು ಬಸವಣ್ಣನ ವ್ಯಕ್ತಿತ್ವಕ್ಕೆ ಮೆರಗು ನೀಡಿದ ಗಂಗಾಂಬಿಕೆ ಮತ್ತು ನೀಲಾಂಬಿಕೆಯರನ್ನು ಕುರಿತು ಚರ್ಚಿಸಿದ್ದಾರೆ. ವಿ.ವಿ.ಸಾಲಿಮಠರು ೧೯೮೭ರಲ್ಲಿ ಮಂಡಿಸಿದ ಮಹಾಪ್ರಬಂಧವಾದ 'ಜಾನಪದ ಗೀತ ಸಾಹಿತ್ಯದಲ್ಲಿ ಬಸವಣ್ಣನವರು' ಈ ಪ್ರಬಂಧದಲ್ಲಿ ನೀಲಾಂಬಿಕೆ–ಗಂಗಾಂಬಿಕೆಯರ ಕುರಿತು ಹಾಗೂ ಬಸವಣ್ಣನವರೊಂದಿಗಿನ ಬಾಂಧವ್ಯವನ್ನು ತಿಳಿಸಿದ್ದಾರೆ. ಡಾ.ಬಿ.ಎಸ್.ಶೇಠೆಯವರು ೧೯೮೯ರಲ್ಲಿ 'ಕರ್ನಾಟಕದಲ್ಲಿ ಸತಿಪದ್ಧತಿ' ಎಂಬ ವಿಷಯದ ಮೇಲೆ ಪಿಎಚ್.ಡಿ.ಪದವಿ ಮಾಡಿದ್ದು, ಅದರಲ್ಲಿ ನೀಲಾಂಬಿಕೆಯ ಕುರಿತು ಪ್ರಸ್ತಾಪಿಸಿದ್ದಾರೆ.

ಶರಣರ ಅಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ ಎಂಬ ವಿಷಯವನ್ನು ಕುರಿತು ೧೯೯೦ರಲ್ಲಿ ಪ್ರಬಂಧ ಮಂಡಿಸಿದವರು ಡಾ.ಎಂ.ಬಿ.ಹೂಗಾರ ಇವರು ಈ ಗ್ರಂಥದಲ್ಲಿ ನೀಲಾಂಬಿಕೆಯ ವಚನಗಳನ್ನು ಪೂರಕವಾಗಿ ಚರ್ಚೆಗೆ ಒಳಪಡಿಸಿದ್ದಾರೆ. ಸೆ.ಬಿ.ಪ್ರಭುಸ್ವಾಮಿ ಮಠ ಅವರು ೧೯೯೨ರಲ್ಲಿ ಮಂಡಿಸಿದ 'ಬಸವಣ್ಣನವರ ಸಾಹಿತ್ಯಿಕ ಅಧ್ಯಯನ' ಮಹಾಪ್ರಬಂಧದಲ್ಲಿ ಬಸವಣ್ಣನವರ ವಚನದಲ್ಲಿ ವ್ಯಕ್ತವಾದ ನೀಲಾಂಬಿಕೆಯನ್ನು ಕುರಿತು ಚರ್ಚಿಸಿದ್ದಾರೆ. ಎಸ್.ಎಸ್. ಮಟ್ಟಿಯವರು ೧೯೯೫ರಲ್ಲಿ ಮಂಡಿಸಿದ 'ಶಿವಶರಣೆಯರಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ಪ್ರಬಂಧದಲ್ಲಿ

ಗಂಗಾಂಬಿಕೆ ನೀಲಾಂಬಿಕೆಯರ ವಚನಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಜಿ.ಟಿ.ವಿಸಾಜಿ ಅವರು ೧೯೯೩ರಲ್ಲಿ ಮಂಡಿಸಿದ 'ಶೂನ್ಯ ಸಂಪಾದನೆಗಳು: ಒಂದು ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ನೀಲಾಂಬಿಕೆ ವಚನ ಸ್ವರವಚನ ಕುರಿತು ಚರ್ಚಿಸಲಾಗಿದೆ. ೧೯೯೪ರಲ್ಲಿ ಎಂ.ಕುಂದಗೋಳರವರ ಮಂಡಿಸಿದ ಪ್ರಬಂಧದಲ್ಲಿ 'ವೀರಶೈವ ಕವಿಗಳ ಮೇಲೆ ವಚನಕಾರರ ಪ್ರಭಾವದಲ್ಲಿ ನೀಲಾಂಬಿಕೆ'ಯ ವಿಚಾರವಾಗಿ ಪ್ರಸ್ತಾಪಿಸಲಾಗಿದೆ. ಎಸ್.ಕೆ.ಸುಮಂಗಲಿಯವರು ತಮ್ಮ ಪಿಎಚ್.ಡಿ.ಪ್ರಬಂಧದಲ್ಲಿ ವಚನ ಚಳುವಳಿ ಹಾಗೂ ಸ್ತ್ರೀ ಜಾಗೃತಿಯಲ್ಲಿ ನೀಲಾಂಬಿಕೆ ಗಂಗಾಂಬಿಕೆಯ ಪಾತ್ರ ಏನು ಎಂಬುದನ್ನು ಚರ್ಚಿಸಲಾಗಿದೆ. '೧೨ನೇ ಮತ್ತು ೨೦ನೇ ಶತಮಾನದ ವಚನ ಸಾಹಿತ್ಯ: ಒಂದು ತೌಲನಿಕ ಅಧ್ಯಯನ' ಸೆಸ್ಟರ್ ವಾಯಲಟ್ ಅವರು ೧೯೯೬ರಲ್ಲಿ ಮಂಡಿಸಿದ ಪ್ರಬಂಧದಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಕ್ರಿ.ಶ.೧೯೯೭ರಲ್ಲಿ ಡಾ.ಎಸ್.ಎಸ್.ಪಾಟೀಲ್‌ರಲ್ಲಿ ಮಂಡಿಸಲ್ಪಟ್ಟ ಸಂಶೋಧನಾ ಮಹಾಪ್ರಬಂಧ 'ಹರಿಹರ ರಗಳೆಗಳು: ಒಂದು ಸಾಂಸ್ಕೃತಿಕ ಅಧ್ಯಯನ'. ಇದರಲ್ಲಿ ಬಸವಾದಿ ಶರಣರ ಜೊತೆಗೆ ಗಂಗಾಂಬಿಕೆ-ನೀಲಾಂಬಿಕೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ೧೯೯೮ರಲ್ಲಿ ಎಸ್.ಎಸ್.ವಿಜಯ ಮಂಡಿಸಿದ ಮಹಾಪ್ರಬಂಧ ಚೆನ್ನಬಸವ ಪುರಾಣ: ಒಂದು ಅಧ್ಯಯನದಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರನ್ನು ವಿರುಪಾಕ್ಷ ಪಂಡಿತ ಉಲ್ಲೇಖದೊಂದಿಗೆ ಇವರಿಬ್ಬರ ಕಾರ್ಯವನ್ನು ವಿಶ್ಲೇಷಿಸಿದ್ದಾರೆ.

ರೇಣುಕಮ್ಮ ಅವರು ೨೦೦೦ರಲ್ಲಿ ವಚನ ಸಾಹಿತ್ಯದಲ್ಲಿ ಭಕ್ತಿಯ ಪರಿಕಲ್ಪನೆ(೧೨ನೇ ಶತಮಾನದ ಪ್ರಮುಖ ವಚನಕಾರರನ್ನು ಕುರಿತು ಮಂಡಿಸಲ್ಪಟ್ಟ ಮಹಾಪ್ರಬಂಧದಲ್ಲಿ ವಚನಕಾರರ ಜೀವನ ಸಂದೇಶ, ತಾತ್ವಿಕ ಮನೋಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಎ.ಗಾಯತ್ರಿ ಅವರು ೨೦೦೧ರಲ್ಲಿ ಪಿಎಚ್.ಡಿ ಪದವಿಗಾಗಿ ಮಂಡಿಸಲ್ಪಟ್ಟ 'ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ'ದಲ್ಲಿ ಗಂಗಾಂಬಿಕೆ-ನೀಲಾಂಬಿಕೆ ಜೀವನ ಮತ್ತು ವಚನ ವಿಶ್ಲೇಷಣೆಯನ್ನು ಇತರ ಶರಣೆಯರ ಪರಿಚಯದೊಂದಿಗೆ ವಿಶ್ಲೇಷಿಸಿದ್ದಾರೆ. ಅಕ್ಕಮಹಾದೇವಿ ಆರ್.ಸರಗಣಚಾರಿಯವರು ೨೦೦೧ರಲ್ಲಿ 'ಅಲಕ್ಷಿತ ವಚನಕಾರ್ತಿಯರ ವಚನಗಳ ಆಶಯ ಮತ್ತು ಅಭಿವ್ಯಕ್ತಿ' ಎಂಬ ಪಿಎಚ್.ಡಿ ಮಹಾಪ್ರಬಂಧವು ಶಿವಶರಣೆಯರನ್ನು ಕುರಿತ ಅಧ್ಯಯ ನಡೆಸಲಾಗಿದೆ. ಅಲಕ್ಷಿತ ವಚನಕಾರ್ತಿಯರ ಮನೋಭಾವ ಮತ್ತು ಅವರಲ್ಲಿಯ ವಿಚಾರಧಾರೆಗಳನ್ನು ಈ ಅಧ್ಯಯನ ಹೊಂದಿದೆ. ಇದರಲ್ಲಿ ಮುಖ್ಯವಾಗಿ ಕೆಳಸ್ತರದ ವಚನಕಾರ್ತಿಯರನ್ನು ಕುರಿತು ಅಧ್ಯಯನ ಮಾಡಿದ್ದು ಕಂಡುಬರುತ್ತದೆ. ಆದರೆ ಗಂಗಾಂಬಿಕೆ-ನೀಲಾಂಬಿಕೆಯರ ಕುರಿತು ಪ್ರಸ್ತಾಪವಿಲ್ಲ. ವಿದ್ಯಾವತಿ ಬಸವರಾಜು ಪಾಟೀಲರು ೨೦೦೩ರಲ್ಲಿ 'ವಚನ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಎಂಬ ಪ್ರಬಂಧದಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರ ವಚನಗಳ ಮೂಲಕ ಕಂಡುಕೊಂಡ

ನೆಲೆಗಳ ಬಗ್ಗೆ ತಿಳಿಸುತ್ತಾರೆ. ಈಶ್ವರಸ್ವಾಮಿ ಮಠ ಅವರು ೨೦೦೩ರಲ್ಲಿ 'ಸ್ವರವಚನ ಸಾಹಿತ್ಯ: ಒಂದು ಅಧ್ಯಯನ' ಎಂಬ ಪ್ರಬಂಧದಲ್ಲಿ ನೀಲಾಂಬಿಕೆಯ ಸ್ವರವಚನಗಳ ತಾತ್ವಿಕ ವಿಚಾರಗಳ ಕುರಿತು ಚರ್ಚಿಸಲಾಗಿದೆ. ನೇತ್ರಾವತಿ ಮೇಳಗೇರಿ ಅವರು ೨೦೦೪ರಲ್ಲಿ 'ಹರಿಹರನ ರಗಳೆಗಳಲ್ಲಿ ಶಿವತತ್ವ' ಎಂಬ ಪ್ರಬಂಧದಲ್ಲಿ ಗಂಗಾಂಬಿಕೆ ಮಾಯಿದೇವಿಯರು ಹಾಗೂ ಬಸವಣ್ಣನ ದೇವರ ನಂಬಿಕೆಯನ್ನು ಚಿತ್ರಿಸಿದ್ದಾರೆ. ಜಗದೇವಿ ಬಸವಂತಪ್ಪ ತಿಪ್ಪಶೆಟ್ಟಿ ಅವರು ೨೦೦೪ರಲ್ಲಿ 'ಶರಣರಲ್ಲಿ ದಾಂಪತ್ಯ ದರ್ಶನ' ಎಂಬ ಮಹಾಪ್ರಬಂಧದಲ್ಲಿ ದಾಂಪತ್ಯ ಜೀವನದ ಬಗ್ಗೆ ಮತ್ತು ಅದರ ಮೌಲ್ಯಗಳ ಕುರಿತು ಬಸವಣ್ಣ ಮತ್ತು ಅವನ ಪತ್ನಿಯ ಬಗ್ಗೆ ಚರ್ಚಿಸಿದ್ದಾರೆ.

ಜಗದೀಶ ಹೊಸಮನಿಯವರು ೨೦೦೬ರಲ್ಲಿ 'ಶ್ರೀ ಬಸವೇಶ್ವರರನ್ನು ಕುರಿತ ಕನ್ನಡ ನಾಟಕ ಸಾಹಿತ್ಯ'ದಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರ ಬದುಕು, ವ್ಯಕ್ತಿತ್ವ ಮತ್ತು ಬಸವಣ್ಣನರ ಜೀವನದಲ್ಲಿ ಇವರ ಪಾತ್ರವನ್ನು ಕುರಿತು ವಿಶ್ಲೇಷಿಸಿದ್ದಾರೆ. ಗುರುನಗೌಡ ಎಂ.ಸಿ. ಅವರು ೨೦೦೬ರಲ್ಲಿ ಮಂಡಿಸಿದ 'ಶರಣರ ಕಾಯಕ ಮತ್ತು ದಾಸೋಹದ ಪರಿಕಲ್ಪನೆ' ಈ ಪ್ರಬಂಧದಲ್ಲಿ ಶರಣರಲ್ಲಿ ಅಡಗಿದ್ದ ಕಾಯಕ ಮತ್ತು ದಾಸೋಹ ಭಾವನೆಯನ್ನು ತಿಳಿಸುತ್ತಾ ಬಸವಾದಿ ಶರಣರಲ್ಲಿ ಕಂಡಂತ ವ್ಯಕ್ತಿತ್ವವನ್ನು ತಿಳಿಸುವುದರೊಂದಿಗೆ ಗಂಗಾಂಬಿಕೆ-ನೀಲಾಂಬಿಕೆಯರ ಮಹಾಮನೆಯ ಸೇವೆಯನ್ನು ತಿಳಿಸಿದ್ದಾರೆ. ಎಸ್.ಬಿ.ರಾಠೋಡ್‌ರವರು ೨೦೦೭ರಲ್ಲಿ ಮಂಡಿಸಲ್ಪಟ್ಟ 'ಚಾಮರಸನ ಪ್ರಭುಲಿಂಗಲೀಲೆ: ಒಂದು ಸಾಂಸ್ಕೃತಿಕ ಅಧ್ಯಯನ'ದಲ್ಲಿ ಬಸವಣ್ಣನ ವ್ಯಕ್ತಿತ್ವ ಹೇಳುವುದರೊಂದಿಗೆ ಆತನ ವೈಯಕ್ತಿಕ ಜೀವನದಲ್ಲಿ ಚರ್ಚಿಸುವಾಗ ಪತ್ನಿಯರು ಮತ್ತು ಮಗನ ಕುರಿತು ಚರ್ಚಿಸಿದ್ದಾರೆ. ಡಾ.ಮಹಾದೇವಿ ಆರ್.ಹಿರೇಮಠರು ೨೦೦೭ರಲ್ಲಿ 'ಬಸವಣ್ಣನವರ ವಚನಗಳಲ್ಲಿ ಮಾನವತಾವಾದ' ಎಂಬ ಮಹಾಪ್ರಬಂಧದಲ್ಲಿ ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾದ ವಿವಿಧ ಮಜಲುಗಳಲ್ಲಿ ಮಾನವತೆಯ ಅಂಶಗಳನ್ನು ಈ ಪ್ರಕಟಿತ ಮಹಾಪ್ರಬಂಧ ಒಳಗೊಂಡಿದೆ. ಬಿ.ಎಸ್.ಮಂಜುನಾಥಸ್ವಾಮಿ ಅವರು ೨೦೦೮ರಲ್ಲಿ 'ವಚನ ಚಳುವಳಿ ಆಂತರಿಕ ವೈರುಧ್ಯಗಳು' ಎಂಬ ಮಹಾಪ್ರಬಂಧದಲ್ಲಿ ನೀಲಾಂಬಿಕೆ ವಚನಗಳ ಸಂಖ್ಯೆ ಕುರಿತು ಹಾಗೂ ಆಕೆಯ ವಚನಗಳಲ್ಲಿ ಆಂತರಿಕ ಗುಣಗಳನ್ನು ತಿಳಿಸಿದ್ದಾರೆ.

## ಎಂ.ಫಿಲ್.ನಿಬಂಧಗಳು

ಶರಣಬಸವ ಜಿ.ಎಂ. ಅವರು ೨೦೦೭ರಲ್ಲಿ 'ಶಿವದಾಸ ಗೀತಾಂಜಲಿ: ಒಂದು ಅಧ್ಯಯನ' ಎಂಬ ನಿಬಂಧದಲ್ಲಿ ನೀಲಾಂಬಿಕೆ ಹಾಡುಗಳ ಕುರಿತು ಪ್ರಸ್ತಾಪಿಸಿದ್ದಾರೆ. ಪ್ರತಿಮಾ ಎಂ.ಸಿ. ಅವರು ೨೦೦೭ರಲ್ಲಿ 'ವಚನಕಾರ್ತಿಯರು ಮತ್ತು ಪ್ರತಿಭಟನೆಯ ನೆಲೆಗಳು' ಎಂಬ ನಿಬಂಧದಲ್ಲಿ ನೀಲಾಂಬಿಕೆಯ ಪ್ರತಿಭಟನೆ ಹೇಗೆ ಇತ್ತು, ತಾತ್ವಿಕದ್ದು, ಜೊತೆಗೆ ನಿರಾಕರ ಸ್ಥಿತಿಯದ್ದು

ಎಂಬುದನ್ನು ಚರ್ಚಿಸಿದ್ದಾರೆ. ೨೦೦೮ರಲ್ಲಿ 'ವಚನಕಾರ್ತಿಯರು ಮತ್ತು ಅವರ ವೃತ್ತಿ ವೈವಿಧ್ಯ' ಎಂಬ ನಿಬಂಧದಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರನ್ನು ಪರಿಚಯಾತ್ಮಕ ವಚನಗಳಲ್ಲಿ ಚಿತ್ರಣಗೊಂಡಿರುವ ಬಸವಣ್ಣನರ ಅಗುಲುವಿಕೆಯ ಅಂಶಗಳನ್ನು ಚಿತ್ರಿಸಿದ್ದಾರೆ. ಎಂ.ಮಧೋಬ ನಾಯಕ ಅವರು ೨೦೦೯ರಲ್ಲಿ 'ವಚನ ಸಾಹಿತ್ಯ ಸಂಪಾದನೆ ಮತ್ತು ಎಸ್.ಶಿವಣ್ಣ' ಅವರ ನಿಬಂಧದಲ್ಲಿ ನೀಲಾಂಬಿಕೆ ವಚನಗಳ ನಿಲುವುಗಳನ್ನು ಕುರಿತು ಮತ್ತು ಆಕೆಯಲ್ಲಿ ವ್ಯಕ್ತವಾಗುವ ಬಸವಾಭಿಮಾನ ದಾಸೋಹ ಭಾವವನ್ನು ಹಾಗೂ ತಾತ್ವಿಕ ವಿಚಾರಧಾರೆಗಳಲ್ಲಿ ತಿಳಿಸಿದ್ದಾರೆ. ಪಾರ್ವತಿ ಎಸ್.ಚೌಕಿಮಠ ಅವರು ೨೦೦೯ರಲ್ಲಿ 'ಇಂಗಳೇಶ್ವರ: ಒಂದು ಗ್ರಾಮಚರಿತ್ರೆ' ಎಂಬ ನಿಬಂಧದಲ್ಲಿ ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಪರಿಚಯ ಮಾಡಿದ್ದಾರೆ. ಮಂಜುನಾಥ ಸಿ. ಅವರು ೨೦೦೮ರಲ್ಲಿ 'ಬಸವಣ್ಣ ವಿವಾದಿತ ಕೃತಿಗಳು: ಒಂದು ಅಧ್ಯಯನ' ಎಂಬುದರಲ್ಲಿ ಮಹಾಚೈತ್ರ, ಮುಕ್ತಾಯದ ಮುನ್ನ, ಅನುದೇವಾ ಹೊರಗಣ ಕೃತಿಗಳ ಅನುಲಕ್ಷಿಸಿ ಅಧ್ಯಯನ ಮಾಡಿದ್ದಾರೆ. ಇಲ್ಲಿ ನೀಲಾಂಬಿಕೆ ಮಗನಾಧ ಬಾಲಸಂಗಯ್ಯ ಗಂಗಾಂಬಿಕೆ ತಂದೆ ಬಲದೇವನ ಕುರಿತು ಚರ್ಚಿಸಿದ್ದಾರೆ.

ಇದಲ್ಲದೆ ಹಲವಾರು ವಿದ್ವಾಂಸರು ಇವರಿಬ್ಬರ ಕುರಿತ ಬಿಡಿಯಾದ ಲೇಖನಗಳನ್ನು ಕಾಣುತ್ತೇವೆ. ೧೯೬೫ರಲ್ಲಿ ಪ್ರಕಟವಾದ ಸರೋಜಿನಿ 'ಮಹಿಷಿಯವರ ಕರ್ನಾಟಕದ ಕವಿಯತ್ರಿಯರು' ಎಂಬ ಪುಸ್ತಕದಲ್ಲಿ ಗಂಗಾಂಬಿಕೆ-ನೀಲಾಂಬಿಕೆ ಜೀವನ ಮತ್ತು ಅನುಭವ ಮಂಟಪದ ಕಾರ್ಯಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ೧೯೮೯ರಲ್ಲಿ 'ಬಸವಪಥ' ಪತ್ರಿಕೆಯಲ್ಲಿ ಪ್ರೊ.ಎಸ್.ಎಸ್. ಭೂಸರೆಡ್ಡಿಯವರ 'ಗಂಗಾಂಬಿಕೆ ವಚನಗಳಲ್ಲಿ ಐತಿಹಾಸಿಕ ಅಂಶಗಳು' ಎಂಬ ಲೇಖನದಲ್ಲಿ ವ್ಯಕ್ತವಾಗುವ ಐತಿಹಾಸಿಕ ವಿಚಾರಗಳನ್ನು ತಿಳಿಸಿದ್ದಾರೆ. ೧೯೯೬ರಲ್ಲಿ ನೀಲಾಗಂಗಾ ಚರಂತಿಮಠ ಅವರ ಸಂಪಾದನೆಯಲ್ಲಿ ಪ್ರಕಟವಾದ 'ಶಿವಶರಣೆಯರ ಚರಿತಾಮೃತ' ಪುಸ್ತಕದಲ್ಲಿ ಪ್ರೊ.ಲಲಿತಾಂಬ ವೃಷಬೇಂದ್ರಸ್ವಾಮಿಯವರು 'ಗಂಗಾಂಬಿಕೆ'ಯ ಲೇಖನದಲ್ಲಿ ಗಂಗಾಂಬಿಕೆ ಸಾಹಿತ್ಯದಲ್ಲಿ ಹೇಗೆ ಕಂಡುಕೊಂಡಿದ್ದಾರೆ. ಗಂಗಾಂಬಿಕೆ ನೀಲಾಂಬಿಕೆ ಹಿರಿಯ ಕಿರಿಯ ಪತ್ನಿ ಎಂಬುದನ್ನು ಇವರಿಬ್ಬರು ಬಸವಣ್ಣನೊಂದಿಗೆ ಜೀವಿಸಿದ ಬಗೆಯನ್ನು ತಿಳಿಸಿದ್ದಾರೆ. ೧೯೯೯ರಲ್ಲಿ ಬಸವಪಥ ಪತ್ರಿಕೆಯಲ್ಲಿ ಪ್ರಕಟವಾದ 'ನೀಲಾಂಬಿಕೆ' ಲೇಖನದಲ್ಲಿ ಡಾ.ವಿಜಯಶ್ರೀ ಸಬರದ ನೀಲಾಂಬಿಕೆಯ ಜೀವನ ವಚನಗಳ ಕುರಿತು ಹೇಳಿದ್ದಾರೆ. ೨೦೦೦ರಲ್ಲಿ ಪ್ರಕಟವಾದ 'ತನುಕರಗದವರಲ್ಲಿ' ಎಂಬ ಪುಸ್ತಕದಲ್ಲಿ ಡಾ.ಮಲ್ಲಿಕಾ ಘಂಟಿ ಅವರು ನೀಲಾಂಬಿಕೆಯು ಪುರುಷನಷ್ಟೆ ಸಮಾನಳು ಎಂಬ ವಿಚಾರ ಹೇಳಿದ್ದಾರೆ. ಡಾ.ಜಯಶ್ರೀ ದಂಡೆ ಅವರು ೨೦೦೧ರಲ್ಲಿ ಪ್ರಕಟಿಸಿದ 'ಫಲದೊಳಗಿನ ರುಚಿ' ಎಂಬ ಪುಸ್ತಕದಲ್ಲಿ ಗಂಗಾಂಬಿಕೆ-ನೀಲಾಂಬಿಕೆ ಕುರಿತು ಹೇಳಿದ್ದಾರೆ. ನೀಲಾಂಬಿಕೆ ವಚನದಲ್ಲಿ ತಾತ್ವಿಕೆ ನಿಲುವುಗಳನ್ನು ವಿಶ್ಲೇಷಿಸಿದ್ದಾರೆ. ೨೦೦೭ರಲ್ಲಿ ಪ್ರಕಟವಾದ 'ಸೃಜನೆಯ

ಮೂಡು' ಎಂಬ ಪುಸ್ತಕದಲ್ಲಿ ಡಾ.ಪ್ರೀತಿ ಶುಭಚಂದ್ರ ಅವರು ಗಂಗಾಂಬಿಕೆಯ ವಚನಗಳಲ್ಲಿಯ ವಿಚಾರಗಳು ಹಾಗೂ ಆತ್ಮವೇದನೆಯ ಅಂಶಗಳನ್ನು ಕುರಿತು ವಿವರಿಸಿದ್ದಾರೆ. ೨೦೦೯ರಲ್ಲಿ ಪ್ರಕಟವಾದ 'ಬಸವಣ್ಣನವರು'(ಚರಿತ್ರೆ ಮತ್ತು ಸಂಸ್ಕೃತಿಯ ಶೋಧಗಳು) ಎಂಬ ಪುಸ್ತಕದಲ್ಲಿ ಡಾ.ವಿಜಯಕುಮಾರ ಅವರು ಗಂಗಾಂಬಿಕೆ –ನೀಲಾಂಬಿಕೆಯ ಕುರಿತು ಹೇಳುವುದರೊಂದಿಗೆ ಬಸವಣ್ಣನೊಂದಿಗೆ ಇವರ ಬಾಂಧವ್ಯವನ್ನು ಕುರಿತು ಚರ್ಚಿಸಿದ್ದಾರೆ. ೨೦೦೯ರಲ್ಲಿ ಪ್ರಕಟವಾದ ಡಾ.ಎಂ.ಚಿದಾನಂದಮೂರ್ತಿ ಅವರ 'ವಚನ ಸಾಹಿತ್ಯ ಪುಸ್ತಕ'ದಲ್ಲಿ ನೀಲಾಂಬಿಕೆ–ಗಂಗಾಂಬಿಕೆ ಕುರಿತು ಹಾಗೂ ನೀಲಾಂಬಿಕೆಯ ವಚನಗಳ ಕುರಿತು ಚರ್ಚಿಸಿದ್ದಾರೆ. ೨೦೧೦ರಲ್ಲಿ ಪ್ರಕಟವಾದ ಡಾ.ಎಂ.ಎಂ.ಕಲಬುರ್ಗಿ ಅವರ 'ಮಾರ್ಗ–೧೦'ರಲ್ಲಿ ನೀಲಲೋಚನೆ ಎಂಬ ಲೇಖನದಲ್ಲಿ ಇವರು ನೀಲಾಂಬಿಕೆಯ ಮೂಲ ಹೆಸರನ್ನು ಕುರಿತು ಹರಿಹರ ಸೂಚಿಸುವಂತೆ ಮಾಯದೇವಿ ಇರಬಹುದೆಂದು ಆಲೋಚಿಸುತ್ತಾರೆ. ಅಲ್ಲದೆ ಈಕೆಯ ಹುಟ್ಟು, ಬದುಕಿನಲ್ಲಿ ನಡೆದ ಹಲವು ಘಟನೆಗಳ ಕುರಿತು ಚರ್ಚಿಸಿದ್ದಾರೆ. ೨೦೧೧ರಲ್ಲಿ ಡಾ.ಎಂ.ಎಸ್.ವೇದಾರವರು 'ವಚನಕಾರ್ತಿಯರು' ಎಂಬ ಪುಸ್ತಕದಲ್ಲಿ ಗಂಗಾಂಬಿಕೆ–ನೀಲಾಂಬಿಕೆಯ ಜೀವನ ಮತ್ತು ವಚನಗಳ ಕುರಿತು ವಿಶ್ಲೇಷಿಸಿ ದ್ದಾರೆ. ಅಲ್ಲೆ ಇನ್ನೂ ಹಲವಾರು ಲೇಖನಗಳು ಇವರಿಬ್ಬರ ಕುರಿತು ಬಂದಿವೆ.

ಹೀಗೆ ಗಂಗಾಂಬಿಕೆ–ನೀಲಾಂಬಿಕೆಯರ ಕುರಿತು ಬಿಡಿ ಲೇಖನಗಳು, ಬಿಡಿ ಅಧ್ಯಯನಗಳು ಆಗಿವೆ. ಒಟ್ಟಾರೆಯಾಗಿ ಇವರಿಬ್ಬರ ಸಮಗ್ರ ಚಿತ್ರಣ ಕುರಿತು ಪ್ರಸ್ತುತ ಅಧ್ಯಯನ ಕೈಗೊಂಡುದ್ದು ಆಗಿದೆ. ಆದರೆ ನೀಲಾಂಬಿಕೆ–ಗಂಗಾಂಬಿಕೆಯರ ಕುರಿತು ಸಮಗ್ರತೆ ಈ ಯಾವ ಅಧ್ಯಯನಗಳಲ್ಲಿ ಕಂಡುಬರುವುದಿಲ್ಲ. ಜೊತೆಗೆ ಇವರಲ್ಲಿ ಅಡಗಿದ್ದ ವ್ಯಕ್ತಿತ್ವವನ್ನು ಮತ್ತು ವಚನಗಳ ವಿಶ್ಲೇಷಣೆಯನ್ನು ಅಲ್ಲಲ್ಲಿ ಕಾಣುತ್ತೇವೆ. ಹೀಗಾಗಿ ಇವರ ಕುರಿತು ಸಮಗ್ರವಾದ ಅಧ್ಯಯನ ಮಾಡಿ ಇವರಲ್ಲಿಯ ಬದುಕಿನ ಚಿತ್ರಣವನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎರಡು

# ೧೨ನೇ ಶತಮಾನ ಮತ್ತು ಶಿವಶರಣೆಯರು

## ಅಧ್ಯಾಯ ಎರಡು

# ೧೨ನೇ ಶತಮಾನ ಮತ್ತು ಶಿವಶರಣೆಯರು

ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಸ್ತ್ರೀಪ್ರಧಾನತೆಯನ್ನು ಕಾಣುತ್ತೇವೆ. ಸಿಂಧೂ ಸಂಸ್ಕೃತಿಯಲ್ಲಿ ಮಾತೃಪ್ರಧಾನ ವ್ಯವಸ್ಥೆ ಇತ್ತು ಎಂಬುದನ್ನು ಸಿಂಧೂ ನಾಗರಿಕತೆ ಅಧ್ಯಯನದಿಂದ ತಿಳಿಯುತ್ತದೆ. ಆದರೆ ಮಾತೃಪ್ರಧಾನ ವ್ಯವಸ್ಥೆ ಮಾಯವಾಗಿ ಪುರುಷ ಪ್ರಧಾನ ವ್ಯವಸ್ಥೆ ಯಾವಾಗ, ಏಕೆ ಪ್ರಾರಂಭವಾಯಿತು ಎಂಬುದು ತಿಳಿಯುವುದು ಕಷ್ಟಕರವೆನಿಸುತ್ತದೆ. ಮನು ಸಂಸ್ಕೃತಿಯಿಂದ ಪಿತೃಪ್ರಧಾನ ವ್ಯವಸ್ಥೆ ಪ್ರಾರಂಭವಾಯಿತು ಎಂದು ಹೇಳಲು ಸಾಧ್ಯವಾಗಿದೆ. ಬಹುಶಃ ಆರ್ಯರಿಂದಲೇ ಈ ಸಂಸ್ಕೃತಿ ಬೆಳೆದಿರಬೇಕು. ಏಕೆಂದರೆ ಈಗಲೂ ಕೆಲವು ಬುಡಕಟ್ಟುಗಳಲ್ಲಿ ಮಾತೃಪ್ರಧಾನ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಆದರೆ ಕೇವಲ ಅತ್ಯಲ್ಪ ಮಾತ್ರ. ಆರ್ಯ ಸಂಸ್ಕೃತಿಯ ಪ್ರಭಾವದಿಂದ ಮಾತೃಪ್ರಧಾನ ವ್ಯವಸ್ಥೆ ನಾಶವಾಗಿ ಪಿತೃಪ್ರಧಾನ ವ್ಯವಸ್ಥೆ ಪ್ರಾರಂಭಗೊಂಡು ಮಾತೃಪ್ರಧಾನ ವ್ಯವಸ್ಥೆ ತೀರಾ ಹಿಂದೆ ಬೀಳುತ್ತಾ ಹೋಯಿತು. ಇಂತಹ ಸಂದರ್ಭದಲ್ಲಿ ಮಹಿಳೆ ಅಬಲೆಯಾಗಿ, ಈಕೆಯ ಸ್ಥಿತಿ ಅಸ್ಪೃಶ್ಯರಂತೆ ಆಗುತ್ತಾ ಹೋಯಿತು. ಒಂದು ಕಾಲದಲ್ಲಿ ಈಕೆ ಕುಟುಂಬದ ಆಧಾರಸ್ತಂಭ ವಾಗಿದ್ದಳು. ಕುಟುಂಬದ ನಿರ್ವಹಣೆಯೆಲ್ಲವೂ ಈಕೆಯ ಆಶಯದಂತೆ ನಡೆಯುತ್ತಿತ್ತು. ಪುರುಷ ಕೇವಲ ನಾಮಮಾತ್ರ.

"ಭಾರತೀಯ ಸಮಾಜವನ್ನು ಬಹುಕಾಲದಿಂದ ತನ್ನ ಕಪಿಮುಷ್ಟಿಯಿಂದ ಹಿಡಿದು ಕಾಡಿಸುತ್ತಿರುವುದೆಂದರೆ ಜಾತಿಪದ್ಧತಿ. ಪ್ರಾಯಶಃ ಪ್ರಾಚೀನರು ಮಾಡುತ್ತಿದ್ದ ವೃತ್ತಿಗಳು, ಆನುವಂಶಿಕ ವಾಗಿ ಮುಂದುವರಿದ ಕಾರಣದಿಂದ ಪ್ರಾರಂಭವಾಗಿರಬಹುದಾದ ವಿಭಾಗಗಳು ಬರಬರುತ್ತಾ ಸಮಾಜವನ್ನು ಚೂರುಚೂರು ಮಾಡಿ ನಮ್ಮ ಸಮಾಜವು ಅಚ್ಚುಕಟ್ಟಾಗಿ ಹೆಣೆಯಲ್ಪಟ್ಟ ಸಮಾಜವಾಗಲು ದೊಡ್ಡ ಅಡ್ಡಿಯಾಗಿಬಿಟ್ಟಿದೆ. ವರ್ಣಪದ್ಧತಿಯು ಮಾತ್ರ ಪ್ರಚಲಿತವಾಗಿದ್ದಾಗ, ವರ್ಣಗಳಲ್ಲಿ ಪರಸ್ಪರ ವೈವಾಹಿಕ ಸಂಬಂಧ ನಿಷೇಧಿತವಾಗಿರಲಿಲ್ಲ. ಆದರೆ ಜಾತಿಗಳು ಮಾತ್ರ ತಮ್ಮ ಮತ್ತು ಇತರರ ನಡುವೆ ಅಭೇದ್ಯವೆನಿಸುವ ಎತ್ತರದ ಗೋಡೆಗಳನ್ನು ನಿರ್ಮಿಸಿಕೊಂಡು

ಬಿಟ್ಟಿವೆ."[೧] ಎಂಬುದನ್ನು ಗಮನಿಸಿದರೆ ಪ್ರಾಚೀನ ಭಾರತದಲ್ಲಿ ಮಹಿಳೆಯ ಸಮಸ್ಯೆ, ಜಾತಿಪದ್ಧತಿಗಳು ಆಳವಾಗಿ ಬೇರುಬಿಟ್ಟ ಸಂದರ್ಭವನ್ನು ಕಾಣುತ್ತೇವೆ. ಇಂತಹ ಅಭಿವ್ಯಕ್ತಿಗೆ ಪ್ರಾತಿನಿಧ್ಯ ದೊರೆತ ಸಂದರ್ಭ ಹನ್ನೆರಡನೆಯ ಶತಮಾನವಾಗಿದೆ. ಇಲ್ಲಿ ಮೇಲುಕೀಳು ಎಂಬ ಭಾವ ಮರೆಯಾಗಿ ಎಲ್ಲರೂ ಸಮಾನರು ಎಂಬ ಭಾವ ಮೂಡಿದ್ದು, ಈ ಕಾಲದ ವೈಶಿಷ್ಟ್ಯವಾಗಿದೆ. ಸಮತಾಭಾವ ಮತ್ತು ಕಾಯಕ, ದಾಸೋಹದ ಮೂಲಕ ಸಮಾಜದಲ್ಲಿ ಸಮಾನತೆಯ ಪ್ರತಿಪಾದನೆ ಮೂಡಿದ್ದು, ಶಿವಶರಣ ಶರಣೆಯರ ಸಾಧನೆಗೆ ಕೈಗನ್ನಡಿಯಾಗಿದೆ.

ಮಹಿಳೆ ಕೇವಲ ಅಡುಗೆಮನೆಗೆ ಸೀಮಿತವಲ್ಲ ಎಂಬುದನ್ನು ಬಹಿರಂಗವಾಗಿ ಅಭಿವ್ಯಕ್ತ ಪಡಿಸುವ ಹಾಗೂ ಧೈರ್ಯದಿಂದ ಉತ್ತರಿಸುವಂತಹ ಸ್ವಾತಂತ್ರ್ಯವನ್ನು ನೀಡಿದ್ದು ಈ ಕಾಲಘಟ್ಟದ ವಿಶೇಷತೆಯಾಗಿದೆ ಎನ್ನಬಹುದು. "ವೈದಿಕ ವರ್ಣಾಶ್ರಮ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದ ಸಮಾಜದ ಅರ್ಧಭಾಗವಾಗಿದ್ದ ಮಹಿಳೆಯರಲ್ಲಿದ್ದ ಅಸಮಾನತೆ, ಶೋಷಣೆ, ಅನಕ್ಷರತೆ, ಅನಾಥಪ್ರಜ್ಞೆಯನ್ನು"[೨] ಕಂಡ ಬಸವಾದಿ ಶರಣರು ಮಹಿಳೆಯೂ ಪುರುಷನಷ್ಟು ಸಮಾನಳು ಎಂಬ ಭಾವನೆಯನ್ನು ತಂದುಕೊಟ್ಟರು ಎಂಬುದನ್ನು ಈ ಅಭಿಪ್ರಾಯದಿಂದ ತಿಳಿಯಬಹುದು. ಆದರೆ ೧೨ನೇ ಶತಮಾನದಲ್ಲಿ ಶಿವಶರಣರ ಚಿಂತನೆ ಸಮಾಜ ಸುಧಾರಣೆ, ಜೊತೆಗೆ ಸಮಾನತೆಯ ಅಂಶಗಳು ಹಾಗೂ ಲಿಂಗಭೇದವನ್ನು ಕಾಣದೆ ಹೋಗಬೇಕು ಎಂಬುದು ಮುಖ್ಯ ಆಶಯವಾಗಿತ್ತು. ಹಾಗಾಗಿ "ಸ್ತ್ರೀತ್ವವನ್ನು ಗೌಣವಾಗಿಸಿದ ವೈದಿಕ ಚಿಂತನಾಕ್ರಮವನ್ನು ನಿರಾಕರಿಸಿ ಆತ್ಮತತ್ವದ ಮೂಲಕ ಸ್ತ್ರೀ–ಪುರುಷ ಸಮಾನತೆಯನ್ನು ಪುರಸ್ಕರಿಸಿದರು."[೩]

ವಚನ ಪರಿಸರದ ಅಂದಿನ ತುರ್ತು ಮತ್ತು ಅಗತ್ಯತೆಗಳನ್ನು ಶರಣ–ಶರಣೆಯರು ನಿಭಾಯಿಸಿದ ಬಗೆಯು ಇಲ್ಲಿ ಅತಿ ಮಹತ್ವದ್ದಾಗಿದೆ. ಈ ಮೂಲಕ ಅಂದಿನ ಸಂದರ್ಭದ ಏನು, ಸ್ಥಿತಿಗತಿ ಅದನ್ನು ಶರಣ–ಶರಣೆಯರು ಸ್ವೀಕರಿಸಿದ ಬಗೆ ಯಾವುದು, ಅದರಲ್ಲಿ ಶರಣೆಯರು ಅದನ್ನು ತಮ್ಮದಾಗಿಸಿಕೊಳ್ಳುವಲ್ಲಿ ತೋರಿದ ದಾಷ್ಟ್ಯ, ಧೈರ್ಯ, ಸಾಧನೆ, ಇವುಗಳೆಲ್ಲ ಇಲ್ಲಿ ಗಣನೀಯ ಮತ್ತು ಗಮನೀಯ ಅಂಶಗಳು. ಅಕ್ಕಮಹಾದೇವಿಯು ಬಸವಣ್ಣನವರ ಸಮಕಾಲೀನಳಾಗಿ ಹಾಕಿಕೊಟ್ಟ ಮೇಲ್ಪಂಕ್ತಿ, ನಂತರದವರು ಅದನ್ನು ಸಾಧಿಸಿದ ಬಗೆಗಳು ಬಹಳ ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಇಡೀ ಚಳವಳಿಯ ನೇತಾರರಾದ ಬಸವಣ್ಣನವರ ಮಡದಿಯರು ಏಕಕಾಲಕ್ಕೆ ಕೌಟುಂಬಿಕ, ಸಾಮಾಜಿಕ ದ್ವಿಪಾತ್ರವನ್ನು ಗಂಗಾಂಬಿಕೆ–ನೀಲಾಂಬಿಕೆಯರಿಬ್ಬರೂ ನಿರ್ವಹಿಸಿದ ಬಗೆ ಇಲ್ಲಿ ಅಧ್ಯಯನದ ವಸ್ತುವಾಗಿದೆ. ಇದಕ್ಕೆ ತಕ್ಕ ಭೂಮಿಕೆಯಾಗಿ ಅಂದಿನ ಪರಿಸರ ಮತ್ತು ಶಿವಶರಣೆಯರನ್ನು ಕುರಿತ ಚಿಂತನೆ ಈ ಅಧ್ಯಾಯದಲ್ಲಿದೆ.

## ೧೨ನೇ ಶತಮಾನದ ಸಾಮಾಜಿಕ ಹಿನ್ನಲೆ

೧೨ನೇ ಶತಮಾನದ ವಚನ ಚಳವಳಿ ಹಳೆಯದನ್ನು ಸಂಪೂರ್ಣ ವಿಶ್ಲೇಷಿಸಿ ಹೊಸದನ್ನು ಕಟ್ಟುವಂತಹ ಭವಿಷ್ಯದ ಕನಸುಗಳನ್ನು ಪೋಣಿಸಿದ ಬಗೆ ವೈಶಿಷ್ಟ್ಯಪೂರ್ಣವಾಗಿದೆ. ವೇದ ವಿರೋಧಿ ಅಷ್ಟೇ ಅಲ್ಲ, ಅದರ ಜೊತೆಗೆ ನ್ಯಾಯ ನೀತಿ, ಕರ್ತವ್ಯಪ್ರಜ್ಞೆ ಹೀಗೆ ಹಲವಾರು ದ್ವಂದ್ವಗಳನ್ನು ತನ್ನಲ್ಲಿ ಇಟ್ಟುಕೊಂಡು ಮೈದಾಳಿದ ಪರಿ ತುಂಬ ಮಹತ್ವದಾಗಿದೆ. ಇಂತಹ ಕಾಲಘಟ್ಟದಲ್ಲಿ ಸೃಜನಗೊಂಡ ಅಸ್ಪೃಶ್ಯ ನಿರಾಕರಣೆ, ವೈಚಾರಿಕತೆ, ಕಾಯಕನಿಷ್ಠೆ, ದಾಸೋಹ, ಶರಣತ್ವ, ಜಂಗಮ ಪರಿಕಲ್ಪನೆ, ಸ್ತ್ರೀ ಸಮಾನತೆ ಹೀಗೆ ಹತ್ತು ಹಲವಾರು ಪರಿಕಲ್ಪನೆಗಳು ಚಿಂತನಾರ್ಹವೆನಿಸಿದೆ.

ವಚನ ಚಳವಳಿಯಲ್ಲಿ ಸ್ತ್ರೀಪರವಾದ ಧೋರಣೆಯು ಮಹತ್ವದ ಅಂಶವಾಗಿದೆ. ಏಕೆಂದರೆ ಹೆಣ್ಣಿನ ನಿರ್ವಚನದಲ್ಲಿ ಅಷ್ಟೇ ಪೂರಕ ಹಾಗೂ ಏಕಕಾಲಕ್ಕೆ ಕಂಟಕಪ್ರಾಯವಾದ ದೇಹಧರ್ಮವನ್ನು ಖಂಡಿಸಿ ಮಂಡಿಸಿದ ಪ್ರಬಲರು ಶಿವಶರಣರು ಮತ್ತು ಶರಣೆಯರು. ಸಹಜ ಸಂಕೋಚದ ಭಾವ ಅಳಿದು ಪಾರಮಾರ್ಥಿಕ ತತ್ವಕ್ಕೆ ಮುಂದಾಗಿ, ಜೀವಾತ್ಮ ಮತ್ತು ಪರಮಾತ್ಮರ ಸಂಗಕ್ಕೆ ದೇಹದ ಅಡ್ಡಿ ಅಡೆತಡೆ ಏಕೆ ಹಾಗೂ ಆತ್ಮವು ಗಂಡು ಅಲ್ಲ–ಹೆಣ್ಣು ಅಲ್ಲ. ಅದು ಪರಮಾತ್ಮನನ್ನು ಕೂಡುವ ಬಗೆಯಾಗಿದೆ ಎಂಬುದನ್ನು ಮಂಡಿಸಿದರು. ದೇಹದ ಮಹತ್ವ ಮುಖ್ಯವಲ್ಲ. ಇಲ್ಲಿ ತನು ಶುದ್ಧವಾಗಬೇಕು, ಹಾಗಾದಾಗ ಮನದ ಮಲೀನತೆ ಹೋಗಲು ಸಾಧ್ಯ ಎನ್ನುವ ಅಂಶವನ್ನು ಮನಗಾಣಬಹುದು.

> "ಕಾಯವುಳ್ಳನ್ನಕ್ಕ ಲಿಂಗಪೂಜೆ, ಆತ್ಮವುಳ್ಳನ್ನಕ್ಕ ಅರಿವಿನ ಭೇದ
> ಪುರುಷ ನೀ ಸತಿ ನಾನೆಂಬಲ್ಲಿ
> ಉಭಯದ ಬೀಜ ನಾ ನೀನೆಂಬದನ್ನಕ್ಕ
> ಅಂಗದ ಲಿಂಗದಲ್ಲಿಯೆ ನಿರಂಗವಾಗಬೇಕು
> ಎನ್ನಯ್ಯ ಪ್ರಿಯ ಇಮ್ಮಡಿ ನಿಃ ಕಳಂಕಮಲ್ಲಿಕಾರ್ಜುನಾ"[೪]

ಈ ಮೇಲಿನ ವಚನ ಮೋಳಿಗೆಯ ಮಹಾದೇವಿಯದಾಗಿದೆ. ಇಲ್ಲಿ ಸ್ತ್ರೀ–ಪುರುಷ ಭೇದವರಿಯದೆ, ಲಿಂಗಾಂಗ ಸಾಮರಸ್ಯದ ಕುರುಹ ಅರಿತಾದಲ್ಲಿ ಯಾವೊಂದು ಹಂಗೂ ಇರದೆ ಜ್ಞಾನ–ಖನಿಜವಾಗಬಹುದು ಎಂಬುದರ ಮೂಲಕ ಬಹಿರಂಗದ ಒಲುಮೆಗಿಂತ ಅಂತರಂಗದಲ್ಲಿಯ ಸೊಬಗು ಬಹಳಷ್ಟು ಆನಂದ ನೀಡುತ್ತವೆ. ಹಾಗಿದ್ದಲ್ಲಿ ಪುರುಷ ಸ್ತ್ರೀ ಭೇದ ಆತ್ಮಕ್ಕೆ ಇಲ್ಲ ಎನ್ನಬಹುದು. ನಂತರದಲ್ಲಿ ಗೊಗ್ಗವ್ವ ಸ್ತ್ರೀ ಪುರುಷ. ಜಾತಿಭೇದವನ್ನೆ ಪ್ರಶ್ನಿಸುತ್ತಾಳೆ. ದೇಹ ಭಾವವೇ ಈ ಸಮಸ್ಯೆಯ ಮೂಲ ದೇಹ ಭಾವವಳಿದು ಬೇರಿನ ತರಹ ಒಟ್ಟಾಗಿರುವ

ಆತ್ಮದ ಪರಿಕಲ್ಪನೆ ಸಾಧ್ಯವಾದರೆ ಅದೇ ಜ್ಞಾನ. ಜ್ಞಾನಕ್ಕೆ ಗಂಡು ಹೆಣ್ಣಿನ ಭೇದವಿಲ್ಲ. ಆಕೆ ಕೊಡುವ ನಿದರ್ಶನವೇ ಈ ಕೆಳಗಿನ ವಚನ ಸ್ಪಷ್ಟಿಕರಿಸುತ್ತದೆ.

“ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ?”[೫]

ಹಾಗಾಗಿಯೇ ಇದರ ಯಥಾರ್ಥತೆಯನ್ನು ಡಾ.ಪ್ರೀತಿ ಶುಭಚಂದ್ರ ಮನುಷ್ಯನಲ್ಲಿ ಒಡಮೂಡುವ ಅಂಶವನ್ನು ಕುರಿತು ಹೇಳುತ್ತಾರೆ.

“ಪುರುಷಾಹಂಕಾರವನ್ನು ಮೀರುವ ಸಾಧನವಾಗಿ ಭಕ್ತ ತನ್ನನ್ನು ಸತಿಯಾಗಿಯೂ ಲಿಂಗವನ್ನು ಪತಿಯಾಗಿಯೂ ಪರಿಭಾವಿಸಿದಾಗಲೂ ಪ್ರಯೋಜನಗಳೆಷ್ಟಿವಿಯೋ ತೊಡಕುಗಳೂ ಅಷ್ಟೇ ಇವೆ. ಉರಿಲಿಂಗ ಪೆದ್ದಿಯ ವಚನಗಳ ಭಾವತೀವ್ರತೆ, ಶರಣಸತಿ–ಲಿಂಗಪತಿ ಸಂಬಂಧ ವನ್ನು ಪ್ರಾಮಾಣಿಕತೆಯ ಉತ್ತುಂಗದಲ್ಲಿ ಸ್ಥಾಪಿಸುತ್ತದೆ. ಆದರೆ ಗುರು, ಲಿಂಗ–ಜಂಗಮ ಸಂಬಂಧವನ್ನು ಸಾಮಾಜಿಕ ಭೂಮಿಕೆಯಲ್ಲಿ ಅಂಗಸತಿ–ಲಿಂಗಪತಿ ಭಾಗವು ದ್ವಯದ ಭೇದವನ್ನು ಹೊಂದಿದ್ದು ವ್ಯಾವಹಾರಿಕ ಪ್ರಯೋಜನಗಳಿಗೆ ಮುಖಮಾಡಿ ನಿಲ್ಲುವ ಸಾಧ್ಯತೆ ಇದೆ.”[೬] ಈ ಹೇಳಿಕೆಯನ್ನು ಗಮನಿಸಿದಾಗ ಶರಣರಲ್ಲಿ ಇದ್ದಂತಹ ಭಾವನೆಗಳು ವ್ಯಕ್ತಗೊಂಡು ಅಧ್ಯಾತ್ಮದ ಉನ್ನತಿಯ ಜೊತೆಗೆ ತಮ್ಮ ಸಂಸಾರಿಕ ಜೀವನದಲ್ಲಿ ಭೇದಭಾವವನ್ನು ಮರೆತು ಸದಾ ಒಳ್ಳೆಯ ವಿಚಾರಕ್ಕೆ ಮಹತ್ವ ಕೊಡುತ್ತಿದ್ದರೆನ್ನಬಹುದು. ಇದಕ್ಕೆ ಮೋಳಿಗೆಯ ಮಹಾದೇವಿ ತನ್ನ ವಚನದಲ್ಲಿ ಸ್ಪಷ್ಟತೆಯನ್ನು ನೀಡಿದ್ದಾಳೆ.

“ಲಿಂಗ ಭೋಗೋಪಭೋಗಿ ಎಂದು ತಾ ಮುನ್ನ ಬಿಟ್ಟುದ ಮುಟ್ಟಬಹುದೆ
ತನ್ನ ಸುಖಕ್ಕೆ ತಾ ಭೋಗಿಸಿ ಲಿಂಗ ಮುಂತಾಗಿ ಕೂಡಿದೆನೆನಬಹುದೆ
ಲಿಂಗದಂಗವನರಿದು ತಾ ಕೂಡಬಲ್ಲಡೆ
ತನ್ನ ಇಂದ್ರಿಯಗಳ ಇಚ್ಛೆ ಉಂಟೆ
ತಾ ಕದ್ದ ಕಳವ ಪರಿಹರಿಸಿಕೊಳಲರಿಯದೆ
ಇದಿರ ನೀವು ಬನ್ನಿ ಎಂದು ಕರೆವ ಕದ್ದೆಹಾಕಾರನಂತೆ
ಈ ದ್ವಯ ಇದಿರಿಡಬಾರದ ಕುರುಹು
ಲಿಂಗ ಭೋಗೋಪಭೋಗಿ ತಾನಾದಡೆ
ಉರಿಗೂಡಿಯೆ ಕರಗುವ ಕರ್ಪೂರದ ಇರವಿನಂತೆ ಇರಬೇಕು

ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನ ಸಂಗಗೂಡಿ
ಸುಖಿಸುವ ಲಿಂಗಾಂಗಿಯ ಇರವು"[೭]

ಶರಣೆಯರು ತಮ್ಮತನವನ್ನು ಕಾಯ್ದುಕೊಳ್ಳುತ್ತಲೆ ಉಭಯಭಾವವನ್ನು ಮೀರಿರುವ ಪರಿ ಇಲ್ಲಿದೆ. ಅಕ್ಕಮಹಾದೇವಿಯಿಂದ ಆರಂಭಗೊಂಡ ಈ ಪದ್ಧತಿ ಬೇರೆ–ಬೇರೆ ಶರಣೆಯರಲ್ಲಿಯೂ ತನ್ನದೇ ಆದ ವೈಶಿಷ್ಟ್ಯತೆಗಳಿಂದ ಮುಂದುವರಿದಿದೆ. ಆದರೆ ಅಂಜದೆ ಅಳುಕದೆ ಮುಂದುವರಿದ ಅವರ ಕ್ರಮ ಸ್ತ್ರೀತ್ವದ ಅಸ್ಮಿತೆಯ ಪ್ರತೀಕವೇ ಆಗಿದೆ. ಡಾ.ಪ್ರೀತಿ ಶುಭಚಂದ್ರ ಅವರ ಈ ಮಾತುಗಳು ಇದನ್ನು ಇನ್ನಷ್ಟು ಸ್ಪಷ್ಟತೆಗೊಳಿಸಬಲ್ಲದು. "ಅನುಭಾವಿಕ ತಾತ್ವಿಕ ನೆಲೆಯಲ್ಲಿ 'ಸ್ತ್ರೀ' ಜಾತಿಯನ್ನು ಮೀರುವ ಪ್ರಕ್ರಿಯೆ ಶರಣೆಯ ಪಾಲಿಗೆ ನಿಜಕ್ಕೂ ಅಗ್ನಿದಿವ್ಯ. ವಿವಾಹದ ನಂತರ ತಮ್ಮ ಆಯ್ಕೆಯ ಪಥದಲ್ಲಿ ನಿರಂತರವಾಗಿ ಸಾಗಲು ಬಹಳಷ್ಟು ಶರಣೆಯರಿಗೆ ಸಾಧ್ಯವಾಗಲಿಲ್ಲ. ವೈಯಕ್ತಿಕ ಆಯ್ಕೆಗೂ ಸಾಮಾಜಿಕ ಒತ್ತಡಕ್ಕೂ ನಡುವಣ ಶರಣೆಯರ ಸಂಘರ್ಷದ ಬದುಕು ಪವಾಡಗಳನ್ನೊಳಗೊಂಡ 'ಮಿಥ್' ಆಗಿ ರೂಪು ತಳೆದಿದೆ. ಕಾಯದ ಲಜ್ಜಾಭಾವವನ್ನು ಪೂರ್ಣ ತೊರೆದ ಅಕ್ಕಮಹಾದೇವಿ, ಬೊಂತಾದೇವಿಯರ ಬದುಕು ಅಲ್ಲಮ ಬಸವಾದಿ ಶರಣ ಪ್ರಮಥರ ಸನ್ನಿಧಿಯಲ್ಲಿ ಒಪ್ಪಿತವಾಯ್ತು. ಪುರುಷನ ನೆರಳಾಗಿ ಸ್ತ್ರೀ ಇರುವುದೆಂದರೆ ಪ್ರಜ್ಞೆಯ ವಿಕಾಸದ ಸಾಧ್ಯತೆಗಳನ್ನೆಲ್ಲಾ ಇಲ್ಲವಾಗಿಸುವುದೇ ನೆರಳಿಗೆ ಸ್ವತಂತ್ರ ಅಸ್ತಿತ್ವವಿಲ್ಲವಾಗಿ, ಸ್ತ್ರೀ–ಪುರುಷ ಸಂಬಂಧಗಳಲ್ಲಿ ಯಾವ ಸಾಮಾಜಿಕ ಸಂಘರ್ಷಗಳೂ ಇರುವುದಿಲ್ಲ.

ಪುರುಷ ಸಾಧಕ ತನ್ನನ್ನು ಸೇವಕ, ಪತ್ನಿ, ನಲ್ಲೆ ಎಂದು ಭಾವಿಸಿ ಅಹಂಕಾರವನ್ನು ನಿರಸನಗೊಳಿಸುವ ಪ್ರಯತ್ನದಲ್ಲಿ ಸಾಮಾಜಿಕ ನೇರ ಸಂಘರ್ಷಕ್ಕೆ ಒಳಗಾಗಬೇಕಾದ ಸಾಧ್ಯತೆಗಳೂ ಕಡಿಮೆ. ಆದರೆ ಸಾಧಕಿಯೊಬ್ಬಳು ಸ್ತ್ರೀತನದ ಸಾಮಾಜಿಕ ಕೀಳರಿಮೆ ಭಾವದಿಂದ ತನ್ನನ್ನು ಮುಕ್ತವಾಗಿಸಿಕೊಂಡಾಗ ಹೊಂದುವ ಹೊಸ ಎಚ್ಚರವನ್ನು ಸ್ವೀಕರಿಸುವ ಮುಕ್ತ ಸ್ಥಿತಿಯಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. 'ಸಾವ ಕೆಡುವ ಗಂಡಂದಿರನ್ನು ಒಯ್ದು ಒಲೆಯೊಳಗಿಕ್ಕು' ಎಂದ ಅಕ್ಕ ಎಲ್ಲ ಸಾಮಾಜಿಕ ಕಟ್ಟು ಕಟ್ಟಳೆಗಳನ್ನು ದಿವ್ಯ ನಿರ್ಲಕ್ಷ್ಯದಿಂದ ಮಿಕ್ಕಿ ಮೀರಿ ಹೋಗುವ 'ಗೊರವ' ಶಿವನನ್ನು ತನ್ನ ಪತಿಯಾಗಿ, ನಲ್ಲನಾಗಿ ಸ್ವೀಕರಿಸುತ್ತಾಳೆ. ಇಂಥವನನ್ನು ಪತಿಯಾಗಿ ಸ್ವೀಕರಿಸಿದ ಅಕ್ಕ 'ಶೀಲ' ಪಾತಿವ್ರತ್ಯಗಳ ಒತ್ತಡಗಳನ್ನು ಇಲ್ಲವಾಗಿಸುವ ಪರಿ ಹೀಗಿದೆ."[೮]

"ಹಣ್ಣ ಮೆದ್ದ ಬಳಿ ಆ ಮರವನಾರು ತರಿದಡೇನು
ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು
ಮಣ್ಣ ಬಿಟ್ಟ ಬಳಿಕ ಆ ಕೆಯ್ಯನಾರು ಉತ್ತಡೇನು
ಚೆನ್ನಮಲ್ಲಿಕಾರ್ಜುನನರಿದ ಬಳಿಕ
ಆ ಕಾಯದ ನಾಯಿ ಲೆಂದಡೇನು, ನೀರು ಕುಡಿದಡೇನು"[೯]

ಹೀಗೆ ಶರಣೆಯರು ಅನೇಕ ಅಗ್ನಿದಿವ್ಯಗಳನ್ನೆದುರಿಸುತ್ತಲೇ ಸಾಮಾಜಿಕವಾಗಿ ತಮ್ಮ ತನವನ್ನು ಮೆರೆದರು. ಪರಂಪರೆಯೊಂದಿಗಿನ ಸಂವಾದ ಸಂಘರ್ಷ ಅಕ್ಕನಿಂದಲೇ ಆರಂಭಗೊಳ್ಳುತ್ತದೆ. ಅಕ್ಕ ತನಗೆ ಅಂದರೆ ಸ್ತ್ರೀ ಬಯಸಿದಂತೆ ಮಾರ್ಗವನ್ನು ಕಂಡುಕೊಳ್ಳುವ ದಿಟ್ಟ ಹಾದಿಯನ್ನು ತುಳಿದಳು. ಜಗದ ಗೊಡವೆಗೆ ಮನಸೋಲದೆ, ಮನಸೊಪ್ಪಿದ ಮಾರ್ಗದಲ್ಲಿ ನಡೆದು ತನ್ನ ಇಹ ಪರಗತಿಯನ್ನು ಸಾಧಿಸಿಕೊಂಡಳು. ಇದಕ್ಕೆ ಇನ್ನುಳಿದ ಶರಣೆಯರು ಕೈಜೋಡಿಸಿದರು. ಅವರವರ ಕಾಯಕದ ಮೂಲಕವೇ ಶಿಷ್ಟ-ಪರಿಶಿಷ್ಟಗಳ ಭಾವವನ್ನಳಿದ ಶಿವ ಒಲುಮೆಯನ್ನು ಅರಸಿ ಹೊರಟರು. ಬಹುಶಃ ವಚನ ಎನ್ನುವ ಪದದ ಅರ್ಥ 'ಪ್ರತಿಜ್ಞೆ' ಎನ್ನುವುದನ್ನು ಜೀವನ ದಲ್ಲಿ ಬಾಳಿ ಬದುಕಿದವರು ಅವರ ಜೀವನಪಥವೇ ಒಂದು ಪ್ರತಿಜ್ಞೆಯಾಗಿತ್ತು.

"ವಚನಕಾರ್ತಿಯರೆಲ್ಲ ಅಂದಿನ ಚಳವಳಿಯ ಪ್ರವಾಹದಲ್ಲಿ ಕೊಚ್ಚಿ ಬಂದವರೆಂಬುದರಲ್ಲಿ ಅನುಮಾನವಿಲ್ಲ. ಇವರೆಲ್ಲ ಪರಮ ಪತಿವ್ರತೆಗೆ ಗಂಡನೊಬ್ಬ, ನಂಬಿದ ಹೆಂಡತಿಗೆ ಗಂಡನೊಬ್ಬ ಎಂದು ಹಾಡಿದವರೆ, ಸಾಂಪ್ರದಾಯಿಕ ಆಚರಣೆಗಳನ್ನು ಶ್ರದ್ಧಾಸಕ್ತಿಯಿಂದ ಆಚರಿಸುತ್ತಿದ್ದವರೇ. ಅಭಿವ್ಯಕ್ತಿಗೆ ಅವಕಾಶ ದೊರೆತ ಸಂದರ್ಭದಲ್ಲಿ ಕಾಯಕನಿಷ್ಠೆಯೇ ಅವರ ಬಾಯಲ್ಲಿ ಬಂದಿರುವ ಇಂತಹ ಮಾತುಗಳು ಮಹತ್ವಪೂರ್ಣವಾದವು ಎಂದು ಎನಿಸುತ್ತದೆ."[೧೦] ಕೆ.ವಿ.ನಾರಾಯಣ ಅವರು ಪೂಜೆ ಕಲ್ಪನೆಯನ್ನು ಸೂಕ್ಷ್ಮವಾಗಿ ಅರ್ಥೈಸುತ್ತಾರೆ.

ಶರಣರ ಕಲ್ಪನೆ ಕೇವಲ ಪೂಜೆಯಲ್ಲ, ಅದರೊಂದಿಗೆ ಕಾಯಕ-ದಾಸೋಹ, ಅನುಭವದ ಪರಿಪಾಟ ಈ ಎಲ್ಲವೂ ಅವಶ್ಯ. ಜೊತೆಗೆ ಹತ್ತು ದೇವರು ಪೂಜೆ ನೇಮವಲ್ಲ. ನಿಷ್ಠೆಯಿಂದ ಏಕದೇವೋಪಾಸನೆ ಮುಖ್ಯ ಜೊತೆಗೆ ಲಿಂಗವು ಅಂಗದ ಮೇಲೆ ಇದ್ದರೆ ಆತನೆ ಶರಣ ಎಂಬ ಸತ್ಯತೆಯನ್ನು ನಂಬಿದಂತಹದ್ದು. ಹಾಗೂ ಸಮಾನತೆಯ ಒಂದು ಕುರುಹುವಾಗಿದೆ ಎಂದು ತಿಳಿಯಬಹುದು. ಕೆ.ವಿ.ನಾರಾಯಣರು ಮುಂದುವರೆದು ಈ ಕೆಳಗಿನ ಮಾತುಗಳನ್ನು ಹೇಳುತ್ತಾರೆ.

"ಶಿವಶರಣರು ಈ ಸಮಾನತೆಯ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಖಚಿತ ಮಾರ್ಗವನ್ನು ಅನುಸರಿಸಿದ್ದಾರೆ. ಸಮಾನತೆ ಎಂಬುದು ಸಾಮಾಜಿಕ ಸಂದರ್ಭದಲ್ಲಿನ ಸ್ಥಿತಿಯಾದ್ದರಿಂದ ಸಮಾಜ-ವ್ಯಕ್ತಿಗಳ ನಡುವಣ ಸಂಬಂಧವನ್ನು ಅವರು ಖಚಿತಪಡಿಸಿಕೊಂಡರು. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ವ್ಯಕ್ತಿಯು ಪಡೆಯುವ ಸಮಾನಾವಕಾಶವು ಸಾಮಾಜಿಕ ಸಂದರ್ಭದಲ್ಲಿಯೇ ವ್ಯಕ್ತವಾಗಬೇಕಾದುದರಿಂದ ವ್ಯಕ್ತಿ ಸಮಾಜದ ಒಂದು ಭಾಗವಾಗಿ ನಿರ್ವಹಿಸುವ ಪಾತ್ರ ಹಾಗೂ ತೋರುವ ಸಮಾಜವಿದ್ದಂತೆ ತೋರುತ್ತದೆ. ವ್ಯಕ್ತಿ ಸಮಾಜಗಳ ನಡುವಣ ಸಂಬಂಧದ ಗಟ್ಟಿತನಕ್ಕಾಗಿ ಹಾಗೂ ಅವುಗಳ ಪೂರಕ ಸಂಬಂಧಕ್ಕಾಗಿ ಶರಣರು ನೀಡಿದ ಸಾಮಾಜಿಕ ನಡಾವಳಿಯೆಂದರೆ ಪಂಚಾಚಾರಗಳು, ಲಿಂಗಾಚಾರ, ಸದಾಚಾರ, ಶಿವಾಚಾರ,

ಗಣಾಚಾರ, ಭೃತ್ಯಾಚಾರಗಳು. ವ್ಯಕ್ತಿಯು ಸಮಾಜವನ್ನು ಪರಿಭಾವಿಸಬೇಕಾದ ರೀತಿ, ಸಮಾಜವು ವ್ಯಕ್ತಿಯನ್ನು ಒಳಗೊಳ್ಳಬೇಕಾದ ಬಗೆ ಇವುಗಳನ್ನು ಮತೀಯ ಚೌಕಟ್ಟಿನಲ್ಲಿ ವಿಧಿಸುತ್ತದೆ. ನಂಬಿಕೆಯ ಸಮಾನ. ಮನಸ್ಕರಂತೆ ಕಾಯಕದಿಂದ ಜೀವನ ತನ್ನ ಸಮುದಾಯದ ಇತರರನ್ನೆಲ್ಲ ಸಮಾನರೆಂದು ಕಾಣಬೇಕಾದ ದೃಷ್ಟಿ ನಂಬಿಕೆಯ ಆಳ ಹಾಗ ನಡುವಳಿಕೆಯ ವಿನಯಗಳು ಈ ಮತೀಯ ವಲಯಕ್ಕೆ ಬಂದವರನ್ನು ಒಂದುಗೂಡಿಸುವ ಹಾಗೂ ಸಮಾನ ಘಟಕಗಳನ್ನಾಗಿ ಪರಿಭಾವಿಸುವ ಗುರಿಯನ್ನು ಪಡೆದಿದೆ."[೧೧] ಸಮಾಜದ ಸ್ವಾಸ್ಥತೆಯನ್ನು ಶರಣರು ಕಾಪಾಡಿಕೊಂಡು ಬಂದರು. ಜೊತೆಗೆ ಎಲ್ಲಿ ಸ್ತುತಿ–ನಿಂದೆ ಬಂದಲ್ಲಿ ಸಹಿಸಿಕೊಂಡು ಕಾಯಕ–ದಾಸೋಹ ಅನುಭವದಲ್ಲಿ ತಲ್ಲೀನರಾದರು. ಇವರ ಗುರಿ–ದ್ವೇಷ, ಅಸೂಯೆಗಳನ್ನು ಮರೆತು ಸುಂದರ ಸಮಾಜವನ್ನು ಕಟ್ಟುವದಾಗಿತ್ತು.

ಶರಣೆಯರು ಕೂಡಾ ಕಾಯಕ–ದಾಸೋಹ ವಿಚಾರಗಳನ್ನು ಸ್ಪಷ್ಟಪಡಿಸಿ ಜೀವನದ ಧ್ಯೇಯವಾಗಿಸಿ ಬದುಕಿದವರೇ. ಅಂತೆಯೇ ಜಾತಿಪದ್ಧತಿ ವಿಷಯವಾಗಿ ಕೂಡ ಶರಣೆಯರು ಸ್ಪಷ್ಟ ನಿಲುವಿನಲ್ಲಿ ಮಾತನಾಡಿದ್ದಾರೆ. ಇದಕ್ಕೆ ಬೊಂತಾದೇವಿಯ ವಚನವೇ ಸಾಕ್ಷಿಯಾಗಿದೆ.

"ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೇ?
ಊರೊಳಗೆ ಬ್ರಾಹ್ಮಣ ಬಯಲು ಊರ ಹೊರಗೆ ಹೊಲೆ ಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಿಂದ ಒಳಹೊರಗೆಂಬ ನಾಮವ್ಯೆಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ"[೧೨]

ಈ ವಚನದಲ್ಲಿ ಬಯಲು ಎನ್ನುವುದು ಬ್ರಾಹ್ಮಣನಿಗೂ ಒಂದೇ ಶೂದ್ರನಿಗೂ ಒಂದೇ, ಆದರೆ ತಾರತಮ್ಯವೇಕೆ? ಪ್ರಾಮಾಣಿಕತೆಯೆಂಬುದು ದೈವಾರ್ಪಿತವಾಗಿದ್ದುದಾದರೆ ಏನೆಲ್ಲಾ ಮಾಡಲಿಕ್ಕೆ ಸಾಧ್ಯ ಎಂಬುದನ್ನು ತಿಳಿಯಬಹುದು.

ಈ ಮೇಲಿನ ಎಲ್ಲಾ ವಿಚಾರಗಳ ಸಮಾಜದಲ್ಲಿಯ ಸರ್ವಾಂಗೀಣವಾದ ಬದಲಾವಣೆಗೆ ಹಾಕಿದ ಶ್ರಮ, ಜೊತೆಗೆ ಇವರು ಅನೇಕ ನಂಬಿಕೆಗಳ ವಿರುದ್ಧ ಸಿಡಿದೆದ್ದ ಅಂಶಗಳು ಹಾಗೂ ಸಮಾಜದ ಸುವ್ಯವಸ್ಥೆ ಕಾಪಾಡುವಲ್ಲಿ ಶರಣ ಶರಣೆಯ ಪರಿಶ್ರಮ ಬಹಳ ಮುಖ್ಯವೆಂದು ಕಾಣುತ್ತದೆ.

ಈ ಎಲ್ಲಾ ಅಂಶಗಳು ಅಂದಿನ ಸಾಮಾಜಿಕ ಸಂದರ್ಭವನ್ನು ನಮ್ಮ ಮುಂದಿಡುತ್ತವೆ. ಇಂತಹ ವಿಷಮ ಪರಿಸ್ಥಿತಿಯನ್ನು ತಿಳಿಗೊಳಿಸಲು ಒಬ್ಬರಲ್ಲ ಹಲವಾರು, ಗಂಡು ಮಾತ್ರವಲ್ಲ ಹೆಣ್ಣು, ವ್ಯಷ್ಟಿ ಪ್ರಜ್ಞೆ ಮಾತ್ರವಲ್ಲ, ಸಮಷ್ಟಿಯಿಂದ ಒಗ್ಗೂಡಿ ಶ್ರಮಿಸಿದ ರೀತಿ ಮನನೀಯವಾಗಿದೆ.

ಅನುಭವ ಮಂಟಪದ ವೈಚಾರಿಕ ಚಿಂತನಾ ಚಾವಡಿಯಲ್ಲಿ, ಕಾಯಕದ ಮೂಲಕ, ದಾಸೋಹದ ಮೂಲಕ, ವಚನ ರಚನೆಯ ಮೂಲಕ ಇನ್ನೂ ಹಲವಾರು ಮಾರ್ಗಗಳಿಂದ ಹಂತಹಂತವಾಗಿ ಈ ಪ್ರಯತ್ನ ಸಾಗಿಬಂದಿದೆ.

## ೧೨ನೇ ಶತಮಾನದ ಧಾರ್ಮಿಕ ಹಿನ್ನೆಲೆ

ಹನ್ನೆರಡನೆಯ ಶತಮಾನದಲ್ಲಿಯ ಶಿವಶರಣರು ಮುಖ್ಯವಾಗಿ ದೇವರಲ್ಲಿ ಅಚಲವಾದ ನಂಬಿಕೆ ಇಟ್ಟಿದ್ದರು. ಆದರೆ ಮನುಷ್ಯ ಮನುಷ್ಯರಲ್ಲಿಯ ಧಾರ್ಮಿಕ ವಿಧಿವಿಧಾನಗಳ ಅಂತರವನ್ನು, ಅಪಾರವಾಗಿ ಖಂಡಿಸಿದರು. ಹಾಗೆ ಧಾರ್ಮಿಕತೆ ಹೆಸರಿನಲ್ಲಿ ನಡೆಯುವ ಮೂಢನಂಬಿಕೆ, ಕಂದಾಚಾರ, ಜಾತೀಯತೆ, ಯಜ್ಞ-ಯಾಗಾದಿ ಬಲಿಪದ್ಧತಿ ಮುಂತಾದವುಗಳನ್ನು ಘೋರವಾಗಿ ಪ್ರಶ್ನಿಸಿ, ಅದರ ಮೂಲಕ ನೀವು ಏನನ್ನು ಸಾಧಿಸುವಿರಿ ಎಂಬುದನ್ನು ತಮ್ಮ ವಚನಗಳ ಮೂಲಕ ಹಾಗೂ ಅನುಭವ ಮಂಟಪದ ಚರ್ಚೆಯ ಮುಖಾಂತರ ಇಂತಹ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುತ್ತಿದ್ದರು. ಇದಕ್ಕೆ ಪೂರಕವಾಗಿ ಡಾ.ಜಯಶ್ರೀ ದಂಡೆಯವರ ಅಭಿಪ್ರಾಯವನ್ನು ಪೂರಕವಾಗಿ ಉಲ್ಲೇಖಿಸಬಹುದು. "ಶರಣರು ಪ್ರವಾಹದ ವಿರುದ್ಧ ಈಸಿ ಜಯ ಸಂಪಾದಿಸಿದರು. ಏಕೆಂದರೆ ಧರ್ಮತತ್ವ, ಶಾಸ್ತ್ರಗಳೆಲ್ಲ ಹೇಳುತ್ತಾ ಬಂದುದನ್ನು ಇವರು ಸ್ವೀಕರಿಸಲಿಲ್ಲ. ಭಿನ್ನವಾದ ಆಲೋಚನಾ ಕ್ರಮವನ್ನು ಬಳಸಿಕೊಂಡ ಶರಣರಿಗೆ ಐಹಿಕ ಭೋಗವು ಅಮುಷ್ಮಿಕ ಸಿದ್ಧಿಗೆ ಅಡ್ಡಿಯಾಗಲಿಲ್ಲ."[೧೩]

ಶರಣ-ಶರಣೆಯರದ್ದು ಧಾರ್ಮಿಕವಾಗಿ ಸ್ಪಷ್ಟ ನಿಲುವಾಗಿತ್ತು. ಶತಶತಮಾನಗಳಿಂದ ನಡೆದುಬಂದ ಅವೈಚಾರಿಕ ಕ್ರಮವನ್ನು ಪ್ರಶ್ನಿಸಿದ ಅವರು ವೈಚಾರಿಕವಾದ ಧಾರ್ಮಿಕ ವಾತಾವರಣ ವನ್ನು ನಿರ್ಮಿಸಿದರು. ಪೂಜೆ, ಅನುಷ್ಠಾನ, ಕಾಯಕ, ದಾಸೋಹ ಮೊದಲಾದ ವಿಚಾರಗಳನ್ನು ತಾತ್ವಿಕವಾಗಿ ಸಮರ್ಥಿಸಿಕೊಂಡರು. ಗೊಡ್ಡು ಸಂಪ್ರದಾಯಗಳಿಗೆ ಪ್ರಶ್ನೆ ಮಾಡಿದ ಅವರು ಅದಕ್ಕೆ ಜೀವನಕ್ರಮದ ಮೂಲಕ ಉತ್ತರಿಸಿದರು. ಡಾ.ಬಿ.ವ್ಹಿ.ಮಲ್ಲಾಪುರ ಅವರ ಮಾತು ಇದನ್ನು ಹೆಚ್ಚು ಸ್ಪಷ್ಟೀಕರಿಸುತ್ತದೆ. "ಸಮಾಜದ ಧಾರ್ಮಿಕ ವ್ಯವಸ್ಥೆಯಲ್ಲೂ ಬದಲಾವಣೆ ಮಾಡಿ ಕೊಳ್ಳಬೇಕಾಗುತ್ತದೆ. ಆಗ ಮಾತ್ರ ಆ ಸಮಾಜ ಹಾಗೂ ಧರ್ಮಗಳಿಗೆ ಚಲನಶೀಲತೆ ಒದಗಿ ಜಂಗಮತ್ವ ಉಂಟಾಗುತ್ತದೆ. ಸ್ಥಾವರಕ್ಕೆ ಅಲ್ಲಿ ಆಸ್ಪದವಿರುವುದಿಲ್ಲ. ಕಾಲ ಬದಲಾದರೂ, ತಮ್ಮ ಹಿರಿಯರು ಒಪ್ಪಿಕೊಂಡ ವ್ಯವಸ್ಥೆಯೆಂಬ ಒಂದೇ ಒಂದು ನೆಪ ಹೇಳುತ್ತ ಅವರು ಹೋಗುತ್ತಾರೆ. ಅದಕ್ಕೆ ಅವರ ಅಜ್ಞಾನ ಮುಗ್ಧಭಾವ ಮತ್ತು ಮೂಢನಂಬಿಕೆಗಳು ಒಂದು ದೃಷ್ಟಿಯಿಂದ ಕಾರಣವಾಗಿದ್ದರೆ, ಇನ್ನೊಂದು ದೃಷ್ಟಿಯಿಂದ ಆ ವ್ಯವಸ್ಥೆಯ ಮುಖ್ಯ ಸ್ಥಾನದಲ್ಲಿರುವ ಸೂತ್ರಧಾರರ ಸ್ವಾರ್ಥವೂ ಬಹುಮಟ್ಟಿಗೆ ಕಾರಣವಾಗಿರುತ್ತದೆಂದು ನನ್ನ ಗ್ರಹಿಕೆ. ಹೀಗಾಗಿ

ಸಮಾಜ ಹಾಗೂ ಧರ್ಮಗಳಲ್ಲಿ ಜಡತೆ ತಲೆದೋರಿ ಅವು ಸ್ಥಾವರವಾಗಿ ಬಿಡುತ್ತವೆ. ಧರ್ಮದ ಹೆಸರಿನಲ್ಲಿ ಶೋಷಕರ ದೊಡ್ಡಾಟ ಆರಂಭವಾಗುತ್ತದೆ. ಸಮಷ್ಟಿಯನ್ನು ಎತ್ತಿ ಹಿಡಿಯಬೇಕಾದ ಅದನ್ನು ಉದ್ಧರಿಸಬೇಕಾದ ಧರ್ಮ ಅರ್ಥಹೀನ ಹಾಗೂ ಸತ್ವ ಹೀನವಾಗಿಬಿಡುತ್ತದೆ."[೧೪] ಅಂದಿನ ವ್ಯವಸ್ಥೆಯನ್ನು ಕುರಿತು ಡಾ.ಬಿ.ವ್ಹಿ.ಮಲ್ಲಾಪುರ ಅವರು ಹೀಗೆ ಹೇಳುತ್ತಾ ಅವತ್ತಿನ ಕಾಲಘಟ್ಟದ ಸ್ಥಿತಿಗತಿಗಳು ಭಯಾನಕವಾಗಿದ್ದವು ಎಂಬುದನ್ನು ತಿಳಿಸಿದ್ದಾರೆ. ಅಷ್ಟೇ ಅಲ್ಲ ವೈದಿಕತೆಯ ಕುರಿತು ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ. ಪ್ರತಿಭಟನೆಯನ್ನು ವಚನಗಳ ಮೂಲಕ ತೋರಿಸಿದ್ದಾರೆ. ಇದಕ್ಕೆ ಮ.ನ.ಜವರಯ್ಯ ಅವರ ಮಾತು ಇದನ್ನು ಹೆಚ್ಚು ಸಮರ್ಥಿಸುತ್ತದೆ.

"ವೈದಿಕ ಧರ್ಮ ಸಮಾಜವ್ಯವಸ್ಥೆ ಹಾಗೂ ಅದರ ಶಾಸ್ತ್ರಾದಿಗಳನ್ನು ಸಾದ್ಯಂತದವರೆಗೂ ಟೀಕಿಸಿ ವಿಡಂಬಿಸುವ ನೆವದಲ್ಲಿ ಶರಣರು ಒಂದು ಆದರ್ಶತಮ ಸಮಾಜವ್ಯವಸ್ಥೆಯ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಿದ್ದಾರೆ ಎಂಬುದನ್ನು ಮನಗಾಣಬೇಕು. ಹುಟ್ಟು ಮತ್ತು ಕುಲಗಳ ಆಧಾರದ ಮೇಲೆ ಒಂದು ವ್ಯಕ್ತಿತ್ವದ ಸ್ಥಾನ ನಿರ್ಣಯವೆಂಬ ಕೃತಕ ವಿಭಜನೆಯನ್ನು ಧಾರ್ಮಿಕ ಸಿದ್ಧಾಂತವನ್ನಾಗಿ ಆಚರಣೆಯಲ್ಲಿ ತಂದು, ಅದನ್ನು ಕರ್ಮನಿಷ್ಠೆಯ ಹೆಸರಿನಲ್ಲಿ ವ್ಯಕ್ತಿಯ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸಮಾನತೆಯ ಹಕ್ಕು ಬಾಧ್ಯತೆಗಳನ್ನು ಹರಣ ಮಾಡುತ್ತ ಬಂದ ವೈದಿಕಧರ್ಮ ಮತ್ತು ಸಮಾಜದ ನಡಾವಳಿಯನ್ನು ಟೀಕಿಸುತ್ತಾರೆ."[೧೫]

"ವೇದ ಎಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ತರ್ಕವೆಂಬುದು ತಗರ ಹೋರಟೆ

ಆಗಮ ಅಮೃತದ ನುಡಿ ಎಂಬ ಶರಣರ ಸಾಮೂಹಿಕ ತೀರ್ಮಾನದ ಪ್ರಾತಿನಿಧಿಕ ಧ್ವನಿಯಾಗಿದೆ. ಈ ವಚನ ಪುರೋಹಿತರ ವಿರುದ್ಧ ಸಿಡಿದೆದ್ದರೂ ಇಲ್ಲಿ ಅವರ ಪ್ರಸ್ತಾಪವಿಲ್ಲ. ಅದಕ್ಕೆ ಬದಲು ಅವರು ಯಾವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಅನ್ಯಾಯ ಮಾಡುತ್ತಿರುವರೋ ಆ ಗ್ರಂಥಗಳನ್ನು ಪ್ರಸ್ತಾಪಿಸುತ್ತಾ ಅವುಗಳನ್ನು ಧ್ವಂಸಗೊಳಿಸುವ ಘೋಷಣೆಯಿಂದಾಗಿ ವಚನದ ಆಶಯಕ್ಕೆ ಒಂದು ಪರ್ಯಾಯ ಆಳ ಪ್ರಾಪ್ತವಾಗಿದೆ. ತಮ್ಮನ್ನು ಈವರೆಗೆ ಮುಟ್ಟಿಸಿಕೊಳ್ಳದ ಆ ಗ್ರಂಥಗಳನ್ನು ಮುಟ್ಟಿ ಧನ್ಯರಾಗಬೇಕೆಂಬ ಒಪ್ಪಂದ ಭಾವಕ್ಕೆ ಬದಲು ಅವುಗಳನ್ನು ಉಗ್ರವಾಗಿ ದಂಡಿಸುವುದೇ ಇಲ್ಲಿಯ ಮುಖ್ಯ ಧೋರಣೆಯಾಗಿದೆ."[೧೬] ಉದಾಹರಣೆಗೆ ಅಲ್ಲಮ ಪ್ರಭುಗಳ ವಚನವನ್ನು ಗಮನಿಸಬಹುದು.

"ವೇದಂಗಳೆಂಬವು ಬ್ರಹ್ಮನ ಭೂತಾಟ
ಶಾಸ್ತ್ರಗಳೆಂಬವು ಸರಸ್ವತಿಯ ಗೊಡ್ಡಾಟ

ಆಗಮಂಗಳೆಂಬವು ಋಷಿಯ ಮರುಳಾಟ

ಪುರಾಣಗಳೆಂಬವು ಪೂರ್ವದವರ ಗೊಡ್ಡಾಟ

ಇಂತು ಇವನು ಅರಿದವರ ನೆಲೆಗಳೆರು

ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರನಲ್ಲಿ

ಅಚ್ಚಲಿಂಗೈಕ್ಯನು"[೧೭]

ಈ ವಚನದಲ್ಲಿಯ ತಾರ್ಕಿಕತೆಯು ಬಹಳ ಮುಖ್ಯವಾಗಿದೆ. ವೇದಗಳು ಬ್ರಹ್ಮನ ಭೂತಾಟ ಅಂದರೆ ದೆವ್ವಗಳ ಆಟದಂತೆ. ಶಾಸ್ತ್ರವೆಂಬುದು ಸರಸ್ವತಿಯ ಗೊಡ್ಡಾಟ ಎಂದರೆ ಸತ್ಯಕ್ಕೆ ನಿಲುಕದ ವಿಚಾರ. ಇವುಗಳು ಪೂರ್ವಭ್ರಮೆಯಿಂದ ಕೂಡಿದ್ದು, ಇವುಗಳನ್ನು ತಿಳಿದು ಹೊರಬರದಿದ್ದರೆ ಹೇಗೆ ಎಂದು ನಿಜಸ್ಥಿತಿಯನ್ನು ಅರಿದಾತನೆ ಗುಹೇಶ್ವರ ಲಿಂಗಕ್ಕೆ ಅರ್ಪಿತನಾಗಲು ಸಾಧ್ಯವಾಗಿದೆ. ಇದಕ್ಕೆ ಪೂರಕವಾಗಿ ಪಿ.ವಿ.ನಾರಾಯಣರು ಹೇಳುವಂತೆ, "ವಚನಕಾರರ ಉದ್ದೇಶವು ವೈದಿಕಕ್ಕೆ ಪರ್ಯಾಯವಾದ ಧಾರ್ಮಿಕ ನೆಲೆಯನ್ನು ರೂಪಿಸುವುದು. ಅದಕ್ಕೆ ಹೊರತಾದ ಅಲ್ಲಿಯ ಅಂಶಗಳನ್ನು ದಿಕ್ಕರಿಸುವ ಸಾಮಾಜಿಕ ವ್ಯವಸ್ಥೆಯನ್ನು ಸಂಘಟಿಸುವ ಮನೋಭಾವವೇ ಅದರಲ್ಲಿ ಇತ್ತೆನ್ನಬಹುದು."[೧೮] ಇನ್ನೊಂದು ಪ್ರಮುಖ ಅಂಶವೆಂದರೆ ಶರಣ-ಶರಣೆಯರು ಧಾರ್ಮಿಕ ಆಚರಣೆಗಳೊಂದಿಗೆ ಯೋಗಕ್ಕೆ ಬಹಳ ಮಹತ್ವ ನೀಡಿದ್ದರು. ಅದರಲ್ಲಿ ಶಿವಯೋಗಕ್ಕೆ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲಮ, ಬಸವ, ಸಿದ್ಧರಾಮ, ಅಜಗಣ್ಣ, ನೀಲಮ್ಮ, ಲಿಂಗಮ್ಮ, ಮುಕ್ತಾಯಕ್ಕ ಹೀಗೆ ಶಿವಯೋಗದ ಆಯಾಮಗಳೊಂದಿಗೆ ನಿತ್ಯಲಿಂಗಾರ್ಚನೆ ಮಾಡುವುದನ್ನು ಕಾಣಬಹುದಾಗಿದೆ. ಅದರಲ್ಲಿ ಮುಕ್ತಾಯಕ್ಕನ ಯೋಗ ಪರಮಾತ್ಮನ ಸಮ್ಮಿಲನಕ್ಕೆ ಹತ್ತಿರವೆಂಬಂತೆ ಆಕೆಯ ವಚನದ ಮೂಲಕ ತಿಳಿಯಬಹುದಾಗಿದೆ.

"ಅಲರೊಳಡಗಿದ ಪರಿಮಳದಂತೆ

ಪತಂಗದೊಳಡಗಿದ ಅನಲನಂತೆ

ಶಶಿಯೊಳಡಗಿದ ಷೋಡಶಕಳೆಯಂತೆ

ಸಿಡಿಲೊಳಡಗಿದ ಗಾತ್ರದ ತೇಜದಂತೆ

ಇರಬೇಕಯ್ಯ ಯೋಗ ಎನ್ನ ಅಜಗಣ್ಣ ತಂದೆಯಂತೆ"[೧೯]

ಈಕೆಯ ವಚನಕ್ಕೆ ಬಸವರಾಜ ಹೂಗಾರ ಹೀಗೆ ಹೇಳುತ್ತಾರೆ. "ಅಧ್ಯಾತ್ಮ ಸಾಧನೆಯ ಬಗ್ಗೆ ಮುಕ್ತಾಯಕ್ಕ ತನ್ನ ಅನೇಕ ವಚನಗಳ ಮೂಲಕ ಮನಮುಟ್ಟುವಂತೆ ಹೃದಯ ತಟ್ಟುವಂತೆ ತಿಳಿಸಿದ್ದಾಳೆ. ಅವಳ ವಚನಗಳು ಅನುಭಾವದ ಆಗರವಾಗಿದ್ದು ಪಾರಮಾರ್ಥಿಕ ಪಥದಲ್ಲಿ ಪಯಣಿಸುವವರಿಗೆ ಭಾವನಂದದ ಬೆಳಕನ್ನು ಬೀರಲು ದಾರಿದೀಪದಂತಿವೆ."[೨೦]

ಶಿವಸಾಯುಜ್ಯ ಪದವಿಯನ್ನು ಹೊಂದಬೇಕಾದರೆ ಕೇವಲ ಶಾಸ್ತ್ರ-ಪುರಾಣಗಳಿಂದ ಸಾಧ್ಯವಿಲ್ಲ. ಏಕೆಂದರೆ ಅವುಗಳಲ್ಲಿ ನೈಜ ಚಿಂತನೆ ಇಲ್ಲ ಎಂಬುದು ಅಕ್ಕನ ಈ ವಚನದಿಂದ ತಿಳಿಯಬಹುದು.

"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ
ಇವ ಕುಟ್ಟಲೇಕೆ ಕುಸುಕಲೇಕೆ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ"[೨೧]

ಅಕ್ಕನ ವಚನದ ಈ ಉಕ್ತಿಯಂತೆ ವೈದಿಕ ಧರ್ಮದಲ್ಲಿ ಇದ್ದ ವೇದಶಾಸ್ತ್ರ, ಪುರಾಣಗಳೆಲ್ಲವು ಕುಟ್ಟಿದ ನುಚ್ಚು-ತೌಡು ಎಂದು ಹೇಳುವುದನ್ನು ನೋಡಿದರೆ ಅಂದಿನ ಪರಿಸ್ಥಿತಿಯನ್ನು ಹಾಗೂ ಧಾರ್ಮಿಕ ಮನೋಭಾವವನ್ನು ಅರಿಯಬಹುದಾಗಿದೆ. ಸ್ವಯಂಪ್ರೇರಣೆಯಿಂದ ಈ ಧರ್ಮದ ಕಟ್ಟುಪಾಡುಗಳನ್ನು ಅಕ್ಕ ಅಲ್ಲಗಳೆಯುತ್ತಾ, ಹರಿಯುವ ಮನಸ್ಸನ್ನು ಸಮಸ್ಥಿತಿಗೆ ತರಲಿಕ್ಕೆ ಚೆನ್ನಮಲ್ಲಿಕಾರ್ಜುನ ಎಂದಿದ್ದಾಳೆ. ಅಂದರೆ ಈತನ ಸಾನ್ನಿಧ್ಯ-ಸಾಮೀಪ್ಯವು ಮನಸ್ಸನ್ನು ಕೇಂದ್ರೀಕೃತ ಮಾಡುತ್ತದೆ. ಅದರಂತೆ ಅಕ್ಕಮ್ಮನ ವಚನವು,

"ವಿಪ್ರಂಗೆ ವೇದ ಮಂತ್ರವ ಬಿಟ್ಟು ವಿಜಾತಿಯಲ್ಲಿ ಬೆರಸಲಿಕ್ಕೆ
ಸುಜಾತಿಗೆ ಹೊರಗಪ್ಪರು ನೋಡಾ
..............................................
ನಾನಾ ವ್ರತನೇಮ ನಿತ್ಯದ ಭಾವವ ಬಿಟ್ಟು ಬಂದವನ
ಗುರುವಾದಡು, ಲಿಂಗವಾದಡು, ಜಂಗಮವಾದಡು ನೋಡಿದಡೆ ನುಡಿಸಿದಡೆ
ಆ ಘಟವಿದ್ದೆಡೆಯಲ್ಲಿ ನಾನಿದ್ದೆನಾದಡೆ ಎನ್ನ ವ್ರತಕ್ಕದೆ ಭಂಗ
ಅನುಸರಣೆಯಲ್ಲಿ ಬಂದವರ ಕಂಡು ಕೇಳಿ
ಅವರ ಅಂಗಳವ ಕೂಡಿಕೊಂಡವರ
...............................................
...............................................
......ವ್ರತಬಾಹ್ಯವಾದಡೆ ಎತ್ತಿಹಾಕುವೆನು"[೨೨]

ಈ ವಚನವು 'ಕೇವಲ ವೇದ, ಮಂತ್ರವನ್ನು ಅವರ ಕ್ರಮದಂತೆ ಅಧ್ಯಯನ ಮಾಡುತ್ತಾರೆ. ಜೊತೆಗೆ ಅಧ್ಯಯನ ಅವರಲ್ಲಿಯೇ ಅಡಗಿದೆ. ಬೇರೆಯವರಿಗೆ ಅವಕಾಶ ಕಡಿಮೆ' ಎಂಬ

ಅರ್ಥವನ್ನು ನೀಡುತ್ತದೆ. ವಿಪ್ರರು ಕೇವಲ ಜ್ಞಾನಕ್ಕೆ ಓದುವುದಾದರೆ, ಜನಸಾಮಾನ್ಯರಿಗೂ ಮುಟ್ಟಲಿ, ಏಕೆಂದರೆ ವೀರಶೈವ ಧರ್ಮದಲ್ಲಿ ವಿಭೂತಿ, ರುದ್ರಾಕ್ಷಿ ಶಿವಲಿಂಗ ಮುಂತಾದವುಗಳು. ಶರೀರ ಶುದ್ಧತೆಗೆ ಮುಖ್ಯ. ಅಂತಹ ತಾತ್ವಿಕ ವಿಚಾರಗಳು, ವ್ರತ ನೇಮವಾಗಿದೆ. ಹಾಗೆ ಧಾರ್ಮಿಕ ಸಂಸ್ಕಾರಕ್ಕೆ ಹೆಚ್ಚಿನ ಮಹತ್ವವನ್ನು ಇಷ್ಟಲಿಂಗದ ಮುಖಾಂತರವಾಗಿ ಶಿವನ ಸಾಕ್ಷಾತ್ಕಾರ ಬಹಳ ಮುಖ್ಯವಾಗಿದೆ. ಹಾಗಾಗಿ ಮನಸ್ಸು ಆಸೆ, ರಾಗ, ದ್ವೇಷಗಳಿಂದ ತುಂಬಿದೆ. ಸ್ವಚ್ಛವಾಗಿರಲಿಕ್ಕೆ ಈ ವ್ರತ ಮುಖ್ಯ. ಅಂತಹ ವ್ರತವನ್ನು ಗುರುಲಿಂಗ, ಜಂಗಮರು ಪರಿಪಾಲನೆ ಮಾಡಬೇಕು ಇಲ್ಲವೆಂದರೆ ಪರಮಾತ್ಮ ಮೆಚ್ಚುವನೆ ಎಂಬುದರ ಮೂಲಕ ಅಕ್ಕಮ್ಮ ಕಠೋರ ಪೂಜೆ, ನೇಮ, ವ್ರತಗಳಿಗಿಂತ ಸಹಜತೆಯ ಪೂಜೆ ಮುಖ್ಯ ಎಂದಿರಬಹುದು. ಅದನ್ನೇ ಅಲ್ಲಮಪ್ರಭು ಪೂಜೆಯ ಕುರಿತು,

"ಗಗನವೇ ಗುಂಡಿಗೆ, ಆಕಾಶವೇ ಅಘ್ವಣಿ
ಚಂದ್ರ ಸೂರ್ಯರಿಬ್ಬರೂ ಪುಷ್ಪ ನೋಡಾ
ಬ್ರಹ್ಮಧೂಪ, ವಿಷ್ಣು ದೀಪ ರುದ್ರನೋಗರ
ಸಯಧಾನ ನೋಡಾ ಗುಹೇಶ್ವರ ಲಿಂಗಕ್ಕೆ ಪೂಜೆ ನೋಡಾ"[೨೩]

ಎಂದು ಹೇಳುತ್ತಾರೆ.

ಬಹುಶಃ ಉತ್ತರ ಭಾರತದ ಗೊಡ್ಡು ಆಚಾರ-ವಿಚಾರಗಳಿಗೆಲ್ಲ ಪ್ರತಿರೋಧವಾಗಿ ೬-೭ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ನಡೆದ ಭಕ್ತಿ ಚಳವಳಿಯಂತೆ ೬೩ ಪುರಾತನರ ಧ್ಯೇಯ ಧೋರಣೆಗಳಿಂದಾಗಿ ಹೊಸ ಧಾರ್ಮಿಕ ಚಿಂತನೆ ರೂಪುಗೊಂಡ ಹಾಗೆ ಕರ್ನಾಟಕದಲ್ಲೂ ವಚನ ಚಳವಳಿ(ಶರಣ ಚಳವಳಿ) ರೂಪಿತಗೊಂಡಿದೆ. ಬಸವಣ್ಣನವರು ೬೩ ಪುರಾತನರನ್ನು ಸ್ಮರಿಸಿಕೊಂಡಿದ್ದಾರೆ. ಹಾಗೆಯೇ ಇದೊಂದು ಧಾರ್ಮಿಕ ಅಷ್ಟೇ ಅಲ್ಲ, ಸಮಾಜೋ-ಧಾರ್ಮಿಕ ಆಂದೋಲನವಾಗಿ ರೂಪುಗೊಂಡಿರುವ ಸಾಧ್ಯತೆ ಇದೆ. ಇಲ್ಲಿ ಪ್ರಮುಖವಾಗಿ ಎರಡು ಅಂಶಗಳಿವೆ.

೧. ಈಗಾಗಲೇ ಇರುವ ಧಾರ್ಮಿಕ ನಿಲುವನ್ನು ಪ್ರಶ್ನಿಸುವುದು. ೨. ಅದಕ್ಕೆ ಪೂರಕವಾಗಿ ಪರ್ಯಾಯ ಮಾರ್ಗವೊಂದನ್ನು ರೂಪಿಸುವುದು. ಅಷ್ಟೇ ಅಲ್ಲದೆ ಇದು ಭಕ್ತಿಭಾವದ ಪರಾಕಾಷ್ಠತೆ ತಲುಪಿದೆ. ಅನುಭವ ಮಂಟಪದ ಗೋಷ್ಠಿ(ವೈಚಾರಿಕವಾಗಿ) ಜಾತಿ, ಮತ, ಪಂಥ, ಅಸ್ಪೃಶ್ಯತೆ, ಸ್ತ್ರೀ-ಪುರುಷ, ಸಮಾನತೆ ಮೊದಲಾದ ಪ್ರಗತಿಪರ ಚಿಂತನೆಗಳಿಂದ(ಸಾಮಾಜಿಕವಾಗಿ) ಗುಡಿ-ಗುಂಡಾರ-ಗೋಪುರ ವೈಭವಗಳ ಗೊಡವೆಯಿಲ್ಲದೆ ಆತ್ಮ ಲಿಂಗವನ್ನು ಕರದಲ್ಲಿರಿಸಿ, ಭಾವ ಪುಷ್ಪದಲ್ಲಿ ಪೂಜೆ ಮಾಡುವ ಹೊಸ ಕ್ರಮ(ಧಾರ್ಮಿಕವಾಗಿ) ರೂಪಿಸಿದೆ. ಅಂದರೆ ತತ್ವಜ್ಞಾನ ನೆಲೆಯಾಗಿ ಎಂದು ಪರಿಭಾವಿಸಿದರೆ ಇದರ ಮಹತ್ವದ ಅರಿವಾಗುತ್ತದೆ. ಅದಕ್ಕಿರುವ ಅಡೆತಡೆಗಳು

ಅವುಗಳನ್ನು ನಿಭಾಯಿಸುವ ರೀತಿ ಕೂಡಾ ಮುಖ್ಯವಾಗುತ್ತದೆ. ಇದರ ಜೊತೆಗೆ ಕಾಯಕ ದಾಸೋಹ ಎಂಬ ಇನ್ನೆರಡು ತತ್ವಗಳು ಇಲ್ಲಿ ಕೂಡಿಕೊಂಡಿವೆ. ಕೇವಲ ಭಜನೆ ಮಾಡಿದರೆ ಸಾಕೆ? ಎಂಬ ಪ್ರಶ್ನೆಗೆ ಶಿವಶರಣರು ಕಾಯಕ ತತ್ವವನ್ನು ಹಾಗೂ ಹಂಚಿಕೊಂಡು ಉಣ್ಣುವ ದಾಸೋಹವನ್ನು ಧಾರ್ಮಿಕ ನಿಲುವಾಗಿ ಪ್ರತಿಪಾದಿಸಿದ್ದಾರೆ.

ಸುಮ್ಮನೆ ಕುಳಿತು ಮಾಡುವ ಊಟವಲ್ಲ ಅಲ್ಲಿ ಕಾಯಕವಿದೆ. ಆಕಸ್ಮಾತ್ ಒಂದು ಹೊತ್ತಿನ ಊಟವಿಲ್ಲದಿದ್ದರೆ, ದಾಸೋಹವಿದೆ. ಹಾಗಾಗಿ ತಾತ್ವಿಕ ಸಂವಿಧಾನದಲ್ಲಿ ಬಿರುಕು ಮೂಡುವ ಪ್ರಶ್ನೆಯಿಲ್ಲ. ಜೊತೆಗೆ ತೃಪ್ತಿ, ಸ್ವಾರ್ಥ, ದುರಾಸೆಗಳ ಹಂಗಿಲ್ಲ, ಅಕಸ್ಮಾತ್ ಹೆಚ್ಚಾದರೆ ಸಂಗ್ರಹವಿಲ್ಲ ಹಾಗೂ ಆರ್ಥಿಕ ಸಮಸ್ಥಿತಿಯಿದೆ. ಉಳ್ಳವರು ಇಲ್ಲದವರು ಭೇದವಿಲ್ಲ ಹಾಗೂ ಆ ದಿನದ ಕಾಯಕದಿಂದ ಬಂದ ಹಣ ಅಥವಾ ಧಾನ್ಯದಲ್ಲಿಯೇ ತೃಪ್ತಿಯನ್ನು ಹೊಂದುವುದು ಶಿವಶರಣ ರದ್ದಾಗಿದೆ. ಹಾಗಾಗಿ ಇವರಲ್ಲಿ ಚಿರಂತನ ಸುಖ ಇದೆ. ಯಾಕೆಂದರೆ ಸಮಾಜೋದ್ಧಾರ ಧಾರ್ಮಿಕ ನಿಲುವಿನ ಒಂದು ಪದರು. ಇದಕ್ಕೆ ಇನ್ನೂ ಹಲವಾರು ಸಾಧ್ಯತೆಗಳಿವೆ ಎಂಬುದನ್ನು ಧಾರ್ಮಿಕತೆಯ ನಿಲುವು ಸೂಚಿಸುತ್ತದೆ. ಧಾರ್ಮಿಕತೆಯಲ್ಲಿ ವ್ಯಕ್ತಿಯೊಬ್ಬನ ಸಮಚಿತ್ತವನ್ನು ಹಾಗೂ ಸ್ವಾಸ್ಥ್ಯತೆಯನ್ನು ಕಾಪಾಡುವುದು ಪ್ರಧಾನ ಧರ್ಮವಾಗಿದೆ. ಹೀಗೆ ಶರಣರು ವ್ಯಷ್ಠಿಯಿಂದ ಸಮಷ್ಠಿಗೆ ತಮ್ಮನ್ನು ತೆರೆದುಕೊಂಡಿದ್ದಾರೆ. ಈ ಮೇಲಿನ ಅಂಶಗಳ ಚರ್ಚೆಯಿಂದ ಒಂದು ಧರ್ಮವು ಮತ್ತು ಅದರ ತತ್ವಗಳು ಮಾನವನಿಗೆ ಸುಖ, ಶಾಂತಿ, ನೆಮ್ಮದಿಯನ್ನು ತರುವಂತದ್ದು ಇರಬೇಕು. ಅಂದಾಗ, ಮಾತ್ರ ಅಲ್ಲಿ ನಡೆಯುವ ಗೊಂದಲಗಳಿಗೆ ಅಡ್ಡಗೋಡೆ ನಿರ್ಮಾಣ ವಾಗುತ್ತದೆಯೇ ವಿನಃ ಧರ್ಮದ ತತ್ವಗಳೇ ಒಂದು, ಆಚರಿಸುವ ಬಗೆಯೇ ಒಂದು ಆದರೆ ಪರ್ಯಾಯ ಕಲ್ಪನೆ ಮನುಷ್ಯನಲ್ಲಿ ಸಹಜ. ಇಂತಹ ಕಾರ್ಯವಿಲ್ಲದ ಧರ್ಮ ಹಾಗೂ ಅದರ ತತ್ವಗಳು ನಮಗೆ ಬೇಡ ಎಂಬುದು ಶರಣರ ನಿರ್ಧಾರವಾಗಿರಬಹುದು. ಹಾಗೆ ಪರ್ಯಾಯ ಆಲೋಚನೆ ಮೂಲಕ ತಮ್ಮದೆ ಆದ ಧಾರ್ಮಿಕ ಚೌಕಟ್ಟು ಹಾಕಿರಬಹುದೆಂದು ಊಹಿಸಬಹುದು.

## ೧೨ನೇ ಶತಮಾನದ ಸಾಹಿತ್ಯಿಕ ಹಿನ್ನೆಲೆ

ಸಾಂಸ್ಕೃತಿಕವಾಗಿ ಶೂದ್ರಾತಿಶೂದ್ರಳಾಗಿದ್ದ ಹೆಣ್ಣಿಗೆ ವಚನ ಚಳವಳಿ ಒಂದು ತಿರುವನ್ನು ಒದಗಿಸಿತು. ಪ್ರತಿ ಹೆಣ್ಣಿಗೂ ಶಿಕ್ಷಣ, ಅಲೋಚನಾಕ್ರಮ, ಅಭಿವ್ಯಕ್ತಿ ಸ್ವಾತಂತ್ರ್ಯ ಈ ಕಾಲಕ್ಕೆ ಸಿಕ್ಕಿತು. ಅಡುಗೆ ಮನೆಯಿಂದ ನಡುಮನೆಗೆ, ನಡುಮನೆಯಿಂದ ಅನುಭವ ಮಂಟಪಕ್ಕೆ ಹೆಣ್ಣು ನಡೆದ ದಾರಿ ಸಾಹಿತ್ಯಿಕವಾಗಿ ಇಂದೂ ಕೂಡಾ ಚಿಂತನಾರ್ಹ ಅಂಶವೇ ತಾತ್ವಿಕವಾಗಿ ಸತಿ–ಪತಿ ಭಾವದಂತಹ ಅವರಲ್ಲಿದ್ದ ಭಿನ್ನತೆ ತಕ್ಕಮಟ್ಟಿನದ್ದು. ಅದನ್ನು ಮೀರಿ ಅವರು ಬೆಳೆದ ರೀತಿ ಅಭಿವ್ಯಕ್ತಿಸಿದ ಕ್ರಮ ಗಮನೀಯ ಅಂಶವೆನಿಸಿದೆ.

ಅಕ್ಕಮಹಾದೇವಿಯೇ ಕನ್ನಡದ ಮೊದಲ ಕವಯತ್ರಿ ಎನ್ನುವ ಮಟ್ಟಿಗಿನ ಅವಳ ಸಾಹಿತ್ಯಿಕ ಸೃಜನೆ ಎರಡು ಹಂತಗಳಲ್ಲಿ ಸಾಗಿದೆ. ೧. ಭಾವ ಪ್ರಧಾನ, ೨. ಬುದ್ಧಿಪ್ರಧಾನ ಎಲ್ಲೈ ಕೋಗಿಲೆಗಳೇ... ಇತ್ಯಾದಿ ಕಡೆಯಲ್ಲಿ ಆಕೆ ಹಂಬಲಿಸುವ ರೀತಿ ಮೇಲ್ಮಟ್ಟದಲ್ಲಿ ಭಾವ–ಪ್ರಧಾನವಾದ ಭಾವಗೀತೆಯೇ ಆಗಿದೆ. ಆದರೆ ಆಂತರಿಕವಾಗಿ ಮನಸ್ಸಿನ ತಾಕಲಾಟ, ಲೌಕಿಕ–ಅಲೌಕಿಕ ತಾತ್ವಿಕತೆಗಳ ಗೊಂದಲ ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಇನ್ನು ಎರಡನೇ ಹಂತ ಚೆನ್ನಮಲ್ಲಿಕಾರ್ಜುನ ಗೊರವನಾಗಿ ಕನಸಿನಲ್ಲಿ ಕಂಡ ಬಗೆ. ಒಂದೊಮ್ಮೆ ಆತ್ಮಜ್ಞಾನವ ಪಡೆದ ಹಂತ. ಜಗತ್ತಿನ ಗಂಡುಗಳ ವಿಷಯದಲ್ಲಿ ಆಕೆ ತೋರಿದ ತಾತ್ಸಾರ. ಆಕೆಯ ಕೌಟುಂಬಿಕ ಧೋರಣೆ. ಇವೇ ಮೊದಲಾದ ಅಂಶಗಳು ಸಾಹಿತ್ಯಿಕ ಚರ್ಚೆಗೆ ಪಂಥಾಹ್ವಾನ ನೀಡುತ್ತವೆ. ಅನುಭವ ಮಂಟಪದ ಘನ ಚರ್ಚೆಗಳು ಬುದ್ಧಿ ಪ್ರಾಧಾನ್ಯತೆಯನ್ನು ತಿಳಿಸುತ್ತವೆ. ಇದರ ಜೊತೆಗೆ ಅಕೆಯ ನಿರೂಪಣಾ ಶೈಲಿ, ಅಕ್ಕಕೇಳವ್ವ ನಾನೊಂದು ಕನಸ ಕಂಡೆ... ಎಂಬಲ್ಲಿ ವಾಸ್ತವ/ಕಲ್ಪನೆಗಳ ಸಂಘರ್ಷ, ಜ್ಞಾನೋದಯವಾದ ರೀತಿ ಗ್ರಹಿಸಬಹುದಾಗಿದೆ. ಸಮಸ್ಯೆ ಬಗೆಹರಿದುದನ್ನು ಆಕೆ ಸರಳೀಕರಣಗೊಳಿಸಿರುವ ರೀತಿ ಕೂಡ ವಿಶೇಷ ತಂತ್ರವಾಗಿ ಸ್ವೀಕರಿಸ ಬಹುದಾಗಿದೆ. ಸಾಹಿತ್ಯಿಕ ಅಭಿವ್ಯಕ್ತಿಗಾಗಿ ಬಳಸಿದ ಉಪಮೆ ಬೆಟ್ಟದ ಮೇಲೊಂದು ಮನೆಯ ಮಾಡಿ....

ಆಕೆಯ ಸೃಜನೆಯನ್ನು ಎರಡು ರೀತಿಯಲ್ಲಿ ತಿಳಿಯಬಹುದೇನೋ, ಅದೇನೆಂದರೆ ೧. ತನ್ನನ್ನು ತಾನು ಅರಿಯುವ (ರೀತಿ) ಸ್ಥಿತಿ. ೨. ತನ್ನನ್ನು ಅರಿತಾದ ಮೇಲೆ ಪರಿಸರವನ್ನು ಆಕೆ ಗ್ರಹಿಸುವ ಸ್ಥಿತಿ. ಇವಳಾದಿಯಾಗಿ ಇತರ ವಚನಕಾರ್ತಿಯರು ಕಾಯಕ, ದಾಸೋಹ, ಲಿಂಗ ನಿಷ್ಠೆ, ಭಕ್ತಿ, ಸತಿ–ಪತಿ ಭಾವ, ಕುಟುಂಬ, ಸ್ತ್ರೀ–ಪುರುಷ ನಿಸ್ವಾರ್ಥ ಇವೇ ಮೊದಲಾದ ತಾತ್ವಿಕ ಚಿಂತನೆಗಳನ್ನು ತಮ್ಮ ವಚನಗಳಲ್ಲಿ ಬಸವಪೂರ್ವಯುಗದಲ್ಲಿ ಸಾಹಿತ್ಯವು ಅರಮನೆಯ ಸಾಹಿತ್ಯ ಆಗಿತ್ತು. ಈ ಕಾಲಘಟ್ಟದಲ್ಲಿ ಇದ್ದ ಪರಿಸ್ಥಿತಿಯನ್ನು ಕುರಿತು ಸುಂದರೇಶನ್ ಅವರು ಹೀಗೆ ಅಭಿಪ್ರಾಯಪಡುತ್ತಾರೆ.

"ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಚರಿತ್ರೆ ಉಜ್ವಲ ಪರಂಪರೆಯ ಘನ ಸಂಪುಟ. ಹಳೆಗನ್ನಡ ಸಾಹಿತ್ಯ ಚಂಪೂ ಪ್ರಧಾನವಾದರೆ ನಡುಗನ್ನಡ ಕಾವ್ಯಪದ್ಧತಿ ಮಾರ್ಗದರ್ಶಿಗಳ ಸಮನ್ವಯದಿಂದ ಶೋಭಿಸಿದೆ. ಪಾಂಡಿತ್ಯ ಪ್ರಧಾನ ಸಾಹಿತ್ಯ ಚಂಪೂಯುಗದ ಲಕ್ಷಣ, ಅನುಭವ ಪ್ರಧಾನ ಸಾಹಿತ್ಯ ದೃಷ್ಟಿಯಿಂದ ವಚನ ವಾಙ್ಮಯ ಪ್ರಸಿದ್ಧಿ ಪಡೆದಿದೆ."[೨೪] ಈ ಹೇಳಿಕೆಯ ಪ್ರಕಾರ ಬಸವಪೂರ್ವ ಸಾಹಿತ್ಯದಲ್ಲಿ ಧರ್ಮದ ಮುಖ್ಯ ವಿಚಾರಗಳನ್ನು ವ್ಯಕ್ತಪಡಿಸಿ ದೈವತ್ವದ ಕಡೆಗೆ ತೆಗೆದುಕೊಂಡು ಹೋಗುವಂತಹ ಸಾಹಿತ್ಯ ಒಂದಾದರೆ, ಕಾವ್ಯದ ನಾಯಕನನ್ನು

ಆಶ್ರಯದಾತನಿಗೆ ಹೋಲಿಸಿ ಬರೆಯುವಂತಹ ಸಾಹಿತ್ಯ ರಾಜಮನ್ನಣೆಯ ಸಾಹಿತ್ಯವಿತ್ತು. ಅದರ ಬದಲಾಗಿ ಜನಸಾಮಾನ್ಯರ ಸಾಹಿತ್ಯವಾಗಿ ವಚನ ಚಳವಳಿ ನಾಂದಿ ಹಾಡಿತು.

“ಪ್ರಾಚೀನ ಚಂಪೂ ಕಾವ್ಯಗಳಲ್ಲಿಯೇ ವಚನ ಸುಳಿ ತೆಗೆದಿದ್ದರೂ ಕಾವ್ಯ ರಚನೆಗೆ ಸಂಬಂಧ ಕಲ್ಪಿಸುವ ತುಣುಕುಗಳಾಗಿದ್ದ ಅಗದ್ಯ ರೂಪವನ್ನು ಕನ್ನಡ ಸಾಹಿತ್ಯದ ಒಂದು ವಿಶಿಷ್ಠ ರೂಪವನ್ನಾಗಿ ಮಾಡಿ, ಸ್ವಾನುಭಾವದ ಪರಿಮಳವನ್ನು ಸಾಹಿತ್ಯ ರೂಪಕ್ಕೂ ಛೇಧಿಸಿದ ಹೆಗ್ಗಳಿಕೆ ಶಿವಶರಣರದಾಗಿದೆ”[೨೫] ಆದರೆ ಪ್ರಾಚೀನ ಸಾಹಿತ್ಯ ಕಠಿಣ ಭಾಷೆಯಿಂದ ಕೂಡಿದ್ದು ಆ ಸಾಹಿತ್ಯದಲ್ಲಿ ಛಂದೋಬದ್ಧವಾಗಿರುವಂತಹ ಲಕ್ಷಣಗಳನ್ನು ಕಾಣುತ್ತೇವೆ. ಆದರೆ ವಚನ ಸಾಹಿತ್ಯ ಸರಳತೆಯಿಂದ ಕೂಡಿದ್ದಾಗಿದೆ. ಈ ವಚನ ಸಾಹಿತ್ಯದ ಮೂಲ ಪ್ರೇರಣೆ ಎಲ್ಲಿಂದ ಬಂದಿತು ಎಂಬುದರ ಬಗ್ಗೆ ಡಾ.ಎಂ.ಚಿದಾನಂದ ಮೂರ್ತಿಯವರು ಈ ರೀತಿ ಅಭಿಪ್ರಾಯಪಡುತ್ತಾರೆ.

“ಡಿ.ಎಲ್.ನರಸಿಂಹಾಚಾರ್ಯರು ವಚನಗಳಿಗೆ ಮೂಲ ತಮಿಳಿನ ನಾಯನ್ಮಾರರ ತೇವಾರಂ ಎಂಬ ಹಾಡುಗಳೆಂದೂ ಅವುಗಳನ್ನು ವಚನಕಾರರು ಅನುಕರಿಸಿ “ಗದ್ಯದಲ್ಲಿಯೇ ತಾಳಮಾನಗಳನ್ನಿಟ್ಟು, ಅದನ್ನೇ ಗೀತವೆಂದು ಕರೆದಿರುವಂತೆ ತೋರುತ್ತದೆ” ಎಂದಿದ್ದಾರೆ. ಎಲ್.ಬಸವರಾಜು ಅವರು ಸಂಸ್ಕೃತದ ಛಂದೋಗಂಧಿಗಳಾದ ಗದ್ಯಪ್ರಕಾರದ ಸ್ತೋತ್ರಗಳು ವಚನಗಳಿಗೆ ಬಾಹ್ಯ ಮಾದರಿಗಳೆಂದು ಒಮ್ಮೆ ಅಭಿಪ್ರಾಯಪಟ್ಟು, ಆಮೇಲೆ ಅದನ್ನು ಸರಿಯಾಗಿಯೇ ಕೈಬಿಟ್ಟು, ಮುಂದೆ ಕನ್ನಡ ಗದ್ಯಕ್ಕೆ ವೇದ–ಉಪನಿಷತ್ತು ಬ್ರಾಹ್ಮಣಗಳ ಗದ್ಯದ ಸರಣಿಯನ್ನು ಕಸಕಟ್ಟಿ ತಮ್ಮ ವಚನ ಪ್ರಕಾರವನ್ನು ನಿಪ್ಪನ್ನುರು ಮಾಡಿಕೊಂಡರು ಎಂದು ಇನ್ನೊಂದು ವಾದವನ್ನು ಮುಂದಿಟ್ಟರು. ನನ್ನ ಒಂದು ಪ್ರಬಂಧದಲ್ಲಿ ತ್ರಿಪದಿಯೇ ವಚನಕ್ಕೆ ಮೂಲವಾಗಿದ್ದಿರಬಹುದೆಂಬ ನನ್ನ ಊಹೆಯನ್ನು ಪ್ರತಿಪಾದನೆ ಮಾಡಿದ್ದು, ಅದನ್ನು ಈಗ ಸಮರ್ಥಿಸಿಕೊಳ್ಳುವ ಸ್ಥಿತಿಯಲ್ಲಿಯೂ ಇಲ್ಲ. ಸಂಪೂರ್ಣ ನಿರಾಕರಿಸುವ ಸ್ಥಿತಿಯಲ್ಲಿಯೂ ಇಲ್ಲ. ಪ್ರಾಚೀನ ವಚನಕಾರನಾದ ಜೇಡರ ದಾಸಿಮಯ್ಯನ ಬಹುತೇಕ ವಚನಗಳು ತ್ರಿಪದಿಯ ಲಯ ಮತ್ತು ಪ್ರಾಸ ವಿನ್ಯಾಸಗಳನ್ನುಳ್ಳದ್ದು ಆದರೆ ತ್ರಿಪದಿಗಳೂ ಅಲ್ಲದ ಚತುಷ್ಪದಿಗಳೂ ಅಲ್ಲದ ರಚನೆಗಳೂ ದೊರಕುವುದು ನನ್ನ ವಾದಕ್ಕೆ ಮುಖ್ಯವಾದ ಆಧಾರ.”[೨೬] ಡಿ.ಎಲ್.ಎನ್.ವರ ಅಭಿಪ್ರಾಯದಂತೆ ತಮಿಳುನಾಡಿನ ನಾಯನ್ಮಾರರ ತೇವಾರಂ ಹಾಡುಗಳಿಂದ ವಚನ ಸಾಹಿತ್ಯಕ್ಕೆ ಪ್ರೇರಣೆ ದೊರತಿರಬಹುದು, ಏಕೆಂದರೆ ೬೩ ಪುರಾತನರ ಚರಿತ್ರೆಯನ್ನು ತಿಳಿದಾಗ ಮೂಲ ತಮಿಳಿನ ಪ್ರೇರಣೆಯಿಂದ ವಚನ ಸಾಹಿತ್ಯದ ಅರುಣೋದಯವಾಗಿದೆ. ಇಲ್ಲಿ ತ್ರಿಪದಿ ಸಾಹಿತ್ಯದ ಮೂಲಕ ವಚನಗಳ ಸ್ಪಷ್ಟತೆಯನ್ನು ಕಾಣಲು ಮುಖ್ಯವಾಗಿದೆ ಎಂದು ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.

ಡಾ.ಪಿ.ವಿ.ನಾರಾಯಣ ಅವರ ಅಭಿಪ್ರಾಯ “ಆದ್ಯರ ವಚನ(ಸಾಹಿತ್ಯ)ದ ಪಾವಿತ್ರ್ಯ ಹಾಗೂ ಪರಿಣಾಮಗಳ ಬಗ್ಗೆ ಅನೇಕ ವಚನಕಾರರು ಹೇಳುತ್ತಾರೆ. ಆದ್ಯರ ವಚನ ಪರುಶ

ಕಂಡಯ್ಯ ಎಂದು ಒಂದಡೆ ಬಸವಣ್ಣನು ಹೇಳಿದರೆ ಮತ್ತೊಂದೆಡೆ ಹಾಲತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು ತವರಾಜನನೊರೆ ತೊರೆಯಂತೆ ಎನ್ನುತ್ತಾನೆ. ಅಯ್ಯ ಆದ್ಯರ ವಚನವು ಕೇಳಿ ಎನ್ನ ಅಂಗದ ಭಂಗ ಹಿಂಗಿತ್ತು ನೋಡಾ ಎಂದು ಮೋಳಿಗೆ ಮಹಾದೇವಿಯು ಉದ್ಗರಿಸುತ್ತಾಳೆ. ಸಿದ್ಧರಾಮನ ವಚನವೊಂದು ವಚನದ ವೈದಿಕ ಪವಿತ್ರ ವಾಕ್ಯಗಳೊಡನೆ ಆರೋಹಣ ಕ್ರಮದಲ್ಲಿ ಹೋಲಿಸುತ್ತಾ ಮನದಟ್ಟು ಮಾಡಿಕೊಡಲು ತವಕಿಸುತ್ತದೆ. ಇಲ್ಲಿನ 'ಎಮ್ಮ' ಎಂಬ ಸರ್ವನಾಮವು ತನ್ನ(ಸ್ವಂತದ) ಎಂಬುದನ್ನು ಸೂಚಿಸಿದೆ. ವೀರಶೈವಕ್ಕೆ ಸೇರಿದ ಎಂಬ ಅರ್ಥದ ಅಭಿವ್ಯಾಪಕ ಸರ್ವನಾಮವಾಗಿ ಬಳಕೆಗೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿ ಕೊಳ್ಳಬೇಕು. ವೈದಿಕ ಪರಂಪರೆಯ ಹೆಚ್ಚು–ಹೆಚ್ಚು ಪವಿತ್ರವೆನಿಸುವ ಗ್ರಂಥ–ಕ್ರಿಯೆಗಳಿಗೆ ಕ್ರಮವಾಗಿ ವಚನಗಳ ಸಾಹಿತ್ಯವನ್ನು ಹೋಲಿಸಲಾಗಿದೆ."[೨೭]

ಈ ಹೇಳಿಕೆಯ ಪ್ರಕಾರ ಬಸವಣ್ಣ, ಮೋಳಿಗೆ ಮಹಾದೇವಿ, ಸಿದ್ಧರಾಮ ಇವರುಗಳು ವಚನದಿಂದ ವೀರಶೈವ ಧರ್ಮಕ್ಕೆ ತಮ್ಮದೇಯಾದ ಸಾಹಿತ್ಯಿಕ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂದಿನ ಸಾಹಿತ್ಯ ಜನಮುಖಿಯಾಗಲಿಕ್ಕೆ ಶರಣ–ಶರಣೆಯರು ಕಾರಣ. ಕೆಳವರ್ಗದ ಎಲ್ಲ ಶರಣ–ಶರಣೆಯರನ್ನು ಸಾಕ್ಷರರಾಗಿದ್ದರು ಎಂಬುದನ್ನು ಅವರ ವಚನಗಳಿಂದ ತಿಳಿಯಬಹುದು. ಸಾಂಪ್ರದಾಯಿಕ ವಿದ್ಯೆಗಿಂತ ಸಮಕಾಲೀನ ವಿದ್ಯೆಯೇ ನಮಗೆ ಸಾಕು ಎಂಬ ಧೋರಣೆ ಕೂಡಾ ಇತ್ತು. ಇದಕ್ಕೆ ಸಿದ್ಧರಾಮನ ವಚನ ಸಾಕ್ಷಿಯಾಗಿದೆ.

"ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮ ಬಾರದಯ್ಯ
..............................................
..............................................
ಗಾಯಿತ್ರಿ ಲಕ್ಷ ಜಪ ಸಮ ಬಾರಗ್ಯೂ
ಕಪಿಲಸಿದ್ದ ಮಲ್ಲಿಕಾರ್ಜುನಾ"[೨೮]

ವಚನಕಾರರು ಮೂಲತಃ ಕವಿಗಳಲ್ಲ, ತಮ್ಮ ಕವಿತ್ವವನ್ನು ಮೆರೆಯಬೇಕು, ಕನ್ನಡ ಸಾಹಿತ್ಯದ ದಿಕ್ಕನ್ನು ಬದಲಿಸಬೇಕು ಎಂಬ ಉದ್ದೇಶದಿಂದ ಬರವಣಿಗೆಗೆ ತೊಡಗಿದವರಲ್ಲ, ಅವರು ಅನುಭಾವಿಗಳು, ಸಮಾಜ ಸುಧಾರಕರು. ತಮ್ಮ ಅನುಭವವನ್ನು ಇತರರ ಜೊತೆ ಹಂಚಿಕೊಳ್ಳಬೇಕೆಂಬ ತುಡಿತ ಅವರಲ್ಲಿ ತುಂಬಿತ್ತು.

"ಬೆಟ್ಟಕ್ಕೆ ಸಾರವಿಲ್ಲೆಂಬರು;
ತರುಗಳು ಹುಟ್ಟುವಪರಿ ಇನ್ನೆಂತಯ್ಯಾ?

ಇದ್ದಲಿಗೆ ರಸವಿಲ್ಲೆಂಬರು;
ಕಬ್ಬುನ ಕರಗುವಪರಿ ಇನ್ನೆಂತಯ್ಯಾ?
ಎನಗೆ ಕಾಯವಿಲ್ಲೆಂಬರು;
ಚೆನ್ನಮಲ್ಲಿಕಾರ್ಜುನನೊಲಿಸುವಪರಿ ಇನ್ನೆಂತಯ್ಯಾ?"[೨೯]

ಅಕ್ಕನ ವಚನ ವೈಜ್ಞಾನಿಕ ಅಂಶವನ್ನು ತಂದುಕೊಡುತ್ತದೆ. ಇಲ್ಲಿ ಉಪಮೆಗಳನ್ನು ಕೊಡುತ್ತಾ ಬೆಟ್ಟ-ಮರ ಹಾಗೆ ಕಾಯ ಈ ಮೂರು ಅಂಶಗಳನ್ನು ವ್ಯಕ್ತಪಡಿಸುತ್ತಾ, ಬೆಟ್ಟದಲ್ಲಿ ಮರಗಳು ಹುಟ್ಟುವ ಬಗೆ ಹಾಗೆಯೇ ಇದ್ದಲು ಕಬ್ಬಿಣ ಕರಗಿಸಲಿಕ್ಕೆ, ಹಾಗೆಯೇ ಈ ಕಾಯ ಶುದ್ಧವಾಗಲಿಕ್ಕೆ ಭಗವಂತನ ಕೃಪೆ ಮುಖ್ಯವೆಂದು ತಿಳಿಯಬಹುದು. ಇಂತಹ ವಚನ ಸಾಹಿತ್ಯ. ಪ್ರಾಸ, ಉಪಮೆಗಳ ಹಾಗೂ ದೃಷ್ಟಾಂತಗಳ ಮೂಲಕ ಅನೇಕ ವಿಚಾರಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟಿದೆ. ಆದ್ಯ ವಚನಕಾರರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ ಇವರಿಂದ ವಚನ ಸಾಹಿತ್ಯ ಹೆಮ್ಮರವಾಗಿ ಬೆಳೆದು ಬಂದಿತು ಎನ್ನಬಹುದು.

ಡಾ.ಶಾಂತ ಇಮ್ರಾಪುರ ಅವರು ವಚನ ಸಾಹಿತ್ಯಕ್ಕೆ ಶರಣರ ಕೊಡುಗೆಯಷ್ಟೇ ಶರಣೆಯರು ಕೂಡ ಕೊಟ್ಟಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ.

"ವಚನವನ್ನು ತಮ್ಮ ಅನುಭಾವಿಕ ಧಾರ್ಮಿಕ, ಸಾಮಾಜಿಕ, ಭಾವಾಭಿವ್ಯಕ್ತಿಗೆ ಸಮರ್ಥ ಸಂವಹನವನ್ನಾಗಿಸಿಕೊಳ್ಳುವ ವಚನಕಾರ್ತಿಯರ ವಿಭಿನ್ನ ಕಾಳಜಿಗಳೇ ಅವರವರ ವಚನಗಳ ರೂಪ-ರಚನೆ-ಭಾಷೆಯ ಸತ್ವವನ್ನು ಬಹುಮಟ್ಟಿಗೆ ನಿಯಂತ್ರಿಸಿವೆ. ಜನಬಳಕೆಯ ಭಾಷೆ, ನುಡಿಗಟ್ಟುಗಳನ್ನು ಹೇರಳವಾಗಿ ಬಳಸಿರುವ ಅಕ್ಕಮ್ಮ, ರಾಯಮ್ಮ, ರೇಮವ್ವ, ಸತ್ಯಕ್ಕ, ಲಿಂಗಮ್ಮನ ವಚನಗಳಲ್ಲಿ ಅಭಿವ್ಯಕ್ತಿಯ ಮೊನಚು ಹರಿತವಾಗಿದೆ. ನಿರೂಪಣಾತ್ಮಕ ಶೈಲಿ ಕಂಡುಬರುತ್ತದೆ. ವಚನಗಳಲ್ಲಿ ವಿವರಣಾತ್ಮಕ ಶೈಲಿ, ಹರಿತ ಭಾಷೆ, ನೇರ ನಿರೂಪಣೆಯ ಗುಣ ದಟ್ಟವಾಗಿದೆ. ಅಕ್ಕಮಹಾದೇವಿ ನೀಲಾಂಬಿಕೆಯರ ಅಂತರ್ಮುಖ ಭಾವುಕತೆ ಸಮರ್ಪಣ ಭಕ್ತಿಯ ಉತ್ಕಟತೆ."[೩೦] ಮೊದಲಾದ ಅಂಶಗಳನ್ನು ಗಮನಿಸಿದಾಗ ವಚನಕಾರ್ತಿಯರಲ್ಲಿ ಅಡಗಿದ್ದ ಗುಣಮಟ್ಟದ ಸಾಹಿತ್ಯದ ಹೊನಲನ್ನು ಕಾಣಬಹುದು ಮುಂದುವರೆದು ಇವರ ಸಾಹಿತ್ಯದಲ್ಲಿಯ ಅಂಶವನ್ನು ಹೀಗೆ ಹೇಳುತ್ತಾರೆ. "ಶಿವ ಶರಣೆಯರು ಸತ್ಯ-ಶುದ್ಧ ಕಾಯಕ ನಿಷ್ಠೆ, ಪ್ರಾಮಾಣಿಕತೆ, ಸರಳತೆ ಗುಣವನ್ನು ಹೊಂದಿದ್ದರು. ವಚನಕಾರ್ತಿಯರು ನೀಡುವ ದೃಷ್ಟಾಂತ-ಸಾದೃಶ್ಯ-ರೂಪಕ-ಪ್ರತಿಮೆ ಇತ್ಯಾದಿ ಅರ್ಥಾಲಂಕಾರಗಳು ಪ್ರಾಸ-ಅನುಪ್ರಾಸ ಮುಂತಾದ ಶಬ್ದಾಲಂಕಾರಗಳು ವಚನಕಾರ್ತಿಯರ ಕಾವ್ಯಪ್ರತಿಭೆ ಮತ್ತು ಸ್ತ್ರೀ-ವಿಶಿಷ್ಟ ಸಂವೇದನೆಯ ಸ್ವರೂಪವನ್ನು ಬಿಂಬಿಸುತ್ತದೆ."[೩೧]

ಶರಣೆಯರಲ್ಲಿ ಪಕ್ವವಾದ ವಿಚಾರಗಳು ಹಾಗೂ ಕೆಲವೊಂದು ವ್ಯಾಕರಣ ಬದ್ದವಾದ ಸಾಹಿತ್ಯವನ್ನು ಕಾಣಬಹುದು. ಕೇವಲ ಭಾವನಾತ್ಮಕ ವಚನಗಳ ರಚನೆಯೊಂದಿಗೆ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ವಿಷಯಗಳು ಹಾಗೂ ಅಂಧ ಶ್ರದ್ಧೆಗಳನ್ನು ವಿರೋಧಿಸುವಂತಹ ಪ್ರಯತ್ನಗಳನ್ನು ಕಾಣಬಹುದು. ಉದಾಹರಣೆಗೆ ಆಯ್ದಕ್ಕಿ ಲಕ್ಕಮ್ಮನ ವಚನ.

"ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿ ಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"[೩೨]

ಈ ವಚನದಲ್ಲಿ ಆಶಯವನ್ನು ಹೀಗೆ ಹೇಳಬಹುದು. ಆಸೆ ಅರಸನಿಗೆ, ಶಿವಭಕ್ತರಿಗೆ ಅಲ್ಲ, ರೋಷ ಯಮನಿಗೆ, ಅಜಾತರಿಗೆ ಅಲ್ಲ, ಹೀಗಿದ್ದಾಗಲೂ ಈ ಅಕ್ಕಿಗೆ ಆಸೆ ಪಡುವುದನ್ನು ಭಗವಂತನು ಮೆಚ್ಚುವನೆ. ಗಂಡನಿಗೆ ಪ್ರಶ್ನಿಸುವುದರ ಮೂಲಕ ನೈತಿಕತೆಯನ್ನು ಎತ್ತಿ ತೋರಿಸಿದ್ದಾಳೆ. ಏಕೆಂದರೆ ಮಣ್ಣು, ಹಣ ಈ ದೇಹ ಯಾವುದೂ ಶಾಶ್ವತವಲ್ಲದ್ದು. ಆದ್ದರಿಂದ ಕಾಯಕ, ದಾಸೋಹ, ಧರ್ಮನಿಷ್ಠೆ ಬಹಳ ಮುಖ್ಯ. ಆಡಂಬರದ ಜೀವನ ದುಃಖಕ್ಕೆ ಕಾರಣ ಅದಕ್ಕಾಗಿ ಈ ವಚನದ ಮೂಲಕ ಸಮಾಜದಲ್ಲಿಯ ದುರಾಸೆ, ರೋಷ ಕಂಡು ಹೇಳಿರಬಹುದು. ಹಾಗೆ ಜ್ಞಾನಕ್ಕೆ ಬಹಳಷ್ಟು ಮಹತ್ವವನ್ನು ಕೊಟ್ಟಿರುವುದನ್ನು ವಚನ ಸಾಹಿತ್ಯದಲ್ಲಿ ಕಾಣಬಹುದು.

"ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯಾ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ"[೩೩]

ಈ ವಚನದಲ್ಲಿ ಅರಿವು ಅನ್ನುವಂತದ್ದು ಬಹಳ ಮುಖ್ಯ ಕೇವಲ ಬೆತ್ತಲೆ ಇದ್ದವರು ತಲೆ, ಬೋಳಾದವರು, ಜಡೆಗಟ್ಟಿದವರು ಎಂಬ ಮಾತುಗಳ ಮೂಲಕ ಅವರನ್ನು ಅಕ್ಕಮ್ಮಳು, ಕತ್ತೆ, ಮುಂಡೆ, ಹೊಲಯರ ಸಂತಾನ ಎನ್ನುವುದರೊಂದಿಗೆ ಯಾವ ಪ್ರಕಾರವಾದರೇನು, ಅರಿವು-ಆಚಾರ, ಪ್ರಾಣವಾಗಬೇಕು ಎಂದು ಹೇಳುತ್ತಾ ಅರಿವು ಯಾರ ಸ್ವತ್ತು ಅಲ್ಲ ಜೊತೆಗೆ

ಆಧ್ಯಾತ್ಮಿಕ ಮನೋಭಾವವನ್ನು ತುಂಬಿ ಸದಾ ಶರಣಸಂಸ್ಕೃತಿಯನ್ನು ತುಂಬಿಕೊಳ್ಳುವುದೇ ಅರಿವಾಗಿದೆ ಎನ್ನುತ್ತಾಳೆ.

ವಚನ ಸಾಹಿತ್ಯದಲ್ಲಿ ಕೆಲವೊಂದು ವಚನಗಳು ಆತ್ಮಗೀತೆಯಂತೆ ಭಾಸವಾಗುತ್ತವೆ. ಉದಾಹರಣೆಗೆ ನೀಲಮ್ಮ ಅಕ್ಕಮಹಾದೇವಿಯರ ವಚನಗಳಾಗಿರಬಹುದು. ಹಾಗೆ ಸಾಮಾಜಿಕ ಸಂದೇಶವನ್ನು ನೀಡುವಂತೆ ವಚನಗಳನ್ನು ಉದಾಹರಣೆಗೆ:

"ಶೀಲವಂತನಾದಡೆ ಜಾತಿಯ ಬೀಡಬೇಕು,
ಶಿವಜ್ಞಾನಿಯಾದಡೆ ಸಮಯವ ಬಿಡಬೇಕು,
ಹಿಂಗಲ್ಲದೆ ಜಗದಲ್ಲಿ ನಡೆದ ಭ್ರಾಂತರ ಸುದ್ದಿಯೇಕೆ
ನಿಭ್ರಾಂತನಾದ ಶರಣಂಗೆ ಅಮುಗೇಶ್ವರಾ?"[೩೪]

ಈ ವಚನದ ಸಾರವನ್ನು ಗಮನಿಸಿದಾಗ ಸಮಾಜಕ್ಕೆ ಬಹುಮುಖ್ಯ ಸಂದೇಶವನ್ನು ಸಾರಲಾಗಿದೆ ಎನಿಸುತ್ತದೆ. ಹೀಗೆ ಅನೇಕ ವಚನಗಳಲ್ಲಿ ಸಮಾಜಕ್ಕೆ ಸಂದೇಶ ರವಾನಿಸುವ ಸಾಹಿತ್ಯವನ್ನು ಕಾಣಬಹುದು. ಹಾಗೆ ವಚನ ಸಾಹಿತ್ಯ ತನ್ನದೆಯಾದ ವೈಶಿಷ್ಟತೆಯನ್ನು ಹೊಂದಿ ಸದಾ ಆಧ್ಯಾತ್ಮಿಕ ವಿಚಾರಗಳನ್ನು ಬಿತ್ತುವುದರೊಂದಿಗೆ ಆತ್ಮವಿಶ್ವಾಸ ತುಂಬುವಂತಾಗಿದೆ. ವಚನ ಸಾಹಿತ್ಯದಲ್ಲಿನ ಸರಳತೆ ಎಲ್ಲರಿಗೂ ತಿಳಿದುಕೊಳ್ಳಲು ಅನುಕೂಲವಾಗಿದೆ. ಈ ಸಾಹಿತ್ಯದ ಮೂಲಕ ೧೨ನೇ ಶತಮಾನದಲ್ಲಿ ಆದ ಬದಲಾವಣೆ ಮುಂದಿನವರಿಗೆ ಪ್ರೇರಣೆಯಾಗಿದೆ ಎನ್ನಬಹುದು.

## ೧೨ನೇ ಶತಮಾನದ ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆ

೧೨ನೇ ಶತಮಾನದ ಕಾಲದಲ್ಲಿ ಕಲ್ಯಾಣ ಚಾಲುಕ್ಯರು ಆಳುತ್ತಿದ್ದ ಸಮಯ. "ಪ್ರಾಯಶಃ ಉತ್ತರದಿಂದ ಬಂದ ಕಲಚೂರಿ ದೊರೆಗಳ ಪ್ರಾಚೀನ ಚರಿತ್ರೆಯ ವಿವರಗಳು ದೊರೆಯುವುದಿಲ್ಲ. ಕ್ರಿ.ಶ.೧೦೫೭ರ ಚಡಚಣದ ಒಂದು ಶಾಸನವು ಆಗ ಮಂಗಳವಾಡದ ಮಹಾಮಂಡಳೇಶ್ವರನಾದ ಬಿಜ್ಜಳ ಅರಸನನ್ನು ಕಲಚೂರ್ಯ ಕಮಲ ಮಾರ್ತಾಂಡ ಎಂದು ಬಣ್ಣಿಸುತ್ತದೆ. ಹೀಗಾಗಿ ಬಿಜ್ಜಳನು ಕಲ್ಯಾಣದ ಕಲಚೂರಿ ವಂಶದವನೆಂಬುದು ವಿದಿತವಾಗುತ್ತದೆ. ಆರನೆಯ ವಿಕ್ರಮಾದಿತ್ಯನ ಮಾವ ಜೋಗವನು ಕಲಚೂರಿ ವಂಶದವನು. ಅವನ ಮಗ ಪೆರ್ಮಾಡಿಯು. ಕ್ರಿ.ಶ.೧೧೨೮ರಲ್ಲಿ ಮಂಗಳವಾಡವನ್ನು ರಾಜಧಾನಿಯಾಗಿ ಮಾಡಿಕೊಂಡು ತರ್ದವಾಡಿ ೧೦೦೦. ಪ್ರಾಂತ್ಯವನ್ನು ಆಳುತ್ತಿದ್ದ ಅವನ ಮಗನೆ ಬಸವಣ್ಣನ ಸಮಕಾಲೀನನಾದ ಬಿಜ್ಜಳ. ಅವನನ್ನು ಕ್ರಿ.ಶ.೧೧೪೨ರ ವಿಜಾಪುರ ಜಿಲ್ಲೆಯ ಶಾಸನವೊಂದು(ಕ್ಷೋಣಿಪಾಲ)ಎಂದು ವಿಶ್ಲೇಷಿಸುತ್ತದೆ. ಮೂರನೆಯ ತೈಲಪನನ್ನು ಕಿತ್ತು ಚಕ್ರವರ್ತಿ ಪದವಿಯನ್ನು ಪಡೆದ ಬಿಜ್ಜಳನು ಕಲ್ಯಾಣದಿಂದಲೇ ರಾಜ್ಯಭಾರ

ಮಾಡಿದ. ಮಂಗಳವಾಡದಲ್ಲಿ ಸಾಮಂತನಾಗಿ ಆಳುತ್ತಿದ್ದ ಬಿಜ್ಜಳನ ಬಳಿ ಉದ್ಯೋಗದಲ್ಲಿದ್ದ ಬಸವಣ್ಣನು ಅವನೊಡನೆ ತಾನೂ ಕಲ್ಯಾಣಕ್ಕೆ ವಾಸ್ತವ್ಯವನ್ನು ಬದಲಾಯಿಸಿದಂತೆ ತೋರುತ್ತದೆ."[೩೫]

ಇವರ ಅಭಿಪ್ರಾಯದಂತೆ ಜೈನ ರಾಜನಾದ ಬಿಜ್ಜಳನು ರಾಜ್ಯಭಾರ ನಡೆಸುತ್ತಿದ್ದ ಅಂದಿನ ಪರಿಸ್ಥಿತಿಯನ್ನು ಹಾಗೂ ಜೈನಧರ್ಮದಲ್ಲಿ ಕಠೋರ ವ್ರತ ನೇಮವನ್ನು ಕುರಿತು ಎಂ.ಚಿದಾನಂದ ಮೂರ್ತಿಯವರ ಅಭಿಪ್ರಾಯ: "ಬಸವಣ್ಣನ ಕಾಲದಲ್ಲಿ ಪ್ರಬಲವಾಗಿದ್ದ ಜೈನಧರ್ಮವು ಬಹುತೇಕ ವ್ಯಕ್ತಿಯ ಬಿಡುಗಡೆಯನ್ನು ಒತ್ತಿ ಹೇಳುವಂತಹುದಾಗಿದ್ದು, ಈ ಲೋಕದ ಜೀವನದ ಬಗ್ಗೆ ತಿರಸ್ಕಾರವನ್ನು ಬೆಳೆಸಿಕೊಳ್ಳಲು ಬೋಧಿಸುವಂತಹುದಾಗಿತ್ತು. ಇಹದ ಬಗ್ಗೆ ತೀವ್ರ ವೈರಾಗ್ಯ, ಪರದ ಬಗ್ಗೆ ಅಷ್ಟೇ ತೀವ್ರವಾದ ತುಡಿತಗಳು ಜೈನಧರ್ಮದ ಪ್ರಮುಖ ಲಕ್ಷಣಗಳು. ಇಲ್ಲಿ ಭಗವಂತನ ಕಲ್ಪನೆಗೆ ಸ್ಥಾನವಿಲ್ಲ. ವ್ಯಕ್ತಿ ಮಾಡುವ ಭಕ್ತಿ ಪರವಾದ ಸ್ತೋತ್ರವೇನಿದ್ದರೂ ಅವನ ಮನಸ್ಸಿನ ಸಂಸ್ಕಾರಕ್ಕೇ ಹೊರತು, ಅವನ ಭಕ್ತಿಯ ಕರೆಯನ್ನು ಕೇಳಿ ಬಂದು ಉದ್ಧರಿಸುವ ಯಾವ ಶಕ್ತಿಯನ್ನೂ ಆ ಧರ್ಮ ಒಪ್ಪಿಕೊಳ್ಳುವುದಿಲ್ಲ."[೩೬] ಈ ಅಭಿಪ್ರಾಯ ಜೈನಧರ್ಮದಲ್ಲಿಯ ಕಠಿಣತೆಯನ್ನು ತಿಳಿಸುತ್ತದೆ. ಹೀಗಿದ್ದ ಸಂದರ್ಭದಲ್ಲಿ ಒಂದು ಕಡೆ ಹಿಂದೂ ಧರ್ಮದ ಶೈವ ಮತ್ತು ವೈಷ್ಣವದ ಪುರೋಹಿತಶಾಹಿಗಳ ದಬ್ಬಾಳಿಕೆ ಜೊತೆಗೆ ಅಲ್ಲಿಯ ಆಡಳಿತ ಈ ಎಲ್ಲಾ ಅಂಶಗಳು ಶಿವಶರಣ ಶರಣೆಯರ ಕ್ರಾಂತಿಗೆ ಕಾರಣವಾಗಿರಬಹುದು.

ಡಾ.ಪಿ.ವಿ.ನಾರಾಯಣರ ಅಭಿಪ್ರಾಯದಂತೆ: "ವಿಶೇಷವಾಗಿ ಆ ಕಾಲದಲ್ಲಿ ದಲಿತರಿಗೆ ಸ್ತ್ರೀಯರಿಗೆ ಆತ್ಮವಿಶ್ವಾಸವುಂಟಾಗಿ ಬಾಯಿ ಬಂದದ್ದು, ಇಡೀ ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಅಚ್ಚಳಿಯದ ಸಂಗತಿಯಾಗಿದೆ. ಪತಿಯೇ ಪರದೈವ ಪತಿ ಸೇವೆಗಿಂತ ಪೂಜೆ ಮತ್ತೊಂದಿಲ್ಲ, ಎಂಬುವಂತಹ ನಂಬಿಕೆ ಮುಂದಿನ ಕಾಲದಲ್ಲೂ ನೆಲೆಗೊಂಡಿದ್ದರ ಜೊತೆಗೆ ಹೋಲಿಸಿದರೆ, ವಚನಗಳ ಕಾಲದಲ್ಲಿ ಸ್ತ್ರೀ–ಸ್ವಾತಂತ್ರ್ಯವು ಭಾರಿ ನೆಗೆತವನ್ನೇ ಪಡೆಯಿತು."[೩೭]

ರಾಜ್ಯದ ಅಥವಾ ಪ್ರಜೆಗಳ ಕಷ್ಟಕ್ಕು ಸುಖಕ್ಕೂ ಬಾಗಿಯಾಗಬೇಕಾದದ್ದು, ನಿಜವಾದ ರಾಜನ ಕರ್ತವ್ಯ ಹೀಗಿದ್ದಾಗ, ಆಡಳಿತದಲ್ಲಿಯ ದೋಷಾರೋಪಗಳು ಸಹಿತ ಈ ಕ್ರಾಂತಿಗೆ ಕಾರಣವಾಗಿದೆ. ಇದಕ್ಕೆ ಪೂರಕವಾಗಿ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯನವರ ಅಭಿಪ್ರಾಯ ಹೀಗಿದೆ: "ಕರ್ನಾಟಕದ ೧೨ನೇ ಶತಮಾನದ ಬದುಕು ಅತ್ಯಂತ ಸಂಕೀರ್ಣವಾದುದು, ರಾಜಕೀಯದ ಅಸ್ಥಿರತೆ, ಧಾರ್ಮಿಕ ಅಂಧಾನುಕರಣೆಗಳು ಹಾಗೂ ಅಂಧಾಚರಣೆಗಳು ಜನಜೀವನದಲ್ಲಿ ಗೊಂದಲವೆಬ್ಬಿಸಿದ್ದ, ಅಸಮಾನತೆ ಹಾಗೂ ಅಜ್ಞಾನಗಳಿಂದಾಗಿ, ಆ ಕಾಲದ ಬದುಕಿನ ಅಗತ್ಯಗಳು ಎಷ್ಟು ತೀವ್ರ ಸ್ವರೂಪವಾಗಿದ್ದವೆಂದರೆ, ನೂತನ ಸಮಾಜ ನಿರ್ಮಾಣದ ಸಂಕಲ್ಪದ, ಸಮಾನ ಮನಸ್ಕರ ಒಂದು ತಂಡವೇ ಮೇಲೆದ್ದು ಬಂದಂತೆ ಕಾಣಿಸಿತು."[೩೮] ಇವರ ಅಭಿಪ್ರಾಯದಂತೆ

ಅಂದಿನ ಕಾಲದಲ್ಲಿ ಆಗಿರುವಂತ ಕ್ರಾಂತಿಗೆ ಮೂಲ ಕಾರಣವು ಜಾತಿ, ಭೇದ ಹಾಗೂ ರಾಜಕೀಯ ಸ್ವಾಸ್ಥತೆ ಇಲ್ಲದ್ದು ಮತ್ತು ಶ್ರೀಮಂತರ ಆ ದಿನದ ಬದುಕುವ ಪದ್ಧತಿ, ಇದರ ಮಧ್ಯೆ ಸಾಮಾನ್ಯರ ಜೀವನ ಹೇಗಿರಬಹುದು? ಈ ಕಾರಣದಿಂದ ವಚನ ಚಳವಳಿ ಅನಿವಾರ್ಯವಾಯಿತು.

ಪ್ರಗತಿಪರ ಚಿಂತನೆಗಳು ಯಾವಾಗ ಮೂಡಿದವೋ, ವ್ಯವಸ್ಥೆಯ ತಳಹದಿಯಲ್ಲಿ ಚರ್ಚೆ ಪ್ರಾರಂಭವಾಗಿ, ಬೇಕು ಬೇಡ, ಸರಿ ತಪ್ಪು ಹೊಸ-ಹಳೆಯ ಇಂತಹ ಮೂಕ ವೇದನೆಗೆ ಚಾಲನೆ ಸಿಕ್ಕಿತು. ಇದರಿಂದ ಶರಣರು ಹೊಸದಾದ ರೀತಿಯಲ್ಲಿ ಆಲೋಚಿಸಿ ಅನುಭವ ಮಂಟಪದ ಮೂಲಕ ಪರಿಹಾರ ಮಾಡಿಕೊಳ್ಳಲು ಅನುವಾಯಿತು. ಆ ಮೂಲಕ ಶೋಷಿತರಿಗೆ ಧೈರ್ಯ ತುಂಬಿ ವೈಚಾರಿಕ ಸಂಘರ್ಷಕ್ಕೆ ನಾಂದಿ ಹಾಡಿದರು. ಗುಲಾಮಗಿರಿಯನ್ನು ಕಲಿಸುವ ಜನಕ್ಕೆ ತಕ್ಕ ಉತ್ತರ ನೀಡಿದರೆನ್ನಬಹುದು. ಭಕ್ತಿಯ ಹೆಸರಿನಲ್ಲಿ ಅಥವಾ ದೇವರ ಹೆಸರಿನಲ್ಲಿ ಭಯವನ್ನು ಬಿತ್ತುವ ಯಜಮಾನ ಸಂಸ್ಕೃತಿಯ ಹಿನ್ನೆಲೆಯನ್ನು ಅರಿತು, ವೈಚಾರಿಕತೆಯ ನೆಲೆಯಲ್ಲಿ ಪ್ರಶ್ನಿಸಿದರು. ರಾಜನಿರಲಿ, ಮಂತ್ರಿಯಿರಲಿ, ವೈದಿಕರಿರಲಿ ಇಂಥವರ ವಿರುದ್ಧ ಕಿಡಿಕಾರಿ, ತಮ್ಮೆಲ್ಲಾ ಶಕ್ತಿಗಳನ್ನು ಗಟ್ಟಿಗೊಳಿಸಿ ಕ್ರಾಂತಿಯನ್ನು ಮಾಡಿದರು.

"ಏನು ಬಂದಿರಿ ಹದುಳವಿದ್ದಿರೆ? ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದಡೆ ನೆಲ ಕುಳಿ ಹೋಹುದೇ?
ಒಡನೆ ನುಡಿದಡೆ ಸಿರ-ಹೊಟ್ಟೆ ಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗು ಕೊಯ್ವುದೆ ಮಾಂಬನೆ ಕೂಡಲ ಸಂಗಮದೇವಯ್ಯ?"[೩೯]

ಈ ಮೇಲಿನ ವಚನವನ್ನು ಗಮನಿಸಿದಾಗ ಶರಣರಲ್ಲಿದ್ದಂತಹ ಸಾಂಸ್ಕೃತಿಕ ಚಿಂತನೆ ಏನು ಎಂಬುದು ತಿಳಿಯುತ್ತದೆ. ಏಕೆಂದರೆ ಬಂದವರನ್ನು ಏಕೆ ಬಂದಿರಿ ಎಂದರೆ ಸಿರಿವಂತಿಕೆ ಹೋಗುತ್ತದೆಯೆ? ಕುಳಿತುಕೊಳ್ಳಿ ಎಂದರೆ ನೆಲ ಇಲ್ಲವಾಗುತ್ತದೆಯೇ ಎಂದು ಪ್ರಶ್ನಿಸುವುದರ ಮೂಲಕ ಮನುಷ್ಯನಲ್ಲಿ ಸಂಸ್ಕೃತಿಯ ವಾತಾವರಣವನ್ನು ಬಿತ್ತಿದರು.

ಸಂಸ್ಕಾರದ ಇನ್ನೊಂದು ಪ್ರಮುಖ ವಿಷಯ ಆಸೆ ಇಲ್ಲದೇ ಸಂತೃಪ್ತಿಯಿಂದ ಬದುಕುವುದು. ಅಸೆಯೇ ಎಲ್ಲ ದೋಷಗಳಿಗೆ ಕಾರಣ ಎಂಬುದನ್ನು ಶರಣೆಯರೂ ಗ್ರಹಿಸಿದ್ದರು. ಇಲ್ಲಿ ಆಯ್ದಕ್ಕಿ ಲಕ್ಕಮ್ಮ ಇದಕ್ಕೆ ಸ್ಪಷ್ಟ ನಿದರ್ಶನವೆನಿಸಿದ್ದಾಳೆ. ಆ ಕಾರಣದಿಂದಲೇ ಆಯ್ದಕ್ಕಿ ಲಕ್ಕಮ್ಮ ಗಂಡನಿಗೆ ಪ್ರಶ್ನೆ ಮಾಡಿ ಸರಿಯಾಗಿ ಕಾಯಕವನನು ಮಾಡು ಎಂಬುದರ ಮೂಲಕ ಅಕ್ಕಿಯನ್ನು

ಆರಿಸುವ ಕಾಯಕದ ಮಾರಯ್ಯನಿಗೆ ಬಹಳ ಅಕ್ಕಿಯ ಆಸೆ ಏಕೆ? ಎಂದು ಪ್ರಶ್ನಿಸುತ್ತಾಳೆ. ಈ ಪ್ರಶ್ನೆಯು ಇಡೀ ಪುರುಷ ಸಮಾಜಕ್ಕೆ ಹಾಕಿದ ಸವಾಲು ಅಥವಾ ಎಚ್ಚರಿಕೆಯಾಗಿದೆ ಎನ್ನಬಹುದು. ಡಾ.ಮಹಾದೇವಿ, ಆರ್.ಹಿರೇಮಠರ ಅಭಿಪ್ರಾಯ: "ಸಾಹಸ ಬುದ್ಧಿಯಿಂದ ಸಮಾಜಕ್ಕೆ ದಾರಿತೋರಿ ಕೆಡುಕನ್ನು ತಿದ್ದಬಲ್ಲ ಮಹಾವ್ಯಕ್ತಿಗಳ ಉದಯದ ಅವಶ್ಯಕತೆಯಿತ್ತು. ಈ ಸಂದರ್ಭ ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಯೋಗ್ಯ ಸಮಯವೂ ಆಗಿತ್ತು. ಈ ಅವಶ್ಯಕತೆಯ ಅನಿವಾರ್ಯತೆಯ ಗರ್ಭದಿಂದಲೇ ಉದಿಸಿ ಬಂದದ್ದು ವಚನಸಂಸ್ಕೃತಿ, ಜನಜೀವನದಲ್ಲಿ ಸಮಗ್ರ ಪರಿವರ್ತನೆಯನ್ನುಂಟು ಮಾಡಿದ ಯುಗ. ಜಡಗಟ್ಟಿದ ವ್ಯವಸ್ಥೆಯ ನಡುವೆಯೇ ಚಲನಶೀಲ ಸಂಸ್ಕೃತಿಯೊಂದನ್ನು ಹುಟ್ಟು ಹಾಕಲು ಯತ್ನಿಸಿದ ಯುಗ. ಭಕ್ತವರ್ಗ–ಮೇಲುವರ್ಗ–ಕೀಳುವರ್ಗ, ಶ್ರೇಷ್ಠ–ಕನಿಷ್ಠ ವರ್ಗವೆಂಬುದಾಗಿ ಹೋಳು–ಹೋಳಾಗಿ ವಿಭಜಿಸಿದ್ದು ಒಂದೆಡೆ ಆದರೆ ಈ ಎಲ್ಲಾ ವರ್ಗದ ಪುರುಷ ಸಮೂಹದಿಂದ ಶೋಷಣೆಗೆ ಒಳಗಾದ ಸ್ತ್ರೀಯರ ಅರ್ಥರಹಿತ ಪಶುಸಮಾನ ಅಮಾನವೀಯ ಬದುಕು ಮತ್ತೊಂದೆಡೆಗೆ."[೪೦]

"ಇಂತಹ ಪ್ರಕ್ಷುಬ್ಧ ಸ್ಥಿತಿಯ ಸಂದರ್ಭದಲ್ಲಿ ತಮ್ಮ ಸಾಹಸಬುದ್ಧಿಯಿಂದ ಸಮಾಜಕ್ಕೆ ದಾರಿ ತೋರಿ ಕೆಡಕನ್ನು ತಿದ್ದಬಲ್ಲ ಮಹಾವ್ಯಕ್ತಿಗಳ ಉದಯದ ಅವಶ್ಯಕತೆಯಿತ್ತು. ಈ ಸಂದರ್ಭ ಹೊಸ ಸಂಸ್ಕೃತಿ ನಿರ್ಮಾಣಕ್ಕೆ ಯೋಗ್ಯ ಸಮಯವೂ ಆಗಿತ್ತು. ಈ ಅವಶ್ಯಕತೆಯ ಅನಿವಾರ್ಯತೆಯ ಗರ್ಭದಿಂದಲೇ ಉದಯಿಸಿ ಬಂದದ್ದು ವಚನಸಂಸ್ಕೃತಿ, ಶರಣಸಂಸ್ಕೃತಿ, ಬಸವಸಂಸ್ಕೃತಿ"[೪೧] ಎನ್ನುತ್ತಾರೆ.

ಲೇಖಕರು ಹೇಳುವಂತೆ ಸಮಾಜದ ಬದಲಾವಣೆಗೆ ಸಾಂಸ್ಕೃತಿಕ ಮತ್ತು ರಾಜಕೀಯ ವಿಚಾರಗಳು ಬಹಳ ಮುಖ್ಯ. ಜನಪರ ಮೌಲ್ಯವನ್ನು ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಕಂಡಾಗ, ಅಲ್ಲಿ ಸುಂದರವಾಗಿರತಕ್ಕಂತಹ ಸಂಸ್ಕೃತಿಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ ಎಂಬ ಮಾತುಗಳನ್ನು ಸ್ಪಷ್ಟಪಡಿಸಬಹುದು. ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಹೊಂದಾಣಿಕೆಯಾಗದಿದ್ದಲ್ಲಿ ಏನಾಗುತ್ತದೆ ಎಂಬುದನ್ನು ಶಾಂತಾ ಇಮ್ರಾಪುರ ಅವರ ಮಾತುಗಳು ತೋರಿಸಿಕೊಡುತ್ತದೆ. "ರಾಜಶಕ್ತಿಯನ್ನು ಅನುಲ್ಲಂಘಿನೀಯವಾಗಿದ್ದ ವ್ಯವಸ್ಥೆಯ ನಿಯಂತ್ರಣ ಶಕ್ತಿಯನ್ನು ಏಕಕಾಲಕ್ಕೆ ಒಪ್ಪದ ಅಂದಿನ ಸಮಾಜ ಹಸಿವು–ತೃಷೆ, ಮಾನಾಪಮಾನಗಳ ಬೆದರಿಕೆಯನ್ನೊಡ್ಡಿ ಬಂದಿಸಲು ಯತ್ನಿಸಿದಾಗ ಮಹಾದೇವಿಯಕ್ಕ ನೀಡಿದ ಉತ್ತರಗಳು ಮಹಿಳೆಯ ಆತ್ಮಗೌರವ ಸಹಿಷ್ಣುತೆ, ಧೀಮಂತಿಕೆಯ ಅಪ್ರಕಟಿತ ವ್ಯಕ್ತಿತ್ವವನ್ನು ಪರಿಭಾವಿಸಿದ ಕಣ್ಣಿಗೆ ಆಕೆಯ ಅಂತರಂಗದ ವಿಶಿಷ್ಟ ಸತ್ವವನ್ನು ತೆರೆದು ತೋರುತ್ತದೆ"[೪೨] ಎನ್ನುತ್ತಾರೆ.

ರಾಜಕೀಯ ಆಸೆ ಅಮಿಷಗಳನ್ನು ಲೆಕ್ಕಿಸದ ಶರಣರ ಚಿಂತನಾಕ್ರಮವನ್ನು ಅವರ ವಚನವೇ ಸ್ಪಷ್ಟೀಕರಿಸುತ್ತದೆ.

"ಲಂಚ ಮಂಚನಕ್ಕೆ ಕೈಯಾನದ ಭಾಷೆ!
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ
......................................
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ
ಶಂಭುಜಕ್ಕೇಶ್ವರ ದೇವಯ್ಯಾ! ನಿಮ್ಮಾಣೆ"[೪೩]

ಈ ವಚನದಲ್ಲಿ ಪ್ರಾಮಾಣಿಕತೆಗೆ ಪ್ರಾಧಾನ್ಯತೆಯನ್ನು ಹೇಳಲಾಗಿದೆ. ಇಲ್ಲಿ ಲಂಚಕ್ಕೆ ಅವಕಾಶ ಇಲ್ಲ ಎಂಬುದರ ಮೂಲಕ ಆರ್ಥಿಕ ಪರಿಸ್ಥಿತಿಯನ್ನು ಸತ್ಯಕ್ಕ ತನ್ನ ವಚನದ ಮೂಲಕ ವ್ಯಕ್ತಪಡಿಸುತ್ತಾಳೆ. ದುಡಿಮೆಗೆ ತಕ್ಕ ಫಲವಿರಲಿ, ಅದಕ್ಕೆ ಪರ್ಯಾಯವಾಗಿ ಹಣ ಬೇಕಾಗಿಲ್ಲ ಎಂಬುದನ್ನು ತನ್ನ ವಚನದ ಮೂಲಕ ಹೇಳುತ್ತಿರುವುದು ನೋಡಿದರೆ ಅಂದಿನ ಕಾಲದಲ್ಲಿ ಆರ್ಥಿಕ ಚಿಂತನೆಗೆ ಎಷ್ಟೊಂದು ಮಹತ್ವ ಕೊಟ್ಟಿದ್ದರು ಎಂಬುದು ತಿಳಿಯುತ್ತದೆ. ಬಸವಣ್ಣ ತಾನು ಮಂತ್ರಿಯಾದರೂ ತನ್ನ ಸಂಭಾವನೆಯನ್ನು ಮಾತ್ರ ತನ್ನ ಕಾಯಕದ್ದು ಎಂದು ತಿಳಿದು ಪಡೆಯುತ್ತಿದ್ದನು. ಭಂಡಾರದಲ್ಲಿ ಇದ್ದದ್ದನ್ನು ತೆಗೆದುಕೊಳ್ಳಲು ಎಂದಿಗೂ ಸಹಿತ ಆಸೆಯನ್ನು ಪಡಲಿಲ್ಲ. ಎಂಬುದಕ್ಕೆ ಆತನ ವಚನಗಳು ಸಾಕ್ಷಿಯಾಗಿದ್ದವು. ಬಹುಶಃ ಶರಣರಲ್ಲಿ ಆರ್ಥಿಕ ಚಿಂತನೆಗೆ ಸಂಬಂಧಿಸಿದ ಬಹಳಷ್ಟು ವಚನಗಳ ನಿದರ್ಶನ ಕೊಡಬಹುದು. ಒಟ್ಟಾರೆಯಾಗಿ ಹೇಳಬೇಕಾದರೆ ರಾಜಕೀಯವಾಗಿ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಈ ಮೂರನ್ನು ಗಮನಿಸಿ ನೋಡಿದಾಗ ಶರಣರಲ್ಲಿ ಸಮಾಜವನ್ನು ಕಟ್ಟುವ ಗ್ರಹಿಕೆ ಅಪಾರವಾಗಿತ್ತೆನ್ನಬಹುದು. ಅವರೆಲ್ಲರು ಚಾರಿತ್ರಿಕವಾಗಿರತಕ್ಕಂತಹ ಸಂಪತ್ತು ಕ್ಷಣಿಕ. ಆದರೆ ಸಾಂಸ್ಕೃತಿಕ ನೆಲೆಗಳು ಬಹಳ ಮುಖ್ಯ. ಹಾಗಾಗಿ ನಮ್ಮ ಗಟ್ಟಿಗೊಳ್ಳುವಿಕೆ ಆಗಬೇಕಾದರೆ ಮೇಲು ಸಂಸ್ಕೃತಿಯ ತೋಳಲಾಟದಿಂದ ಮುಕ್ತವಾಗಿ ನಮ್ಮದೇ ಆಗಿರತಕ್ಕಂತಹ ಹೊಸ ವಿಚಾರಕ್ಕೆ ಬದ್ಧರಾಗಿರಬೇಕು ಎಂಬುದನ್ನು ಬಲವಾಗಿ ನಂಬಿದ್ದರು.

## ೧೨ನೇ ಶತಮಾನ ಮತ್ತು ಕೌಟುಂಬಿಕ ನೆಲೆ

ಸಾಮಾಜಿಕ ಚೌಕಟ್ಟಿನಲ್ಲಿಯೇ ಕುಟುಂಬ ಬರುವುದಾದರೂ ಕುಟುಂಬ ವ್ಯಕ್ತಿನಿಷ್ಠ ಅಥವಾ ಸಮಾಜದ ಅತ್ಯಂತ ಸಣ್ಣ/ಸೀಮಿತ ಘಟಕವೆನ್ನಬಹುದು. ಅಷ್ಟೇ ಅಲ್ಲದೇ ಕೌಟುಂಬಿಕ ಗಂಡಿಗಿಂತ ಹೆಣ್ಣಿಗೆ ಮುಖ್ಯ ಎನ್ನುವ ಸಮಾಜದಲ್ಲಿ ಕೌಟುಂಬಿಕ ನೆಲೆಯನ್ನು ಮೀರಿ ಸಾಮಾಜಿಕ ಚೌಕಟ್ಟಿಗೆ ದಿಟ್ಟ ಹೆಜ್ಜೆಯಿಟ್ಟ ಅನೇಕ ಶರಣೆಯರ ಮನದಾಳದ ತುಮುಲವನ್ನು ಅವರ ವಚನಗಳು ನಿರೂಪಿಸುತ್ತವೆ. ಕೌಟುಂಬಿಕ ಜಂಜಾಟವನ್ನೆ ತೊರೆದುವೆಂದರೂ ಮಡುಗಟ್ಟಿದ ತಳಮಳ ಅಥವಾ ವಚನಗಳಲ್ಲಿಯ ದ್ವಂದ್ವ ಭಾವ ಸ್ಪಷ್ಟಿಕರಿಸುತ್ತದೆ. ಸ್ತ್ರೀಯೊಬ್ಬಳು ಈ ಕಟ್ಟು ಪಾಡುಗಳನ್ನು

ಮೀರುವ ಹಂತವನ್ನು ವಚನಗಳು ನಿರೂಪಿಸುತ್ತವೆ. ಇಷ್ಟಾದರೂ 'ಸತಿ-ಪತಿಭಾವ ಒಂದಾಗಿಪ್ಪ' ಎಂಬಂತಹ ವಚನಗಳು ಇಲ್ಲದಿಲ್ಲ. ಬಹುಶಃ ಹಾಗಾಗಿ ವಚನಗಳು ಬಹು ಚರ್ಚೆಯ ನೆಲೆಯಾಗಿರುವುದು ಕೂಡಾ ಈ ದ್ವಂದ್ವಗಳಿಂದಲೇ ಎನ್ನಬಹುದೇನೋ. ಅದಾಗ್ಯೂ ಪ್ರತಿಶತ ಪ್ರಮಾಣವಾದರಿಸಿ ಈ ಚರ್ಚೆಯನ್ನು ಬೆಳೆಸಬಹುದೇನೋ. ಹಾಗಾಗಿಯೇ ಕೌಟುಂಬಿಕ ನೆಲೆ ಕೂಡಾ ಸ್ತ್ರೀ ಜೀವನದ ಅವಿಭಾಜ್ಯ ಅಂಗವಾಗಿ ಚರ್ಚೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಕುಟುಂಬ ಮತ್ತು ಶಿವಶರಣೆಯರನ್ನು ಸಂಬಂಧಿಸಿ ನಡೆಸಬಹುದಾದ ಚರ್ಚೆಯನ್ನು ಎರಡು ನೆಲೆಗಳಲ್ಲಿ ಬೆಳೆಸಬಹುದು.

> "ಸತಿ ಪುರುಷರಿಬ್ಬರಿಂದೊದಗಿದ ಸುಖ ಸತಿಗೋ, ಪುರುಷಂಗೋ?
> ಇದನಾವಿವರಿಸಲಂಜವೆ, ಇನ್ನಾರಿಗೆ ಸುಖದುಃಖವೆಂಬೆ?
> ಕೂಟಸ್ಥದಿಂದ ಹುಟ್ಟಿದ ಶಿಶು, ಬೆಳೆಯುತ್ತ ಹೆಂಗೂಸಿನ ಕೈಯಲ್ಲಿ
> ಆ ಮಗು ಅವನಿಗೋ, ಅವಳಿಗೋ? ಬದುಕಿದರೂ ಸುಖ ಇಬ್ಬರಿಗೂ ಸರಿ
> ಸತ್ತರೂ ದುಃಖ ಇಬ್ಬರಿಗೂ ಸರಿ, ಆ ಪುತ್ರನ ಇರವು
> ಇದನಿನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನ"[೪೪]

ಈ ವಚನದ ಮೂಲಕ ಸತಿ-ಪತಿಗಳಲ್ಲಿ ಸಮಾನತೆ ಅಂಶ, ಪ್ರೀತಿ ಮತ್ತು ಔದಾರ್ಯಗಳು ಬಹಳ ಮುಖ್ಯ ಎಂಬುದನ್ನು ತಿಳಿಯಬಹುದು.

೧. "ಕುಟುಂಬ ಕೇಂದ್ರಿತ ಸಿದ್ದ ಸಾಂಸ್ಕೃತಿಕ ರಚನೆಗಳ ಬಗೆಗಿನ ಶರಣೆಯರ ಪ್ರತಿಶೋಧದ ನೆಲೆ

೨. ಈ ಪ್ರತಿಶೋಧದ ಸೈದ್ಧಾಂತಿಕತೆಯನ್ನು ಅಧಿಕೃತಗೊಳಿಸುವ ಅದರ ಅರ್ಥವಂತಿಕೆಯನ್ನು ಬಹು ಆಯಾಮಗಳಲ್ಲಿ ಉತ್ತರಿಸಿಕೊಳ್ಳುವ ಸೃಜನಶೀಲ ನೆಲೆ."[೪೫]

ಕುಟುಂಬ ಎಂಬುದು ಬಂಧಪಾಶ. ಅದರೊಳಗೆ ಬಿದ್ದರೆ ಬಿಡಿಸಿಕೊಳ್ಳುವುದು ಕಷ್ಟ. ಅಷ್ಟೇ ಅಲ್ಲ ಜೊತೆಯಾಗಿ ಬಾಳಬೇಕಾದ ಗಂಡು-ಹೆಣ್ಣುಗಳಿಬ್ಬರೂ ಒಬ್ಬರಿಗೊಬ್ಬರು ಅಧ್ಯಾತ್ಮ ಸಾಧನೆಯಲ್ಲಿ ಮಾಯೆಯಾಗಿ ಬಿಡುತ್ತಾರೆ. ಹಾಗಾಗಿಯೇ ಕೌಟುಂಬಿಕ ಜಂಜಾಟವೇ ಬೇಡವೆಂದ ಅಕ್ಕಮಹಾದೇವಿಯ ವಚನ ಹೀಗಿದೆ.

> "ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
> ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು
> ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರುವುದು

...........................................................................

ಮಾಯೆಯಿಲ್ಲ, ಮರೆಯಿಲ್ಲ, ಅಭಿಮಾನವೂ ಇಲ್ಲ"[೪೬]

ಕುಟುಂಬ ಮಾಯೆಯಾಗಿ ಪರಿಣಮಿಸುವ ಬಗೆ ಒಂದಾದರೆ ಲಿಂಗಸಂಬಂಧಿ ಆಯಾಮಗಳಲ್ಲಿ ಅಸಮಾನತೆಯ ದ್ಯೋತಕವಾಗಿರುವ ಪರಿ ಇನ್ನೊಂದು ಬಗೆಯದು. ಇದನ್ನು ಡಾ.ಪ್ರೀತಿ ಶುಭಚಂದ್ರ ಅವರು ಅಭಿಪ್ರಾಯದ ಬಗೆ ಹೀಗಿದೆ: "ಸಾಮಾಜಿಕ ರಚನೆಯ ಮೂಲಭೂತ ಪಡಿಮಿಡಿಯ ತೊಡುತ್ತದೆ. ಮಹಿಳೆಯು ಸ್ವತಃ ತಾನೇ ಹೊಂದಬೇಕಾದ ದೈಹಿಕ ಹಾಗೂ ಮಾನಸಿಕ ಅಸ್ತಿತ್ವವನ್ನು ಕುರಿತು ಪ್ರಜ್ಞೆಯನ್ನು ನಿರಾಕರಿಸುವುದರ ಮೂಲಕವೇ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಅಸ್ತಿತ್ವದಲ್ಲಿರುತ್ತದೆ. ಹೀಗೆ ಮಹಿಳೆಯ ಅಸ್ತಿತ್ವವನ್ನು ಅಲ್ಲಗಳೆಯುವ ಯತ್ನವೇ ಇನ್ನಿಲ್ಲದ ಅಪಕಲ್ಪನೆ, ಭ್ರಮೆಗಳಲ್ಲಿ ಪುರುಷ ಅಸ್ತಿತ್ವ ವಿಜೃಂಭಿಸುವಂತೆ ಆಗುತ್ತದೆ. ಹೀಗಾಗಿ ಕುಟುಂಬ ಕೇಂದ್ರದೊಳಗಿನ ಸ್ತ್ರೀ–ಪುರುಷರಿಬ್ಬರಿಗೂ ಕಾಡುವ ಮಾಯೆಯಾಗಿ ಲಿಂಗ ತಾರತಮ್ಯ, ನೀತಿ ಚಲಾವಣೆಯಲ್ಲಿರುತ್ತದೆ. ನಡುವೆ ಸುಳಿದ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂಬುದನ್ನು ತಾತ್ವಿಕವಾಗಿ ಒಪ್ಪಿಕೊಂಡ ಶರಣ–ಶರಣೆಯರಿಬ್ಬರೂ ಮಾಯೆಯ ವಿರುದ್ಧ ಸೈದ್ಧಾಂತಿಕ ಸಮರವನ್ನು ಸಾರಿದವರು. ಭಕ್ತಿಸಾಧಕರಿಗೆ ಅಧಿಕಾರ ರಚನೆಯು ಸಿದ್ಧಗೊಳಿಸಿದ ಸ್ತ್ರೀ ಹಾಗೂ ಪುರುಷ ಪಾತ್ರಗಳನ್ನು ಒಡೆದು ಬರುವುದೇ ಸಾಧನೆಯ ಹಾದಿಯಲ್ಲಿ ಮುಖ್ಯವಾದುದು. ಈ ಸಾಧನೆಯ ವಿನ್ಯಾಸವು ಶರಣರಿಗಿಂತ ವಿಭಿನ್ನವಾದ ನೆಲೆಯಲ್ಲಿ ಶರಣೆಯರಲ್ಲಿ ಪ್ರಕಟ ವಾಗಿರುತ್ತದೆ."[೪೭] ಅಷ್ಟೇ ಅಲ್ಲದೆ ಅಕ್ಕಮಹಾದೇವಿಯ ವಚನಗಳಲ್ಲಿ ಕುಟುಂಬ ತ್ಯಾಗದ ಬಂಧು ಬಾಂಧವರ ಸಂಬಂಧಗಳ ವಿಚಿತ್ರ ರೀತಿಯ ರಚನೆ ಕಾಣಬರುತ್ತದೆ. ವಾಚ್ಯ ಹಾಗೂ ಏಕಕಾಲಕ್ಕೆ ಧ್ವನಿಪೂರ್ಣವಾಗಿ ಕಂಡುಬರುವ ಈ ವಚನವು ಕೌಟುಂಬಿಕ ಅಸಮಾನತೆಗಳ ಪ್ರತಿಭಟನಾ ಸ್ವರೂಪವಾಗಿಯೂ ಪಾರಮಾರ್ಥಿಕ ಗತಿಯೆಡೆಗಿನ ಚಲನೆಯು ಅಥವಾ ತನ್ನತನದ ಸಂವೇದನಾ ಶೀಲ ಅಭಿವ್ಯಕ್ತಿಯಾಗಿಯೂ ಕಾಣಿಸಿಕೊಳ್ಳುತ್ತದೆ.

ಅದರಂತೆ ಕುಟುಂಬದ ಒಂದು ಭಾವನಾತ್ಮಕ ಚೌಕಟ್ಟಿಗೆ ಭೌತಿಕ ಸ್ವರೂಪವಾಗಿರುವುದು ಮನೆ. ಮನೆ ಎಂಬುದನ್ನು ಶರಣೆಯರು ಪರಿಭಾವಿಸಿದ ಬಗೆಯನ್ನು ಡಾ.ಪ್ರೀತಿ ಶುಭಚಂದ್ರರವರು ಮಂಡಿಸುವ ಬಗೆ ಹೀಗಿದೆ.

"ಖ್ಯಾತ ಸ್ತ್ರೀವಾದಿ ಲ್ಯೂಸ್ ಇರಿಗೇರಿಯು ಲೈಂಗಿಕ ವ್ಯತ್ಯಾಸಗಳ ರಾಜಕೀಯಾತ್ಮಾಕತೆಯನ್ನು ಸ್ಪಷ್ಟಪಡಿಸಲು ಎಂಬ ಪರಿಕಲ್ಪನೆಯನ್ನು ಮಂಡಿಸುತ್ತಾಳೆ. ಭಿನ್ನ ಲಿಂಗಗಳು ಪರಸ್ಪರ ಎದುರಾಗಿ ಒಗ್ಗೂಡಲು ಏರ್ಪಟ್ಟ ಸಾಂಪ್ರದಾಯಿಕ ರಚನೆಯಾದ ಕುಟುಂಬವು ಏಕಕಾಲಕ್ಕೆ ಅಂತರವನ್ನು ಸ್ಥಾಪಿಸುತ್ತದೆ. ವಿಶೇಷ ಎನ್ನುವುದು ಅವಕಾಶ ಹಾಗೂ ಅಂತರ ಎಂಬ ಎರಡೂ ಅರ್ಥಗಳನ್ನೊಳ

ಗೊಂಡ ನೆಲೆ. ಶರಣೆಯರ ವಚನಗಳಲ್ಲಿ ಮನೆ ಕುಟುಂಬವನ್ನು ಅವಕಾಶವಾಗಿಯೂ ಅಂತರವಾಗಿಯೂ ಪರಿಭಾವಿಸಿರುವುದನ್ನು ಗುರುತಿಸಬಹುದು."[೪೮]

ಸ್ವಾತಂತ್ರ್ಯಕ್ಕೆ ಪ್ರತಿಪಾದಿಸಿದ ಶರಣೆಯರು ನಂತರ ಹೇಳಿದ ಹಿತ ವಚನಗಳೇನು? ಅದರಲ್ಲಿ ಅಕ್ಕನ ನಿಲುವೇನು? ಎಂಬುದನ್ನು ಈ ವಚನ ನಿರೂಪಿಸುತ್ತದೆ.

"ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಕಂಡೆಯಾ?
ಏನ ಮಾಡಿದರೂ ಆನಂಜುವಳಲ್ಲ
ತರಗೆಲೆಯ ಮೆಲಿದು ಆನಿಹೆನು,
ಸರಿಯ ಮೇಲೊರಗಿ ಅನಿಹೆನು,
ಚೆನ್ನಮಲ್ಲಿಕಾರ್ಜುನಯ್ಯಾ ಕರಕೇಡ ನೊಡ್ಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು"[೪೯]

ಅನೇಕ ಶರಣೆಯರ ಜೀವನದಲ್ಲಿ ಮದುವೆ ಅಡೆತಡೆಗಳನೊಡ್ಡಿದೆ. ಜಾತಿ ಪದ್ಧತಿಗಳು ಅಡ್ಡಗೋಡೆಗಳಾಗಿವೆ. ಹಾಗಾಗಿಯೇ ಜಾತಿಪದ್ಧತಿಯ ವಿರುದ್ಧ ಹೋರಾಡುತ್ತಲೇ ತಮ್ಮತನವನ್ನು ರೂಪಿಸಿಕೊಂಡ ಬಗೆ ಇವರದಾಗಿದೆ. ಅಷ್ಟೇ ಅಲ್ಲ ಪಿತೃ ಪ್ರಧಾನತೆಯನ್ನು ಇವರ ಅನೇಕ ವಚನಗಳು ಪ್ರಶ್ನಿಸುತ್ತವೆ. ಏಕಕಾಲಕ್ಕೆ ತಾಯಿಯು ತವರು ಮನೆಯ ಬೆಳಕಾಗಿ ಬಾಳಬೇಕೆಂಬ ಹೊಂಗನಸು ಇವರಲ್ಲಿ ಮೂಡಿದೆ. ಕೌಟುಂಬಿಕ ಸಂರಚನೆಯನ್ನು ಪ್ರಶ್ನಿಸಿ ಪರ್ಯಾಯ ಕ್ರಮವೊಂದನ್ನು ಸೂಚಿಸುವ ಅಷ್ಟೇ ಅಲ್ಲದೇ ಸ್ಥಾಪಿತ ಕೌಟುಂಬಿಕ ಸಂಬಂಧಗಳ ಕಪಿಮುಷ್ಟಿಯಿಂದ ಹೊರಬಂದು ಹೊಸ ಸಂಬಂಧಗಳ ನೆಲೆಗಳನ್ನು ಕಟ್ಟಿಕೊಳ್ಳುವ ಅಕ್ಕನ ಮನದಾಳದ ಮಾತು. "ಸುಖ, ದುಃಖ ಸತಿ–ಪತಿಯರಿಗೂ ಸರಿ ಎನ್ನುವ ಮೂಲಕ ಲಿಂಗ ಸಮಾನತೆಯನ್ನು ಎತ್ತಿ ತೋರಿಸುತ್ತಾಳೆ. ಸತಿ–ಪತಿಯರಿಂದಲೂ ಒದಗಿದ ಸುಖ–ಸತಿಗೋ ಪತಿಗೋ ಎನ್ನುವ ಪ್ರಶ್ನೆ ಸತಿ–ಪತಿಗಳಿಬ್ಬರಲ್ಲಿ ಅಸಮಾನತೆಯು ಸಹಜವಾಗಿತೆಂಬುದು ಸ್ಪಷ್ಟವಾಗುತ್ತದೆ."[೫೦]

"ವಚನಕಾರರು ಪತ್ನಿ ತಮ್ಮ ಧರ್ಮಸಾಧನೆಗೆ ಜೊತೆಯಾಗಬೇಕು ಎಂದು ಬಯಸುತ್ತಾರೆ. ಹಾಗೆಂದೆ ಅವರು ಹೆಣ್ಣು ಅರ್ಧಾಂಗಿಯಾದ ಬಳಿಕ ಅವಳೂ ಭಕ್ತಳಾಗಬೇಕು. ಪತಿ ಭಕ್ತನಾಗಿ ಸತಿ ಭವಿಯಾದರೆ ಅವರ ಬಾಳು ಹೆಂಡದ ಮಡಕೆಯ ಹೊರಗೆ ತೊಳೆದಂತೆ. ತನಗೊಂದು ಕುಲದೈವ ಗಂಡನಿಗೊಂದು ಕುಲದೈವ ಎನ್ನಲಾಗದು. ಕುಲಜಾತಿಗಳನ್ನು ಮೀರಿ ಶರಣ ಧರ್ಮವನ್ನು ಸ್ವೀಕರಿಸಿದ ಬಳಿಕ ಅವರಿಗೆ ಹಿಂದಿನ ಕುಲದೈವಗಳ ಪೂಜೆ, ಅನ್ಯದೈವಗಳ ಪೂಜೆ ಹೊಲ್ಲ, ಸತಿಯಿಂದ ಕೆಲವು ಗುಣಗಳನ್ನು ನಂಬಿಕೆ, ನಿಷ್ಠೆ, ಪಾತಿವ್ರತ್ಯ, ಅನ್ಯೋನ್ಯತೆ, ಧಾರ್ಮಿಕ ಸಾಹಚರ್ಯಗಳನ್ನು ವಚನಕಾರರು ಬಯಸಿರುವಂತೆ ಪತಿಯಾದ ತಾವು ಸತಿಯನ್ನು ಎಲ್ಲ ರೀತಿಯಿಂದಲೂ ಹೊಂದಿಕೊಂಡು ಬಾಳಬೇಕು"[೫೧] ಎಂದು ಅಭಿಪ್ರಾಯಪಡುತ್ತಾರೆ.

"ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳ ವಿಷ ಬೆರೆತಂತೆ ಕಾಣಾ ರಾಮನಾಥ"[೫೨]

ಸತಿ ತೋರುವಂತ ಹಾದಿ ಪತಿ, ಮೆಚ್ಚಬೇಕು. ಪತಿ ತೋರುವ ಹಾದಿ ಸತಿ ಮೆಚ್ಚಬೇಕು. ಸಂಸಾರದ ಎರಡು ಚಕ್ರಗಳು ಒಂದಾಗಿದ್ದಾಗ ಹಿತವಾಗುವುದು. ಶಿವನಿಗೆ ಭಕ್ತಿ ಎನ್ನುವುದು ಬಹಳ ಮುಖ್ಯ ಇಬ್ಬರಲ್ಲಿ ಹೊಂದಾಣಿಕೆ ಇಲ್ಲದಿದ್ದರೆ, ಅಮೃತದೊಳಗೆ ವಿಷ ಹಾಕಿದಂತೆ ಎಂದು ಜೇಡರ ದಾಸಿಮಯ್ಯನು ಹೇಳುತ್ತಾನೆ. ಆದರೆ ಶರಣ–ಶರಣೆಯರ ಬದುಕು ನಿಷ್ಠೆಯಿಂದ ಕೂಡಿತ್ತು ಎಂದು ಹೇಳಬಹುದು.

ಶರಣ–ಶರಣೆಯರ ಬದುಕನ್ನು ಮತ್ತು ಅವರ ಸಂಬಂಧಗಳನ್ನು ನೋಡಿದಾಗ ಆತ್ಮದ ನಂಟು ಇವರದಾಗಿದೆಯೇ ಹೊರತು ಬೇರೆ ಉದ್ದೇಶವಲ್ಲ ಎನ್ನುವುದು ಕಾಣುತ್ತದೆ. ಕೇವಲ ಗಡ್ಡ–ಮೀಸೆ ಮೊಲೆಗಳು ಮುಖ್ಯವಲ್ಲ, ಇವುಗಳು ಶಾರೀರಿಕ ಧರ್ಮವಾಗಿದೆ. ಆದರೆ ಆತ್ಮಕ್ಕೆ ಭೇದ ಕಾಣಲಾಗದು. ಹಾಗಾಗಿ ಈ ಮೇಲಿನ ವಿಚಾರಗಳಿಂದ ಶರಣ–ಶರಣೆಯರು ನಿರ್ಭೀತಿಯ ಬದುಕು ಮತ್ತು ತೀರಾ ಗಮನಾರ್ಹವಾಗಿರತಕ್ಕಂತಹ ಮುಕ್ತವಾದ ಸಂವಾದದಿಂದ ಕಲ್ಮಶವನ್ನು ಕಡಿದು ಹಾಕುವಂತಹ ಸಂದೇಶವನ್ನು ಸಾರಿದ್ದಾರೆ ಎಂದು ಹೇಳಬಹುದು.

"ವಚನಕಾರರ ಆಲೋಚನೆ ಅತ್ಯಂತ ಆಧುನಿಕವೂ ದೂರದೃಷ್ಟಿಯದೂ ಆಗಿದೆ. ಸ್ತ್ರೀ ಮತ್ತು ಶೂದ್ರ ಇಬ್ಬರೂ ಬೌದ್ಧಿಕವಾಗಿ ಸಮಾನರು. ಇದು ಹಿಂದೂ ಸಂಪ್ರದಾಯ ನಿರ್ಣಯಿಸಿದ್ದು, ಶೂದ್ರರು ಮತ್ತು ದಲಿತರು ಉತ್ಥಾನವನ್ನೇ ತನ್ನ ಗುರಿಯಾಗಿ ಎತ್ತಿಕೊಂಡ ವಚನಕಾರರ ದೃಷ್ಟಿ–ಸ್ತ್ರೀಯರ ಕಡೆಗೂ ಹೊರಳಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಗಂಡು ಹೆಣ್ಣಿನ ಭೇದ ಭೌತಿಕ ಚಿಹ್ನೆಗಳಲ್ಲಿ ಮಾತ್ರ. ಆದರೆ ಸತ್ವಶಃ ಇಬ್ಬರೂ ಒಂದೇ ಬಗೆಯ ಸಾಮರ್ಥ್ಯವನ್ನು ಪಡೆದಿರುವವರು, ಸಮಾಜದ ಉನ್ನತಿಯಾಗಬೇಕಾದರೆ ಅದರ ಅರ್ಧ ಭಾಗವಾದ ಸ್ತ್ರೀ ಸಮೂಹವನ್ನು ಹೊರಗಿಡುವುದು, ವಿವೇಕವಲ್ಲ. ವ್ಯವಹಾರಿಕವೂ ಅಲ್ಲ. ಇದಕ್ಕೆ ಅವರಿಗೆ ಹೊಳೆದ ಪರಿಹಾರ ತೀರ ಸರಳ. ಹೆಣ್ಣನ್ನೂ ಗಂಡಿನಂತೆ ಕಾಣು"[೫೩] ಎಂದು ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.

ಡಾ.ವಿಜಯಶ್ರೀ ಸಬರದ ಅವರ ಮಾತುಗಳು ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತವೆ.

"ವೇದಕಾಲದಿಂದ ಮಧ್ಯಯುಗದವರೆಗೆ ಮಹಿಳೆಯ ಸ್ಥಾನಮಾನಗಳಲ್ಲಿ ಹೇಳಿಕೊಳ್ಳುವಂತಹ ಸುಧಾರಣೆಗಳು ಇರಲಿಲ್ಲ. ವೇದ ಕಾಲದಲ್ಲಿ ಮಾತ್ರ ಹೆಣ್ಣಿಗೆ ಸ್ವಲ್ಪ ಮಟ್ಟಿಗೆ ಸ್ವಾತಂತ್ರ್ಯವಿತ್ತು.

ಶಿಕ್ಷಣವನ್ನು ಪಡೆಯುವ ಅವಕಾಶವಿತ್ತು. ಆದರೆ ವೇದಕಾಲದ ಅನಂತರದಲ್ಲಿ ಮಹಿಳೆ ಈ ಅವಕಾಶದಿಂದ ವಂಚಿತಳಾದಳು. ಬರು-ಬರುತ್ತಾ ಹೆಣ್ಣನ್ನು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅಸ್ಪೃಶ್ಯಳನ್ನಾಗಿ ಕಂಡರು, ಭೋಗದ ವಸ್ತುವಾಗಿ, ಹೆರುವ ಯಂತ್ರವಾಗಿ ಕಂಡರು. ಮಕ್ಕಳನ್ನು ಹೆರುವುದು ಹಾಗೂ ಸಾಕುವುದರಲ್ಲಿ ಹೆಣ್ಣಿನ ಬದುಕಿನ ಸಾರ್ಥಕತೆಯನ್ನು ಸಾರಿದರು. ಜೈನಧರ್ಮ ಹೆಣ್ಣಿಗೆ ಆಧ್ಯಾತ್ಮಿಕ ಮಾರ್ಗದಲ್ಲಿ ಸ್ವಾತಂತ್ರ್ಯ ನೀಡಿತು. ಆದರೆ ಹೆಣ್ಣು ಮುಕ್ತಿ ಪಡೆಯಬೇಕಾದರೆ ಗಂಡಾಗಿ ಹುಟ್ಟಬೇಕು ಎಂದು ಸಾರಿತು. ಬೌದ್ಧ ಧರ್ಮ ತನ್ನ ಸಂಘದಲ್ಲಿ ಹೆಣ್ಣನ್ನು ಸೇರಿಸಿಕೊಳ್ಳಲು ಅವಕಾಶ ನೀಡಿತ್ತಾದರೂ ಧರ್ಮದ ನಿರ್ದಿಷ್ಟ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಅವಕಾಶವಿರಲಿಲ್ಲ. ಹೆಣ್ಣಿನ ಬದುಕಿನ ಸಂಕೋಲೆಗಳು ಮತ್ತಷ್ಟು ಬಿಗಿಗೊಂಡವು."[೩೪]

ಇಂತಹ ತಾಕಲಾಟದ ಬದುಕು ಮಹಿಳೆಯದಾಗಿತ್ತು. ಮೌಢ್ಯತೆಗೆ ಮುಖ ಚಾಚಿ ಬದುಕು ಸಾಗಿಸುವ ಯತ್ನ ಶೋಷಣೆಯಿಂದ ಕೂಡಿದ್ದಾಗಿತ್ತು. ೧೨ನೇ ಶತಮಾನದ ಶರಣರು ಇಂತಹ ಕರಾಳ ಬದುಕಿನಿಂದ ಬಿಡುಗಡೆಗೊಳಿಸಿ ಮಹಿಳೆಯರು ತಮ್ಮದೆಯಾದ ಬದುಕನ್ನು ಕಟ್ಟಿಕೊಳ್ಳುವಂತಹ ಸ್ವಾತಂತ್ರ್ಯವನ್ನು ಕಲ್ಪಿಸಿದ್ದಾರೆ ಎಂದು ಹೇಳಬಹುದು.

"ವಚನ ಚಳವಳಿಯು ಹೆಣ್ಣಿಗೆ ಸಾಮಾಜಿಕ, ಧಾರ್ಮಿಕ, ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ನೀಡಿತು. ಲಿಂಗಭೇದವನ್ನು ಅಳಿಸಿ, ಸ್ತ್ರೀ ಶಕ್ತಿಯನ್ನು ಗುರುತಿಸಿ ಗೌರವಿಸಿತು."[೩೩]

ಹರಳಯ್ಯನ ಪತ್ನಿಯಾದ ಕಲ್ಯಾಣಮ್ಮ ಈಕೆಯ ಗಂಡ ಬಂದು ಎಂತಹ ತಪ್ಪು ಎಂದಾಗ ಏಕೆ ಎಂದು ಪ್ರಶ್ನಿಸುವುದರ ಮೂಲಕ ನನಗೆ ಬಸವಣ್ಣ ಶರಣು-ಶರಣಾರ್ಥಿ ಎಂದ, ಎಂದಾಗ ಅದಕ್ಕೆ ಪಶ್ಚಾತ್ತಾಪ ನನಗೆ ಆಗಬೇಕು ನನ್ನ ದೇಹದ ಚರ್ಮದಿಂದ ಪಾದರಕ್ಷೆ ಮಾಡುವೆ ಎಂದಾಗ ನಿನ್ನ ದೇಹದಲ್ಲಿ ಅರ್ಧಭಾಗ ನನಗೂ ಸೇರಿದೆ. ನಿನಗೆ ನೋವಾದರೆ ನನಗೂ ಅದು ನೋವೆ. ಹಾಗಾಗಿ ನಿನ್ನ ತೊಡೆಯ ನನ್ನ ಎಡ ತೊಡೆಯ ಚರ್ಮದಿಂದ ಪಾದರಕ್ಷೆಯನ್ನು ಮಾಡೋಣ ಎನ್ನುವ ಮಾತು ಗಮನಿಸಿದಾಗ ಅವಳಲ್ಲಿ ಇದ್ದ ಪತಿ ನಿಷ್ಠೆ ಸಹಬಾಳ್ವೆ, ಸಹ ಮನಸ್ಸು ಎದ್ದು ತೋರುತ್ತದೆ.

"ಬಸವಾದಿ ಶರಣರಿಗೆ ಆದರ್ಶವಾದ ದಾಂಪತ್ಯಗಳು ಸಿರಿಯಾಳ-ಚೆಂಗಳೆ, ಸಿಂಧೂ ಬಲ್ಲಾಳರದಾದರೆ, ಶರಣರಲ್ಲೇ ಆದರ್ಶಪ್ರಾಯವಾದ ದಾಂಪತ್ಯ ಬಸವಣ್ಣ-ನೀಲಲೋಚನೆ ಗಂಗಾಂಬಿಕೆಯರದ್ದು."[೩೬] ಈ ಹೇಳಿಕೆಯನ್ನು ಶಾಂತಾ ಇಮ್ರಾಪುರ ಹೇಳುತ್ತಾ ಕುಟುಂಬದಲ್ಲಿ ಆದರ್ಶತೆ ಒಳಗೊಂಡಾಗ ಬೇರೆಯವರಿಗೆ ಮಾದರಿಯಾಗಲು ಸಾಧ್ಯವಾಗುತ್ತದೆ ಎನ್ನುತ್ತಾರೆ.

ಶರಣ-ಶರಣೆಯರು ಮನಸ್ಸು ಶುದ್ಧತೆಯಿಂದ ಇರಬೇಕು ಎಂಬ ವಿಚಾರವನ್ನು ಒತ್ತಿ ಹೇಳಿದ್ದಾರೆ. ಕೌಟುಂಬಿಕವಾಗಿ ಅನೇಕ ತೊಂದರೆಗಳು ಎದುರಾಗಬಹುದು ಅವು ಮಾನಸಿಕ

ವಾಗಿರಬಹುದು, ದೈಹಿಕವಾಗಿರಬಹುದು. ಈ ವಿಚಾರವಾಗಿ ಲದ್ದೆಯ ಸೋಮಣ್ಣ, ನೋವು ಬಂದರೆ, ಸಾವು ಬಂದರೆ, ಇದಕ್ಕೆ ದೇವರು ಏನು ಮಾಡಬೇಕು. ನರಳಬೇಕು, ಇಲ್ಲ ಸಾವನ್ನಪ್ಪ ಬೇಕು. ಅದು ಬಿಟ್ಟು ದೇವರ ಹಂಗಿನೊಳಗೆ ನಾವು ಇರಬಾರದು ಎಂದು ಹೇಳಿದ್ದಾರೆ. ಕುಟುಂಬ ನೆಲೆಯಲ್ಲಿ ಸಾಕಷ್ಟು ತೊಂದರೆಗಳಿಗೆ ನಮ್ಮಲ್ಲಿಯೇ ಪರಿಹಾರವಿದೆ ಎಂಬುದನ್ನು ಶರಣರು ಕಂಡುಕೊಂಡಿದ್ದಾರೆ. ಹಾಗಾಗಿ ಗಂಡು ಹೆಣ್ಣುಗಳ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ನಮ್ಮ ದಾರ್ಶನಿಕರು ಅವರಿಗೆ ಒಂದು ಮಾರ್ಗ ಸತಿ–ಪತಿ, ಈ ಮೂಲಕ ಕುಟುಂಬ ಇದು ಶರಣ ಸಂಪ್ರದಾಯಕ್ಕೆ ಬಂದಾಗ ವಿಶ್ವಕುಟುಂಬವಾಗಿ ಪರಿವರ್ತನೆಯಾಗುತ್ತದೆ ಎನ್ನಬಹುದು.

## ಶಿವಶರಣೆಯಲ್ಲಿ ಗಂಗಾಂಬಿಕೆ, ನೀಲಾಂಬಿಕೆ ಪಾತ್ರ

ಶಿವಶರಣೆಯಗಲ್ಲಿ ಗಂಗಾಂಬಿಕೆಯನ್ನು ಆಚಾರ ಪತ್ನಿಯಾಗಿ ಸ್ವೀಕರಿಸಿದರೆ ನೀಲಾಂಬಿಕೆಯನ್ನು ವಿಚಾರ ಪತ್ನಿಯಾಗಿ ಕಾಣುತ್ತಾರೆ.

"ಗಂಗಾಂಬಿಕೆಯು ದಾಸೋಹ ಮಹಾಮನೆಯಲ್ಲಿ ಕ್ರಿಯಾಶೀಲೆಯಾಗಿ ಕಾರ್ಯ ನಿರ್ವಹಿಸಿದರೆ, ನೀಲಾಂಬಿಕೆಯು ವಿಚಾರ ಪತ್ನಿಯಾಗಿ ಮುನ್ನಡೆದರು. ಪತಿಯ ಯಶಸ್ಸಿಗೆ ಕಾರಣವಾದರು. ಬಸವಣ್ಣನನ್ನು ಗುರುವನ್ನಾಗಿ ಸ್ಮರಿಸಿದವಳು ನೀಲಮ್ಮ ಆಗಿದ್ದಾಳೆ. ಜೊತೆಗೆ ಲಿಂಗನಿಷ್ಠೆಯಿಂದ ಕೂಡಿದವಳು ಆಗಿದ್ದಾಳೆ."[೫೭] ಗಂಗಾಂಬಿಕೆ–ನೀಲಾಂಬಿಕೆಯರು ಶಿವಶರಣೆಯಲ್ಲಿ ಅತ್ಯಂತ ಉದಾತ್ತ ಭಾವನೆಯವರು. ಮಹಾಮನೆಯ ಮಹಾತಾಯಿಯರು ಆಗಿದ್ದರು. ಬಸವಣ್ಣನವರಿಗೆ ಸದಾ ಬೆನ್ನೆಲುಬು ಆಗಿದ್ದರು. ಅನುಭವ ಮಂಟಪದಲ್ಲಿಯ ಸಚೇತನರು ಆಗಿದ್ದರು.

"ಅನುಭವ ಮಂಟಪ ಜ್ಞಾನ ಜಿಜ್ಞಾಸೆಗೆ, ಆಧ್ಯಾತ್ಮ ಸಾಧನೆಗೆ ಸಾಧನಾರಂಗವೆನಿಸಿತು. ಪ್ರಭುದೇವನ ಮಾರ್ಗದರ್ಶನದಲ್ಲಿ ಈ ಆಧ್ಯಾತ್ಮಿಕ ಚಿಂತನ ಅನುಭವ ಮಂಟಪದಲ್ಲಿ ಆರಂಭ ವಾಯಿತು. ಈ ಸಾಧನೆಯ ಪರಿಪಕ್ವ ರೂಪವೆಂಬಂತೆ ಮಹಾದೇವಿಯಕ್ಕ, ಅಕ್ಕನಾಗಮ್ಮ, ನೀಲಮ್ಮ, ಗಂಗಮ್ಮರಂತಹ ಅಪೂರ್ವ ವ್ಯಕ್ತತ್ವದ ವ್ಯಕ್ತಿಗಳು ಅನುಭವ ಮಂಟಪದಲ್ಲಿ ರಾರಾಜಿಸಿದರು."[೫೮]

"ನೂರಾರು ಶರಣೆಯರು ನೀಲಮ್ಮನೊಂದಿಗೆ ದಾಸೋಹ ಕಾರ್ಯದಲ್ಲಿ ನೆರವಾಗಲು ಮುಂದೆ ಬರುತ್ತಾರೆ. ಬಸವಣ್ಣನವರು ಶರಣ ಪ್ರೇಮಕ್ಕೆ ಭಕ್ತಿಯ ದಾಸೋಹ ಮಾಡುತ್ತಾ ನೀಲಮ್ಮ ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾಳೆ. ಎಲ್ಲರಲ್ಲಿಯೂ ಸಂಗಮನಾಥನನ್ನು ಕಾಣುವ

ವಿಚಾರ ಪತ್ನಿಯಾಗಿ ನೀಲಮ್ಮ ರೂಪುಗೊಳ್ಳುತ್ತಾಳೆ. ಈಕೆ ಸಂಗೀತ ಪ್ರೇಮಿಯೂ ಆಗಿದ್ದಾಳೆ. ನೀಲಮ್ಮ ಬಸವಣ್ಣನವರ ವಚನಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದಳಲ್ಲದೆ, ಜಗದ ಆಗು-ಹೋಗು ಸಂಗಯ್ಯನ ಅಧೀನ ಎಂದು ನಂಬಿದ್ದಳು."[೫೯]

"ಬಸವಣ್ಣನವರಲ್ಲಿ ಗಂಗಾಂಬಿಕೆಗೆ ಅಪಾರವಾದ ಪ್ರೀತಿ, ವಿಶ್ವಾಸ, ಭಕ್ತಿಯೊಡಗೂಡಿದ ಗೌರವವಿತ್ತು. ಇದನ್ನು ಮೀರಿ ತೋರುವ ಮೂರ್ತಿ, ಪುಷ್ಪ ಗುಂಪಿನಲ್ಲಿ ಕಾಣದೆ ಹೋಗಿದೆ, ಇದೆನೋ ಮೀರಿತೋರುವ ಕರದಲ್ಲಿಯ ಲಿಂಗದಂತೆ ಉಲುಹದ ಸ್ಥಿತಿ ತೋರುತ್ತದೆ. ಇಂತಿಷ್ಟು ಮೂರ್ತಿಯ ಕಂಡು ಗಂಗಾಪ್ರಿಯ ಕೂಡಲಸಂಗನ ಶರಣನ ಸತಿಹಳು ಧನ್ಯಳಾದಳು."[೬೦]

ಭಕ್ತಿಯಿಂದ ಬಸವಣ್ಣನ ಮೇಲೆ ಅಪಾರ ಪ್ರೀತಿ ತೋರಿ ಹೇಳುತ್ತಾಳೆ. ಹಾಗೂ ಗಂಗಾಂಬಿಕೆಯು ವಚನ ಗಂಟುಗಳನ್ನು ಹೊತ್ತುಕೊಂಡು ಉಳುವಿಗೆ ಪ್ರಯಾಣ ಮಾಡಿ ವಚನಾಧ್ಯಯನಕ್ಕೆ ನೆರವಾಗಿದ್ದಾಳೆ. ಇವರಿಬ್ಬರ ಕುರಿತು ಡಾ.ಪ್ರೀತಿ ಶುಭಚಂದ್ರ ಅವರ ಅಭಿಪ್ರಾಯ ಹೀಗಿದೆ.

"ಬಸವನೆಂಬ ಭಕ್ತಿಯ ಬಳ್ಳಿಗೆ ನೀರೆರೆದು ಪೋಷಿಸಿದ ನೀರೆಯರು ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಪತಿಯ ಸಹಾನುವರ್ತಿಯರಾಗಿದ್ದರೂ ಸ್ವಂತಿಕೆಯನ್ನು ತಮ್ಮದೇ ಆದ ರೀತಿಯಲ್ಲಿ ಇವರಿಬ್ಬರೂ ಮೆರೆದಿದ್ದಾರೆ ಸಮಾಜ ಪರಿವರ್ತನೆಯ, ಧ್ಯೇಯೋದ್ಧೇಶವುಳ್ಳ, ಬಸವಣ್ಣ ಹಾಕಿಕೊಟ್ಟ ಭಕ್ತಿಪಥ ಸುಗಮವೇನೂ ಅಲ್ಲ, ಆತನ ಜೊತೆ ಮಡದಿಯರಿಬ್ಬರೂ ಸಾಗಿದ ಹಾದಿ ಬಲು ಕಷ್ಟಮಯವಾದ ಕಲ್ಲುಮುಳ್ಳಿನ ಹಾದಿಯಲ್ಲಿ ಅದೊಂದು ಅಗ್ನಿ ವಿದ್ಯೆ. ಬರೀ ಅಗ್ನಿ ವಿದ್ಯೆ ಮಾತ್ರವಲ್ಲ ದಿವ್ಯಗಳ ಸರಮಾಲೆ. ಸತಿಯರಿಬ್ಬರೂ ಅದನ್ನು ಎದುರಿಸಿದ ಬಗೆಯಾದರೂ ಅನನ್ಯ."[೬೧]

ಇವರ ಹೇಳಿಕೆಯನ್ನು ಗಮನಿಸಿದಾಗ ಗಂಗಾಂಬಿಕೆ-ನೀಲಾಂಬಿಕೆಯ ಜವಾಬ್ದಾರಿ ಬಹಳಷ್ಟು ಇದ್ದುದು ಕಾಣುತ್ತೇವೆ. ಆದ್ದರಿಂದಲೇ ಬಸವಣ್ಣ ಮನೆಗೆ ಬಂದ ಎಲ್ಲಾ ಜಂಗಮರನ್ನು ತೃಪ್ತಿಪಡಿಸಿ ಅವರನ್ನು ಸಂತೈಸುವ ಗುಣ ಇವರಲ್ಲಿ ಇತ್ತು. ಹಾಗಾಗಿ ಗಂಗಾಂಬಿಕೆ, ನೀಲಾಂಬಿಕೆಯರು ನಿಜಕ್ಕೂ ಸಹಿತ ಬಸವನೆಂಬ ಭಕ್ತಿಯ ಬಳ್ಳಿಯನ್ನು ನೀರೇರೆದು ಪೋಷಿಸಿದ ನೀರೆಯರು ಎನ್ನಬಹುದು. ಬಸವಣ್ಣನಿಗೆ ಬೆನ್ನೆಲುಬಾಗಿ ನಿಂತು ಅವರು ಮಾಡುವಂತಹ ಕಾರ್ಯಗಳಿಗೆ ಪ್ರೋತ್ಸಾಹವನ್ನು ನೀಡಿ ಅತ್ಯಂತ ಕಾಳಜಿ ತೋರಿದ್ದಾರೆ.

ಡಾ.ಎಂ.ಚಿದಾನಂದಮೂರ್ತಿ ಅವರ ಅಭಿಪ್ರಾಯ ಹೀಗಿದೆ: "ವಚನಕಾರ್ತಿಯರಲ್ಲೆಲ್ಲ ಅತ್ಯಂತ ಭಾವುಕ ಸ್ವಭಾವದವಳು ನೀಲಲೋಚನೆ. ಗಂಗಾಂಬಿಕೆ ಇದಕ್ಕೆ ಸ್ವಲ್ಪ ಭಿನ್ನ ಸ್ವಭಾವದವಳು.

ಅವಳಲ್ಲಿ ಸಂಯಮ ಹೆಚ್ಚು. ಅವಳ ಕೆಲವೇ ವಚನಗಳು ದೊರೆತಿದ್ದರೂ ಅಲ್ಲಿ ಕಂಡುಬರುವುದೆಂದರೆ ಅವಳ ಶಾಂತವೂ, ಸಮಾಧಾನಕರವೂ ಆದ ಗುಣ. ಇದನ್ನು ಮೀರಿ ತೋರುವ; ಮೂರುತಿ ಪುಷ್ಪಗುಂಪಿನಲ್ಲಿ ಕಾಣದೆ ಹೋಗಿದೆ ಎಂಬ ವಚನದ ಆರಂಭ ಉದ್ಗಾರ ಅವಳ ವಿಸ್ಮಯಾನುಭವವನ್ನು ಸುಂದರವಾಗಿ ಧ್ವನಿಸುತ್ತದೆ."[೬೨] ವಿದ್ವಾಂಸರಾದ ಡಾ.ಎಂ.ಚಿದಾನಂದಮೂರ್ತಿ ಅವರು ಗಂಗಾಂಬಿಕೆ ಮತ್ತು ನೀಲಾಂಬಿಕೆಯರಲ್ಲಿ ಇದ್ದ ಸ್ವಭಾವವನ್ನು ಎತ್ತಿ ತೋರಿಸುವುದರ ಮೂಲಕ ಅವರಲ್ಲಿ ಅಡಗಿದ್ದ ಭಕ್ತಿಯನ್ನು ತಿಳಿಯಪಡಿಸಿದ್ದಾರೆ.

"ಪತಿಯಾಜ್ಞೆಯಲ್ಲಿ ಚರಿಪಸತಿಗ್ಯಾಕೆ ಪ್ರತಿಜ್ಞೆಯು"[೬೩] ಎನ್ನುವುದರ ಮೂಲಕ ನಾನು ನಿಷ್ಠೆಯಿಂದ ಇರುವಂತವಳು ಎಂದು ತಿಳಿಸುತ್ತಾಳೆ. ಒಟ್ಟಾರೆಯಾಗಿ ಇವರಿಬ್ಬರೂ ವಿಭಿನ್ನವಾಗಿ ಕಂಡುಬಂದರೂ, ಇವರದೇ ಆದ ತತ್ವ ಸಿದ್ಧಾಂತಗಳನ್ನು ಸಮರ್ಥಿಸಿಕೊಂಡಿದ್ದಾರೆ. ಒಬ್ಬ ಯಶಸ್ವಿ–ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎಂಬುದಕ್ಕೆ ಇವರೀರ್ವರು ಕಾರಣರಾಗಿದ್ದಾರೆ.

ಗಂಗಾಂಬಿಕೆ ಧೈರ್ಯಸ್ಥೆ ಎನ್ನುವುದು ಕಡೆಗಾಲದಲ್ಲಿ ಆಕೆ ಶಸ್ತ್ರ ಸಜ್ಜಿತ ಹೋರಾಟಗಾರ್ತಿಯಾದುದರಿಂದ ಹೇಳಬಹುದೇ ವಿನಃ ಸ್ವಭಾವತಃ ಆಕೆ ಎಂದೂ ಬಸವಣ್ಣನವರನ್ನು ಪ್ರಶ್ನಿಸಲಿಲ್ಲ, ವಿನಯಾಚಾರದಿಂದಲೇ ಸೌಮ್ಯತನದಲ್ಲಿಯೇ ಚಳವಳಿಯಲ್ಲಿ ಭಾಗಿಯಾದವಳು. ನೀಲಾಂಬಿಕೆಗೆ ತಾನು ಪತಿನಿಷ್ಠೆ ಎಂಬುದನ್ನು ಆಕೆ ಕಾಯಾ, ವಾಚಾ, ಮನಸಾ ಸಮರ್ಥಿಸಿಕೊಂಡಿದ್ದಾಳೆ.

ಇವರಿಬ್ಬರು ಬಸವಣ್ಣನಿಗೆ ಸಹಾಯಕರಾಗಿ ಆತನ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿ, ಜೊತೆಗೆ ಮಹಾಮನೆಯ ಎಲ್ಲಾ ಜವಾಬ್ದಾರಿಯನ್ನು ಕೈಗೊಂಡು, ಶರಣ ಸಂಕುಲದ ಜೊತೆಗೆ ಆದರದಿಂದ ಕಾಯಕದಲ್ಲಿ ಪಾಲ್ಗೊಂಡು, ಬಂದ ಅತಿಥಿಗಳನ್ನು ಸತ್ಕರಿಸಿ, ಬಸವನ ಮಹಾಮನೆಯಲ್ಲಿ ಯಾವುದೇ ರೀತಿಯ ತೊಂದರೆ ಬಾರದಿರುವ ಹಾಗೆ ಕೆಲಸಕಾರ್ಯ ಮಾಡಿದ್ದಾರೆ ಎನ್ನಬಹುದು.

೧೨ನೇ ಶತಮಾನದಲ್ಲಿ ಉದಾತ್ತ ಮಾನವೀಯ ಮೌಲ್ಯಗಳಿಂದ ಕೂಡಿದ ಶರಣರ ಕೂಡುವಿಕೆ ವಚನ ಚಳವಳಿಗೆ ಕಾರಣವಾಗಿ, ಸಮಕಾಲೀನ ಸಮಾಜಕ್ಕೆ ಮಾರ್ಗದರ್ಶನ ಮಾಡುವಂತೆ ಆಯಿತು. ಇಲ್ಲಿ ಅಡಗಿದ್ದ, ಮೇಲು, ಕೀಳು ಎಂಬ ಜಾತಿಯ ಭೂತ ಹಾಗೂ ಇದರ ಬೆನ್ನೇರಿದ ಪುರೋಹಿತಶಾಹಿಗಳು ಹಾಗೂ ರಾಜಕೀಯದ ತುಮಲತೆಯ ವೈಭವ, ಕಟ್ಟುನಿಟ್ಟಾದ, ಕಠಿಣ ವ್ರತದ ಜೈನಧರ್ಮ ಹೀಗೆ ಹಲವಾರು ಮಗ್ಗಲುಗಳಿಂದ ತತ್ತರಿಸಿದ ಸಮುದಾಯಕ್ಕೆ ಬಸವಾದಿ ಶರಣರು, ಧೈರ್ಯ ತುಂಬಿ ಸ್ವಾಸ್ಥ್ಯ ಜೀವನಕ್ಕೆ ಏನು ಬೇಕು ಎಂಬುದನ್ನು ಅರಿತು ಅನುಭವ ಮಂಟಪದ ಮೂಲಕ ಅನುಷ್ಠಾನಕ್ಕೆ ತಂದರು. ಅಸಂಖ್ಯಾತ ಭಕ್ತವರ್ಗದ ಮನಸೆಳೆದು, ಎಲ್ಲ ಭಾಗಗಳಿಂದ ಕೂಡಿಕೊಂಡ ಶರಣ ಸಮೂಹವೇ ಕಲ್ಯಾಣವಾಯಿತು.

ಈ ಅಧ್ಯಾಯದಲ್ಲಿ ೧೨ನೇ ಶತಮಾನದಲ್ಲಿಯ ಸಾಮಾಜಿಕ ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ, ರಾಜಕೀಯ, ಈ ಹಂತಗಳಲ್ಲಿ ನಡೆಯುವ ಅಂಶಗಳ ಕುರಿತು ಚರ್ಚಿಸಿದಾಗ, ನವಸಮಾಜ ಕಟ್ಟುವಲ್ಲಿ ಶರಣ-ಶರಣೆಯರು ಕ್ರಾಂತಿಯ ಕಹಳೆಯ ಮೂಲಕ, ತಮ್ಮದೇ ಆದ ದಕ್ಷತೆಯ ವಿಚಾರಗಳನ್ನು ಬಳಸಿಕೊಂಡು ಪರಿಶುದ್ಧವಾದ ಗುರಿಯನ್ನು ಅನುಭವ ಮಂಟಪದ ಮೂಲಕ ಸಾಧಿಸಿದ್ದಾರೆ. ಸಂಸಾರದ ತಾಪತ್ರಯಗಳನ್ನು ಬದಿಗೊತ್ತಿ ಪರಧನ, ಪರಸ್ತ್ರೀಯರನ್ನು ಕಂಡು ಅಂಜುವಂಥದ್ದು ಎಂದು ಭಾವಿಸಿ, ಕಾಯಕ-ದಾಸೋಹ, ಸಮಾನತೆ, ಸಹಬಾಳ್ವೆ ಮುಂತಾದ ಅಂಶಗಳ ಸುಳಿಯಲ್ಲಿ ಮಿಂದು ತಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಂಡರು.

ಒಟ್ಟಾರೆಯಾಗಿ ೧೨ನೇ ಶತಮಾನದಲ್ಲಿ ನಡೆದ ಕ್ರಾಂತಿ ಮುಂದಿನ ದಿನಮಾನಗಳಲ್ಲಿ ನೆಟ್ಟಿರುವ ಮರ ಫಲಕೊಡುವಂತೆ, ಹಚ್ಚಿದ ದೀಪ ಬೆಳಕು ನೀಡುವಂತೆ ಎಂದು ತಿಳಿಯಬಹುದು. ಈ ಮೂಲಕ ಶಿವಶರಣರ ಹಾದಿಯಲ್ಲಿ ಅನೇಕ ತೊಂದರೆಗಳು ಬಂದರು, ನಿಟ್ಟುಸಿರು ಬಿಡದೆ, ಧೈರ್ಯದಿಂದ ಎದುರಿಸಿ, ಆಧ್ಯಾತ್ಮದ ಮಹಾಮಾರ್ಗದ ಮೂಲಕ ಶಿವಯೋಗ ಸಾಧನೆಯ ಪಥವನ್ನು ತಲುಪಿದ್ದು ನಿದರ್ಶನವಾಗಿದೆ.

**ಅಡಿಟಿಪ್ಪಣಿಗಳು**

೧. ಪಿ.ವಿ.ನಾರಾಯಣ, **ವಚನ ಪರಿಸರ,** ಪು.೧೧೨

೨. ಚೆನ್ನಕ್ಕ ಪಾವಟೆ, **ಶರಣ ಸಂಸ್ಕೃತಿ-ಮುಖಾಮುಖಿ,** ಪು.೨೦

೩. ಶ್ರೀಮತಿ ಎಚ್.ಎಸ್.(ಸಂ), **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,** ಪು.೩೯

೪. ವೀರಣ್ಣ ರಾಜೂರ, **ಶಿವಶರಣೆಯರ ವಚನ ಸಂಪುಟ,** ಪು.೨೮೯

೫. ಅದೇ, ಪು.೨೨೭, ವಚನ ಸಂಖ್ಯೆ ೬೯೬

೬. ಅದೇ, ಪು.೨೬೦

೭. ವೀರಣ್ಣ ರಾಜೂರ, **ಶಿವಶರಣೆಯರ ವಚನ ಸಂಪುಟ,** ವಚನ ಸಂಖ್ಯೆ ೯೪೫, ಪು.೩೦೨

೮. ಡಾ.ಪ್ರೀತಿ ಶುಭಾಚಂದ್ರ, ಸೃಜನತೆಯ ಮೂಡು, ಪು.೨೬೨

೯. ವೀರಣ್ಣ ರಾಜೂರ, **ಶಿವಶರಣೆಯರ ವಚನ ಸಂಪುಟ,** ಪು.೧೦೪, ವ.ಸ.೩೩೩

೧೦. ಬರಗೂರು ರಾಮಚಂದ್ರಪ್ಪ(ಸಂ), **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ,** ಪು.೨೦

೧೧. ನಾರಾಯಣ ಕೆ.ವಿ., **ವಚನ-ನಿರ್ವಚನ,** ಪು.೧೭೦, ೧೭೧

೧೨. ವೀರಣ್ಣ ರಾಜೂರು, **ಶಿವಶರಣೆಯರ ವಚನ ಸಂಪುಟ,** ಪು.೨೬೯, ವ.ಸಂ.೮೪೮

೧೩. ಜಯಶ್ರೀ ದಂಡೆ, **ಫಲದೊಳಗಿನ ರುಚಿ,** ಪು.೧೦೫, ೧೦೬

೧೪. ಬಿ.ವ್ಹಿ.ಮಲ್ಲಾಪುರ, **ಸುಧಾರ್ಣವ ೧,** ಪು.೨೭೯

೧೫. ಮ.ನ.ಜವರಯ್ಯ, **ದಲಿತ ವರ್ಗದ ಶರಣರು ಮತ್ತು ಶರಣೆಯರು: ಒಂದು ಅಧ್ಯಯನ,** ಪು.೧೨೧–೧೨೨

೧೬. ಚಂದ್ರಶೇಖರ ವಸ್ತ್ರದ(ಸಂ), **ನಿರ್ವಚನ,** ಪು.೭೧

೧೭. ವಿ.ವ್ಹಿ. ಮಲ್ಲಾಪುರ(ಸಂ), **ಅಲ್ಲಮಪ್ರಭುದೇವರ, ವಚನ ಸಂಪುಟ,** ಪು.

೧೮. ಡಾ.ಪಿ.ವಿ.ನಾರಾಯಣ, **ವಚನಸಾಹಿತ್ಯ,** ಪು.೬೮

೧೯. ವೀರಣ್ಣರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ,** ಪು.೨೭೧, ವ.ಸಂ.೮೫೪

೨೦. ಬಸವರಾಜ ಹೂಗಾರ, **ಅನುಭಾವದ ಮುಕುಟ ಮಣಿ, ಮುಕ್ತಾಯಕ್ಕ, ಬಸವಪಥ,** ಸಂಪುಟ ೧೯, ಸಂಚಿಕೆ ೩ ಮತ್ತು ೭, ಪು.೩೩, ೧೯೯೭, ಮೇ ಮತ್ತು ಅಕ್ಟೋಬರ್, ಲೇಖನ–ಅನುಭಾವದ ಮುಕುಟ ದುವಿ–ಮುಕ್ತಾಯಕ್ತ, ಲೇಖಕ ಬಸವರಾಜ ಹೂಗಾರ.

೨೧. ವೀರಣ್ಣ ರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ,** ಪು.೯೪, ವ.ಸಂ.೩೦೫

೨೨. ಅದೇ, ಪು.೧೫೩, ವ.ಸಂ.೪೭೫

೨೩. ಬಿ.ವಿ.ಮಲ್ಲಾಪುರ(ಸಂ), **ಅಲ್ಲಮಪ್ರಭುದೇವರ ವಚನ** ಸಂಪುಟ, ಪು.

೨೪. ಚ.ಸುಂದರೇಶನ್(ಸಂ), **ಹನ್ನೊಂದನೆಯ ಶತಮಾನದ ವೀರಶೈವ ಉತ್ಕ್ರಾಂತಿ,** ಪು.೧೭೨

೨೫. ಅದೇ, ಪು.೧೭೩

೨೬. ಎಂ.ಚಿದಾನಂದಮೂರ್ತಿ, **ವಚನ ಸಾಹಿತ್ಯ,** ಪು.೪

೨೭. ಡಾ.ಪಿ.ವಿ.ನಾರಾಯಣ, **ವಚನ ಸಾಹಿತ್ಯ,** ಪು.೭೧

೨೮. ಎಸ್.ವಿದ್ಯಾಶಂಕರ(ಸಂ), **ಸಿದ್ಧರಾಮೇಶ್ವರ ವಚನ ಸಂಪುಟ,** ವ.ಸಂ.೧೨೯೩, ಪು.೩೬೦

೨೯. ವೀರಣ್ಣ ರಾಜೂರು(ಸಂ), **ಶಿವಶರಣೆಯರ ವಚನಸಂಪುಟ,** ವ.ಸಂ.೨೫೨, ಪು.೭೮

೩೦. ಶಾಂತಾ ಇಮ್ರಾಪುರ, **ನಿರ್ಭಯದ ನಿಲುವು,** ಪು.೧೦೦

೩೧. ಅದೇ, ಪು.೧೦೧, ೧೦೨

೩೨. ವೀರಣ್ಣ ರಾಜೂರ, **ಶಿವಶರಣೆಯರ ವಚನಸಂಪುಟ,** ಪು.೨೦೦, ವ.ಸಂ.೬೨೮

೩೩. ಅದೇ, ಪು.೧೪೩, ವ.ಸಂ.೪೪೬

೩೪. ಅದೇ, ಪು.೧೯೫, ವ.ಸಮ.೬೧೯

೩೫. ಪಿ.ವಿ.ನಾರಾಯಣ, **ವಚನ ಸಾಹಿತ್ಯ**, ಪು.೭–೮

೩೬. ಎಂ.ಚಿದಾನಂದಮೂರ್ತಿ, **ವಚನ ಸಾಹಿತ್ಯ**, ಪು.೨೮

೩೭. ಪಿ.ವಿ.ನಾರಾಯಣ, **ವಚನ ಸಮಗ್ರ**, ಪು.೨೨೨

೩೮. ಎಸ್.ಸಿದ್ದಲಿಂಗಯ್ಯ, **ಬಸವಪಥ**, **ಲೇಖನ: ವಚನಗಳಲ್ಲಿ ಮೌಲ್ಯ ವಿವೇಚನೆ**, ಪು.೪೯

೩೯. ವೀರಣ್ಣರಾಜೂರು(ಸಂ), **ಮಹಾಂತ ಜ್ಯೋತಿ**, ಪು.೨೩

೪೦. ಮಹಾದೇವಿ ಆರ್. ಹಿರೇಮಠ, **ಬಸವಣ್ಣನವರ ವಚನಗಳಲ್ಲಿ ಮಾನವಾದ**, ಪು.೧೯

೪೧. ಅದೇ, ಪು.೧೯

೪೨. ವೀಣಾಶಾಂತೇಶ್ವರ(ಸಂ), **ಮಹಿಳಾ ಅಧ್ಯಯನ**, ಪು.೧೪೪

೪೩. ವೀರಣ್ಣರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ**, ಪು.೩೧೬, ವ.ಸಂ.೧೮೩

೪೪. ಬಿ.ಆರ್.ಹಿರೇಮಠ, **ಸಮಗ್ರ ವಚನ ಸಂಪುಟ ೮**, ಪು.೭೨೦, ವ.ಸಂ.೨೧೫೨

೪೫. ಪ್ರೀತಿ ಶುಭಚಂದ್ರ, **ಸೃಜನೆಯ ಮೂಡು**, ಪು.೨೩೩

೪೬. ವೀರಣ್ಣ ರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ**, ಪು.೭೧, ವ.ಸಂ.೨೩೧(೨೩೦)

೪೭. ಪ್ರೀತಿ ಶುಭಚಂದ್ರ, **ಶೃಜನೇಯ ಮೂಡು**, ಪು.೨೩೪–೨೩೫

೪೮. ಅದೇ, ಪು.೨೩೬–೨೩೭

೪೯. ವೀರಣ್ಣ ರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ**, ಪು.೨೨, ವ.ಸಂ.೫೩

೫೦. ಅಕ್ಕಮಹಾದೇವಿ ಆರ್., **ಸರಗಣಾಚಾರ್, ವಚನಕಾರ್ತಿಯರ ವಚನಗಳ ಆಶೆಯ ಮತ್ತು ಅಭಿವ್ಯಕ್ತಿ**, ಪು.೨೧

೫೧. ಶೈಲಜಾ ಉಡಚಣಾ, **ವಚನ ಸಾಹಿತ್ಯ ಮತ್ತು ಮಹಿಳೆ**, ಪು.೭೦–೭೧

೫೨. ಎಸ್.ವಿದ್ಯಾಶಂಕರ(ಸಂ), **ವಚನಗಳು**, ಪು.೩, ವ.ಸಂ೯

೫೩. ಎಂ.ಚಿದಾನಂದಮೂರ್ತಿ(ಸಂ), **ವಚನ ಸಾಹಿತ್ಯ**, ಪು.೧೦೬

೫೪. ವಿಜಯಶ್ರೀ ಸಬರದ, **ಬಸವಪಥ**, ೨೦೦೦, ಪು.೨೧

೫೫. ಅದೇ, ಪು.೨೨

೫೬. ಶಾಂತಾ ಇಮ್ರಾಪೂರ, **ಧರ್ಮ ಮಹಿಳೆ ಮತ್ತು ಸಮಾಜ**, ೨೦೦೧ ಪು.೪೮

೫೭. ಶಂಕರಗೌಡ ಮ.ಬಿರಾದಾರ, **ಲಿಂಗಾನುಭಾವಿ, ನೀಲಾಂಬಿಕೆ**, ಪು.೧

೫೮. ಜಿ.ಎಸ್.ಹನ್ನೆರಡುಮಠ, **ರಜತ ದಿಪ್ತಿ**, ಪು.೬೭

೫೯. ಜಯದೇವಪ್ಪ ಜೈನಕೇರಿ, **ಶರಣ ಸಂಪದ,** ಪು.೧೭೪

೬೦. ಶ್ರೀಮತಿ ಶಿವಲಿಂಗಮ್ಮ ಕಟ್ಟಿ, **ಶರಣೆಯರ ಸುಳ್ಳು ನುಡಿಗಳು,** ಪು.೮೬

೬೧. ಪ್ರೀತಿ ಶುಭಚಂದ್ರ, **ಸೃಜನಯ ಮೂಡು,** ಪು.೨೪೭

೬೨. ಎಂ.ಚಿದಾನಂದಮೂರ್ತಿ, **ವಚನ ಸಾಹಿತ್ಯ,** ಪು.೧೧೨

೬೩. ವೀರಣ್ಣರಾಜೂರು(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೯, ವ.ಸಂ.೬೭೬

## ಅಧ್ಯಾಯ ಮೂರು

# ಗಂಗಾಂಬಿಕೆಯ ಇತಿವೃತ್ತ

## ಅಧ್ಯಾಯ ಮೂರು

# ಗಂಗಾಂಬಿಕೆಯ ಇತಿವೃತ್ತ

ವಚನ ಚಳವಳಿ ಸಾಹಿತ್ಯಕವಾಗಿ ಮಾತ್ರವಲ್ಲದೇ ಸಾಂಸ್ಕೃತಿಕವಾಗಿ ಕೂಡಾ ಸಂಚಲನವನ್ನು ಮೂಡಿಸಿತ್ತು. ಜಾತೀಯತೆ, ಶಿಕ್ಷಣ, ಸಮಾನತೆ, ಲಿಂಗಭೇದ ಮೊದಲಾದ ವಿಚಾರಗಳನ್ನು ತನ್ನ ಕಾರ್ಯಸೂಚಿಯಾಗಿ ಮಾಡಿರುವುದೇ ಅದರ ಸಾಂಸ್ಕೃತಿಕ ನಿಲುವಿಗೆ ಸ್ಪಷ್ಟ ನಿದರ್ಶನವೆನಿಸಿದೆ. ಈ ಹಂತದಲ್ಲಿ ಅನುಭವ ಮಂಟಪದಲ್ಲಿ ಸ್ತ್ರೀಪರ ಕಾಳಜಿ, ಗೌರವ, ಆದರಗಳು ಮೂಡಿದವು. ಅಕ್ಕನಿಂದಲೇ ಈ ವಿಚಾರಕ್ಕೆ ನಾಂದಿಯಾದರೂ ಪ್ರವರ್ಧಮಾನಕ್ಕೆ ಬಂದಿದ್ದು ಅನೇಕ ಶರಣೆಯರು ಅಲ್ಲಿ ಪಾಲ್ಗೊಂಡಾಗ. ಈ ಸಂಚಲನಕ್ಕೆ ಎಲ್ಲ ಶರಣರು ಇಂಬುಕೊಟ್ಟಿದ್ದು ವಿಶೇಷ. ಬಹುತೇಕ ಶರಣ ದಂಪತಿಗಳು ಈ ಅಂಶವನ್ನು ಪ್ರಾಯೋಗಿಕವಾಗಿ ತಮ್ಮ ನಿಜ ಜೀವನದಲ್ಲಿ ಬದುಕಿ ಬಾಳಿ ತೋರಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಇಡೀ ವಚನ ಚಳವಳಿಗಳ ಅಧ್ವೈರ್ಯ ಬಸವಣ್ಣನವರ ಮನೆಯಲ್ಲಿ ಹಾಗೂ ಸಂಸಾರದಲ್ಲಿ ವಚನ ಚಳವಳಿ ಯಾವ ರೀತಿ ಪ್ರಭಾವ ಬೀರಿತ್ತು ಮತ್ತು ವಚನ ಚಳವಳಿಗೆ ಅವರ ಕುಟುಂಬದ ಕೊಡುಗೆ ಏನು ಎನ್ನುವುದು ಅಕ್ಷರಗಳಲ್ಲಿ ಸಾಧಿಸಬಹುದಾದ ಸಾಧ್ಯತೆ ಬಹಳ ಕಡಿಮೆ. ವಚನ ಕ್ರಾಂತಿಯ ಕಣ್ಮಣಿಗಳಾದ ಗಂಗಮ್ಮ ಮತ್ತು ನೀಲಮ್ಮರು ನಿಭಾಯಿಸಿದ ಬಗೆ, ಅವರ ಚರಿತ್ರೆಯೂ ಹೌದು, ವಚನ ಚಳವಳಿಯ ಅಂಶವೂ ಹೌದು. ಹಾಗಾಗಿ ಅದನ್ನು ಪರಾಮರ್ಶಿಸುವ ಪ್ರಯತ್ನವಾಗಿ ಈ ಅಧ್ಯಯನ ನಡೆದಿದೆ. ಇಲ್ಲಿ ಕಣ್ಮಣಿಗಳಾದ ಎಂಬ ಪ್ರಯೋಗದಿಂದಲೇ ಯಾವ ಕಣ್ಣು ಶ್ರೇಷ್ಠ ಎಂಬ ಪ್ರಶ್ನೆ ಇಲ್ಲದಾಗಿದೆ. ಆಯಾ ಕಣ್ಣು ಇಡೀ ವ್ಯಕ್ತಿತ್ವಕ್ಕೆ ಕೊಡುವ ಸಮಗ್ರತೆಯ ನೋಟ ಇಲ್ಲಿ ಮಹತ್ವದ್ದಾಗಿದೆ.

ಬಸವಣ್ಣನವರ ಪತ್ನಿಯರಲ್ಲಿ ಒಬ್ಬರಾದ ಗಂಗಮ್ಮ ಈ ಅಧ್ಯಯನದ ಕೇಂದ್ರ ಬಿಂದು. ಆಕೆಯ ಬಗೆಗೆ ಸಾಹಿತ್ಯ, ಚರಿತ್ರೆ, ಐತಿಹ್ಯ ಎಲ್ಲವೂ ಮೌನವಾಗಿದೆ. ಆಕೆಯೇ ರಚಿಸಿದ ಸಾಹಿತ್ಯ ಕೂಡ ಬೆರಳೆಣಿಕೆಯಷ್ಟೇ. ಆದರೆ ಅಷ್ಟೇ ಸಾಹಿತ್ಯದಿಂದ ಸಮಗ್ರವನ್ನು ಇದಮಿತ್ಥಂ

ಎಂದು ಹೇಳಲಾಗದೆ ಹೋದರೂ ಕೂಡ ದೊರಕುವ ಹಲವಾರು ಮಾಹಿತಿಗಳಿಂದ ಅವಳ ವಿವರ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಮೌಖಿಕ(ಐತಿಹ್ಯ)ಐತಿಹಾಸಿಕ, ಕಾವ್ಯಪುರಾಣ ವಿಮರ್ಶೆ/ ಅಭಿಪ್ರಾಯ, ಅಧ್ಯಯನದ ನೆಲೆಗಳನ್ನು ವಿಭಿನ್ನ ಆಕರಗಳಾಗಿ ಸ್ವೀಕರಿಸಿ ಅವಳ ಜೀವನವನ್ನು ನಿರೂಪಿಸಲಾಗಿದೆ.

ವಚನ ಚಳವಳಿ ಅನೇಕ ಶರಣೆಯರಿಗೂ ಸ್ಫೂರ್ತಿಯಾಗಿತ್ತು. ಶರಣೆಯರು ದಾಸೋಹ, ವಚನ ರಚನೆ ಮೊದಲಾದ ಕಾಯಕದ ಮೂಲಕ ತಮ್ಮ ಅಸ್ಮಿತೆಯನ್ನು ಸಾಧಿಸಿದವರು. ಪರಿಸರವೇ ಶರಣತ್ವದಿಂದ ತುಂಬಿದಾಗ ಮಹಾಮನೆಯಲ್ಲಿ ಈ ಬೆಳಕು ಮೂಡದಿರಲು ಸಾಧ್ಯವಿಲ್ಲ. ಅಂತೆಯೇ ಈ ಚಳವಳಿಯ ಅದ್ವೈರ್ಯು, ಬಸವಣ್ಣನವರ ಮನೆಯಲ್ಲಿ ವಾತಾವರಣ ಯಾವ ರೀತಿ ಪ್ರಭಾವ ಬೀರಿತ್ತು ಎಂಬುದನ್ನು ಅರಿಯಬೇಕಾದರೆ ಮಹಾಮನೆಯ ಕಣ್ಣುಗಳಂತಿರುವ ಗಂಗಮ್ಮ ಮತ್ತು ನೀಲಮ್ಮರನ್ನು ಗಮನಿಸಲೇಬೇಕು.

ಈ ಹಿನ್ನೆಲೆಯಲ್ಲಿ ಗಂಗಮ್ಮ ನೀಲಮ್ಮರನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಸಾಹಿತ್ಯಕ ಹಾಗೂ ಇತರ ಅಕರಗಳ ಮೂಲಕ ತಕ್ಕಮಟ್ಟಿಗೆ ಇದಮಿತ್ಥಂ ಎಂಬುದನ್ನು ಸಾಧಿಸಲು ಪ್ರಯತ್ನಿಸಲಾಗಿದೆ. ಹಾಗಾಗಿಯೇ ರಂಜನೀಯ ಜೀವನ ಚರಿತ್ರೆಯಾಗಿಸದೇ ವ್ಯಕ್ತಿತ್ವ ನಿರ್ಮಾಣದ ಮೂಲಕ ವ್ಯಕ್ತಿಚಿತ್ರವಾಗಲು ಪ್ರಯತ್ನಿಸಲಾಗಿದೆ. ಗಂಗಮ್ಮ, ನೀಲಮ್ಮರ ವ್ಯಕ್ತಿತ್ವ ಚಿತ್ರಣ ಇಲ್ಲಿನ ಬಹುಮುಖ್ಯ ವಿಷಯ.

ಜೀವನದ ವಿವರ, ಜೀವನ ಚರಿತ್ರೆಯಾಗದಂತೆ ಹುಟ್ಟು, ಬಾಲ್ಯ, ಯೌವ್ವನಗಳನ್ನು ಒಳಗೊಂಡ ಹಲವಾರು ಚರ್ಚೆಗಳನ್ನು ಮಂಡಿಸುವ ಮೂಲಕ ಅದನ್ನೊಂದು ಭಿನ್ನ ಬಗೆಯಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ. ಅಧ್ಯಯನದ ಅನುಕೂಲತೆಗಾಗಿ ಮೂರು ಘಟ್ಟ ಅಥವಾ ಹಂತಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಅಧ್ಯಯನದ ಅಗತ್ಯತೆಗಾಗಿ ೩ ಹಂತಗಳಾಗಿ ವಿಭಾಗಿಸಿ ಕೊಳ್ಳಲಾಗಿದೆ.

### ೧. ಹುಟ್ಟಿನಿಂದ ಬಸವಣ್ಣನ ಬಾಳಿನಲ್ಲಿ ಬರುವವರೆಗೆ

ಗಂಗಾಂಬಿಕೆ ಪ್ರಮುಖ ವಚನಕಾರ್ತಿ. ಆಕೆ ಬಲದೇವ ಮಂತ್ರಿಯ ಮಗಳು. ಈಕೆಯ ತಂದೆ ಸಿದ್ಧರಸನೆಂದು ಹರಿಹರ ಹೇಳಿದರೆ, ಭೀಮಕವಿ ಲಕ್ಕಣ್ಣದಂಡೇಶ ಮೊದಲಾದ ಕವಿಗಳೂ ಬಲದೇವ ದಂಡನಾಯಕನೆಂದು ಹೇಳುತ್ತವೆ. ಹಾಗೆ ಈಕೆಯ ತಂದೆಯ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈಕೆಯ ಬದುಕು ಹಲವು ಮಜಲುಗಳಲ್ಲಿ ಸಾಗಿ ಬಸವಣ್ಣನವರ ಬಾಳಿಗೆ ಸಾಗಿದಾಗ ಮತ್ತೊಂದು ತಿರುವು ಕಾಣಬಹುದು. ಈಕೆಯ ಬಾಲ್ಯದ ಬಗ್ಗೆ ಸ್ಪಷ್ಟ ನಿಲುವು ಇಲ್ಲ. ಈಕೆಯ ಬದುಕನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

## ೧.೧. ಗಂಗಾಂಬಿಕೆಯ ಜನನ, ತಂದೆ ತಾಯಿ

ಗಂಗಾಂಬಿಕೆಯ ತಂದೆ ಬಲದೇವ ಮಂತ್ರಿ ಎಂದು ಭೀಮಕವಿಯ ಬಸವ ಪುರಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಷಡಕ್ಷರಿ ದೇವನ ಬಸವರಾಜ ವಿಜಯಂ, ಗರಣಿಯ ಬಸವಲಿಂಗನ ಬಸವೇಶ್ವರ ಕಾವ್ಯ, ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ ಮುಂತಾದ ಕಾವ್ಯಗಳು ಅಂದರೆ ಲಿಖಿತ ಕಾವ್ಯಗಳಲ್ಲಿ ಮತ್ತು ಕರಪಾಲ ಬಸವ ಪುರಾಣ, ಜನಪದ ಬಸವಪುರಾಣಗಳಾದ ಮೌಖಿಕ ಕಾವ್ಯಗಳಲ್ಲಿ ದಾಖಲಿಸಲಾಗಿದೆ. ಆದರೆ ಹರಿಹರ ಕವಿ ಮಾತ್ರ ಈಕೆಯ ತಂದೆ ಸಿದ್ಧರಸನೆಂದು ಹೇಳುತ್ತಾನೆ. ಗಂಗಾಂಬಿಕೆಯ ತಾಯಿಯ ಹೆಸರು ಯಾವ ಕಾವ್ಯಗಳಲ್ಲಿ ಬರುವುದಿಲ್ಲ. ಹಾಗೂ ತಂದೆಯಾದ ಬಲದೇವ ಮಂತ್ರಿಯ ಹೆಸರನ್ನು ಕ್ರಿ.ಶ.೧೧೬೩ರ (ಶಾಸನ) ಕುಕನೂರ ಶಾಸನವು.

> "ಇನ್ತೆನಿಸಿದ ಕುಕ್ಕನೂರ ಆಮೂವತ್ತಱ ಪಲವುಂ
> ಬಾಡಂಗಳಧಿಕಾರಿ ಮಹಾಪ್ರಧಾನಂ ದಂಡನಾಯಕ
> ಬಲದೇವಯ್ಯನ ಕರಣಂಗವಿ ಬಿನ್ನಪದಿಂ"[೧]



ಎಂದು ಉಲ್ಲೇಖಿಸುತ್ತದೆ. ಅಂದರೆ ಬಿಜ್ಜಳನ ಆಳ್ವಿಕೆಯ ಕಾಲದಲ್ಲಿ ಕುಕನೂರ ಮೂವತ್ತರ ಹಲವು ಬಾಡಗಳ ಅಧಿಕಾರಿ ಮಹಾಪ್ರಧಾನ ದಂಡನಾಯಕ ಬಲದೇವಯ್ಯ ಆಗಿದ್ದಾನೆ ಎಂದು ಶಾಸನ ದಾಖಲಿಸಿದೆ. ಇಲ್ಲಿ ಉಲ್ಲೇಖಗೊಂಡ ಬಲದೇವನು ಕಾವ್ಯಗಳಲ್ಲಿ ಪ್ರಸ್ತಾಪವಾಗುವ ಬಲದೇವನೇ ಎಂದು ಊಹಿಸಬಹುದಾಗಿದೆ. ಕ್ರಿ.ಶ.೧೧೬೩ರ ಅವಧಿಯದಾದ್ದರಿಂದ ಬಿಜ್ಜಳನ ದಂಡಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ವಿವರಕ್ಕೆ ಇದು ಹತ್ತಿರವಿರುವುದರಿಂದ ಈ ರೀತಿ ಊಹಿಸಬಹುದಾಗಿದೆ. ಇದರಿಂದ ಗಂಗಾಂಬಿಕೆ ತಂದೆ ಬಲದೇವನು ಬಿಜ್ಜಳನಲ್ಲಿ ಮಹಾದಂಡ ನಾಯಕನಾಗಿದ್ದ ಎಂಬ ವಿಚಾರ ತಿಳಿದುಬರುತ್ತದೆ. ಅದೇ ರೀತಿ ಬೀದರ ಜಿಲ್ಲೆಯ ಕ್ರಿ.ಶ.೧೧೬೯ರ ರಂಜೇರ ಶಾಸನವು,

> "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮ[ಣ್ಡ]
> [ಳೆ]ಶ್ವರಂ ಬಲದೇವರಸ ಕಯ್ಯಲು ಧಾರಪೂರ್ಬ್ಬಕಮಾಗೆ
> ಪಡೆದು ಪರಮೇಶ್ವರ ದತ್ತಿಯಾಗಿ ಮಾಡಿ ಸಕವರ್ಷ
> ೧೦೯೧ನೆಯ ಕಳಚುರಿಯ ಭು[ಜ]
> ಬಟಿ ಚಕ್ರವರ್ತ್ತಿರಾಯ ಮುರಾರಿ ಸೋಯಿದೇವ ವರ್ಷದ ೨ನೆಯ
> ಸರ್ವ್ವಧಾರಿ ಸಂವತ್ಸರ ದುತ್ತರಾಯಣ ಸಂಕ್ರಮಣದೊಳು ಹಲವು
> ಮಹಾದಾನಂಗಳಮ್ಮಾಡಿ"[೨]

ಎಂದು ಉಲ್ಲೇಖಿಸುತ್ತದೆ. ಈ ಶಾಸನದ ಪ್ರಕಾರ ೧೧೬೭ರವರೆಗೆ ಸಹ ಗಂಗಾಂಬಿಕೆ ತಂದೆ ಬದುಕಿದ್ದನು ಎಂದು ತಿಳಿಯುತ್ತದೆ. ರಾಯಮುರಾರಿ ಸೋವಿದೇವನಿಗೂ ಬಲದೇವ ಮಂತ್ರಿಯಾಗಿದ್ದನು ಎಂದು ಊಹಿಸಬಹುದಾಗಿದೆ. ಕಾವ್ಯಗಳು ಹೇಳುವ ಬಲದೇವ ಮಂತ್ರಿ ಈ ಶಾಸನ ಹೇಳುವ ಬಲದೇವರಸ ಒಂದೇ ಎಂದು ಗ್ರಹಿಸಬಹುದಾಗಿದೆ. ಇವೆರಡೂ ಶಾಸನಗಳು ಬಲದೇವ ಕರ್ನಾಟಕದಲ್ಲಿಯೇ ಇದ್ದದ್ದನ್ನು ಹೇಳುತ್ತವೆ. ಮಂಗಳವೇಡಿಯಲ್ಲಿ ಇದ್ದಿರಬಹುದಾದರೂ ಕಲ್ಯಾಣಕ್ಕೆ ರಾಜಧಾನಿ ವರ್ಗಾವಣೆಯಾಗಿರು ವುದನ್ನು ಇದು ಸೂಚಿಸುತ್ತಿರಬಹುದು. ಆದರೂ ಇಂಗಳೇಶ್ವರದವರಾದ್ದರಿಂದ ಇದನ್ನು ಊಹಿಸ ಬಹುದಾಗಿದೆ ಅಥವಾ ಕರ್ನಾಟಕ ಮಹಾರಾಷ್ಟ್ರ ಗಡಿರೇಖೆಗಳು ಇಲ್ಲದಿರಬಹುದು.

ಡಾ.ಎಂ.ಚಿದಾನಂದಮೂರ್ತಿಯವರು ಗಂಗಾಂಬಿಕೆಯ ತಂದೆಯ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ. "ಗಂಗಾದೇವಿ ಬಿಜ್ಜಳನ ಬಳಿ ಇನ್ನೊಬ್ಬ ಅಧಿಕಾರಿಯಾಗಿದ್ದ ಬಲದೇವನ ಮಗಳು."[೩] ಇವರ ಪ್ರಕಾರ ಬಲದೇವನೆ ಈಕೆಯ ತಂದೆಯಾಗಿದ್ದಾನೆ. ಅಲ್ಲದೇ ಇಂಗಳೇಶ್ವರ ಕ್ಷೇತ್ರ ಕಾರ್ಯ ಸಮಯದಲ್ಲಿ ಅಲ್ಲಿಯ ಚನ್ನಬಸವ ಸ್ವಾಮಿಗಳು ಬಲದೇವ ಮೂಲತಃ ಇಂಗಳೇಶ್ವರ ಕುಲಕರ್ಣಿ ಮನೆತನದವರು ಆಗಿದ್ದಾರೆ ಎಂದು.

ವಾಸುದೇವ

ಬಲದೇವ (ಮಂಗಳವೇಡಿಗೆ ಹೋದರು) | ನೀಲಕಂಠ | ಶಿವರಾಮ (ಮಂಗಳವೇಡಿಗೆ ಹೋದರು)

ನೀಲಕಂಠ → ಶಿವರಾಮ → ಚನ್ನಬಸವ

ಈ ಮೇಲಿನ ವಂಶಾವಳಿಯನ್ನು ತಿಳಿಸಿದರು. ಹಾಗೂ ಬಲದೇವನು ಮಂಗಳವೇಡಿಗೆ ಹೋದ ಬಗ್ಗೆ ತಿಳಿಸುವುದರಿಂದ, ಗಂಗಾಂಬಿಕೆಯ ಜನ್ಮಸ್ಥಳ ಮಂಗಳವೇಡೆಯಾಗಿದೆ ಎನ್ನಬಹುದು. ಬಲದೇವ ಅಥವಾ ಸಿದ್ಧರಸರು ಇಂಗಳೇಶ್ವರದವರು. ಮಂಗಳವೇಡಿಯಲ್ಲಿ ಮಹಾಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ಮಂಗಳವೇಡಿಯಲ್ಲಿ ನೆಲೆಸಿರುವಂತೆ ತೋರುತ್ತದೆ. ಚನ್ನಬಸವ ಸ್ವಾಮಿಗಳ ಹೇಳಿಕೆಯಂತೆ ಗಂಗಾಂಬಿಕೆ ಜನ್ಮಸ್ಥಳ ಮಂಗಳವೇಡಿ ಎಂದು ಹೇಳಬಹುದು.

"ಪೆರ್ಮಾಡಿಯ ನಂತರ ಆತನ ಮಗನಾದ ಎರಡನೆಯ ಬಿಜ್ಜಳ ಕ್ರಿ.ಶ.೧೧೩೦ರ ಸುಮಾರಿಗೆ ಮಂಗಳವೇಡದಿಂದ ಆಳ್ವಿಕೆಯನ್ನು ಪ್ರಾರಂಭ ಮಾಡುತ್ತಾನೆ"[೪] ಎಂದು ಶಿವಕುಮಾರ ಪಾವಟೆಯವರ ಹೇಳಿಕೆಯನ್ನು ಗಮನಿಸಿದಾಗ ಮಂಗಳವೇಡಿಯಲ್ಲಿಯೇ ಬಿಜ್ಜಳ ಆಳುತ್ತಿದ್ದ,

ಎಂದರೆ ಅಲ್ಲಿ ಬಲದೇವನು ಮಂತ್ರಿಯಾಗಿದ್ದ ಹಾಗಾಗಿ ಮಂಗಳವೇಡ ಗಂಗಾಂಬಿಕೆಯ ಜನ್ಮಸ್ಥಳವಾಗಿತ್ತೆನ್ನಬಹುದು. ಹರಿಹರ ಬಸವರಾಜ ದೇವರ ರಗಳೆಯಲ್ಲಿ "ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ..."[೫] ಎಂಬ ಉಲ್ಲೇಖವನ್ನು ನೀಡಿ ಮಂಗಳವೇಡಿಯನ್ನು ರಾಜಧಾನಿಯನ್ನಾಗಿ, ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ, ಈತನ ಮಂತ್ರಿಯಾಗಿ ಸಿದ್ಧರಸ ಕಾರ್ಯನಿರ್ವಹಿಸುತ್ತಿದ್ದರಿಂದ, ಅಲ್ಲಿಯೇ ವಾಸಿಸುತ್ತಿರಬೇಕು. ಹಾಗಾಗಿ ಮಂಗಳವೇಡಿಯಲ್ಲಿಯೇ ಗಂಗಾಂಬಿಕೆ ಜನಿಸಿರಬೇಕು ಎಂದು ಊಹಿಸಬಹುದು. ಹಾಗೂ ಹರಿಹರ ಮಂಗಳವೇಡಿಯ ಹೆಸರನ್ನು ಸೂಚಿಸಿದ್ದರಿಂದ ಈಕೆಯ ಜನನ ಇಲ್ಲಿಯೇ ಆಗಿರಬಹುದು.

ಗಂಗಾಂಬಿಕೆಯ ಕಾಲವನ್ನು ಡಾ.ಎಂ.ಗಾಯತ್ರಿಯವರ ಅಭಿಪ್ರಾಯದಂತೆ "ಗಂಗಾಂಬಿಕೆಯು ಬಸವಣ್ಣನವರ ಪತ್ನಿಯಾಗಿರುವುದರಿಂದ ಈಕೆಯ ಕಾಲ ಕ್ರಿ.ಶ.೧೧೬೦ ಎಂಬ ನಿರ್ದಿಷ್ಟವಾದ ತೀರ್ಮಾನಕ್ಕೆ ಸಾಹಿತ್ಯ ಚರಿತ್ರೆಕಾರರು ಬಂದಿರುತ್ತಾರೆ."[೬] ಈ ಹೇಳಿಕೆಯನ್ನು ಗಮನಿಸಿದಾಗ ಈಕೆಯ ಕಾಲದ ಬಗ್ಗೆ ಸ್ಪಷ್ಟವಾದ ಮಾಹಿತಿ ಸಿಗುವುದಿಲ್ಲ. ಈ ಹೇಳಿಕೆಯನ್ನು ಅನುಲಕ್ಷಿಸಿ ಹೇಳುವುದಾದರೆ ೧೧೩೫ ರಿಂದ ೧೧೭೦ರ ಕಾಲ ಎಂದು ಹೇಳಬಹುದಾಗಿದೆ. ಈ ಎಲ್ಲ ವಿಚಾರಗಳನ್ನು ಆಕರಗಳ ಮೂಲಕ ಹೇಳಬಹುದೆ ವಿನಃ ಸ್ಪಷ್ಟತೆ ಇಲ್ಲ.

ಈಕೆಯ ಜನನ ಎಲ್ಲಿಯಾಯಿತು. ತಾಯಿಯ ಊರು ಹಾಗೂ ಈಕೆಯ ಕಾಲದ ಬಗ್ಗೆ ಕವಿಗಳು ಮೌನವಹಿಸಿದ್ದಾರೆ ಹಾಗೂ ಶಾಸನ, ಮೌಖಿಕಗಳಲ್ಲಿ ಕೂಡ ಈಕೆಯ ಜನನ, ತಾಯಿ, ಕಾಲದ ಕುರಿತಾಗಿರುವಂತೆ ಮಾಹಿತಿ ಲಭ್ಯವಿಲ್ಲ. ಹಾಗಾಗಿ ಸಾಹಿತ್ಯಿಕ ಆಕರಗಳ ಪ್ರಕಾರ ಈಕೆ ಬಲದೇವಾತ್ಮಜೆ ಎನ್ನಲಾಗಿದೆ.

## ೧.೨. ಬಾಲ್ಯ

ಈಕೆಯ ಬಾಲ್ಯ ಕುರಿತು ಮೌಖಿಕ ಮತ್ತು ಚಾರಿತ್ರಿಕ ಮಾಹಿತಿ ಸಿಗುವುದಿಲ್ಲ. ಆದರೆ ಭೀಮಕವಿಯ ಬಸವಪುರಾಣದಲ್ಲಿ ಈ ರೀತಿ ತಿಳಿದು ಬರುತ್ತದೆ.

"ಬಾಲಕಿಯ ಮೆಲ್ಲಡಿಗಳೆಮ್ಮಯ
ಮೇಲೆ ಬಂದಪವೆಂದು ಪಂಕರು
ಹಾಳಿ ಕಡುನಡು ನೀರೊಳಗೆ ಪೊಕ್ಕಿಂತು ನಡೆಯುಡುಗಿ
ಸೋಲದಿಂ ದೆಸೆದೆಸೆಗೆ ಬಾಯ್ಬಿಡು
ತೇಳದಿರ್ದವು ಗಂಗಾಲಾಂಬಿಕೆಯ
ಲಾಲಿತ ಶ್ರೀಪದವನೆಂದೊಂದಿರ್ದಹೆವೊ ಎನುತ"[೭]

ಚಿನ್ಮಯಮೂರ್ತಿಯಾದ ಬಾಲಕಿ ಗಂಗಾಂಬಿಕೆಯ ಮೆಲ್ಲಮೆಲ್ಲನೆಯ ನಡಿಗೆ ಇಡುತ್ತಾ ಬರುತ್ತಿರುವಾಗ ಕೆಸರಿನಲ್ಲಿರುವ ಪ್ರಾಣಿಗಳು, ಆಕೆಯು ತನ್ನ ಪಾದಗಳನ್ನು ನಮ್ಮ ಮೇಲೆ ಇಟ್ಟರೆ ನಾವು ಕೆಸರಿನಲ್ಲಿ ಮುಚ್ಚಿ ಹೋಗುತ್ತೇವೆ ಎಂದು ಭಾವಿಸಿ, ಅಲ್ಲೆಯಿದ್ದ ನೀರಿನ ಮಡುವಿನ ಮಧ್ಯಭಾಗಕ್ಕೆ ಹೋಗಿ ಅವಿತು ಕುಳಿತರು. ಈಕೆಯ ಪಾದಸ್ಪರ್ಶದಿಂದ ಅಧರ್ಮವು ಪ್ರತಿಕ್ಷಣವು ಸೋಲುತ್ತಿತ್ತು ಎಂದು ಕವಿ ಚಿತ್ರಿಸುತ್ತಾನೆ. ಹಾಗೆ ಮುಂದುವರೆದು;

"ದೇವ ಗಂಗಾವರ್ತದತಿ ಶೋ
ಭಾವಹಮನವಮಾನಿಸುವದಿಂ
ದೀವರಾಕ್ಷಿಯ ರಾಜಿಸುವ ಗಂಭೀರ ನಾಭಿಕುಲ
ತ್ರೈವಳೀಯುತ ರೇಖೆಗಳು ಕಾಂ
ತಾವಿಳಾಸಕ್ಕಡರ್ವ ಸೋಪಾ
ನಾವಳಿಗಳವೊಲಿಹವು ಗಂಗಾದೇವಿಯೊಳಮರ್ದು"[೮]

ದೇವತೆಯ ಮುಖಭಾವ ಹೊಂದಿದವಳು ಶುಭ್ರತೆಯಿಂದ ಶೋಭಿಸತಕ್ಕವಳು. ಬೆಂಕಿಯಂತೆ ಕಣ್ಣು ಹೊಂದಿದವಳು, ಸದೃಢ ಮನಸ್ಸು ಹೊಂದಿದವಳು. ಗಂಭೀರವಾದ ನಾಭಿಯ ಬಲದಲ್ಲಿ ತ್ರಿವಳಿಗಳಿಂದ ಕೂಡಿದ ರೇಖೆಯುಳ್ಳವಳು ಎಂಬುದನ್ನು ಕವಿ ವರ್ಣಿಸುತ್ತಾನೆ. ಈಕೆಯ ಬಾಲ್ಯದ ಬಗ್ಗೆ ಭೀಮಕವಿಯು ತಕ್ಕ ಮಟ್ಟಿಗಾದರು ಹೇಳಲು ಪ್ರಯತ್ನಿಸಿದ್ದಾನೆ. ಆದರೆ ಉಳಿದ ಕವಿಗಳು ಈಕೆಯ ಬಾಲ್ಯ ಶಿಕ್ಷಣದ ಬಗ್ಗೆ ಮೌನವಹಿಸಿದ್ದಾರೆ.

ಈಕೆಯ ಬಾಲ್ಯ ಶಿಕ್ಷಣವನ್ನು ಕುರಿತು ಉಳವಪ್ಪ ಮಲ್ಲಪ್ಪ ಅನಿಗೋಳರು ಹೀಗೆ ಹೇಳುತ್ತಾರೆ. "ಗಂಗಾಂಬಿಕೆಯಲ್ಲಿ ಧೈರ್ಯ ಸ್ಥೈರ್ಯಗಳು ಸ್ವಾಭಾವಿಕವಾಗಿ ಬೆಳೆದುಬಂದಿದ್ದವು. ಕನ್ನಡ, ಸಂಸ್ಕೃತ, ಸಾಹಿತ್ಯ, ಸಂಗೀತ, ಕತ್ತಿ ವರಸೆ, ಬಿಲ್ಲು ವಿದ್ಯೆಗಳಲ್ಲಿ ಪ್ರವೀಣಳಾಗಿದ್ದಳು."[೯] ಈ ಅಭಿಪ್ರಾಯದಂತೆ ಗಂಗಾಂಬಿಕೆ ಈ ವಿದ್ಯೆಗಳನ್ನು ಪಡೆದಿರಬೇಕು. ಏಕೆಂದರೆ ಮಂತ್ರಿಯ ಕುವರಿಯಾಗಿದ್ದು ಕಾರಣವಿರಬಹುದು. ಇದಕ್ಕೆ ಪೂರಕವಾಗಿ ಡಾ.ಜಯಶ್ರೀ ದಂಡೆಯವರು "ಗಂಗಾಂಬಿಕೆ ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿದ್ದಳು. ತಂದೆಯ ಲಾಲನೆ–ಪಾಲನೆಯಲ್ಲಿ ಬೆಳೆದ ಗಂಗಾಂಬಿಕೆಯಲ್ಲಿ ಪುರುಷ ಧೈರ್ಯ ಸಹಜವಾಗಿಯೇ ತುಂಬಿಕೊಂಡಿತ್ತೆನ್ನಬಹುದು. ಮೇಲಾಗಿ ಮಂತ್ರಿಯ ಮಗಳಾಗಿದ್ದ ರಿಂದ ಬಿಲ್ಲುವಿದ್ಯೆ ಕತ್ತಿ ವರೆಸೆಗಳಲ್ಲೂ ಪರಿಣಿತಳಾಗಿದ್ದಳು. ಜೊತೆಗೆ ಕನ್ನಡ, ಸಂಸ್ಕೃತ, ಸಂಗೀತ, ವಿದ್ಯಾ ಪಾರಂಗತೆಯೂ ಆಗಿದ್ದಳು"[೧೦]ಎನ್ನುತ್ತಾರೆ. ಈಕೆಯು ವಿದ್ಯಾವಂತೆ, ಸುಸಂಸ್ಕೃತಳು ಎಂದು ಅಭಿಪ್ರಾಯಗಳಿವೆ. ಆದರೆ ಕವಿಗಳು ಮತ್ತು ಇತರ ಸಾಹಿತ್ಯದಲ್ಲಿ ಈಕೆಯ ಗುರುಗಳ ಬಗ್ಗೆ ತಿಳಿದು ಬರುವುದಿಲ್ಲ.

ಹಾಗಾದರೆ ಈಕೆಗೆ ಕಲಿಸಿದ ಗುರುಗಳು ಯಾರು? ಈ ಪ್ರಶ್ನೆಗೆ ಶಾಂತಾದೇವಿ ಮಾಳವಾಡ ಹೀಗೆ ಅಭಿಪ್ರಾಯಪಡುತ್ತಾರೆ.

"ಗಂಗಾಂಬಿಕೆಯು ಘನಲಿಂಗ ರುದ್ರಮುನಿಗಳ ಶಿಷ್ಯಳಾಗಿದ್ದಳು"[೧೧] ಎನ್ನುತ್ತಾರೆ. ಬಾಲಕಿಯಾದ ಗಂಗಾಂಬಿಕೆಗೆ ಶಿಕ್ಷಣ ನೀಡಿದ ವಿವರವನ್ನು ಯಾವ ಕವಿಗಳೂ ಪ್ರಸ್ತಾಪ ಮಾಡುವುದಿಲ್ಲ. ಡಾ.ಜಯಶ್ರೀ ದಂಡೆಯವರ ಅಭಿಪ್ರಾಯದಂತೆ ಮಂತ್ರಿಯ ಮಗಳು ಇದ್ದುದರಿಂದ ಶಿಕ್ಷಣ ಕಲಿತಿರಬಹುದು. ಏಕೆಂದರೆ ಸ್ತ್ರೀಗೆ ಶಿಕ್ಷಣವನ್ನು ನೀಡುವ ವ್ಯವಸ್ಥೆ ಆ ಕಾಲಘಟ್ಟದಲ್ಲಿ ಇದ್ದಿತೆ? ಇದು ಜನಸಾಮಾನ್ಯರಿಗೆ ತಲುಪಿತ್ತೆ? ಈಕೆಯು ಶಿಕ್ಷಣ ಹೊಂದಿದ್ದರೆ, ಅದು ಉಳ್ಳವರಿಗಾಗಿ ಇದ್ದರೂ ಇರಬಹುದು ಎಂಬ ಸಾಧ್ಯತೆ ಇದೆ. ಈ ಎಲ್ಲಾ ಪ್ರಶ್ನೆಗಳಿರುವಲ್ಲಿಯೂ ಈ ಮೇಲಿನ ಅಂಶಗಳಿಂದ ಈಕೆಯು ವಿದ್ಯಾರ್ಜನೆ ಪಡೆದಿದ್ದಳು ಎಂದು ಊಹಿಸಬಹುದಾಗಿದೆ.

### ೧.೩. ಪ್ರಾಯದಲ್ಲಿ ಗಂಗಾಂಬಿಕೆ

ಪ್ರಾಯಕ್ಕೆ ಬಂದ ಗಂಗಾಂಬಿಕೆಯ ಬಗ್ಗೆ ಭೀಮಕವಿ ಮತ್ತು ಷಡಕ್ಷರಿದೇವ ಈಕೆಯ ಯೌವ್ವನದ ಬಗ್ಗೆ ತಿಳಿಸುತ್ತಾರೆ. ಆದರೆ ಮೌಖಿಕ ಸಾಹಿತ್ಯದಲ್ಲಿ ಹಾಗೂ ಚಾರಿತ್ರಿಕದಲ್ಲಿ ಮಾಹಿತಿ ಸಿಗುವುದಿಲ್ಲ. ಈಕೆಯ ಯೌವನ ಕುರಿತು ಭೀಮಕವಿ ಹೀಗೆ ಉಲ್ಲೇಖಿಸುತ್ತಾನೆ.

"ಇಂದುವದನೆಯ ಮಧ್ಯವುಂಟಿ
ಲ್ಲೆಂದೆನಗೆ ಸಂದೇಹವಾಯ್ತುಂ
ಟೆಂದು ನೋಡಲು ಕಾಣಬಹುದಲ್ಲದಡೆ ಮೇಲೆಂತು
ನಿಂದಿಪುದು ತಾನೆಂದೆಣಿಸಿವುಂ
ಟೆಂದಜೆದೆನೀ ಗಂಗಾಲಾಂಬೆಯ
ಛಂದವೆನಿಸಿದ ಬಡ ನಡುವನದನೇನ ವರ್ಣಿಸುವೆ"[೧೨]

ಭೀಮಕವಿ ಈಕೆಯ ಯೌವನವನ್ನು ಕುರಿತು ಹೇಳುತ್ತಾ ಈಕೆಯ ಮುಖವು ಚಂದ್ರನಿಗೆ ಹೋಲಿಸಿ ಅವನಂತೆ ಹೊಳೆಯುತ್ತಿತ್ತು ಎಂದು ವರ್ಣಿಸಿ ಮುಖ ಕಾಂತಿಯುಕ್ತಳೆ, ಸೌಂದರ್ಯ, ರೂಪವತಿ, ದೇಹದ ಸುಂದರತೆಗೆ ಸಂಶಯಬೇಡ ಹಾಗೂ ಅವಳ ನಡುವನ್ನು ಹೇಗೆ ವರ್ಣಿಸಲಿ ಎಂದು ಪ್ರಶ್ನೆ ಹಾಕುತ್ತಾನೆ.

"ಭಾವಜನ ಸರಳಿಂದ ಸಣ್ಣವು
ಭಾವಿಸಲು ಲತಯಾ ಲತಗರಾ
ಜೀವದಳಲೋಚನೆಯ ಬಡನಡುವಿದುವೆ ಕಡುಸಣ್ಣ

ತಾವರೆಯ ಮುಗುಳುಗಳು ಗಂಗಾ
ದೇವಿಯಲಿ ವೊಗೆವಂತೆ ಗಂಗಾ
ದೇವಿಯುರದಲಿ ಮೊಳೆವುತಿರ್ದವು ಮೊಲೆಗಳಭಿ ನವಿಸಿ"[೧೩]

ತಾರುಣ್ಯಾವಸ್ಥೆಯ ಗಂಗಾದೇವಿಯ ದೇಹ ಬಳ್ಳಿಯಂತೆ ಬಳುಕುತಿತ್ತು. ಯೌವನಕ್ಕೆ ಕಾಲಿಟ್ಟಳು ಎಂಬ ಶುಭ ಸೂಚನೆ ಹೇಳುವಂತೆ ಸ್ತನಗಳು, ದೇಹದ ಪ್ರಖರತೆ ತುಂಬಿತು ಎಂದು ಅಕೆಯ ಯೌವನಾವಸ್ಥೆಯ ಬಗೆಯನ್ನು ವರ್ಣಿಸುತ್ತಾನೆ.

"ಕ್ಷಿತಿಗೆ ಲಕ್ಷ್ಮಿಗೆ ರೋಹಿಣಿಗೆ ಭಾ
ರತಿಗೆ ರತಿಗೆ ಪುಲೋಮಜೆಗರುಂ
ಧತಿಗೆ ಸೀತೆಗೆ ಜಾಹ್ನವಿಗೆ ರವಿಸತಿಗೆ ನೂರುಮಡಿ
ಧೃತಿ ಸಿರಿಪ್ರಭೆ ಜಾಣ್ಮೆ ರೂಪು
ನ್ನತಿ ಪತಿವ್ರತಾದಾಚರಣೆ ಸಂ
ತತ ಪವಿತ್ರತೆ ತೇಜವೆಂಬಿವಟೆಂದ ಗಾಂಗಾಯಿ"[೧೪]

ಗಂಗಾಂಬಿಕೆಯನ್ನು ಕವಿ ಭೂಮಿಗೆ ಲಕ್ಷ್ಮಿಗೆ, ರೋಹಿಣಿಗೆ, ಭಾರತಿ, ರತಿ, ಸೀತೆ, ಅರುಂಧತಿ, ಜಾಹ್ನವಿ ಮೊದಲಾದ ಮಹಾಪತಿವ್ರತೆಗಿಂತಲೂ ನೂರು ಪಟ್ಟು ಹೆಚ್ಚು ಎಂದು ಹೊಗಳಿ, ಮುಂದುವರೆದು ಗಂಗಾದೇವಿಯಲ್ಲಿಯ ಸದೃಢ ಮನಸ್ಸು, ಚತುರತೆ, ಔನ್ನತ್ಯವನ್ನು ಪಡೆದ ಸೌಂದರ್ಯ ಹೊಂಬೆಳಕು ಸೂಸುವ ಪತಿವ್ರತಾಚರಣೆ ಆಕೆಯಲ್ಲಿ ಪವಿತ್ರತೆಯಿಂದ ಕೂಡಿದೆ ಎಂದು ಕವಿ ವರ್ಣಿಸುತ್ತಾನೆ.

ಷಡಕ್ಷರಿ ದೇವ ತನ್ನ ಬಸವರಾಜ ವಿಜಯಂನಲ್ಲಿ ಈಕೆಯ ಯೌವನದ ಬಗ್ಗೆ ಹೀಗೆ ವರ್ಣಿಸುತ್ತಾನೆ.

"ಆ ಮಂತ್ರಿವರನ ಸುತೆ ಮದ
ಸಾಮಜ ಮೃದುಯಾನೆ ಮಾನನಿಧಿ ಸಕಳಕಳಾ
ಭೂಮಿಕೆ ಗಂಗಾಂಬಿಕೆಯೆ
ಬಾ ಮೃಗ ಮದಗಂಧಿ ಜವ್ವನಂಬಡೆದೆಸೆದಳ್"[೧೫]

ಬಲದೇವನ ಕುವರಿ ಗಂಗಾಂಬಿಕೆಯ ಯೌವನದಲ್ಲಿ ಮದವನ್ನು ತೊಡೆದು ಮೃದು ಧೋರಣೆಯ ಹೊಂದಿದ ಈಕೆ, ಮಾಣಿಕ್ಯ ನಿಧಿಯಾಗಿದ್ದಳು ಹಾಗೂ ಮಿತ, ಹಿತಗಳಿಂದ, ಕೂಡಿದ ಸ್ವಭಾವ ಎಂದು ಕವಿ ವರ್ಣಿಸುತ್ತಾನೆ. ಕವಿ ಮುಂದುವರೆದು;

"ಬಡನಡು ಬಳ್ಕೆ ಪೀನಜಘನಂ ಜಡಿವುತ್ತಿರೆ
ಬಿಣ್ಪು ನಾಳ್ದ ಪೊಂ
ಗೊಡಮೊಲೆಗಳ್ಕ ದಕ್ಕದಿಸೆ ಸೋರ್ಮುಡಿ ಜಾಳೆ
ಮುಖೇಂದು ಕಾಂತಿ ಧೀಂ ಕಿಡೆ.........
..............................................."[೧೬]

ಎಂದು ಯೌವನದ ಸಂದರ್ಭವನ್ನು ಜೊತೆಯಲ್ಲಿ ಆಕೆಯ ಗುಣವಂತಿಕೆಯನ್ನು ವರ್ಣಿಸಿದ್ದಾನೆ. ಅಷ್ಟೇ ಅಲ್ಲದೆ ಗಂಗಾಂಬಿಕೆಯ ಸರಳತೆಯಿಂದ ಕೂಡಿದ ಚಟುವಟಿಕೆಗಳು ಪ್ರಕೃತಿಯ ರಮ್ಯತೆಯನ್ನು ಪಡೆದವು ಹಾಗೂ ಅಕೆ ಪ್ರಕೃತಿಯ ಸಿರಿಯೇ ಆಗಿದ್ದಳೆನ್ನಬಹುದು.

"ಜತಿಗೊಡೆ ನೂಪುರಧ್ವನಿ ಪದಾಬ್ಜನಖದ್ಯುತಿ ನರ್ತನಕ್ಕೆ ರಂ
ಜಿತ ಕುಚವಲ್ಗನಂ ನಿಮಿರೆ ಕಂಪಿಸೆ ಪೀನನಿತಂಬಬಿಂಬಮಂ
ಚಿತ ಮಣಿಕಾಂಚಿಯಿಂಚರದೊಳೊಂದಿ ಪಳಂಚಿರೆ ಶಿಂಜಿತಂ
ಕಳಾವತಿ................................................"[೧೭]

ಕವಿ ಷಡಕ್ಷರಿ ದೇವ ಗಂಗಾಂಬಿಕೆಯನ್ನು ಮತ್ತು ಆಕೆಯ ಚಟುವಟಿಕೆಗಳನ್ನು ಕುರಿತು ವಸ್ತುನಿಷ್ಠವಾಗಿ ಚಿತ್ರಿಸಲು ಪ್ರಯತ್ನಿಸಿದ್ದಾನೆ.

ಪ್ರತಿಯೊಬ್ಬರ ಬದುಕಿನಲ್ಲಿ ಪ್ರಾಯ ಹಾದು ಹೋಗುವಂತೆ ಗಂಗಾಂಬಿಕೆಯ ಬದುಕಿನಲ್ಲಿ ಪ್ರಾಯ ಒಡಮೂಡಿ ಆಕೆಗೆ ಎಂತಹ ಚೆಲುವನ್ನು ತಂದುಕೊಟ್ಟಿತು. ಹಾಗೂ ಪ್ರತಿಭೆಯನ್ನು ರೂಪಿಸಿತು. ಆಕೆಯು ಜ್ಞಾನ ಸದ್ಗುಣಗಳ ಮೂಲಕ ಕಳಾವತಿಯಾಗಿ ಕಂಗೊಳಿಸಿದ್ದಾಳೆ ಎಂದು ಕವಿ ವರ್ಣಿಸುತ್ತಾನೆ. ಈ ಪದ್ಯದ ಮೂಲಕ ಈಕೆಯಲ್ಲಿ ಔಚಿತ್ಯದ ನಡೆನುಡಿಯನ್ನು ಕಾಣಬಹುದಾಗಿದೆ. ಈಕೆಯ ಯೌವ್ವನವನ್ನು ಕುರಿತು ಡಾ.ಶಕುಂತಲಾ ಹೆಗಡೆ "ಲಜ್ಜಾ ಶೀಲವಾದ, ಪ್ರಶಾಂತ ಮುಖಮುದ್ರೆಯ, ಗಂಭೀರ ಸ್ನಿಗ್ಧ ಸೌಂದರ್ಯದಿಂದ ಸಿರಿಗೌರಿಯಂತೆ ಕಂಗೊಳಿಸುತ್ತಿರುವ ಗಂಗಾಂಬಿಕೆ"[೧೮] ಈ ಅಭಿಪ್ರಾಯದಂತೆ ಗಂಗಾಂಬಿಕೆ ಚೆಲುವೆಯಾಗಿದ್ದು ಗುಣದಲ್ಲಿ ಸಿರಿ ಗೌರಿಯಾಗಿದ್ದಳು ಮತ್ತು ಪ್ರಶಾಂತ ಮುಖಮುದ್ರೆ ಹೊಂದಿದ್ದಳು ಎನ್ನಬಹುದಾಗಿದೆ.

### ೧.೪. ಬಸವಣ್ಣನೊಂದಿಗೆ ಗಂಗಾಂಬಿಕೆಯ ವಿವಾಹ

ಗಂಗಾಂಬಿಕೆಯ ವಿವಾಹವು ತನ್ನ ಸೋದರತ್ತೆಯ ಮಗನಾದ ಬಸವಣ್ಣನೊಂದಿಗೆ ಜರುಗಿರುವ ಬಗ್ಗೆ ಮೌಖಿಕ ಸಾಹಿತ್ಯಿಕ ಆಧಾರಗಳು ದೃಢಪಡಿಸುತ್ತವೆ. ಜನಪದ ಬಸವಪುರಾಣದಲ್ಲಿ ಈಕೆಯ ವಿವಾಹದ ಉಲ್ಲೇಖ.

"ನಮ್ಮ ಮಗಳ ಗಂಗಾಂಬ್ಯ ನಿಮಗೆ ಲಗ್ನ ಮಾಡುವೇನು
ನಮ್ಮ ಪಟ್ಟಣಕೆ ದಯಮಾಡಿ
ಗುರುವ್ನಿಂದ ಅಪ್ಪಣೆ ಪಡಕೊಂಡು ಬಸವಣ್ಣ
ಪಿಪ್ಪಲೆ ಪಟ್ಟಣಕೆ ಬಿಜ ಮಾಡುತಾರೆ
ಪಿಪ್ಪಲೆ ಪಟ್ಟಣಕೆ ಬಂದಾಗ ಬಸವಣ್ಣ
ಮದುವೆ ಕಲ್ಯಾಣ ಅವರ್ಗೆ ಮಾಡಿದರು
ಮದುವೆ ಕಲ್ಯಾಣವ ಮಾಡಿದರು ಸೋದರಮಾವ
ನೀವು ಸುಖವಾಗಿ ಬಾಳಿ ಬಸವಣ್ಣ"[೧೯]

ಬಸವಣ್ಣ ಕಪ್ಪಡಿ ಸಂಗಮದಲ್ಲಿದ್ದಾಗ ಬಲದೇವ ತನ್ನ ಸೋದರಳಿಯನೆಂದು ಖಚಿತ ಪಡಿಸಿಕೊಂಡು, ಆಮೇಲೆ ತನ್ನ ಮಗಳು ಗಂಗಾಂಬಿಕೆಯನ್ನು ವಿವಾಹ ಮಾಡಲು ನಿರ್ಧರಿಸುತ್ತಾನೆ. ಇವರಿಬ್ಬರ ಮದುವೆಯನ್ನು ಬಹುಶಃ ಕಪ್ಪಡಿ ಸಂಗಮದಲ್ಲಿ ಮಾಡಿದಂತೆ, ತೋರುತ್ತದೆ. ಕರಪಾಲ ಬಸವ ಪುರಾಣದಲ್ಲಿ ಈಕೆಯ ವಿವಾಹದ ಬಗ್ಗೆ ತಿಳಿಸುತ್ತದೆ. ಇಲ್ಲಿ ಮದುವೆಯ ನಿಮಿತ್ತವಾಗಿ, ನಗರ ಅಲಂಕಾರಗೊಂಡದ್ದು, ಹಾಗೂ ಕನ್ಯಾ ಅಲಂಕಾರ, ವರನ ಅಲಂಕಾರ ಮತ್ತು ಮದುವೆಗೆ ಬಂದವರು ಸಂತೋಷಗೊಂಡದ್ದು, ಈ ಪುರಾಣದಿಂದ ತಿಳಿಯಬಹುದು. ಈ ಜನಪದ ಸಾಹಿತ್ಯದ ಮೂಲಕ ಈಕೆಯ ವಿವಾಹದಲ್ಲಿಯ ವೈಭವವನ್ನು ತಿಳಿಯಬಹುದು. ಹಾಗೂ ಗಂಗಾಂಬಿಕೆ ಬಸವಣ್ಣನವರನ್ನು, ಹೇಗೆ ಅಲಂಕಾರ ಮಾಡಿದರು ಮತ್ತು ಬಸವಣ್ಣನಿಗೆ ಬಾಸಿಂಗ, ರುದ್ರಾಕ್ಷಿ ಮಾಲೆ ಧರಿಸಿ ಹೇಗೆ ವಿವಾಹ ಮಂಟಪಕ್ಕೆ ಕರೆದುಕೊಂಡು ಬರುತ್ತಾರೆ ಎಂಬ ಉಲ್ಲೇಖ ಈ ಕೆಳಗಿನಂತಿದೆ.

"ಬಸವಣ್ಣನವರಿಗೆ ಸ್ನಾನವನ್ನು ಮಾಡಿಸಿ ಶ್ವೇತಾಂಬರ ಅಂದರೆ ಬಿಳಿ ಬಟ್ಟೆಗಳನ್ನು ತೊಡಿಸಿ ವಿವಾಹ ಮಂಟಪಕ್ಕೆ ಕರೆದುಕೊಂಡು ಬರಲು, ಇತ್ತ ಗಂಗಾಂಬಿಕೆಯನ್ನು ಶೃಂಗಾರ ಮಾಡಿಕೊಂಡು ವಿವಾಹ ಮಂಟಪಕ್ಕೆ ಕರೆದುಕೊಂಡು ಬಂದು ವಿವಾಹ ಮಂಟಪದಲ್ಲಿ ವಧೂ-ವರರಿಗೆ ಪುರೋಹಿತರು ಧಾರೆ ಎರೆಯುತ್ತಾ ಇದ್ದಾರೆ."[೨೦] ಈ ಕಾವ್ಯದಲ್ಲಿ ಗಂಗಾಂಬಿಕೆಯನ್ನು ಸರ್ವ ಅಲಂಕಾರ ಭೂಷಿತಳನ್ನಾಗಿ ಮಾಡಿ ಬಸವಣ್ಣನೊಡನೆ ವಿವಾಹ ನೆರವೇರಿಸಿದ್ದನ್ನು ಚಿತ್ರಿಸಲಾಗಿದೆ. ಹಾಗೆಯೇ ಜನಪದ ಕಥನ ಗೀತೆಯೊಂದು ಗಂಗಾಂಬಿಕೆ ಬಸವಣ್ಣನ ಮದುವೆ ಕುರಿತು ಹೀಗೆ ಹೇಳುತ್ತದೆ.

"ಗುರುವಿನ ಅಪ್ಪಣೆ ಹರನ ಕರುಣಿಯೆಂದು
ಕರಪಿಡಿದು ಕಟ್ಟಿದ ಮಾಂಗಲ್ಯ ಗಂಗಾಗ
ವರಸತಿಯೆಂದು ಒಪ್ಪಿದ"[೨೧]

ಈ ಜನಪದವು ಗುರುವಿನ ಅಪ್ಪಣೆಯಿಂದ ಅಂದರೆ ಸಂಗಮನಾಥನ ಅಪ್ಪಣೆ ಪಡೆದು ಅದೇ ಶಿವನ ಆಶೀರ್ವಾದವೆಂದು ಭಾವಿಸಿ ಸೋದರಮಾವನ ಮಗಳಾದ ಗಂಗಾಂಬಿಕೆಯ ಕೊರಳಿಗೆ ತಾಳಿಯನ್ನು ಕಟ್ಟಿ ವರಸತಿಯೆಂದು ಅಥವಾ ಶಿವನು ಕರುಣಿಸಿದ ಸತಿಯೆಂದು ಭಾವಿಸಿ ಈಕೆಯನ್ನು ಸ್ವೀಕರಿಸಿದ ಎಂದು ಈ ಜನಪದ ಗೀತೆ ವರ್ಣಿಸುತ್ತದೆ.

ಇವುಗಳಲ್ಲದೆ ಸಾಹಿತ್ಯಿಕ ಆಕರಗಳಾದ ಬಸವರಾಜ ದೇವರ ರಗಳೆ, ಬಸವಪುರಾಣ, ಶಿವತತ್ವ ಚಿಂತಾಮಣಿ, ಬಸವರಾಜ ವಿಜಯಂ ಮುಂತಾದ ಲಿಖಿತ ಕಾವ್ಯಗಳು ಇವರಿಬ್ಬರ ಮದುವೆಯನ್ನು ಕುರಿತು ದಾಖಲಿಸುತ್ತವೆ. ಹರಿಹರ ತನ್ನ ಬಸವರಾಜ ದೇವರ ರಗಳೆಯಲ್ಲಿ

"ಇಂತು ಪಡೆದು ಸಂಗನ ಬಸವಂ
ಕೆಲವು ದಿನಂಗಳಂ ಕಳಿದು
ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ
ಗಂಗಾದೇವಿ ಮಾಯಿದೇವಿಯರೊಡತಣ ವಿವಾಹ
ಸಂಪದದಿಂ ಸಂತ ಸುಖಮಿರ್ದೊಂದು ದೇವಸಂ"[೨೨]

ಸಂಗನಬಸವನು ಭಂಡಾರದ ಅಧಿಕಾರಿಯಾದ ಮೇಲೆ ಸೋದರಮಾವ ಸಿದ್ಧರಸ ತನ್ನ ಮಗಳು ಗಂಗಾಂಬಿಕೆಯನ್ನು ಮದುವೆಯಾಗಲು ಒಪ್ಪಿಸಿದ. ಇದಾದ ಕೆಲವು ದಿನಗಳ ನಂತರ ಬಸವಣ್ಣ ಗಂಗಾದೇವಿಯನ್ನು ಮದುವೆಯಾಗಿ ಸುಖವಾಗಿದ್ದನು ಎಂದು ಕವಿ ಚಿತ್ರಿಸುತ್ತಾನೆ.

ಹರಿಹರ ಗಂಗಾಂಬಿಕೆಯ ಮದುವೆಯ ಬಗ್ಗೆ ತಿಳಿಸುತ್ತಾನೆ. ಆದರೆ ಎಲ್ಲಿ ವಿವಾಹ ನಡೆಯಿತು? ಎಂಬುದನ್ನು ತಿಳಿಸುವುದಿಲ್ಲ. ಹಾಗಾದರೆ ಮಂಗಳವೇಡಿಯಲ್ಲಿ ಆಯಿತೆ? ಅಥವಾ ಕಲ್ಯಾಣದಲ್ಲಿ ಆಯಿತೆ? ಎಂಬ ಸಂದಿಗ್ಧತೆಯನ್ನು ತಂದಿದ್ದಾನೆ. ಆದರೆ ಈತನ ಪ್ರಕಾರ ಬಸವಣ್ಣ ಮೊದಲು ಮಂಗಳವೇಡಿಗೆ ಹೋಗುವುದರಿಂದ ಇಲ್ಲಿಯೇ ವಿವಾಹವಾಗಿರಬಹುದು. ಭೀಮಕವಿಯ ಬಸವಪುರಾಣದಲ್ಲಿ ಗಂಗಾಂಬಿಕೆ ಬಸವಣ್ಣನವರ ಮದುವೆಯ ಕುರಿತು ವಿಸ್ತಾರವಾದ ಚಿತ್ರಣ ಕೊಡುತ್ತಾನೆ.

"ಕನ್ನೆಯಂ ಪತಿಭಕ್ತಿ ಗುಣಸಂ
ಪನ್ನೆಯಂ ಗುರುಲಿಂಗ ಭಜನಾ
ಸನ್ನೆಯಂ ಶೃಂಗಾರ ರಸಸೋತ್ಪನ್ನೆಯಂ ಕೂರ್ಪ
ತನ್ನ ಮಗಳಂ ಮೂಜಗಂಗಳ
ಚೆನ್ನೆಯಂ ಗಂಗಾಂಬಿಯಂ ವಿಭ
ವೋನ್ನತಿಯೊಳೊಡಗೊಂಡು ಬಂದು ಸಮಸ್ತ ಭಕ್ತರಿಗೆ

ಪೊಡವಡಿಸಿ ಶುಭ ಚಿಹ್ನೆ ಮಿಕ್ಕೊಡ
ನೊಡ ನಿದಿರ್ಗೊಳೆ ಪರಸಿ ಸೇಸೆಯ
ನಿಡಲಖಿಳ ಭಕ್ತಾಂಗನೆಯರೀಶ್ವರ ಬಲಮುಹೂರ್ತ
ಕಡುಮಿಗಲು ವೇದೋಕ್ತ ಶಿವಪಥ
ವಡರಿದುತ್ತಮ ಧರ್ಮವಿಧಿಯಳ
ವಡಲು ಮಂಗಳ ಮದುವೆಯಂ ಮಾಡಿದನು
ಬಸವಂಗೆ”[೨೩]

ಕನ್ಯೆಯಾದ ಗಂಗಾಂಬಿಕೆಯು ಶೃಂಗಾರ ರಸನೋತ್ಪನ್ನೆಯು ಅಪಾರ ಜ್ಞಾನ ಸಂಪನ್ನಳು, ಹರಭಕ್ತಿ ಗುಣಸಂಪನ್ನೆಯೂ ಆಗಿದ್ದಳು. ಇಂಥ ಭಕ್ತಿ ಸಂಪನ್ನೆಯಾದ ಗಂಗಾಂಬಿಕೆಯನ್ನು ಬಸವಣ್ಣನಿಗೆ ಒಳ್ಳೆಯ ಮಹೂರ್ತದಲ್ಲಿ ವೇದ ಸಮ್ಮತವಾಗಿ, ಶಿವಪಥದಮೂಲಕ ಹಾಗೂ ಅನೇಕ ಧಾರ್ಮಿಕ ವಿಧಿ ವಿಧಾನಗಳನ್ನು ಅನುಕರಿಸಿ ಮದುವೆ ಮಾಡಿದನು ಎಂದು ಭೀಮಕವಿ ಉಲ್ಲೇಖಿಸುತ್ತಾನೆ. ಡಾ.ವಿಜಯಕುಮಾರ ಮಹಾನುಭಾವಿಗಳು ಗಂಗಾಂಬಿಕೆಯ ಮದುವೆಯ ಪ್ರಸ್ತಾಪದ ಬಗ್ಗೆ ಹೇಳುತ್ತಾ ಹರಿಹರ ಗಂಗಾಂಬಿಕೆಯ ತಂದೆ ಸಿದ್ಧರಸನೆಂದರೆ ಭೀಮಕವಿ ಬಲದೇವನೆಂದು ಹೇಳುತ್ತಾನೆ ಯಾಕೆ? ಮುಂತಾದ ಚರ್ಚೆಗಳನ್ನು ಮಾಡುತ್ತಾ ಗಂಗಾಂಬಿಕೆಯ ವಿವಾಹದ ಬಗ್ಗೆ “ಬಲದೇವದಂಡನಾಯಕನು ಕಲ್ಯಾಣದಲ್ಲಿ ಮಗಳು ಗಂಗಾಂಬಿಕೆ ಯೊಂದಿಗೆ ಲಗ್ನ ನೆರವೇರಿಸುತ್ತಾನೆ”[೨೪] ಎಂದು ಹೇಳುತ್ತಾರೆ. ಗಂಗಾಂಬಿಕೆ ವಿವಾಹವನ್ನು ಭೀಮಕವಿಯು ಸಂಪ್ರದಾಯ ಬದ್ಧವಾಗಿ ಅಂದರೆ ವೇದೋಕ್ತದಿಂದ ನಡೆಯಿತು ಎಂದು ಉಲ್ಲೇಖಿಸಿದ್ದಾನೆ. ಹರಿಹರ ಬಸವಣ್ಣ ಭಕ್ತಿ ಪರಾಕಾಷ್ಠೆಯನ್ನು ತುಂಬಿದ್ದು ಕಾಣಬಹುದು ಪಾಲ್ಕುರಿಕೆ ಸೋಮನಾಥನ ಬಸವಪುರಾಣದ ಬಗ್ಗೆ ಡಾ.ಪಿ.ವಿ.ನಾರಾಯಣರು ಹೀಗೆ ಹೇಳುತ್ತಾರೆ. “ಎಂಟನೆಯ ವರ್ಷದಲ್ಲಿ ಉಪನಯನವನ್ನು ಮಾಡಲು ತಂದೆ ಆಲೋಚಿಸಿದಾಗ ಅದನ್ನು ಬಸವನು ಧಿಕ್ಕರಿಸಿ ಭಕ್ತಿಯನ್ನು ಎತ್ತಿಹಿಡಿಯುತ್ತಾನೆ. ಅವನನ್ನು ಮೆಚ್ಚಿದ ಬಲದೇವನು ತನ್ನ ಮಗಳನ್ನು ಬಸವನಿಗಿತ್ತು ಮದುವೆ ಮಾಡುತ್ತಾನೆ.”[೨೫] ಎಂದು

“ಇಂತ ಧನ್ಯನು ನಾನಾದೆನು ಈಗಲೆನುತ
ದಿಟ್ಟನು ಬಲದೇವದಂಡ ನಾಯಕನು
ತನ್ನ ಮಗಳು ಕಾಮಿನೀ ಜನತಿಲಕೆ
ಯನುಪಮ ಶೃಂಗಾರವನಧಿ ಗಂಗಾಂಬೆ
ಯನು ಕರೆತಂದು ಭಕ್ತರಿಗೆ ಮೊಕ್ಕಿಸುತ

ಲೈತರೆ ಶುಭ ಶಕುನಗಳೆದುರಾಗೆ
ಶಿವಭಕ್ತ ಸತಿಯರು ಸೇಸೆಯ ನೀಡಲು
ಶಿವಬಲ ವಗ್ಗಳಿಸಿದ ಮಹೂರ್ತದಲಿ
ವೇದೋಕ್ತ ಶಿವಧರ್ಮ ವಿಧಿಯಿಂ ಬಸವಗೆ
ಪ್ರೇಮಸುತೆಯನಿತ್ತು ಮದುವೆ ಮಾಡಿದನು"[೨೬]

ಸೋಮನಾಥ ಬಸವ ಪುರಾಣದಲ್ಲಿ ಬಲದೇವನನ್ನು ದಿಟ್ಟನು ಎಂದು ಕರೆದಿದ್ದಾನೆ. ಇನ್ನೊಂದು ಅರ್ಥದಲ್ಲಿ ಗಟ್ಟಿಗನು, ವಿಚಾರಶೀಲನು, ಪರೀಕ್ಷೆ ಮಾಡುವಂತವನು ಎಂದಾಗಬಹುದು. ಇಂಥ ಬಲದೇವನು ತನ್ನ ಮಗಳಾದ ಸೌಂದರ್ಯವತಿ, ಶೃಂಗಾರವನಿತೆ ಗಂಗಾಂಬಿಕೆಯನ್ನು ಕರೆದುಕೊಂಡು ಬಂದು ಶುಭ ದಿನದಂದು ಶಿವಭಕ್ತ ಸತಿಯರಿಂದ ಕೂಡಿ, ವೇದೋಕ್ತದಿಂದ ಶಿವಧರ್ಮವನ್ನು ತಿಳಿಸಿ ಬಸವನಿಗೆ ಪ್ರೇಮಸುತೆ(ಮಗಳು)ಯನ್ನು ಮದುವೆ ಮಾಡಿದನು. ಭೀಮಕವಿಗಿಂತಲೂ ಪೂರ್ವದ ಕವಿಯಾದ ಈತನು "ಕನ್ನಡದ(ಹರಿಹರನ) 'ಬಸವರಾಜ ದೇವರ ರಗಳೆ'ಯನ್ನು ಬಿಟ್ಟರೆ ಬಸವಣ್ಣನನ್ನು ಕುರಿತ ಮೊದಲ ಕೃತಿ. ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಸಮಾಜೋಧಾರ್ಮಿಕ ಚಳವಳಿಯೊಂದರ ನಾಯಕನಾದ ಬಿಜ್ಜಳನ ಮಹಾಮಂತ್ರಿ–ದಂಡನಾಯಕನಾಗಿದ್ದ ಬಸವಣ್ಣನ ಜೀವಿತ ಕಥನವು ತೆಲುಗು ಕವಿಯಾದ ಪಾಲ್ಕುರಿಕೆ ಸೋಮನಾಥನ ಕೃತಿಯೊಂದಕ್ಕೆ ವಸ್ತುವಾದುದು ಮಹತ್ವದ ಸಂಗತಿ."[೨೭] ಸೋಮನಾಥನು ಕಲ್ಯಾಣದ ವಿಷಯವಾಗಿ ಹಾಗೂ ಅಲ್ಲಿಯ ಬಸವಾದಿ ಶರಣರ ಬಗ್ಗೆ ಹೇಗೆ ತಿಳಿದುಕೊಂಡನು? ಡಾ.ಎಸ್.ವಿದ್ಯಾಶಂಕರ ಮುಂದುವರೆದು "ಬಹುಶಃ ಕರ್ನಾಟಕದಿಂದ ಶ್ರೀಶೈಲಕ್ಕೆ ಯಾತ್ರಾರ್ಥಿಗಳಾಗಿ ಹೋದವರಿಂದ ಈ ಎಲ್ಲ ವಿವರಗಳನ್ನು ಸೋಮನಾಥ ಪಡೆದಿರುವ ಸಾಧ್ಯತೆಯಿದೆ."[೨೮] ಇವರ ಹೇಳಿಕೆಯನ್ನು ಗಮನಿಸಿದಾಗ ಬಸವಣ್ಣನ ಬಗ್ಗೆ ಭೀಮಕವಿಗಿಂತಲೂ ಸೋಮನಾಥನಿಗೆ ಹೆಚ್ಚು ಮಾಹಿತಿ ಸಿಗುವುದನ್ನು ಎಸ್.ವಿದ್ಯಾಶಂಕರ ಅಭಿಪ್ರಾಯ ಪಡುತ್ತಾರೆ. ಗಂಗಾಂಬಿಕೆ ಬಸವಣ್ಣನ ವಿವಾಹವು ಎಲ್ಲಿ ಜರುಗಿತ್ತು ಎಂದು ಇಬ್ಬರೂ ಹೇಳುವುದಿಲ್ಲ. ಆದರೆ ವಿವಾಹವಾಗಿ ಕಪ್ಪಡಿ ಸಂಗಮನಾಥನ ದರ್ಶನಕ್ಕೆ ಬರುತ್ತಾರೆ ಎಂದು ಹೇಳುವುದರಿಂದ ಕಲ್ಯಾಣದಲ್ಲೇ ಜರುಗಿತೋ ಅಥವಾ ಮಂಗಳವೇಡಿಯಲ್ಲಿ ಆಯಿತೊ? ಎಂಬ ಸ್ಪಷ್ಟತೆಯನ್ನು ಈ ಕಾವ್ಯಗಳು ನೀಡುವುದಿಲ್ಲ. ಹದಿನೈದನೆಯ ಶತಮಾನದ ಪೂರ್ವಾರ್ಧದಲ್ಲಿ ಬರುವ ಲಕ್ಕಣ್ಣ ದಂಡೇಶ ತನ್ನ ಕಾವ್ಯದಲ್ಲಿ ಹೇಳುವಂತೆ....

"ಮುನಿಕಶ್ಯಪಂಗದಿತಿ ಸಾವಿತ್ರಿ ಸತ್ಯಪಂ
ಗನಸೂಯೆ ಅತ್ರಿಗೆ ವಷಿಷ್ಟಂಗರುಂದತಿಯು

ಜನಕ ವಂಶದಲಿ ಲೋಪಾಮುದ್ರೆ ಕುಂಬಜಗೆ ಸೇರಿ ಪತಿಗಳ ಸೇವೆಯ
ವಿನಯದಿಂ ಮಾಳ್ಪಂತೆ ಗಂಗಾಂಬಿಕೆಯು ತನು
ಮನವನೊಚ್ಚತಗೊಟ್ಟು ಬಸವರಾಜನ ಚಿತ್ತ
ದನುಗುಣದ ಸತಿಯಾದಳೆಂದು ಕೊಂಡಾಡುವರ
ಚರಣಾಂಬುಜಕ್ಕೆ ಶರಣು"[೨೯]

ಗಂಗಾಂಬಿಕೆಯ ವಿವಾಹವು ಬಸವಣ್ಣನೊಡನೆ ಹೇಗೆ ಆಯಿತು, ಪೂರ್ವ ಸಿದ್ಧತೆಯನ್ನು, ಜೊತೆಗೆ ವಾದ್ಯ ಮೇಳ, ಸಂಭ್ರಮದಲ್ಲಿ ಬಸವ ಗಂಗಾಂಬಿಕೆಗೆ ಕಂಕಣಕಟ್ಟಿ, ಭಸ್ಮದ ವಿಳ್ಯೆಯ ಕೊಟ್ಟು, ಹೋಮಕುಂಡದ ಎದುರಿಗೆ ಸಮಾನಾಂತರದಿ, ಕೊಟ್ಟ ಆಸನದಿ ಕುಳ್ಳಿರಿಸಿ ಬಾಲೆಯರ ಮಂಗಳಾರತಿಯೊಂದಿಗೆ ವೈದಿಕರ ಪೌರೋಹಿತ್ಯದಲ್ಲಿ ಮಾಂಗಲ್ಯವನ್ನು ಧಾರಣ ಮಾಡಿಸಿದರು. ಈ ಅಂಶಗಳನ್ನು ಕವಿಯು ಹೇಳುತ್ತಾ, ಮೇಲಿನ ಪದ್ಯವನ್ನು ಉಲ್ಲೇಖಿಸುತ್ತಾನೆ. ಈ ಪದ್ಯದಲ್ಲಿ ಮಹಾ ಪತಿವ್ರತೆಯರಾದ ಸಾವಿತ್ರಿ, ಲೋಪಮುದ್ರೆ, ಅರುಂಧತಿ ಮೊದಲಾದವರಿಗೆ ಹೋಲಿಸಲಾಗಿದೆ. ಅಂತಹ ಗಂಗಾಂಬಿಕೆ ಬಸವಣ್ಣನ ಚಿತ್ತದನುಗುಣ ಸತಿಯಾದಳೆಂದು, ಪ್ರಸನ್ನತೆಯಿಂದ ಕೂಡಿದವಳು ಎಂದು ವರ್ಣಿಸಲು ಪ್ರಯತ್ನಿಸಿದ್ದಾನೆ. ಕವಿಯು ವೀರಶೈವ ಮಾರ್ಗಾನುಸಾರ ವಿವಾಹವು ನಡೆಯಿತು. ಹಾಗೂ ಕಲ್ಯಾಣ ಪಟ್ಟಣ ವೈಭವದಿಂದ ಕೂಡಿತ್ತು ಎಂದು ಬಣ್ಣಿಸುತ್ತಾನೆ. ಹಾಗೂ ಮದುವೆ ಮುಂಚಿತವಾಗಿ ಅಳಿಯನನ್ನು ಬರಮಾಡಿಕೊಳ್ಳುವುದು ಹಾಗೆ ವ್ಯವಸ್ಥಿತವಾದ ಸಿದ್ಧತೆ, ಇದನ್ನು ಗಮನಿಸಿದಾಗ ಲಕ್ಕಣ್ಣ ದಂಡೇಶ ಬಸವಣ್ಣ ಮದುವೆ ಕಣ್ಣು ಕಟ್ಟುವಂತೆ ಮಾಡಿ, ವೀರಶೈವ ಪದ್ಧತಿಯನುಸಾರವಾಗಿ "ವೀರಶೈವಾಗಮಾಚಾರ ಲಕ್ಷಣಯುತರು"[೩೦] ವೀರಶೈವ ಧರ್ಮದ ಗುರುಗಳು ಜೊತೆಗೆ ಎಲ್ಲ ಧರ್ಮದ ಪ್ರತಿನಿಧಿಗಳು ಬಂಧು ಬಾಂಧವರು ಸೇರಿ ವಿವಾಹ ನಡೆಸಿದಂತೆ ತಿಳಿಸುತ್ತಾನೆ.

ಗಂಗಾಂಬಿಕೆಯ ವಿವಾಹವನ್ನು ಕುರಿತು ಎಳಂದೂರ ಹರೀಶ್ವರ ವಿರಚಿತ ಪ್ರಭುದೇವರ ಪುರಾಣದಲ್ಲಿ,

"ತಂಗದಿರಮೊಗದ ಮೋಹಿನಿ ಕೇಳು ಬಸವರಸ
ಮಂಗಳಾತ್ಮಕ ವೀರಶೈವ ನಾತಗೆ ನಾವು
ಗಂಗಾಂಬೆಯಂ ಕೊಟ್ಟೊಡಂ ಮತ್ತೆಯಾಯಕ್ಕ
ಬರಲಿಲ್ಲ ನಮ್ಮ ಮನೆಗೆ...............
.....................................................
ಇಂದು ಮುಖಿ ಗಂಗಾಂಬೆಯಂ ಬಸವರಾಜಂಗೆ

ದಾರಿಯೆರೆಯಂಬ ನಿತಕಂ
ಕರಗಳಂ ಮುಗಿದು ಸ್ನೇಹದೊಳು ಬಲದೇವನತಿ
ಹರುಷದಿಂ ಭಸಿತ ವೀಳ್ಯೆಯವ ಮುಂದಿಟ್ಟು
ಮಹ ಗುರುವೆ ಗಂಗಾಂಬೆಯಂ ಕಲ್ಯಾಣವಾಗಿ
ಬಸವರಸ ರಕ್ಷಿಸು ಎಂದೊಡಂ"[೩೧]

ಕಪ್ಪಡಿ ಸಂಗಮದಲ್ಲಿ ಇದ್ದ ಬಸವಣ್ಣನನ್ನು ಬಲದೇವ ಭೇಟಿಯಾಗಿ ವೀರಶೈವನಾದ ನಿನಗೆ ನಮ್ಮ ಮಗಳನ್ನು ಕೊಡುವೆವು ಎಂದು ಹೇಳುತ್ತಾನೆ. ಮುತ್ತು ಸಮುದ್ರದಲ್ಲಿ ಹುಟ್ಟಿ ಅಲ್ಲೆ ಬಾಳುವಂತೆ, ನಮ್ಮ ಉದರದಲ್ಲಿ ಜನಿಸಿ ಬಾಳುತ್ತಿರುವ ಈಕೆಯನ್ನು ನಿಮಗೆ ಧಾರೆಯೆರೆದು ಕೊಡುತ್ತೇವೆ ಎಂದು ಬಲದೇವ ವಿನಮ್ರದಿಂದ ಕೇಳುತ್ತಾನೆ. ಅದಕ್ಕೊಪ್ಪಿದ ಬಸವಣ್ಣನಿಗೆ ಮದುವೆ ಮಾಡಿ ಭಸಿತ ವೀಳ್ಯ ಸಂತೋಷದಿಂದ ಕೊಟ್ಟು ಗಂಗಾಂಬಿಕೆಯನ್ನು ರಕ್ಷಿಸು ಎಂದು ಧಾರೆಯೆರೆದು ಕೊಡುತ್ತಾನೆ.

ಈ ಪುರಾಣದಲ್ಲಿ ಗಂಗಾಂಬಿಕೆ ಬಸವಣ್ಣನ ವಿವಾಹವು ಭಕ್ತಿ ಮತ್ತು ಶ್ರದ್ಧೆಯಿಂದ ಕೂಡಿದ್ದು ಕಾಣುತ್ತೇವೆ. ಜೊತೆಗೆ ವೀರಶೈವ ಭಾವನೆ ಬಲದೇವನಲ್ಲಿ ಇರುವಂತೆ ತೋರುತ್ತದೆ. ಮಗಳಿಗೆ "ಧನಕನಕ ನವರತ್ನ ಚಿನ್ನ ಪೆಟ್ಟಿಗೆಗಳಂ"[೩೨] ಈ ಸಂಪತ್ತು ಕಳಿಸಿಕೊಡುತ್ತಾನೆ ಬಲದೇವ. ಆದರೆ ಕವಿ ಇನ್ನೊಬ್ಬರ ಹಣಕ್ಕೆ ಆಸೆ ಪಡದ ಬಸವನಿಗೆ ಈ ಸಂಪತ್ತನ್ನು ನೀಡಿದ್ದಾನೆ ಎಂದು ಉಲ್ಲೇಖಿಸುತ್ತಾನೆ.

ಕವಿ ಷಡಕ್ಷರಿ ದೇವ ಗಂಗಾಂಬಿಕೆಯ ವಿವಾಹದ ಬಗ್ಗೆ ಹೇಳುವ ಮುನ್ನ ಬಲದೇವನು ತಂಗಿಯ ಮಗನ ನೆನಪನ್ನು ಮಾಡಿ ಮತ್ತು ಅವನ ಮುಖವನ್ನು, ಗುಣ ಸಂಪನ್ನನೆಂದು ತಿಳಿದು "ಎನ್ನಯ ತಂಗಿಯಾತ್ಮಭವನೊರ್ವನ ಪೂರ್ವಗುಣಂ ಮಹತ್ವಂ..... ಪೆನ್ನ ಬಲಾಧಿಪಂ ಬಸವಣ್ಣನಲ್ಲಿಗೆ ಬಂದನವಂ ವಿಳಾಸದಿಂ"[೩೩] ಬಸವಣ್ಣನನ್ನು ಹುಡುಕುತ್ತಾ ಕಪ್ಪಡಿ ಸಂಗಮಕ್ಕೆ ಬಂದು ಬಲದೇವನು ಸಂತೋಷಪಟ್ಟು, ಮದುವೆಯ ಪ್ರಸ್ತಾಪ ಮಾಡಿ, ಕೆಲವೇ ದಿನಗಳಲ್ಲಿ ವಿಜೃಂಭಣೆಯ ಮದುವೆಯ ಮಾಡಿದ ವಿವರವಿದೆ. ಹಾಗೂ ಆಕೆಯ ಸೌಂದರ್ಯವನ್ನು ಕವಿಯು ವರ್ಣಿಸುತ್ತಾನೆ. ಗಂಗಾಂಬಿಕೆಯ ಯೌವನ, ಚೆಲುವು, ಆಕೆಯ ಗುಣ ಹೇಳಿ ಹಿಂದಿನ ಕವಿಗಳ ಸಾಲನ್ನೆ ಅನುಸರಿಸಿದ್ದಾನೆ. ವಿಶೇಷ ಎಂದರೆ ಬ್ರಾಹ್ಮಣ ಕನ್ಯೆಯಾದ ಈಕೆಗೆ ದೀಕ್ಷೆಯನ್ನು ಕೊಡಿಸುವುದರ ಮೂಲಕ ಹೆಣ್ಣಿಗೆ ಸಮಾನವಾದ ಹಕ್ಕನ್ನು ಕೊಟ್ಟಿದ್ದನ್ನು ಕವಿ ಉಲ್ಲೇಖಿಸುತ್ತಾನೆ. "ಬಲದೇವ ಪಡೆದಿತ್ತ ಕನ್ನಿಕೆಗೆ ಭಾಸ್ವ ದ್ದೀಕ್ಷೆಯಂ ಮಾಡಿಸುತ್ತೊಲವಿಂ ಸಂಗಮದೇವ ಸದ್ಗುರುವಿನಿಂ"[೩೪] ಗಂಗಾಂಬಿಕೆಯ ತಂದೆ ಬಸವನಿಗೆ ಮನ ಸೋತು ಈತನ

ಆಚಾರಕ್ಕೆ ಬದ್ಧನಾದನೋ? ಯಾಕೆಂದರೆ ಬ್ರಾಹ್ಮಣರಲ್ಲಿ ಈ ಪದ್ಧತಿ ಇಲ್ಲ, ವೀರಶೈವನಾದ ಬಸವನ ಶರತ್ತು ಆಗಿತ್ತೆ? ಅಥವಾ ಬಲದೇವನೆ ಈ ಧರ್ಮದ ತತ್ವ ಆಚರಣೆಗೆ ಬದ್ಧನಾದನೊ? ಎಂಬ ವಿಚಾರಗಳು ಇಲ್ಲಿ ಮೂಡುತ್ತವೆ. ಬಹುಶಃ ಸಂಗಮ ಗುರುಗಳ ಸಂಸ್ಕಾರವೇ ಕಾರಣವೂ ಆಗಿದೆ ಎನ್ನಬಹುದು.

ಕವಿಯು ಇವರಿಬ್ಬರ ವರ್ಣನೆಯನ್ನು ಈ ಕಾವ್ಯದಲ್ಲಿ ತುಂಬಿದ್ದಾನೆ. ಮುಂದೆ,

"ಪರಸೆ ಗಣಂಗಳಾದರಿಸೆ ಭಕ್ತಜನಂ ಪದಪಿಂದೆ ಬಂದುನಿಂ
ದಿರೆ ವೃಷಭೇಂದ್ರನಾ ಪಸೆಯ ಮಂಟಪದೊಳ್ ಬಲದೇವ ಮಂತ್ರಿ ಭಾ
ಸುರತರ ವೈಭವಂ ಮಿಗೆ ತನೂಜೆಯನಂದೊಡಗೊಂಡು ಬಂದು ಭ
ಕ್ತರ ಮತವೆಂತುಟಂತಿರೆ ವಿವಾಹ ಮನಚ್ಚರಿಯಾಗೆ ಮಾಡಿದಂ"[೩೫]

ಗಂಗಾಂಬಿಕೆ ಮತ್ತು ಬಸವನ ಮದುವೆಗೆ ಅನೇಕ ಜಂಗಮರು, ಶಿವಮಾನಸರು, ಬಂದು ಇವರಿಬ್ಬರ ವೈಭವವನ್ನು ನೋಡಿ ಸಂತೋಷಪಟ್ಟು ಹರಸುವಂತೆ ಬಾಸವಾಗುತ್ತಿತ್ತು. ಆಗ ಬದೇವ ಬಂದು ಎಲ್ಲರ ಅಪ್ಪಣೆ ಪಡೆದು ವಿವಾಹ ಮಾಡಿದನು. ಹಾಗೆ ಈ ಕಾವ್ಯದಲ್ಲಿ ಸಂಭ್ರಮದಿಂದ ಮದುವೆ ಮಾಡಿದ ಬಲದೇವ ರತ್ನ, ಬಂಗಾರ ಮುಂತಾದವುಗಳನ್ನು ಶಿವಗಣಂಗಳಿಗೆ ನೀಡಿದ ವಿವರವಿದೆ. ಆದರೆ ಕವಿ ಹರೀಶ್ವರ ಗಂಗಾಂಬಿಕೆಗೆ ಉಡುಗೊರೆ ರೂಪದಲ್ಲಿ ಕಳಿಸಿದ್ದನ್ನು ಬಸವಣ್ಣನನ್ನು ಪ್ರಶ್ನೆಗೆ ಒಳಪಡಿಸಿದಂತೆ ತೋರುತ್ತದೆ. ಆದರೆ ಕವಿ ಷಡಕ್ಷರಿ ಬಸವಣ್ಣ ಧನ, ಕನಕ, ಸಂಪತ್ತಿಗೆ ಆಸೆ ಪಡಲಿಲ್ಲ, ಅದು ಜಂಗಮ ಪುಂಗವರೆಲ್ಲರಿಗೂ ದಾನ ಮಾಡು ಎಂದು ಹೇಳಿರಬಹುದು.

ಬಸವರಾಜ ವಿಜಯಂನಲ್ಲಿ ಕವಿ ಗಂಗಾಂಬಿಕೆಗೆ ತಾಯಿ ಇದ್ದಳು ಎಂದು ಹೇಳುತ್ತಾನೆ. ಆದರೆ ಹೆಸರು ಉಲ್ಲೇಖಿಸಿಲ್ಲ. "ಬಲನಾಯಕಂ ನಿಜರಮಣಿವೆರಸು ಪರಮೋತ್ಸಾಹದಿ"[೩೬] ಗಂಗಾಂಬಿಕೆಗೆ ತಾಯಿ ಇದ್ದಳು ಎಂಬುದನ್ನು ಈ ಕಾವ್ಯ ಸ್ಪಷ್ಟಪಡಿಸುತ್ತದೆ. "ಗಂಗಾಂಬಿಕೆ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆ ಬಲದೇವರಸ ಮತ್ತು ದೊಡ್ಡಪ್ಪ-ದೊಡ್ಡಮ್ಮ ಸಿದ್ಧರಸ-ಪದ್ಮಮ್ಮರ ಪ್ರೀತಿಯ ಆರೈಕೆಯಲ್ಲಿ ಬೆಳೆದಳು. ತನ್ನ ಮಗಳ ಮೇಲಿನ ವಿಶೇಷ ಮಮತೆಯಿಂದ ಬಲದೇವರಸ ಎರಡನೆಯ ವಿವಾಹವನ್ನೇ ಮಾಡಿಕೊಳ್ಳಲಿಲ್ಲ."[೩೭] ಎಂದು ಬಿ.ಮಹಾದೇವಪ್ಪನವರ ಅಭಿಪ್ರಾಯಪಟ್ಟು, ಈಕೆಯ ತಾಯಿ ಚಿಕ್ಕವಳಿರುವಾಗಲೇ ಸಾವನ್ನಪ್ಪಿದಳು ಎನ್ನುತ್ತಾರೆ. ಹಾಗೂ ಮುಂದೆ ಬಲದೇವನ ಅಣ್ಣನ ಮನೆಯಲ್ಲಿ ಬೆಳೆದಳು ಎಂಬುದನ್ನು ಹೇಳಿದ್ದಾರೆ.

ಸಿಂಗಿರಾಜನು ಸಿಂಗಿರಾಜ ಪುರಾಣದಲ್ಲಿಯೂ ಗಂಗಾಂಬಿಕೆ ಬಸವಣ್ಣನ ವಿವಾಹದ ಬಗ್ಗೆ ಹೇಳುತ್ತಾನೆ. ಹಾಗೂ ಬಲದೇವ ಮುಂಜಿಗೆ ಹೋದುದನ್ನು, ಹಿಂದಿನ ಕವಿಗಳ ಉಲ್ಲೇಖವನ್ನೇ ನೀಡುತ್ತಾ, ಈಕೆಯ ವಿವಾಹದ ಸಿದ್ಧತೆ "ಸರ್ವಪುಣ್ಯ ಜನ ವೃಂದಮಂ ಕರೆಸಿ ಮಂಗಳಕೆ ಮಂಗಳ ಮಂಟಪವ ನೊಡರ್ಚಿ ಸಂಭ್ರಮದೊಳು"[೩೮] ಕವಿ ಶಿವಶರಣರು (ಪುಣ್ಯವಂತ ಜನರು) ಹಾಗೂ ತನ್ನ ಎಲ್ಲ ಬಳಗದೊಂದಿಗೆ ಶುಭಕರವಾದ ಮಂಟಪ ರಚಿಸಿ ಸಂತೋಷದಿಂದ ವಿವಾಹದ ತಯಾರಿ ನಡೆಸಿದ ವಿವರವಿದೆ.

"ಗಂಗಾಧರನ ಜಟಾಜೂಟದಿಂದಿಳಿದ ಭಾ
ಗ್ಯಾಂಗನೆಯ ಭಾಗೀರಥೀ ನಾಮವೆಸೆವಮಲ
ಗಂಗಾಂಬಿಕೆಗೆ ಸಕಲ ಮಂಗಳಾಭರಣಾದಿ ಪೂಜ್ಯತೆಯ ನೋಜೆಯಿಂದ
ಸಿಂಗರಿಸಿ ಮದನಗೆ ಮಹೇಂದ್ರಜಾಲವನೊಡ್ಡಿ
ದಂಗದ ಸುವಾಸಿನಿಯರುಗಳು ಈ ಮದುವಳಿಗೆ
ಸಂಗನಬಸವನರಸಿ ಯೆಂದಕ್ಷತೆಯನಿಕ್ಕ ಪಾಡಿದರದೇಂ ಪೊಗಳ್ವೆನು"[೩೯]

ಸಿಂಗಿರಾಜನು ಗಂಗಾಂಬಿಕೆಯನ್ನು ಶಿವನ ಜಡೆಯಿಂದ ಇಳಿದ ಗಂಗಾಮಾತೆಗೆ ಹೋಲಿಸುತ್ತಾನೆ. ಆಕೆಯನ್ನು ಸಕಲ ಮಂಗಲ ಆಭರಣಗಳಿಂದ ಅಲಂಕರಿಸಿ ಧನ್ಯತಾಭಾವದಿಂದ ಸಿಂಗರಿಸಿದ ಪರಿಚಾರಕರು ಆಕೆಯನ್ನು ಎಲ್ಲರ ಕಣ್ಮನ ಸೆಳೆಯುವಂತೆ ಮಾಡಿದರು. ಈಕೆಯು ಸಂಗನ ಬಸವನ ಒಡತಿಯೆಂದು ಹೇಳಿ ಬಲದೇವನ ನೇತೃತ್ವದಲ್ಲಿ ಅಕ್ಷತೆ ಹಾಕಿ ಹರಸಿದರು ಎಂದು ಸಿಂಗಿರಾಜ ವರ್ಣಿಸುತ್ತಾನೆ. ಚೆನ್ನಬಸವ ಪುರಾಣದ ಕರ್ತೃ ವಿರೂಪಾಕ್ಷ ಪಂಡಿತ ತನ್ನ ಕಾವ್ಯದಲ್ಲಿ ಹೀಗೆ ಉಲ್ಲೇಖಿಸಿದ್ದಾನೆ.

"ಮೇಲೆ ಕಲ್ಯಾಣ ಪುರಕಗ್ರಭವೆವೆರಸಿ ಬಂ
ದಾ ಲಲಿತ ಬಲದೇವ ಮಂತ್ರಿಯ ಕುಮಾರಿಯಂ
ಮೇಳದಿಂ ಮದುವೆಯಾಗಾತನಳಿಯಲ್ಕವನ......"[೪೦]

ಈ ಪುರಾಣದಲ್ಲಿ ಬಲದೇವ ಮಂತ್ರಿಯು ತನ್ನ ಮಗಳನ್ನು ಬಸವಣ್ಣನಿಗೆ ಕೊಟ್ಟು ಮದುವೆ ಮಾಡಿದನು ಕಲ್ಯಾಣದಲ್ಲಿ ಎಂದು ಕವಿ ಉಲ್ಲೇಖಿಸುತ್ತಾನೆ. ಕಂಚಿ ಶಂಕರಾರಾಧ್ಯರು ಗಂಗಾಂಬಿಕೆ ಬಸವಣ್ಣನ ವಿವಾಹವನ್ನು ಉಲ್ಲೇಖಿಸಿದ ಬಗೆ ಇಲ್ಲಿದೆ.

"ನಾವು ಸಂಸಾರ ಭ್ರಮೆಯಿಲ್ಲದವರು ಅದಕ್ಕಾಗಿಯೇ
ಗಂಗಾಂಬಿಕೆಯು ಪ್ರತ್ಯಕ್ಷ ಗಂಗಾದೇವಿಯೇ
ಬಸವಣ್ಣನು ಸಾಕ್ಷತ್ ಶಿವನೇ, ಹೀಗೆ ಕಾಣುತ್ತೇವೆ.

ವಿತನಾದಿಗಳಿಂದ ಅಲಂಕೃತನಾದ ಹಾಗೂ ಮಹಾಭಕ್ತರಿಂದ
ಮೊದಲೇ ಸುತ್ತುಗಟ್ಟಲ್ಪಟ್ಟ ವಿವಾಹ ವೇದಿಕೆಯನ್ನೇರಿದನು
ಬಲದೇವನು ವಿವಾಹ ವೇದಿಕೆಯ ಹತ್ತಿರ ಬಂದು
ವಿನಯಶೀಲನಾಗಿ ನಮಸ್ಕರಿಸಿ ಬಸವಣ್ಣನೊಡನೆ
ತನ್ನ ಮಗಳ ಪಾಣಿಗ್ರಹಣವನ್ನು ಶಾಸ್ತ್ರೋಕ್ತವಾಗಿ
ಮಾಡಿಸಿದನು"[೪೧]

ನಾವು ಸಂಸಾರ ಹಂಗಿನಲ್ಲಿ ಜೀವಿಸುವವರು. ಹಾಗಾಗಿ ಗಂಗಾಂಬಿಕೆ ಶಿವನ ಜಡೆಯ ಗಂಗೆಯೇ ಆಗಿದ್ದಾಳೆ. ಬಸವನು ಶಿವನೆ ಆಗಿದ್ದಾನೆ. ಇಂಥ ಮದುಮಕ್ಕಳಿಗೆ ವಿವಾಹ ಮಾಡಿ ಧನ್ಯನಾಗಬೇಕೆಂಬುದು ಬಲದೇವನ ಇಚ್ಛೆ. ಮಹಾಭಕ್ತರಿಂದ ಸುತ್ತುವರಿಯಲ್ಪಟ್ಟ ಬಸವಣ್ಣನನ್ನು ಕರೆತಂದು ತನ್ನ ಮಗಳಾದ ಗಂಗಾಂಬಿಕೆಯನ್ನು ವಿವಾಹ ಮಾಡಿಕೊಟ್ಟನು. ಈ ಸಂಸ್ಕೃತ ಪುರಾಣದಲ್ಲಿ ಬಸವಣ್ಣನನ್ನು ದೈವಾಂಶ ಸಂಭೂತನನ್ನಾಗಿ ಮಾಡಿದೆ. ಯಾಕೆಂದರೆ ಹಿರಿಯನಾದ ಬಲದೇವನು ವಿನಯ ಶೀಲನಾಗಿ ಗೌರವಿಸಿ ನಮಸ್ಕರಿಸುವುದು ಬಸವಣ್ಣನನ್ನು ಕವಿಯು ಉನ್ನತ ಮಟ್ಟದಲ್ಲಿ ಚಿತ್ರಿಸಿದ್ದಾನೆ ಎನ್ನಬಹುದು.

ಶಂಕರಕವಿ ವಿರಚಿತ ಚೋರಬಸವೇಶ್ವರ ಕಾವ್ಯದಲ್ಲಿ

"ಇಂತಧೀಕ ಬಲದೇವ ಪುರುಷ ಜಸವಡೆದಿರುತ
ಸಂತಾನ ತನಗಿಲ್ಲವೆಂದು ಯೋಚಿಸಿಯುತ್ರಿಪು
ರಾಂತಕನ ಭಜಿಸೆ ವೊಲಿದಾಗ ಬಸವೇಶ್ವರನ
ಭಕ್ತಿ ಕಳೆಯನ್ನು ತೆಗೆದು
ಸಂತಸದಿ ವೊಂದು ಪುತ್ಥಳಿ ರಚಿಸಿ ಕಳುಹಲ್ಕೆ
ಅಂತವರ ಜಠರದೋಳ್ ಜನಿಸೆ ಜಾತಕ ತೆಗೆಸೆ
ಇಂತವಳ ಪೆಸರು ಗಂಗಾಂಬಿಕೆಯು ಬಸವೇಶ ನರಸಿ
ಯದಳೆಂದು ಸುರ್ದರು"[೪೨]

ಈ ಮೇಲಿನ ಪದ್ಯದಲ್ಲಿ ಗಂಗಾಂಬಿಕೆಯನ್ನು ಬಸವನರಸಿಯೆಂದು ಕರೆಯಲಾಗಿದೆ ಆದ್ದರಿಂದ ಗಂಗಾಂಬಿಕೆ ಬಸವಣ್ಣನನ್ನು ವಿವಾಹವಾಗಿದ್ದಳೆಂದು ಗ್ರಹಿಸಬಹುದಾಗಿದೆ. ಗರಣಿಯ ಬಸವಲಿಂಗನ ಬಸವೇಶ್ವರ ಕಾವ್ಯದಲ್ಲಿ

"ಪರಮೋತ್ಸವದಿಂ ಗಂಗಾ
ತರುಣಿಯರ ವಿವಾಹವಾಗಿ ಗುರುದರ್ಶನಮಂ

ಹರುಷದಿಂ ಮಾಡಿ ಲಿಪಿಯೋ
ದುರುಧನವ ತೆಗೆಸಿ ಬಸವರಾಜಂ ಮೆರದು"[೪೩]

ಕವಿ ಈ ಕಂದಪದ್ಯದಲ್ಲಿ ಗಂಗಾಂಬಿಕೆಯ ವಿವಾಹವಾಗಿ ಗುರುದರ್ಶನ ಮಾಡಿ ಲಿಪಿಯ ಓದಿ ಧನವ ತೆಗೆಸಿ ಬಸವರಾಜನು ವೈಭವವಾಗಿ ಮೆರೆದನು ಎಂಬುದನ್ನು ಹೇಳಿ ಮುಂದುವರೆದು.

"ಭಾಸುರ ಸ್ವರ್ಣ ವಿಶೇಷ ರತ್ನಂಗಳ । ಬಾಸಿಗ ತೊಂಡಿಲಗಳನು
ಶ್ರೀಶಿವ ಬಸವದಂಡೇಶ ಗಂಗಾದೇವಿ । ಗಾ ಸಮಯದೊಳು ಸೂಡಿದರು
ಹಾಲು ತುಪ್ಪವನು ವಿಶಾಲದ ಗಿಂಡಿಗೆ । ಮೇಲಾದ ಲಗ್ನದೊಳ್ತುಂಬಿ
ಅಲಸ್ಯವಿಲ್ಲದೆ ಶೂಲಿಯ ಶರಣರು । ಲೀಲೆಯಂ ಧಾರೆಯೆರೆದರು"[೪೪]

ಬಸವ ಗಂಗಾಂಬಿಕೆಯರಿಗೆ, ಬಾಸಿಂಗ, ದಂಡೆ ಧರಸಿ ವಧುವರರಾಗಿ ಸಿದ್ಧಗೊಳಿಸ ಲಾಯಿತು. ನೆರೆದ ಹಿರಿಯರು, ಶರಣರು ಕೂಡಿ ಹಾಲು ತುಪ್ಪವನ್ನು ಹಾಕಿ ಬಸವನಿಗೆ ಗಂಗಾಂಬಿಕೆಯನ್ನು ಧಾರೆಯೆರೆದರು ಎಂದು ದಾಖಲಿಸಿದ್ದಾನೆ. ಅಲ್ಲದೆ ಕವಿ ಈ ಕಾವ್ಯದಲ್ಲಿ ವಧೂ ವರರನ್ನು ಹೇಗೆ ಸಿಂಗರಿಸಲಾಯಿತು. ಮದುವೆಯನ್ನು ಹೇಗೆ ಮಾಡಲಾಯಿತು. ಯಾವ ವಿಧಿ ವಿಧಾನಗಳನ್ನು ಬಳಸಲಾಯಿತು ಎಂಬ ಮುಂತಾದ ವರ್ಣನೆಗಳನ್ನು ಮಾಡಿರುವುದು ಕಂಡುಬರುತ್ತದೆ.

ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ ಗಂಗಾಂಬಿಕೆಯ ವಿವಾಹ ಹಾಗೂ ಬಸವಣ್ಣನಿಗೆ ಮಂತ್ರಿ ಪದವಿಯ ಕುರಿತು ಪ್ರಸ್ತಾಪಿಸಲಾಗಿದೆ.

"ಬಲದೇವನೀ ವಾರ್ತೆಯಂ ಕೇಳಿ ನಿಜಸೋದ
ರಳಿಯನಲ್ಲಾ ಬಸವಗೆನ್ನ ಮಗಳೀವೆನೆಂ
ದೊಲಿದು ಗಂಗಾಂಬಿಕೆಯ ತಂದು ಮದುವೆಯ ಮಾಡಿಕೊಟ್ಟು
ಶಿವಪುರಕೆಯ್ದಿದಂ
ನೆಲದೆರೆಯ ಬಿಜ್ಜಳಂ ಬಸವಯ್ಯನಂ ಬರಿಸಿ
ನಲಿದು ಸಪ್ತಾಂಗ ರಾಜ್ಯಕ್ಕಧೀಶ್ವರನೆಂದು
ಬಲದ ಗದ್ದುಗೆಯಿತ್ತು ಸುಪ್ರಧಾನತ್ವ ಮಂ
ಕೊಟ್ಟು ಮನ್ನಿಸುತ ಬಳಿಕ"[೪೫]

ಬಲದೇವನು ಬಸವಣ್ಣ ತನ್ನ ಸೋದರಳಿಯನೆಂದು ತಿಳಿದು ಬಹಳ ಸಂತಸವಾಗಿ ಈತನಿಗೆ ತನ್ನ ಮಗಳು ಗಂಗಾಂಬಿಕೆಯನ್ನು ಕೊಡಬೇಕು ಎಂದು ನಿರ್ಧರಿಸಿ ಬಸವನಿಗೆ

ಒಪ್ಪಿಸಿ ಮದುವೆ ಮಾಡಿಕೊಟ್ಟನೆಂದು ತಿಳಿದುಬರುತ್ತದೆ. ಆ ಬಳಿಕ ಬಿಜ್ಜಳನು ಬಸವಣ್ಣನ್ನು ಆಸ್ಥಾನಕ್ಕೆ ಕರೆಯಿಸಿ ಮಂತ್ರಿ ಪದವಿಯನ್ನು ಕೊಟ್ಟನು ಎಂದು ಕವಿ ಉಲ್ಲೇಖಿಸುತ್ತಾನೆ.

ಗಂಗಾಂಬಿಕೆಯ ವಿವಾಹವನ್ನು ಕುರಿತು ಬಸವ ಪವಾಡ ಎಂಬ ಕಾವ್ಯದಲ್ಲಿ ಹೇಳುತ್ತಾ

"ಕರತಂದು ಗಂಗಾಂಬಿಕೆಯೆಂಬ ಮಗಳಿತ್ತು
ಹರುಷದಿ ಬಸವೇಶ್ವರಗೆ
ತ್ವರಿತದಿ ಮದುವೆಯ ಮಾಡಿದ ಬಲದೇವ
ಪರಿಣಮದೊಳಗಿರುತಿರ್ದ"[೪೬]

ಈ ಕೃತಿಯಲ್ಲಿ ಬಲದೇವ ಮಂತ್ರಿ ತ್ವರಿತದಿ ಬಂದು ಬಸವಣ್ಣನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದ ಎಂದು ಕವಿ ಹೇಳಿದ್ದಾನೆ. ಶ್ರೀ ಬಸವೇಶ್ವರ ಸ್ತೋತ್ರ ಮುಕ್ತಾ ಫಲದಲ್ಲಿ ಗಂಗಾಂಬಿಕೆಯನ್ನು ಕುರಿತು ಷಡಕ್ಷರಿದೇವ ಶ್ರೀ ಬಸವೇಶ್ವರ ಸುಪ್ರಭಾತ ಸ್ತವನಂ ಲನೇ ಪದ್ಯದಲ್ಲಿ

"ಗಂಗಾಕಾಂತಂ ಸಂಗಮನಾಥಾರ್ಪಿತ ಚಿತ್ತಂ
ಮಾಂಗಲ್ಯಾಂಗಂ ಜಂಗಮ ಲಿಂಗಾರ್ಚನ ಲೋಲಂ
ಕಲ್ಯಾಣ ಶ್ರೀಸೇವಿತ ಮತ್ಯದ್ಭುತ ವೃತ್ತಂ
ವಂದೇಹಂ ತ್ವಾಂ ನಿರ್ಜಿತ ಪಾಶಂ ಬಸವೇಶಂ"[೪೭]

ಈ ಕಾವ್ಯದಲ್ಲಿ ಬಸವಣ್ಣನನ್ನು ಗಂಗಾಕಾಂತ ಎಂದು ಕರೆಯಲಾಗಿದೆ. ಆದ್ದರಿಂದ ಗಂಗಾಂಬಿಕೆಗೆ ಪತಿಯಾಗಿದ್ದ ಹಾಗೂ ಬಸವಣ್ಣನಿಗೆ ಗಂಗಾಂಬಿಕೆ ಸತಿಯಾಗಿದ್ದ ವಿಚಾರ ತಿಳಿದುಬರುತ್ತದೆ. ಗಂಗಾಂಬಿಕೆಯ ವಿವಾಹವನ್ನು ಕುರಿತು ಗುರುಲಿಂಗ ದೇಶಿಕನು ತನ್ನ ಲಿಂಗಪುರಾಣಂದಲ್ಲಿ ಉಲ್ಲೇಖ ಮಾಡುತ್ತಾನೆ.

"ಎಂದು ಖಂಡಿಸಿದ ವಾದಕ್ಕೆ ಮುನಿದು ಮೊಗದಿರುಹಿ
ಮಂದಿರವ ಹೊರಡೆಂದು ನುಡಿಯೆ ಬಸವಂ ಹೊರಡ
ಲಂದು ಬಲದೇವ ತನ್ನಯ ಮಗಳ ತಂದಿತ್ತು ಮಂಗಲಂ
ಗೈದ ನೊಲಿದು
ಅಂದು ಗಂಗಾಂಬೆಯುಂ ಬಸವನುಂ ಪೊರಮಡಲು
ನಿಂದಂ ನೋಡಲ್ಕಾರೆ ನಾನೆನುತ ಹೊರವಂಟ
ಳೊಂದಿ ನಾಗಾಯಕ್ಕೆ ಸಹ ಬಸವ ತೆರಳಿದಂ
ಸಂದ ಸಂಗಮಕ್ಕೆ ಬರದಿ"[೪೮]

ಗುರುಲಿಂಗ ದೇಶಿಕನ ಕಾವ್ಯದಲ್ಲಿ ಬಸವಣ್ಣ ಉಪನಯನ ತಿರಸ್ಕರಿಸಿದಾಗ ಮನೆಯನ್ನು ಬಿಟ್ಟು ಹೋಗು ಎಂದು ಈತನ ತಂದೆ ತಾಯಿಗಳು ಹೇಳಿದಾಗ ಬಲದೇವ ತನ್ನ ಕುವರಿ ಗಂಗಾಂಬಿಕೆಯನ್ನು ವಿವಾಹ ಮಾಡಿದ ಕೂಡಲೇ ಸಂಗಮಕ್ಕೆ ಅಕ್ಕ ನಾಗಾಯಿಯೊಂದಿಗೆ ಬಂದನು ಎಂದು ಕವಿ ಉಲ್ಲೇಖಿಸುತ್ತಾನೆ.

ಗುಬ್ಬಿ ಮಲ್ಲಣಾರ್ಯ ವೀರಶೈವಾಮೃತ ಪುರಾಣದಲ್ಲಿ

> "ಕಟ್ಟಿದಪೆನೆನಲು ಮುಂಜಿಯ ತಂದೆತಾಯ್ಗಳಂ
> ಬಿಟ್ಟಕ್ಕನಾಗಾಂಬೆಯೊಡನೆ ಬರೆ ಕಲ್ಯಾಣ
> ಪಟ್ಟಣದ ಬಿಜ್ಜಳನ ಮಂತ್ರಿ ಬಲದೇವನಾತ್ಮಜೆಯೆನಿಪ
> ಗಂಗಾಂಬೆಯ ಕೊಟ್ಟು ಮದುವೆಯ ಮಾಡೆ ಸೌಂದರಿಸಮೇತವಾ
> ಕಟ್ಟಧಿಕ ಕಪ್ಪಡಿ ಸಂಗಮೇಶ್ವರಕೆ ಬರೆ..........
> ............................ಕಥೆಯದಿನ್ನು ಮೇಲೆ"[೪೯]

ಈ ಕಾವ್ಯದಲ್ಲಿ ಬಸವಣ್ಣ ಮುಂಜಿಯನ್ನು ವಿರೋಧಿಸಿ ತಂದೆ ತಾಯಿಗಳನ್ನು ಬಿಟ್ಟು ತನ್ನ ಅಕ್ಕ ನಾಗಾಂಬಿಕೆಯೊಂದಿಗೆ ಕಲ್ಯಾಣಕ್ಕೆ ಬಂದನು. ನಂತರ ಬಿಜ್ಜಳನ ಮಂತ್ರಿ ಬಲದೇವ ಮಗಳು ಗಂಗಾಂಬಿಕೆಯನ್ನು ಕೊಟ್ಟು ವಿವಾಹ ಮಾಡಿ, ಎಲ್ಲ ಮುತ್ತೈದೆಯರು ಅಥವಾ ಸುಮಂಗಲೆಯರು ಒಡಗೂಡಿ ಕಪ್ಪಡಿ ಸಂಮಗನಾಥನ ದರ್ಶನಕ್ಕೆ ಹೋದರು ಎಂದು ಕವಿ ಹೇಳುತ್ತಾನೆ.

ಡಾ.ಎನ್.ತಿಪ್ಪೇರುದ್ರಸ್ವಾಮಿ ಅಭಿಪ್ರಾಯಪಡುವಂತೆ ಬಸವಣ್ಣನ ಮದುವೆ "ಗಂಗಾಂಬಿಕೆ ಯೊಡನೆ ಕಲ್ಯಾಣಕ್ಕೆ ಬಂದ ಅನಂತರ ನಡೆದಿದೆ ಎಂದು ಊಹಿಸಬಹುದು."[೫೦] ಈಕೆಯ ಮದುವೆಯು ಕಲ್ಯಾಣದಲ್ಲಿ ಆಯಿತು ಎಂದು ಅಭಿಪ್ರಾಯ ನೀಡುತ್ತಾರೆ. ಮುಂದುವರೆದು ಬಸವಣ್ಣ "ವಿಶ್ವ ಸಂಸಾರದ ಮಹಾಸಾಗರಕ್ಕೆ ತನ್ನನ್ನು ಅರ್ಪಿಸಿಕೊಂಡು ಕಾರ್ಯೋದ್ಯುಕ್ತನಾದುದು ೧೧೫೬ರಲ್ಲಿ"[೫೧] ಮದುವೆಯು ನಡೆಯಿತು ಎಂದು ಅಭಿಪ್ರಾಯಪಡುತ್ತಾರೆ. ಡಾ.ಎಸ್.ಸಿ.ನಂದಿ ಮಠರು "ಬಿಜ್ಜಳನ ರಾಜ್ಯದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಬಸವನ ಸೋದರಮಾವ ಬಲದೇವನು ತನ್ನ ಪುತ್ರಿ ಗಂಗಾದೇವಿಯನ್ನು ಆತನಿಗೆ ವಿವಾಹ ಮಾಡಿಕೊಟ್ಟನು."[೫೨] ಇವರ ಅಭಿಪ್ರಾಯದಂತೆ ಮದುವೆಯಾಯಿತು. ಆದರೆ ಎಲ್ಲಿ, ಯಾವಾಗ ಆಯಿತು ಎಂದು ಹೇಳುವುದಿಲ್ಲ. ಎಂ.ಎಂ.ಕಲಬುರ್ಗಿಯವರು ಈಕೆಯ ಮದುವೆಯು ಬಸವಣ್ಣನವರೊಂದಿಗೆ ಜರುಗಿತು ಎಂಬುದನ್ನು ಹೀಗೆ ಹೇಳುತ್ತಾರೆ. "ಸೋದರಮಾವನು ಕಲ್ಯಾಣದ ಮಂತ್ರಿಯೂ ಆದ ಬಲದೇವನು ಹರ್ಷಿತನಾಗಿ ತನ್ನ ಮಗಳು ಗಂಗಾಂಬಿಕೆಯನ್ನು ಕೊಟ್ಟು ವಿವಾಹವನ್ನು ನೆರವೇರಿಸಿದನು."[೫೩] ಇವರ

ಅಭಿಪ್ರಾಯದಂತೆ ಕಲ್ಯಾಣ ಮಂತ್ರಿ ಎನ್ನುವುದರಿಂದ ಭೀಮಕವಿ ಮುಂತಾದ ಕವಿಗಳ ಉಲ್ಲೇಖದಂತೆ ಕಲ್ಯಾಣದಲ್ಲಿ ಜರುಗಿರುವ ಸಾಧ್ಯತೆಯಿದೆ.

ಡಾ.ಫ.ಗು.ಹಳಕಟ್ಟಿಯವರು "ಬಿಜ್ಜಳನಿಗೆ ಬಲದೇವನೆಂಬ ಮಂತ್ರಿಯು ಇದ್ದು ಈ ಮಂತ್ರಿಯು ತನ್ನ ಮಗಳಾದ ಗಂಗಾದೇವಿಯನ್ನು ಬಸವೇಶ್ವರನಿಗೆ ಕೊಟ್ಟು ಲಗ್ನ ಮಾಡಿದನು."[೫೪] ಇವರ ಹೇಳಿಕೆಯಂತೆ ಈಕೆಯ ಮದುವೆಯು ಆಯಿತು ಎಂದು ಹೇಳುತ್ತಾರೆಯೇ ವಿನಃ ಎಲ್ಲಿ? ಯಾವಾಗ? ಎಂದು ತಿಳಿಸುವುದಿಲ್ಲ. ಇವರ ವಿವಾಹ ಆಗಿದೆ ಎಂದು ಎಲ್ಲ ಚರ್ಚೆಯ ಮೂಲಕ ತಿಳಿಯುತ್ತದೆ. ಆದರೆ ಗಂಗಾಂಬಿಕೆಯ ಮದುವೆ ಆದ ನಿರ್ದಿಷ್ಟ ಸ್ಥಳ, ದಿನಾಂಕ ಗೊತ್ತುಪಡಿಸುವ ಸಾಧ್ಯತೆ ಕಡಿಮೆ ಇದೆ ಎಂದು ಎಲ್ಲರ ಅಭಿಪ್ರಾಯವಾಗಿದೆ. ಈಕೆಯ ವಿವಾಹವು ಮಂಗಳವೇಡಿಯಲ್ಲಿಯೇ ಜರುಗಿತು ಎಂದು ಊಹಿಸಬಹುದು. ಯಾಕೆಂದರೆ ಬಸವಣ್ಣ ಮೊದಲು ಮಂಗಳವೇಡಿಗೆ ಹೋಗುವುದರಿಂದ, ಹಾಗೂ ಹರಿಹರ ಹೇಳುವಂತೆ ಬಸವಣ್ಣ ಮೊದಲು ಮಂಗಳವೇಡಿಯನ್ನು ಪ್ರವೇಶ ಮಾಡುವುದರಿಂದ ಇಲ್ಲಿಯೇ ಗಂಗಾಂಬಿಕೆಯೊಂದಿಗೆ ವಿವಾಹ ಆಗಿರಬೇಕೆಂದು ಊಹೆಯೂ ಸಾಧ್ಯವಿದೆ.

ಪ್ರಸ್ತುತ ಅಧ್ಯಯನದಲ್ಲಿ ಗಂಗಾಂಬಿಕಾ ಇತಿವೃತ್ತ ಪ್ರಸ್ತಾಪಿಸಲಾಗಿದೆ. ಇತಿವೃತ್ತ ಎಂಬುದು ನಿಘಂಟಿನ ಪ್ರಕಾರ ನಡೆದ ಸಂಗತಿ, ಚರಿತ್ರೆ ಎಂದಾಗುತ್ತದೆಯೇ ವಿನಃ ಕಾಲ್ಪನಿಕ ಸಂಗತಿಯಲ್ಲ. ಅಂದರೆ ವಾಸ್ತವಾಂಶ ಹೆಚ್ಚು ಪ್ರಖರತೆ ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಗಂಗಾಂಬಿಕಾ ಸಂಬಂಧಿತ ಹಲವು ವಿಚಾರಗಳನ್ನು ಕಾವ್ಯಪುರಾಣ/ಸಾಹಿತ್ಯ. ಇತಿಹಾಸ, ಮೌಖಿಕ/ಜಾನಪದ ಹಾಗೂ ವಿಮರ್ಶೆ/ಅಭಿಪ್ರಾಯಗಳ ನೆಲೆಯಲ್ಲಿ ಕ್ರೋಢೀಕರಿಸಲಾಗಿದೆ. ತನ್ಮೂಲಕ ವಿವಿಧ ಆಕರಗಳು ಒದಿಗಸುವ ಮಾಹಿತಿಯನ್ನು ಅನ್ವಯಿಸಿಕೊಳ್ಳಲಾಗಿದೆ. ಗಂಗಾಂಬಿಕೆ ಕುರಿತು ಚರಿತ್ರೆ ಮೌಖಿಕ ಇತ್ಯಾದಿ ಎಲ್ಲ ಆಕರಗಳು ಮಾತಾಡುವುದು ಕಡಿಮೆಯೇ. ಆದರೆ ಕಾವ್ಯಪುರಾಣದಲ್ಲಿ ಹರಿಹರನಾದಿ ಯಾಗಿ ಆಕೆಯ ಬಗ್ಗೆ ತುಂಬ ವರ್ಣನೆ ಮಾಡುತ್ತಾರೆ. ಹೀಗಾಗಿಯೇ ಆಕೆಯ ಬಗ್ಗೆ ನಮಗೆ ಮಾಹಿತಿ ದೊರೆಯುತ್ತದೆ. ಬಹಳಷ್ಟು ಆಕರಗಳು ಬಸವಣ್ಣನವರನ್ನು ಶಿವನ ಪ್ರತಿರೂಪವೆಂದು ಗಂಗಾಂಬಿಕೆ ಭಾಗೀರಥಿ(ಗಂಗಮ್ಮನ) ರೂಪವೆಂದು ಪ್ರತಿಬಿಂಬಿಸಿವೆ. ಜೊತೆಗೆ ಆಕೆ ಬಲದೇವಾತ್ಮಜೆ ಎಂಬುದನ್ನು ಸ್ಪಷ್ಟೀಕರಿಸುತ್ತವೆ. ಹಾಗಾಗಿಯೇ ಬಲದೇವನ ಕುರಿತ ಚಾರಿತ್ರಿಕ ವಿವರಗಳನ್ನು ಕೊಟ್ಟು, ಬಸವಣ್ಣನವರು, ಬಿಜ್ಜಳ ಇವರಿಗೆ ಸಂಬಂಧ ಅದರಲ್ಲೂ ಚಾರಿತ್ರಿಕ ಸಂಬಂಧ ಇದೆ ಎಂಬುದನ್ನು ಹೇಳಲೂ ಪ್ರಯತ್ನಿಸಲಾಗಿದೆ. ಆದರೂ ಚರಿತ್ರೆಯಲ್ಲಿ ಗಂಗಮ್ಮನ ಬಗ್ಗೆ ಪ್ರಸ್ತಾಪವಿಲ್ಲ ಎಂಬುದು ಇಲ್ಲಿ ಗಮನಾರ್ಹ ಅಂಶವೆನಿಸಿದೆ.

ಇಲ್ಲಿ ಎರಡು ಅಂಶಗಳ ಬಗ್ಗೆ ಹೆಚ್ಚು ಒತ್ತು ಕೊಡಲಾಗಿದೆ.

೧. ಆಕೆಯ ಜನ್ಮಸ್ಥಳ

೨. ಆಕೆಯ ಮದುವೆ ಕಲ್ಯಾಣದಲ್ಲಿ ಆಯಿತೋ ಅಥವಾ ಮಂಗಳವೇಡೆಯಲ್ಲಿಯೋ

ಇದಕ್ಕೆ ಆಕರಗಳನ್ನು ಅನುಸರಿಸಿ ಹೆಚ್ಚಿನ ಆಕರಗಳು ಏನನ್ನು ಹೇಳುತ್ತವೆ ಎಂಬುದರ ಮೇಲೆ ಅವುಗಳನ್ನು ವಿವರಿಸಲಾಗಿದೆ. ಶಾಸನಗಳ ಪ್ರಕಾರ ಕರ್ನಾಟಕದ ಭಾಗದಲ್ಲಿಯೇ ಬಲದೇವ ಇರುವ ಸಾಧ್ಯತೆ ತಿಳಿಸುತ್ತದೆ. ಪೆರ್ಮಾಡಿಯ ನಂತರ ಬಿಜ್ಜಳ ಮಂಗಳವೇಡದಿಂದ ಆಳ್ವಿಕೆ ಪ್ರಾರಂಭಿಸಿದ ಎಂದರೆ ಬಿಜ್ಜಳನಲ್ಲಿ ದಂಡನಾಯಕನಾದ ಬಲದೇವ ಅಲ್ಲಿಯೇ ಇದ್ದಿರಬಹುದು ಅಥವಾ ಬಿಜ್ಜಳ ಪರವಾಗಿ ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರಬಹುದು. ಬಿಜ್ಜಳರಾಯನಿದ್ದ ಮಂಗಳವಾಡಕ್ಕೆ ಎಂದು ಹರಿಹರ ಉಲ್ಲೇಖಿಸಿದ್ದಾನೆ. ಆದರೆ ಬಿಜ್ಜಳ ಮಂಗಳವೇಡೆಯಲ್ಲಿದ್ದ ವಿವರವಿದೆಯೇ ವಿನಃ ಬಲದೇವನಿದ್ದ ವಿವರ ಸ್ಪಷ್ಟತೆಯಿಲ್ಲ ಹಾಗಾಗಿ ಜನ್ಮಸ್ಥಳ ಗೊಂದಲದಲ್ಲಿದೆ.

ಇನ್ನು ಎರಡನೆಯ ಹಂತ ಮದುವೆ. ಮೌಖಿಕ ಆಕರದ ಪ್ರಕಾರ ಗುರುವಿನಿಂದ ಅಪ್ಪಣೆ ಪಡೆದುಕೊಂಡು ಬಸವಣ್ಣ ಪಿಪ್ಪಲೆ ಪಟ್ಟಣಕ್ಕೆ ಬಿಜ ಮಾಡುತ್ತಾನೆ. ಎಂದರೆ ಕಾವ್ಯಗಳು ಹೇಳುವಂತೆ ಸಂಗಮದಲ್ಲಿ ಗುರುಗಳ ಅಪ್ಪಣೆ ಪಡೆದು ಕಲ್ಯಾಣಕ್ಕೆ ಬಂದಿರಬಹುದೇ? ಹೀಗೆ ಗಂಗಾಂಬಿಕೆ ಹಾಗೂ ಬಸವಣ್ಣನವರ ವಿವಾಹ ಜರುಗಿರುವುದನ್ನು ಹಲವಾರು ಆಕರಗಳು ಸ್ಪಷ್ಟಪಡಿಸಿವೆ.

## ೨. ಬಸವಣ್ಣನ ಜೀವನದಲ್ಲಿ ಬಂದ ನಂತರ ಕಲ್ಯಾಣ ಕ್ರಾಂತಿಯವರೆಗೆ

ಗಂಗಾಂಬಿಕೆ ವಿವಾಹವಾದ ನಂತರ ತನ್ನ ಸಾಂಸಾರಿಕ ಜೀವನವನ್ನು ಹೇಗೆ ನಡೆಸಿದಳು? ಹಾಗೂ ಬಸವಣ್ಣ ಮತ್ತು ಈಕೆಯ ದಾಂಪತ್ಯ ಜೀವನ, ಸಂತಾನ, ಮಹಾಮನೆಯ ಕಾರ್ಯವೈಖರಿ; ಹಾಗೂ ಬದುಕಿನಲ್ಲಿ ಬಂದ ಪರೀಕ್ಷೆಗಳನ್ನು ಪರಿಹಾರಕ್ಕೆ ಸಂಬಂಧಿಸಿದ್ದನ್ನು ಚರ್ಚಿಸಲಾಗಿದೆ. ಹಾಗೂ ಗಂಗಾಂಬಿಕೆಯನ್ನು ಕುರಿತ, ಮೌಖಿಕ, ಸಾಹಿತ್ಯ ಇತ್ಯಾದಿ ಆಕರಗಳ ವಿಚಾರಗಳನ್ನು ಪರಿಶೀಲಿಸಲಾಗಿದೆ. ಗಂಗಾಂಬಿಕೆಯಿಂದ ಮಹಾಮನೆಯ ಕಾರ್ಯ, ಅತಿಥಿಸತ್ಕಾರ, ಜೊತೆಗೆ ಅವಳಲ್ಲಿ ಅಡಗಿದ್ದ ಮಹತ್ತರವಾದ ಆಲೋಚನೆಗಳು, ಏನಾಗಿರಬಹುದು ಮುಂತಾದ ಅಂಶಗಳನ್ನು ಇಲ್ಲಿ ಚರ್ಚಿಸಲಾಗುವುದು.

### ೧. ದಾಂಪತ್ಯದ ಬದುಕು

ಗಂಗಾಂಬಿಕೆ ಬಸವಣ್ಣನ ಬದುಕು ಮನಸ್ಸಿನ ಕತ್ತಲೆ ಕಳೆದು ಅರುವಿನ ಜ್ಯೋತಿ ಮುಟ್ಟಿದಂತೆ ಆಗಿದೆ. ಈಕೆಯ ಬಗ್ಗೆ ಇಂಗಳೇಶ್ವರ ಕ್ಷೇತ್ರಕಾರ್ಯ ಕೈಗೊಂಡಾಗ ಅಲ್ಲಿಯ ಕುಲಕರ್ಣಿಯವರು ಗಂಗಾಂಬಿಕೆ ನಮ್ಮ ಮನೆತನಕ್ಕೆ ಕೀರ್ತಿಯನ್ನು ತಂದವಳು ಎಂದಾಗ

ಯಾಕೆ? ಗಂಗಾಂಬಿಕೆ ಆಚಾರಪತ್ನಿಯೆಂದರು. ಅಂದರೆ ಆಚಾರಕ್ಕೆ ಬದ್ಧಳಾದವಳು. ಹಾಗೂ ಪತಿನಿಷ್ಠೆ ಹೊಂದಿದ್ದಳು ಎಂದು ಹೇಳಿದಾಗ ಈಕೆಯ ಬಗ್ಗೆ ನಿಮ್ಮಲ್ಲಿ ಏನಾದರೂ ಆಧಾರಗಳಿವೆಯೇ? ನಾವು ಸ್ತ್ರೀಯರ ಹೆಸರನ್ನು(ವಂಶಾವಳಿ) ಹೆಸರಿಸುವುದಿಲ್ಲ ಎಂದರು. ನಂತರ ಅಲ್ಲಿಯ ವಿರಕ್ತಮಠದ ಚನ್ನಬಸವ ಸ್ವಾಮಿಗಳನ್ನು ಭೇಟಿಯಾದಾಗ ಗಂಗಾಂಬಿಕೆಯು ಪತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದಳು ಎಂದರು. ಈ ಇಂಗಳೇಶ್ವರ ಅವಳ ತಂದೆಯಾದ ಬಲದೇವನ ಜನ್ಮಸ್ಥಳವೆಂದರು. ಇಲ್ಲಿ ಈಕೆಯ ಬಗ್ಗೆ ಯಾವುದೇ ಕಥೆಗಳು ಲಭ್ಯವಾಗುವುದಿಲ್ಲ. ಬಸವಣ್ಣನ ತಾಯಿಯ ತವರು ಮನೆಯಾದ್ದರಿಂದ ಬಸವಣ್ಣನೊಂದಿಗೆ ಗಂಗಾಂಬಿಕೆ ವಿಚಾರ ತಿಳಿಯುತ್ತದೆ ಎಂದರು. ಡಾ.ಎಸ್.ಆರ್.ಗುಂಜಾಳ "ಈಕೆಯು ಮಹಾಮನೆಯ ಆಗುಹೋಗುಗಳ ಜವಾಬ್ದಾರಿಯನ್ನು ಹೊಂದಿದ್ದಳು."[೫೫] ಹಾಗೆ ಶಿವಲಿಂಗಮ್ಮ ಕಟ್ಟಿಯವರು ಹೀಗೆ ಹೇಳುತ್ತಾರೆ. "ಗಂಗಾಂಬಿಕೆ ಸಂಪ್ರದಾಯ ಕುಟುಂಬದಿಂದ ಬಂದವಳು ಹಾಗೂ ಬಸವಣ್ಣನ ಮನಸ್ಸನ್ನು ಅರ್ಥಮಾಡಿಕೊಂಡು ಜೀವನ ನಡೆಸಿದ್ದಾಳೆ."[೫೬] ಹಾಗೆ ಬೆಳಗಾವಿಯಲ್ಲಿಯ ನೀಲಗಂಗಾ ಚರಂತಿಮಠ "ಗಂಗಾಂಬಿಕೆಯಲ್ಲಿ ವೀರತ್ವವನ್ನು ಕಾಣುತ್ತೇವೆ."[೫೭] ಬಸವಣ್ಣನ ನೋವು ನಲಿವುಗಳಿಗೆ ಈಕೆ ಸಮಪಾಲು ಪಡೆದಿದ್ದಳೆನ್ನಬಹುದು.

ಬಸವ ಕಲ್ಯಾಣದ ಅನ್ನಪೂರ್ಣಮ್ಮರು 'ಈಕೆಯು ಸಮಾಧಾನಿ, ತನ್ನ ಕೆಲಸ ಕಾರ್ಯದಲ್ಲಿ ಮಗ್ನಳಾಗಿ, ಕರ್ತವ್ಯಮುಖಿ' ಎಂದರು. ಹಾಗೂ ಈಕೆಗೆ ಒಬ್ಬ ಮಗನಿದ್ದು ಚಿಕ್ಕವನಿರುವಾಗ್ಗೆ ಸಾವನ್ನಪ್ಪಿದ. ಆದರೆ ಹೆಸರು ಏನು? ಎಂದಾಗ ನಮಗೆ ಗೊತ್ತಿಲ್ಲ ಎಂಬ ಸಂಗತಿ ತಿಳಿದು ಬಂದಿತು. ಈಕೆಯ ಬಗ್ಗೆ ಹಲವಾರು ವಿದ್ವಾಂಸರು, ಸ್ವಾಮಿಗಳು ಆಕೆಯ ಕುರಿತು, ಇಂಗಳೇಶ್ವರ, ಬಸವನ ಬಾಗೇವಾಡಿ, ಬಸವಕಲ್ಯಾಣ, ಕಾದರವಳ್ಳಿ, ಧಾರವಾಡ, ಬೆಳಗಾವಿ, ಕೂಡಲಸಂಗಮ ಮುಂತಾದ ಕಡೆಯಲ್ಲಿ(ಕ್ಷೇತ್ರಕಾರ್ಯ)ಒಂದೇ ಅಭಿಪ್ರಾಯವಿದೆ. ದಾಂಪತ್ಯ, ಸಂತಾನ, ಮಹಾಮನೆ ಯಲ್ಲಿಯ ದಾಸೋಹ, ಅದನ್ನು ಬಿಟ್ಟರೆ ಬಸವಣ್ಣನಿಗೆ ಚೈತನ್ಯ ಶಕ್ತಿಯಾಗಿದ್ದಳೆ? ಈಕೆಯು ಅನುಭವ ಮಂಟಪದಲ್ಲಿ ಚರ್ಚಿಸಿದ್ದು, ಹಾಗೂ ಹೆಚ್ಚಿನ ಮೌಖಿಕ ವಿಷಯ ಸಿಗುವುದಿಲ್ಲ. ಶ್ರೀಮತಿ ಸಂಗಮ್ಮನವರು ಸಂಪಾದನೆ ಮಾಡಿದ ಲಾವಣಿ ಪದದಲ್ಲಿ "ಜ್ಞಾನಿಯಾದ ಗಂಗಾಂಬಿಕೆ"[೫೮] ಈಕೆಯನ್ನು ಜ್ಞಾನಿ ಎಂದು ಜನಪದರು ಕರೆಯುವುದನ್ನು ನೋಡಿದರೆ ಜ್ಞಾನದ ಪ್ರಖರತೆಯಿಂದ ಕೂಡಿದ್ದಳು ಮತ್ತು ಅನುಭಾವಿ ಕೂಡ ಆಗಿದ್ದಳು.

ಗಂಗಾಂಬಿಕೆ ಮುಗ್ಧೆ, ಸಹಾನುಭೂತಿ, ಅನುಕಂಪದಿಂದ ಕೂಡಿದವಳು ಯಾಕೆಂದರೆ ಬಿಜ್ಜಳನು ಬಂದು ನಿನ್ನ ಪತಿಯ ಅರ್ಧಪಾಲು ನನ್ನ ತಂಗಿ ನೀಲಾಂಬಿಕೆಗೆ ನೀಡು ಎಂದು ಕೇಳಿದ ಭಿಕ್ಷೆಯ ಉಲ್ಲೇಖವಿದೆ.

"ಬಿರಬಿರನೆ ಎದ್ದಾನ ಸರಸರನೆ ನಡೆದಾನ
ಭರದಿಂದ ಬಂದು ಕೇಳ್ಯಾನ । ಗಂಗಾಗ
ಕರದಲ್ಲಿ ಭಿಕ್ಷೆ ನೀಡಮ್ಮ
ಬಂದಿಲ್ಲ ಅರಸನಾಗಿ ನಿಂದಿರುವೆ ಅಣ್ಣನಾಗಿ
ಹಂದರದ ಭಿಕ್ಷೆ ಬೇಕಮ್ಮ । ತಂಗಿಗೆ
ನಂದಿಯನು ಅರ್ಧ ನೀಡಮ್ಮ
ಅಕ್ಕ ತಂಗಿಯರು ನಾವು ಸಕ್ಕರೆಯ ಗೊಂಬ್ಯಾಗಿ
ನಕ್ಕು ನಲಿಯುತ ಇರುವೆವು । ಬಸವನ
ಅಕ್ಕರತೆಯ ಕಣ್ಣಾಗಿ ಬಾಳುವೆವು"[೪೯]

ಬಿಜ್ಜಳ ಇದೆ ವಿಚಾರವಾಗಿ ಬಂದು ನಾನು ಅರಸನಾಗಿ ಬಂದಿಲ್ಲ, ಬದಲಾಗಿ ಅಣ್ಣನಾಗಿ ಬಂದು, ತಂಗಿ ನೀಲಮ್ಮನನ್ನು ಬಸವನಿಗೆ ವಿವಾಹ ಮಾಡಬೇಕೆಂದು ವಿನಂತಿಸುತ್ತಾನೆ. ಆ ಮಾತಿಗೆ ಒಪ್ಪಿದ ಗಂಗಾಂಬಿಕೆ ಅಕ್ಕ ತಂಗಿಯರು ಸಕ್ಕರೆಗೊಂಬೆಯಾಗಿ ನಕ್ಕು ನಲಿಯುತ್ತಾ ಬಸವನಿಗೆ ಎರಡು ಕಣ್ಣುಗಳಾಗಿ ಇರುತ್ತೇವೆಯೆಂದು ಬಿಜ್ಜಳನಿಗೆ ಅಭಯ ಹಸ್ತ ನೀಡುತ್ತಾಳೆ.

ಇದರಿಂದ ಗಂಗಾಂಬಿಕೆಯಲ್ಲಿರುವ ಗುಣವನ್ನು ತಿಳಿಯಬಹುದು. ತನಗೆ ತೊಂದರೆ ಯಾದರೂ ಇನ್ನೊಬ್ಬರ ಸುಖ, ಶಾಂತಿ, ನೆಮ್ಮದಿಗೆ ಮುಂದಾಗಬೇಕು ಎಂಬುದನ್ನು ಈಕೆಯಲ್ಲಿ ಕಾಣಲು ಸಾಧ್ಯ ಇದೆ ಎಂದು ಶಕುಂತಲಾ ಹೆಗಡೆ ಅಭಿಪ್ರಾಯಪಡುತ್ತಾರೆ. "ಸುವಿಶಾಲ ಮತಿ ಗಂಗಾಂಬೆ ಎಂದು ಅವಳ ಗುಣ ವಿಶೇಷವನ್ನು ಎತ್ತಿ ಹೇಳಿದ್ದನ್ನು ಕಾಣುತ್ತೇವೆ. ಗಂಗಾಂಬೆಯಲ್ಲಿ ಅಂತಹ ವಿಶಾಲ ಗುಣವಿರುವುದರಿಂದಲೇ ಬಸವ ನೀಲಾಂಬೆಯರ ಕಲ್ಯಾಣ ಮಹೋತ್ಸವಕ್ಕೆ ಒಪ್ಪಿಗೆ ನೀಡಿ ನೀಲಾಳಿಗೆ ತಂಗಿಯ ಸ್ಥಾನವಿತ್ತಳು."[೫೦] ಈ ಅಭಿಪ್ರಾಯ ಗಂಗಾಂಬಿಕೆ ನೀಲಮ್ಮಳ ಬಾಳಿಗೆ ಸಹಾಯ ಮಾಡಿದಳು ಎನಿಸುತ್ತೆ. ಈ ಜನಪದ ಮತ್ತು ಇವರ ಹೇಳಿಕೆಯಿಂದ ಈಕೆಯೇ? ಸ್ವತಃ ನೀಲಾಂಬಿಕೆಗೆ ಮದುವೆ ಮಾಡಿಸಿದಳೇ? ಯಾಕೆ? ಅಥವಾ ರಾಜನ ಕಟ್ಟಪ್ಪಣೆಗೆ ಒಪ್ಪಿಗೆ ಕೊಟ್ಟಳೆ? ಅಥವಾ ಸಂತಾನ ಫಲ ನನಗಿಲ್ಲವೆಂದು ವಿವಾಹವನ್ನು ಮಾಡಿಸಿದಳೆ? ಮುಂತಾದ ಪ್ರಶ್ನೆಗಳಿಗೆ ಮೌಖಿಕದಲ್ಲಾಗಲೀ, ಲಿಖಿತದಲ್ಲಾಗಲಿ ಉತ್ತರ ದೊರಕುವುದು ಕಡಿಮೆ ಎನ್ನಬಹುದು. ಇತಿಹಾಸದಲ್ಲಿ ಸಿಗುವುದಿಲ್ಲ, ಆದರೆ ಕಾವ್ಯ ಪುರಾಣಗಳಲ್ಲಿ ಈಕೆಯ ದಾಂಪತ್ಯದ ಕೆಲವು ಘಟನೆಗಳು, ಸಂತಾನ, ಈಕೆಯ ವ್ಯಕ್ತಿತ್ವದ ಬಗ್ಗೆ ಅಲ್ಪ ಮಾಹಿತಿ ದೊರೆಯುತ್ತದೆ.

ಗಂಗಾಂಬಿಕೆ ಬಸವಣ್ಣನವರಿಗೆ ಪುತ್ರ ಸಂತಾನದ ಬಗ್ಗೆ ಗೊಂದಲವನ್ನು ಕಾವ್ಯಪುರಾಣಗಳು ವ್ಯಕ್ತಪಡಿಸುತ್ತವೆ. ಹಾಗೂ ಈಕೆಯಲ್ಲಿ ತಾಯ್ತತನ ಕನಸು ಇರಬಹುದು. "ಮದುವೆಯಾಗಿ ಹೆಂಡತಿಯಾದೆ, ಆದರೆ ಇನ್ನೂ ತಾಯಾಗುವ ಭಾಗ್ಯ ತನಗಿಲ್ಲವಲ್ಲ ಎಂಬ ಕಳವಳ, ಹಂಬಲ ಗಂಗಾಂಬಿಕೆಗೆ ಆಗಾಗ ಹಿಂಸಿಸುತ್ತಿತ್ತು."[೬೧] ಜಯಶ್ರೀ ದಂಡೆ ಹೇಳುವಂತೆ ಪುತ್ರಸಂತಾನ ಅಥವಾ ತಾಯಿಯಾಗುವ ಆಸೆ ಯಾರಲ್ಲಿ ಇರುವುದಿಲ್ಲ, ಈಕೆಯಲ್ಲಿ ಮಗುವನ್ನು ಪಡೆಯುವ ಹಂಬಲವಿರಬಹುದು, "ಗಂಗಾಂಬಿಕೆಗೆ ಸುಮುಹೂರ್ತದೊಳು ಸುಪುತ್ರನುದ್ಭವಿಸೆ ಸಿದ್ಧರಸನೆಂದು ನಾಮಕರಣ ಮಾಡಿದರೆಂದು ಹರಿಹರನು ತನ್ನ ಕೃತಿಯಲ್ಲಿ ಹೇಳಿದರೆ, ಗಂಗಾದೇವಿಯ ಪವಿತ್ರ ಗರ್ಭದಿಂದ ಬಾಲಸಂಗಯ್ಯನೆಂಗದ ಸುತನುದಿಸಿದಂ ಎಂದು ಸಿದ್ಧನಂಜೇಶನು ತನ್ನ ಕಾವ್ಯದಲ್ಲಿ ಹೇಳುತ್ತಾನೆ. ಆದರೆ ಉಳಿದ ಕಾವ್ಯಗಳಲ್ಲಿ ಈ ಪ್ರಸ್ತಾಪವಿಲ್ಲ. ಬಾಲಸಂಗಯ್ಯನು ಗಂಗಾಂಬಿಕೆಯ ಸುತನಲ್ಲ, ಆತನು ನೀಲಲೋಚನೆಯ ಮಗ"[೬೨] ಎಂದು ಎ.ಗಾಯಿತ್ರಿಯವರು ಅಭಿಪ್ರಾಯಪಡುತ್ತಾರೆ. ಗಂಗಾಂಬಿಕೆಗೆ ಸಂತಾನವೇ ಇದ್ದಿಲ್ಲವೆ? ಆದರೆ ಹರಿಹರ ಗಂಗಾಂಬಿಕೆಯ ಮಗನಿಗೆ ಸಿದ್ಧರಸನೆಂದು ಕರೆದದ್ದು, ಸಿದ್ಧನಂಜೇಶ ಬಾಲಸಂಗಯ್ಯ ಎಂದು ಕರೆದರೆ ಗಂಗಾಂಬಿಕೆ ತನ್ನ ವಚನದಲ್ಲಿ "ಅವಳ ಕಂದ ಬಾಲಸಂಗ ನಿನ್ನ ಕಂದ ಚೆನ್ನಲಿಂಗ ಎಂದು ಹೇಳಿದರಮ್ಮ, ಎನ್ನ ಒಡೆಯರು"[೬೩] ಎಂದು ಹೇಳಿದ್ದು ನೋಡಿದರೆ ಗಂಗಾಂಬಿಕೆಗೆ ಮಗು ಇದ್ದಿರಬೇಕು. ಸಣ್ಣ ವಯಸ್ಸಿನಲ್ಲಿ ಐಕ್ಯವಾಗಿರಬೇಕು. ಗಂಗಾಂಬಿಕೆ ನನಗೆ ಕಂದನೆ ಇಲ್ಲ ಎಂದು ಹೇಳುತ್ತಾಳೆ. ಈ ವಚನವನ್ನು ಮಗು ಸಾವನ್ನಪ್ಪಿದ ಸಂದರ್ಭದಲ್ಲಿ ಬರೆದ ಸಾಧ್ಯತೆ ಇದೆ. ಏಕೆಂದರೆ ನೀಲಮ್ಮನ ಮಗನ ಬಗ್ಗೆ ಹೇಳುವಂತೆ ಬಸವಣ್ಣ ಚೆನ್ನಲಿಂಗ ಎಂದು ಕರೆದಿರುವುದರಿಂದ ಈಕೆಗೆ ಪುತ್ರ ಸಂತಾನವಾಗಿತ್ತು ಎಂದು ತಿಳಿದುಬರುತ್ತದೆ. ಬಸವಣ್ಣನವರು ತಮ್ಮ ವಚನದಲ್ಲಿ "ಸಂಗಮದೇವಾ ನಿಮ್ಮ ಹೆಸರ ಚಿಕ್ಕಸಂಗಯ್ಯನಿದ್ದಾನೆ"[೬೪]ಎನ್ನುತ್ತಾರೆ. ಬಸವಣ್ಣನವರು ತಮ್ಮ ವಚನದ ಅಂಕಿತದ ಮುನ್ನ ಸಂಗಮದೇವನಲ್ಲಿ ಮೊರೆಯಿಡುವಂತದ್ದು, ಸಿರಿಯಾಳನ ಶಿಶುವನ್ನು ಬೇಡಿದಂತೆ ನನ್ನ ಪುತ್ರನನ್ನು ಜಂಗಮನಾಗಿ ಬಂದು ಹೊಡೆದು ಒಡೆದು, ಕೊಂದರು ನಾನು ಏನು ಅನ್ನುವುದಿಲ್ಲ ಎನ್ನುವ ಇವರ ವಚನ ಮಗು ಸಾವನ್ನಪ್ಪುವ ಮುನ್ನ ಹೇಳಿದಂತೆ ತೋರುತ್ತದೆ. ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಬಸವಣ್ಣನಿಗೆ ಮಗನಿದ್ದ ವಿಷಯ ಹೇಳುತ್ತಾನೆ. ಆದರೆ ತಾಯಿ ಯಾರು ಎನ್ನುವುದು ತಿಳಿದುಬರುವುದಿಲ್ಲ.

"ಪರಮ ಪೂರ್ವಾಚಾರ್ಯ ಬಸವೇ
ಶ್ವರನಿಗೊಬ್ಬ ಕುಮಾರನಾದನು
ಧರಣಿಯೊಳಗಪ್ರತಿಮ ಗುಣಗಣ ನಿಲಯನಾತಂಗೆ

ವರದ ಕೂಡಲ ಸಂಗಮೇಶನ
ನಿರುತ ನಾಮವನಿಟ್ಟು ಸುಖದಿಂ
ದಿರುತಲಿರ್ದನು ಬಸವದಂಡಾಧೀಶನೊಲವಿನಲಿ"[೬೫]

ಕವಿ ಚಾಮರಸನು ಬಸವಣ್ಣನನ್ನು ಪೂರ್ವಚಾರ್ಯ ಎಂದು ಕರೆದು ಈತನಿಗೆ ಕೂಡಲ ಸಂಗಮ ಎಂಬ ಹೆಸರನ್ನು ಇಟ್ಟು, ಈ ಮಗು ಭೂಮಿಯೊಳಪ್ರತಿಮ ಗುಣಗಳನ್ನು ಹೊಂದಿದ್ದನ್ನು ಕವಿ ಉಲ್ಲೇಖಿಸುತ್ತಾನೆ. ಕವಿಯು ಹೆಸರನ್ನು ಸೂಚಿಸಿ ಅಂದರೆ ತಂದೆ ಮಗನ ಬಗ್ಗೆ ಹೇಳಿದ್ದು ನೋಡಿದರೆ, ಬಹುಶಃ ಗಂಗಾಂಬಿಕೆಯ ಮಗು ಅಲ್ಲ ಅಥವಾ ಹೌದು ಎಂಬ ಅಭಿಪ್ರಾಯ ವ್ಯಕ್ತಪಡಿಸಲು ಕವಿ ಸಂದೇಹ ಪಟ್ಟಿರಬೇಕು ಎಂಬುದು ಕಾಣುತ್ತದೆ. ಪ್ರತಿಯೊಂದು ಹೆಣ್ಣಿನ ನೋವು ಸಹಜವಾಗಿ ಬರುತ್ತದೆ. ಗಂಗಾಂಬಿಕೆ ಬಸವಣ್ಣನೊಂದಿಗೆ ವಿವಾಹವಾದ ಮೇಲೆ ಪುತ್ರನನ್ನು ಕಳೆದುಕೊಂಡದ್ದು, ಹಾಗೂ ಅನೇಕ ಪರೀಕ್ಷೆಗಳು ಬಂದದ್ದು ಆಕೆಯನ್ನು ದುಃಖಕ್ಕೆ ಒಳಗಾಗುವಂತೆ ಮಾಡಿತು ಎಂಬುದನ್ನು ಈ ಕೆಳಕಂಡಂತೆ ಚರ್ಚಿಸಬಹುದು. ಪತಿವ್ರತೆಯಾಗಿ, ಸಮರ್ಪಣ ಭಾವದಿಂದ ತನು ಮನ, ನಿನಗೆ ಅರ್ಪಿತ ಎಂದು ಬಸವಣ್ಣನಿಗೆ ತಕ್ಕವಳು ಗಂಗಾಂಬಿಕೆಯನ್ನು ಎಂದು ಹರಿಹರ ಉಲ್ಲೇಖಿಸುತ್ತಾನೆ.

"ಅರಸಿ ಗಂಗಾದೇವಿ ನಿಳಯದೊಳು ಸುಳಿವುತಿರೆ
ವರಮುತ್ತಿನೋಲೆಗಳ್ ತೀವಿ ಹೊಳೆವುತ್ತಮಿರೆ
ಲೆಂಕರಸನೆಂಬ ಭಕ್ತಂ ಕಂಡು ಸೈರಿಸದೆ
...................................................
..........ಬಸವನ ರೆದೆಲೆಲೆ ಸಂಗನಕರಂ ನೊಂದುದೇ
ಬೆಸಸುವಲ್ಲಿಂ ಮುನ್ನವೇ ಕೊಡದೆ ನಿಲ್ವುದೇ........"[೬೬]

ಒಮ್ಮೆ ಗಂಗಾಂಬಿಕೆ ಬಸವಣ್ಣ ಸುಖನಿದ್ರೆಯಲ್ಲಿ ಮಲಗಿದಾಗ ಲೆಂಕರಸನೆಂಬ ಭಕ್ತನು ಆಕೆಯ ಕಿವಿಯ ಓಲೆಯನ್ನು ಕದ್ದುಕೊಂಡು ಹೋಗಲು ಬಂದಿದ್ದ. ನಿದ್ರೆಯಿಂದ ಎಚ್ಚೆತ್ತ ಗಂಗಾಂಬಿಕೆ ಕೂಗುವಳು. ಇದರಿಂದ ಎಚ್ಚರಗೊಂಡ ಬಸವಣ್ಣ ಅವನು ಕಳ್ಳನಲ್ಲ ಸಾಕ್ಷಾತ್ ಸಂಗಮನಾಥನಿರುವನು. ನಿನ್ನ ಕಿವಿ ಓಲೆ ಬಿಚ್ಚಿಕೊಡು ಎನ್ನ ಅಯ್ಯನ ಕೈ ನೋಯುವುದು ಎಂದು ಹೇಳಿದ ಕೂಡಲೇ, ಪ್ರತಿ ಉತ್ತರ ನೀಡದೆ ಬಿಚ್ಚಿ ಕೊಡುವ ವಿನಮ್ರತೆಯನ್ನು ಕವಿ ಉಲ್ಲೇಖಿಸುತ್ತಾನೆ. ಇದೇ ಸಂದರ್ಭವನ್ನು ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರ ಕಾವ್ಯದಲ್ಲಿ ಈ ರೀತಿ ಉಲ್ಲೇಖಿಸಿದ್ದಾನೆ.

"ಚಿತ್ತ ವಲ್ಲಭ ನೀನು ಮತ್ತೇ ಭಗಮನೆ ಚೆ । ಲ್ವೆತ್ತ ಗಂಗಾಂಬಿಕೆಯಿಟ್ಟ
ಮುತ್ತಿನೋಲೆಯ ತಂದಿತ್ತುದಲ್ಲದಾಗದೆ । ನುತ್ತೆ ಪೇಳಲು ನಸು ನಗುತೆ

ಬಸವಣ್ಣನೆಡೆಗೆ ಸಂತಸದಿನಾಗಳೆ ಬಂದು । ಶಶಿಮುಖಿ ಗಂಗಾಂಬೆಯರ
ವಸುಧೆಗಚ್ಚರಿಯಾದ ಪೊಸ ಮುತ್ತಿನೊಲೆಯ । ನೊಸೆದೀವುದೆಂದ ವರುಸಿರೆ"[೬೭]

ಕವಿ ವಿಟ ಜಂಗಮ ಬಂದು ಬಸವನಿಗೆ ನಿನ್ನ ಹೆಂಡತಿ ಮುತ್ತಿನೊಲೆ ಕೊಡು ಎಂದಾಗ, ಗಂಗಾಂಬಿಕೆ ಬಸವನಿಗೆ ನಸುನಗುತಲೆ ಕೊಟ್ಟಳು ಎಂದು ಕವಿ ಉಲ್ಲೇಖಿಸಿದರೆ, ಹರಿಹರ ಲೆಂಕರಸನೆಂಬ ಭಕ್ತ ಎನ್ನುತ್ತಾನೆ. ಆದರೆ ಹರಿಹರನ ವಾದ ಸರಿಯೇ? ಹರಿಹರ ಮತ್ತು ಗರಣಿಯ ಬಸವಲಿಂಗನ ಹೇಳಿಕೆಯನ್ನು ಗಮನಿಸಿದಾಗ ಎರಡು ಅಂಶಗಳು ತಿಳಿಯುತ್ತವೆ. ೧. ದಾನಗುಣವನ್ನು ೨. ಮನಪರಿವರ್ತನೆ ತಿಳಿಸುವಂತಾಗಿದೆ ಎನ್ನಬಹುದು. ಆದರೆ ವಿಜಯಕುಮಾರ ಮಹಾನುಭಾವಿಗಳು "ರಾಣಿ ಗಂಗಾದೇವಿಯರು ಅರಮನೆಯಲ್ಲಿ ಸುಳಿಯುತ್ತಿರುವಾಗ ಅವರ ಮುತ್ತಿನ ಓಲೆಗಳು ಥಳ ಥಳ ಹೊಳೆದವು. ಲೆಂಕರಸ ಎಂಬ ಭಕ್ತನು ಇದನ್ನು ನೋಡಿದನು. ಕೂಡಲೇ ಆ ಓಲೆಗಳನ್ನು ತೆಗೆದುಕೊಳ್ಳಲು ಮುಂದಾದನು ಅವನು ಓಲೆ ಕಿತ್ತುಕೊಳ್ಳುವ ಅವಸರದಲ್ಲಿ ಅರಸಿ ಗಂಗಾದೇವಿಯರು ಸೊಪ್ಪಿನಂತಾದರು."[೬೮] ಇವರ ಅಭಿಪ್ರಾಯದಂತೆ ಗಂಗಾಂಬಿಕೆ ಓಲೆ ಕದಿಯಲಿಕ್ಕೆ ಬಂದ ಸಂದರ್ಭ, ಎಚ್ಚೆತ್ತ ಈಕೆ ಕೂಗುವಳು, ಬಸವಣ್ಣ ಎಚ್ಚರಗೊಂಡು ನೋಡುವುದು, ಸಂಗಮದೇವರ ಕರನೊಂದಿತು ಬಿಚ್ಚಿಕೊಡು, ಇಲ್ಲಿ ಮಡದಿ ಮುಖ್ಯವಾಗಲಿಲ್ಲ ಬಸವಣ್ಣನಿಗೆ, ಕಳ್ಳ ಮುಖ್ಯನಾದ. ಏಕೆಂದರೆ ಮನಪರಿವರ್ತನೆಯೇ ಕಾರಣ ಎನ್ನಬಹುದು. ಹರಿಹರ ಬಹುಶಃ ಬಸವಣ್ಣನ ವಚನದ ಆಧಾರದಿಂದ ಈ ಮಾತನ್ನು ಹೇಳಿರಬೇಕು ಎನಿಸುತ್ತದೆ.

"ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ
ಅಯ್ಯಾ, ನಮ್ಮಯ್ಯನ ಕೈನೊಂದಿತ್ತು
ತೆಗೆದುಕೊಡಾ ಎಲೆ ಚಂಡಾಲಗಿತ್ತಿ
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲಸಂಗಮನಲ್ಲದೆ ಆರು ಇಲ್ಲ"[೬೯]

ಬಸವಣ್ಣನವರ ಈ ವಚನವು ಹರಿಹರ, ಬಸವಲಿಂಗರ ಕಾವ್ಯಕ್ಕೆ ಪೂರಕವಾದ ವಚನ. ಇಲ್ಲಿ ಗಂಗಾಂಬಿಕೆಯನ್ನು ತೆಗಳಿದ್ದು, ಹಾಗೂ ದೈವದ ಮೇಲೆ ಅನನ್ಯವಾಗಿರತಕ್ಕಂತ ಭಕ್ತಿ, ಆದ್ದರಿಂದಲೇ ನಮ್ಮಯ್ಯನ ಕೈ ನೊಂದಿತ್ತು ತೆಗೆದುಕೊಡಾ ಎಲೆ ಚಾಂಡಾಲಗಿತ್ತಿ ಎಂಬ ವಾಕ್ಯವನ್ನು ಬಳಸಿದ್ದು ಅವಳನ್ನು ಹಿಂಸಿಸಲು ಅಲ್ಲ, ಅಲ್ಲಿ ಕಳ್ಳನ ಮನಸ್ಸು ನೊಂದಿತ್ತು ಎನ್ನುವ ಭಾವ ಬಸವಣ್ಣನಲ್ಲಿ ತುಂಬಿದೆ. ಹಾಗೂ ಜಯದೇವಪ್ಪ ಜೈನಕೇರಿಯವರು ಓಲೆಯ

ಪ್ರಸಂಗವನ್ನು "ಒಮ್ಮೆ ಲೆಂಕರಸನೆಂಬ ಭಕ್ತನು ಗಂಗಾದೇವಿಯ ಕಿವಿಯಲ್ಲಿದ್ದ ಮುತ್ತಿನ ಓಲೆಗಳನ್ನು ಕಿತ್ತುಕೊಳ್ಳುತ್ತಾನೆ. ಅದನ್ನು ಕಂಡ ಬಸವಣ್ಣನವರು ಅವನು ಕೇಳುವುದಕ್ಕೆ ಮುನ್ನವೇ ಅವನೊಡವೆಯನ್ನು ಕೊಡಬೇಕಾಗಿತ್ತು. ಅಯ್ಯೋ ಆತನ ಕೈ ನೊಂದಿತಲ್ಲಾ! ಎನ್ನುತ್ತಾರೆ. ಈ ಪ್ರಸಂಗದಿಂದ ಗಂಗಾಂಬಿಕೆಗೆ ಬಸವಣ್ಣನವರ ಕುರಿತು ಭಕ್ತಿಭಾವ ಹೆಚ್ಚಾಯಿತು ಎನ್ನುತ್ತಾರೆ."[೭೦] ಈ ಹೇಳಿಕೆಯನ್ನು ಗಮನಿಸಿದರೆ ಈ ಕಥೆ ಕಟ್ಟಿದ್ದಲ್ಲ, ನಡೆದಿರಬೇಕು. ಏಕೆಂದರೆ ಅವನೊಡವೆ, ಅವನಿಗೆ ಕೊಡಬೇಕಾಗಿತ್ತು ಎಂಬುದು ಬಸವಣ್ಣನ ಒಂದು ವೇಳೆ ಅವನನ್ನು ಹಿಂಸಿಸಿ ಶಿಕ್ಷೆ ವಿಧಿಸಿದರೆ, ಮತ್ತೆ ಕಳ್ಳತನದ ಕೆಲಸವನ್ನು ಮತ್ತೆ ಮಾಡುತ್ತಾನೆ. ಒಬ್ಬ ಮಂತ್ರಿ ಕೈಮುಗಿದು ಸಂಗಮನಾಥನೆನ್ನುವುದರಿಂದ ಕಳ್ಳನ ಮನ ಪರಿವರ್ತನೆ ಆಗಿದೆನ್ನಬಹುದು.

ಬಸವಣ್ಣ ನಿಂದಿಸಿದರೂ ಗಂಗಾಂಬಿಕೆ ಅದಕ್ಕೆ ಮರು ಮಾತನಾಡದೆ ಕೊಟ್ಟಿರಬಹುದೆ? ಹರಿಹರ ಹೇಳುವಂತೆ "ಕನ್ನವಿಕ್ಕುವಡೆ ಕತ್ತಿಗೆ ವಿಡಿದು ನಿಂದಿಪೆಂ"[೭೧] ಗಂಗಾಂಬಿಕೆ ಯುದ್ಧ ಬಲ್ಲವಳು. ಈಕೆಯೇ ಕತ್ತಿಯಿಂದ ಇರಿಯಬಹುದಿತ್ತು. ಬಸವನ ಪತ್ನಿ ಎನ್ನುವ ಕಾರಣವೂ ಒಂದಾಗಿದೆ. ಸಂದೇಹಪಡುವ ಮಾತು ಇರಬಹುದು. ಆದರೆ ಈಕೆಯಲ್ಲಿ ಸಹಿಸಿಕೊಳ್ಳುವಂತದ್ದು, ಇವಳಲ್ಲಿದ್ದ ಬಸವನಿಷ್ಠೆ ಎಂದು ಸ್ಪಷ್ಟತೆ ಕೊಡಬಹುದು. ಹಾಗೆ ಗಂಗಾಂಬಿಕೆಯ ತಾಳ್ಮೆ ಪರೀಕ್ಷೆ ಅಥವಾ ಬಸವಣ್ಣನ ಭಕ್ತಿ ಪರೀಕ್ಷೆ ಪ್ರಸಂಗ ಒಂದರಲ್ಲಿ ವಿಟಜಂಗಮ ಬಂದು ಬಸವ ನಿನ್ನ ಹೆಂಡತಿಯುಟ್ಟ ಸೀರೆಯನ್ನು ಕೊಡು ಎಂದಾಗ, ಇದನ್ನು ಗಂಗಾಂಬಿಕೆಗೆ ತಿಳಿಸಿದಾಗ ಈಕೆಯು ಮರು ಮಾತನಾಡದೆ ಸೀರೆಯನ್ನು ಕೊಡುತ್ತಾಳೆ ಎನ್ನುವ ಪ್ರಸಂಗವನ್ನು ಭೀಮಕವಿ, ಶಾಂತಲಿಂಗದೇಶಿಕ, ಗರಣಿಯ ಬಸವಲಿಂಗ ತಮ್ಮ ಕಾವ್ಯಗಳಲ್ಲಿ ಪ್ರಸ್ತಾಪ ಮಾಡುತ್ತಾರೆ. ಆದರೆ ಈ ಅಂಶವನ್ನು ಹರಿಹರ ತನ್ನ ಕಾವ್ಯದಲ್ಲಿ ಪ್ರಸ್ತಾಪಿಸಿಲ್ಲ.

ಭೀಮಕವಿಯ ಉಲ್ಲೇಖದಂತೆ "ಅರಸಿ ಗಂಗಾದೇವಿಯುಟ್ಟಂ ಬರವನರ್ಥಿಸಿ ತಂದುಕೊಟ್ಟು, ದ್ಧರಿಸು ಮತ್ ಪ್ರೀತಿಯನೆನಲ್ಕಾಗಲಿ ಎನುತ ವಿಟನು"[೭೨] ಸೀರೆಯನ್ನು ಕೊಡಿಸು ಬಸವ ನನ್ನನ್ನು ಉದ್ಧರಿಸು ಎಂದು ಅಂಗಲಾಚಿದಾಗ ಬಸವಣ್ಣ ಗಂಗಾಂಬಿಕೆಗೆ ಆಜ್ಞೆ ಮಾಡುತ್ತಾನೆ. ತಕ್ಷಣ ಸೀರೆಯನ್ನು ತಂದುಕೊಡುತ್ತಾಳೆ ಎಂದು ಉಲ್ಲೇಖಿಸುತ್ತಾನೆ. ಶಾಂತಲಿಂಗ ದೇಶಿಕ ಉಲ್ಲೇಖಿಸುವಂತೆ "ಮಿಂಡ ಜಂಗಮವು ಇತ್ತ ಗಂಗಾಂಬಿಕೆಯುಟ್ಟ ಸೀರೆಯುಟ್ಟಂತಿರ್ದುದಂ ಕಂಡು ಗಣವಳಿಯು ಬಸವನ ಭಕ್ತಿ ಭಾವನೆ ಕುಂದದಿಲ್ಲದ ಕಾರಣ"[೭೩] ಬಸವ ಭಕ್ತಿ ಪರೀಕ್ಷೆ ಗಂಗಾಂಬಿಕೆಯುಟ್ಟ ಸೀರೆಯನ್ನು ಕೇಳಿದಾಗ ಬಸವನ ಭಕ್ತಿಭಾವನೆ ಕುಂದಬಾರದು ಎಂದು ಕೊಟ್ಟಳು ಸೀರೆಯ ವಿಟ ಜಂಗಮಗೆ ಎಂದು ಕವಿ ಉಲ್ಲೇಖಿಸುತ್ತಾನೆ. ಇದೆ ಅಭಿಪ್ರಾಯವನ್ನು ಶಶಿಕಲಾ ಮೊಳದಿ ಹೀಗೆ ಹೇಳುತ್ತಾರೆ. "ವೇಶ್ಯೆಯ ದಾಸಿಯೊಬ್ಬಳು ಗಂಗಾಂಬಿಕೆಯುಟ್ಟ

ವಸ್ತ್ರವನ್ನು ಮೆಚ್ಚಿ ಅದಕ್ಕೆ ಸಮನಾದ ಮತ್ತೊಂದು ಇಲ್ಲ, ವಿಟಜಂಗಮನಿಗೆ ಅದನ್ನು ತರುವಂತೆ ಒತ್ತಾಯ ಮಾಡಿ ಬಸವಣ್ಣನಲ್ಲಿಗೆ ಕಳಿಸಿದಳು."[೭೪] ಇದು ಗಂಗಾಂಬಿಕೆಯ ಪರಿಕ್ಷೆಯನ್ನು ಮಾಡುವಂತಿದೆ. ಈ ವಿಚಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆ ಕಾಲಘಟ್ಟವನ್ನು ನೋಡಿ ಕವಿ ಹೇಳಿರಬಹುದು. ಇದನ್ನೇ ಪ್ರೀತಿ ಶುಭಚಂದ್ರ ಅಭಿಪ್ರಾಯದಂತೆ "ಬಸವ ಮಡದಿಯ ವಸ್ತ್ರಕ್ಕೆ ಕೈಹಾಕಿ ಸೆಳೆಯಲಾರಂಭಿಸಿದ, ಏಕೆಂದರೆ ಮಡದಿಯ ಮಾನ, ಪತಿಯ ಅಹಂನ್ನು ಪೋಷಿಸುವಂತಹದ್ದು. ಬಸವನಿಗಿದು ಅಹಂ ನಿರಸನದ ಸತ್ವ ಪರೀಕ್ಷೆ. ಗಂಗಾಂಬಿಕೆ ಯಾದರೋ ಕಾಯದ ಹಂಗನ್ನು ತೊರೆದು ಅನುಭಾವದೆತ್ತರಕ್ಕೇರಿ ನಿಂತಾಕೆ."[೭೫] ಈ ಅಭಿಪ್ರಾಯ ದಂತೆ ಮಡದಿಯ ಸೀರೆಯನ್ನು ಸೆಳೆಯುವಂತದ್ದು ಬಸವನಿಗೆ ಔಚಿತ್ಯವೇ. ಇಲ್ಲ? ಕುಮಾರ ವ್ಯಾಸನ ಕಲ್ಪನೆಯನ್ನು ಕವಿ ಬಳಸಿರಬಹುದು. ಎಲ್ಲವೂ ಜಂಗಮಾರ್ಪಿತ ಎಂಬ ಭಾವನೆ ಇದ್ದಿರಬೇಕು. ಹಾಗಾಗಿ "ಕೂಡಲ ಸಂಗಮದೇವ ಜಂಗಮಮುಖಿ ಲಿಂಗವಾಗಿ ಕಾಡಿ ನೋಡುವ, ಬೇಡಿ ನೋಡುವ"[೭೬] ಎಂಬ ಮಾತಿನ ಮೂಲಕ ದೇವರು ಜಂಗಮಮುಖವಾಗಿ ಬಂದು ಬೇಡುತ್ತಾನೆ ಎಂಬ ಭಾವನೆಯೇ ಇರಬಹುದು. ಈ ಮೂಲಕವಾಗಿ ಗಂಗಾಂಬಿಕೆಯ ಸಹನೆಯನ್ನು ಪರೀಕ್ಷೆ ಮಾಡಿದಂತೆ ತೋರುತ್ತದೆ. ಗರಣೀ ಬಸವಲಿಂಗನ ಬಸವೇಶ್ವರ ಕಾವ್ಯ ಸಂಪೂರ್ಣವಾಗಿ ಮಹಾಭಾರತದ ಅಂಶವನ್ನು ತುಂಬಿ ಗಂಗಾಂಬಿಕೆಗೆ ಅನ್ವಯಿಸುತ್ತದೆ. ಇದು ಕವಿಯು ಆಕೆಯ ತಾಳ್ಮೆಯನ್ನು ಹಾಗೂ ಬಸವನ ಭಕ್ತಿ ಪರೀಕ್ಷೆಯನ್ನು ತೋರಿಸುವುದು ಮುಖ್ಯವಾಗಿ ಕಂಡರೂ ಬಸವಣ್ಣ ಗಂಗಾಂಬಿಕೆಯರ ಸಾಮರಸ್ಯತೆಯನ್ನು ಈ ಮೂಲಕ ತಿಳಿಸುತ್ತಿರಬಹುದು.

ಗಂಗಾಂಬಿಕೆ ಬಸವಣ್ಣನವರ ದಾಂಪತ್ಯ ಜೀವನದಲ್ಲಿ ಅನೇಕ ತೊಂದರೆಗಳು ಬಂದಿವೆ. ಆದರೆ ಗಂಗಾಂಬಿಕೆ ಎಂದೂ ಸಹಿತ ಎದೆಗುಂದಿಲ್ಲವೆಂದು ತೋರುತ್ತದೆ. ಈಕೆಯಲ್ಲಿನ ಅಂತಃಸತ್ವವು ಆತ್ಮೋನ್ನತಿಯನ್ನು ಪಡೆದಿತ್ತು ಎಂಬುದು ಈ ಮೇಲಿನ ಚರ್ಚೆಯಿಂದ ತಿಳಿಯುತ್ತದೆ. ಬಹುಶಃ ತ್ಯಾಗಮಯಿಯು ಕೂಡ. ಹಾಗಾಗಿ ಈಕೆ ಭಾವ ತನ್ಮಯತೆ ಗುಣವನ್ನು ಪಡೆದಿದ್ದಳು ಎನ್ನಬಹುದು. ಈ ಗುಣವನ್ನು ಪಡೆದಾಗ ಮಾತ್ರ ಜೀವನದಲ್ಲಿ ಧೈರ್ಯ ಬರಲು ಸಾಧ್ಯವಿದೆ.

### ೨.೨. ಗಂಗಾಂಬಿಕೆಯ ವ್ಯಕ್ತಿತ್ವ: ಮಹಾಮನೆಯಲ್ಲಿ

ಗಂಗಾಂಬಿಕೆ ತಮ್ಮ ಮಹಾಮನೆಗೆ ಬಂದ ಅತಿಥಿಗಳನ್ನು ಮಾತೃ ಹೃದಯದಿಂದ ಉಪಚರಿಸುವ ಕಾರ್ಯವನ್ನು ಮಾಡುತ್ತಿದ್ದಳು. ನೊಂದವರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿ ಕಾಯಕದ ಕಡೆ ಅವರನ್ನು ಗಮನಕೊಡುವಂತೆ ಮಾಡುತ್ತಿದ್ದಳು. ಹಾಗೂ ಮನಸ್ಸನ್ನು ಸದಾ ಶುದ್ಧಗೊಳಿಸಿ ಏಕನಿಷ್ಠೆಯಿಂದ ಮಹಾಮನೆಯ ಕಾರ್ಯವನ್ನು ನೆರವೇರಿಸುತ್ತಿದ್ದಳು.

ಹರಿಹರ, ಭೀಮಕವಿ ಗಂಗಾಂಬಿಕೆಯಲ್ಲಿಯ ಒಳ್ಳೆಯ ಗುಣವನ್ನು ವರ್ಣಿಸಿರುವುದನ್ನು ಶಕುಂತಲಾರವರು ತಮ್ಮ ಲೇಖನದಲ್ಲಿ ಹೀಗೆ ಹೇಳುತ್ತಾರೆ. "ಗಂಗಾಂಬಿಕೆಯ ಧೃತಿ, ಸಿರಿಪ್ರಭೆ, ಜಾಣ್ಮೆ, ರೂಪು, ಉನ್ನತಿ, ಪತಿವ್ರತಾಚರಣೆ, ಪವಿತ್ರತೆ, ತೇಜಗಳಲ್ಲಿ ದೇವಕುಲ ಸ್ತ್ರೀಯರಿಗಿಂತ ನೂರು ಮಡಿ ಮಿಗಿಲಾಗಿದ್ದವು ಎಂದು ಭೀಮ ಕವಿ ವರ್ಣಿಸುತ್ತಾನೆ. ಹರಿಹರ ಸತ್ಕುಲ ಸಾದೃಶ್ಯಮಪ್ಪ ಸುಶೀಲೆ ಎಂದು ಆಕೆಯನ್ನು ಹೊಗಳಿದ್ದಾನೆ."[೭೭] ಡಾ.ಜಯಶ್ರೀ ದಂಡೆಯವರು ಹೇಳುವಂತೆ "ಕೇವಲ ತಾನಾಯಿತು ತನ್ನ ಸಂಸಾರವಾಯಿತು ತನ್ನ ಮನೆಯನ್ನಷ್ಟೇ ತೂಗಿಸಿಕೊಂಡು ಹೋದರಾಯಿತು ಎನ್ನುವ ಸಂಕುಚಿತತೆ ಗಂಗಾಂಬಿಕೆಯಲ್ಲಿರಲಿಲ್ಲ."[೭೮] ಈ ಹೇಳಿಕೆಯನ್ನು ಗಮನಿಸಿದಾಗ ಗಂಗಾಂಬಿಕೆಯು ಸಾಂಪ್ರದಾಯಿ ಮಹಿಳೆಯಾದರೂ ಆಕೆಯಲ್ಲಿ ಕುರುಡು ನಂಬಿಕೆ ಇಲ್ಲ. ಕೇವಲ ಭಾವನೆಗಳಿಗೆ ಬೆಲೆಕೊಡದೇ, ಅನುಭವ, ಅನುಭಾವದ ಎತ್ತರಕ್ಕೆ ಏರಿದವಳು. ಪತಿಯ ಪ್ರತಿಯೊಂದು ಕಾರ್ಯದಲ್ಲಿಯೂ ಸಹಭಾಗಿ. ಈ ಹಿನ್ನೆಲೆಯಲ್ಲಿ ಈಕೆಯು ಸಂಸಾರ ಎನ್ನುವುದು ಭೂಮಿ, ಅಲ್ಲಿ ಕಸ, ಕಡ್ಡಿ ತೆಗೆದು, ಬಿತ್ತನೆ ಮಾಡಿದರೆ ಒಳ್ಳೆ ಬೆಳೆ ಬರುತ್ತದೆ ಎನ್ನುವ ವಿಚಾರವನ್ನು ತಿಳಿದು ಮಹಾಮನೆಗೂ ಬಸವಣ್ಣನಿಗೂ ಆಧಾರಸ್ತಂಭ ವಾಗಿದ್ದಳು ಎಂದು ಊಹಿಸಬಹುದು.

ಬಸವಣ್ಣನವರ ಪ್ರತಿಯೊಂದು ಹೊಸ ಯೋಜನೆಗಳಿಗೆ ಗಂಗಾಂಬಿಕೆ ಪ್ರೋತ್ಸಾಹ ನೀಡಿ ಅದರಲ್ಲಿ ಪಾಲ್ಗೊಳ್ಳುತ್ತಿದ್ದುದು ಮುಖ್ಯವಾಗಿತ್ತು. "ಭಕ್ತಿ ಬಂಡಾರಿಯ ಕೈಹಿಡಿದು, ಆತನ ಸಕಲ ಕಾರ್ಯಗಳಿಗೆ ಸ್ಫೂರ್ತಿಯ ನೆಲೆಯಾದ ಗಂಗಾಂಬಿಕೆಯ ವ್ಯಕ್ತಿತ್ವ ಉಜ್ವಲವಾಯಿತು."[೭೯] ಈ ಅಭಿಪ್ರಾಯವನ್ನು ಗಮನಿಸಿದಾಗ ಬಸವಣ್ಣ ಕ್ರಿಯಾಶೀಲ, ಚತುರ ಗಂಗಾಂಬಿಕೆ ಈತನಿಗೆ ತಕ್ಕ ಸತಿಯಾಗಿದ್ದಳು ಎಂಬುದನ್ನು ಶಾಂತಾದೇವಿ ಮಾಳವಾಡ ಹೇಳುತ್ತಾರೆ. ಮುಂದುವರೆದು "ಮಹಾಮನೆಯ ದಾಸೋಹಕಾರ್ಯ, ಅನುಭವಮಂಟಪದ ಜ್ಞಾನದಾಸೋಹದ ಕಾರ್ಯಗಳಲ್ಲಿ ಗಂಗಾಂಬಿಕೆ ತನು, ಮನ, ಧನವನ್ನು ಸವೆಸುತ್ತಿದ್ದಳು. ಮಹಾಮನೆಗೆ ಬರುವ ಅತಿಥಿ ಸತ್ಕಾರ"[೮೦] ಹಾಗೂ ಪ್ರತಿಯೊಂದು ಕಾರ್ಯದಲ್ಲಿ ಈಕೆ ಭಾಗಿಯಾಗುತ್ತಿದ್ದಳು ಎಂದು ಅಭಿಪ್ರಾಯ ಪಡುತ್ತಾರೆ. ಪದ್ಮಣಾಂಕ ಕವಿಕೃತ ಪದ್ಮರಾಜ ಪುರಾಣದಲ್ಲಿ "ಮನೋ ರಮಣಿ ಗಂಗಾಂಬಿಕೆಯ ವಿಮಲ ಪದಕಮಲಂ"[೮೧] ಈ ಪುರಾಣದಲ್ಲಿ ಬಸವಣ್ಣನ ಕೀರ್ತಿಯನ್ನು ಕುರಿತು ಹೇಳುತ್ತಾ ಗಂಗಾಂಬಿಕೆಯನ್ನು ಸ್ಮರಿಸಿ ಬಸವ–ಗಣೇಶ್ವರನ ಮನೋರಮಣಿಯೆಂದು, ಆಕೆಯ ಪದಕಮಲ ಗಳನ್ನು ಸ್ಮರಿಸಿ ತನಗೆ ಸಂತೋಷವಾಗುತ್ತದೆ ಎಂದು ಕವಿ ಉಲ್ಲೇಖಿಸಿದ್ದಾನೆ.

ಗಂಗಾಂಬಿಕೆಯು ಆದರ್ಶಪ್ರಾಯಳು ಎಂಬುದಕ್ಕೆ ಕವಿಯು ಪೀಠಿಕಾ ಸಂಧಿಯಲ್ಲಿ ಸ್ಮರಿಸಿದ್ದಾನೆ. ಉಳಿದ ಕವಿಗಳು ಮದುವೆ ಮುಂತಾದ ಸಂದರ್ಭದಲ್ಲಿ ಹೇಳಿದರೆ ಪದ್ಮಣಾಂಕನು

ಈಕೆಯ ವ್ಯಕ್ತಿತ್ವವನ್ನು ಈ ಪದ್ಯದಲ್ಲಿ ತುಂಬಿದ್ದಾನೆ. ಡಾ.ಶಕುಂತಲಾ ಹೆಗಡೆ ಗಂಗಾಂಬಿಕೆ ಪುಸ್ತಕದಲ್ಲಿ ಗಂಗಾಂಬಿಕೆ ಬಗ್ಗೆ

"ಧರ್ಮವೇ ಬಸವ ಧರ್ಮಾನುಕೂಲತೆಯರೇ
ರಮ್ಯ ನೀಲಮ್ಮ ಗಂಗಮ್ಮ ನಿತ್ಯಮೆ ಬಸವ
ಯೆಮ್ಮ ನೀಲಮ್ಮ ಗಂಗಮ್ಮನೇ ನಿತ್ಯಾನುಪಾಲತೆಯರಾ ಬಸವನ
ನಿರ್ಮಲಸುತತ್ತ್ವ ನೀಲಮ್ಮ ಗಂಗಮ್ಮನೇ
ತನ್ಮದಾ ತತ್ತ್ವಾದಿ ದೇವತೆಯರಾಗಿಂತು
ಸನ್ಮತದಿ ದಾಸೋಹಮೆಂಬ ಸಾಮ್ರಾಜ್ಯ ಸಂಪತ್ತು ನಾಳುತ್ತಿದ್ದರು.

ಬಸವಣ್ಣನ ಧರ್ಮಾನುಕೂಲೆಯರಾಗಿ, ನಿತ್ಯಾನುಪಾಲೆಯರಾಗಿ, ಮಹಾತತ್ತ್ವಾದಿ ದೇವತೆಯರಾಗಿ ದಾಸೋಹ ಸಾಮ್ರಾಜ್ಯವನ್ನು ನೀಲಮ್ಮ, ಗಂಗಮ್ಮ ಆಳುತ್ತಿದ್ದರು ಎಂಬ ವರ್ಣನೆ ಮುಖ ಬೋಳು ಸಿದ್ಧರಾಮನ ಷಟ್‌ಸ್ಥಲ ತಿಲಕದಲ್ಲಿ ಬಂದಿದೆ."[೮೨]

ಗಂಗಾಂಬಿಕೆ ತನ್ನದೇಯಾದ ವ್ಯಕ್ತಿತ್ವ ಮೂಡಿಸಿಕೊಂಡಿದ್ದಾಳೆ. ಸಾಂಪ್ರದಾಯಿಕ ವ್ಯವಸ್ಥೆಯನ್ನು ದಾಟಿ, ಪರಿವರ್ತನೆಯೆಂಬ ಬಸವನ ತತ್ವ, ಆದರ್ಶಕ್ಕೆ ಪೋಷಣೆ ನೀಡುವ ಕಾರ್ಯವು ಬಹಳ ದೊಡ್ಡದು. ಸಮಾಜದ ಶ್ರೇಯಸ್ಸಿಗೆ ಬಸವಣ್ಣ ಸಿದ್ಧನಾದರೆ, ಈತನ ಪ್ರತಿಯೊಂದು ಹೆಜ್ಜೆಗೆ ಪ್ರೋತ್ಸಾಹ ಕೊಟ್ಟವಳು ಗಂಗಾಂಬಿಕೆ ಎನ್ನಬಹುದು. ಈಕೆಯು ವಚನಗಳನ್ನು ರಚಿಸಿದ್ದಾಳೆ. ಸಿದ್ಧರಾಮೇಶ್ವರ ಹೇಳುವಂತೆ "ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾವಿರ"[೮೩] ಈತನ ಪ್ರಕಾರ ಗಂಗಾಂಬಿಕೆಯ ವಚನಗಳು ಬಹಳಷ್ಟು ಆದರೆ ಸಿಕ್ಕಿರುವ ವಚನ ೯ ಮಾತ್ರ. ಹಾಗಾದರೆ ಇನ್ನುಳಿದ ವಚನ ಏನಾದವು? ಎಂಬ ಪ್ರಶ್ನೆಗೆ ವಿದ್ವಾಂಸರ ಅಭಿಪ್ರಾಯ ಕಲ್ಯಾಣದ ಕ್ರಾಂತಿಯಲ್ಲಿ ಶರಣ ಸಾಹಿತ್ಯವನ್ನು ಮನಬಂದಂತೆ ಸುಟ್ಟರು, ಹಾಗಾಗಿ ಈಕೆಯ ವಚನಗಳು ನಾಶವಾಗಿರುವ ಸಾಧ್ಯತೆ ಇದೆ. ಈಕೆಯ ವಚನದ ಅಂಕಿತ ನಾಮ ಗಂಗಾಪ್ರಿಯ ಕೂಡಲಸಂಗಮ ವಾಗಿದೆ. ಅನೇಕ ಶರಣ ಶರಣೆಯರು ತಮ್ಮ ಕುಲದೈವದ ಹೆಸರು, ಪತಿಯ ಹೆಸರು ಇಟ್ಟು ಕೊಂಡರೆ ಗಂಗಾಪ್ರಿಯ ಅಂಕಿತದ ಮೂಲಕ ತನ್ನ ಹೆಸರಿನೊಂದಿಗೆ ಪತಿಗೆ ಪ್ರಿಯನಾದ ಕೂಡಲಸಂಗಮ ಅಂಕಿತದಿಂದ ತನ್ನದೇಯಾದ ವಿಶೇಷತೆಯನ್ನು ಪಡೆದಿದ್ದಾಳೆ.

ಬಸವಣ್ಣನ ಜೀವನದಲ್ಲಿ ಬಂದ ನಂತರ ಆಕೆ ಕಲ್ಯಾಣದಲ್ಲಿ ಜೀವಿಸಿದ ಬಗೆ ಹಾಗೂ ಶರಣ ಬದುಕು, ಮಹಾಮನೆಯ ಕಾರ್ಯ ಹಾಗೂ ಈಕೆಗೆ ಬಂದಿರುವ ಪರೀಕ್ಷೆಗಳು, ಇಂತವುಗಳ ಮೂಲಕ ಬಸವಣ್ಣನಿಗೆ ನೋವಾಗದೆ ಆತನ ಕೀರ್ತಿಗೆ ಸದಾ ಎಲ್ಲ ಮಗ್ಗಲುಗಳ ಮೂಲಕ ಬಸವನಿಷ್ಠೆ ಕಾರುಣ್ಯತೆಯಿಂದ ತನ್ನ ವ್ಯಕ್ತಿತ್ವವನ್ನೆ ಕಂಡುಕೊಂಡ ವಿವರ ಇಲ್ಲಿದೆ.

ಗಂಗಾಂಬಿಕೆಯು ಪತಿನಿಷ್ಠೆಗೆ ಬದ್ಧಳಾಗಿದ್ದಳು ಎಂಬುದನ್ನು ಕಂಡಿದ್ದೇವೆ. ಗಂಗಾಂಬಿಕೆ ಕಲ್ಯಾಣದಲ್ಲಿ ಮಹಾಮನೆಯ ದಾಸೋಹ ಸೇವೆ, ಹಾಗೂ ಜ್ಞಾನ ಸೇವೆಯ ಅನುಭವ ಮಂಟಪದ ವ್ಯವಸ್ಥೆ ಮುಖ್ಯವಾದ ಕರ್ಮವಾಗಿ ನಿರ್ವಹಿಸಿದ್ದಾಳೆ. ಆದರೆ ಎಂದಿಗೂ ಸಹಿತ ಬದಲಾವಣೆಯ ಮಾತುಗಳು, ನಾನು ಮಂತ್ರಿಯ ಮಗಳು ಎಂಬ ಅಹಂ ಬಂದಿಲ್ಲವೆಂಬುದು ಈ ಅಧ್ಯಯನದಿಂದ ತಿಳಿಯುತ್ತದೆ. ದಾಂಪತ್ಯ ಜೀವನಕ್ಕೆ ಮುಗ್ಧೆಯಾಗಿದ್ದಳೆ? ಎಂಬ ಪ್ರಶ್ನೆ ಬಂದರೂ ಬದಲಾವಣೆಯಲ್ಲಿ ಏನೇ ತೊಂದರೆ ಬಂದರೂ ನುಂಗಿಕೊಳ್ಳಬೇಕು. ಹಾಲು ಆಗಬೇಕು ಹಾಲಾಹಲವಾಗಬಾರದು ಎಂಬುದು ಈಕೆಯ ದಾಂಪತ್ಯ ಜೀವನ, ಮಹಾಮನೆಯ ಕಾರ್ಯ, ವ್ಯಕ್ತಿತ್ವ, ನಡವಳಿಕೆಗಳನ್ನು ಗಮನಿಸಿದಾಗ ತಿಳಿಯುತ್ತದೆ.

### ೩. ಕಲ್ಯಾಣಕ್ರಾಂತಿಯಿಂದ ಐಕ್ಯದವರೆಗೆ

ಗಂಗಾಂಬಿಕೆ ಸದಾ ಕಷ್ಟದ ಜೀವಿ, ಮಾತೃ ಹೃದಯಿ. ಬಸವಣ್ಣನವರ ಬಾಳಿನಲ್ಲಿ ಬಂದ ನಂತರದಲ್ಲಿಯೂ ಬದುಕುವುದೇ ಕಷ್ಟಕರವಾಗಿರಬೇಕು. ಬಸವಣ್ಣನವರು ಕಟ್ಟಿದ ಕಲ್ಯಾಣ, ಇರುವಾಗಲೇ ನಡೆದ ಘಟನೆ ಅತೃಪ್ತಿ ತಂದಿತು. ಒಂದು ಕಡೆ ಪುರೋಹಿತಶಾಹಿಗಳು, ಇನ್ನೊಂದು ಕಡೆ, ಆಡಳಿತ ವರ್ಗ ಈ ಮಧ್ಯೆ ನಡೆದ ಜಾತಿ ಸಂಘರ್ಷದಿಂದ ಕಲ್ಯಾಣ ಕ್ರಾಂತಿಗೆ ನಾಂದಿಯಾಗಿರ ಬೇಕು. ಅಂದಿನ ವ್ಯವಸ್ಥೆ ಹಾಗೂ ಕೆಲವು ಘಾತುಕ ಶಕ್ತಿಗಳು ಕೂಡಿದ್ದರಿಂದ ಕಲ್ಯಾಣ ಹಾಳಾಗಿದೆ ಎಂದು ಹಲವು ವಿದ್ವಾಂಸರ ಅಭಿಪ್ರಾಯ. ಇಂತಹ ಸಂದರ್ಭದಲ್ಲಿ ಗಂಗಾಂಬಿಕೆ ಬಸವಣ್ಣನ ಪಾಡೇನು? ಇಡೀ ಮಾನವ ಕುಲಕ್ಕೆ ಲೇಸನ್ನೆ ಬಯಸಿದ ಸಾಮಾಜಿಕ, ಧಾರ್ಮಿಕ, ಆರ್ಥಿಕವಾಗಿ ಬದಲಾಗಬೇಕಾದರೆ ವೈಚಾರಿಕ ನೆಲೆಗಟ್ಟು ಬಹಳ ಮುಖ್ಯ ಎಂಬುದು ಬಸವನ ಕನಸು ಆಗಿತ್ತು.

ಗಂಗಾಂಬಿಕೆ, ನಾಗಲಾಂಬಿಕೆ, ನೀಲಾಂಬಿಕೆ, ಚೆನ್ನಬಸವಣ್ಣ ಇಡೀ ಕುಟುಂಬವೇ ಈತನ ಕಾರ್ಯಕ್ಕೆ ಪ್ರೋತ್ಸಾಹಿಸಿ, ಈತನ ಕನಸು ನನಸಾಗಲಿಕ್ಕೆ ಇವನ ಕುಟುಂಬ ಒಂದೇ ಅಲ್ಲ ಇಡೀ ಶರಣ ಸಮುದಾಯವೇ ಬೆನ್ನೆಲುಬಾಗಿತ್ತು. ಆದರೆ ಬಸವಣ್ಣನಲ್ಲಿ ನಾನೇ ಕಟ್ಟಿದ ಕಲ್ಯಾಣಕ್ಕೆ ಭದ್ರಬುನಾದಿ ಇಲ್ಲವಾಯಿತು ಎಂಬ ಕಳವಳ ಕೂಡ ಉಳಿಯಿತೆಂದು ಎನಿಸುತ್ತದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ಕ್ಷೇತ್ರಕಾರ್ಯ ಕೈಗೊಂಡಾಗ ಬಸಪ್ಪ ಕೋರಿ ಶೆಟ್ಟರ್ ಅವರು ಕಲ್ಯಾಣಕ್ರಾಂತಿ ಹರಳಯ್ಯ ಮಧುವರಸರ ಮಕ್ಕಳ ಮದುವೆಯಿಂದ ನಡೆಯಿತು. ಆದರೆ ಇದರಿಂದ ಮನನೊಂದ ಬಸವಣ್ಣ ಸಂಗಮಕ್ಕೆ ಹೋದರು. ಹಾಗೇ ನೀಲಮ್ಮ ಕೂಡ ಇವರೊಂದಿಗೆ ಹೋದರು. ಆದರೆ ಗಂಗಾಂಬಿಕೆ, ನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ ಮುಂತಾದ ಶರಣರು, ಕೂಡಿಕೊಂಡು ವಚನಸಾಹಿತ್ಯ, ಶರಣರ ಪ್ರಾಣ ರಕ್ಷಣೆ

ಮುಖ್ಯ ಎಂದು ಶರಣ ಸೈನ್ಯ ಸಂಘಟನೆ ಮಾಡಿದರು. ಅಷ್ಟರಲ್ಲೇ ಬಿಜ್ಜಳನ ವಧೆಯಾಯಿತು. ಈತನನ್ನು ಶರಣರೇ ಕೊಂದರು ಎಂದು ತಿಳಿದು ಶರಣರನ್ನು ಕೊಲ್ಲಲಿಕ್ಕೆ ಬಂದರು. ಇದನ್ನರಿತ ಶಿವಶರಣ-ಶರಣೆಯರು ಉಳುವಿಯ ಕಡೆಗೆ ಹೋದರು ಎಂದು ತಿಳಿಸಿದರು. ಹಾಗೆ ಮಲ್ಲಮ್ಮ ತಾಯಿ ಗಂಗಾಂಬಿಕೆ ಗುಹೆಯನ್ನು ತೋರಿಸಿ, ಈ ತಾಯಿ ವೀರಾವೇಶದಿಂದ ಹೋರಾಡಿ ವಚನಗಂಟು ಉಳಿಸಿ ತನ್ನ ಪ್ರಾಣವನ್ನು ಕಳಕೊಂಡಳು ಎಂದು ಹೇಳಿದರು. ಮಂತಾಳದ ಗುಹೇಶ್ವರ ಸ್ವಾಮಿಗಳು ಗಂಗಾಂಬಿಕೆಯು ಕಲ್ಯಾಣಕ್ರಾಂತಿಯಲ್ಲಿ ಹೋರಾಡಿದ್ದರಿಂದ, ಶರಣರನ್ನು ಹುರಿದುಂಬಿಸಿದ್ದರಿಂದ ಇವತ್ತು ನಮಗೆ ವಚನಸಾಹಿತ್ಯ ಉಳಿದಿದೆ ಎಂದರು. ಮುರಗೋಡ ಶ್ರೀಗಳು ಗಂಗಾಂಬಿಕೆ ದಿಟ್ಟ ಮಹಿಳೆ, ಈಕೆ ಶರಣಸಾಹಿತ್ಯ ರಕ್ಷಣೆ ಮಾಡಿ, ಎಂ.ಕೆ.ಹುಬ್ಬಳ್ಳಿಯಲ್ಲಿ ಐಕ್ಯವಾದಳು. ಈ ಸ್ಥಳ ಕಾದರವಳ್ಳಿಗೆ ಹತ್ತಿರವಾಗಿದೆ ಎನ್ನುತ್ತಾರೆ.

ಈ ಪರಿಸರದಲ್ಲಿ ಈಕೆಯ ಬಗ್ಗೆ ಕೇಳಿದಾಗ ಈಕೆ ಕಲ್ಯಾಣ ಬಸವಣ್ಣ ಹೆಂಡತಿಯ ಸಮಾಧಿ. ನಾವು ಸಣ್ಣವರು ಇದ್ದಾಗ ಕಲ್ಯಾಣ ಗಂಗಮ್ಮ ಹೊಳೆಗಂಗಮ್ಮ ಎಂದು ಕರೆಯುತ್ತಿದ್ದರು ಎಂದು ಅಲ್ಲಿಯ ಹಿರಿಯರು ತಿಳಿಸಿದರು. ಕಿತ್ತೂರು ಕಾದರವಳ್ಳಿಗೂ ೧೦ರಿಂದ ೧೫ ಕಿ.ಮೀ. ಆ ಪರಿಸರದಲ್ಲಿ ಗಂಗಾಂಬಿಕೆ ಬಗ್ಗೆ ಕೇಳಿದಾಗ ಕಲ್ಯಾಣ ಶರಣರು ಮತ್ತು ಬಿಜ್ಜಳ ಸೈನಿಕರಿಗೂ ಯುದ್ಧವಾಗಿದ್ದರಿಂದ ಕಾದಾಡಿದ ಊರು ಕಾದರವಳ್ಳಿಯಾಗಿದೆ ಎಂದು ತಿಳಿಸಿದರು. ಕಾದರವಳ್ಳಿಯ ಕುಂಬಾರ ಚನ್ನವೀರಪ್ಪ, ನೀಲಗಂಗಾ ಚರಂತಿಮಠರು "ಈಕೆಯ ಬಗ್ಗೆ ಗಂಗಾಂಬಿಕೆಗೆ ಶರಣ ಚಳವಳಿಯಲ್ಲಿ ಮುಖ್ಯ ಪಾತ್ರವಿದೆ. ಏಕೆಂದರೆ ಎಲ್ಲ ಶರಣರನ್ನು ಪ್ರೋತ್ಸಾಹಿಸಿ, ಉಳವಿಯತ್ತ ಹೋಗಲು ತೀರ್ಮಾನಿಸಿದಳು ಎಂದರೆ ಈ ಮಾರ್ಗವನ್ನು ಈಕೆಯ ತಂದೆಯಿಂದ ಕೇಳಿರಬಹುದು. ಮುಂದೆ ಹೋರಾಟ ಮಾಡಿ ಕಾದರವಳ್ಳಿಯಲ್ಲಿಯೇ ಐಕ್ಯವಾದಳು"[೮೪] ಎಂದು ತಿಳಿಸಿದರು. ವಿಜಯಕುಮಾರ ಮಹಾನುಭಾವಿಗಳು, "ಗಂಗಾಂಬಿಕೆ ಬಸವಣ್ಣನ ಹೆಂಡತಿ ಹಾಗೂ ಬಲದೇವನ ಮಗಳು ಈ ಮಾತನ್ನು ಏಕೆ ಹೇಳುತ್ತೇನೆ ಎಂದರೆ, ಈಕೆ ಯುದ್ಧ ಮಾಡಲು ಪರಿಣಿತಿ ಹೊಂದಿದ್ದಳು. ಆದರೆ ಈಕೆಯ ಸಮಾಧಿ ಕಾದರವಳ್ಳಿಯಲ್ಲಿ ನಿಜ ಎಂದು ಹೇಳಿದರು."[೮೫] ಮುರಘಾ ಶರಣರು, "ಗಂಗಾಂಬಿಕೆ ಇತರರು ಸೇರಿ ವಚನ ಕಟ್ಟುಗಳನ್ನು ರಕ್ಷಿಸಿರದಿದ್ದರೆ, ಶರಣಧರ್ಮದ ತತ್ವಗಳೇ ಇಲ್ಲದಾಗುತ್ತಿತ್ತು. ಆದರೆ ಕಲ್ಯಾಣಕ್ರಾಂತಿಗೆ ಕೇವಲ ಮದುವೆ ನೆಪವಲ್ಲ, ರಾಜಕೀಯ ಮತ್ಸರವು ಕೂಡ ಇದೆ. ಹಾಗಾಗಿ ಕಲ್ಯಾಣ ಕ್ರಾಂತಿಯಾಯಿತು. ಗಂಗಮ್ಮನ ಸಮಾಧಿ ಬಗ್ಗೆ ಮೌನ ವಹಿಸಿದ್ದರು."[೮೬] ಅಥಣಿಯ ಚೆನ್ನಬಸವ ಸ್ವಾಮೀಜಿ, "ಗಂಗಾಂಬಿಕೆ ವಚನಗಳನ್ನು ರಕ್ಷಿಸಿದ್ದು ಅಲ್ಲದೆ, ಇತರ ಶರಣರ ಪ್ರಾಣ ರಕ್ಷಿಸಿದಳು ಎಂದರು. ಈಕೆಯ ಸಮಾಧಿಯ ಬಗ್ಗೆ ಕೇಳಿದಾಗ ಗಂಗಾಂಬಿಕೆ ಸಾವು ಘೋರವಾದದ್ದು, ಏಕೆಂದರೆ ಯುದ್ಧ

ಮಾಡುತ್ತಾ ರಣರಂಗದಲ್ಲಿ ಸಾವನ್ನಪ್ಪಿದಳು."[೮೭] ಹಾಗೆ ಅನೇಕ ಸ್ವಾಮಿಗಳು, ವಿದ್ವಾಂಸರು, ಆಯಾ ಕ್ಷೇತ್ರದಲ್ಲಿ ಹಿರಿಯರು ಈಕೆಯ ಬಗ್ಗೆ ಒಂದೇ ತರಹದ ಉತ್ತರಗಳನ್ನು ನೀಡಿದ್ದಾರೆ. ಆದರೂ ಈಕೆಯ ಐಕ್ಯದ ಬಗ್ಗೆ ಸ್ಪಷ್ಟವಾದ ನಿಲುವುಗಳು ಕಡಿಮೆ ಸಿಗುತ್ತವೆ.

ಕಲ್ಯಾಣಕ್ರಾಂತಿಯ ಕುರಿತು ಈ ಜನಪದರಲ್ಲಿ ಹೀಗೆ ಉಲ್ಲೇಖವಾಗಿದೆ.

"ಕಲ್ಯಾಣ ಕ್ರಾಂತ್ಯಾಗಲು ಎಲ್ಲ ಶಿವಶರಣರಂದು
ತಲ್ಲಣಗೊಳ್ಳುತ ಕಲ್ಯಾಣ ಬಿಡಲು
ಅಲ್ಲೋಲ ಕಲ್ಲೋಲ ಕಲ್ಯಾಣ
ಬಲ್ಲಿದ ಬಿಜ್ಜಳನ ಕಲ್ಲೆದೆಯ ಮಂಚಣ್ಣ
ಕೊಲ್ಲಿಸಿಬಿಟ್ಟ ಕುತಂತ್ರದಿಂದಾ"[೮೮]

ಈ ಜನಪದರಲ್ಲಿ ಕಲ್ಯಾಣಕ್ರಾಂತಿಯಿಂದ ಅಲ್ಲೋಲ ಕಲ್ಲೋಲವಾಗಿಬಿಟ್ಟರು. ಬಿಜ್ಜಳನ ಕೊಲೆಯನ್ನು ಮಂಚಣ್ಣ ಕುತಂತ್ರದಿಂದ ಮಾಡಿಸಿದ ಎಂದು ಹೇಳುತ್ತಾರೆ. ಇದನ್ನು ಕಂಡು ಬಿಜ್ಜಳನ ಸೈನಿಕರು ಶರಣ ಸೈನ್ಯವೇ ಬಿಜ್ಜಳನ ಕೊಲೆಗೆ ಕಾರಣ ಎಂದು ತಿಳಿದು, ಶರಣರನ್ನು ಬೆನ್ನತ್ತಿ ಕೊಲ್ಲಲು ಮುಂದಾಗುತ್ತಾರೆ ಎಂದು ಈ ಜನಪದರಲ್ಲಿ ತಿಳಿಯಬರುತ್ತದೆ.

"ದುಃಖದಾ ಕಡಲಾಗ ಅಕ್ಕಗಂಗಾಂಬಿಕೆಯು
ಬಿಕ್ಕಿ ಬಿಕ್ಕಿ ಅತ್ತು ಕೈ ಸೋತು ನಿಂತಾಳ
ದಿಕ್ಕು ತೋಚದೆ ನೀಲಮ್ಮ ಆಗ
ಹೊತ್ತಾಯಿತು ನಡಿಯಮ್ಮ ಗುಪ್ತದಳದವರು ಬಂದಾರು
ಸತ್ಯ ಸಂಸ್ಕೃತಿಯನು ಕೊಂದಾರು
ಕತ್ತೇನು ಬಲ್ಲದು ಕತ್ತೂರಿ ಪರಿಮಳ"[೮೯]

ಕಲ್ಯಾಣದಲ್ಲಿ ಯುದ್ಧ ಗದ್ದಲಗಳು ಪ್ರಾರಂಭವಾದ ಸಂದರ್ಭವೆಂದು ತಿಳಿಯಬಹುದು. ಗಂಗಾಂಬಿಕೆ, ನೀಲಮ್ಮನನ್ನು ಕುರಿತು ಹೀಗೆ ಹೇಳುತ್ತಾಳೆ. ಬೇಗ ಸಮಯವಾಯಿತು. ಸೈನಿಕರು ಬಂದರು ಸತ್ಯಸಂಸ್ಕೃತಿ ಅಂದರೆ ವಚನಸಾಹಿತ್ಯವನ್ನು ನಾಶ ಮಾಡುವರು ಎಂದು ಕತ್ತೆಗೆ ಹೋಲಿಸುತ್ತಾಳೆ. ಈ ಜನಪದದಲ್ಲಿ ಗಂಗಾಂಬಿಕೆಯು ಶರಣಸಾಹಿತ್ಯ ರಕ್ಷಣೆಗೆ ಮುಂದಾಗುವುದನ್ನು ಹಾಗೂ ಇತರ ಶರಣ-ಶರಣೆಯರನ್ನು ಎಚ್ಚರಗೊಳಿಸುವಂತದ್ದು ಕಾಣಬಹುದಾಗಿದೆ.

ಕಲ್ಯಾಣಕ್ರಾಂತಿಯ ಕುರಿತಾಗಿ "ಐತಿಹಾಸಿಕವಾಗಿ ನಡೆದುದೇನೆಂಬುದನ್ನು ಸ್ಪಷ್ಟವಾಗಿ ನಿರ್ಧರಿಸಲು ಸಾಕಷ್ಟು ಆಧಾರಗಳಿಲ್ಲ. ವರ್ಣಸಂಕರವೆಂದು ಕರೆಯಲಾದ ಈ ಘಟನೆ

ನಡೆದಿರುವುದು ಸತ್ಯ. ಎಲ್ಲ ಪುರಾಣಗಳೂ ಅದನ್ನು ಒಂದಲ್ಲ ಒಂದು ರೀತಿಯಲ್ಲಿ ಉಲ್ಲೇಖಿಸುತ್ತವೆ."[೬೦] ಡಾ.ಎಚ್.ತಿಪ್ಪೇ ರುದ್ರಸ್ವಾಮಿಯವರ ಈ ಹೇಳಿಕೆಯಂತೆ ಕಲ್ಯಾಣದಲ್ಲಿ ವರ್ಣಸಂಕರವೇ ಜಾಸ್ತಿ ಎನಿಸುತ್ತದೆ. ಯಾಕೆಂದರೆ ಹರಳಯ್ಯ-ಮಧುವಯ್ಯರ ಮಕ್ಕಳ ಮದುವೆ, ನಂತರ ಅವರ ಘೋರ ಹತ್ಯೆಯು ಶರಣ ಕ್ರಾಂತಿಗೆ ಮಂಥನವಾಯಿತು. ಈ ಸಂದರ್ಭದಲ್ಲಿ ಬಸವಣ್ಣನ ಪಾತ್ರವೇನೂ ಇಲ್ಲ. ಆದರೆ ಬಸವಣ್ಣನವರೇ ಕಾರಣೀಭೂತರು ಎಂಬುದು ತಿಳಿದಾಗ ಬಸವಣ್ಣ ಮಂತ್ರಿ ಪದವಿ ತ್ಯಾಗಮಾಡಿ, ಸಂಗಮಕ್ಕೆ ಹೋಗಿರಬೇಕು. ಮನನೊಂದ ಶರಣರು ತಮ್ಮ ವಚನಸಾಹಿತ್ಯ ಹಾಗೂ ಆತ್ಮರಕ್ಷಣೆಗಾಗಿ ಹೋರಾಟ ಮಾಡಿರಬೇಕು. ಡಾ.ತಿಪ್ಪೇರುದ್ರಸ್ವಾಮಿಯವರು ಮುಂದುವರಿದು "ಬಿಜ್ಜಳನ ಅಂತ್ಯ ಕ್ರಿ.ಶ.೧೧೬೭ರ ಕೊನೆಯ ವೇಳೆಗೆ ಸಂಭವಿಸಿರಬೇಕೆಂದು ಶಾಸನಗಳ ಆಧಾರದಿಂದ ನಿರ್ಧರಿಸಬಹುದು. ಅದು ಆತನ ಆಳ್ವಿಕೆಯ ೧೨ನೇ ವರ್ಷವೆಂದು ಶಾಸನಗಳು ಉಲ್ಲೇಖಿಸುತ್ತದೆ"[೬೧]ಎನ್ನುತ್ತಾರೆ. ಅಲ್ಲಿಂದ ಆತನ ಶಾಸನಗಳು ಸಿಗುವುದಿಲ್ಲ. ಬಿಜ್ಜಳನ ನಂತರದಲ್ಲಿ ಅವನ ತಮ್ಮ ಆಳ್ವಿಕೆ ಮಾಡಿದನೆಂದು, ಆದರೆ ಈತನ ಬಗ್ಗೆ ಶಾಸನಗಳು ಲಭ್ಯವಿಲ್ಲ. ೧೧೬೮ರಿಂದಲೇ ಶಾಸನ ಸಿಗುವುದರಿಂದ ಸ್ಪಷ್ಟವಾಗಿ ಕರ್ಣದೇವನು ಆಳ್ವಿಕೆ ಮಾಡಿದನೆಂದು ತಿಳಿಯುವುದಿಲ್ಲ. ಆದರೆ ಈ ಸೋವಿದೇವನೆ ಶರಣರನ್ನು ಕೊಲ್ಲಲು ಸೈನ್ಯದೊಂದಿಗೆ ಬಂದನು ಎಂಬುದನ್ನು ಊಹಿಸಬಹುದಾಗಿದೆ.

ಎಂ.ಎಂ.ಕಲಬುರ್ಗಿಯವರು ಕಲ್ಯಾಣಕ್ರಾಂತಿ ಸಂಭವಿಸಲು ವರ್ಣಸಂಕರ, ಜೊತೆಗೆ ತಾರತಮ್ಯದ ರಾಜಕೀಯ, ಮುಖ್ಯವಾಗಿದೆ ಎಂದು ಹೇಳುತ್ತಾ "ಕೊಂಜಾಪುರ ಶಾಸನದಲ್ಲಿ ಬಿಜ್ಜಗ ಶಿರಚ್ಛೇದಕ ಎಂಬ ಪ್ರಶಸ್ತಿಯೊಂದಿಗೆ ಉಲ್ಲೇಖಿತನಾದ ಮಲ್ಲಿದೇವರು ಸಮಯ ಸಾಧಿಸಿ ಬಿಜ್ಜಳನನ್ನು ನಡುಪಟ್ಟಣದಲ್ಲಿಯೇ ಕೊಂದುದು ಕಲ್ಯಾಣದಲ್ಲಿ ಕೋಲಾಹಲವನ್ನೆಬ್ಬಿಸಿತು. ಬಸವಣ್ಣನವರಿಂದ ಕೈಲಾಸವೆನಿಸಿದ ಕಲ್ಯಾಣ ಈ ಕಾಳಗದ ಕಣವೆನಿಸಿತು. ಅವರು ಕೈಯ್ಯಾರೆ ಕಟ್ಟಿದ ಶರಣ ಕಲ್ಯಾಣ ಈ ಕ್ರಾಂತಿಯಿಂದ ಪುಡಿ ಪುಡಿಯಾಯಿತು."[೬೨] ಬಸವಣ್ಣ ಕಟ್ಟಿದ ಕಲ್ಯಾಣ ಈತನ ಕಣ್ಣ ಮುಂದೆ ಕುಸಿದಿದ್ದು ನೋವಾಗುತ್ತೆ. ಇಂತಹ ಸಮಯದಲ್ಲಿ ಸಂಗಮನ ದಾರಿಯೊಂದೇ ಎಂಬುದು ಎಂ.ಎಂ.ಕಲುಬುರ್ಗಿಯವರ ಅಭಿಪ್ರಾಯ ವಾಗಿದೆ. ಇತಿಹಾಸದಿಂದ ನಮಗೆ ಸಾಕಷ್ಟು ಮಾಹಿತಿ ಸಿಗುವುದರಿಂದ ಕಲ್ಯಾಣಕ್ರಾಂತಿಯಾಗಿದ್ದು ಸತ್ಯವಾಗಿದೆ ಎನ್ನುವ ಸಾಧ್ಯತೆಯಿದೆ. ಇಲ್ಲಿ ನಡೆದ ಘಟನೆ ಗಂಗಾಂಬಿಕೆಯ ವೇದನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಈಕೆಯು ಬಹುಶಃ ಹರಳಯ್ಯ, ಮಧುವಯ್ಯರ ಕಗ್ಗೊಲೆಯನ್ನು ಕಂಡಿರಬಹುದು. ಹಾಗಾಗಿ ಶರಣರನ್ನು ಹುರಿದುಂಬಿಸಿ ವಚನಸಾಹಿತ್ಯ ರಕ್ಷಣೆಗೆ ಮುಂದಾಗುತ್ತಾಳೆನ್ನಬಹುದು.

"ಕಲ್ಯಾಣಕ್ರಾಂತಿಯ ನಂತರ ಗಂಗಾಂಬಿಕೆಯು ಬಸವಣ್ಣನವರೊಂದಿಗೆ ಕೂಡಲಸಂಗಮಕ್ಕೆ ಹೋಗದೆ, ಕಲ್ಯಾಣದಲ್ಲಿಯೇ ಉಳಿದುಕೊಂಡು ಗುರು ರುದ್ರಮುನಿದೇವರೆಂಬ ಸದ್ಗುರುಮೂರ್ತಿಗೆ.....

ಚತುರ್ವಿಧ ಭಕ್ತಿಯ ಮಾಡಿ ಆ ಗುರುವಿನಲ್ಲಿಯೇ ಅಡಗಿದಳು"[೯೩] ಎಂದು ಲೇಖಕರು ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ಅಭಿಪ್ರಾಯಪಡುತ್ತಾರೆ. ಆದರೆ ಸಿದ್ಧಳಾಗಿದ್ದು ಶರಣ ಸಂಘಟನೆ ಮಾಡಿ ಗುರು ರುದ್ರಮುನಿಗಳ ಅಪ್ಪಣೆ ಮಾರ್ಗದರ್ಶನ ಪಡೆದಿರಬೇಕು ಎಂಬುವ ಸಾಧ್ಯತೆ ಇದೆ. ಮುಂದುವರೆದು ಈ ಲೇಖನದಲ್ಲಿ "ಶಾಂತಲಿಂಗದೇಶಿಕ ಕವಿಯ ಹೇಳಿಕೆಯಿದ್ದರೂ, ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ ಪ್ರಸ್ತುತ ಕವಿಯ ಅಭಿಪ್ರಾಯ ಪ್ರಶ್ನಾತೀತವಾಗಿ ಒಪ್ಪುವುದು ಕಷ್ಟವೆನಿಸುತ್ತದೆ."[೯೪] ಈ ಹೇಳಿಕೆಯಿಂದ ಗಂಗಾಂಬಿಕೆಯು ಶರಣರನ್ನು ಶರಣಸಾಹಿತ್ಯದ ರಕ್ಷಣೆಗೆ ಮುಂದಾಗಿ ಉಳವಿಯ ಕಡೆಗೆ ಪ್ರಯಾಣ ಬೆಳೆಸಿರಬೇಕೆಂದು ಊಹಿಸಬಹುದು.

ಗಂಗಾಂಬಿಕೆಯು ವಚನ ರಕ್ಷಣೆಗಾಗಿ ಶರಣರನ್ನು ಸಂಘಟಿಸಿದ್ದು ಅದರಲ್ಲಿ ಈಕೆಯ ಪಾತ್ರವನ್ನು ಶಕುಂತಲಾ ಹೆಗಡೆ "ಕಲ್ಯಾಣಕ್ರಾಂತಿಯಲ್ಲಿ ವಚನ ರಕ್ಷಣೆಗಾಗಿ ಅಕ್ಕ ನಾಗಮ್ಮ, ಚೆನ್ನಬಸವಣ್ಣನ ನೇತೃತ್ವದಲ್ಲಿ ಉಳುವಿಯ ಕಡೆಗೆ ಅನೇಕ ಶರಣರು ನಡೆದರು. ಅವರೊಂದಿಗೆ ಗಂಗಾಂಬಿಕೆಯೂ ಇದ್ದಳು."[೯೫] "ವಚನ ಸಾಹಿತ್ಯವನ್ನು ಬೆನ್ನಿಗೆ ಕಟ್ಟಿಕೊಂಡು ಕಾಡುಮೇಡು ತುಳಿಯುತ್ತಾ ಮುನ್ನಡೆದರು. ಬೆನ್ನಟ್ಟಿದ ಬಿಜ್ಜಳನ ಸೈನ್ಯದೊಂದಿಗೆ ಕಾದಾಡುತ್ತಲೇ ಸಾಗಿದರು."[೯೬] ಈ ರೀತಿ ಅಭಿಪ್ರಾಯ ಕೊಡುತ್ತಾರೆ. ಬಸವಣ್ಣ ರಕ್ಷಿಸಿದ್ದ ಶರಣಸಂಕುಲ, ಶರಣ ಸಾಹಿತ್ಯದ ಮೂಲಕ ಮುಂದಿನ ಪೀಳಿಗೆಗೆ ಒದಗಬೇಕು, ಶರಣಸಂಸ್ಕೃತಿ ಮುಂದುವರಿಯಬೇಕು ಎಂಬ ಕಲ್ಪನೆ ಈಕೆಯಲ್ಲಿ ಕಾಣಲಿಕ್ಕೆ ಸಾಧ್ಯವಿದೆ. ಗಂಗಾಂಬಿಕೆ ಗಣಚಾರಿ ಮಡಿವಾಳ ಮಾಚಯ್ಯನಿಗೆ ಹುರಿದುಂಬಿಸುವ ವಚನ ಇದಕ್ಕೆ ಸ್ಪಷ್ಟ ನಿದರ್ಶನವೆನಿಸಿದೆ.

"ಮಡಿವಾಳಣ್ಣಂಗೆ ಬಾರದವ್ವ ಕರುಣಾರಸ?
ಮಡಿವಾಳಣ್ಣಂಗೆ ಬಾರದವ್ವ ಶೌರ್ಯರಸ?
ಮಡಿವಾಳಣ್ಣಂಗೆ ಬಾರದವ್ವ ಅದ್ಭುತರಸ?
ಮಡಿವಾಳಣ್ಣಂಗೇಕೆ ಬಾರದವ್ವಾ
ಗಂಗಾಪ್ರೀಯ ಕೂಡಲ ಸಂಗನ ಶರಣಪ್ರಾಣ ದಾನರಸ
ಸಿದ್ಧರಾಮಯ್ಯ"[೯೭]

ಇದಕ್ಕೆ ಗಂಗಾಂಬಿಕೆಯಲ್ಲಿ ಪ್ರೇರಣಾತ್ಮಕತೆ ಮತ್ತು ಶರಣಸಾಹಿತ್ಯ, ಶರಣರನ್ನು ರಕ್ಷಿಸುವ ಅಚಲನಿಷ್ಠೆಯನ್ನು ಪ್ರೀತಿ ಶುಭಚಂದ್ರ ಅವರ ಹೇಳಿಕೆಯಲ್ಲಿ ನೋಡಬಹುದು.

"ಗುರುಪ್ರಾಣಿಯಾದ ಗಂಗಾಂಬಿಕೆ ಸಂಗಮಕ್ಕೆ ಹೋಗದೆ ಶರಣಧರ್ಮದ ರಕ್ಷಣೆಗೆ ಸಹಾಯಕಳಾಗಿ ನಿಲ್ಲಲು ನಿರ್ಧರಿಸುತ್ತಾಳೆ. ಗುರು ಘನಲಿಂಗರುದ್ರ ಮುನಿಗಳ ಆದೇಶದಂತೆ

ಮಡಿವಾಳ ಮಾಚಿದೇವ, ಚೆನ್ನಬಸವಣ್ಣನವರ ನೇತೃತ್ವದಲ್ಲಿ ಸಜ್ಜಾದ ವೀರ ಪಡೆಗೆ ಮಾತೃ ರಕ್ಷಣೆಯನ್ನು ಗಂಗಾಂಬಿಕೆ ನೀಡಿದಳು. ಶರಣ ಸೈನ್ಯದ ಮುಂದಾಳು ವೀರ ಮಡಿವಾಳ ಮಾಚಿದೇವರ ಕುರಿತು ಹಾಡಿ ಸೈನ್ಯವನ್ನು ಹುರಿದುಂಬಿಸಿ ಪ್ರೇರಕ ಶಕ್ತಿಯಾದಳು."[೯೮] ಇವರ ಹೇಳಿಕೆಯಂತೆ ಗಂಗಾಂಬಿಕೆಯಲ್ಲಿ ಚೈತನ್ಯ ಉದಯವಾಯಿತು. ಏಕೆಂದರೆ ಗುರುಗಳ ಆದೇಶ ಒಂದಾದರೆ ಕಲ್ಯಾಣ ಶರಣರ ಅಳಿವು–ಉಳಿವಿನ ಪ್ರಶ್ನೆಯಾಗಿ ಈಕೆಯ ಮುಂದೆ ನಿಂತಾಗ ಪ್ರೇರಣಾದಾಯಕಳು ಆಗಿ ರಕ್ಷಣೆಗೆ ಮುಂದಾದಳು. ಹಲವಾರು ಲೇಖಕರ ಅಭಿಪ್ರಾಯದಂತೆ ಗಂಗಾಂಬಿಕೆಯಲ್ಲಿ ವೀರತ್ವ ಹುಟ್ಟುತ್ತಲೇ ಬಂದಿದೆ. ಕಾರಣ ಗಂಗಾಂಬಿಕೆ ಎಡಗೈಯಲ್ಲಿ ಲಿಂಗವಾದರೆ ಬಲಗೈಯಲ್ಲಿ ಖಡ್ಗ, ಇದು ಕೂಡ ಪೂಜೆಯೆಂದು ತಿಳಿದಿರಬೇಕು. ಧರ್ಮಕ್ಕೆ ಕುತ್ತು ಬಂದಾಗ ಹೋರಾಟ ಅನಿವಾರ್ಯವೆಂದು ಗಣಚಾರ ನೇಮ ಹೇಳುತ್ತದೆ.

ಈ ಕ್ರಾಂತಿಯಿಂದ ಶರಣರಲ್ಲಿ ಪ್ರಾಣರಕ್ಷಣೆಗಿಂತ ತಮ್ಮ ವಚನಸಾಹಿತ್ಯ ಉಳಿಸುವುದೇ ಮುಖ್ಯವೆಂಬ ದೃಢ ನಿರ್ಧಾರ ಇದ್ದುದು ಕಾಣುತ್ತದೆ. ಹಾಗಾಗಿ ಫ.ಗು.ಹಳಕಟ್ಟಿ ಅಭಿಪ್ರಾಯದಂತೆ "ಶಸ್ತ್ರವನ್ನು ಹಿಡಿದು ಚನ್ನಬಸವ, ಮಾಚಿದೇವ ಇವರ ನೇತೃತ್ವದಲ್ಲಿ ಅಳಿಯ ಬಿಜ್ಜಳನ ದಂಡಾಳು ಗಳೊಡನೆ ಕಾದಾಡುತ್ತಾ ತೋರಗಲ್ಲು ನಾಡನ್ನು ಪ್ರವೇಶಿಸಿದರು... ಈ ಯುದ್ಧಗಳಾದಲ್ಲೆಲ್ಲ ಗಂಗಾಂಬಿಕೆಯೂ, ನಾಗಲಾಂಬಿಕೆಯೂ ರಣರಂಗಗಳಲ್ಲಿ ಇರುತ್ತಿದ್ದರು. ಕಡೆಗೆ ಕಾತರವಳ್ಳಿಯಲ್ಲಿ ಘನಘೋರ ಯುದ್ಧವು ಸಂಭವಿಸಿತು."[೯೯] ಫ.ಗು.ಹಳಕಟ್ಟಿ ಕಾತರವಳ್ಳಿಯಲ್ಲಿ ಯುದ್ಧ ನಡೆದುದು ಚೆನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ ಬರುತ್ತದೆ. ಅಂದರೆ ಕಲ್ಯಾಣದಿಂದ ನಡೆದು ಕಾತರವಳ್ಳಿ ಗ್ರಾಮದಲ್ಲಿ ಘೋರ ಯುದ್ಧ ನಡೆಯುತ್ತದೆ ಎಂದು ಕವಿ ಉಲ್ಲೇಖಿಸುತ್ತಾನೆ.

"ಒಂದು ತದ್ವಾರ್ತೆಯಂ ಪೇಳ್ದವರ್ ಬಳಿಕಲಾ
..........................................................
..........................................................
ಹಿಂದುಗೊಂಡಳಿಯ ಬಿಜ್ಜಳನೊಡನೆ ದಾಳಿಯಂ
ಬಂದೆಮ್ಮ ತಡೆವ ತಡೆಗೊಡದಲ್ಲಿ ನಾವಾಗ
ನಿಂತು ಕಾದುವೆವು ಕಾತರವಳ್ಳಿಯಲ್ಲಿ ಮುರುಗೋಡಿಂದ
ಮುರಿಯ ತಿವಿದು"[೧೦೦]

ಕಲ್ಯಾಣದಲ್ಲಿಯ ವಾರ್ತೆಯನು ಕೇಳಿ ಹಿಂದೆ ಪಂಜನ್ನು ತೆಗೆದುಕೊಂಡು ಅಳಿಯ ಬಿಜ್ಜಳನ ಸೈನಿಕರು, ದಾಳಿಯನ್ನು ಮಾಡಿದರು. ಶರಣರ ಮೇಲೆ, ದಾಳಿ ಮಾಡಿದ ಸ್ಥಳ ಕಾತರವಳ್ಳಿಯಾಗಿದೆ. ಈ ಗ್ರಾಮ ಮುರುಗೋಡಕ್ಕೆ ಹತ್ತಿರವಿದೆ ಎಂಬುದನ್ನು ಕವಿ ಉಲ್ಲೇಖಿಸುತ್ತಾನೆ.

ಈ ಕಾತರವಳ್ಳಿ ಕಾದರವಳ್ಳಿ(ಕಾದಾಡಿದ ಊರು) ಎಂದು ಈಗ ಕರೆಯುತ್ತಾರೆ. ಹಾಗಾಗಿ ಫ.ಗು.ಹಳಕಟ್ಟಿಯವರು ಮುಂದುವರೆದು "ಅಳಿಯ ಬಿಜ್ಜಳನಿಗೆ ಶಿವಶರಣರನ್ನು ಮುರಿದಿಕ್ಕುವುದು ಆಗಲಿಲ್ಲ, ಅವನೇ ಸೋತು ರಣರಂಗದಲ್ಲಿ ಮೂರ್ಛಿತನಾಗಿ ಬಿದ್ದನು. ಅವನನ್ನು ಕೊಂದು ಹಾಕಬೇಕೆಂದು ಶಿವಶರಣರ ದಂಡಾಳುಗಳು ಸಿದ್ಧವಾಗಿದ್ದರು."[೧೧೧] ಬಿಜ್ಜಳನ ಸೈನಿಕರೊಂದಿಗೆ ವೀರಾವೇಶದಿಂದ ಹೋರಾಡಿ ಗೆಲುವನ್ನು ಸಾಧಿಸಿದರು. ಅಳಿಯ ಬಿಜ್ಜಳನನ್ನು ನಾಗಲಾಂಬಿಕೆ ಕೊಲ್ಲಲು ಬಿಡಲಿಲ್ಲ, ಮುಂದೆ ಉಳವಿಯತ್ತ ಸಾಗಿದರು ಎಂದು ಹೇಳುತ್ತಾರೆ. ಹಾಗಾದರೆ ಗಂಗಾಂಬಿಕೆಯ ಪ್ರಸ್ತಾಪ ಚೆನ್ನಬಸವ ಪುರಾಣದಲ್ಲಿ ಬರುವುದಿಲ್ಲ ಏಕೆ? ನಾಗಮ್ಮ ಮಡಿವಾಳ ಮಾಚಯ್ಯ ಮುಂತಾದವರು ಉಳವಿಯತ್ತ ಹೋದರು, ಜೊತೆಗೆ ಕಾತರವಳ್ಳಿಯಲ್ಲಿ ಯುದ್ಧವಾದ ಸಂದರ್ಭ ಹೇಳಿದ್ದಾನೆ ವಿನಃ ಗಂಗಾಂಬಿಕೆ ಐಕ್ಯದ ಬಗ್ಗೆ ತಿಳಿಸಿಲ್ಲ. ಆದರೆ ಫ.ಗು.ಹಳಕಟ್ಟಿಯವರು "ಗಂಗಾಂಬಿಕೆಯು ಕಾತರವಳ್ಳಿಯಿಂದ ಉತ್ತರಕ್ಕೆ ೩-೪ ಮೈಲುಗಳ ಮೇಲಿರುವ ಮುಗುಟಖಾನ ಹುಬ್ಬಳ್ಳಿ ಎಂದು ಈಗ ಕರೆಯಲ್ಪಡುವ ಗ್ರಾಮದಲ್ಲಿ ಇದ್ದಾಗ್ಗೆ ಅವಳು ಅಲ್ಲಿಯೇ ಲಿಂಗೈಕ್ಯಳಾದಳು, ಅಲ್ಲಿಯೇ ಆಕೆಯ ಸಮಾಧಿಯೂ ಇದೆ"[೧೧೨] ಎನ್ನುತ್ತಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಳೆಯ ಮೂಲಗದ್ದುಗೆ ಇರುವುದನ್ನು ಹಾಗೂ ಈಗ ನವೀಕರಣಗೊಂಡ ಗದ್ದುಗೆ ಮಲಪ್ರಭಾ ನದಿಯ ಮಧ್ಯ ಇರುವುದನ್ನು ಗಮನಿಸಲಾಗಿದೆ. ಈಗ ಅವಳ ಮೂರ್ತಿಯನ್ನು ಮಾಡಿ ಕೂಡಲಸಂಗಮ ಬಸವಣ್ಣನವರ ಐಕ್ಯ ಮಂಟಪಕ್ಕೆ ಹೋಗುವ ಹಾಗೆ ಮಾಡಿದ್ದಾರೆ. ಹಾಗೆ ಫ.ಗು.ಹಳಕಟ್ಟಿಯವರ ಅಭಿಪ್ರಾಯವನ್ನೆ ಯು.ಎಂ.ಅನಿಗೋಳ, ಶಕುಂತಲಾ ಹೆಗಡೆ, ಶಾಂತಾದೇವಿ ಮಾಳವಾಡ, ಶಿವಲಿಂಗಮ್ಮ ಕಟ್ಟಿ, ಪ್ರೊ.ಲಲಿತಾಂಬ ವೃಷಭೇಂದ್ರಸ್ವಾಮಿ, ಜಯಶ್ರೀ ದಂಡೆ, ಶ್ರೀಮತಿ ಎಚ್.ಎಂ.ಬೀಳಗಿ, ಡಾ.ಎಚ್.ಎಸ್.ಶ್ರೀಮತಿ ಮುಂತಾದವರು ಹೇಳುತ್ತಾರೆ. ಹಾಗಾಗಿ ಗಂಗಾಂಬಿಕೆಯ ಸಮಾಧಿ ಇದೆ ಎಂದು ಹೇಳಲು ಸಾಧ್ಯವಿದೆ. ಆದರೆ ಲಲ್ಲೇಶ್ವರಿ ಶಂ.ಮೂಗಿಯವರು ಗಂಗಾಂಬಿಕೆ ಕಾದರವಳ್ಳಿ ಯುದ್ಧದಲ್ಲಿ ಗಾಯಗೊಂಡಳು. ಈಕೆಯನ್ನು ಉಳವಿಗೆ ಸಾಗಿಸಬೇಕೆಂದು ಅಕ್ಕ ನಾಗಮ್ಮ ಹೇಳಿದಳು. ಮುಂದೆ ಸ್ವಲ್ಪ ದೂರ ಹೋಗುವುದರಲ್ಲಿ ಗಂಗಮ್ಮ ಐಕ್ಯವಾದಳು ಎನ್ನುತ್ತಾರೆ.

"ಚಿಕ್ಕ ಹೂಬಳ್ಳಿ ಗ್ರಾಮದಲ್ಲಿ ಗಂಗಮ್ಮ ಐಕ್ಯವಾದಳು. ಅಳಿದುಳಿದ ಶರಣರೊಡನೆ ನಾಗಮ್ಮ ಅಲ್ಲಿ ಬಂದಳು. ಅಂದು ಇರುಳಿನಲ್ಲಿ ಚಂದ್ರಮನ ಬೆಳಕಿನಲ್ಲಿ ಹೂಬಳ್ಳಿಯ ಮಲಾಪಹಾರಿ ದಂಡೆಯ ಮೇಲೆ ಗಂಗಮ್ಮನ ಸಮಾಧಿಯನ್ನು ಮಾಡಿದರು."[೧೧೩] ಈಕೆಯು ಯುದ್ಧವನ್ನು ಮಾಡುತ್ತಾ ಸಾವನ್ನಪ್ಪಿದ್ದಳು. ಹಾಗೂ ಅಕ್ಕ ನಾಗಮ್ಮ ಜೊತೆಗೂಡಿದ ಶರಣರು ಈಕೆಯ ಸಮಾಧಿಯನ್ನು ಚಂದ್ರನ ಬೆಳಕಿನಲ್ಲಿ ಮಾಡಿದರು ಎಂಬುದರಿಂದ ಆ ದಿನ ಹುಣ್ಣಿಮೆಯಾಗಿದ್ದಿರ

ಬಹುದು. ಹಾಗಾಗಿ ಈಕೆ ಹುಣ್ಣಿಮೆ ದಿನ ಐಕ್ಯವಾಗಿರಬಹುದೆಂದು ಊಹಿಸಬಹುದು. ಹಾಗೂ "ಅಂದಿನ ಹೂಬಳ್ಳಿ ಇಂದು ಎಂ.ಕೆ.ಹುಬ್ಬಳ್ಳಿಯೆಂದು ಹೆಸರು ಪಡೆದಿದೆ. ಇದು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನಲ್ಲಿದೆ."[೧೦೪] ಹಲವಾರು ವಿದ್ವಾಂಸರು ಹಾಗೂ ಮೌಖಿಕ ಆಧಾರಗಳಿಂದ ಗಂಗಾಂಬಿಕೆ ಈ ಸ್ಥಳದಲ್ಲಿಯೇ ಅಂದರೆ ಎಂ.ಕೆ.ಹುಬ್ಬಳ್ಳಿಯಲ್ಲಿ ಈಕೆ ಐಕ್ಯವಾಗಿರಬಹುದೆಂದು ಹೇಳಬಹುದು.

**ಗಂಗಾಂಬಿಕೆ ಐಕ್ಯದ ನಂತರ ಈಕೆಯ ಬಗೆಗೆ**

ಬೀದರ್ ಜಿಲ್ಲೆ ಬಸವ ಕಲ್ಯಾಣದಲ್ಲಿ ಈಕೆಯ ಗವಿಯ ಮುಂದೆ ಹಾಗೂ ಪಕ್ಕದ ಅಕ್ಕನಾಗಾಯಿ, ನೀಲಾಂಬಿಕೆ ಗವಿಗಳಿವೆ. ಇಲ್ಲಿ ಹಲವಾರು ತಾಯಿಂದಿರು, ಪೂಜಿಸಿ, ಪ್ರಾರ್ಥಿಸಿ, ಅನುಭವದ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ ಎಂದು ಮಲ್ಲಮ್ಮ ತಾಯಿ ತಿಳಿಸಿದರು. ಆದರೆ ಈ ಕಾರ್ಯಕ್ರಮಗಳು ನಿತ್ಯ ಜರುಗುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಎಂದು ಹೇಳುತ್ತಾರೆ. ಆಮೇಲೆ ಈಕೆಯ ದೇವಸ್ಥಾನಗಳು ವಿರಳ ಎನ್ನಬಹುದು. ಬಸವ ಕಲ್ಯಾಣಬಿಟ್ಟರೆ, ಗಂಗಾಂಬಿಕೆಯ ಸಮಾಧಿಯಾದ ಎಂ.ಕೆ.ಹುಬ್ಬಳ್ಳಿಯಾಗಿದೆ. ಈ ಸ್ಥಳದಲ್ಲಿ ಗಂಗಾಂಬಿಕೆಯನ್ನು ಕಲ್ಯಾಣ ಗಂಗಮ್ಮ, ಹೊಳೆಗಂಗಮ್ಮ ಎನ್ನುತ್ತಾರೆ. ಹೊರತು, ನಮಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಈಕೆಯು ಯುದ್ಧ ಮಾಡುತ್ತಾ ಬಂದು, ಇಲ್ಲಿ ಐಕ್ಯವಾದಳು ಎಂದು ನಮ್ಮ ಹಿರಿಯರು ತಿಳಿಸುತ್ತಿದ್ದರು ಎಂದು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಕಾದ್ರವಳ್ಳಿ ಚನ್ನವೀರಪ್ಪ ಕುಂಬಾರ ಹೇಳುತ್ತಾರೆ ಹಾಗೂ ಈಕೆಯ ಸಮಾಧಿಯನ್ನು ಜೀರ್ಣೋದ್ಧಾರ ಕೈಗೊಂಡಂತಹ ವಿಚಾರಗಳನ್ನು ಅಲ್ಲಿಯ ಟ್ರಸ್ಟ್ ಸದಸ್ಯರು ತಿಳಿಸಿದರು. ಮತ್ತು ಈಕೆಯ ಕುರಿತು ಉತ್ಸವ, ಜಾತ್ರೆ, ಆರಾಧನೆ ಕಾರ್ಯಕ್ರಮಗಳು ಯಾವುದೂ ನಡೆಯುವುದಿಲ್ಲ. ಆದರೆ ಸಂಕ್ರಾಂತಿಯ ದಿವಸ ನದಿ ಸ್ನಾನಕ್ಕೆ ಅನೇಕ ಭಕ್ತರು ಬಂದು ದರ್ಶನ ಪಡೆಯುತ್ತಾರೆ ಎಂದು ಅಲ್ಲಿಯ ವಕ್ತೃಗಳು ತಿಳಿಸುತ್ತಾರೆ.

ಗಂಗಾಂಬಿಕೆ ಐಕ್ಯದ ಬಗ್ಗೆ ಮೌಖಿಕ ಮತ್ತು ಅಧ್ಯಯನಕಾರರ ಅಭಿಪ್ರಾಯ ಬಿಟ್ಟರೆ, ಬೇರೆ ಮಾಹಿತಿ ಸಿಗುವುದಿಲ್ಲ. ಕೆಲ ಹಳೆಯ ಪುಸ್ತಕಗಳ ಮುಖ ಪುಟದಲ್ಲಿ ಆಕೆ ವೀರವನಿತೆಯಾಗಿ ಹೋರಾಡಿರುವುದನ್ನು ಕಾಣಬಹುದಾಗಿದೆ. ಗಂಗಾಂಬಿಕೆ ಐಕ್ಯದವರೆಗೆ ಇಷ್ಟೇ ಮಾಹಿತಿ ಲಭ್ಯವಿದ್ದರೂ, ಐಕ್ಯದ ನಂತರ ಆಕೆ ತೀರಾ ಮೌನವಾಗಿದ್ದಾಳೆ. ಸಾಹಿತ್ಯಕವಾಗಿ ಕೂಡಾ ಆಕೆಯ ಚರ್ಚೆ ಕಡಿಮೆಯೇ ಆಗಿದೆ. ನೀಲಮ್ಮ ಐಕ್ಯದ ನಂತರ ಜನಮಾನಸದಲ್ಲಿ ಪಡೆದ ಸ್ಥಾನವನ್ನು ಈಕೆ ಪಡೆಯದೇ ಹೋಗಿರುವುದು ಯಾಕೆ ಎಂಬುದು ಸ್ಪಷ್ಟವಿಲ್ಲ. ಆದರೂ ಈಕೆಯ ಬಗೆಗೆ ಸಮರ್ಪಕ ಮಾಹಿತಿಯನ್ನು ಕ್ರೋಢೀಕರಿಸಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಅಷ್ಟೇ ಅಲ್ಲದೇ

ಲಿಖಿತ ಹಾಗೂ ಮೌಖಿಕ ಆಕರಗಳಿಂದಲೂ ಈಕೆ ಚಾರಿತ್ರಿಕ ವ್ಯಕ್ತಿ ಎಂಬುದನ್ನು ಪ್ರತಿಪಾದಿಸಲು ಪ್ರಯತ್ನಿಸಲಾಗಿದೆ. ಹಾಗಿದ್ದರೂ ಚರಿತ್ರೆ ಮಹಿಳೆಯಾದ ಇವಳ ವಿಷಯದಲ್ಲಿ ಮೌನವಾಗಿರುವುದನ್ನು ಸಾಬೀತು ಪಡಿಸಲಾಗಿದೆ.

ಒಟ್ಟಿನಲ್ಲಿ ಗಂಗಾಂಬಿಕೆ ಜೀವನದ ಸಮಗ್ರ ವಿವರಗಳನ್ನು ಇದಮಿತ್ಥಂ ಎಂದು ಹೇಳಲು ಸಾಧ್ಯವಿಲ್ಲದಿದ್ದರೂ ಸಮರ್ಥ ಮಾಹಿತಿಗಳಿಂದ ಇತಿವೃತ್ತವಾಗಿಸಲು ಪ್ರಯತ್ನಿಸಲಾಗಿದೆ. ಬಾಲ್ಯ, ಯೌವ್ವನ... ಇತ್ಯಾದಿ ಘಟನಾವಳಿಗಳ ಸರಪಣಿಯಾಗಿಸಿ ಜೀವನ ಚಿತ್ರವಾಗಿಸದೆ, ಹಲವಾರು ಸಂದಿಗ್ಧಮಯ ಸನ್ನಿವೇಶಗಳನ್ನು, ಚರ್ಚೆಗಳನ್ನು ಒದಗಿಸಿ ವಿವೇಚಿಸಲಾಗಿದೆ.

**ಅಡಿಟಿಪ್ಪಣಿಗಳು**

೧. ದೇವರಕೊಂಡರೆಡ್ಡಿ ಮತ್ತು ಇತರರು(ಸಂ), **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ,** ಪು.೨೦೮

೨. ದೇವರಕೊಂಡರೆಡ್ಡಿ ಮತ್ತು ಹನಮಾಕ್ಷಿ ಗೋಗಿ(ಸಂ), **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ಬೀದರ ಜಿಲ್ಲೆ,** ಪು.೧೬೧

೩. ಎಂ. ಚಿದಾನಂದಮೂರ್ತಿ, **ಬಸವಣ್ಣನವರು,** ಪು.೪೮

೪. ಶಿವಕುಮಾರ ಪಾವಟೆ, **ಮಂಗಳವಾಡ ಮತ್ತು ಇತರ ಲೇಖನಗಳು,** ಪು.೧೧

೫. ಎಚ್.ದೇವಿರಪ್ಪ(ಸಂ), **ಬಸವರಾಜ ದೇವರ ರಗಳೆ,** ಪು.೧೧೧, ಚತುರ್ಥಸ್ಥಲಂ

೬. ಎ.ಗಾಯಿತ್ರಿ, **ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೨೮

೭. ಆರ್.ಸಿ.ಹಿರೇಮಠ(ಸಂ), **ಭೀಮಕವಿ ಬಸವ ಪುರಾಣ,** ಪು.೬೪, ಪದ್ಯ ೧೬

೮. ಅದೇ, ಪು.೬೫, ಪುದ್ಯ ೧೯

೯. ಯು.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೨

೧೦. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೬೬

೧೧. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೪೧

೧೨. ಆರ್.ಸಿ.ಹಿರೇಮಠ(ಸಂ), **ಭೀಮಕವಿ ಬಸವಪುರಾಣ,** ಪು.೬೫, ಪದ್ಯ ೨೦, ೪ನೇ ಸಂಧಿ

೧೩. ಅದೇ, ಪು.೬೫, ಪದ್ಯ. ೨೧, ೪ನೇ ಸಂಧಿ

೧೪. ಅದೇ, ಪು.೬೭, ಪದ್ಯ ೩೦, ೪ನೇ ಸಂಧಿ

೧೫. ಆರ್.ಸಿ.ಹಿರೇಮಠ(ಸಂ), **ಬಸವರಾಜ ವಿಜಯಂ,** ಪು.೫೮, ಪದ್ಯ ೯೯

೧೬. ಅದೇ, ಪು.೬೫, ಪದ್ಯ ೮

೧೭. ಅದೇ, ಪು.೬೫, ಪದ್ಯ ೯

೧೮. ಡಾ.ಶಕುಂತಲಾ ಎಂ.ಹೆಗಡೆ, **ಗಂಗಾಂಬಿಕೆ**, ಪು.೧೫

೧೯. ಪಿ.ಕೆ.ರಾಜಶೇಖರ(ಸಂ), **ಜನಪದ ಬಸವಪುರಾಣ**, ಪು.೩೪

೨೦. ಪಿ.ಕೆ.ರಾಜಶೇಖರ(ಸಂ), **ಕರಪಾಲ ಬಸವಪುರಾಣ**, ಪು.೨೫

೨೧. ಗುಂಬೀಶಂ, **ಲಿಂಗಾನುಭವಿ ನೀಲಾಂಬಿಕೆ**, ಪು.೪, ಪದ್ಯ ೧೩

೨೨. ಎಚ್.ದೇವೀರಪ್ಪ(ಸಂ), **ಬಸವರಾಜ ದೇವರ ರಗಳೆ**, ಪು.೧೨೩, ೬ನೇ ಸ್ಥಲಂ

೨೩. ಆರ್.ಸಿ.ಹಿರೇಮಠ(ಸಂ), **ಬಸವಪುರಾಣ**, ಪು.೭೦-೭೧

೨೪. ವಿಜಯಕುಮಾರ **ಮಹಾನುಭಾವಿಗಳು-ಬಸವಣ್ಣನವರ ಚರಿತ್ರೆ ಮತ್ತು ಸಂಸ್ಕೃತಿಯ ಶೋಧಗಳು**, ಪು.೧೩೦

೨೫. ಪಿ.ವಿ.ನಾರಾಯಣ(ಸಂ), **ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ**, ಪು.xviii (ಪ್ರಸ್ತಾವನೆ)

೨೬. ಅದೇ, ಪು.೪೨

೨೭. ಎನ್.ಬಸವರಾಧ್ಯ(ಸಂ), **ಪಾಲ್ಕುರಿಕೆ ಸೋಮನಾಥ: ಒಂದು ಅಧ್ಯಯನ**, ಪು.೨೬

೨೮. ಅದೇ, ಪು.೨೬, ೨೭

೨೯. ಎಚ್.ದೇವೀರಪ್ಪ(ಸಂ), **ಶಿವತತ್ವ ಚಿಂತಾಮಣಿ**, ಪು.೨೫೬, ಪದ್ಯ ೨೯

೩೦. ಅದೇ, ಪು.೨೫೫, ಪದ್ಯ ೨೫

೩೧. ಬುದ್ಧಯ್ಯಸ್ವಾಮಿ ಮ.(ಸಂ), **ಪುರಾಣಿಕ ಮಠ, ಶ್ರೀ ಪ್ರಭುದೇವರ ಪುರಾಣ**, ಪು.೧೮೬, ೧೮೭, ಪದ್ಯ. ೬ ರಿಂದ ೮

೩೨. ಅದೇ, ಪು.೧೮೮, ಪದ್ಯ. ೧೩

೩೩. ಆರ್.ಸಿ.ಹಿರೇಮಠ(ಸಂ), **ಬಸವರಾಜ ವಿಜಯಂ**, ಪು.೬೨, ಪದ್ಯ. ೧೨೪, ೪ನೇ ಅಧ್ಯಾಯ

೩೪. ಅದೇ, ಪು.೬೩, ಪದ್ಯ. ೧೨೫

೩೫. ಅದೇ, ಪು.೬೮, ಪದ್ಯ. ೧೮

೩೬. ಅದೇ, ಪು.೬೮, ಪದ್ಯ. ೧೮

೩೭. ಬಿ.ಮಹಾದೇವಪ್ಪ, **ಅರಿವು-ಆಚಾರ**, ಪು.೧೬೧

೩೮. ಎಚ್.ದೇವಿರಪ್ಪ(ಸಂ), **ಸಿಂಗಿರಾಜಪುರಾಣ**, ಪು.೯೦, ಪದ್ಯ.೩೨

೩೯. ಅದೇ, ಪು.೯೦, ಪದ್ಯ ೩೩

೪೦. ವೀರಭದ್ರಪ್ಪ ಹಾಲಬಾವಿ, **ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ**, ಪು.೬೭೪, ಪದ್ಯ ೭೬

೪೧. ಮಲ್ಲಿಕಾರ್ಜುನ ಪರಡ್ಡಿ, ಪಂ.ನಾಗಭೂಷಣಶಾಸ್ತ್ರಿ(ಸಂ), **ಕಂಚಿ ಶಂಕರಾರಾಧ್ಯ ವಿರಚಿತ ಶ್ರೀ ಬಸವಪುರಾಣ**, ಪು.೧೦೫, ೧೦೭, ಪದ್ಯ ೮೪, ೯೦, ೯೧, ೯೫.

೪೨. ಎಮ್.ಎಸ್.ಸುಂಕಾಪುರ(ಸಂ), **ಶಂಕರ ಕವಿ ವಿರಚಿತ ಚೋರ ಬಸವೇಶ್ವರ ಕಾವ್ಯ**, ಪು.೨೮

೪೩. ಹ.ಕ.ರಾಜೇಗೌಡ(ಸಂ), **ಗರಣಿಯ ಬಸವಲಿಂಗನ ಬಸವೇಶ್ವರ ಕಾವ್ಯ**, ಪು.೩೧, ಪದ್ಯ.೧

೪೪. ಅದೇ, ಪು.೩೫, ಪದ್ಯ ೪೫, ೫೩

೪೫. ಸಂ.ಶಿ.ಭೂಸನೂರ ಮಠ(ಸಂ), **ಸಿದ್ಧನಂಜೇಶನ ಗುರುರಾಜ ಚರಿತ್ರೆ**, ಪು.೧೪೩, ಪದ್ಯ ೯

೪೬. ಬಿ.ನಂ.ಚಂದ್ರಯ್ಯ(ಸಂ), **ಬಸವಪವಾಡ**, ಪು.೩೦, ಪದ್ಯ ೧೨೦, ೧ನೇ ಸಂಧಿ.

೪೭. ಮಾ.ನಂ.ನಂಜಪ್ಪ(ಸಂ), **ಶ್ರೀ ಬಸವೇಶ್ವರ ಸ್ತೋತ್ರ ಮುಕ್ತಾಫಲ**, ಪು.೨, ಪದ್ಯ ೮

೪೮. ಜಿ.ಜಿ.ಮಂಜುನಾಥನ್(ಸಂ), **ಗುರುಲಿಂಗದೇಶಿಕನ ಲಿಂಗಪುರಾಣ**, ಪು.೨೦೪, ೩೦ನೇ ಸಂಧಿ, ೪೪ನೇ ಪದ್ಯ

೪೯. ಆರ್.ಸಿ.ಹಿರೇಮಠ(ಸಂ), **ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣ**, ಭಾಗ ೨, ಪು.೧೪೧೧, ಪದ್ಯ ೧೧, ಕಾಂಡ ೮, ಸಂಧಿ ೧

೫೦. ಬಸವರಾಜ ಮಲಶೆಟ್ಟಿ ಮತ್ತು ಇತರರು(ಸಂ), **ಹರಿದ ಹೆದ್ದೊರೆ**, ಪು.೪೭೦

೫೧. ಅದೇ, ಪು.೪೭೦

೫೨. **ಕರ್ನಾಟಕದ ಪರಂಪರೆ ಸಂಪುಟ** ೧, ಪು.೩೫೦

೫೩. ಬಿ.ಡಿ.ಜತ್ತಿ ಮತ್ತು ಇತರರು(ಸಂ), **ಬಸವೇಶ್ವರ**, ಪು.೬೮

೫೪. ಎಂ.ಎಸ್.ಮದಭಾವಿ(ಸಂ), **ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ, ಚರಿತ್ರಾ ಸಾಹಿತ್ಯ** ೨, ಪು.೧೧೬

೫೫. ಸಂದರ್ಶನದ ಮಾತು, ಎಸ್.ಆರ್.ಗುಂಜಾಳ, ಧಾರವಾಡ

೫೬. ಸಂದರ್ಶನದ ಮಾತು, ಶಿವಲಿಂಗಮ್ಮ ಕಟ್ಟಿ, ಹುಬ್ಬಳ್ಳಿ

೫೭. ಸಂದರ್ಶನದ ಮಾತು, ನೀಲಗಂಗಾಚರಂತಿಮಠ, ಬೆಳಗಾವಿ.

೫೮. ಶ್ರೀಮತಿ ಸಂಗಮ್ಮನವರು, **ಕರವೀರಶೆಟ್ಟಿ**, ಪು.೪

೫೯. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ**, ಪು.೫–೬

೬೦. ಶಕುಂತಲಾ ಎಂ.ಹೆಗಡೆ, **ಗಂಗಾಂಬಿಕೆ**, ಪು.೨೩

೬೧. ಜಯಶ್ರೀದಂಡೆ, **ಫಲದೊಳಗಣ ರುಚಿ**, ಪು.೧೬೭

೬೨. ಎ.ಗಾಯಿತ್ರಿ, **ಕನ್ನಡದ ವಚನ ಕಾರ್ತಿಯರು: ಒಂದು ಅಧ್ಯಯನ**, ಪು.೧೨೮

೬೩. ವೀರಣ್ಣರಾಜೂರ, **ಶಿವಶರಣೆಯರ ವಚನ ಸಂಪುಟ,** ಪು.೬೭೧

೬೪. ಎಂ.ಎಂ.ಕಲಬುರ್ಗಿ(ಸಂ), **ಬಸವಣ್ಣನವರ ವಚನ ಸಂಪುಟ,** ಪು.೩೦೧, ವಚನ ೧೧೧೧

೬೫. ಎಂ.ಎಸ್.ಸುಂಕಾಪುರ(ಸಂ), **ಚಾಮರಸನ ಪ್ರಭುಲಿಂಗಲೀಲೆ,** ಪು.೧೨೫, ಪದ್ಯ ೨೫

೬೬. ಎಚ್.ದೇವಿರಪ್ಪ(ಸಂ), **ಬಸವರಾಜದೇವರ ರಗಳೆ,** ಪು.೧೭೫, ೧೭೬

೬೭. ಸಂ.ಹ.ಕ.ರಾಜೇಗೌಡ, ಬಸವೇಶ್ವರ ಕಾವ್ಯ, ಪು.೧೦೬, ಪದ್ಯ. ೪೬, ೪೭

೬೮. ವಿಜಯಕುಮಾರ(ಸಂ), **ಬಸವಣ್ಣನವರು ಚರಿತ್ರೆ ಮತ್ತು ಸಂಸ್ಕೃತಿಯ ಶೋಧಗಳು,** ಪು.೧೬೫

೬೯. ಎಂ.ಎಂ.ಕಲುಬುರ್ಗಿ(ಸಂ), **ಬಸವಣ್ಣನವರ ವಚನ ಸಂಪುಟ-೩೦೦,** ವಚನ ೧೦೦೮

೭೦. ಜಯದೇವಪ್ಪ ಜೈನಕೇರಿ, **ಶರಣ ಸಂಪದ,** ಪು.೧೬೫

೭೧. ಎಚ್.ದೇವಿರಪ್ಪ(ಸಂ), **ಬಸವರಾಜ ದೇವರ ರಗಳೆ,** ಪು.೧೭೫

೭೨. ಆರ್.ಸಿ.ಹಿರೇಮಠ(ಸಂ), **ಭೀಮಕವಿಯ ಬಸವಪುರಾಣ,** ಪು.೧೭೦

೭೩. ಆರ್.ಸಿ.ಹಿರೇಮಠ, ಡಾ.ಎಂ.ಎಸ್.ಸುಂಕಾಪುರ(ಸಂ), **ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ,** ಪು.೧೫೫, ಕಥೆ.೩೪೭

೭೪. ಚ.ವಿ.ಮುಳಗುಂದ(ಸಂ), **ಮಾತೋಶ್ರೀ ಅಭಿನಂದನ ಗ್ರಂಥ,** ಪು.೧೬೪

೭೫. ಯು.ಆರ್.ಅನಂತಮೂರ್ತಿ(ಸಂ), **ವೀರಶೈವ ಧರ್ಮದರ್ಶನ,** ಪು.೧೮೧

೭೬. ಎಂ.ಎಂ.ಕಲುಬುರ್ಗಿ(ಸಂ), **ಬಸವಣ್ಣನವರ ವಚನಗಳು,** ಪು.೧೦೫

೭೭. ಶಕುಂತಲಾ ಮ.ಹೆಗಡೆ, **ಗಂಗಾಂಬಿಕೆ,** ಪು.೨೪

೭೮. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೨೪೧

೭೯. ಬಿ.ಡಿ.ಜತ್ತಿ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೪೧

೮೦. ಅದೇ, ಪು.೨೪೧

೮೧. ಆರ್.ಸಿ.ಹಿರೇಮಠ(ಸಂ), **ಪದ್ಮಣಾಂಕ ಕವಿಕೃತ ಪದ್ಮರಾಜಪುರಾಣ,** ಪು.೩, ಪದ್ಯ.೬

೮೨. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೨೩

೮೩. ಎಸ್.ವಿದ್ಯಾಶಂಕರ(ಸಂ), **ಸಿದ್ಧರಾಮೇಶ್ವರ ವಚನ ಸಂಪುಟ,** ಪು.೩೬೦, ವಚನ ಸಂಖ್ಯೆ ೧೨೯೨

೮೪. ಸಂದರ್ಶನದ ಮಾತು, ನೀಲಗಂಗಾ ಚರಂತಿಮಠ, ಬೆಳಗಾವಿ.

೮೫. ಸಂದರ್ಶನದ ಮಾತು, ವಿಜಯಕುಮಾರ ಮಹಾನುಭಾವಿಗಳು, ಜೋಗ್‌ಪಾಲ್ಸ್ ಮಠ

೮೬. ಸಂದರ್ಶನದ ಮಾತು, ಮುರಘಾ ಶರಣರು, ಚಿತ್ರದುರ್ಗ.

೮೭. ಸಂದರ್ಶನದ ಮಾತು, ಚನ್ನಬಸವಸ್ವಾಮಿಜಿ, ಅಥಣಿ, ಬೆಳಗಾವಿ ಜಿಲ್ಲೆ.

೮೮. ಎಂ.ಎಚ್.ನದಾಫ್, **ನೀಲಮ್ಮನ ನಿಲುವು**, ಪು.೪೩

೮೯. ಅದೇ, ಪು.೪೩, ೪೪

೯೦. ಬಸವರಾಜಮಲಶೆಟ್ಟಿ ಮತ್ತು ಇತರರು(ಸಂ), **ಹರಿದ ಹೆದ್ದೊರೆ**, ಪು.೪೭೬

೯೧. ಅದೇ. ಪು.೪೭೭

೯೨. ಬಿ.ಡಿ.ಜತ್ತಿ(ಸಂ), **ಶ್ರೀ ಬಸವೇಶ್ವರರು**, ಪು.೮೦

೯೩. ಎಚ್.ಎಸ್.ಶ್ರೀಮತಿ(ಸಂ), **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**, ಪು.೧೦೭

೯೪. ಅದೇ, ಪು.೧೦೭

೯೫. ಶಕುಂತಲಾ ಹೆಗಡೆ, **ಗಂಗಾಂಬಿಕೆ**, ಪು.೫೮

೯೬. ಅದೇ, ಪು.೫೮

೯೭. ವೀರಣ್ಣರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ**, ಪು.೨೯೯

೯೮. ಯು.ಆರ್.ಅನಂತಮೂರ್ತಿ(ಸಂ), **ವೀರಶೈವ ಧರ್ಮದರ್ಶನ**, ಪು.೧೮೩

೯೯. ಎಂ.ಎಸ್.ಮದಭಾವಿ(ಸಂ), **ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಚರಿತ್ರ ಸಾಹಿತ್ಯ ೨**, ಪು.೨೨೫

೧೦೦. ವಿರೂಪಾಕ್ಷ ಪಂಡಿತನ **ಚೆನ್ನಬಸವ ಪುರಾಣ**, ಪು.೭೪೦, ಪದ್ಯ ೨೪

೧೦೧. ಎಂ.ಎಸ್.ಮದಭಾವಿ(ಸಂ), **ಫ.ಗು.ಹಳಕಟ್ಟಿ, ಸಮಗ್ರ ಸಾಹಿತ್ಯ ಚರಿತ್ರಾ ಸಾಹಿತ್ಯ ೨**, ಪು.೨೨೫

೧೦೨. ಅದೇ, ಪು.೨೨೫

೧೦೩. ಲಲ್ಲೇಶ್ವರಿ ಶಂ.ಮೂಗಿ, **ಬಸವಯುಗದ ಶಿವಶರಣೆಯರು**, ಪು.೨೨

೧೦೪. ಅದೇ ಪು.೨೩

# ಅಧ್ಯಾಯ ನಾಲ್ಕು

# ನೀಲಾಂಬಿಕೆಯ ಇತಿವೃತ್ತ

# ಅಧ್ಯಾಯ ನಾಲ್ಕು

## ನೀಲಾಂಬಿಕೆಯ ಇತಿವೃತ್ತ

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯವಾಗಿ ನಡೆದ ಕ್ರಾಂತಿ ಇಡೀ ಮಾನವನ ಬದುಕಿನಲ್ಲಿ ಹೊಸ ಮೌಲ್ಯ ಪಡೆಯಲು ಕಾರಣವಾಯಿತು. ಇಲ್ಲಿ ನಡೆದಂತಹ ವಿಚಾರ ವಿನಿಮಯ. ಅನುಭವ ಮಂಟಪವಾಗಿ ರೂಪುಗೊಂಡಿತು. ಈ ಮೂಲಕ ತತ್ವವಿಚಾರಗಳನ್ನು ಪರಾಮರ್ಶಿಸಿ ಸರಳತೆಯಿಂದ ಕೂಡಿದ ಸಾಹಿತ್ಯವನ್ನು ಶರಣರು ಸೃಷ್ಟಿಸಿದ್ದನ್ನು ಕಾಣಬಹುದಾಗಿದೆ. ಆರಮನೆಯ ಸಾಹಿತ್ಯ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ಮಾಡಿ ಮತ್ತು ಈ ಮೂಲಕ ಸಮಾಜದಲ್ಲಿ ನಡೆಯುವ ಮೂಢನಂಬಿಕೆ ಕಂದಾಚಾರಗಳನ್ನು ವಚನಸಾಹಿತ್ಯದ ಮೂಲಕ ಖಂಡಿಸಿದರು. ಅಲ್ಲದೆ ಸ್ತ್ರೀಪರವಾದ ಕಾಳಜಿ ಮೂಡುವಂತೆ ಮಾಡಿದರು. ಇಂತಹ ಶಿವಶರಣರು ಸಮಾಜಕ್ಕೆ ಕನ್ನಡಿಯಾದರು. ಹಾಗೆ ಮಹಿಳೆಯರ ಬಗ್ಗೆ ಅಪಾರವಾದ ಕಾಳಜಿ ವಹಿಸಿ ಅವಳು ಪುರುಷನಷ್ಟೇ ಸಮಾನಳು ಎಂದು ಪ್ರತಿಪಾದಿಸಿದರು. ಇಲ್ಲಿ ಲಿಂಗ ಭೇದ, ಜಾತೀಯತೆ, ಇರಬಾರದು ಎಂಬುದನ್ನು ತೋರಿದರು. ಈ ಎಲ್ಲ ಬೆಳವಣಿಗೆಗೆ ನೇತೃತ್ವ ವಹಿಸಿದ್ದ ಬಸವಣ್ಣನವರ ಸಂಸಾರದಲ್ಲಿ ಶರಣ ಚಳುವಳಿ ಯಾವ ರೀತಿ ಪ್ರಭಾವ ಹೊಂದಿತ್ತು ಹಾಗೂ ವಚನ ಚಳುವಳಿಗೆ ಅವರ ಕುಟುಂಬದ ಕೊಡುಗೆ ಏನು ಎನ್ನುವುದು ನಮಗೆ ತಿಳಿದುಬರುವುದು ಬಹಳ ಕಡಿಮೆ.

ಬಸವಣ್ಣನವರ ಪತ್ನಿಯರಲ್ಲಿ ಒಬ್ಬಳಾದ ನೀಲಾಂಬಿಕೆ ಈ ಅಧ್ಯಯನದ ಕೇಂದ್ರ ಬಿಂದು. ಆಕೆಯ ಬಗೆಗೆ ಬಂದಂತಹ ಸಾಹಿತ್ಯ ಚರಿತ್ರೆ ಐತಿಹ್ಯ ಎಲ್ಲವೂ ಅಲ್ಪಮಟ್ಟಿಗೆ ಈಕೆಯ ಜೀವನದ ಬಗ್ಗೆ ತಿಳಿಸುತ್ತವೆ. ಹಾಗೂ ಈಕೆಯೂ ಕೂಡ ರಚನೆ ಮಾಡಿದಂತಹ ಸಾಹಿತ್ಯದಿಂದ ಹಲವಾರು ಮಾಹಿತಿಗಳು ದೊರೆಯುತ್ತವೆ. ಸಮಕಾಲೀನ ವಚನಕಾರರು ಹಾಗೂ ಚರಿತ್ರೆಯ ಅಂಶಗಳು ಸಾಹಿತ್ಯಕ ವಿಚಾರಗಳಿಂದ ಈಕೆಯ ಜೀವನದ ಬಗ್ಗೆ ಅಲ್ಪಮಟ್ಟಿಗೆ ತಿಳಿಯುತ್ತದೆ. ಹಾಗೂ ಅಧ್ಯಯನದ ಅನುಕೂಲತೆಗಾಗಿ ಮೂರು ಹಂತಗಳಾಗಿ ವಿಭಾಗಿಸಿಕೊಂಡು ಅಧ್ಯಯನಕ್ಕೆ

ಒಳಪಡಿಸಲಾಗಿದೆ. ನೀಲಾಂಬಿಕೆಯ ಹುಟ್ಟು, ಬಾಲ್ಯ, ಯೌವ್ವನ, ದಾಂಪತ್ಯ, ಜೀವನ, ಮಹಾಮನೆಯ ಕಾರ್ಯ ಹಾಗೂ ಕಲ್ಯಾಣಕ್ರಾಂತಿ, ಐಕ್ಯ ಮತ್ತು ಐಕ್ಯದ ನಂತರ ಈಕೆಯ ಬಗ್ಗೆ ಜನರ ನಂಬಿಕೆ ಮುಂತಾದವುಗಳನ್ನು ಕುರಿತು ಮೌಖಿಕ, ಸಾಹಿತ್ಯಕ ಆಕರಗಳನ್ನು ಕ್ರೋಢೀಕರಿಸಲಾಗಿದೆ.

## ಅ. ಹುಟ್ಟಿನಿಂದ ಬಸವಣ್ಣನ ಬಾಳಿನಲ್ಲಿ ಬರುವರೆಗೆ

ನೀಲಾಂಬಿಕೆಯ ಕುರಿತಾಗಿ ಜನನ, ಜನ್ಮಸ್ಥಳ, ತಂದೆ, ತಾಯಿ, ಬಾಲ್ಯ, ಯೌವ್ವನ ಹಾಗೂ ಈಕೆಯ ಮದುವೆಯ ಕುರಿತು ಮೌಖಿಕ, ಸಾಹಿತ್ಯಿಕ, ಚರಿತ್ರೆಯ ಚರ್ಚೆಗಳನ್ನು ಕ್ರೋಢೀಕರಿಸಲಾಗಿದೆ.

"ನೀಲಾಂಬಿಕೆಯ ತಂದೆ ಸಿದ್ಧರಸ ತಾಯಿ ಪದ್ಮಗಂಧಿ ಈಕೆಯ ಜನನ ಮಂಗಳವೇಡೆಯಲ್ಲಿ ಆಗಿರಬಹುದು"[೧] ಎಂದು ಶಿವಲಿಂಗಮ್ಮ ಕಟ್ಟಿ ಅಭಿಪ್ರಾಯಪಡುತ್ತಾರೆ. ಮುಂದುವರೆದು "ಈಕೆಯ ತಂದೆಯ ಸ್ವಂತ ಗ್ರಾಮ ಇಂಗಳೇಶ್ವರವಾಗಿದೆ. ಇಲ್ಲಿಂದ ಮಂಗಳವೇಡೆಯಲ್ಲಿ ನೆಲಸಿದ್ದರಿಂದ ಈಕೆ ಮಂಗಳವೇಡೆಯಲ್ಲಿಯೇ ಜನಿಸಿರಬೇಕು"[೨] ಎಂದು ಅಭಿಪ್ರಾಯಪಟ್ಟರು. ಈ ಮೇಲಿನ ಅಭಿಪ್ರಾಯವನ್ನೇ ಹೆಚ್.ಆರ್.ಗುಂಜಾಳ, ನೀಲಗಂಗಾ ಚರಂತಿಮಠ, ಡಾ.ತೋಂಟದ ಸಿದ್ಧಲಿಂಗ ಸ್ವಾಮಿಗಳು, ಎಚ್.ಎಸ್.ಪಾಟೀಲ್, ಡಾ.ಕೆ.ಬಿ.ಬ್ಯಾಳಿ ಮುಂತಾದವರು ತಿಳಿಸಿದರು.

ಡಾ.ಎಂ.ಎಂ.ಕಲಬುರ್ಗಿಯವರು ಈಕೆಯ ಹೆಸರನ್ನು ಕುರಿತು ಹಾಗೂ ಇತರ ಮಾಹಿತಿ ಕುರಿತು ಹೀಗೆಅಭಿಪ್ರಾಯಪಡುತ್ತಾರೆ. 'ನೀಲಲೋಚನೆಯನ್ನು ಹರಿಹರ ಮಾಯಿದೇವಿಯೆಂದು ಕರೆದರೆ, ಜನಪದರು ನೀಲಮ್ಮನೆಂದು, ಬಸವಣ್ಣ ನೀಲಲೋಚನೆ ಎಂದು ಕರೆದದ್ದು, ಮೊದಲು ಮಾಯಿದೇವಿ ಇದ್ದಿರಬೇಕು. ನಂತರದಲ್ಲಿ ನೀಲಲೋಚನೆ, ನೀಲಾಂಬಿಕೆಯಾಗಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಈಕೆಯ ತಂದೆ ತಾಯಿ ಸಿದ್ಧರಸ ಪದ್ಮಗಂಧಿ ಜನ್ಮಸ್ಥಳ ಕಲ್ಯಾಣವಾಗಿರಬೇಕು ಹಾಗೆ ಈಕೆಯ ವಿವಾಹ ಕಲ್ಯಾಣದಲ್ಲಿ ನಡೆದಿರಬೇಕು ಎಂದು ತಿಳಿಸಿದರು."[೩] ಹಾಗೂ ಎಸ್.ಶಿವಣ್ಣನವರು "ನೀಲಾಂಬಿಕೆಯು ವಚನಕಾರ್ತಿ ಎಂದು ಹೇಳುತ್ತಾ ಈಕೆಯ ಸ್ವರ ವಚನಗಳನ್ನು ಕಾಣಬಹುದು ಎಂದು ತಿಳಿಸಿದರು."[೪] ಚಿತ್ರದುರ್ಗದ ಮುರಾಘ ಶರಣರು" ಈಕೆಯು ಬಸವಕಲ್ಯಾಣದಲ್ಲಿ ಜನಿಸಿದರೋ ಅಥವಾ ಮಂಗಳವೇಡಿಯಲ್ಲಿಯೋ ಎಂಬುದು ನಿರ್ದಿಷ್ಟವಾಗಿ ಹೇಳಲಿಕ್ಕೆ ಬರೋದಿಲ್ಲ. ಆದರೆ ಈಕೆಯ ವಿವಾಹ ಕಲ್ಯಾಣದಲ್ಲಿಯೇ ಜರುಗಿರಬಹುದು"[೫] ಎಂದು ಅಭಿಪ್ರಾಯಪಟ್ಟರು. ಮದುವೆಯು ಬಸವಣ್ಣನೊಂದಿಗೆ ಕಲ್ಯಾಣದಲ್ಲಿಯೇ ಜರುಗಿತು. ಯಾಕೆಂದರೆ ಬಿಜ್ಜಳನ ಸಾಕು ತಂಗಿಯಾದ್ದರಿಂದ ಈಕೆಯ ಮದುವೆಯನ್ನು ಬಿಜ್ಜಳ ಕಲ್ಯಾಣದಲ್ಲಿಯೇ ಮಾಡಿರಬೇಕು ಎಂದು ಹೇಳಿದರು. ಹಾಗೆ ಮಂಠಾಳದ ಗುಹೇಶ್ವರ ಸ್ವಾಮಿಜಿ, ಮಲ್ಲಮ್ಮ ತಾಯಿ ಮುಂತಾದವರು ಇದೆ ಮಾಹಿತಿಯನ್ನು ತಿಳಿಸಿದರು.

ಬಿಜಾಪುರ ಜಿಲ್ಲೆ ಇಂಗಳೇಶ್ವರ ಕ್ಷೇತ್ರಕಾರ್ಯದಲ್ಲಿ ಈಕೆ ತಂದೆ ಸಿದ್ದರಸ ತಾಯಿ ಪದ್ಮಸಂಧಿ ಈಕೆಯ ತಂದೆಯ ಜನ್ಮಸ್ಥಳ ಇಂಗಳೇಶ್ವರವಾಗಿದೆ. ಈಗಲೂ ನಾವು ಇವರ ವಂಶಸ್ಥರನ್ನು ಕಾಣುತ್ತೇವೆ. ಇವರಿಗೆ ಕುಲಕರ್ಣಿಯವರು ಎಂದು ಕರೆಯುತ್ತಾರೆ ಎಂದು ಹೇಳುತ್ತಾ ಚೆನ್ನಬಸವ ಸ್ವಾಮಿಗಳು ಈ ಕೆಳಗಿನ ವಂಶಾವಳಿಯನ್ನು ತಿಳಿಸಿದರು.

ಶಿವರಾಯಪ್ಪ

ವಾಸುದೇವ

ಬಲದೇವ (ಇವರು ಮಂಗಳವೇಡೆಗೆ ಹೋದರು)

ನೀಲಕಂಠ

ಶಿವರಾಮ (ಸಿದ್ಧರಾಮ ಅಥವಾ ಸಿದ್ಧರಸ) (ಇವರು ಮಂಗಳವೇಡೆಗೆ ಹೋದರು)

ನೀಲಕಂಠ

ಶಿವರಾಯ

ಚೆನ್ನಬಸವಣ್ಣ

ಈ ವಂಶಾವಳಿಯನ್ನು ವಿವರಿಸುತ್ತಾ ಬಲದೇವ, ಶಿವರಾಯ ಅಥವಾ ಸಿದ್ಧರಸ ಸಹೋದರರು. ಇವರ ತಂಗಿಯೇ ಮಾದಲಾಂಬಿಕೆ, ಈಕೆಯ ಮಗನೆ ಬಸವಣ್ಣ ಎಂದರು. ಆದರೆ ಇವರಿಬ್ಬರು ಮಂಗಳವೇಡಿಗೆ ಹೋಗಿದ್ದು ತಿಳಿದುಬರುತ್ತದೆ. ಹಾಗೆ ಸ್ಥಳೀಯ ಮಾಹಿತಿ ಬಹಳ ಮುಖ್ಯ. ಯಾಕೆಂದರೆ ಕವಿಗಳ ಕಲ್ಪಿತತೆಯನ್ನು ಕಾಣುತ್ತೇವೆ ಎಂದು ತಿಳಿಸಿದರು. ಹಾಗೆ ಸಿದ್ಧರಸ ವಂಶಸ್ಥರು ಎನ್ನಲಾದ ಅಲ್ಲಿಯ ಕುಲಕರ್ಣಿಯವರನ್ನು ಸಂಪರ್ಕಿಸಿದಾಗ, ಅವರು ಗಂಗಾಂಬಿಕೆ, ನೀಲಾಂಬಿಕೆಯರು ತಮ್ಮ ವಂಶದವರೇ, ಸ್ವಾಮಿಗಳಿಗೆ ನಾವೇ ವಂಶಾವಳಿಯನ್ನು ನೀಡಿದ್ದು ಎಂದಾಗ ನೀವು ನೀಡಿದ ವಂಶಾವಳಿಯಲ್ಲಿ ನೀಲಾಂಬಿಕೆಯ ತಂದೆಯ ಹೆಸರು ಇದೆ. ತಾಯಿಯ ಹೆಸರು ಇಲ್ಲ. ಎಂದಾಗ ನಮ್ಮ ಸಂಪ್ರದಾಯದಲ್ಲಿ ಮಹಿಳೆಯ ಹೆಸರನ್ನು ನಮೂದಿಸುವುದಿಲ್ಲ. ಈಕೆಯ ಜನ್ಮದ ಬಗ್ಗೆ ಹಾಗೂ ಬಾಲ್ಯ ಪ್ರೌಢಾವಸ್ಥೆಯ ಹಾಗೂ ವಿವಾಹದ ಬಗ್ಗೆ ಕೇಳಿದಾಗ ನಮಗೆ ಅವರ ಪೂರ್ವಪರ ವಿಚಾರ ಕಡಿಮೆ ಎಂದರು. ಆದರೆ ಚೆನ್ನಬಸವ ಸ್ವಾಮಿಜಿ ನೀಲಾಂಬಿಕೆಯ ಜನನದ ಬಗ್ಗೆ ಮೌನವಹಿಸಿ ಈಕೆಯ ವಿವಾಹವು ಮಂಗಳವೇಡೆಯಲ್ಲಿಯೇ ಜರುಗಿರಬೇಕು ಎಂದು ಹೇಳುತ್ತಾ ಇಂಗಳೇಶ್ವರದಿಂದ ಮಂಗಳವೇಡೆ ಬಹಳ ಹತ್ತಿರ ಮೇಲಾಗಿ ಬಸವಣ್ಣ ಮೊದಲು ಹೋಗಿದ್ದು, ಅವರ ಸೋದರ ಮಾವಂದಿರು ಇದ್ದ ಮಂಗಳವೇಡೆಗೆ ಎಂದು ತಿಳಿಸುತ್ತಾ ಸಿದ್ಧರಸ ಬಿಜ್ಜಳರಾಜನ ಮಂತ್ರಿಯಾಗಿದ್ದ ಹಾಗೆ ನೀಲಾಂಬಿಕೆಯ ವಿವಾಹವನ್ನು ಬಂಧುಗಳನ್ನು ಕರೆಸಿ ಮಂಗಳವೇಡೆಯಲ್ಲಿ ಮಾಡಿದ್ದಾನೆ

ಎಂದು ತಿಳಿಸಿದರು. ಜೊತೆಗೆ ಬಸವಣ್ಣನ ಜೀವನಕ್ಕೆ ಬೇಕಾದ ಸೌಕರ್ಯ ಮಾಡಿ ನಂತರ ಬಿಜ್ಜಳನಲ್ಲಿ ಮಂತ್ರಿ ಅಥವಾ ಕರುಣಿಕ ಪದವಿ ಕೊಡಿಸಿರಬೇಕು ಎಂದು ವಿವರಿಸಿದರು.

ನೀಲಾಂಬಿಕೆಯ ಜನನ, ಜನ್ಮಸ್ಥಳ, ಬಾಲ್ಯ, ಪ್ರೌಢಾವಸ್ಥೆಯ ಕುರಿತು ಬಸವನ ಬಾಗೇವಾಡಿ, ಸೊಲ್ಲಾಪುರ, ತಂಗಡಗಿ, ಕೂಡಲಸಂಗಮ ಹಾಗೂ ಈ ಸುತ್ತಲಿನ ಪರಿಸರದಲ್ಲಿ ಮಾಹಿತಿ ಸಿಗುವುದಿಲ್ಲ. ಆದರೆ ಈಕೆ ಬಸವನ ಸತಿ ಎಂಬುದು ಹಾಗು ತಂದೆ ಸಿದ್ಧರಸ ತಾಯಿ ಪದ್ಮಗಂಧಿ ಹಾಗೂ ಈಕೆ ವಚನಕಾರ್ತಿ ಎಂಬುದು ಜನರ ಮನೋಭಾವನೆ ಯಾಗಿದೆ. ಹಾಗೆ ಈಕೆಯನ್ನು ಕುರಿತು ಜನಪದರು ಹೀಗೆ ಹೇಳುತ್ತಾರೆ.

"ಸಂಗಮನೆ ನೀ, ಗತಿ ಎಂದ ಬಸವನಿಗೆ
ತಂಗಿ ನೀಲಾಳ ಕೊಡುವೆ। ತಂಗಿ
ಮದುವೆಯ ನಡೆದಾದೋ......"

ಎಂದು ಕೂಡಲ ಸಂಗಮ ಹತ್ತಿರದ ಬೆಳಗಲ್ಲ ವೀರಮ್ಮ, ಈ ರೀತಿ ಹಾಡಿದರು. ಆದರೆ ಈ ಊರಲ್ಲಿ ಈಕೆಯನ್ನು ಕುರಿತು ಬಹಳಷ್ಟು ಜನಪದಗಳಲ್ಲಿ, ಸೋಬಾನ ಪದ, ಗರತಿಪದ ಹಾಗು ತಂಗಡಗಿ ಇವಳ ತವರ ಮನೆ, ಗಂಡನ ಮನೆ ಕೂಡಲಸಂಗಮ ಎಂಬುವ ರೀತಿಯಲ್ಲಿ ಗೌರಿಹುಣ್ಣಿಮೆ, ಸೀಗೆಹುಣ್ಣಿಮೆಯಲ್ಲಿ ಮಹಿಳೆಯರು ಹಾಡುತ್ತಾರೆ. ಆದರೆ ಇವರ ಹಾಡಿನಲ್ಲಿ ಬಾಲ್ಯ, ಜನನ, ತಂದೆತಾಯಿ ಬರುವುದಿಲ್ಲ, ಮದುವೆ ಪ್ರಸಂಗ, ಬದುಕಿನ ಪ್ರಸಂಗಗಳು ಬರುತ್ತವೆ.

ಗೊರವರ ಕೆಂಚಮಲ್ಲಯ್ಯ ಹಾಡಿರುವ ಕಲ್ಯಾಣದೊಳಗೊಂದು ಪಂಚಾಯತಿ ಎಂಬ ಪುಸ್ತಕದಲ್ಲಿ

"ಬಿಜ್ಜಳ್ಳ ರಾಜಾನ ಹೆಣು ಮಗಳು ಗುರುವೆ
ಶಕ್ತಿ ವಂತೇಯು ನೀಲಮ್ಮ ತಾಯಿ
ಬಶುವಣ್ಣನವರೀಗೆ ತಕ್ಕಾದ ಈಡು
ಮಾದರಸುನವರು ನೋಡಿದಾರು
ಬಿಜ್ಜಳ್ಳರಾಜನ್ನ ಮಗಳನ್ನ ತಂದು
ಶಕ್ತಿವಂತೆಯ್ಯ ಶರಣೀಯತಂದು
ನನ್ನ ಮಗನೀಗೆ ಕಲ್ಯಾಣಮಾಡಬೇಕು"[೬]

ಈ ಜನಪದದಲ್ಲಿ ನೀಲಮ್ಮನನ್ನು ಬಿಜ್ಜಳನ ಮಗಳು ಶಕ್ತಿವಂತೆ ಎಂದು ತಿಳಿಸುತ್ತಾ ಇಂತವಳು ನಮ್ಮ ಬಸವಣ್ಣನಿಗೆ ತಕ್ಕಾದವಳು ಎಂದು ಮಾದರಸನು ಈಕೆಯನ್ನು ನೋಡಿ

ನನ್ನ ಮಗನಿಗೆ ಕಲ್ಯಾಣ ಮಾಡ್ತಿನಿ ಎಂದು ಉಲ್ಲೇಖಿಸುತ್ತದೆ. ಮುಂದುವರೆದು ಮಾದರಸರು ಮಾತನಾಡಿದ್ದು ಕೇಳಿ ಬಿಜ್ಜಳ ಆಗಲಿ ನಿಮ್ಮ ಮಗನಿಗೆ ಮಗಳನ್ನು ಕೊಡುತ್ತೇವೆ. ಕಲ್ಯಾಣದಲ್ಲಿ ಮದುವೆ ಮಾಡಿಕೊಡುತ್ತೇವೆ ಎಂದು ಮದುವೆ ಸಿದ್ಧತೆ ವಿವರವಿದೆ. ನಂತರ ನೀಲಮ್ಮಳಿಗೆ ಬಸವಣ್ಣನವರಿಗೆ ವಿವಿಧ ರೀತಿಯಿಂದ ಅಲಂಕರಿಸಿ ವಿವಾಹ ಮಂಟಪಕ್ಕೆ ಕರೆದುಕೊಂಡು ಬರುವುದು ಹಾಗೂ ವಿಧವಿಧ ರೀತಿಯಲ್ಲಿ ಪೂಜಿಸಿ

“ಶಕ್ತಿವಂತೆಯು ನೀಲಮ್ಮನವರೀಗೆ
ಬಸುವಣ್ಣನವರು ನಿಂತೀಗ
ಕೊರಳಿಗೆ ಮಾಂಗಲ್ಲಿ ಕಟ್ಟಾರೊ ಶಂಕರಾ”[೭]

ಈ ಹಾಡಿನಲ್ಲಿ ಬಸವಣ್ಣ ನೀಲಮ್ಮರ ವಿವಾಹವಾಯಿತು ಎಂದು ತಿಳಿದುಬರುತ್ತದೆ. ಹಾಗೆ ಮಾದರಸರು ಕಲ್ಯಾಣಕ್ಕೆ ಬಂದು ನೀಲಮ್ಮನನ್ನು ನೋಡಿ, ಈಕೆ ನನ್ನ ಮಗನಿಗೆ ತಕ್ಕವಳಾದ ಗುಣವತಿಯಾಗಿದ್ದಾಳೆ ಎಂಬುದನ್ನು ಕಾಣಬಹುದು. ಹಾಗಾಗಿ ಈಕೆಯನ್ನು “ಬಂಗಾರ್ದ ಬಸವನ ಹೆಂಡತಿ ನೀಲಮ್ಮ”[೮]ನೆಂದು ಕರೆದಿದ್ದಾರೆ. ರಮೇಶ ಲಿಂಗದಳ್ಳಿಯವರು ಸಂಪಾದಿಸಿರುವ ಜೋಗುಳ ಹಾಡಿನಲ್ಲಿ ನೀಲಮ್ಮನ ಬಗ್ಗೆ ಹೀಗೆ ಬರುತ್ತದೆ.

“ವಾಡೆಯಲಿ ಆಡಿ ಬಂದವಳ
ಅರಸೊತ್ತಿಗೆಯೊಳು ಮಿಂದುಬಂದವಳ
ಬಿಜ್ಜಳರಸನ ತಂಗಿಯಾಗಿ ನಿಂದವಳ
ನಿಜಯೋಗಿ ಮಲಗಿಸಿ ಒಮ್ಮನದಿ ತೂಗುವೆ
ಜೋ ಜೋ ಜೋ ಜೋ
ಅಪ್ಪ ಸಿದ್ಧರಸರ ಕೃಪೆಯಿಂದ
ಅವ್ವ ಪದ್ಮಮ್ಮನ ಸುಗರ್ಭದಿಂದ
ಶಿವಶರಣೆಯರು ಮಂತ್ರ ಹೇಳಿಂದ
ಲಿಂಗನಿಷ್ಠೆಯ ಮಲಗಿಸಿ.........”[೯]

ಈ ಜನಪದದಲ್ಲಿ ನೀಲಾಂಬಿಕೆಯು ಎಲ್ಲಿ ಬೆಳೆದಿದ್ದಾಳೆ ಹಾಗೂ ಈಕೆ ಬಿಜ್ಜಳನ ತಂಗಿಯೆಂದು ಹಾಗೆ ಈಕೆಯ ತಂದೆ ಸಿದ್ಧರಸ ತಾಯಿ ಪದ್ಮಮ್ಮನೆಂದು ಉಲ್ಲೇಖಿಸುತ್ತದೆ. ಆದರೆ ಈ ಹಾಡುಗಳನ್ನು ಗಮನಿಸಿದಾಗ ಈಕೆಯ ಜನನ ಮಂಗಳವೇಡಿಯಲ್ಲಿಯೇ ಆಗಿರುವ ಸಾಧ್ಯತೆ ಇದೆ.

ನೀಲಾಂಬಿಕೆ ವಿವಾಹವನ್ನು ಕುರಿತಾಗಿ ಈ ಜನಪದದಲ್ಲಿ ಹೀಗೆ ಉಲ್ಲೇಖವಾಗುತ್ತದೆ.

"ತಂಗಿಯೇ ನೀಲಮ್ಮಗಂಗಾನ ಮದುವಾಯ್ತು
ರಂಗೀನ ಪತಿಯ ತರುವೇನು। ಅರಮನೆಯ
ಅಂಗಳದಿ ಹಂದರ ಹಾಕುವೆ
ಅಕ್ಕನ ಸಂಪತ್ತು ಅಕ್ಕಗೆ ಮೀಸಲು
ಯುಕ್ಕಣ್ಣ ಬಸವ ಪತಿಯಾದ। ಧರ್ಮಕೆ
ತಕ್ಕ ಸತಿಯಾಗಿ ಬಾಳುವೆ"[೧೦]

ಇಲ್ಲಿ ನೀಲಾಂಬಿಕೆಗೆ ಅಣ್ಣನಾದ ಬಿಜ್ಜಳನು ಗಂಗಾನ ಮದುವೆಯಾಗಿದೆ, ನಿನಗ ಸುಂದರವಾದ ಪತಿಯನ್ನು ತಂದು ಅರಮನೆಯ ಅಂಗಳದಲ್ಲಿ ಹಂದರ ಹಾಕುವೆ ಮತ್ತು ವೈಭವದಿಂದ ಮದುವೆಯನ್ನು ಮಾಡುವೆ ಎಂದಾಗ ಇಲ್ಲಿ ಬಸವಣ್ಣನನ್ನು ಬಿಟ್ಟರೆ, ಬೇರೆಯಾರು ನನಗೆ ಬೇಕಿಲ್ಲ ಎಂದಾಗ ಬಿಜ್ಜಳ ಗಂಗಾಂಬಿಕೆಯಲ್ಲಿ ಬೇಡಿಕೊಂಡು ವಿವಾಹಕ್ಕೆ ಅಣಿಮಾಡಿದ ಸಂದರ್ಭದಲ್ಲಿ ನೀಲಮ್ಮ ಅಕ್ಕನ ಸಂಪತ್ತು ಬೇಡ ಶಿವನ ರೂಪವೇ ಆದ ಬಸವನಿಗೆ ತಕ್ಕ ಸತಿಯಾಗಿ ಬಾಳುವೆ ಎಂದು ಹೇಳುತ್ತಾಳೆ. ಈ ಜನಪದದಲ್ಲಿ ನೀಲಮ್ಮ ನಾನು ಬಸವನಿಂದ ಸುಖ, ಶಾಂತಿ, ನೆಮ್ಮದಿ ಕೊಡುವಂತ ಆಧ್ಯಾತ್ಮದ ಜ್ಞಾನ ಪಡೆಯುವ ಹಂಬಲವೇ ಹೊರತು, ಲೌಕಿಕ ಜೀವನ ಆಸೆ ನನಗೆ ಇಲ್ಲ. ಅದು ಅಕ್ಕ ಗಂಗಾಂಬಿಕೆಗೆ ಇರಲಿ. ನಾನು ವಿಚಾರಪತ್ನಿಯಾಗಿ ಬದುಕುತ್ತೇನೆ. ಹಾಗೂ ಧರ್ಮದಿಂದ ನಡೆಯುವ ಸತಿಯಾಗಿ ಬಾಳುವೆ ಎಂದಿರಬಹುದು. ಹಾಗೆ ಶ್ರೀ ಬಸವೇಶ್ವರ ಲಾವಣಿ ಪದದಲ್ಲಿ ನೀಲಾಂಬಿಕೆಯ ತಂದೆಯ ಕುರಿತು ಹಾಗೂ ಈಕೆಯ ವಿವಾಹದ ಕುರಿತು

"ಸಿದ್ಧರಸನ ಪುತ್ರಿ ನೀಲಾಂಬಿಕೆಯನು । ಶ್ರದ್ಧೆಯಿಂದ ಪತಿ ಬಸವೇಶಗ
ಸಿದ್ಧಳಾಗಿ ಮರುಮದುವೆ ಮಾಡಿ ಗಂಗಾ । ಇದ್ದವರು ಅಕ್ಕತಂಗಿ ಹಂಗ"[೧೧]

ಈ ಲಾವಣಿ ಪದವು ನೀಲಾಂಬಿಕೆಯನ್ನು ಬಸವಣ್ಣ ವಿವಾಹವಾಗಿದ್ದು, ಮಾತ್ರವಲ್ಲದೆ ಮರುಮದುವೆ ಎಂದು ಹೇಳುವಂತ ಸಂದರ್ಭ ಬಸವಣ್ಣ ಗಂಗಾಂಬಿಕೆಯೊಂದಿಗೆ ವಿವಾಹವಾಗಿತ್ತು ಎಂಬುದು ತಿಳಿಸಿ ಅಕ್ಕತಂಗಿಯಾಗಿ ಬದುಕಿದರು ಎಂಬುದನ್ನು ಗಮನಿಸಿದಾಗ ಈಕೆಯೇ ಬಸವಣ್ಣನನ್ನು ಅಚಲವಾಗಿ ಪ್ರೀತಿಸಿ ಮದುವೆಯಾಗಿರಬಹುದೆಂದು ತಿಳಿಯುವ ಸಾಧ್ಯತೆ ಇದೆ.

ಕರಪಾಲ ಬಸವ ಪುರಾಣದಲ್ಲಿ ನಿರೂಪಕನ ಮೂಲಕ "ಹೀಗೆ ಬಸವಣ್ಣನವರು ಪರಸ್ತ್ರೀಯರನ್ನು ತನ್ನ ತಾಯಿಯಂತೆಯೂ ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ ಕಾಣುತ್ತೇನೆ. ಇದೇ ನನ್ನ ಸತ್ಯ ಇದೇ ನನ್ನ ಭಾಷ ಎಂದು ಆಣೆ ಮಾಡಿದ್ದಾರೆ."[೧೨] ಈ

ಪುರಾಣದಲ್ಲಿ ಬಸವಣ್ಣನು ಪರಸ್ತ್ರೀಯನ್ನು ತಾಯಿಯಂತೆ, ಪರದ್ರವ್ಯ ನನಗೆ ಭೂಮಿ ತಾಯಿಯಂತೆ ಅಂದರೆ ಮಣ್ಣಿನ ಹೆಂಟೆಯಂತೆ ಕಾಣುತ್ತೇನೆ. ಇದು ನನ್ನ ಭಾಷೆಯಾಗಿದೆ ಎಂದು ಹೇಳುವ ಬಸವಣ್ಣನು ನೀಲಾಂಬಿಕೆಯನ್ನು ಮದುವೆಯಾದದ್ದು ಏಕೆ? ಈತನಿಗೆ ಬಿಜ್ಜಳನ ಒತ್ತಾಯವೆ? ಅಥವಾ ಮಾವಂದಿರ ಒತ್ತಾಯವೆ? ಅಥವಾ ನೀಲಾಂಬಿಕೆಯಲ್ಲಿ ಪ್ರೀತಿ ಅಂಕುರವೇ? ಇಲ್ಲ ಗಂಗಾಂಬಿಕೆ ಸಂಪ್ರದಾಯಸ್ಥಳು ಹಾಗಾಗಿ ವಿಚಾರಶೀಲಳಾದ ನೀಲಾಂಬಿಕೆಯನ್ನು ವಿವಾಹ ವಾಗಿರುವ ಸಾಧ್ಯತೆ ಇದೆ. ನೀಲಾಂಬಿಕೆಯ ವಿವಾಹದ ಕುರಿತು ನಿರೂಪಕ "ಅಯ್ಯಾ ಮಗು ಕೇಳುವಂತನಾಗು, ಸಿದ್ಧರಸನ ಮಗಳಾದ ನೀಲಾಂಬಿಕಾದೇವಿಯನ್ನು ಬಿಜ್ಜಳಮಹಾರಾಜನು ಸಾಕುಮಗಳಾಗಿ ಸಾಕಿಕೊಂಡಿರಲು ಈ ನೀಲಾಂಬಿಕಾದೇವಿಗೆ ಅನುರೂಪನಾದ ವರನು ಬಸವಣ್ಣನವರೇ ಸರಿ ಎಂದು ನಿರ್ಧರಿಸಿ ನೀಲಾಂಬಿಕಾ ದೇವಿಗೂ ಸಹ ವಿವಾಹವನ್ನು ನಡೆಸಿದ್ದಾರೆ. ಇತ್ತಕಡೆ ದಂಪತಿಗಳಿಗೆ ಮುತ್ತೈದೆಯರು ಆರತಿ ಬೆಳಗಿದ್ದಾರೆ."[೧೩] ಈ ಉಲ್ಲೇಖದಂತೆ ನೀಲಾಂಬಿಕೆಯನ್ನು ಬಿಜ್ಜಳನು ಸಾಕಿದ್ದುದಲ್ಲದೆ, ಬುದ್ಧಿವಂತನು ಆದ ಬಸವಣ್ಣನು ಈಕೆಗೆ ತಕ್ಕ ವರನೆಂದು ವಿವಾಹ ಮಾಡಿದನು ಹಾಗೂ ಸುಮಂಗಲೆಯರು ಈ ದಂಪತಿಗಳಿಗೆ ಆರತಿ ಬೆಳಗಿದ್ದು ಮತ್ತು ಹಾರೈಸಿದ್ದು ಕಾಣುತ್ತೇವೆ.

ನೀಲಾಂಬಿಕೆಯ ಮದುವೆಯು ಯೋಗ್ಯ ವರನಾದ ಬಸವಣ್ಣನೊಂದಿಗೆ ನಡೆಯಿತು ಎಂದು ಕರಪಾಲ ಬಸವ ಪುರಾಣ ತಿಳಿಸಿದರೆ, ನೀಲಮ್ಮನ ವಿವಾಹ ಕುರಿತು ಜನಪದ ಬಸವ ಪುರಾಣದಲ್ಲಿ ಪ್ರಸ್ತಾಪ ಬರದೆ ಆಕೆಯ ದಾಂಪತ್ಯದ ಬದುಕನ್ನು ಹಾಗೂ ಮಹಾಮನೆಯ ಕಾರ್ಯವನ್ನು ಕಾಣುತ್ತೇವೆ. ನೀಲಮ್ಮ ಉರುಟಣೆ ಹಾಡು ಇಲ್ಲಿ ಈಕೆಯ ವಿವಾಹವನ್ನು ಆಧ್ಯಾತ್ಮಕ್ಕೆ ಹೋಲಿಸಿದಂತೆ ತೋರುತ್ತದೆ. ಹಾಗೂ ವೀರಶೈವ ಪದ್ಧತಿಯಂತೆ ವಿವಾಹದ ಉಲ್ಲೇಖ ಒಳಗೊಂಡಿದೆ.

"ಬಿಡದೆ ಲಿಂಗಾಂಗ ಸಂಗನ ಬಲ್ಲವರಾಲಿಸಿ
ಕಡುಮುದ್ದು ಬಸವ ನೀಲಮ್ಮನುರುಟಣೆಯ
ಆರು ಚಕ್ರದ ಪೀಠ ಏರಿ ಬಸವನಿರಲು
ನಾರಿಯರು ತಂದು ನೀರೆರೆದಾಕ್ಷಣೆ"[೧೪]

ಈ ಹಾಡಿನಲ್ಲಿ ಬಸವಣ್ಣ ನೀಲಮ್ಮರ ಮದುವೆ ಸಂದರ್ಭವನ್ನು ನೋಡಬಹುದು. ಹಾಗೆ ಆಧ್ಯಾತ್ಮದ ಮೂಲಕ ಆ ಚಕ್ರದ ಪೀಠದ ಮೇಲೆ ಕುಳ್ಳಿರಿಸಿ ನೀರನ್ನು ಹಾಕುವ ಸಂದರ್ಭ ಹಾಗೆ ವಿಭೂತಿ, ಗಂಧ, ರುದ್ರಾಕ್ಷಿ, ಪಂಚಾಕ್ಷರಿ ಮಂತ್ರದಿಂದ, ಲಿಂಗಪೂಜೆಗೈಯ್ದು,

ಪಾದೋದಕ ತೆಗೆದುಕೊಂಡು, ವಿವಾಹ ಮಂಟಪಕ್ಕೆ ಬರುವುದು. ಅಲ್ಲಿ ವಿಧಿ ವಿಧಾನಗಳ ಮೂಲಕ ಪೂಜಿಸಿ ಮಾಂಗಲ್ಯ ಧರಿಸುವುದು.

"ಸದ್ ಭಾವವೆಂದೆಂಬ ಹಸ್ತದಾಬಳೆಯನಿಟ್ಟು
ಏಕೋ ಭಾವದ ನಿಷ್ಠೆ ತಾಳೆಯ ಧರಿಸಿ"

ಈ ಪದ್ಯದ ಸಾಲು ಸದ್‌ಭಾವವೆಂಬ, ಬಳೆಯನ್ನು ಧರಿಸಿ ಏಕ ನಿಷ್ಠೆಯಿಂದ ಮಾಂಗಲ್ಯ ಧರಿಸಿದರು ನೀಲಮ್ಮನಿಗೆ ಎಂದು ಉಲ್ಲೇಖಿಸುತ್ತದೆ. ಆದರೆ ಈ ಹಾಡು ಸಂಪ್ರದಾಯದಿಂದ ಕೂಡಿದ ಧಾರ್ಮಿಕ ವಿಧಿವಿಧಾನಗಳ ಮೂಲಕ ಹೇಳಿದ್ದಾಗಿದೆ. ಈ ಎಲ್ಲಾ ಮೌಖಿಕ ಆಕರಗಳಿಂದ ನೀಲಾಂಬಿಕೆಯ ಜನನ, ಜನ್ಮಸ್ಥಳ, ತಂದೆ, ತಾಯಿ, ವಿವಾಹ ಕುರಿತು, ಹೇಳುವುದಾದರೆ ಜನನ ಈಕೆ ಮಂಗಳವೇಡದಲ್ಲಿ ಜನಿಸಿದ್ದಾಳೆ. ಸಿದ್ಧರಸ ಪದ್ಮಗಂಧಿ, ತಂದೆತಾಯಿ ಈಕೆಯ ವಿವಾಹ ಬಸವಣ್ಣನೊಂದಿಗೆ ಕಲ್ಯಾಣದಲ್ಲಿ ನಡೆದಿದೆ ಎಂದು ಊಹಿಸಬಹುದು.

ನೀಲಾಂಬಿಕೆಯು ಬಸವಣ್ಣನವರ ಲೌಕಿಕ ಮತ್ತು ಪಾರಮಾರ್ಥಿಕ ಜೀವನದಲ್ಲಿ ಧರ್ಮ ಪತ್ನಿಯಾಗಿ, ತನ್ನದೇಯಾದ ಆದರ್ಶಮಯವಾದ ಪ್ರಖರತೆಯಿಂದ ಚರಿತ್ರೆಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಈಕೆಯ ಬಗ್ಗೆ ಎಸ್.ಎಸ್.ಭೂಸರಡ್ಡಿ ಅಭಿಪ್ರಾಯ; "ನೀಲಾ, ನೀಲಾಂಬೆ, ನೀಲಾಂಬಿಕೆ, ನೀಲಲೋಚನೆ, ನೀಲಲೋಚನೆಯಮ್ಮ, ನೀಲಮ್ಮ ತಾಯಿ, ನೀಲಮ್ಮ ಎಂದು ಮುಂತಾಗಿ ಹೆಸರಾಗಿರುವ ನೀಲಮ್ಮ ಜನಮನದಲ್ಲಿ ಅಚ್ಚೊತ್ತಿ ಮೂಡಿನಿಂತ ಐತಿಹಾಸಿಕ ಮಹಾಶರಣೆ."[೧೬] ಏಕೆಂದರೆ ಬಸವಣ್ಣ ಐತಿಹಾಸಿಕ ವ್ಯಕ್ತಿಯಾಗಿರುವುದರಿಂದ ಜೊತೆಗೆ ಈಕೆಯ ತಂದೆ ಬಿಜ್ಜಳನಲ್ಲಿ ಮಂತ್ರಿಯಾಗಿದ್ದುದರಿಂದ ಈಕೆಯನ್ನು ಚಾರಿತ್ರಿಕವಾಗಿ ನೋಡಬಹುದು. "ಬಲದೇವ ಮತ್ತು ಸಿದ್ದಣ್ಣ ಎಂಬ ಇಬ್ಬರು ಸಹೋದರರಿದ್ದರು. ಇವರು ಚಾಲುಕ್ಯ ರಾಜ್ಯದಲ್ಲಿ ಮಂತ್ರಿಗಳಾಗಿ ಇಲ್ಲವೇ ಸೇನಾದಿಪತಿಗಳಾಗಿ ಉಚ್ಚ ಪದವಿಯಲ್ಲಿದ್ದರು"[೧೭] ಎಂಬುದನ್ನು ಫ.ಗು.ಹಳಕಟ್ಟಿಯವರು ಅಭಿಪ್ರಾಯಪಡುತ್ತಾ, ಯಾವ ರಾಜನ ಹತ್ತಿರ ಇವಳ ತಂದೆ ಮಂತ್ರಿಯಾಗಿದ್ದನು ಎಂಬುದನ್ನು ಮುಂದುವರೆದು ತಿಳಿಸುತ್ತಾರೆ.

"ಬಿಜ್ಜಳನು ಚಕ್ರಾಧಿಪತ್ಯವನ್ನು ವಹಿಸುವ ಪೂರ್ವದಲ್ಲಿ ಅವನ ತಂದೆಯಾದ ಪೆರ್ಮಾಡಿಯು ಮಂಗಳವಾಡದಲ್ಲಿ ರಾಜ್ಯವಾಳುತ್ತಿದ್ದಾಗ ಸಿದ್ಧಣ್ಣ ಮಂತ್ರಿಯು ಅಂದರೆ ಬಸವೇಶ್ವರನ ಸೋದರ ಮಾವನು ಅವನಲ್ಲಿ ದಂಡಾಧಿಪತಿಯಾಗಿ ಕೆಲಸ ಮಾಡುತ್ತಿದ್ದನೆಂದು"[೧೮] ತಿಳಿದು ಬರುತ್ತದೆ. ಬಿಜ್ಜಳನ ತಂದೆ ಬಹುಬೇಗನೆ ಸಾವನ್ನಪ್ಪಿದ್ದರಿಂದ ಸಿದ್ಧರಸನೆ ಈತನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದನು. ಹಾಗೂ ಬಿಜ್ಜಳನ ತಾಯಿಯು ತೀರಿದ್ದರಿಂದ ಈತನ ತಮ್ಮನಾದ ಕರ್ಣದೇವನಿಗೆ ತಾಯಿಯಾಗಿ ಸಿದ್ಧರಸನ ಹೆಂಡತಿ ಕೆಲಸ ನಿರ್ವಹಿಸಿದಳು ಎಂದು ತಿಳಿದುಬರುತ್ತದೆ. ಈ

ಸಂದರ್ಭದಲ್ಲಿ ನೀಲಾಂಬಿಕೆಯೂ ಸಹಿತ ಅರಮನೆಯಲ್ಲಿ ಬೆಳೆದಿರಬೇಕು ಎಂದು ಚರಿತ್ರೆಕಾರರು ಅಭಿಪ್ರಾಯಪಡುತ್ತಾರೆ. ಹಾಗೂ ಸಿದ್ಧರಸನು ಬಿಜ್ಜಳನಲ್ಲಿ ಮಂತ್ರಿಯಾಗಿದ್ದನು ಮತ್ತು ಐತಿಹಾಸಿಕ ವ್ಯಕ್ತಿಯೆಂದು ನಿರ್ಧಾರ ಮಾಡಲು ಫ.ಗು.ಹಳಕಟ್ಟಿಯವರು ಬಿಜ್ಜಳನ ಕುರಿತಾದ ಶಾಸನಗಳಲ್ಲಿ ಹಲವಾರು ಅಧಿಕಾರಿಗಳ ಹೆಸರು ದೊರೆಯುತ್ತವೆ. ಅಂತಹ ಶಾಸನಗಳಲ್ಲಿ ಒಂದಾದ ಹಾನಗಲ್ಲು ಶಾಸನ "ದಂಡನಾಯಕ ಸಿದ್ಧಪ್ಪಯ್ಯನು ಹಾನಗಲ್ಲಿನಲ್ಲಿ ಆಳುತ್ತಿದ್ದನು"[೧೯] ಎಂದು ಉಲ್ಲೇಖಿಸಿರುವುದರಿಂದ ಐತಿಹಾಸಿಕ ವ್ಯಕ್ತಿ ಎಂದು ಊಹಿಸಬಹುದಾಗಿದೆ.

ಸಿದ್ಧರಸನ ಕುರಿತು ಕ್ರಿ.ಶ.೧೧೯೬ರ ರಂಜೇರ್ ಶಾಸನ(ಬೀದರ್ ಜಿಲ್ಲೆ)ದಲ್ಲಿ "ರಚಿತೊಲಿನ್ದ್ರ ದ್ರುಮಂ ಪಣ್ತಿದಾ ಸಿದ್ಧರಸನ್ತಾ ಸಿದ್ಧಿಸಿತ್ತೆಂಬವನ ಧನಂದಗ್ರ್ಗ ಶ್ರೀ ತರ್ಗ್ಗಿಪ್ಪ ಶಿಷ್ಯಾರ್ಗ್ಗವಯದ್ಯ..."[೨೦] ಎಂದು ಉಲ್ಲೇಖಿತವಾದ ಸಿದ್ಧರಸ ನೀಲಾಂಬಿಕೆಯ ತಂದೆಯಾಗಿರ ಬಹುದು. ಹಾಗೂ ಈಕೆಯ ಜನನದ ಬಗ್ಗೆ ರಮೇಶ ಪಂ.ಲಿಂಗದಳ್ಳಿಯವರ ಅಭಿಪ್ರಾಯ "ನೀಲಾಂಬಿಕೆಯು ಮಹಾರಾಷ್ಟ್ರ ರಾಜ್ಯದ ಅಂದಿನ ಚಾಲುಕ್ಯರ ರಾಜಧಾನಿಯಾದ ಮಂಗಳವೇಡದಲ್ಲಿ ಜನಿಸಿದಳು. ಸಿದ್ಧಣ್ಣದಂಡ ನಾಯಕ ಪದ್ಮಗಂಧಿ ದಂಪತಿಗಳ ಮಗಳಾಗಿ, ಆನಂದ ನಾಮ ಸಂವತ್ಸರ ವೈಶಾಖ ಮಾಸದ ಅಕ್ಷಯ ತೃತೀಯಾ ರೋಹಿಣಿ ನಕ್ಷತ್ರ ಅಂದರೆ ಕ್ರಿ.ಶ.೧೧೩೪ ಏಪ್ರಿಲ್ ೩೦ನೇ ದಿನಾಂಕದಂದು ಜನಿಸಿದಳು."[೨೧] ಇವರು ನೀಲಾಂಬಿಕೆ ಮಂಗಳವೇಡದಲ್ಲಿ ಹುಟ್ಟಿದಳು ಮತ್ತು ಈಕೆಯ ತಂದೆ ತಾಯಿಗಳ ಕುರಿತು ಅಲ್ಲದೆ ದಿನಾಂಕವನ್ನು ಗುರುತಿಸಿದ್ದಾರೆ. ಆದರೆ ನಿರ್ದಿಷ್ಟವಾಗಿ ಹೇಳಲಿಕ್ಕಾಗದು. ಬಹುಶಃ ಈಕೆಯ ಕಾಲಮಾನ ೧೧೩೦ ರಿಂದ ೧೧೯೬ ಎಂದು ಊಹಿಸಬಹುದು. ಹಾಗೂ ಸಂಶೋಧಕಿ ಎ.ಗಾಯಿತ್ರಿ ಹೇಳುವಂತೆ "ಈಕೆಯು ಬಸವಣ್ಣನವರ ಜೀವನ ಸಂಗಾತಿಯಾಗಿರುವುದರಿಂದ ಈಕೆಯ ಕಾಲವನ್ನು ಬಸವಣ್ಣನವರ ಕಾಲವೆಂದೇ ಅಂದರೆ ಕ್ರಿ.ಶ.೧೧೬೦ ಎಂದು ಗುರುತಿಸಲಾಗಿದೆ."[೨೨] ಎಂದು ಅಭಿಪ್ರಾಯಪಡುತ್ತಾರೆ.

ಮಹಾರಾಷ್ಟ್ರದ ಮಂಗಳವೇಡೆಯಲ್ಲಿ ಇದ್ದಿರಬೇಕು, ಅಥವಾ ಜನಸಿರಬೇಕು ಎಂಬುದಕ್ಕೆ ಕ್ರಿ.ಶ೧೧೭೨ರ ರಾಯಮುರಾರಿ ಸೋಯಿದೇವನ ಮಾಡಗಿಹಾಳ ಶಾಸನದಲ್ಲಿಯ ಉಲ್ಲೇಖ

"ಎನಿಪಾದೇಶದ ತಡವೆ
ದೆನಿಕುಂತರಿಕಾಡನಾಡು ತದವಿಷಯಕ್ಕಾ
ಸ್ಯನಿಭಂ ಮಂಗಳಿವೇಡಂ
ಜನರಮ್ಯಂತತು ಪುರೀಶರವರನ್ವಯದೊಳ್"[೨೩]

ಈ ಶಾಸನದಲ್ಲಿ ತರಿಕಾಡ ನಾಡು ಮತ್ತು ಮಂಗಳವೇಡದ ಬಗ್ಗೆ ತಿಳಿಸುವುದರೊಂದಿಗೆ ಇಲ್ಲಿ ಆಳಿದ ಅರಸರ ಬಗ್ಗೆ ತಿಳಿಯುತ್ತದೆ. ಮುಂದುವರೆದು

"ಕನ್ನಮ
ಬಿಜ್ಜಳ — ರಾಜ(ರಾಜಲ)
ರಾಜ(ರಾಜಲ): ಅಮ್ಮುಗಿ — ಸಂಕಮ — ಜೋಗಮ
ಜೋಗಮ
ಪೆರ್ಮಾಡಿ
ಬಿಜ್ಜಳ
ಸೋಯಿದೇವ"[೨೪]

ಮಂಗಳವೇಡವನ್ನು ಇಲ್ಲಿಯ ವಂಶಾವಳಿಯಲಿರುವ ಅರಸರು, ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರೆಂದು ಡಾ.ಜಿ.ಎಸ್.ಉಪಾಧ್ಯ ಅಭಿಪ್ರಾಯಪಡುತ್ತಾರೆ. "೧೧೩೫ರ ಸೊಲ್ಲಾಪುರ ಶಾಸನದಲ್ಲಿ ಎರಡನೆಯ ಬಿಜ್ಜಳನ ಉಲ್ಲೇಖವಿದೆ. ಎರಡನೆಯ ಬಿಜ್ಜಳ ಇನ್ನೂ ಚಾಲುಕ್ಯರ ಸಾಮಂತನಾಗಿದ್ದ ಕಾಲದಲ್ಲೇ ಯುದ್ಧಗಳಲ್ಲಿ ಪಾಲ್ಗೊಂಡ ಅಂಶ ದಾಖಲಾಗಿದೆ. ಮಹಾಮಣ್ಡಳೇಶ್ವರಂ ಬಿಜ್ಜಲ ದೇವರಸರು ಹಾನಗಲ್ಲ ಕೋಟೆಯಲು ಮಣ್ಡಳಿಕ ಮಸನೆಯನಾಕ್ರಮಿಸಿ ಕಪ್ಪವಂ"[೨೫] ಈ ಶಾಸನಗಳು ಮಂಗಳವೇಡವನ್ನು ರಾಜಧಾನಿ ಮಾಡಿದ್ದು ಹಾಗೂ ಬಿಜ್ಜಳ ಹಾನಗಲ್ ಪ್ರದೇಶದಲ್ಲಿ ಆಳ್ವಿಕೆಯಲ್ಲಿದ್ದನು ಎಂಬುದರಿಂದ ಸಿದ್ಧರಸನು ಕೂಡ ದಂಡನಾಯಕ ಅಥವಾ ಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿರಬೇಕು. ಹಾನಗಲ್ ಪ್ರದೇಶಕ್ಕೆ ಸಿದ್ಧರಸನನ್ನು ದಂಡನಾಯಕನನ್ನಾಗಿ ನೇಮಿಸಿರಬಹುದು ಎಂದು ಊಹಿಸಬಹುದು.

ಡಾ.ಎಸ್.ಎಂ.ವೃಷಭೇಂದ್ರಸ್ವಾಮಿಯವರು ಚನ್ನಬಸವಣ್ಣನವರ ತಂದೆಯ ಕುರಿತಾಗಿ ಹಾಗೂ ಇಂಗಳೇಶ್ವರ ಶಿವರಾಯ ಅಥವಾ ಶಿವದೇವರಾಯ ಈ ಲೇಖನದಲ್ಲಿ ಸಿದ್ಧರಸ ವಂಶಾವಳಿ ಹಾಗೂ ಬಸವಣ್ಣನ ತಾಯಿ ತಂದೆಯ ಹೆಸರನ್ನು ಉಲ್ಲೇಖಿಸಿ ವಂಶಾವಳಿ ಈ ಕೆಳಗಿನಂತಿದೆ.

ಶಿವರಾಯ
ಮಾದಪ್ಪ — ವಾಸುದೇವ — ಸದಾಶಿವರಾಯ (ವಂಶಾವಳಿ ಮುಂದುವರಿದಿದೆ)
ವಾಸುದೇವ: ಬಲದೇವ — ನೀಲಕಂಠ — ೨ನೇ ಶಿವರಾಯ(ಸಿದ್ದರಾಯ) (ಮಂಗಳವೇಡೆಗೆ ಹೋದರು)
ನೀಲಕಂಠ: ಶಿವರಾಯ III
ಶಿವರಾಯ III: ಚನ್ನಬಸವ
೨ನೇ ಶಿವರಾಯ(ಸಿದ್ದರಾಯ): ಮಾದಲಾಂಬಿಕೆ
ಬಾಗೇವಾಡಿಯ ಮಾದರಸ
ಅಕ್ಕನಾಗಮ್ಮ — ಬಸವಣ್ಣ[೨೬]

ಈ ಮೇಲಿನ ವಂಶಾವಳಿಯ ಪ್ರಕಾರ ಸಿದ್ಧರಸನು ನೀಲಾಂಬಿಕೆಯ ತಂದೆಯಾಗಿರಬಹುದು. ಯಾಕೆಂದರೆ ಇಲ್ಲಿ ಬಸವಣ್ಣನ ತಂದೆ ತಾಯಿ ಬಗ್ಗೆ ಹೇಳಿದ್ದು ಈಕೆಯ ಇತಿವೃತ್ತಕ್ಕೆ ಮಹತ್ವದ

ಆಧಾರ ಎನ್ನಬಹುದು. ಡಾ.ವೃಷಬೇಂದ್ರಸ್ವಾಮಿಯವರು ಮುಂದುವರೆದು "ಈ ವಂಶಾವಳಿ ಪರಿಶೀಲನೆಯಿಂದ ಇನ್ನೂ ಕೆಲವು ಚಾರಿತ್ರಿಕ ಸಂಗತಿಗಳು ಹೊರಬೀಳುವ ಸಾಧ್ಯತೆ ಇದೆ. ಬಸವಣ್ಣನವರ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆ, ಮಂಗಳವಾಡದಲ್ಲಿ ನೆಲೆಸಿದ್ದ ಬಸವಣ್ಣನವರ ಸೋದರ ಮಾವಂದಿರಾದ ಬಲದೇವ ೨ನೇ ಶಿವರಾಯ(ಸಿದ್ಧರಾಯ)ರ ಮಕ್ಕಳಾಗಿರುವಂತೆ ತೋರುತ್ತದೆ. ನೀಲಾಂಬಿಕೆ ಕ್ಷತ್ರಿಯ ಕನ್ಯೆ ಅಂತರ್ಜಾತೀಯ ವಿವಾಹದ ಸಂಕೇತವಾಗಿ ಬಸವಣ್ಣ ಈ ಎರಡನೆಯ ಹೆಂಡತಿಯನ್ನು ಮದುವೆ ಮಾಡಿಕೊಂಡು, ರಾಜಕೀಯ ಸಾಧನೆ ಮಾಡಿದನೆಂಬ ಕಲ್ಪನೆ ತಳಬುಡವಿಲ್ಲವಾಗುತ್ತದೆ."[೨೭] ಇವರ ಅಭಿಪ್ರಾಯದಿಂದ ನೀಲಾಂಬಿಕೆಯ ತಂದೆ ಸಿದ್ಧರಸ, ಈಕೆ ಕ್ಷತ್ರಿಯ ಕನ್ಯೆಯಲ್ಲ ಅಂದರೆ(ಬಿಜ್ಜಳ ಕುಟುಂಬಕ್ಕೆ ಸೇರಿದವಳಲ್ಲ) ಈಕೆ ಸಿದ್ಧರಸನ ಮಗಳು ಆಗಿರುವಂತೆ ತೋರುತ್ತದೆ. ಜೊತೆಗೆ ಬಸವಣ್ಣ ತಾಯಿ ತಂದೆಯ ಬಗೆಗೆ ಈ ವಂಶಾವಳಿಯಲ್ಲಿ ಬರುವುದರಿಂದ ಜೊತೆಗೆ ಡಾ.ವೃಷಬೇಂದ್ರ ಸ್ವಾಮಿಯವರ ಅಭಿಪ್ರಾಯದಂತೆ ಈಕೆ ಬಸವಣ್ಣನ ಪತ್ನಿಯಾಗಿರಬಹುದು.

ಸೀತಾರಾಮ ಜಾಗೀರದಾರ ಬಸವಣ್ಣನವರ ವಂಶವೃಕ್ಷದಲ್ಲಿ ನೀಲಾಂಬಿಕೆ ಹೆಸರನ್ನು ಸೂಚಿಸಿದ್ದು ಹಾಗೂ ವಂಶವೃಕ್ಷ ವಿವರ ಇಂತಿದೆ.

**ಬಸವಣ್ಣನವರ ವಂಶವೃಕ್ಷ**

**ಮಾದಿರಾಜ**
(ಬಾಗೇವಾಡಿ ಪುರವರಾಧೀಶ್ವರ)

ದೇವರಾಜ(ಮುನಿಪಂ) | ಅಕ್ಕನಾಗಮ್ಮ | ಬಸವರಾಜ

ಅಕ್ಕನಾಗಮ್ಮ → ಚೆನ್ನಬಸವಣ್ಣ

ಬಸವರಾಜ: ಹೆ.೧. ಗಂಗಾಂಬಿಕೆ, ಹೆ.೨. ನೀಲಾಂಬಿಕೆ

ದೇವರಾಜ(ಮುನಿಪಂ)
ಕಾವರಸ
ಸೋವರಸ
ಕಲಿದೇವರಸ(ಮುನಿಪ)
ಹಾಲಬಸವಿದೇವ(ಮುನಿಪ)[೨೮]

ಈ ವಂಶವೃಕ್ಷದಲ್ಲಿ ನೀಲಾಂಬಿಕೆ ಬಸವಣ್ಣನ ಧರ್ಮಪತ್ನಿಯಾಗಿರಬಹುದು ಎಂದು ಸೀತಾರಾಮ ಜಾಗೀರದಾರ ಹೆಸರನ್ನು ನಮೂದಿಸಿದ್ದಾರೆ. ಹಾಗೂ ಡಾ.ವೃಷಬೇಂದ್ರ ಸ್ವಾಮಿಯವರ ಅಭಿಪ್ರಾಯ ಹಾಗೂ ಇವರು ಈಕೆಯ ಹೆಸರನ್ನು ಸೂಚಿಸಿದ್ದರಿಂದ ಬಸವಣ್ಣನ ಸತಿಯೆಂದು ಊಹಿಸಬಹುದು. ರಮೇಶ್ ಪಂ.ಲಿಂಗದಳ್ಳಿಯವರು ಈಕೆಯ ವಿವಾಹವು ಮಂಗಳವೇಡಿಯಲ್ಲಿ ಜರುಗಿತು ಎನ್ನುವ ಅಭಿಪ್ರಾಯದೊಂದಿಗೆ, ಗಂಗಾಂಬಿಕೆ, ನೀಲಾಂಬಿಕೆಯರ ವಿವಾಹವು ಬಸವಣ್ಣನೊಂದಿಗೆ ಒಂದೇ ವೇದಿಕೆಯಲ್ಲಿ ನಡೆಯಿತು ಎಂದು ಅಭಿಪ್ರಾಯಪಡುತ್ತಾರೆ. "ಇಬ್ಬರೊಡನೆ

ಏಕ ಕಾಲದಲ್ಲಿ ಮದುವೆಯು ನಡೆಯಿತು. ಮದುವೆ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಮಂಗಳವಾಡಿಯಲ್ಲಿ ಯುವನಾಮ ಸಂವತ್ಸರ ಚೈತ್ರಮಾಸದಲ್ಲಿ ಕ್ರಿ.ಶ.೧೪-೧-೧೧೫೫ರಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು."[೨೯] ಎಂದು ಹೇಳುತ್ತಾರೆ. ಆದರೆ ಸುಕುಮಾರ ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ವೈ.ನಾಗೇಶಶಾಸ್ತ್ರಿಗಳು ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ. "ಬಸವಣ್ಣನವರ ವಿವಾಹದ ವಿಷಯದಲ್ಲಿಯೂ ಕಲ್ಯಾಣದಲ್ಲಾದ ಕ್ರಾಂತಿಯ ಬಗೆಗೂ ಚರಿತ್ರೆಕಾರರಲ್ಲಿ ಏಕಾಭಿಪ್ರಾಯವಿಲ್ಲ. ಶಿಷ್ಯೋತ್ತಮನೆ ವಿವಾಹಾದಿ ಘಟನೆಗಳಲ್ಲಿಯೂ ಏಕಾಭಿಪ್ರಾಯವಿಲ್ಲ. ಬಸವಣ್ಣನವರಿಗೆ ನೀಲಮ್ಮನೊಡನೆ ಮದುವೆಯು ಕ್ರಿ.ಶ. ೧೧೩೧ರಲ್ಲಿಯೂ ಗಂಗಾಂಬಿಕೆಯೊಡನೆ ಕ್ರಿ.ಶ.೧೧೪೫ ರಲ್ಲಿಯೂ ನಡೆದುದೆಂದು ಕೆಲವರ ವಾದವಾಗಿರುವುದು"[೩೦] ಎನ್ನುತ್ತಾರೆ. ಹರಿದ ಹೆದ್ದೊರೆ ಎಂಬ ಅಭಿನಂದನ ಗ್ರಂಥದಲ್ಲಿ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರ ಬಸವಣ್ಣನವರ ಐತಿಹಾಸಿಕತೆ ಎಂಬ ಲೇಖನದಲ್ಲಿ ಗಂಗಾಂಬಿಕೆ, ನೀಲಾಂಬಿಕೆಯ ವಿವಾಹದ ಪ್ರಸ್ತಾಪ "೧೧೫೫-೫೬ರ ವೇಳೆಗೆ ಬಲದೇವ ಮಂತ್ರಿಯಾಗಿ ಆಹ್ವಾನಿತನಾಗಿ ಮೊದಲು ಮಂಗಳವಾಡಕ್ಕೂ ಅಲ್ಲಿಂದ ಅಲ್ಪ ಕಾಲದಲ್ಲಿಯೇ ಕಲ್ಯಾಣಕ್ಕೂ ಬಂದು ನೆಲಸಿದ. ಮೊದಲು ಗಂಗಾಂಬಿಕೆ ಅನಂತರ ನೀಲಾಂಬಿಕೆಯರೊಡನೆ ವಿವಾಹವಾಯಿತು."[೩೧] ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಬಸವಣ್ಣ ಬಲದೇವನ ಕರೆಯ ಮೇರೆಗೆ ಮಂಗಳವೇಡಿಗೆ ಸ್ವಲ್ಪ ದಿನಗಳಲ್ಲಿ ಕಲ್ಯಾಣಕ್ಕೆ ಹೋದ ಮೇಲೆ, ಕಲ್ಯಾಣದಲ್ಲಿ ವಿವಾಹವಾಯಿತು ಎಂದು ಅಭಿಪ್ರಾಯಪಡುತ್ತಾರೆ. ಹಾಗೆ ನಿರ್ದಿಷ್ಟವಾದ ದಿನಾಂಕವನ್ನು ತಿಳಿಸುವುದಿಲ್ಲ. ಆದರೆ ವೈ.ನಾಗೇಶ ಶಾಸ್ತ್ರಿಗಳು ೧೧೩೧ರಲ್ಲಿ ನೀಲಾಂಬಿಕೆ ಬಸವಣ್ಣನವರ ವಿವಾಹವಾಯಿತು ಎಂದರೂ ಸ್ಪಷ್ಟತೆ ಇಲ್ಲ. ಇನ್ನೂ ವಾದಗಳಿರುವುವು ಎಂದು ಬಸವಣ್ಣನವರು ವೀರಶೈವ ಸಮಾಜ ಎಂಬ ಲೇಖನದಲ್ಲಿ ತಿಳಿಸುತ್ತಾರೆ.

ನೀಲಾಂಬಿಕೆಯ ಕುರಿತು, ಈಕೆಯ ವಚನದಲ್ಲಾಗಲಿ, ಕಾವ್ಯಪುರಾಣಗಳಲ್ಲಿ ಅಥವಾ ಹಲವು ಬಗೆಯ ಶರಣ ಸಾಹಿತ್ಯದಲ್ಲಾಗಲಿ, ಈಕೆಯ ಜನ್ಮಸ್ಥಳ, ತಂದೆ ತಾಯಿ, ಬಾಲ್ಯದ ಜೀವನ ಹಾಗೂ ಮದುವೆಯ ಬಗ್ಗೆ ನಿಖರವಾದ ಮಾಹಿತಿ ಸಿಗುವುದಿಲ್ಲ. ಆದರೆ ಈಕೆಯ ಜನನ ತಂದೆ ತಾಯಿ ಬಗ್ಗೆ ಡಾ.ಸರೋಜಿನಿ ಮಹಿಷಿಯವರು ಹೀಗೆ ಹೇಳುತ್ತಾರೆ; "ಬಿಜ್ಜಳನ ತಂದೆ ಪೆರ್ಮಾಡಿ ರಾಜ್ಯವಾಳುತ್ತಿದ್ದಾಗ ಬಸವಣ್ಣನ ಸೋದರಮಾವ ಸಿದ್ಧಣ್ಣನೇ ದಂಡಾಧೀಪನಾಗಿದ್ದನೆಂದು ವೀರಶೈವ ಗ್ರಂಥಗಳಲ್ಲಿ ಉಲ್ಲೇಖವಿದೆ. ಮರಣ ಕಾಲದಲ್ಲಿ ಪೆರ್ಮಾಡಿಯು ಸಿದ್ಧಣ್ಣನನ್ನು ಕರೆದು ಬಿಜ್ಜಳನನ್ನು ಅವನ ವಶಕ್ಕೆ ಒಪ್ಪಿಸಿದನು. ಈ ಸಿದ್ಧಣ್ಣನ ಮಗಳೇ ನೀಲಾಂಬಿಕೆ. ಬಿಜ್ಜಳನ ಜೊತೆಗೆ ಬೆಳೆದವಳು"[೩೨] ಎಂದು ಇವರ ಹೇಳಿಕೆಯಂತೆ ಗುರುರಾಜ ಚಾರಿತ್ರದಲ್ಲಿ ಸಹಿತ ಕಾಣಬಹುದು.

"ಅನುಜಂಗೆ ಬಾಲ್ಯದೊಳು ಮೊಲೆಯಿತ್ತು ಪಾಲಿಸಿದ
ಜನನಿ ಸಿದ್ಧರಸ ಮಂತ್ರಿಪನ ಸತಿಯಲು ಪಡೆದ
ವನಜಲೋಚನ ನೀಲಲೋಚನೆಯು ಬಿಜ್ಜಳನಿಗೆ
ನಿಜಸಹೋದರಿಯಾಗಲು......"[೩೩]

ಸಿದ್ಧನಂಜೇಶನು ನೀಲಾಂಬಿಕೆಯ ತಾಯಿ ಬಿಜ್ಜಳನ ತಮ್ಮನಿಗೆ ಹಾಲನ್ನು ನೀಡಿ ಪೋಷಣೆ ಮಾಡಿದಳು ಎಂದು ಉಲ್ಲೇಖ ಮಾಡುತ್ತಾನೆ. ಹಾಗಾಗಿ ಬಿಜ್ಜಳ ತಮ್ಮನೊಂದಿಗೆ ಬೆಳೆದ ಈಕೆ ನನಗೂ ತಂಗಿ ಎನ್ನುತ್ತಾನೆ. ಲಕ್ಕಣ್ಣದಂಡೇಶ ಇಲ್ಲ ಬಿಜ್ಜಳ ಸ್ವಂತ ತಂಗಿಯೇ ಎಂಬ ರೂಪ ದಲ್ಲಿ ಹೇಳುತ್ತಾನೆ. ಆದರೆ ಸಿಂಗಿರಾಜನು ಈಕೆಯ ತಾಯಿ ಬಗ್ಗೆ ಪ್ರಸ್ತಾಪ ಮಾಡುತ್ತಾ

"ಲೀಲೆಯಿಂ ಮೊಲೆಯೂಡಿ ಸಲುಹಿದಳು ಮಂತಿಕುಲ
ಪಾಲ ಸಿದ್ಧರಸದಣ್ಣಾಯಕರರಸಿ ಪುಣ್ಯ
ಶೀಲದೇವತೆ ಪದ್ಮಗಂಧಿಯಾಕೆಯ ಉದರದಲಿ ಬಳಿಕ ಜನಿಸಿದಾಕೆ
ನೀಲಲೋಚನೆ ಯೆಮಗೆ ತಂಗಿಯಹಳಾಕೆಯನು..."[೩೪]

ಸಿಂಗಿರಾಜ ಪುರಾಣದ ಪ್ರಕಾರ ತನ್ನ ತಮ್ಮನಾದ "ಕರ್ಣಹದೇವ ಬಾಲನಾಗಿರಲಾತನ"[೩೫] ಈತನಿಗೆ ಸಿದ್ಧರಸನ ಪತ್ನಿ ಹಾಗೂ ಶೀಲದೇವತೆಯಾದ ಪದ್ಮಗಂಧಿಯು ಲಾಲನೆ ಪಾಲನೆ ಮಾಡಿದಳು. ಹಾಗೂ ಆ ಮಗುವಿಗೆ ಸ್ತನಪಾನ ಮಾಡಿಸಿ ಬೆಳೆಸಿದಳು. ನಂತರದಲ್ಲಿ ಜನಿಸಿದಾಕೆ ನೀಲಲೋಚನೆ ಆದ್ದರಿಂದ ನಮಗೆ ಈಕೆ ತಂಗಿ ಎಂದು ಹೇಳುತ್ತಾನೆ. ಈ ಪದ್ಯದಲ್ಲಿ ಈಕೆಯ ತಂದೆ ತಾಯಿಯ ಹೆಸರು ಬರುವುದಲ್ಲದೆ, ಈಕೆಯ ಹೆಸರನ್ನು ನೀಲಲೋಚನೆಯೆಂದು ಕರೆಯುತ್ತಿರುವುದರಿಂದ ಸುಂದರವಾದ ನೀಲಕಣ್ಣುಗಳಿಂದ ಕೂಡಿದವಳು ಎನ್ನಬಹುದು. ಹಾಗೆ ಸಿದ್ಧನಂಜೇಶ, ಸಿಂಗಿರಾಜರಂತೆ ಗರಣಿಯ ಬಸವಲಿಂಗ, ಇವರ ಹೇಳಿಕೆಯಂತೆ ಹೇಳುತ್ತಾನೆ. ಈಕೆಯ ಹೆಸರಿನ ಬಗ್ಗೆ ಹರಿಹರ ಮಾಯಿದೇವಿ, ಭೀಮಕವಿ ಮತ್ತು ಸೋಮನಾಥ, ಷಡಕ್ಷರಿದೇವ ಮಾಯಿದೇವಿ ಎಂದು ಕರೆದರೆ, ಇತರ ಕವಿಗಳು ಸಾಹಿತಿಗಳು ನೀಲಾಂಬಿಕೆ, ನೀಲಗಂಗಾ, ನೀಲಲೋಚನೆ, ನೀಲಮ್ಮ, ನೀಲಾ ಎಂದು ಸಾಹಿತ್ಯದಲ್ಲಿ ಈಕೆಯನ್ನು ಕರೆದಿದ್ದಾರೆ. ಮತ್ತು ಈಕೆಯ ಬಾಲ್ಯ ಜೀವನ, ವಿದ್ಯಾಭ್ಯಾಸ ಎಲ್ಲಿಯಾಯಿತು? ಎಂಬುದಕ್ಕೆ ಬುರುಡೇಕಟ್ಟಿ ಮಂಜಪ್ಪರ ಅಭಿಪ್ರಾಯ "ಅರಮನೆಯಲ್ಲಿ ಸಹಜವಾಗಿ ಸಂಗೀತ, ಸಾಹಿತ್ಯಗಳ ಅಧ್ಯಯನ ನಡೆಯುತ್ತದೆ. ವಿನಯ ಸಂಪನ್ನರಾಗಿ ವಿದ್ಯಾವಂತರಾಗಿ ಬೆಳೆಯುತ್ತಾರೆ"[೩೬]ಎನ್ನುತ್ತಾರೆ. ಲಕ್ಕಣ್ಣದಂಡೇಶ, ಸಿಂಗಿರಾಜರ ಅಭಿಪ್ರಾಯ ಜೊತೆ ಬುರಡೇ ಕಟ್ಟಿ ಮಂಜಪ್ಪನವರ ಅಭಿಪ್ರಾಯದಿಂದ ಈಕೆಯ ಬಾಲ್ಯದ ಶಿಕ್ಷಣವನ್ನು ಬಿಜ್ಜಳ ವ್ಯವಸ್ಥೆ ಮಾಡಿರಬೇಕು. ಹಾಗೂ ರಾಜಕನ್ಯೆಯಾಗಿ ಅರಮನೆಯಲ್ಲಿ ಬೆಳೆಸಿದ್ದಾರೆ ಎನ್ನಬಹುದು. ಯಾಕೆಂದರೆ ಲಕ್ಕಣ ದಂಡೇಶ ಹೇಳುವಂತೆ "ಆಕೆ ಪಟ್ಟದರಾಣಿ

ಬಸವದಂಡೇಶಗಂ"[೩೭] ಎನ್ನುವುದರಿಂದ ಈಕೆ ಅರಮನೆಯ ಸೌಂದರ್ಯವತಿಯಾಗಿದ್ದರಿಂದಲೇ ಸಿಂಗಿರಾಜ ನೀಲಲೋಚನೆ ಎಂದಿರಬೇಕು.

ಅರಮನೆಯಲ್ಲಿ ಬೆಳೆದ ನೀಲಲೋಚನೆಯನ್ನು ನೋಡಿ ಸಂತೋಷಗೊಂಡ, ಬಿಜ್ಜಳ, ಆಕೆಯೊಂದಿಗೆ ತನ್ನ ತಮ್ಮನನ್ನು ನೋಡಿ ವಾತ್ಸಲ್ಯ ಮೂಡಿಬಂದಿರಬೇಕು. ಹಾಗೆ ಈಕೆಯ ಬಾಲ್ಯ ಕಳೆದ ನಂತರ "ಸಿದ್ಧರಸನ ಮುದ್ದಿನ ಮಗಳು ನೀಲಾಂಬಿಕೆಯು ಅರಸೊತ್ತಿಗೆಯ ಸುಪ್ಪತ್ತಿನ ಮನೆಯ ಸವಿಸುಖದಿಂದ ಬೆಳೆದವಳು. ನವ ತಾರುಣ್ಯದಲ್ಲಿ ಕಾಲಿಡಲು ನಾನಾ ಕಲ್ಪನೆಯ ಕವಲುದಾರಿಯಲ್ಲಿ ಸಾಗುತ್ತಿರುವಾಗ ಮಗಳ ವಿರತಿ, ವಿರಾಗ, ಮೈಮನದಿ ಬೆಳೆದು ನಿಂತಿರಲು"[೩೮] ಎಂ.ಎಚ್.ನದಾಫರ ಹೇಳಿಕೆಯಂತೆ ನೀಲಾಂಬಿಕೆ ಬಾಲ್ಯದಿಂದ ಯೌವ್ವನಕ್ಕೆ ಕಾಲಿಡುವಂತ ಸಂದರ್ಭದಲ್ಲಿ ಇವಳ ತಂದೆ, ಮದುವೆಯ ಆಲೋಚನೆ ಮಾಡುವಂತದ್ದನ್ನು ಹಾಗೆ ಸುಂದರಳು, ಸುರದ್ರೂಪಿ ಚೆಲುವೆ ನೀಲಾಂಬಿಕೆಯ ಮದುವೆಯ ಚಿಂತೆ ಮಾಡಿರಬೇಕು.

ನೀಲಲೋಚನೆ ಹುಟ್ಟು ತಂದೆ ಹಾಗೂ ಸಹೋದರರ ಬಗ್ಗೆ ವೀರಶೈವ ಕವಿಗಳಲ್ಲಿ ಗೊಂದಲದ ವಾತಾವರಣವಿದೆ ಎಂದು ಎಂ.ಎಂ.ಕಲ್ಬುರ್ಗಿಯವರ ಅಭಿಪ್ರಾಯ. "ನೀಲಲೋಚನೆ ಚಕ್ರವರ್ತಿ ಬಿಜ್ಜಳನ ತಂಗಿ. ಮಂತ್ರಿ ಸಿದ್ಧರಸನ ಮಗಳು ಎಂಬ ಭಿನ್ನ ಅಭಿಪ್ರಾಯಗಳು ತೋರುತ್ತವೆ. ಯಾವಾಗಲು ಇಂಥ ಅಭಿಪ್ರಾಯ ಭೇದಗಳಿಗೆ ನಿವಾರಣೆ ಹುಡುಕುವ ಧೋರಣೆಯುಳ್ಳ ಸಿಂಗರಾಜಪುರಾಣವು ಸಿದ್ಧರಸನ ಮಗಳು ಬಿಜ್ಜಳನ ಸಾಕುತಂಗಿಯೆಂದು ಈ ಸಂದೇಹಕ್ಕೆ ವಿರಾಮ ಹಾಕುತ್ತದೆ." ಎನ್ನುತ್ತಾರೆ. ಮುಂದುವರೆದು ಹೀಗೆ ಹೇಳುತ್ತಾರೆ. "ವೀರಶೈವ ಕವಿಗಳಿಗೆ ಯಾವುದೋ ಒಂದು ರುಚಿಸದ ಸಂಗತಿ ಇಲ್ಲಿ ಹುದುಗಿರಬಹುದೆನಿಸುತ್ತದೆ. ಅದು ಬಹುಶಃ ಇವಳು ಸಿದ್ಧರಸನೆಂಬವನ ಮಗಳಾಗಿರದೆ ಲಕ್ಕಣ್ಣ ದಂಡೇಶ ಹೇಳುವಂತೆ ಶೈವ ಕ್ಷತ್ರಿಯನಾದ ಬಿಜ್ಜಳನ ತಂಗಿಯೇ ಆಗಿರಬೇಕು. ಈ ಶೈವ ಕ್ಷತ್ರಿಯವೆಂಬ 'ಅನ್ಯಜಾತಿ'ಯೇ ವೀರಶೈವ ಕವಿಗಳನ್ನು ಕಾಡಿದಂತಿದೆ. ಇದನ್ನು ಮುಚ್ಚಲು ಸಿದ್ಧರಸನ ಆಸ್ತಿಗೆ ಬಸವಣ್ಣ ವಾರಸುದಾರನೆಂಬ ಹರಿಹರನ ಹೇಳಿಕೆಯ ಎಳೆಯನ್ನು ತರುವಾಯದವರು ಜಗ್ಗಿ ಸಿದ್ಧರಸ ನೀಲಲೋಚನೆಯರು ತಂದೆ ಮಗಳೆಂಬ ಕಲ್ಪನೆ ಕಟ್ಟಿರಬೇಕು. ಆಗ ಬಿಜ್ಜಳನ ತಂಗಿಯೆಂಬ ಸಂಗತಿ ಅಡ್ಡಬರಲು 'ಸಿದ್ಧರಸನ ಮಗಳು ಬಿಜ್ಜಳನ ಸಾಕುತಂಗಿ' ಎಂದು ಹೇಳಿ ತಮಗೆ ಕಾಡುತ್ತಿದ್ದ 'ಅನ್ಯಜಾತೀಯತೆ'ಯೆಂಬ ನೋವನ್ನು ಮುಚ್ಚಿಬಿಟ್ಟರು ಎಂದು ಊಹಿಸಬಹುದು"[೪೦] ಎಂದು ಸ್ಪಷ್ಟೀಕರಿಸುತ್ತಾರೆ. ಆದರೆ ಈ ಎಲ್ಲ ಅಂಶಗಳನ್ನು ಗಮನಿಸಿದಾಗ ನೀಲಾಂಬಿಕೆ ತಂದೆ ತಾಯಿ ಸಿದ್ಧರಸ ಪದ್ಮಗಂಧಿ ಎಂದು ಗುರುತಿಸಬಹುದು.

ನೀಲಾಂಬಿಕೆಯು "ಬಿಜ್ಜಳನ ಅರಮನೆಯಲ್ಲಿ ಬೆಳೆದು, ಸಾಹಿತ್ಯ ಸಂಗೀತಗಳನ್ನು ಬಲ್ಲವಳಾಗಿ, ಸರ್ವಗುಣ ಸಂಪನ್ನೆಯಾದ ದೃಢ ನಿಲುವಿನ ನೀಲಾಂಬಿಕೆಯಾಗಿದ್ದಳು"[೪೧] ಇಂತಹ ನೀಲಾಂಬಿಕೆ

ಯನ್ನು ಬಸವಣ್ಣ ಮದುವೆಯಾಗಿ ಆದರ್ಶದ ಬದುಕಿಗೆ ಹೆಜ್ಜೆ ಇಟ್ಟಿರುವುದನ್ನು ಕಾಣುತ್ತೇವೆ. ಈಕೆಯ ವಿವಾಹವನ್ನು ಹರಿಹರನ ಉಲ್ಲೇಖಿಸುತ್ತಾನೆ. "ಸಂಗನ ಬಸವಂ ಕೆಲವು ದಿನಂಗಳಂ ಕಳೆದು ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಿದೇವಿಯರೊಡ ತಣ ವಿವಾಹ ಸಂಪದದಿಂ ಸಂತಸುಕವಿರ್ದೊಂದು ದೇವಸಂ"[೪೨] ಹರಿಹರ ಈ ಪದ್ಯದಲ್ಲಿ ಬಸವಣ್ಣನ ವಿವಾಹ ಮಾಯಿದೇವಿಯೊಂದಿಗೆ ಎಂದು ಹೇಳುವ ಪೂರ್ವದಲ್ಲಿ ಗಂಗಾದೇವಿ, ಹೆಸರನ್ನು ಬಳಸಿದ್ದು, ಏಕೆ? ಒಂದು ವೇಳೆ ಇವರಿಬ್ಬರೊಂದಿಗೆ ಒಂದೇ ವೇದಿಕೆಯಲ್ಲಿ ವಿವಾಹ ನಡೆಯಿತೆ? ಅಥವಾ ಗಂಗಾದೇವಿಯಾದ ಮೇಲೆ ಮಾಯಿದೇವಿ ಮದುವೆಯಾಯಿತೆ? ಆದರೆ ಎ.ಗಾಯಿತ್ರಿಯವರ ಅಭಿಪ್ರಾಯದಂತೆ "ನೀಲಲೋಚನೆಗೆ ಮಾಯಿದೇವಿ ಎಂಬ ಹೆಸರಿತ್ತೆಂದು ಈ ಕೃತಿಯಿಂದ ತಿಳಿದುಬರುತ್ತದೆ. ಆದರೆ ಮಾಯಿದೇವಿ ಯಾರ ಮಗಳೆಂದು ಹರಿಹರ ಸ್ಪಷ್ಟಪಡಿಸುವುದಿಲ್ಲ"[೪೩] ಎನ್ನುತ್ತಾರೆ. ಈ ಅಭಿಪ್ರಾಯದಲ್ಲಿ ಮಾಯಿದೇವಿ ಯಾರು? ಸಿದ್ಧರಸನ ಮಗಳೆಂದು ಹೇಳುವುದಾದರೆ ಹರಿಹರ "ಸಿದ್ಧದಂಡಾಧಿಪಂ ಹೊಂದಿದ ನಪುತ್ರಕಂ"[೪೪] ಈತನೆ ಹೇಳುವಂತೆ ಸಿದ್ಧದಂಡನಾಯಕನಿಗೆ ಮಕ್ಕಳಿಲ್ಲ ಬಸವಣ್ಣನ ಇನ್ನೊಬ್ಬ ಸತಿ ಗಂಗಾಂಬಿಕೆ 'ಸಿದ್ಧರಸನೆಂದು' ತನ್ನ ಮಗನಿಗೆ ನಾಮಕರಣ ಮಾಡಿದ್ದು ಹರಿಹರ ಉಲ್ಲೇಖಿಸುತ್ತಾನೆ. ತನ್ನ ಬಸವರಾಜ ದೇವರ ರಗಳೆಯಲ್ಲಿ. ಹಾಗಾದರೆ ಕೆಲವು ಕವಿಗಳು ಗಂಗಾಂಬಿಕೆಯ ತಂದೆ ಬಲದೇವನೆಂದು, ನೀಲಾಂಬಿಕೆ(ಮಾಯಿದೇವಿ) ತಂದೆ ಸಿದ್ಧರಸನೆಂದು ಹೇಳುತ್ತಾರೆ. ಹಾಗಾಗಿ ಇವರಿಬ್ಬರು ಸಾಕು ಮಕ್ಕಳೆ? ಹಾಗಾದರೆ, ಸಿದ್ಧರಸ, ಬಸವಣ್ಣ ತನ್ನ ಕುಲದವನು ಎಂದು ತಿಳಿದ ಮೇಲೆ ಹಾಗೂ ಸಂಬಂಧಿ ಆಗಿದ್ದಾನೆ ಎಂದು ಗೊತ್ತಾಗಿ "ಸಿದ್ಧದಂಡಾಧಿಪಂ ಹೆಚ್ಚುತಂ ಹಿಗ್ಗುತಂ, ಸಿದ್ಧಿಯಾಯ್ತೆ ನಗಖಿಳ ಪದವಿಯೆಂದುಬ್ಬುತಂ ಪತಿಯುಂ ಪಿತಂ, ಸುತಂ, ಬಸವಣ್ಣ ನೀನೆನಗೆ"[೪೫] ಹರಿಹರ ತನ್ನ ರಗಳೆಯಲ್ಲಿ ಸಿದ್ಧರಸನಿಂದ ಬಸವಣ್ಣ ನೀನು ತಂದೆಯು, ಮಗನು, ನನ್ನ ಆಸ್ತಿಗೆ ವಾರಸುದಾರನೆಂದು ಹೇಳುವುದು ಕಂಡರೆ ಬಸವಣ್ಣ ದತ್ತು ಮಗ ಅಥವಾ ಮನೆತನಕ್ಕೆ ಹೋಗಿದ್ದಾನೆ ಎಂದು ಊಹಿಸಬಹುದು. ಅದೇ ರೀತಿ ಹರಿಹರನಂತೆ ಮಾಯಿದೇವಿಯನ್ನು ಭೀಮಕವಿ, ಪಾಲ್ಕುರಿಕೆ ಸೋಮನಾಥ, ತಮ್ಮ ಕಾವ್ಯದಲ್ಲಿ ಹೆಸರಿಸುತ್ತಾರೆ ವಿನಾ ವಿವಾಹವಾಯಿತೆಂದು ಹೇಳುವುದಿಲ್ಲ. ಹಾಗೆ ಷಡಕ್ಷರ ದೇವ ಬಸವರಾಜ ವಿಜಯಂದಲ್ಲಿ "ಬಸವಣ್ಣನವರಿಗೆ ಮಾಯಿದೇವಿಯೆಂಬ ಇನ್ನೊಬ್ಬ ಮಡದಿ ಇರುವ ವಿಷಯವು ಈ ಕಾವ್ಯದಲ್ಲಿ ಉಕ್ತವಾಗಿದೆ. ಓರ್ವ ಪಲ್ಲವಚರನೆಳ್ತಂದು ಮಾಯಿದೇವಿಯ ಮಣಿತಾಟಂಕಮಂ ಕಂಡುಬೇಡೆ ಘಳಿಲನೆರಮಣಿಯ ಕಿವಿಯೊಳ್.... ಈ ವಿವರಣೆಯಿಂದ ಬಸವಣ್ಣನವರಿಗೆ ಮಾಯಿದೇವಿ ಎಂಬ ಮಡದಿ ಇರುವುದು ಸ್ಪಷ್ಟವಾಗುತ್ತದೆ."[೪೬]

ಎಂ.ಎಂ.ಕಲಬುರ್ಗಿಯವರು ಈಕೆಯ ಹೆಸರಿನ ಬಗ್ಗೆ ಹೀಗೆ ಹೇಳುತ್ತಾರೆ. "ನೀಲಾಂಬಿಕೆ ಎಂಬುದು ರೂಢಿಯಲ್ಲಿದ್ದರೂ ಇವರ ಮೂಲನಾಮ ಮಾಯಿದೇವಿಯೆಂದು ತೋರುತ್ತದೆ"[೪೭]

ಎಂದು ಹೇಳಿರುವುದು ನಿಜವೇ ಆಗಿರಬಹುದು. ಏಕೆಂದರೆ "ಎನ್ನ ಸತಿ ನಿಲಲೋಚನೆ ಪೃಥ್ವಿಗಗ್ಗಳೆಯ ಚೆಲುವೆ"[೪೮] ಎಂಬ ಬಸವಣ್ಣನವರ ವಚನ ಈ ಮಾತಿಗೆ ಪೋಷಣೆ ನೀಡುತ್ತದೆ. ಕವಿ ಚಾಮರಸ ತನ್ನ ಪ್ರಭುಲಿಂಗ ಲೀಲೆಯಲ್ಲಿ

"ಪ್ರೀತಿಯಿಂದೆ ವಿವಾಹವನು ವಿ
ಖ್ಯಾತಿಮಿಗೆ ವಿಭವದಲಿ ಮಾಡಿದ
ನೋತು ಬಿಜ್ಜಳರಾಯ ನೆಮ್ಮಯ ಬಸವರಾಜಂಗೆ"[೪೯]

ಚಾಮರಸನು ಪ್ರೀತಿಯಿಂದ ವಿವಾಹವನ್ನು ವಿಖ್ಯಾತಿ ಹೊಂದಿದ ಬಸವಣ್ಣನಿಗೆ ಮಂತ್ರಿ ಪದವಿ ನೀಡಿದ ಮೇಲೆ ವಿವಾಹ ಮಾಡಿದನು ಬಿಜ್ಜಳ ಎಂದು ಉಲ್ಲೇಖಿಸುತ್ತದೆ. ಬಸವಣ್ಣ ಯಾರೊಂದಿಗೆ ಮದುವೆಯಾಗುತ್ತಾನೆ ಎಂಬುದು ಸ್ಪಷ್ಟಪಡಿಸಿಲ್ಲ. ಬಹುಶಃ ನೀಲಾಂಬಿಕೆಯನ್ನೆ ಬಿಜ್ಜಳ ವಿವಾಹವಾಗಿರಬಹುದು. "ಬಸವರಾಜಂಗೆ ಉಪನಯನವಾಯಿತ್ತು ವಿಭವದಿ"[೫೦] ಇಲ್ಲಿ ಚಾಮರಸ ಬಸವಣ್ಣನಿಗೆ ಉಪನಯವಾಯಿತು ಎಂದು ಹೇಳಿದರೆ, ಉಳಿದ ಕವಿಗಳು ಉಪನಯನ ವಿರೋಧಿಸಿ ಕಪ್ಪಡಿ ಸಂಗಮಕ್ಕೆ ಬಂದನು ಎನ್ನುತ್ತಾರೆ. ಈ ಕವಿಯು ನೇರವಾಗಿ ಕಲ್ಯಾಣಕ್ಕೆ ಬಂದನು ಎನ್ನುವುದರಿಂದ ಕಲ್ಯಾಣದಲ್ಲಿ ವಿವಾಹ ಬಿಜ್ಜಳನ ಸಾಕು ತಂಗಿ ನೀಲಾಂಬಿಕೆಯೊಂದಿಗೆ ಆಗಿರುವ ಸಾಧ್ಯತೆಯಿದೆ.

ಓಲೆಯನ್ನು ಬಸವಣ್ಣ ಓದಿ ದ್ರವ್ಯವನ್ನು ತೆಗೆದುಕೊಟ್ಟ. ಹಾಗಾಗಿ ಕೆಲವು ಕವಿಗಳು ಇದೇ ಪ್ರಸಂಗದಲ್ಲಿ ಈಕೆಯ ವಿವಾಹ ನಡೆಯಿತು ಎನ್ನುತ್ತಾರೆ. ಇದಕ್ಕೆ ಪೂರಕ ಅಭಿಪ್ರಾಯವನ್ನು ಡಾ.ಎಸ್.ವಿದ್ಯಾಶಂಕರರವರ ಹೇಳಿಕೆ ಒದಗಿಸುತ್ತದೆ. "ಓಲೆಯನ್ನು ಯಾರು ಓದಲಾಗದಿದ್ದಾಗ ಯಾರಾದರೂ ಈ ಲಿಖಿತದ ಒಕ್ಕಣಿಯನ್ನು ಓದಿದರೆ ಅವರಿಗೆ ಮುದ್ರೆ ಯುಂಗುರವನ್ನು ಭೂನಾರಿ ಮೊದಲಾದ ಸಕಲೈಶ್ವರ್ಯವನ್ನು ಕೊಡುವೆನೆಂದು ಬಿಜ್ಜಳ ಮಹಾರಾಜನು ಡಂಗುರ ಸಾರಿದನು."[೫೧] ಬಸವಣ್ಣ ಕಾಯಕ ಜೀವಿ. ಪರಧನ ಪರಸ್ತ್ರೀಗೆ ಅಂಜುವೆ ಎಂದು ಹೇಳಿದ ಈತನು ದ್ರವ್ಯವನ್ನು ತೆಗೆದುಕೊಂಡನೆ? ಅಥವಾ ನೀಲಾಂಬಿಕೆಯಲ್ಲಿ ಬಸವಣ್ಣನ ಬಗ್ಗೆ ಪ್ರೇಮ ಬೆಳೆದಿರಬೇಕು ಅಥವಾ ಚಾಣಾಕ್ಷನಾದ ಈತನಿಗೆ ಬಿಜ್ಜಳ ಮಂತ್ರಿ ಪದವಿ ಕೊಟ್ಟು ವಿವಾಹ ನೆರವೇರಿಸಿರಬಹುದು. ಬಸವಣ್ಣನು ಓಲೆಯನ್ನು ಓದಿದ್ದರಿಂದ, ಪವಾಡ ಪುರುಷನಂತೆ ಕಾವ್ಯಗಳಲ್ಲಿ ವರ್ಣಿತವಾಗಿರುವುದನ್ನು ಕಾಣುತ್ತೇವೆ. ಹಾಗೆ ನೀಲಾಂಬಿಕೆಯನ್ನು ಲಕ್ಕಣ್ಣ ದಂಡೇಶ ಬಿಜ್ಜಳನ ತಂಗಿ ಎಂದು ಹೇಳುತ್ತಾ ವಿವಾಹದ ಉಲ್ಲೇಖವನ್ನು ನೀಡುತ್ತಾನೆ.

"ತಿರುಗಿದಂ ಬಸವ ದಂಡಾಧೀಶ ಬಿಜ್ಜಳಂ
ಪರುಟವಿಸಿಕೊಟ್ಟನುತ್ತಮ ಮಹಾಭವನಕ್ಕೆ

ತರಲು ಬಳಿಕಾ ನೃಪಂ ಮಂತ್ರಿಗಂ ತಮ್ಮೊಳಗೆ
ಹೊರೆಹುಟ್ಟದಂತೆ ಮಾಳ್ಪ
ತೆರದಿ ತನ್ನನುಜ ಕನ್ನರಿಯಿಂದ ಕಿರುಯಳಾ
ತರಣಿ ನೀಲಾಂಬಿಕೆಯ ನೊಲಿದಿತ್ತು ಬಸವಗಂ
ಹಿರಿದು ವಿಭವದಿ ಮದುವೆಯಂ ಮಾಡಿತರುವವರ
ಚರಣಾಂಬುಜಕ್ಕೆ ಶರಣು"[೫೨]

ಲಕ್ಕಣ್ಣದಂಡೇಶ ತನ್ನ ಕಾವ್ಯದಲ್ಲಿ ಬಿಜ್ಜಳನ ತಂಗಿ ಎಂದು ಹೇಳಿದ್ದಾನೆ. ಕನ್ನರಿ ಅಂದರೆ ಕರ್ಣದೇವನಿಗಿಂತ ಚಿಕ್ಕವಳು ಎಂದು ಹೇಳಿ, ಉಡುಗೊರೆಯೊಂದಿಗೆ, ತಂಗಿಯನ್ನು ಕೊಟ್ಟು ಮದುವೆ ಮಾಡಿದನೆಂದು ಕವಿ ಉಲ್ಲೇಖಿಸುತ್ತಾನೆ.

ಬುರಡೇಕಟ್ಟಿ ಮಂಜಪ್ಪರ ಅಭಿಪ್ರಾಯ ಲಕ್ಕಣ್ಣ ದಂಡೇಶನ ಕಾವ್ಯದಲ್ಲಿ ಹೇಳಿದ ಅಂಶಕ್ಕೆ ಪೂರಕವಾಗಿದೆ. "ಬಸವಣ್ಣನವರು 'ಮನೆಗೆದ್ದು ಮಾರುಗೆಲ್ಲು' ಎನ್ನುವಂತೆ ಅಂತರ ಜಾತಿ ವಿವಾಹಕ್ಕೆ, ಮೊದಲು ತಾವೇ ಸಿದ್ಧರಾಗಿ, ನೀಲಲೋಚನೆಯನ್ನು ಏಕೆ ಮದುವೆಯಾಗಿರಬಾರದು? ತಮ್ಮ ಆದರ್ಶವನ್ನು ಬಾಯಿಮಾತಿನಲ್ಲಿ ಉಪದೇಶ ಮಾಡಿದರೆ ಸಾಲದು, ಕಾರ್ಯಗತ ಮಾಡಿ ತೋರಿಸೋಣವೆಂದು ಬಿಜ್ಜಳನ ಸೋದರಿ ನೀಲಲೋಚನೆಯನ್ನು ಅವರು ಮದುವೆ ಯಾಗಿರಲಿಕ್ಕೆ ಸಾಕು ಎಂಬುದು ಇತ್ತೀಚಿನ ವಿದ್ವಾಂಸ ವಿಮರ್ಶಕರ ಅಭಿಪ್ರಾಯವಾಗಿದೆ. ನೀಲಲೋಚನೆಯ ದಿಟ್ಟತನವನ್ನು ನೋಡಿದರೆ ಅವರು ಕ್ಷತ್ರಿಯ ಕನ್ಯೆಯಾಗಿರುವುದು ನಿಜವೆಂದು ತೋರುತ್ತದೆ"[೫೩] ಎಂದು ಹೇಳುತ್ತಾರೆ ಇದಕ್ಕೆ ಪೂರಕವಾಗಿ ಶಾಂತದೇವಿ ಮಾಳವಾಡರು ಲಕ್ಕಣ್ಣ ದಂಡೇಶನ ಕಾವ್ಯದ ಬಗ್ಗೆ ಹೇಳುತ್ತಾ, ಈ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ; "ಅವನ ಜಾಣ್ಮೆಯನ್ನರಿತು ಆನಂದ ಭರಿತನಾದ ಬಿಜ್ಜಳನು ಬಸವಣ್ಣನಿಗೆ ಮಂತ್ರಿಪದವಿಯನ್ನಿತ್ತನು. ತನ್ನ ತಂಗಿ ನೀಲಲೋಚನೆಯನ್ನು ಕೊಟ್ಟು ಲಗ್ನ ಮಾಡಿದನು."[೫೪] ಎಳಂದೂರು ಹರೀಶ್ವರ ಕವಿ ಕೃತ ಪ್ರಭುದೇವರ ಪುರಾಣದಲ್ಲಿ "ಕೋಮಲಾನ್ವಿತೆ ನೀಲಲೋಚನೆಯು ಬಸವರಸ । ಪ್ರೇಮದಿಂ ಮದುವೆಯಾಗೆಂದ ಚಾಳುಕ್ಯನಣುಗಂಗೆ ಮುಗುಳ್ದಿಂತೆಂದನು"[೫೫] ಇಲ್ಲಿ ನೀಲಾಂಬಿಕೆಯ ತಾರುಣ್ಯದ ವ್ಯವಸ್ಥೆಯನ್ನು ಹೇಳುವುದರೊಂದಿಗೆ ಪ್ರೇಮದಿಂದ ಮದುವೆಯಾಗಿರಿ ಎಂದು ಚಾಳುಕ್ಯ ಅರಸ ಅಂದರೆ ಬಿಜ್ಜಳನು ಹೇಳಿದನೆಂದು ಹಾಗೂ ಬಸವಣ್ಣ ಕೆಲವು ಒಪ್ಪಂದಗಳನ್ನು ಬಿಜ್ಜಳನಿಗೆ ಹಾಕುತ್ತಾನೆ ಎನ್ನಲಾಗಿದೆ.

"ನಿನ್ನ ನುಜೆಗಂ ನಮ್ಮ ಗುರುಗಳಿಂ ದೀಕ್ಷೆಯನು।
ಭಿನ್ನತೆಯೊಳಂ ಮಾಡಿದಲ್ಲದೊಲ್ಲೆವು ಎನಲು।

ಸನ್ನು ತಾಮಳ ಬಸವನಿನ್ನಿಚ್ಛೆಯಂತೆ ಯಂತಾಗ ತಿನ್ನಲು ಭೂಪನು॥
ಉನ್ನತದೊಳಾಯಕ್ಕಗನುಗ್ರಹವ ಮಾಡಿಸುತೆ।
ನನ್ನಿವಂತಂ ಬಸವರಾಜ ಸೂನ್ಯತತೇಜ
ಚನ್ನೆಯಹ ನೀಲಲೋಚನೆಯ ಕಲ್ಯಾಣವಾಗಲು ಬಿಜ್ಜಳೇಂದ್ರ ನೊಸೆದು"[೫೬]

ಮದುವೆಗೆ ಒಪ್ಪಿಗೆ ಸೂಚಿಸಿದ ಬಿಜ್ಜಳನಿಗೆ ನಿನ್ನ ಸಹೋದರಿಗೆ ನಮ್ಮ ಗುರುಗಳನ್ನು ಕರೆಯಿಸಿ ದೀಕ್ಷೆಯನ್ನು ಮಾಡಿಸುತ್ತೇನೆ. ನಿನ್ನ ಭಿನ್ನಭಿಪ್ರಾವೇನು ಇಲ್ಲವೇನು ಎಂದು ಬಸವಣ್ಣ ಕೇಳಿದಾಗ ಬಸವ ನಿನ್ನ ಇಚ್ಛೆಯಂತೆ ಆಗಲಿ ಎಂದನು. ಅನಂತರ ಶುಭದಿನದಲ್ಲಿ ದೀಕ್ಷೆಯನ್ನು ಮಾಡಿಸಿ ಬಸವೇಶನಿಗೆ ವಿವಾಹ ಮಾಡಿಸಿದನೆಂದು ಕವಿಯ ಉಲ್ಲೇಖವಾಗಿದೆ. ಇಲ್ಲಿ ದೀಕ್ಷೆ ಜೊತೆಯಲಿ ಸಂಸ್ಕಾರ ಮುಖ್ಯ ಎಂದ ಬಸವಣ್ಣ ನಮ್ಮ ಗುರುಗಳು ಎಂದು ಹೇಳುತ್ತಾನೆ. ಆದರೆ ಗುರುಗಳ ಹೆಸರು ಬರುವುದಿಲ್ಲ. ಬಹುಶಃ ಹರಿಹರನ ಸಂಗಮದೇವರು ಇರಬಹುದು. ಯಾಕೆಂದರೆ ಬಸವಣ್ಣನವರೆ ತಮ್ಮ ವಚನದಲ್ಲಿ

"ಎನ್ನ ಗತಿಮತಿ ನೀನೆಕಂಡಯ್ಯಾ
ಎನ್ನ ಗುರು ಪರಮಗುರು ನೀನೆಕಂಡಯ್ಯ
ಎನ್ನಂತರಂಗದ ಜ್ಯೋತಿ ನೀನೆ ಕಂಡಯ್ಯಾ
ಕೂಡಸಂಗಮದೇವಾ"[೫೭]

ಈ ವಚನದಲ್ಲಿ ಹೇಳಿದಂತೆ ಸಂಗಮೇಶ್ವರನೆ ಗುರುಗಳು. ಹಾಗಾಗಿ ಎನ್ನ ಎಲ್ಲಾ ಯೋಗಕ್ಷೇಮ ನಿನ್ನದೆ, ಎನ್ನಂತರಂಗದ ಜ್ಯೋತಿ, ಜ್ಞಾನಕ್ಕೆ ಕಾರಣನು ನೀನೆ ಎಂದು ಬೇಡುವ ಪರಿಯಿಂದ ಇವರ ಗುರುಗಳು ಸಂಗಮೇಶ್ವರನೆಂದು ತೋರುತ್ತದೆ.

ಸಿಂಗಿರಾಜನು ತನ್ನ ಸಿಂಗಿರಾಜ ಪುರಾಣದಲ್ಲಿ "ನೀಲಲೋಚನೆ ಬಸವಗೀ ವೆನೆನುತುತ್ಸಾಹ ದಾಳಾಪದಲಿ ಪಟ್ಟವಧುವೆಂದು ಮದುವೆಯಂ ಮಾಡಿದನೃಪ ಬಸವಂಗೆ"[೫೮] ನೀಲಾಂಬಿಕೆ ಬಸವಣ್ಣನಿಗೆ ಶುಭದಿನದಂದು ವಿವಾಹ ಮಾಡಿದನು ಬಿಜ್ಜಳನೆಂದು ಕವಿ ಉಲ್ಲೇಖಿಸುತ್ತಾನೆ. ಇಲ್ಲಿ ಪಟ್ಟವಧು ಎಂದು ಕರೆದಿದ್ದು ಈಕೆ ರಾಜ್ಯಕನ್ಯೆ, ರಾಜಕುಮಾರಿಯಾಗಿದ್ದಾಳೆ, ಅರಮನೆ ಯಲ್ಲಿಯೇ ಬೆಳೆದಿದ್ದಕ್ಕಾಗಿ ಕರೆದೆನೋ? ಅಥವಾ ಬಿಜ್ಜಳ ತಂಗಿಯೆಂದು, ಕರೆದನೋ? ಬಹುಶಃ ಸಾಕು ತಂಗಿಯಾಗಿ ಸ್ವಂತ ತಂಗಿಯಂತೆ ಬೆಳೆದಿದ್ದರಿಂದ, ಹೀಗೆ ಕರೆದಿರಬೇಕು. ಹಾಗೆ ಬಸವಣ್ಣನವರಿಗೆ ಈಕೆಯನ್ನು ಯಾಕೆ ಮದುವೆ ಮಾಡಿದ? ಇದಕ್ಕೆ ಎ.ಗಾಯಿತ್ರಿ ಹೀಗೆ ಅಭಿಪ್ರಾಯಪಡುತ್ತಾರೆ. "ಅಲ್ಲಿ ದೊರೆತ ಲಿಪಿ ಓದಿ ಬಿಜ್ಜಳನಿಗೆ ಅಪಾರ ಐಶ್ವರ್ಯ ಲಭಿಸುವಂತೆ ಮಾಡುತ್ತಾರೆ. ಇದರಿಂದ ಬಸವಣ್ಣನವರ ಅಗಾಧ ಪಾಂಡಿತ್ಯ, ಪ್ರತಿಭೆಗಳಿಗೆ ಮನಸೋತ ಬಿಜ್ಜಳ

ತನ್ನ ಮತ್ತು ಬಸವಣ್ಣನವರ ಸ್ನೇಹ ಶಾಶ್ವತವಾಗಿರಲೆಂದು ಬಯಸಿ ತನ್ನ ಸೋದರಿಯಂತಿದ್ದ ನೀಲಲೋಚನೆಯನ್ನು ಬಸವಣ್ಣನಿಗೆ ಕೊಟ್ಟು ವಿವಾಹ ನೆರವೇರಿಸಿದನು."[೫೯]

ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ ಬಸವಣ್ಣ, ನೀಲಾಂಬಿಕೆಯ ಮದುವೆಯು

"ಸನಯದಿಂ ಹಿತವಾಗವೇಳ್ಕೆಂದು ಬಸವಂಗೆ
ಮನವೊಲಿದು ನೀಲಲೋಚನೆಯ ಮದುವೆಯ ಮಾಡಿ
ಜನರೆಲ್ಲ ಭಾವ ಮೈದುನರೆಂದು ಕೊಂಡಾಡೆ ನೃಪತಿ ವಿಶ್ವಾಸಿಸಿದನು"[೬೦]

ಗುರುರಾಜ ಚಾರಿತ್ರದಲ್ಲಿ ಬಸವಣ್ಣನ ಮಹಿಮೆಯನ್ನು ತಿಳಿದು ಬಲದೇವ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟರೆ, ಬಿಜ್ಜಳನು ಅರಮನೆಗೆ ಬರಮಾಡಿಕೊಂಡು, ತನುಜೆಯಾದ(ಸಾಕುತಂಗಿ) ನೀಲಾಂಬಿಕೆಯನ್ನು ಮದುವೆಯ ಮಾಡಿದನೆಂದು ಪ್ರಸ್ತಾಪ ಮಾಡುತ್ತಾನೆ. ಸಿಂಗಿರಾಜನು ಹೇಳಿದಂತೆ ಈತನ ಹೇಳಿಕೆಯಿದೆ. ಇವರಿಬ್ಬರ ಹೇಳಿಕೆಯಂತೆ ಚೆನ್ನಪ್ಪಕವಿ ತನ್ನ ಶರಣಲೀಲಾ ಮೃತದಲಿ ಪ್ರಸ್ತಾಪ ಮಾಡುತ್ತಾನೆ.

"ಎನ್ನ ಸೋದರಿ ನೀಲ। ಲೋಚನೆಯ ಬಸವಯ್ಯ
ಇನ್ನೂ ನಿಮಗಿತ್ತು ವಿ। ವಾಹ ಮಾಡುವೆನು"[೬೧]

ಎಂದು ಈಕೆಯ ವಿವಾಹವನ್ನು ಕುರಿತು, 'ಬಿಜ್ಜಳ ತನ್ನ ತಂಗಿಯನ್ನು ನಿಮಗಿತ್ತು ವಿವಾಹ ಮಾಡುವೆ' ಎಂದು ಬಸವಣ್ಣಗೆ ತಿಳಿಸಿದ ವಿವರವಿದೆ.

ಗರಣಿಯ ಬಸವಲಿಂಗ ಈತನು ಬಸವೇಶ್ವರ ಕಾವ್ಯವನ್ನು ರಚಿಸಿದ್ದಾನೆ. ಸಿಂಗಿರಾಜನ ಕಾವ್ಯದಲ್ಲಿ ಬಂದಂತೆ ಲಿಪಿಯ ಮುಖಾಂತರ ಹಾಗೂ ಸಿದ್ಧಣ್ಣ ಡಣ್ಣಾಯಕನ ಮಗಳು ನೀಲಲೋಚನೆಯನ್ನು ಮದುವೆಯಾದನು ಎಂದು ಈ ಕಾವ್ಯದಲ್ಲಿ ಉಲ್ಲೇಖವಾಗಿದೆ.

"ಎನಲೊಪ್ಪಿ ಬಸವೇಶನು ಚಲ್ವೆ ನೀಲಲೋ। ಚನೆಯ ಸಕಲ ಸಂಭ್ರಮದೆ
ವಿನಯದಿ ಮದುವೆಯಾದನು ಭೂಪಾಲನ। ಮನಕೆ ಸಂತೋಷವಪ್ಪಂತೆ"[೬೨]

ಬಿಜ್ಜಳನ ಮಾತಿನಂತೆ ಸುಂದರಳು ಹಾಗೂ ವಿನಯಶೀಲಳು ಆದ ನೀಲಲೋಚನೆಯನ್ನು ಬಸವೇಶ ವಿವಾಹ ಆಗಬೇಕು ಮರುಮಾತನಾಡದೆ ವಿನಯದಿ ಮದುವೆಯಾಗಲು ಒಪ್ಪಿದ ಸಂತೋಷದಿಂದ ಮದುವೆಯಾಯಿತು ಎಂದು ಕವಿ ಉಲ್ಲೇಖಿಸುತ್ತಾನೆ. ಆದರೆ ಈ ಕಾವ್ಯದಲ್ಲಿಯ ಪದ್ಯಗಳು ಸರಳವಾಗಿ ಅರ್ಥೈಸುವುದರಿಂದ ಸಿಂಗಿರಾಜ ಸಿದ್ಧನಂಜೇಶರಂತೆ ವ್ಯಕ್ತಪಡಿಸಿ ಸಿದ್ಧರಸನ ಮಗಳು ಬಿಜ್ಜಳನ ಸಾಕುತಂಗಿಯೆಂದು ತಿಳಿಸುವುದರೊಂದಿಗೆ ಸತ್ಯಸುಶೀಲ ಎಂದು ಸಿದ್ಧರಸನನ್ನು ಕರೆದಿದ್ದು ಯಾಕೆ? ಸೂಕ್ಷ್ಮವಾಗಿ ಗಮನಿಸಿದಾಗ ನೀಲಾಂಬಿಕೆಯ ತಂದೆಯ ಪ್ರಾಮಾಣಿಕತೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಕವಿಕಾಡ ವಿರಚಿತ ಬಸವಶಿವಾಮಣಿಯಲ್ಲಿಯೂ ಗರಣಿಯ ಬಸವಲಿಂಗನಂತೆ, ಲಿಪಿ, ದ್ರವ್ಯ, ಅನಂತರ ಬಿಜ್ಜಳ ನೀಲಾಂಬಿಕೆಯನ್ನು ಬಸವಣ್ಣನಿಗೆ ಕೊಡುವ ನಿರ್ಧಾರ ಅದಕ್ಕಿಂತ ಪೂರ್ವದಲ್ಲಿ ಈಕೆಗೆ ಲಿಂಗದೀಕ್ಷೆಯಾಗಬೇಕು ಎಂದಾಗ ಇದನ್ನು ವಿರೋಧ ಮಾಡದೆ ನಿನ್ನ ಇಚ್ಛೆಯಂತೆಯೆಂದು ನೀಲಾಂಬಿಕೆಗೆ ಶಿವದೀಕ್ಷೆಯನ್ನು ಮಾಡಿಸುವ ಉಲ್ಲೇಖ ಈ ಕೆಳಗಿನಂತಿದೆ.

"ಲಿಂಗಕ್ಕೆ ಅಷ್ಟ ವಿದಾರ್ಚನೆಯನು ಗುರು। ಸಂಗಮೇಶ್ವರ ತಾನೋಡಿ
ಜಂಗಮ ತೀರ್ಥ ಪ್ರಸಾದವನರ್ಪಿಸಿ ಮಂಗಳಮಯ ಶಿವನೊಲಿದು"[೬೩]

ಹೀಗೆ ನೀಲಾಂಬಿಕೆ ಲಿಂಗಕ್ಕೆ ಪೂಜಿಸಿದಳು ಹಾಗೂ ಗುರುಸಂಗಮೇಶ್ವರರು ತೀರ್ಥ ಪ್ರಸಾದವನ್ನು ಕರುಣಿಸಿ ಆಶೀರ್ವದಿಸಿದರು ಎಂದು ಉಲ್ಲೇಖಿಸುತ್ತಾ, ವೀರಶೈವ ಪ್ರಸಾದವನ್ನು ಸ್ವೀಕರಿಸಿದ, ವಿವಾಹದ ಸಿದ್ಧತೆ ಮಾಡಿದ, ಭವ್ಯ ಮೆರವಣಿಗೆ, ಅಲಂಕಾರ ಮುಂತಾದ ರೀತಿಯಲ್ಲಿ ವಿವಾಹ ವರ್ಣನೆ ಬರುತ್ತದೆ. ನೀಲಾಂಬಿಕೆ ಬಸವಣ್ಣ ವಿವಾಹ ಜರುಗಿ ಅವರು ಬರುವುದನ್ನು "ಸತಿ ಪುರುಷರು ಕೂಡಿಬರುತಿರೆ ಇವರು ಪಾ। ರ್ವತಿ ಪರಮೇಶರಂದದಲಿ"[೬೪] ಎಂದು ಈ ಕಾವ್ಯದ ಪದ್ಯದಲ್ಲಿ ಬಸವಣ್ಣ ನೀಲಾಂಬಿಕೆಯರು ಪಾರ್ವತಿ ಪರಮೇಶ್ವರರಂತೆ ಎಂದು ಕವಿ ಹೋಲಿಸುತ್ತಾನೆ.

ಗುರುಲಿಂಗದೇಶಿಕ ವಿರಚಿತ ಲಿಂಗಪುರಾಣದಲ್ಲಿ ಬಸವಣ್ಣ ವೈಭವದಿಂದ ಅಂದರೆ "ಜವದಿ ಮಂಗಳವಾಡಕೆಯ್ದಿ ಬರೆಸಿಂಗರಸಿ"[೬೫] ಮಂಗಳವಾಡದಲ್ಲಿ ಭವ್ಯವಾದ ಉತ್ಸವದೊಂದಿಗೆ ಬಿಜ್ಜಳ ಬರಮಾಡಿಕೊಂಡು "ಬಿಜ್ಜಳನ ಓಲಗದಲ್ಲಿ ಬಸವನಿರಲು ಆಕಾಶದಿಂದ ಲಿಪಿಯೊಂದು ಬಿದ್ದಿತು. ಅದನ್ನು ಸೇನಭೋವರ ಕೈಯಲ್ಲಿ ಕೊಡಲು ಕನ್ನಡ, ದ್ರಾವಿಡ, ಆಂಧ್ರ, ಹಿಮೋಜಪದ, ಪಿಶಾಚದೇವ ನಂದಿನಾಗರ ಪಾರ, ಗುಹ್ಯಸೌರಾಷ್ಟ್ರ, ಕನ್ನೋಜ ಗ್ರಂಥಲಿಪಿ ಅಲ್ಲ ಎಂದು ಹೇಳುತ್ತಾ ನೆರೆದಿದ್ದವರಲ್ಲಿ ಯಾರೂ ಓದದಾದರು. ಬಿಜ್ಜಳನು ಬಸವಣ್ಣನನ್ನು ನೋಡಿದನು, ಅಲ್ಲಿದ್ದ ಕಾಳಿಮರಸನು ಕುತ್ಸಿತದಿಂದ ಬಸವ ಬಲ್ಲನೆಂದನು."[೬೬] ಎಂದು ಜಿ.ಜಿ.ಮಂಜುನಾಥ ಪೀಠಿಕೆಯಲ್ಲಿ ಅಭಿಪ್ರಾಯಡುತ್ತಾರೆ. ಈ ಕಾವ್ಯದಲ್ಲಿ ಭಾಷೆಗಳ ಕುರಿತು ಕಾಣುತ್ತೇವೆ. ಹಾಗೆ ಲಿಪಿಯನ್ನು ಬಸವ ಓದುತ್ತಾನೆ ಎಂದದ್ದು ಸಾಕಷ್ಟು ದ್ರವ್ಯ ಸಿಕ್ಕಿದ್ದು ಕಾಣಬಹುದು. ಮತ್ತು ಹಿಂದೆ ಚರ್ಚೆ ಮಾಡಿದ ಕೆಲವು ಕವಿಗಳು ಈಕೆಯ ತಂದೆ, ತಾಯಿ ಬಗ್ಗೆ ಹಾಗೂ ಲಿಪಿಯನ್ನು ಕುರಿತು ಹೇಳುತ್ತಿದ್ದರು. ಆದರೆ ಇಲ್ಲಿ ಬಿಜ್ಜಳನ "ಪೆರ್ಮಾಡಿಯ ಪೂರ್ವಜನಾದ ಕುಂಭಜನಂ"[೬೭] ಹೆಸರನ್ನು ಸೂಚಿಸಿ, ಈತನು ಗಳಿಸಿದ್ದು ಎಂದು ಹೇಳಿದ ನಂತರ ಸಂಪತ್ತನ್ನು ನೋಡಿದ ಬಿಜ್ಜಳ ಸಂತೋಷಗೊಂಡು ತನ್ನ ತಂಗಿಯನ್ನು ಬಸವಣ್ಣನಿಗೆ ಕೊಟ್ಟು ಮದುವೆ ಮಾಡಿದ ಉಲ್ಲೇಖವಿದೆ.

"ನೆಟ್ಟನೆ ವಿಲಾಸದಿಂ ಸುಪ್ರಧಾನಿಕೆಗರುಹ
ಪಟ್ಟಮಂ ಬಸವ ಬಲ್ಲಹಗೆ ಪರಮೋತ್ಸಾಹದಿ
ಕಟ್ಟಿ ತನ್ನನುಜೆ ನೀಲಾಂಬಿಕೆಯ ಪರಿಣಮಿಸಿ ಕೊಟ್ಟು
ವೈವಾಹಗೈದು...."[೬೮]

ಇಲ್ಲಿ ಬಸವನಿಗೆ ಪ್ರಧಾನಿ ಪಟ್ಟವನ್ನು ಕಟ್ಟಿ ಬಸವನಿಗೆ ತನ್ನ ತಂಗಿ ನೀಲಾಂಬಿಕೆಯನ್ನು ಕೊಟ್ಟು ವಿವಾಹ ಮಾಡಿದನೆಂದು ಕವಿ ಉಲ್ಲೇಖಿಸುತ್ತಾನೆ. ಆದರೆ ಕಾವ್ಯದಲ್ಲಿ ಮಂಗಳವೇಡಿಯಲ್ಲಿ ಭವ್ಯವಾದ ಮೆರವಣಿಗೆ ಆಯಿತು ಎನ್ನುವುದರಿಂದ ಇಲ್ಲಿಯೇ ಮದುವೆಯಾಗಿರಬಹುದೆಂದು ಹೇಳುವ ಸಾಧ್ಯತೆ ಇದೆ. ಸಿಂಗಿರಾಜ, ಸಿದ್ಧನಂಜೇಶ ಕವಿಕಾಡ, ಗರಣಿಯ ಬಸವಲಿಂಗರಂತೆ ಹೇಳದೆ ಲಕ್ಕಣ್ಣ ದಂಡೇಶನ ಹಾದಿಯನ್ನೆ ಕವಿಯು ಕಂಡುಕೊಂಡಿದ್ದಾನೆ. ನೀಲಾಂಬಿಕೆಯ ಹೆಸರನ್ನು ಸೂಚಿಸಿದ್ದು, ಹಾಗೂ ಪ್ರಧಾನಿ ಪಟ್ಟಕಟ್ಟಿದ ಮೇಲೆ ವಿವಾಹ ಮಾಡಿದ್ದು, ನೋಡಿದರೆ ಬಸವಣ್ಣನ ವ್ಯಕ್ತಿತ್ವಕ್ಕೆ ನೀಲಾಂಬಿಕೆಯೇ ಮಾರುಹೋಗಿರಬೇಕು ಎಂದು ಊಹಿಸಬಹುದು. ಹಾಗೆ ಬಸವ ಪವಾಡದಲ್ಲಿ "ಮಡದಿಯನೊಡಗೊಂಡು ತೆರಳಿದ ಬಸವ ಕಪ್ಪಡಿಯ ಸಂಗಮ ನೆಡೆದಾಗ"[೬೯] ಲಿಪಿಯನ್ನು ಓದಿ ನೀಲಾಂಬಿಕೆಯನ್ನು ಮದುವೆಯಾದನು ಎಂದು ಬರುತ್ತದೆ.

ಈ ಮೇಲಿನ ಚರ್ಚೆಗಳನ್ನು ಆಧರಿಸಿ ನೀಲಾಂಬಿಕೆಯ ಜನ್ಮ, ಜನ್ಮಸ್ಥಳದ ಬಗ್ಗೆ ನಿಖರವಾದ ಮಾಹಿತಿ ಒದಗಿಬರುವುದಿಲ್ಲ, ಹರಿಹರ, ಭೀಮಕವಿಯಿಂದ ಹಿಡಿದು ಚಾಮರಸನವರೆಗೆ ಜನನ, ಬಾಲ್ಯದ ವಿಚಾರಗಳು ಬರುವುದಿಲ್ಲ ಆದರೆ ಲಕ್ಕಣ್ಣ ದಂಡೇಶನ ಸಿಂಗಿರಾಜ, ಸಿದ್ಧನಂಜೇಶ, ಗುರುಲಿಂಗದೇಶಿಕ ಮುಂತಾದ ಕವಿಗಳು ಈಕೆಯ ಜನನ, ಬಾಲ್ಯದ ಬಗ್ಗೆ ಹೇಳುತ್ತಾರೆ. ಹಾಗೂ ತಂದೆ ಸಿದ್ಧರಸ ಪದ್ಮಗಂಧಿ, ನೀಲಾಂಬಿಕೆ ನಮಗೆ ಸಾಕುತಂಗಿಯೆಂದು ಸಿಂಗಿರಾಜ ಹೇಳಿದರೆ, ಲಕ್ಕಣ್ಣದಂಡೇಶ, ಗುರುಲಿಂಗದೇಶಿಕ ಬಿಜ್ಜಳನ ತಂಗಿಯೆಂದು ಹೇಳುತ್ತಾನೆ. ಈ ಚರ್ಚೆಗಳಿಂದ ನೀಲಾಂಬಿಕೆ ತಂದೆ, ತಾಯಿ, ಸಿದ್ಧರಸ ಪದ್ಮಗಂಧಿಯರೆ. ಈಕೆಯ ಜನ್ಮಸ್ಥಳ ಮಂಗಳವೇಡಿಯೆಂದು, ಸಾಕುತಂಗಿ ಎನ್ನಲು ಅತಿಯಾದ ಪ್ರೇಮವೇ ಕಾರಣ. ಬಿಜ್ಜಳನ ತಮ್ಮನನ್ನು ಈಕೆಯ ತಾಯಿ ಕಾಪಾಡಿದರೆ, ಈಕೆಯ ತಂದೆ ರಾಜ್ಯ ಕಾಪಾಡಿದ್ದಾನೆ ಎಂಬ ಭಾವನೆಯೂ ಇರಬೇಕು. ಆದ್ದರಿಂದ ಸಾಕುತಂಗಿಯೆಂದು ರಕ್ಷಣೆಯ ಜೊತೆ ವಿವಾಹದ ಜವಾಬ್ದಾರಿಯನ್ನು ಹೊತ್ತಿರಬೇಕು.

ಮದುವೆಯ ವಿಚಾರಕ್ಕೆ ಬಂದರೆ ಹರಿಹರ ಒಂದೇ ವಾಕ್ಯದಲ್ಲಿ ಗಂಗಾಂಬಿಕೆ ಮಾಯಿದೇವಿಯರ ವಿವಾಹ ನಡೆಯಿತು ಎನ್ನುತ್ತಾನೆ. ಮುಂದಿನ ಭೀಮಕವಿ, ಸೋಮನಾಥ, ಷಡಕ್ಷರಿ, ಗಂಗಾಂಬಿಕೆ ವಿವಾಹ ಪ್ರಸ್ತಾಪ ಮಾಡುತ್ತಾರೆ. ಆದರೆ ತಮ್ಮ ಕಾವ್ಯದಲ್ಲಿ ಮಾಯಿದೇವಿಯ

ಹೆಸರನ್ನು ಪ್ರಸ್ತಾಪ ಮಾಡುತ್ತಾರೆ. ವಿನಃ ವಿವಾಹದ ಬಗ್ಗೆ ಹೇಳುವುದಿಲ್ಲ. ಅದರಂತೆ ಲಕ್ಕಣ್ಣದಂಡೇಶ, ಸಿಂಗಿರಾಜ, ಸಿದ್ಧನಂಜೇಶ ಮದುವೆಯ ಬಗ್ಗೆ ಕಥೆಯನ್ನು ಪೋಣಿಸಿ ವಿವಾಹವಾಯಿತು

**ಆ. ಬಸವಣ್ಣನ ಜೀವನದಲ್ಲಿ ಬಂದ ನಂತರ ಕಲ್ಯಾಣದವರೆಗೆ**

ನೀಲಾಂಬಿಕೆ ಇತರ ಶರಣ-ಶರಣೆಯರಿ ಗಿಂತಲೂ ಭಿನ್ನವಾಗಿ ನೋಡಬಹುದಾಗಿದೆ. ವಚನಕಾರ್ತಿಯರಲ್ಲಿ ಅಕ್ಕಮಹಾದೇವಿಯನ್ನು ಬಿಟ್ಟರೆ ೨ನೇ ಸ್ಥಾನದಲ್ಲಿ ಕವಿಗಳ ಕಾವ್ಯ ಪುರಾಣಗಳಲ್ಲಿ ಕಾಣುತ್ತೇವೆ. ಮೌಖಿಕ ಸಾಹಿತ್ಯವು ಈಕೆಯನ್ನು ಮನತುಂಬಿ ಹಾಡಿದೆ ಎನ್ನಬಹುದು.

"ನೀಲಾಂಬಿಕೆ ಬಸವಣ್ಣನವರ ದಾಂಪತ್ಯ ಜೀವನ ಸರಳತೆಯಿಂದ ಕೂಡಿದ್ದುದಾಗಿದೆ. ಹಾಗೂ ಇವರಿಗೆ ಬಾಲಸಂಗಯ್ಯ ಎಂಬ ಮಗನಿದ್ದನು. ಹಾಗೆ ಬಸವಣ್ಣನ ಮನೆ ಮಹಾಮನೆಯಾಗುವಲ್ಲಿ ಈಕೆಯ ಶ್ರಮವು ಕೂಡ ಇದೆ"[೨೦] ಎಂದು ಗುಂಬೀಶಂ ತಿಳಿಸಿದರು. "ಈಕೆಯು ಮಹಾಮನೆಯ ಕಾರ್ಯಭಾರ ಹಾಗೂ ಜಂಗಮಸೇವೆ ಮಹತ್ವದ್ದಾಗಿದೆ ಮತ್ತು ಈಕೆಯ ಜೀವನದಲ್ಲಿ ನಡೆದ ಓಲೆಯ ಪ್ರಸಂಗದಿಂದ ಆಭರಣಗಳ ವ್ಯಾಮೋಹ ಇಲ್ಲವಾಯಿತು. ಜೊತೆಗೆ ಬಸವನಿಷ್ಠಳು ಆಗಿದ್ದಾಳೆ"[೨೧] ಎಂದು ಅಲ್ಲಮಪ್ರಭು ಬೆಟ್ಟದೂರ ತಿಳಿಸಿದರು.

ಎಚ್.ಎಸ್.ಪಾಟೀಲರು "ಈಕೆ ಬಸವನ ಕೀರ್ತಿಯಲ್ಲಿ ಪಾಲುದಾರಳು ಎಂಬ ಮಾತು ಹೇಳಿ, ಈಕೆಯ ಬಗೆಗೆ ಕಾವ್ಯ ಪುರಾಣಗಳಲ್ಲಿ ಕವಿಕಲ್ಪಿತ ಬಹಳಷ್ಟು ಒಳಗೊಂಡಿದೆ. ಸತ್ಯಾಂಶವನ್ನು ತಿಳಿಸಿ, ಅಲ್ಲದೆ ಬಾಲಸಂಗಯ್ಯ ಎಂಬ ಮಗನಿದ್ದುದು ನಿಜವೆನ್ನಬಹುದು. ಆದರೆ ಬಹಳ ದಿನ ಬದುಕಿದ್ದು ಕಾಣುವುದಿಲ್ಲ"[೨೨] ಎಂದು ಅಭಿಪ್ರಾಯಪಟ್ಟರು. ಚೆನ್ನವೀರ ಕಣವಿಯವರು "ನೀಲಾಂಬಿಕೆಯಿಂದ ಕಲ್ಯಾಣ ನಾಡಿಗೆ ಹೊಸಚಿತ್ರಣ ತುಂಬಿದಂತಿದೆ. ಯಾಕೆಂದರೆ ಬಿಜ್ಜಳನ ಸಾಕುತಂಗಿಯಾಗಿರಬಹುದು. ಮಹಾಮನೆ ಸೇವಾಭಾವನೆಯನ್ನು ಹೊಂದಿದ ಸದ್ವಿನಯ ತುಂಬಿದ ಕೊಡ ನೀಲಾಂಬಿಕೆ"[೨೩] ಎಂದು ತಿಳಿಸಿದರು. ಡಾ.ಎಂ.ಎಂ.ಕಲ್ಬುರ್ಗಿ ಯವರು "ಈಕೆಯ ದಾಂಪತ್ಯ ಜೀವನ ಕಲ್ಯಾಣದಲ್ಲಿ ನಡೆಯಿತು. ಈಕೆಗೆ ಬಾಲಸಂಗಯ್ಯ ಎಂಬ ಮಗನಿರಬೇಕು. ಮಹಾಮನೆ ಜವಾಬ್ದಾರಿಯನ್ನು ಪೂರೈಸುವಂತವಳು. ಹಾಗಾಗಿ ಸಮಕಾಲೀನ ಶರಣರು ಹಾಗೂ ಕಾವ್ಯ ಪುರಾಣಗಳಲ್ಲಿ ಈಕೆಯ ವ್ಯಕ್ತಿತ್ವವನ್ನು ಕಾಣಬಹುದು"[೨೪] ಎಂದು ತಿಳಿಸಿದರು. ಹಾಗೂ ಇವರ ಅಭಿಪ್ರಾಯಕ್ಕೆ ಪೂರಕವಾಗಿ ಶಿವಲಿಂಗಮ್ಮ ಕಟ್ಟಿ, ಎಸ್.ಆರ್.ಗುಂಜಾಳ ಮುರಾಘ ಶರಣರು ಮುಂತಾದ ವಿದ್ವಾಂಸರು ನೀಲಾಂಬಿಕೆಯ ವ್ಯಕ್ತಿತ್ವ ಹಾಗೂ ಮಹಾಮನೆಯ ಕಾರ್ಯವೈಖರಿಯನ್ನು ತಮ್ಮ ಅಭಿಪ್ರಾಯದಲ್ಲಿ ಹೇಳಿದರು.

ಬೀದರ್ ಜಿಲ್ಲೆ ಬಸವಕಲ್ಯಾಣ ಕ್ಷೇತ್ರ ಕಾರ್ಯದಲ್ಲಿ ಅಲ್ಲಿನ ಅನುಭವ ಮಂಟಪದ ನೀಲಮ್ಮನವರು ಮಹಾಮನೆಯ ಎಲ್ಲ ಕಾರ್ಯಭಾರ ಅವರದ್ದಾಗಿತ್ತು. ಬಸವಣ್ಣ ನೀಲಮ್ಮರ

ಬದುಕು ಆದರ್ಶವಾದದ್ದು ಎಂದು ತಿಳಿಸಿದರು. ಗುಹೇಶ್ವರ ಸ್ವಾಮಿಜಿ ಮಂಠಾಳ ಇವರು ಬಸವಣ್ಣನವರ ಅರಿವಿನ ಮನೆ ಹಾಗೂ ನೀಲಮ್ಮನ ಗುಹೆ ತೋರಿಸಿ ಈಕೆ ಈ ಗುಹೆಯಲ್ಲಿ ಲಿಂಗಪೂಜೆ ಮತ್ತು ಶಿವಯೋಗವನ್ನು ಮಾಡಿ ಈ ಲಿಂಗನಿಷ್ಠೆಯಿಂದ ಕೂಡಿದವಳು ಎಂದು ತಿಳಿಸಿದರು. ಈ ಗುಹೆ ಹತ್ತಿರದಲ್ಲಿ ಮಲ್ಲಮ್ಮ ತಾಯಿಯವರನ್ನು ಕಂಡಾಗ ನೀಲಮ್ಮ ಬಸವಣ್ಣ ಆದರ್ಶ ದಂಪತಿಗಳು ಎಂದು ತಿಳಿಸಿದರು.

ನೀಲಾಂಬಿಕೆ ಗವಿ ಪಕ್ಕದಲ್ಲಿ ಗಂಗಾಂಬಿಕೆ, ನಾಗಲಾಂಬಿಕೆ ಗವಿಗಳಿವೆ. ಇಲ್ಲಿ ಅಕ್ಕ ನಾಗಲಾಂಬಿಕೆ ಬಳಗವೆಂದು ಮಹಿಳೆಯರ ಗುಂಪು ಸತ್ಸಂಗವನ್ನು ಮಾಡುತ್ತಾರೆ. ಇವರನ್ನು ಭೇಟಿಯಾದಾಗ ನೀಲಾವತಿ ಇಸ್ಲಾಂಪುರ ಎನ್ನುವವರು ನೀಲಾಂಬಿಕೆ ಬಸವಣ್ಣನಿಗೆ ತಕ್ಕ ಸತಿ ಆಕೆಯನ್ನು ಕುರಿತು ರಚನೆಯಾದ ತ್ರಿಪದಿಗಳನ್ನು ಹಾಡುತ್ತಾ, ಈಕೆಯ ದಾಂಪತ್ಯ ಜೀವನ, ಕೊನೆಗೆ ಮಗು ಸಾವನ್ನು ಅಪ್ಪಿದಾಗ ಅಕೆಯು ಬಹಳ ದುಃಖಪಟ್ಟಳು, ಈಕೆಯು ಸರಳ ಸ್ವಭಾವದ ವ್ಯಕ್ತಿತ್ವದಿಂದ ಕೂಡಿದವಳು ಎಂದು ತಿಳಿಸಿದರು. ಹಾಗೆ ಇನ್ನುಳಿದ ತಾಯಿಂದಿರು ಸೇರಿ ಚೆನ್ನವೀರ ಕಣವಿಯರು ರಚಿಸಿದ ಸದುವಿನಯ ತುಂಬಿದ ಕೊಡ ತಂದಳು ನೀಲಾಂಬಿಕೆ ಈ ಕವಿತೆಯನ್ನು ಹಾಡಿದರು. ಹಾಗೆ ಹಿರಿಯರಾದ ಮಲ್ಲಮ್ಮತಾಯಿ ಬಸಪ್ಪಕೋಲ ಶೆಟ್ಟರ್ ಈ ತಾಯಿ ಅರುವಿನ ಮಗಳು, ಈಕೆ ಸದಾ ಬಡವರ ಬಗ್ಗೆ, ದೀನದಲಿತರ ಬಗ್ಗೆ ಕರುಣೆ ತೋರಿದಾಕೆ, ಈಕೆಯ ಬಗ್ಗೆ ನಮ್ಮ ಹಿರಿಯರು ನಮಗೆ ಕಥಾ ಹಂದರವಾಗಿ ಬಸವಣ್ಣನವರ ಜೀವನ ಚರಿತ್ರೆ ಹೇಳುವ ಸಂದರ್ಭದಲ್ಲಿ ಈಕೆಯ ದಾಸೋಹಂಭಾವ ಹಾಗೂ ಈಕೆಯು ರಚಿಸಿದ(ಸ್ವರವಚನಗಳು) ಹಾಡುಗಳನ್ನು ಹಾಡಲು ಹೇಳಿಕೊಡುತ್ತಿದ್ದರು ಎಂದು ತಿಳಿಸಿದರು. ಹಾಗೆ ಮಲ್ಲಮ್ಮ ತಾಯಿ ಮುಂದುವರೆದು, ಗಂಗಾಂಬಿಕೆ, ನೀಲಾಂಬಿಕೆ ಒಟ್ಟಾಗಿ ಮಹಾಮನೆಯ ಕಾರ್ಯವನ್ನು ಮಾಡುತ್ತಿದ್ದರು. ಹಾಗೂ ನೀಲಮ್ಮಳಿಗೆ ಬಾಲಸಂಗಯ್ಯ ಎನ್ನುವ ಮಗು ಇತ್ತು, ಅದು ತೀರಿತು ಎಂದು ಆಡುಭಾಷೆಯಲ್ಲಿ ಹೇಳಿದರು. ಈ ಮೇಲಿನ ಅಭಿಪ್ರಾಯಗಳು ಕ್ಷೇತ್ರಕಾರ್ಯದಲ್ಲಿಯ ಸ್ಥಳಗಳಲ್ಲಿ ಹಾಗೂ ವಿದ್ವಾಂಸರ ಸಂದರ್ಶನದ ಅಭಿಪ್ರಾಯಗಳಾಗಿವೆ.

ನೀಲಾಂಬಿಕೆ ಬಸವಣ್ಣನವರ ದಾಂಪತ್ಯ ಜೀವನ ಹೇಗಿತ್ತು ಎಂಬುದನ್ನು ಎಸ್.ಎಸ್.ಭೂಸರಡ್ಡಿಯವರ ಮಹಾಶರಣೆ ನೀಲಾಂಬಿಕೆ ಪುಸ್ತಕದಲ್ಲಿ ಸಂಪಾದನೆ ಮಾಡಿರುವ ನೀಲಮ್ಮನ ತ್ರಿಪದಿ ಈಕೆಯು ದೈವಾಂಶ ಸಂಭೂತಳು ಎಂಬುವ ರೀತಿಯಲ್ಲಿ ಆಕೆಯ ಕೃಪೆ ಎನಗಿರಲಿ ಎಂದು ಹೇಳುತ್ತದೆ. ಇಲ್ಲಿ ಸುಮಾರು ೫೬ ಪದ್ಯಗಳಿದ್ದು ಅದರಲ್ಲಿ ಈಕೆಯ ದಾಂಪತ್ಯದ ಬಗ್ಗೆ ಹೇಳುವ

"ಅಪ್ರತಿಮ ಲಿಂಗದೊಳು ಸೊಪ್ಪಡಗಿ ನಿಂದ
ಎನ್ನಪ್ಪ ಬಸವೇಶನರ್ಧಾಂಗಿ ನೀಲಮ್ಮ
ತಪ್ಪದಲೆ ಎನಗೆ ಕೃಪೆಯಾಗು"[೫೫]

ಈ ಪದ್ಯಲ್ಲಿ ಈಕೆಯನ್ನು ಅಪ್ರತಿಮ ಲಿಂಗದೊಳು ಎಂದರೆ ಲಿಂಗಪೂಜೆಯಲ್ಲಿ ತಲ್ಲೀನರಾದರೆ ನೀನೆ ಅಪ್ರತಿಮಳು ಅಂತಹ ಎನ್ನಪ್ಪ ಬಸವೇಶನ ಅರ್ಧಾಂಗಿ ನೀಲಮ್ಮ ತಪ್ಪದಲೆ ಎನಗೆ ಕೃಪೆ ಮಾಡು. ಅಂದರೆ ಭಕ್ತಿಭಾವ ಜೊತೆಗೆ ಬಸವಣ್ಣನ ಪ್ರತಿಯೊಂದು ಕಾರ್ಯದಲ್ಲಿ ಭಾಗವಹಿಸಿ ತನ್ನದೆಯಾದ ಕರ್ತವ್ಯಗೈದವಳು ಆದ್ದರಿಂದ ನಿನ್ನ ಗುಣ ನನಗೆ ಬರಲೆಂದು ಈಕೆಯನ್ನು ಕುರಿತು ಈ ತ್ರಿಪದಿ ಹೇಳುತ್ತದೆ.

ನೀಲಾಂಬಿಕೆ ಅರಮನೆಯಲ್ಲಿ ಬೆಳೆದಾಕೆ, ಆಕೆ ಬಸವಣ್ಣನ ಮನೆಗೆ ಬಂದಾಗ ಈತನಿಗೆ ಚ್ಯುತಿ ಬರದ ಹಾಗೆ ನಡೆಯುವುದು ಬಹಳ ಮುಖ್ಯ ಎಂಬುದನ್ನು ಅರಿತಿದ್ದಳು ಎಂಬುದನ್ನು ಇಲ್ಲಿ ನೋಡಬಹುದು. ಹಾಗೆ ಮಹಾಮನೆಯ ಸೇವೆಯನ್ನು ಹಾಗೂ ಈಕೆಯ ವ್ಯಕ್ತಿತ್ವವನ್ನು ಉಲ್ಲೇಖಿಸುವ

"ಆದಾವ ಮುಕ್ಕಿಗೆ ನಾನ್ಯಾರ ಹಾಡಲಿ
ರಾಜ್ಯಾವ ಸಲುವಾ ಬಸವಣ್ಣ ನ್ಹೇಣತಿ
ನೀಲವ್ವ ನಿನ ಹಾಡಿ ನಿಲಸೇನ"[೨೬]

ಹಳ್ಳಿಯ ಗರತಿ ಜೋಳವನ್ನು ಬೀಸುತ್ತಾ, ನಾ ಯಾರ ಬಗ್ಗೆ ಹಾಡಲಿ ರಾಜ್ಯವಾ ಸಲುವಾ ಅಂದರೆ ಮಹಾಮನೆಯ ಸೇವೆಯನ್ನು ಮಾಡುವಂತ ತಾಯಿಯನ್ನು ನೋಡಿ ಬಡವ ಬಲ್ಲಿದವರಿಗೆ ಅನ್ನಾವ ಹಾಕುವಂತ ಬಸವಣ್ಣ ಹೆಂಡ್ತಿಯನ್ನು ನೆನೆಯಬೇಕು ಹಾಗೂ ಆಕೆಯ ಹೆಸರಿನೊಂದಿಗೆ ನಮ್ಮ ಹಾಡನ್ನು ನಿಲ್ಲಿಸಬೇಕು ಎಂಬುದನ್ನು ಈ ಜನಪದದಲ್ಲಿ ಕಾಣುತ್ತೇವೆ.

"ಶರಣರು ಹಸಿದಾರು ಶರಣೆ ನೀ ಎಡೆಮಾಡೆ
ಸರಳಿ ಪಾಯಿಸ ತಿಳಿದುಪ್ಪ ನೀಲಮ್ಮ
ಶರಣೆ ಜಂಗಮಕೆ ಎಡೆಮಾಡೆ
ಅಡಿಗೇಯ ಅರಮನೆಗೆ ನೀ ಬಾರ ನೀಲಮ್ಮ
ತಡವಾದವು ಶಿವಪೂಜೆ । ಅಲ್ಲಿರುವ
ಮುದ್ದು ಜಂಗಮರು ಹಸಿದಾರು"[೨೭]

ನೀಲಾಂಬಿಕೆಯು ಮಹಾಮನೆಯಲ್ಲಿ ಸೇವೆಯನ್ನು ಹೇಗೆ ಮಾಡುತ್ತಿದ್ದಳು ಆಕೆಯಿಂದ ಜಂಗಮರ ಸೇವೆ ನಡೆಯುತ್ತಿತ್ತು ಎಂಬುದನ್ನು ಈ ಜನಪದ ಸಾಹಿತ್ಯದಲ್ಲಿ ಗಮನಿಸಬಹುದು. ಶರಣರು ಹಸಿದಿದ್ದಾರೆ ಶರಣೆ ನೀ ಅವರಿಗೆ ಎಡೆಮಾಡು. ಹಿತವಾದ ಪಾಯಸ ತುಪ್ಪ ನೀಡಿ ಜಂಗಮಕ್ಕೆ ಪ್ರಸಾದ ಮಾಡಿಸುವ ಬಗೆಯನ್ನು ತಿಳಿಸಿ ಅಡಿಗೆಯ ಮನೆಗೆ ನೀ ಬಂದು ನೋಡು

ಇಲ್ಲಿ ಶಿವಪೂಜೆ ಮುಗಿಯಿತು. ಮುದ್ದು ಜಂಗಮರು ಹಸಿದಾರೆ ಎಂಬುವಂತ ಈ ಪದ್ಯದ ಮುಖಾಂತರ ಈಕೆಯ ಮಹಾಮನೆಯ ಕಾರ್ಯವನ್ನು ಜನಪದ ತಿಳಿಸುತ್ತದೆ.

"ನೀಲವ್ವ ನೀ ಬಾರ, ನೀಲಲೋಚನೆ ಬಾರ
ನೀನೆನ್ನ ಮನೆಗೆ ಇರಬಾರ । ಸೋಮಾರ
ಹಾಲಿಗೆ ಹೆಪ್ಪು ಕೊಡಬಾರ"[೨೮]

ಈ ಪದ್ಯವನ್ನು ಗಮನಿಸಿದಾಗ ನೀಲವ್ವ ನೀ ಬಾರ, ಎಮ್ಮ ಮನೆಯಲ್ಲಿ ಇರುವಂತೆ ಸೋಮವಾರ ಹಾಲಿಗೆ ಹೆಪ್ಪು ಕೊಡು ಬಾ ಎಂದು ಕರೆಯುತ್ತಾರೆ. ಇಲ್ಲಿ ತಿಳಿಯಬಹುದು ನಿನ್ನಂತ ಸುಖ ಸಂಸಾರ ಹೆಪ್ಪು ನೀಡು ಎಂದು ಈ ಜನಪದ ಹೇಳುವ ಸಾಧ್ಯತೆ ಇದೆ. ಹಾಗಾಗಿ ಸಂತಸದ ಸಂಸಾರವಾಗಬೇಕು. ಹಾಗಾಗಿ ಸೋಮವಾರ ಶಿವನ ವಾರ, ನಂದಿವಾರ ಹಾಗಾಗಿ ನಮ್ಮ ಮನೆಯಲ್ಲಿ ಇರುವಂತೆ ಎಂದು ಕರೆದಿರಬಹುದು. ಹಾಗೆಯೇ ನೀಲಾಂಬಿಕೆಯ ವ್ಯಕ್ತಿತ್ವ ಬಿಂಬಿಸುವುದನ್ನು ನೋಡುತ್ತೇವೆ. ಅದರಂತೆ ಎಸ್.ಎಸ್.ಭೂಸರೆಡ್ಡಿ ಅವರು ಈ ಜಾನಪದಕ್ಕೆ ತಕ್ಕಂತೆ ತಮ್ಮ ಅಭಿಪ್ರಾಯ ತಿಳಿಸುತ್ತಾರೆ. "ಜನಪದ ಸಾಹಿತ್ಯದಲ್ಲಿ ನೀಲಮ್ಮನವರಿಗೆ ಶ್ರೇಷ್ಠ, ಜೇಷ್ಠ ಸ್ಥಾನ ಮೀಸಲು. ಗರತಿ ನೆನೆಯುವ ಶರಣ-ಶರಣೆಯರ ಸಾಲಿನಲ್ಲಿ ಸದಾ ಹಸಿರು ನೀಲಮ್ಮನವರ ಹೆಸರು. ಇವಳ ಹೆಸರು ಥಳ ಥಳಿಸುತ್ತದೆ. ದೇದೀಪ್ಯಮಾನವಾಗಿ ಬೆಳೆಗುತ್ತಿದೆ. ಗರತಿಯ ಹೃದಯದಿಂದ ಹೊರಹೊಮ್ಮಿ ಬಂದ ಈ ಪದಗಳು ನೇರವಾಗಿ ಮನವನ್ನು ಮುಟ್ಟುತ್ತದೆ, ಹೃದಯವನ್ನು ಮಿಡಿಯುತ್ತವೆ"[೨೯] ದಾಸೋಹದ ಬಗ್ಗೆ ಈಕೆಯಲ್ಲೂ ಇದ್ದ ಭಾವನೆಯನ್ನು ಜನಪದ ಬಸವಪುರಾಣ ತಿಳಿಸಿಕೊಡುತ್ತದೆ. ಈ ಪುರಾಣದಲ್ಲಿ ಉಳವಿಯ ಶರಣರು ಎಂಬ ಶೀರ್ಷಿಕೆ ಅಡಿಯಲ್ಲಿ ಈ ಜನಪದ ಹಾಡು ಪ್ರಾರಂಭಗೊಂಡು ಬಸವಣ್ಣನ ಭಕ್ತಿ ಪರೀಕ್ಷೆಯ ಕಥೆಯಾಗಿದೆ ಎನ್ನಬಹುದು. ಇಲ್ಲಿ ಬಸವಣ್ಣ-ನೀಲಮ್ಮನಿಗೆ ಪ್ರಸಾದ ತಯಾರಿಸಲಿಕ್ಕೆ ಅಪ್ಪಣೆ ಕೊಡುತ್ತಾನೆ. ಈ ಕೆಳಗೆ ಉಲ್ಲೇಖ

"ಒಂದು ಕೊಳಗ ಬತ್ತ ನಾವಳದು ಕೊಡುತೀವಿ
ಅದಕ್ಕಿಯನ್ನೆ ಮಾಡಿ ನೀ ತರಬೇಕು।
ಹಂಗಂತ ಹೇಳಿದರು ಬಸವಣ್ಣ ನೀಲಮ್ಮೆಗ
ಅದರಂತೆ ಬತ್ತವಳ್ದು ಕೊಡುತಾರೆ।
ಐದೆ ಕುಟ್ಟೀಗೆ ಅಕ್ಕಿ ಮಡಿಯನ್ನೆ ಮಾಡಿ
ನೀಲಮ್ಮನವ್ರ ಬಿಡದೀಗೆ ಕೊಡತಾರೆ।
ಅಕ್ಕಿಯನ್ನೆ ತಗುದು ಬಸವಯ್ನ ಬಳ್ಗೆ ಬಂದು
ತೊಳಿಸಿದಕ್ಕೀಯ ಅಳಿದಾರು।

ತಾಯಿ ನೀಲಮ್ಮನವರು ಮಾಡುವಂತ ಸೇವಾರ್ತಿ
ಸಂಗಮೇಶನ ಪಾದ್ಕೆ ಅರುವಾದೋ!"[೮೦]

ಈ ಜನಪದ ಬಸವ ಪುರಾಣದಲ್ಲಿ ಉಳುವೆಯ ಶರಣರು ಬಂದಿದ್ದಾರೆ ಪ್ರಸಾದ ತಯಾರಿಸುವಂತ ಬಗೆಯನ್ನು ಇಲ್ಲಿ ತಿಳಿಸಿ, ಅಕ್ಕಿಯನ್ನು ಕುಟ್ಟುವಂತದ್ದು, ಆ ಅಕ್ಕಿಯಿಂದ ಅನ್ನ ತಯಾರಿಸಲಿಕ್ಕೆ ಬೇಕಾಗುವ ಸಾಮಗ್ರಿ ತರಿಸುವುದು, ಮತ್ತು ಪ್ರಸಾದ ತಯಾರಿಸಿ ಜಂಗಮರಿಗೆ ಪ್ರಸಾದ ಮಾಡಿಸುವಂತದ್ದನ್ನು ಕಾಣುತ್ತೇವೆ. ಈ ಮೂಲಕ ಬಸವಣ್ಣನ ಶರತ್ತುಗಳಿಗೆ ತಪ್ಪದೆ ನಡೆಯುವಂತ ಸತಿಯೆಂದು ಈ ಪುರಾಣ ಹೇಳುತ್ತದೆ. ಹಾಗೆ ಸಂಗಮೇಶ್ವರ ಈಕೆಯ ಭಕ್ತಿಗೆ ಮೆಚ್ಚಿ ಹಾರೈಸುತ್ತಾನೆ. ಇಲ್ಲಿ ಮುಖ್ಯವಾಗಿ ಮಹಾಮನೆಯ ಸೇವೆಯನ್ನು, ಬಸವನ ಆಜ್ಞಾಪಾಲಕಳು ಎಂಬುದನ್ನು ಈ ಜನಪದ ಸ್ಪಷ್ಟೀಕರಿಸುತ್ತದೆ. "ಪತಿದೇವನ ಆಣತಿಯಂತೆ ಜಂಗಮ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡು ದೇಹದ ಅಭಿಮಾನವಿಲ್ಲದೆ, ದಾಸೋಹ ಕಾರ್ಯದಲ್ಲಿ ತನು-ಮನ-ಧನಗಳಿಂದ ಸೇವಾ ತತ್ಪರಳಾಗುತ್ತಿದ್ದಳು"[೮೧] ಎಂಬುದನ್ನು ರಮೇಶ ಅವರು ಅಭಿಪ್ರಾಯಪಡುತ್ತಾರೆ. ಆಕೆಯಲ್ಲಿ ಕಿಂಕರತ್ವವನ್ನು ಹರಳಯ್ಯನ ತ್ರಿವಿಧಿಯಲ್ಲಿ ನೋಡಬಹುದು.

"ಶರಣು ಚಿನ್ಮಯರೂಪ । ಶರಣುಭಕ್ತರ ಬಂಧು
.......................................
..........ಶರಣು ನಿಮ್ಮಡಿಗೆ ಶರಣಾರ್ಥಿ
ಶರಣೆ ನೀಲಮ್ಮನು । ಶರಣ ಹರಳಯ್ಯಗೆ
ಶರಣು ಮಾಡಿದಳು ಚರಣಕೆ ನೀಲಮ್ಮ
ವರಶಿಸುವು ನಾನೆಂದು ನಮಿಸಿದಳು"[೮೨]

ಈ ತ್ರಿವಿಧಿಯಲ್ಲಿ ಹರಳಯ್ಯ ಬಸವಣ್ಣನ ಮನೆಗೆ ಬಂದಾಗ ಶರಣ ಶಬ್ದಕ್ಕೆ ಪ್ರತಿಯಾಗಿ ನೀಲಮ್ಮ ಶರಣು ಮಾಡಿ ನಾನಿಮ್ಮವರ ಶಿಸುವು ಎಂದು ಹೇಳುವ ಔದಾರ್ಯತೆ ಈಕೆಯಲ್ಲಿ ಇತ್ತು. ಜಾತಿ, ಮತ, ಪಂಥಗಳನ್ನು ಮೀರಿ ಬೆಳೆದವಳು ಎಂಬುದು ತೋರಿಬರುತ್ತದೆ.

ಮೌಖಿಕವಾಗಿ ನೀಲಾಂಬಿಕೆಯ ಬಗ್ಗೆ ಹೇಳಿರುವುದನ್ನು ಗಮನಿಸಿದರೆ ನೀಲಾಂಬಿಕೆಯ ದಾಂಪತ್ಯದ ಕುರಿತು ಹಾಗೂ ವ್ಯಕ್ತಿತ್ವದ ಕುರಿತು ಮಹಾಮನೆಯ ಕಾರ್ಯವೈಖರಿಯನ್ನು ತಿಳಿಸುತ್ತದೆ. ಆದರೆ ಇವಳ ವೈಯಕ್ತಿಕ ವಾದ ವಿಚಾರಗಳು ಕಡಿಮೆ. ಮತ್ತು ಈಕೆಯ ಸಂತಾನ ಕುರಿತು ಮಾಹಿತಿ ಲಭ್ಯವಿಲ್ಲ ಎನ್ನಬಹುದು.

ಬಸವಣ್ಣ ನೀಲಮ್ಮರ ದಾಂಪತ್ಯ ಜೀವನ ಹೇಗಿತ್ತು ಎಂಬುದನ್ನು ಡಾ.ಶಾಂತಾ ಇಮ್ರಾಪೂರರವರು "ಪತಿಗೆ ಅನುಕೂಲ ಸತಿಯಾಗಿ, ಬೌದ್ಧಿಕ, ಮಾನಸಿಕ, ಸಹಚಾರಿಗಳಾಗಿ

ಬದುಕಿದ ಆದರ್ಶ ಸತಿ ಶರಣೆಯರಲ್ಲಿ ಬಸವಣ್ಣನವರ ಪತ್ನಿಯರಾದ ನೀಲಾಂಬಿಕೆ-ಗಂಗಾಬಿಕೆಯರು ಹೆಸರಾಂತವರು"[೮೩]ಎಂದಿದ್ದಾರೆ.

ನೀಲಾಂಬಿಕೆ ಬಸವಣ್ಣನವರ ಬಾಂಧವ್ಯ ಹೇಗಿತ್ತು ಎಂಬುದನ್ನು ಬುರಡೇಕಟ್ಟೆ ಮಂಜಪ್ಪರು ಹೀಗೆ ತಿಳಿಸುತ್ತಾರೆ; "ಅವರು ಬೆಳೆದ ವಾತಾವರಣಕ್ಕಿಂತ ಬಂದು ನಿಂತ ಮನೆಯ ವಾತಾವರಣ ಆಧ್ಯಾತ್ಮಿಕವಾಗಿ ಸಂಪದ್ಭರಿತವಾಗಿತ್ತು. ಅವರು ಕೈಹಿಡಿದ ಪತಿಯೇ ಆ ಆಧ್ಯಾತ್ಮಿಕ ಪ್ರಪಂಚದ ಸೂತ್ರಧಾರನಾದುದು ಇನ್ನೂ ಒಂದು ವಿಶೇಷ. ನೀಲಮ್ಮನವರ ಮನೋಧರ್ಮಕ್ಕೆ ತಕ್ಕ ವಿಶ್ವಮಾನವನಾದ ವ್ಯಕ್ತಿ ಬಸವಣ್ಣನವರು. ಇದರಿಂದ ಅವರ ಸ್ವತಂತ್ರ ಸ್ವಚ್ಛ ಆನಂದದ ವ್ಯಕ್ತಿತ್ವ ಅರಳಿ ಮಕರಂದ ಸೂಸುವುದಕ್ಕೆ ಅನುಕೂಲ ವಾತಾವರಣ."[೮೪] ಇವರ ಹೇಳಿಕೆಯಂತೆ ಇವರ ಬಾಂಧವ್ಯ ಸಂತಸದಿಂದ ಕೂಡಿದ್ದು, ಹಾಗೂ ಉದಾರತೆಯಿಂದ ಕೂಡಿತು ಎನ್ನಬಹುದಾಗಿದೆ.

ಸುಖಮಯ ಸಂಸಾರವನ್ನು ಈಕೆ ಹೊಂದಿದ್ದಳಾದರೂ, ಬಾಹ್ಯ ಸುಖಕ್ಕೆ ಆಸೆಪಡಲಿಲ್ಲ ಎಂಬುದನ್ನು ತನ್ನ ವಚನದಲ್ಲಿ "ಅಲ್ಲಲ್ಲಿಯ ಸುಖಂಭೋ ಎನ್ನಲಿಲ್ಲ"[೮೫] ಎಂದು ಹೇಳಿದ್ದಾಳೆ. ಆದರೆ ಈಕೆಯಲ್ಲಿರುವ ಗುಣ ನಿಜತ್ವದ ಸ್ವರೂಪದ್ದು, ಹಾಗಾಗಿ ಒಂದು ಬಸವಣ್ಣನ ಸೇವೆ ಇನ್ನೊಂದು ಪರಮಾತ್ಮನ ಆರಾಧನೆ ಇವಳಿಗೆ ಬಹಳ ಮುಖ್ಯವೆಂದು ಕಾಣುತ್ತದೆ. ಸಂಸಾರದಲ್ಲಿ ಸಂದೇಹಕ್ಕೆ ಎಡೆ ಮಾಡದೆ ನಡೆಯಬೇಕು. ಅಂದಾಗ ಸುಖಿಜೀವನ ಇಲ್ಲವೆಂದ ಗಂಡನು ಶಿವಲಿಂಗನ ಭಕ್ತ, ಹೆಂಡತಿಯದ್ದು ದೇವಿಯ ಭಕ್ತಳು ಎಂಬುದನ್ನು ಬಸವಣ್ಣ ಹೇಳಿದಂತೆ ಆಗುತ್ತದೆ ಎಂಬುದನ್ನು ಸತಿಪತಿಗಳಾದ ಬಸವಣ್ಣ ನೀಲಾಂಬಿಕೆ ಅರಿತುಕೊಂಡಿದ್ದರು ಎಂದು ತಿಳಿಯುತ್ತದೆ.

ಬಸವಣ್ಣ ನೀಲಾಂಬಿಕೆಯರು ಹೇಗಿದ್ದರು ಎಂಬುದನ್ನು ಡಾ.ಜಯಶ್ರೀ ದಂಡೆಯವರು ಹೀಗೆ ಅಭಿಪ್ರಾಯಪಡುತ್ತಾರೆ. "ನೀಲಾಂಬಿಕೆ ಬಸವೇಶ್ವರ ಸಂಸಾರ ಸಂಬಂಧವಂತೂ ಇನ್ನೂ ಅಪರೂಪವಾದುದು. ಕೇವಲ ರತಿಸುಖವಷ್ಟೆ ಗಂಡ-ಹೆಂಡತಿಗೆ ಪ್ರಧಾನವಲ್ಲ. ಬಸವಂಗೆ ಉಭಯ ಕುಳುವ ಹರಿದು ಬಸವಂಗೆ ಶಿಶುವಾದೆನು. ಬಸವನೆನ್ನ ಶಿಶುವಾದನು. ಪ್ರಮಥರು ಪುರಾತನರು ಸಾಕ್ಷಿಯಾಗಿ ಎನ್ನುವ ಮಾತಿನಲ್ಲಿ ಅವರ ದಾಂಪತ್ಯ ಆಧ್ಯಾತ್ಮಕ್ಕೆ"[೮೬] ಮೀಸಲು ಎಂಬುದನ್ನು ತಿಳಿಯಬೇಕಾಗುತ್ತದೆ. ಅದೇ ದಾಂಪತ್ಯ ಜೀವನ ಸುಖಮಯ ಎಂಬುದನ್ನು ಇಲ್ಲಿ ನೋಡಬೇಕಾಗುತ್ತದೆ. ದಾಂಪತ್ಯ ಜೀವನದಲ್ಲಿ ಎಡರು-ತೊಡರು ಸಹಜವಾಗಿ ಬಂದಿರುತ್ತವೆ. ಏಕೆಂದರೆ ಇವಳ ಬಾಳಿನಲ್ಲಿ ಪರೀಕ್ಷೆಯ ಕಾಲ ಇದ್ದಿರಬಹುದು. ಹರಿಹರನ ಹೇಳಿಕೆಯಂತೆ ವಿಟಜಂಗಮನ ಪ್ರಸಂಗವನ್ನು ಕವಿ ಹೇಳುತ್ತಾನೆ. ಜಂಗಮನು ಬಂದು ಬಸವಣ್ಣ ನನಗೆ ರೂಪವತಿಯಾದ ಸ್ತ್ರೀ ಬೇಕು, ಆಕೆಯಿಲ್ಲದೆ ತೃಪ್ತಿಯಾಗದು ಎಂದ. ಕೂಡಲೇ ಬಸವಣ್ಣ

ಪಟ್ಟಣದ ಸ್ತ್ರೀಯರನ್ನು ಕರೆದು ತಂದಾಗ ನನಗೆ ಬೇಡ ಬಸವಣ್ಣ ಎಂದಾಗ ರೂಪವತಿಯಾದ "ಸಿರಿಸರಸ್ವತಿಗಳಂ ಕೀಳ್ಮಾಡುವ ತನ್ನರಸಿ ಮಾಯಿದೇವಿಯರಂ ತಂದು ಕೊಡುವೆಂ"[೮೭] ಪಟ್ಟಣದಲ್ಲಿಯ ರೂಪವತಿಯರಿಗಿಂತ ಅತಿ ಸೌಂದರ್ಯವತಿ ನಿನ್ನ ಸತಿಯಿದ್ದಾಳಲ್ಲ ಎಂದಾಗ, ಬಸವಣ್ಣ ಮಹಾಮನೆಗೆ ಬರುವುದರೊಳಗೆ ಮಾಯಿದೇವಿ(ನೀಲಾಂಬಿಕೆ) ವಸ್ತ್ರಗಳನ್ನು ಧರಿಸಿ ಬಸವನ ದಾರಿಯನ್ನು ಕಾಯುತ್ತಿರುವ ಈಕೆಯನ್ನು ನೋಡಿ ಮಂತ್ರಮುಗ್ಧನಾಗಿರಬೇಕು.

ಮಾಯಿದೇವಿಯೇ "ನಡೆ ಬಸವ ನಿನ್ನ ಮನೋರಥವಂ ಮಾಡಿದಪೆನೆಂಬ....."[೮೮] ಮಾತನ್ನು ಹೇಳಿದ ಕೂಡಲೆ ಸತಿಯನ್ನು ಜಂಗಮನಿದ್ದಲ್ಲಿಗೆ ಬಿಡುತ್ತಾನೆ. ಆಗ ಜಂಗಮನ ವಸ್ತ್ರವನ್ನು ತೆರೆದು ನೋಡಿದ ಮಾಯಿದೇವಿಗೆ ಶಿವನ ದರ್ಶನವಾಯಿತು. ಇದು ಹರಿಹರ ಚಿತ್ರಿಸಿದ ಕಥೆ. ಈ ಅಂಶವನ್ನು ಎಂ.ಎಂ.ಕಲ್ಬುರ್ಗಿಯವರು ಹೀಗೆ ಅಭಿಪ್ರಾಯಪಡುತ್ತಾರೆ. "ವಿಟಜಂಗಮ ಪ್ರಸಂಗವೊಂದು ಬಸವರಾಜ ದೇವರ ರಗಳೆಯಲ್ಲಿ ಬರುತ್ತದೆ. ಅಂದು ಮೊದಲಾಗಿ ಗುಣಾನ್ವಿತೆ ಮಾಯಿದೇವಿಯಂ ಶಿವನ ಲತಾಂಗಿಯೆಂದು ಪದೆದರ್ಚಿಸುತಿರ್ದನುರ್ವಿಯೊಳ್ ಎಂದು ಹೇಳುತ್ತಾನೆ. ಹರಿಹರ ಈ ಸಂದರ್ಭ ಮೊದಲುಗೊಂಡು ಇವಳನ್ನು ಬಸವಣ್ಣ ಪಾರ್ವತಿ ಸ್ಥಾನದಲ್ಲಿ ಕಾಣತೊಡಗಿದನಂತೆ"[೮೯] ಈ ಅಭಿಪ್ರಾಯದಂತೆ ಹರಿಹರ ಮಾಯಿದೇವಿಯನ್ನು ಪಾರ್ವತಿ ಸ್ಥಾನದಲ್ಲಿ ಬಸವಣ್ಣ ನೋಡಿದಂತೆ ಮಾಡಿದ್ದಾನೆ. ಆದರೆ ಈಕೆಯ ವಚನದಲ್ಲಿ "ಪಾರ್ವತಿಯ ರೂಪಕಂಡು, ಪರಶಿವನ ಸಂಗ ನಿಸ್ಸಂಗವಾಗಿ...... ವಿಚಾರಪತ್ನಿಯಾದೆನಯ್ಯ ಸಂಗಯ್ಯ"[೯೦] ಎಂದು ಹೇಳಿದ್ದು ಅನುಭಾವದ ಎತ್ತರಕ್ಕೆ ಸಾಕ್ಷಿಯಾದ ಈಕೆಯನ್ನು ಕಂಡು ಬಸವಣ್ಣ ಪಾರ್ವತಿ ಎಂದಿರಬಹುದು.

ಬಸವಣ್ಣನಲ್ಲಿಯ ಭಕ್ತಿ ಪರಾಕಾಷ್ಠೆಯನ್ನು ಕಾಣಲು ಮತ್ತು ವಿಟಜಂಗಮ ವೇಷಧಾರಿ ಶಿವ, ಇಲ್ಲಿ ಹರಿಹರ ಶಿವನನ್ನು ಪ್ರತ್ಯಕ್ಷಗೊಳಿಸಿ ಆಶೀರ್ವದಿಸಿದ್ದು ನೋಡಿದರೆ ಬಸವಣ್ಣನಲ್ಲಿದ್ದ ಭಕ್ತಿ ಪರೀಕ್ಷೆ ಎನ್ನಬಹುದು. ಹಾಗಾಗಿ ನೀಲಾಂಬಿಕೆ ಬಸವಣ್ಣನ ಪರೀಕ್ಷೆಗೆ ಹೆದರದೆ ತಾಳ್ಮೆ ಕೆಡಿಸಿಕೊಳ್ಳದೆ ಇರುವಂತ ಸಂಯಮ ಬಹಳ ದೊಡ್ಡದು. ಹಾಗೆಯೇ ವಿಟಜಂಗಮನಲ್ಲಿಯ ಮನುಷ್ಯ ಸಹಜಗುಣವಾದ ಭೋಗಾಕಾಂಕ್ಷೆ ಬಸವಣ್ಣನಲ್ಲಿಯ ಭಕ್ತಿಯ ಪರಾಕಾಷ್ಠೆ ಮತ್ತು ಮಾಯಿದೇವಿ(ನೀಲಾಂಬಿಕೆ)ಯ ತ್ಯಾಗ ಹಾಗೂ ಪತಿನಿಷ್ಠೆಗಳಿಂದಾಗಿ ತನ್ನನ್ನೇ ಸರ್ವವಿಧದಿಂದಲೂ ಅರ್ಪಣೆ ಮಾಡಿಕೊಳ್ಳಲು ಬಮದ ಮಾಯಿದೇವಿಯನ್ನು ಕಂಡಕೂಡಲೇ ವಿಟಜಂಗಮನ ಮನಸ್ಸು ಪರಿವರ್ತನೆಯಾಗಿ ಅವನಲ್ಲಿ ದೈವೀ ಅಂಶ ನೆಲೆಗೊಂಡಿತು. ಇದನ್ನೇ ಹರಿಹರ ವಿಟಜಂಗಮ ಶಿವನ ಸ್ವರೂಪಿಯಾದ ಎಂದಿರಬೇಕು. ಅದೇ ರೀತಿ ಅವಳಿಗೆ ಇನ್ನೊಂದು ಪರೀಕ್ಷೆ ಕಳ್ಳನೊಬ್ಬ ಈಕೆಯ ಕಿವಿಯೋಲೆಯನ್ನು ಕಳ್ಳತನ ಮಾಡುವ ಸಂದರ್ಭ. ಈ ಪ್ರಸಂಗ ಗಂಗಾಂಬಿಕೆಯಲ್ಲಿಯೂ ಹರಿಹರ ವ್ಯಕ್ತಪಡಿಸುತ್ತಾನೆ.

“ಕಿವಿಯೋಲೆ ಬಿಚ್ಚುವಷ್ಟರಲ್ಲಿ ಎಚ್ಚತ್ತು ಕೂಗಲು ಬಸವಣ್ಣ ಎದ್ದು ಬಂದು ಎಲೆಲೆ ಸಂಗನ ಕರನೊಂದುದೆ, ಬೆಸಸುವಲ್ಲಿಂ ಮುನ್ನವೆ ಕೊಡದೆ ನಿಲುವುದೇ ಎಂದು ಬಿಚ್ಚಿ ಕೊಡಿಸುತ್ತಾನೆ.”[೯೧] ಈ ಅಂಶವನ್ನು ನೋಡಿದಾಗ ಕಳ್ಳತನ ಮಾಡಲಿಕ್ಕೆ ಬಂದಿರುವುದು ಸತ್ಯವಿರಬಹುದು. ಆದರೆ ಬಸವಣ್ಣ ಆ ಕಳ್ಳನ ಕೈನೊಂದಿತು ಹೇಳುವ ಮಾತಿಗೆ ಡಾ.ಜಯಶ್ರೀ ದಂಡೆಯವರು ಹೀಗೆ ಅಭಿಪ್ರಾಯಪಡುತ್ತಾರೆ.

“ಬಸವಣ್ಣ ಬಲು ನೊಂದುಕೊಳ್ಳುತ್ತಾನೆ. ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲ ಸಂಗಮನಲ್ಲದೇ ಮತ್ತಾರು ಬರಲಿಕ್ಕೆ ಸಾಧ್ಯ? ಎಂದು ಹೇಳಿ, ಹೆಂಡತಿಗೆ ತೆಗೆದು ಕೊಡಾ ಎಲೆ ಚಂಡಾಲಗಿತ್ತಿ ನಮ್ಮಯ್ಯನ ಕೈನೊಂದಿತ್ತು ಎಂದು ಹೇಳಿ, ಕಳ್ಳನಿಗೆ ಒಡವೆಗಳನ್ನು ಕೊಟ್ಟುಬಿಡಲು ಹೇಳುತ್ತಾನೆ. ಮಹಾನುಭಾವರಾದವರು ಸಮಾಜೋದ್ಧಾರಕ್ಕಾಗಿ ತಮ್ಮನ್ನೆ ಅರ್ಪಿಸಿಕೊಂಡವರು. ಸಮಾಜವನ್ನು ತಿದ್ದುವ ಮೂಲ ಮಂತ್ರವಿದು. ಬಂದ ಕಳ್ಳನನ್ನು ಆಧರಿಸಿ ಸಾಕ್ಷಾತ್ ಸಂಗಮನಾಥನೇ ಎಂದೂ, ಅಯ್ಯಾ ಎಂದು ಕರೆದುದಷ್ಟೇ ಅಲ್ಲ ಒಡವೆ ಕೀಳಲು ಹೋಗಿ ಕೈನೊಂದೀತ್ತು ಎಂದು ಹೇಳುವ ಕರಗುವ ಮಮತೆಯ ಮಾತು ತಾಯಿ ವಾತ್ಸಲ್ಯವನ್ನು ಈ ಕಳ್ಳನಿಗೆ ಮರುಕಳಿಸುವಂತಿದೆ. ತಾಯ ಹೃದಯವನ್ನು ಬಿಚ್ಚಿ ತೋರಿ, ಆ ಕಳ್ಳನ ಮೂಲ ಪ್ರವೃತ್ತಿಯನ್ನು ಕ್ಷಣಾರ್ಧದಲ್ಲಿಯೇ ಬದಲಾಯಿಸುವ ಮೋಡಿ ಬಸವನಿಗೆ ಒಗ್ಗಿದ್ದು, ಜೊತೆ-ಜೊತೆಗೆ ಹೆಂಡತಿಯಲ್ಲಡಗಿದ ಆಭರಣ ಮೋಹವನ್ನು ಕಿತ್ತು ಹಾಕುವಲ್ಲಿ ಯಶಸ್ವಿಯಾಗುತ್ತಾನೆ.”[೯೨]

ಇವರ ಅಭಿಪ್ರಾಯದಂತೆ ನೀಲಾಂಬಿಕೆಯಲ್ಲಿ ಅಡಗಿರುವಂತ ಆಲೋಚನೆಗಳನ್ನು ಕಿತ್ತು ಹಾಕುವ ಸಲುವಾಗಿ ಹಾಗೂ ನಾನು ಮಂತ್ರಿಯ ಮಗಳು ಎಂಬ ಭಾವನೆಯಿಂದ ಕೂಡಿದ ಆಭರಣಗಳ ಮಮತೆಯನ್ನು ಹೋಗಲಾಡಿಸುವ ಸಲುವಾಗಿ ಬಸವಣ್ಣ ನಾನೆ ದೊಡ್ಡ ಕಳ್ಳ ಅನ್ನುವುದರ ಮೂಲಕ ಸಂಗಮನಾಥನಲ್ಲದೆ ಬೇರೆ ಅಲ್ಲ ಅನ್ನುವ ಮಾತು ಕಳ್ಳನ ಮನಪರಿವರ್ತನೆಗೋಸ್ಕರ ಆಗಿರಬಹುದು.

ಕಳ್ಳತನದ ಸಂದರ್ಭವನ್ನು ಸಹಿತ ಸಿಂಗಿರಾಜನು ಬಸವರಾಜ ಚಾರಿತ್ರದಲ್ಲಿ ಹೇಳುತ್ತಾನೆ. ಆದರೆ ಭೀಮಕವಿ, ಬಸವ ಪುರಾಣದಲ್ಲಿ ಮಿಂಡ ಜಂಗಮ ಬಂದು ಕಿವಿಯೋಲೆಯ ಕೇಳಿದ ಪ್ರಸಂಗವನ್ನು ನೋಡಬಹುದು.

“ಮತ್ತೆ ಒಬ್ಬಯ್ಯಂ ಬಸವಸಬೆ
ವೊತ್ತಮನ ಪೊರೆಗೆಯ್ದಿ ಆತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು

.............................................

ಮಲ್ತೆನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು ಮಿಂಡಜಂಗಮ ವಿತ್ತಲೆಯ್ತುಂದ"[೯೩]

ಇಲ್ಲಿ ಭೀಮಕವಿಯು ಹರಿಹರ ಕಳ್ಳನು ಕಿವಿಯ ಓಲೆಯನ್ನು ಕದಿಯಲಿಕ್ಕೆ ಬಂದನು ಎಂದು ಹೇಳಿದರೆ ಇಲ್ಲಿ ಮಿಂಡ ಜಂಗಮನು ಓಲೆಯನ್ನು ಬೇಡಲು ಮಾಯಿದೇವಿಯಿಂದ ಬಸವಣ್ಣ ಬಿಚ್ಚಿಸಿಕೊಡಿಸುವನು ಎಂದು ಬರುತ್ತದೆ.

ಬಸವಣ್ಣ ಮತ್ತು ನೀಲಾಂಬಿಕೆಗೆ ಪುತ್ರಸಂತಾನವಿದ್ದಿತ್ತು ಎಂದು ಲಕ್ಕಣ್ಣದಂಡೇಶನು ಶಿವತತ್ವ ಚಿಂತಾಮಣಿಯಲ್ಲಿ ಹೇಳಿದ್ದಾನೆ.

"ದಂಡೇಶಗಂ ನೀಲಾಂಬಿಕೆ ಯೊಳುದಿಸಿ
ಲೀಲೆಯಂ ಶಿವ ಪರಾಯಣನೆನಿಪ ಸತ್ಪುತ್ರ
ಬಾಲಕನ ಗುಣನಾಮ ಸಂಗಯ್ಯನಾತನಲೆ ದೃಢ ಭಕ್ತಿಯಿಂದ ಭವನ
ಲಾಲನೆಯೊಳರ್ಬೆಸುತ ಸರ್ವಜನ ಹಿತವೆನಿಸಿ"[೯೪]

ಲಕ್ಕಣ್ಣ ದಂಡೇಶನು ಬಸವಣ್ಣ ಮತ್ತು ನೀಲಾಂಬಿಕೆಗೆ ಬಾಸಂಗಯ್ಯನೆಂಬ ಮಗನಿದ್ದನೆಂದು ಇಲ್ಲಿ ಹೇಳುತ್ತಾನೆ. ಆದರೆ ಕವಿ–ಚಾಮರಸ ಹೀಗೆ ಹೇಳುತ್ತಾನೆ.

"ಪರಮ ಪೂರ್ವ ಚಾರ್ಯ ಬಸವೇ
ಶ್ವರಗೆ ಒಬ್ಬ ಕುಮಾರನಾದನು
ಧರಣಿಯೊಳಗ ಪ್ರತಿಮ ಗುಣಣನಿಗೆಳೆಯ ತಂಗೆ
ವರದ ಕೂಡಲಸಂಗಮೇಶನ
ನೀರುತ ನಾಮವನಿಟ್ಟು ಸುಖದಿಂ
ದಿರುತಲಿರ್ದನು ಬಸವದಂಡಾಧೀಶ ನೊಲವಿನಲಿ"[೯೫]

ಕವಿ ಚಾಮರಸನು ಬಸವಣ್ಣನವರಿಗೆ ಮಗನಿದ್ದನು. ಆತನಿಗೆ ಕೂಡಲಸಂಗಮದೇವಾ ಎಂದು ಹೆಸರಿಡಲಾಯಿತು. ಆದರೆ ಆ ಮಗು ಗಂಗಾಂಬಿಕೆಯ ಮಗನೋ ಅಥವಾ ನೀಲಾಂಬಿಕೆಯ ಮಗನೋ, ಏಕೆಂದರೆ ಬಸವಣ್ಣನವರಿಗೆ ಇಬ್ಬರು ಸತಿಯರು, ಆದರೆ ಯಾರ ಮಗ ಎಂಬ ಸ್ಪಷ್ಟತೆಯನ್ನು ಚಾಮರಸ ನೀಡುವುದಿಲ್ಲ. ಲಕ್ಕಣದಂಡೇಶ ಬಾಲಸಂಗಯ್ಯ ಎಂದರೆ ಈತನು ಕೂಡಲಸಂಗಮದೇವಾ ಎಂದು ಕರೆದಿರುವುದು ನೋಡಿದರೆ ಗಂಗಾಂಬಿಕೆ ಹೇಳುವಂತೆ

"ಅವಳ ಕಂದ ಬಾಲಸಂಗ ನಿನ್ನ ಕಂದ ಚೆನ್ನಲಿಂಗ
ಫಲವಿಲ್ಲದ ಕಂದ ನಿರ್ಪನವಳಿಗೆ

ಎನಗೆ ಫಲವಿಲ್ಲ ಕಂದನಿಲ್ಲ
ಇದೇನೊ ದುಃಖ ದಂದುಗ
ಗಂಗಾಪ್ರಿಯ ಕೂಡಲ ಸಂಗಮದೇವಾ"[೬೭]

ಗಂಗಾಂಬಿಕೆ ತನ್ನ ವಚನದಲ್ಲಿ ಹೇಳುವಂತೆ ಅವಳ ಕಂದ ಎಂದರೆ ನೀಲಾಂಬಿಕೆಯ ಮಗ ಬಾಲಸಂಗಯ್ಯ ಎಂದು ತಿಳಿಯಬಹುದು. ಆದರೆ ಇಲ್ಲಿ ನಿನ್ನ ಕಂದ ಚೆನ್ನಲಿಂಗ ಎಂದು ಬಸವಣ್ಣ ಹೇಳಿದನೆಂದು ಗಂಗಾಂಬಿಕೆ ಹೇಳುತ್ತಾಳೆ. ಮುಂದೆ ಎನಗೆ ಫಲವಿಲ್ಲ, ಕಂದನಿಲ್ಲ ಎಂದು ಹೇಳುವ ಮಾತು ಇವಳಲ್ಲಿ ಅಡಗಿದ್ದ ದುಃಖವನ್ನು ಮತ್ತು ಮಕ್ಕಳಿಲ್ಲದ ಭಾವನೆ ಗೊತ್ತಾಗುತ್ತದೆ. ಹಾಗಾಗಿ ಬಾಲಸಂಗಯ್ಯ ನೀಲಾಂಬಿಕೆಯ ಮಗ ಎನ್ನಬಹುದು. ಇದೇ ಮಾತನ್ನು ಬಸವಣ್ಣನವರ ವಚನದಿಂದ ಗಮನಿಸಬಹುದು.

"ಒಡವೆ ಭಂಡಾರ ಕಡವರ ದ್ರವ್ಯದ ಬಡ್ಡಿ ವ್ಯವಹಾರಕ್ಕೆ ಕೊಟ್ಟು
ಮನೆಯ ಗೋಟಿನಲ್ಲಿ ಹೊಯಿದು ಕೊಂಡಿದ್ದನಾದಡೆ
ಅದು ಎನ್ನರ್ಥವಲ್ಲ ಅನರ್ಥವೆಂಬೆ...........
ಸಿರಿಯಾಳ ಚೆಂಗಳವ್ವೆಯ ಮನೆಗೆ ಬಂದು ಅವರ ಮಗನ ಬೇಡುವಂತಿಲ್ಲ
ಸಂಗಮದೇವಾ ನಿನ್ನ ಹೆಸರ ಚಿಕ್ಕಸಂಗಯ್ಯನಿದ್ದಾನೆ
ನೀನು ಜಂಗಮರೂಪಾಗಿ ಬಂದು ಆತನ ಹಿಡಿದು
ಎನ್ನ ಮುಂದೆ ಹೆಡಗುಡಿಯ ಕಟ್ಟಿ
ಬೆನಿಬಂಡವ ಮಾಡಿ ಚಾಣಸವ ಮಾಡುವಲ್ಲಿ
ಎನ್ನ ಉದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ಮರುಗಿದೆ ನಾರಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ ಮನದೊಡೆಯ ನೀನೇ ಬಲ್ಲೆ
ಇಂತೀ ತ್ರಿವಿಧವು ಹೊರಗಣವು
ಎನ್ನ ನೋವಿನೊಳಗಲ್ಲ ಎನ್ನ ಬೇನೆಯೊಳಗಲ್ಲ
ಕೂಡಲಸಂಗಮದೇವಾ"[೬೮]

"ಇದು ಬಸವಣ್ಣನವರೆ ಬರೆದ ವಚನವೇ? ಅಥವಾ ಯಾರಾದರೂ ಅವರ ಹೆಸರಿನಲ್ಲಿ ಬರೆದು ಸೇರಿಸಿದ ವಚನವೇ ತಿಳಿಯದು. ತ್ರಿವಿಧದ ಮೋಹ ಕಳೆದುಕೊಂಡುದನ್ನು ಈ ವಚನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಸಿರಿಯಾಳನ ಮಗನ ಬೇಡಿದಂತೆ ಬಂದು ನನ್ನ ಮಗ ಚಿಕ್ಕಸಂಗಯ್ಯನನ್ನು ಬೇಡು. ಮೋಹವಿಲ್ಲದೆ ಕೊಡುತ್ತೇನೆ ಎಂಬ ಆಹ್ವಾನವಿದೆ. ತ್ರಿವಿಧದ ಮೋಹ ಮೀರುವ ಸಾಧನೆಯ ಪ್ರಸ್ತಾವದ ವಚನವಿದು. ಈ ವಚನದಲ್ಲಿ ಪ್ರಾಸಂಗಿಕವಾಗಿ

ತಮಗೆ ಒಬ್ಬ ಮಗ ಚಿಕ್ಕಸಂಗಯ್ಯ ಇರುವುದನ್ನು ಪ್ರಸ್ತಾಪಿಸಿದ್ದಾರೆ.”[೬೮] ಆದರೆ ನೀಲಾಂಬಿಕೆ ತನ್ನ ವಚನದಲ್ಲಿ ಹೀಗೆ ಹೇಳುತ್ತಾಳೆ.

“ಮುನ್ನಲೊಂದು ಶಿಶು ಹುಟ್ಟಿತ್ತು
ಆ ಶಿಶುವಿನ ಕೈಯಲೊಂದು ಮಾಣಿಕ್ಯವ ಕೊಡಲು
ಆ ಮಾಣಿಕ್ಯದ ಕುರುಹಿಲ್ಲ. ಬಯಲಿಂಗೆ ಬಣ್ಣವಿಲ್ಲ
ಸಂಗಯ್ಯನಲ್ಲಿ ಹೆಸರಳಿದ ಬಸವಂಗೆ”[೬೬]

ಈ ವಚನವನ್ನು ಗಮನಿಸಿದಾಗ ಮೊದಲು ಶಿಶು ಹುಟ್ಟಿತ್ತು ಆ ಶಿಶುವಿನ ಕೈಯಲ್ಲಿ ಮಾಣಿಕ್ಯ ಕೊಡಲು ಅದು ಹಲವು ವರ್ಣನೆ ತೋರಿ ಅಂದರೆ ನನಗೆ ಶಿಶು ಹುಟ್ಟಿತ್ತು. ಆ ಕಂದನ ಸುಂದರಾಂಗನಾಗಿ ಹಲವು ರೂಪದಲ್ಲಿ ಬಣ್ಣವನೆ ತೋರಿ ಬಯಲಾದನು ಮುಂದೆ ಮಾಣಿಕ್ಯದ ಕುರುಹು ಇಲ್ಲ. ಆತನು ಬದುಕಿಲ್ಲ ಅನ್ನಬಹುದು. ಏಕೆಂದರೆ ಬಸವಣ್ಣನ ವಚನ ಗಂಗಾಂಬಿಕೆ–ನೀಲಾಂಬಿಕೆಯರ ವಚನದಲ್ಲಿ ಅವರಿಗೆ ಮಗು ಇತ್ತು ಏನೋ ಕಾರಣದಿಂದ ಸಾವನ್ನಪ್ಪಿರಬಹುದು ಎಂದು ಊಹಿಸಬಹುದು.

ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರಾ ರತ್ನಾಕರ ಇಲ್ಲಿ ಬಾಲಸಂಗಯ್ಯನ ಬಗ್ಗೆ ಕಥೆಯನ್ನು ಕಟ್ಟಿಕೊಟ್ಟಿದ್ದಾನೆ. ಬಸವಣ್ಣ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ಇಚ್ಛಾ ಪ್ರಸಾದ ನೀಡುತ್ತಿದ್ದು ಈ ವಿಷಯ ಬಿಜ್ಜಳನಿಗೆ ಗೊತ್ತಾಗಿ ಹಾಗೂ ಬಸವಣ್ಣ ಮಿಂಡ ಜಂಗಮಕ್ಕೆ ದ್ರವ್ಯ ನೀಡಿದ್ದು ಬಿಜ್ಜಳನು ಪ್ರಶ್ನಿಸಿದಾಗ ಆಗ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು, “ಬಸವಣ್ಣ ತಮ್ಮ ಮನೆಯಂ ಪೊಗದೆ ಬಿಜ್ಜಳನೋಲಗದಿಂದ ಪಟ್ಟಣವಂ ಬಿಟ್ಟು ತಾ ಪೋಗಿ ನೀಲಮ್ಮ, ಗಂಗಮ್ಮ, ಅಕ್ಕನಾಗಮ್ಮ, ಬಾಲಸಂಗಯ್ಯ ಮೊದಲಾದ ಗಣಂಗಳ ಕರೆಸಿಕೊಂಡು ಮೂಗಾವುದ ನಡದು ಸಲೆಸುತರ ಪದತಳ ನೊಂದು ಬೆಂಡಾಗಿ ಬಸವಳಿದು ಮತ್ತಿಗಟ್ಟದ ಹಳ್ಳದಲ್ಲಿರಲಾಗಲಿತ್ತಂ ಚರಮೂರ್ತಿಗಳೆಲ್ಲಾ ಬಸವಣ್ಣನಿದ್ದಲ್ಲಿಗೆ ಬಂದು ನಮಗೆ ದಿನಂ ಪ್ರತಿಯಲ್ಲಿ ಕೊಡುವ ಪಡಿಯು ತಾ ಬಸವಣ್ಣ ಎಂದು ವಿಟಜಂಗಮ ದೇವರುಗಳು ಬೇಡಲು ಬಸವಣ್ಣ ಕೊಡುವುದಕ್ಕೆ ಪದಾರ್ಥವಿಲ್ಲದೆ ಇಲ್ಲಾ ಎಂದು ನುಡಿಯಲಾರದೆ ಶಿವ, ಶಿವಾಯೆಂದು ಚಿಂತಿಸಿ ನುಡಿದ ವಾಕ್ಯವು; ಆವನಾದಡೇನು ಹೇಮವಿಲ್ಲದೆ ಅಂಗಮಿಸಬಹುದೆ ಕೊಡವಿಲ್ಲವೆಂಬುದರಿಂದ ಸಾಯಲುಬಹುದು ಸೈರಿಸಬಾರದು ಬೇಡುವರ ನೋಡಿ ಯೀಯ್ಯಲಿಲ್ಲದ ಜೀವನವೇಕೆ ಕೂಡಲಸಂಗಮದೇವಾ ಎಂದು ಬಸವಣ್ಣನು ಗೀತವಂ ಪಾಡಿ ನಿಬ್ಬೆರಗಾಗಿ ನಿಂದಿರುವಾಗ ಇತ್ತ ಕೂಡಲ ಸಂಗಮೇಶ್ವರನು ಬಸವಣ್ಣನ ಪುತ್ರನಾದ ಬಾಲಸಂಗಯ್ಯನೊಡನೆಂದರು. ಆಕಾಶವಾತಾಗಿ ಈ ಹುತ್ತದೊಳಗೆ ಶಿವನಾಭರಣಕ್ಕೆ ಸಮಾನವಾದ ತೀವಳವದೆ ತೆಗೆಯೆನಲು

ಆಗ ಬಾಲಸಂಗಯ್ಯನು ಹುತ್ತದೊಳಗೆ ಹಸ್ತವನಿಕ್ಕೆ ಸರ್ಪನ ತೆಗೆಯಲಾಗ ಅದು ನಾಗಬಂಧದ ಸವರ್ನದ ಲೇವಳವಾಗಿರಲು ಅದನು ಕಲ್ಯಾಣಕೊಯ್ದು ಸಿದ್ದಶೆಟ್ಟಿಯೆಂಬ ಹರದನಲ್ಲಿ ಪವನಿರಿಸೆ ದ್ರವ್ಯವಂ ತಂದು ವಿಟಚರಮೂರ್ತಿಗಳು ಮೊದಲಾದ ಚರಮೂರ್ತಿಗಳಿಗೆ ದಾಸೋಹವ ಮಾಡುತ್ತಿರಲು."[೧೦೦]

ಈ ಅಂಶವನ್ನು ಗಮನಿಸಿದಾಗ ಬಾಲಸಂಗಯ್ಯ ಬಸವಣ್ಣನ ಮರ್ಯಾದಿಯನ್ನು ಉಳಿಸಿದನು. ಹಾಗೆ ಬಿಜ್ಜಳನ ಅರಮನೆಯಲ್ಲಿ ಸಂವಾದವು ಆಗಿ ಅಲ್ಲಿ ಸಂಘರ್ಷ ನಿಜರೂಪ ತಾಳಿತು. ಹೀಗೆ ಕಥೆಯು ಬಂದು ಇಂಥ ಮಗನಾದ ಇವನು ಕಮಟೇಶ್ವರನೆಂಬ ಲಿಂಗದಲ್ಲಿ ಬಯಲಾದ. ಈ ಮಗನನ್ನು ಪಕ್ವವಾಗಲು ಬಿಡದೆ ಕಸುಗಾಯಿಕ್ವದಾ ಎಂದು ಶಾಂತಲಿಂಗ ದೇಶಿಕ ಬಸವಣ್ಣನವರಿಗೆ ಮಗನಿದ್ದ ವಿಚಾರವನ್ನು ಹೇಳುತ್ತಾನೆ. ಆದರೆ ಗಂಗಾಂಬಿಕೆಯ ಮಗನೇ ಅಥವಾ ನೀಲಾಂಬಿಕೆಯ ಮಗನೇ ಎಂದು ಹೇಳುವುದಿಲ್ಲ. ಈ ಕಥೆಯನ್ನು ನೋಡಿದರೆ ಹರಿಶ್ಚಂದ್ರ ಕಾವ್ಯದಂತಿದೆ ಎನ್ನಬಹುದು.

**ನೀಲಾಂಬಿಕೆಯ ಬಗ್ಗೆ ಶಿವಶರಣರ ನಿಲುವು**

ನೀಲಾಂಬಿಕೆ ಮಹಾದಾಸೋಹದ ಒಡತಿಯಾಗಿದ್ದಾಳೆ ಎನ್ನಬಹುದು. ಈಕೆಯಲ್ಲಿ ಇದ್ದ ತಾಳ್ಮೆ, ಪ್ರೀತಿಯ ವೈಭವವನ್ನೂ ಕಂಡು ಅನೇಕ ಶರಣರು ಈಕೆಯನ್ನು ಹೊಗಳಿದ್ದಾರೆ. ತೋಂಟದ ಪೆದ್ದಲಿಂಗ ಶಿವಯೋಗಿ "ನೀಲಲೋಚನೆಯಮ್ಮನ ಪ್ರಸಾದದಿಂದ ನಿಜಲಿಂಗೈಕ್ಯ ನಾದೆನಯ್ಯ"[೧೦೧] ಈ ಸಾಲುಗಳನ್ನು ಗಮನಿಸಿದಾಗ ನೀಲಾಂಬಿಕೆಯ ದಾಸೋಹಂ ಭಾವ ತಿಳಿಯುತ್ತದೆ. ಹಾಗೂ ಮಹಾ ಮನೆಯಲ್ಲಿ ಅತಿಥಿ ಸೇವೆ ಇವಳ ಕಾಯಕವಾಗಿತ್ತು.

> "ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳ ಪ್ರಸಾದ ಇಟ್ಟನು
> ಶೂಲಪಾಣಿಯ ಪಾದಸ್ಮರಣೆಯೊಳಲೆ ಚೆಲ್ವ
> ನೀಲಲೋಚನೆಯ ವಲ್ಲಭನು"[೧೦೨]

ಈ ಪದ್ಯವನ್ನು ಬಸವಪವಾಡ ಕೃತಿಯಿಂದ ತೆಗೆದುಕೊಳ್ಳಲಾಗಿದೆ. ಇಲ್ಲಿ ಬಸವಣ್ಣ ಲಕ್ಷದ ಮೇಲೆ ತೊಂಬತ್ತಾರು ಗಣಂಗಳಿಗೆ ದಾಸೋಹ ಮಾಡುತ್ತಿದ್ದನು ಎಂದು ಹೇಳುತ್ತಾ ನೀಲಲೋಚನೆಯ ವಲ್ಲಭನು ಎಂದು ಕವಿ ಬಳಸಿದ್ದಾನೆ. ಈಕೆಯ ಹೆಸರನ್ನು ಬಳಸಿದ್ದರಿಂದ ಮಹಾಮನೆಯ ಒಡತಿಯಾಗಿ ಸದಾ ಸೇವೆಯನ್ನು ಮಾಡುತ್ತಾ ಇರುತ್ತಿದ್ದಳು ಎನ್ನಬಹುದು. ಸೇವೆಯಲ್ಲಿ ಎಷ್ಟೊಂದು ತಲ್ಲೀನಳಾಗಿದ್ದಳು ಎಂಬುದನ್ನು ಶಾಂತಾದೇವಿ ಮಾಳವಾಡ ಹೀಗೆ ಅಭಿಪ್ರಾಯಪಡುತ್ತಾರೆ. "ಮಹಾಮನೆಯಲ್ಲಿ ದಿನಾಲೂ ಸಾವಿರಾರು ಜನರ ಪ್ರಸಾದ ಜರುಗುತ್ತ ಲಿದ್ದರೂ, ಸದ್ದುಗದ್ದಲವಾಗುತ್ತಿರಲಿಲ್ಲ. ಬೇಡಿದವರಿಗೆ ಬೇಡಿದ ಪ್ರಸಾದ ಎಡೆಮಾಡಲು ಸದಾ

ಸಿದ್ಧತೆ ಇರುತ್ತಿತ್ತು. ದಾಸೋಹದ ಈ ಕಾರ್ಯವನ್ನು ವ್ಯವಸ್ಥಿತವಾಗಿಸುವ ಕಾರ್ಯಶಕ್ತಿಯಾಗಿದ್ದಳು ನೀಲಾಂಬಿಕೆ. ಅವಳು ತನ್ನ ಆತ್ಮಶಕ್ತಿಯ ಬಲದಿಂದ ಬಸವಣ್ಣನ ಜಂಗಮಪ್ರೇಮಕ್ಕೆ ಭಕ್ತಿಗೆ ಮೂಲಾಧಾರವಾಗಿದ್ದಳು. ಕಾಷಾಯಕ್ಕೆ ಶರಣೆಂಬ ಬಸವಣ್ಣ, ಬೇಡಿದವರಿಗೆ ಬೇಡಿದುದನ್ನೀವ ಬಸವಣ್ಣ, ಕಳ್ಳರಲ್ಲಿಯೂ ಸಂಗಮನಾಥನನ್ನು ಕಾಣಬಲ್ಲ ಅನುಭಾವಿ, ಬಸವಣ್ಣನಂಥ ಮಹಾ ಮಹಿಮನ ಪತ್ನಿಯಾಗಿ ಅವನಿಚ್ಛೆಯಂತೆ ಕಾರ್ಯಗೈವ ಕಾಯಕ ಸುಲಭದ್ದಾಗಿರಲಿಲ್ಲ. ಆದರೆ ನೀಲಾಂಬಿಕೆ ಪತಿಭಕ್ತಿ ದೇವಭಕ್ತಿಯ ಬಲದಿಂದ ಆದರ್ಶ ಪತ್ನಿಯಾದಳು. ನಿಜಭಕ್ತಿ ನೀಲಾಂಬಿಕೆ ಎಂದು ಪ್ರಸಿದ್ಧಳಾದಳು."[೧೦೩]

ಇವರ ಅಭಿಪ್ರಾಯದಂತೆ ಈಕೆಯು ಮಹಾಮನೆಯ ಮಹಾತಾಯಿಯಾಗಿ ಕಾಯಕ ಮತ್ತು ದಾಸೋಹವನ್ನು ಎಡಬಿಡದೆ ನಡೆಸುತ್ತಿದ್ದಳು. ಹಾಗಾಗಿ ಸಿದ್ದರಾಮ ಈಕೆಯನ್ನು ಕುರಿತು ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆ.

"ತಾಯಿ-ಪರಮ ಸುಖಾಚಾರದ ಮೂರ್ತಿಯನಡಗಿಸಿ ನೀನೆಯಾದೆಯವ್ವಾ
ತಾಯೆ, ಮಹಾಜ್ಞಾನ ಕಲ್ಪಿತದಲ್ಲಿ ನೀನೆಯಡಗಿದೆಯವ್ವಾ
ತಾಯೆ ನೀಲಮ್ಮನೆಂಬ ಸುಖವಾಸ ಮೂರ್ತಿ
ಕಪಿಲ ಸಿದ್ದ ಮಲ್ಲಿನಾಥಯ್ಯ"[೧೦೪]

ಸಿದ್ದರಾಮನು ಈಕೆಯನ್ನು ತಾಯಿ ಎಂದು ಸಂಬೋಧಿಸಿದ್ದಾನೆ. ಈಕೆಯಲ್ಲಿ ಅಡಗಿದ್ದ ಪ್ರೀತಿ, ಪ್ರೇಮ ಜೊತೆಗೆ ಇವಳಲ್ಲಿಯ ಅಂತಃಕರಣೆಯಿಂದ ಸಿದ್ದರಾಮ ತಾಯಿ ಎಂದಿರಬಹುದು. ಹಾಗೆ ಕೋಲ ಶಾಂತಯ್ಯನವರು

"ಎನ್ನ ಸಲಹಿದರಯ್ಯ ಅಮ್ಮವ್ವೆ ಕೊಡುಗೂಸು
ಚೋಳಿಯಕ್ಕ, ನಿಂಬವ್ವ, ನೀಲಮ್ಮ ಮಹಾದೇವಿ ಮುಕ್ತಾಯಕ್ಕಗಳು"[೧೦೫]
"ಅವ್ವ ನೀಲವ್ವನ ಮೋಹದ ಮಗಳೆ....."[೧೦೬]

ಎಂದು ಗಟ್ಟಿವಾಳಯ್ಯ ಅಕ್ಕಮಹಾದೇವಿ ತಾಯಿ ನೀಲವ್ವ ಎಂದು ಗುರುತಿಸಿದ್ದಾನೆ.

ಈಕೆಯು ಶರಣರ ಮೇಲೆ ಇಟ್ಟಂತಹ ಭಕ್ತಿ ಹಾಗೂ ನಿಷ್ಠೆಯನ್ನು ಕುರಿತು ಹಾಗೂ ಸೇವಾಭಾವನೆಯನ್ನು ನೀಲಮ್ಮನಲ್ಲಿ ಕಾಣಬಹುದು.

"ಲಿಂಗವ ಪೂಜಿಸಿದ ಫಲ ನೀಲಲೋಚನೆಗಾಯಿತ್ತು"[೧೦೭] ಎಂದರೆ ಸಂಗಮೇಶ್ವರ ಅಪ್ಪಣ್ಣ "ಲಿಂಗದಲ್ಲಿ ನಿರವಯಲನೈದಿದರು ನೀಲನೋಚನೆಯಮ್ಮನವರು ಎಂದಿದ್ದಾರೆ."[೧೦೮]

ಘನಲಿಂಗಿದೇವರ-ವಚನದಲ್ಲಿ ಷಟ್‌ಸ್ಥಲದ ಮಾರ್ಗದ ಕುರಿತು ಹೀಗೆ ಹೇಳುತ್ತಾನೆ.

"ನೀಲಾಂಬಿಕೆಯಮ್ಮನವರ ಗರ್ಭದಲ್ಲಿ ಉದಯವಾದ
ಮೋಹದ ಕಂದನಾದ ಕಾರಣ
ಎನಗೆ ಷಟ್‌ಸ್ಥಲ ಮಾರ್ಗದ ವಿರತಿ ನೆಲೆಗೊಂಡು ನಿಂದಿತಯ್ಯ"[೧೦೯]

ಎಂದು ಘನಲಿಂಗಿದೇವರು ಆಕೆಯಲ್ಲಿ ಇರತಕ್ಕಂತಹ ಷಟ್‌ಸ್ಥಲ ಮಾರ್ಗ ಅಂದರೆ ಭಕ್ತಸ್ಥಲ, ಮಹೇಶಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಕೊನೆಗೆ ಐಕ್ಯಸ್ಥಲದ ಸ್ಥಿತಿಯನ್ನು ನೀಲಾಂಬಿಕೆಯು ಹೊಂದಿದ್ದಳು ಎನ್ನಬಹುದು. ಹಾಗಾಗಿ, ಗುಮ್ಮಳಾಪುರದ ಸಿದ್ಧಲಿಂಗದೇವರು "ಎನ್ನ ಚಿತ್ತವೆ ನೀಲಲೋಚನೆಯಮ್ಮ"[೧೧೦] ಎಂದಿದ್ದಾರೆ. ಕಾರಣ ಈಕೆಯಲ್ಲಿಯ ಸಮಚಿತ್ತಭಾವ ಜೊತೆಗೆ ಇಷ್ಟಲಿಂಗ, ಸಕೀಲಗಳ ಅರಿವು ಹಾಗೂ ಶಿವಯೋಗದ ಸಾಕ್ಷಾತ್ಕಾರ ಇವುಗಳಲ್ಲಿ ಒಳಗೊಂಡಿದ್ದರಿಂದ ಚಿತ್ತ ಚಂಚಲವಾಗದೆ ಏಕನಿಷ್ಠೆ ಕಾಣಬಹುದು. ಹಾಗಾಗಿ ಸಿದ್ದಲಿಂಗದೇವರು ಈಕೆಯನ್ನು ಹೀಗೆ ಹೋಲಿಸಿರಬಹುದು.

ಗಣದಾಸಿ ವೀರಣ್ಣ ಅಷ್ಟಾವರಣೆಗಳಲ್ಲಿ ಎರಡನೆಯದಾದ ಲಿಂಗ ಮಹತ್ವ ಮತ್ತು ಅದರ ಕುರುಹು ತಿಳಿದದ್ದು ನೀಲಾಂಬಿಕೆಗೆ ಎಂದು ಹೇಳುತ್ತಾನೆ.

"ಲಿಂಗಸಾಧ್ಯವಾಯಿತ್ತು ನೀಲಲೋಚನೆ ತಾಯಿಗೆ"[೧೧೧] ಅಂದರೆ ಲಿಂಗದ ಸ್ವರೂಪ ಮತ್ತು ಸಾಧನೆಯನ್ನು ಕಂಡುಕೊಂಡು ಅದರಲ್ಲಿಯೇ ಉತ್ಸಾಹವನ್ನು ಪಡೆಯುವಂತಾಗಿದೆ ಎನ್ನಬಹುದು. ಹಾಗೆ ಗುರುಸಿದ್ದದೇವರು ತಮ್ಮ ವಚನದಲ್ಲಿ "ಜಂಗಮವೇ ಬಸವ ಚೆನ್ನಬಸವ, ನೀಲಲೋಚನೆ ಅಕ್ಕಮಹಾದೇವಿ ಮೊದಲಾದ ಪ್ರಮಥಗಣಂಗಳ ಪ್ರಾಣಲಿಂಗ ಮೂರ್ತಿ ನೋಡಯ್ಯ."[೧೧೨]

ಇಲ್ಲಿ ಜಂಗಮ ಪದ ಚಲನಶೀಲ ಕ್ರಿಯಾಶೀಲ ಹಾಗೂ ಕೌಶಲ್ಯಪೂರ್ಣವಾದ ಚಟುವಟಿಕೆ ಮುಂತಾದವುಗಳಿಂದ ಜಂಗಮ ಪದವನ್ನು ತಿಳಿಯಬಹುದು. ಈ ವಚನದಲ್ಲಿ ಜಂಗಮವೆ ಎಂಬ ಪದವನ್ನು ಬಳಸಿದ್ದು ಸೃಜನಶೀಲತೆಯಿಂದ ಕಾರ್ಯವನ್ನು ಮಾಡುವ ನೀಲಲೋಚನೆಗೆ ಸಮರ್ಪಕವಾಗಿದೆ ಎನ್ನಬಹುದು. ಹಾಗೆ ಗುರುಸಿದ್ಧದೇವರು "ಜ್ಞಾನಗುರು ಪಾದೋದಕವೇ ನೀಲಲೋಚನೆ ತಾಯಿಗಳಯ್ಯ"[೧೧೩] ಅಷ್ಟಾವರಣಗಳಲ್ಲಿ ಜಂಗಮವಾದ ನಂತರ ವಿಭೂತಿ, ರುದ್ರಾಕ್ಷಿ, ಮಂತ್ರ, ನಂತರ ಪಾದೋದಕ, ಇಲ್ಲಿ ಜ್ಞಾನಕ್ಕೆ ಪ್ರಾಮುಖ್ಯತೆ ಇರುವುದರಿಂದ ಶುದ್ಧ ಪಾದೋದಕದ ಮನಸ್ಸು ಉಳ್ಳವಳೇ ಈಕೆಯಾಗಿದ್ದಾಳೆ. ಹಾಗೆ ಗುರುಸಿದ್ದದೇವರು ನೀಲಾಂಬಿಕೆಯನ್ನು ತನ್ನ ವಚನದಲ್ಲಿ ಅನೇಕ ಶರಣ-ಶರಣೆಯರೊಂದಿಗೆ ಸ್ಮರಿಸಿ "ಷಡ್ಗುಣ್ಯೈಶ್ವೈರ್ಯ ಸಂಪನ್ನೆ ನೀಲಲೋಚನೆ ತಾಯಿಗಳೆ"[೧೧೪] ಈಕೆಯಲ್ಲಿ ಧರ್ಮ ದೇವರು ಬಾಹಳಷ್ಟು ಕಡಿಮೆ. ಆದರೆ ಇಷ್ಟಲಿಂಗದಲ್ಲಿಯೇ ಮಹತ್ತರವಾದ ಸಾಧನೆಯನ್ನು ಕಂಡಂತಹ ಶರಣೆಯಾಗಿದ್ದಾಳೆ. ಈಕೆಯಲ್ಲಿ

ಶಿವಯೋಗದ ಹಂಬಲ ಇದ್ದುದು ಕಾಣಬಹುದು. ಆದ್ದರಿಂದಲೆ, ನಿಜಲಿಂಗ ಪ್ರೇಮಿ–ನೀಲಾಂಬಿಕೆ, ಈ ಉಕ್ತಿಯನ್ನು ಡಾ.ರಾಜಶೇಖರ ಇಚ್ಚಂಗಿ ಬಳಸಿದ್ದಾರೆ. "ಈಕೆ ಆತ್ಮಸಾಕ್ಷಾತ್ಕಾರದ ಪಥ ಹಾಗೂ ಸಿದ್ಧಾಂತ ಷಟ್‌ಸ್ಥಲ. ಶರಣ ದಾಸೋಹ ಮತ್ತು ಶಿವಾನುಭವಗಳಲ್ಲಿ ವಹಿಸಿದ ಪಾತ್ರ ಗಮನಾರ್ಹವಾಗಿದೆ. ಪತಿಸೇವೆ, ಜಂಗಮ, ದಾಸೋಹ, ಲಿಂಗಾರ್ಚನೆ ಇವು ಈಕೆಯ ವ್ಯಕ್ತಿತ್ವವನ್ನು ಹಿರಿದಾಗಿಸಿವೆ."[೧೧೫] ಎಂದು ಡಾ.ರಾಜಶೇಖರ ಇಚ್ಚಂಗಿಯವರು ಅಭಿಪ್ರಾಯಪಡುತ್ತಾರೆ. ಈಕೆಯಲ್ಲಿ ಗುರು, ಲಿಂಗ, ಜಂಗಮರ ಮೇಲೆ ಇರುವಂತ ನಿಷ್ಠೆ ತೋರುತ್ತದೆ.

ಈಕೆಯನ್ನು ಕುರಿತು ಸ್ತೋತ್ರ, ತ್ರಿಪದಿ ಹಲವಾರು ಕಾವ್ಯಗಳಿಂದ ಈಕೆಯ ವ್ಯಕ್ತಿತ್ವವನ್ನು ನೋಡಬಹುದು. ಉಪ್ಪರಗುಡಿಯ ಸೋಯಿದೇವ ಈಕೆಯ ವ್ಯಕ್ತಿತ್ವವನ್ನು ಕುರಿತು ಹೀಗೆ ಹೇಳುತ್ತಾನೆ. "ನೀಲಲೋಚನೆಯರ ನಿರ್ಮಲ ಪ್ರಸಾದವ ಕೊಂಡೆನಯ್ಯಾ ಹೀಗೆ ನೀಲಮ್ಮನ ಪ್ರಭಾವಳಿ ಅನುಭವ ಮಂಟಪದ ಶರಣ–ಶರಣೆಯರ ಮೇಲೆ ಬೆಳಗಿದೆ. ಕಲ್ಯಾಣಮ್ಮ, ಗೌರವ್ವ, ಸೋಮವ್ವ, ವಿಮಲಾಮಯ ಶಿವಮಾಯಿದೇವಿ. ಕಾಳವ್ವ, ಮೊದಲಾದವರು ಈಕೆಯಿಂದ ಜೀವನದಲ್ಲಿ ನಿರಂತರ ಮಾರ್ಗದರ್ಶನ ಪಡೆಯುತ್ತಿದ್ದರು. ಶಿವಯೋಗ ಸಾಧನೆಯಲ್ಲಿ ಮುನ್ನಡೆದಿದ್ದರು. ಲಿಂಗಮ್ಮ, ಮಹಾದೇವಿಯಮ್ಮ, ಲಕ್ಕಮ್ಮ, ರಾಯಮ್ಮ ವರದಾನಿ ಗುಡ್ಡವ್ವೆ – ಮೊದಲಾದ ಶರಣಿಯರು ಶ್ರೇಷ್ಠ ಅನುಭಾವಿ ನೀಲಮ್ಮನ ಉನ್ನತವಾದ ನಿಲುವಿಗೆ ತಲೆಬಾಗಿದ್ದರು. ವರದಾನಿ ಗುಡ್ಡೆವ್ವೆಯಂತೂ ನೀಲಮ್ಮನನ್ನು ಗುರುಸ್ವರೂಪವೆಂದು ಭಾವಿಸಿದಳು. ವೀರವಿರಾಗಿಣಿ ಜ್ಞಾನದ ಮೆರುಗಿರಿ ಪುಣ್ಯದ ಪುತ್ಥಳಿ ಅಕ್ಕಮಹಾದೇವಿ ಅವ್ವ ನೀಲವ್ವನ ಮೋಹದ ಮಗಳು ಎಂದು ಕೊಂಡಾಡಿದ್ದಾಳೆ. ವ್ಯೋಮ ಮೂರುತಿ ಪ್ರಭುದೇವರು ಇಷ್ಟಲಿಂಗದ ನಿಲುವು ನೀಲಾಂಬಿಕೆಯೇ ಬಲ್ಲಳು ಎಂದು ಮುಕ್ತ ಕಂಠದಿಂದ ಹೊಗಳಿ ಪ್ರಶಂಶಿಸಿದ್ದಾರೆ. ಲಿಂಗಪೂಜೆಯ ಮಾಡುತ್ತಿದ್ದಳು ನಿಜಭಕ್ತೆ ನೀಲಾ ಎಂದು ಹಾಡನ್ನಂತೂ ಅತ್ಯಂತ ಭಕ್ತಿಭಾವಭರಿತವಾಗಿ ಹಾಡುತ್ತಿರುವ ರೋಮಾಂಚಕಾರಿ ಸುಂದರ ದೃಶ್ಯವನ್ನು ಈಗಲೂ ನಮ್ಮ ಹಳ್ಳಿಗಳಲ್ಲಿ ಕಾಣಬಹುದು. ನೀಲಮ್ಮನ ಹೆಸರು ಅವರ ಹೃದಯದಲ್ಲಿ ನೆಲೆಗೊಂಡಿದೆ."[೧೧೬]

ಈಕೆಯನ್ನು ಕುರಿತು ನೀಲಮ್ಮನ ತ್ರಿಪದಿ ರಚನೆಗೊಂಡಿದೆ. ಆದರೆ ಈ ತ್ರಿಪದಿಗಳನ್ನು ಯಾರು ರಚಿಸಿದರೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಈ ನೀಲಮ್ಮನ ತ್ರಿಪದಿಯನ್ನು ಡಾ.ವೀರಣ್ಣ ರಾಜೂರು ಶಿವಯೋಗಪ್ರತಿ ಪೀಠಿಕೆಯಲ್ಲಿ ಸಂಪಾದನೆ ಮಾಡಿದ್ದಾರೆ. "ಈಕೆಯ ಸ್ಫುಟವಾದ ವ್ಯಕ್ತಿತ್ವವನ್ನು ಎತ್ತಿ ಹಿಡಿದ ಕೆಲವು ತ್ರಿಪದಿಗಳನ್ನು ಈ ಸಂದರ್ಭದಲ್ಲಿ ಅವಲೋಕಿಸಬಹುದು.

ಇಷ್ಟಲಿಂಗವ ನೋಡಿ ನಿಷ್ಠೆ ನಿಬೆರಗಾಗಿ
ಹೊಕ್ಕು ಎರಡವನಳಿದು ಎರಡಿಲ್ಲದೆ ಒಂದಾದ
ಅಕ್ಕನೀಲಮ್ಮ ಶರಣಾಗು(೧)

ಶ್ರೀ ಪರಮೇಶ್ವರನ ಅಪಾರ ಮಹಿಮೆಯನ್ನು
ರೂಪುಗೊಂಡಂತೆ ನಿಂದ ನೀಲಮ್ಮ ನೀ
ನೇಪೊತ್ತು ಎನಗೆ ಕೃಪೆಯಾಗು(೨)
ಕರಗಿದಗೆ ಕಾಮದಲಿ ಕೊರಗಿದಗೆ ಕ್ರೋಧದಲಿ
ಬೆರದವಗನೇಕೆ ಭವದೊಳಗೆ ನೀಲಮ್ಮ
ಪರಿಪೂರ್ಣ ರೂಪೆ ಕೃಪೆಯಾಗು(೩)"[೧೧೭]

ಈ ತ್ರಿವಿಧಿಯಲ್ಲಿ ಇಷ್ಟಲಿಂಗವ ನೋಡಿ ಅದರಲ್ಲಿ ತಲ್ಲೀನಳಾಗಿ ಎಂದು ಒಂದಾದಾಗಿ ಆತ್ಮವು ಒಂದಾಗುತ್ತದೆ. ಅಂತಹ ನೀಲಮ್ಮನೆ ಶರಣಾಗು ಪರಮೇಶ್ವರನ ರೂಪುಗೊಂಡ ಮಹಿಮೆಯನು ತಾಳಿದ ನೀನು ಕೃಪೆಯಾಗು. ಈ ದೇಹದ ವಿಷಯಂಗಣೆಗಳು ನಾರವಾಗಿ ಭವದ ಬೀಜ ಕಿತ್ತು ಪರಿಪೂರ್ಣಳಾದ ನೀಲಮ್ಮ ಕೃಪೆಯಾಗು ಎಂದು ಆಕೆಯಲ್ಲಿ ಇದ್ದ ಘನ ವ್ಯಕ್ತಿತ್ವವನ್ನು ಈ ತ್ರಿವಿಧಿ ತಿಳಿಸುತ್ತದೆ. ಹಾಗೆಯೇ ಸರ್ವಜ್ಞ ಕವಿಯು ನೀಲಲೋಚನೆಯನ್ನು ಕುರಿತು ಹೀಗೆ ಹೇಳಿದ್ದಾನೆ.

"ನೀಲಲೋಚನೆಯಮ್ಮನ ಬಾಲಶಿಶು ನಾನಯ್ಯ
ಶೂಲಧರನೊಳಗೆ ಒಡವೆರದು ಕೈಲಾಸದಿ
ಬಾಳಿ ಬದುಕೆಂದ ಸರ್ವಜ್ಞ"[೧೧೮]

ಈ ವಚನವನ್ನು ಪ್ರೊ.ಎಸ್.ಎಸ್.ಭೂಸರೆಡ್ಡಿಯವರು ಸರ್ವಜ್ಞನ ವೀರ ಗಣಸ್ತೋತ್ರದ ವಚನ ಸಂಖ್ಯೆ ೬೩, ಪು.೧೪ ರಿಂದ ತೆಗೆದುಕೊಂಡಿದ್ದಾರೆ. ಇಲ್ಲಿ ನೀಲಲೋಚನೆಗೆ ಸರ್ವಜ್ಞ ನೀಲಲೋಚನೆಗೆ ಬಾಲಶಿಶು ನಾನಯ್ಯ ಎಂದಿದ್ದಾನೆ. ಹಾಗೆ ಪರಮಾತ್ಮನಲ್ಲಿ ಬೆರೆತು ಕೈಲಾಸದಿ ಬಾಳಿ ಬದುಕು ಎಂದು ನೀಲಾಂಬಿಕೆಯನ್ನು ಹರಸಿದ್ದಾನೆ. ಈ ವಚನದಲ್ಲಿ ಬಾಲಶಿಶು ಎಂದು ಕರೆದಿದ್ದು ನೋಡಿದರೆ ಈಕೆಯ ಮಾತೃ ವಾತ್ಸಲ್ಯದ ಘನತೆಯನ್ನು ಕಂಡುಕೊಳ್ಳಬಹುದು ಹಾಗೆಯೇ ಈಕೆಯನ್ನು ಕುರಿತು ನೀಲಾಂಬಿಕಾ ಲಲಿತಸ್ತೋತ್ರ, ನೀಲಮ್ಮನ ಸ್ತೋತ್ರಗಳು ಈಕೆಯ ಮಹಿಮೆಯನ್ನು ಹಾಗೂ ಬಸವಣ್ಣನ ಸತಿಯಾಗಿ ನಡೆದುಕೊಂಡ ಬಗೆಯನ್ನು ಇಲ್ಲಿ ಒಳಗೊಂಡಿವೆ. ಉದಾಹರಣೆಗೆ

"ನೀಲಲೋಚನೆಯ ಕಂಗಳ ಚೆಲ್ವಕಪ್ಪಿಂಗೆ
ನೀಲೋತ್ಪಲಂಗಳೆಣೆಯಲ್ಲ ಬೆಳಗಿಂಗೆ ತಾ
ನೀ ಮೇಘದ ಮಿಂಚು ಸಾಟಿಯೆಯಲ್ಲವದು ಲಕ್ಷಣದ ರುಚಿಯ ಬೆಳಗಿದೊ

ನೀಲಕಂಠನ ಬಸವನರಿದ ಜ್ಞಾನದ ಬೆಳೆಗೆ
ನೀಲಲೋಚನೆಗೆ ನೇತ್ರಗಳಾದ ಎಲ್ಲದಡೆ
ನೀಲನೋಚನೆ ಬಸವಗೆಯೆರಡು ತನುಗಂಡಬೆರುಂಡನಂತೆ ಸದರೂ"[೧೯]

ಈ ಸ್ತೋತ್ರದಲ್ಲಿ "೨೪ ಪದ್ಯಗಳು ಮಾತ್ರ ಇವೆ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಮುರಿಗೇಸ್ವಾಮಿಗಳು ನಿರೂಪಿಸಿದ ನಾದ್ಯಸಿದ್ಧೇಶ್ವರನ ಭಾಮಿನಿ ಪುರಾಣದ ನಾಂದ್ಯ ಮೊದಲಾದ ೨೪ ಗ್ರಂಥಗಳಿವೆ."[೨೦] ಈ ಸ್ತೋತ್ರದ ನೀಲಲೋಚನೆಯನ್ನು ಜ್ಞಾನ, ಕ್ರಿಯೆಯನ್ನು ಕುರಿತು ಹೇಳುತ್ತದೆ ಹಾಗೆ ನೀಲಮ್ಮನ ಸ್ತೋತ್ರ ಟೀಕು ಸಹಿತವಾಗಿ ಇರುವಂತದ್ದನ್ನು ಪ್ರೊ. ಎಸ್.ಎಸ್.ಭೂಸರೆಡ್ಡಿಯವರು ಸಂಪಾದನೆ ಮಾಡಿದ್ದಾರೆ. ಈ ಹಸ್ತಪ್ರತಿಯನ್ನು ಚಂದನಗೌಡ್ರು ಕೊಟ್ಟಿದ್ದಾರೆ ಎಂದು ತಿಳಿಯಬಹುದು. ಆದರೆ ಇದು ಯಾರಿಂದ ರಚನೆಯಾದದ್ದು ಎಂಬುದು ತಿಳಿಯುವುದಿಲ್ಲ. ಈ ಸ್ತೋತ್ರ ಪ್ರಾರಂಭದಲ್ಲಿ ಶ್ರೀಗುರು ಬಸವಲಿಂಗಾಯ ನಮಃ ಎಂಬುದನ್ನು ಕಾಣುತ್ತೇವೆ.

"ಶರಣು ಶರಣಾಹಿತ ಮತಹತಕಾಲಜಿತ ನಿಮಗೆ
ಶರಣು ಶರಣಾವಾಗ ನಿಮ್ಮ ಮೃದು ಪದಂಗಳಿಗೆ
ಶರಣೆಂದು ದುರಿತವನು ಕಳವೆ ನೀನೆನ್ನಯ
ಜಗದ್ಗುರು ಬಸವರಾಜನರಸಿ

ನೀಲಮ್ಮನ ಸ್ತೋತ್ರ-ನಿಸ್ಪ್ರಹತ್ವ ನಿರಾಪೇಕ್ಷತ್ವ-ನಿರ್ಮೋಹತ್ವ ನಿರ್ಮಾಯಕಾರದಿಂದ ಭಕ್ತಿಯ ಮಾಡಿ ಮುಕ್ತಿಯನು ಹಡೆದಂಥ ನೀಲಲೋಚನೆಯಮ್ಮನವರೆಂಬ ಚಿತ್‌ಶಕ್ತಿಯರ ಸ್ತೋತ್ರಸ್ತುತ್ಯವು.

ಶರಣು-ಶರಣು-ಭೋ ಎಲೆ ನೀಲಲೋಚನೆಯಮ್ಮನವರ ಪಾದಾರವಿಂದಕ್ಕೆ ನಮಸ್ಕಾರ ನಮಸ್ಕಾರವು, ಅಹಿತ-ಹಿತವಲ್ಲದಿದ್ದಂಥ ವೈದಿಕ, ವೈಷ್ಣವ, ಜೈನ, ಬೌದ್ಧ, ಚಾರ್ವಾಕ ಮಾಯಾವಾದಿಗಳ ಮತ ಷಣ್ಮತಗಳನು ಹತ-ಸಂಹರಿಸಿದಂಥ ಕಾಲ, ಯಮ, ಮರಣ, ಬಾಧೆಯನು ಜಿತ-ಗೆದ್ದಂಥ ನಿಮಗೆ ನೀಲಲೋಚನಮ್ಮನವರಿಗೆ. ಆವಾಗ ಎಲ್ಲ ಕಾಲದಲ್ಲೂ ಶರಣು-ನಮಸ್ಕಾರವು."[೨೧] ಹಾಗೆಯೇ ಈಕೆಯನ್ನು ಕುರಿತು, ನೀಲಮ್ಮನ ಉರುಟವಣೆಯ ಹಾಡು ಈ ಹಾಡುಗಳಲ್ಲಿ ನೀಲಮ್ಮನ ಆಧ್ಯಾತ್ಮ ಜೀವನವನ್ನು ಜೊತೆಗೆ ಲಿಂಗಾಂಗ ಸಾಮರಸ್ಯವನ್ನು ವೈರಾಗ್ಯದ ನಿಲುವನ್ನು ಶರಣಸತಿ ಲಿಂಗಪತಿ ಭಾವವನ್ನು ಹೇಳುತ್ತದೆ. ಹೀಗೆ ನೀಲಮ್ಮನ ವ್ಯಕ್ತಿತ್ವದ ಅನಾವರಣಕ್ಕೆ ಬೇರೆ ಬೇರೆ ಮೂಲಗಳಿಂದ ಉಲ್ಲೇಖಗಳನ್ನು ಸಂಗ್ರಹಿಸಲಾಗಿದೆ. ನೇರವಾಗಿ ಸಾಹಿತ್ಯಕವೆಂದು ಪರಿಗಣಿಸುವ ಪುರಾಣಕಾವ್ಯಗಳಲ್ಲಿ ವ್ಯಕ್ತಿತ್ವ ಕುರಿತಂತೆ ಅಥವಾ

ಮಹಾಮನೆಯ ಸಂದರ್ಭದ ವಿವರ ಅಷ್ಟಾಗಿ ಸಿಗದಿರುವ ಕಾರಣ ಶರಣರ ವಚನ ರಚನೆಗಳ ಮೂಲಕ ಗ್ರಹಿಸಲು ಪ್ರಯತ್ನಿಸಲಾಗಿದೆ.

ನೀಲಾಂಬಿಕೆ ಬಸವಣ್ಣನವರ ಬಾಳಿನಲ್ಲಿ ಕವಿ ಧೂಪದ ರಾಜೇಶ ಹೇಳುವಂತೆ; "ಶಶಿವದನೆ ನೀಲಾಂಬಿಕೆಯ...."[೧೨೨] ಅಂದರೆ ಚಂದ್ರನ ಹೊಂಬೆಳಕನ್ನು ಬೀರಿ ಬಸವಣ್ಣನ ಜೊತೆಯಲ್ಲಿ ಕಾಲವನ್ನು ಕಳೆದ ಸಾರ್ಥಕ ಜೀವನ ಇವಳದಾಗಿದೆ. "ಅಂಬ ಶಂಭು ಪದಪನ್ನ ಹೃತ್ಯ ಮುತ್ಕೌಮುಡೀ ವಿತತಮಂದ ಸುಸ್ಮಿತೇ। ಶಂಬರಾರ ಹರಟಂಗ ಸಂಗತೇ ನೀಲಮಾಂಬ ಸದಯೇವಮಾಂ ಮುದಾ॥೧॥"[೧೨೩] ಈ ನೀಲಾಂಬಾಸ್ತರ್ವದಲ್ಲಿ ಶ್ರೀಮತ್ ಆರ್ಯ ಬಸವೇಶ ಭಾಮಿನಿ ಎಂದರೆ ಬಸವಣ್ಣನವರ ಪತ್ನಿಯೆಂದು ಶೈವ ಭಕ್ತಿಧೃತ ಸುಸ್ವರೂಪಿಣಿ=ಶಿವನಲ್ಲಿ ಅಪಾರವಾದ ಭಕ್ತಿಯನ್ನಿಟ್ಟು ಆದರದಲ್ಲಿ ಕಾಣುವಳು ಎಂಬುದಾಗಿ ಇವಳನ್ನು ವರ್ಣಿಸಲಾಗಿದೆ.

ಈ ಮೇಲಿನ ಚರ್ಚೆಯಂತೆ ನೀಲಾಂಬಿಕೆಯಲ್ಲಿದ್ದ ಪತಿನಿಷ್ಠೆ ಹಾಗೂ ದೃಢವಾದ ನಂಬಿಕೆ, ಭಕ್ತಿ, ವಿಶ್ವಾಸ, ಇತರರ ನೋವುಗಳಿಗೆ ಸ್ಪಂದಿಸುವ ಗುಣ ಈಕೆಯಲ್ಲಿ ಅಡಗಿದ್ದು ಕಾಣುತ್ತೇವೆ. ಅಲ್ಲದೆ ಈಕೆಯ ಸಾತ್ವಿಕ ಪ್ರವೃತ್ತಿ ಕಂಡುಬರುತ್ತದೆ ವಿನಃ ಬೇರೆ ರೀತಿಯ ಅಂಶಗಳು ಕಂಡುಬರುವುದಿಲ್ಲ. ಆದ್ದರಿಂದಲೇ ನೀಲಾಂಬಿಕೆ ಕಾರ್ಯವೈಖರಿಯು ಈಕೆಯಲ್ಲಿ ಸೃಜನಶೀಲತೆಯನ್ನು ಎತ್ತಿ ತೋರಿಸುತ್ತದೆ.

**ಇ. ಕಲ್ಯಾಣ ಕ್ರಾಂತಿಯಿಂದ ಐಕ್ಯದವರೆಗೆ**

ಬಸವಣ್ಣನ ವಿವಾಹದಿಂದ ಹಿಡಿದು ಕಲ್ಯಾಣ ಕ್ರಾಂತಿಯಲ್ಲಿ ಪಾಲ್ಗೊಂಡಿರಬಹುದು. ಅದರಂತೆ ಕಲ್ಯಾಣಕ್ರಾಂತಿಯ ಪೂರ್ವಪರ, ಕಲ್ಯಾಣ ಕ್ರಾಂತಿಯಲ್ಲಿ ಪಾಲ್ಗೊಳ್ಳುವಿಕೆ, ಕಲ್ಯಾಣ ಕ್ರಾಂತಿಯ ನಂತರ ಈಕೆಯು ಕಲ್ಯಾಣದಲ್ಲಿದ್ದಳೋ ಅಥವಾ ಬಸವಣ್ಣನ ಕರೆಯ ಮೇರೆಗೆ ಕೂಡಲ ಸಂಗಮಕ್ಕೆ ಬಂದಳೋ? ಅಥವಾ ಮಾರ್ಗದಲ್ಲಿ ಅಂದರೆ ಸಂಗಮಕ್ಕೆ ಹತ್ತಿರವಾದ ತಂಗಡಗಿಯಲ್ಲಿ ಐಕ್ಯವಾದಳೊ? ಈ ಕುರಿತು ಚರ್ಚಿಸಲಾಗುವುದು.

"ಕಲ್ಯಾಣಕ್ರಾಂತಿಯ ಪೂರ್ವದಲ್ಲಿ ಅಂದರೆ ಹರಳಯ್ಯ ಮಧುವಯ್ಯರ ಮತ್ತು ಮಕ್ಕಳ ವಿವಾಹಕ್ಕೆ ಪುರೋಹಿತಶಾಹಿಗಳು ವಿರೋಧ ಮಾಡಿದ್ದು ಮತ್ತು ಆಡಳಿತ ವೈಫಲ್ಯಗಳಿಂದ ಕಲ್ಯಾಣಕ್ರಾಂತಿ ಜರುಗಲು ಕಾರಣವಾಯಿತು"[೧೨೪] ಎಂದು ಡಾ.ಚೆನ್ನಮಲ್ಲಸ್ವಾಮೀಜಿ ಹೇಳಿದರು. ಹಾಗೆ ನೀಲಗಂಗಾ ಚರಂತಿಮಠ "ನೀಲಾಂಬಿಕೆಯ ಕಲ್ಯಾಣಕ್ರಾಂತಿಯ ಹಿಂಸೆ ಅಂದರೆ ಅನ್ಯಧರ್ಮಿಯರ ವಿವಾಹ ವಿರೋಧ, ಜೊತೆಗೆ ಶಿಕ್ಷೆ ನೀಡಿದ್ದು, ಕಂಡು ತನ್ನ ಅಣ್ಣ ಬಿಜ್ಜಳನಲ್ಲಿ ಈ ಹಿಂಸೆಗೆ ಮುಂದಾಗಬೇಡ ಎಂದು ಹೇಳಿರಬೇಕು"[೧೨೫] ಎಂದು ಅಭಿಪ್ರಾಯಪಟ್ಟರು. ಹಾಗೆ

ಡಾ.ಎಂ.ಎಂ.ಕಲ್ಬುರ್ಗಿಯವರು "ಕಲ್ಯಾಣಕ್ರಾಂತಿ, ವಿವಿಧ ಧರ್ಮಗಳ ಭಿನ್ನ ತತ್ವಗಳು ಹಾಗೂ ಇದರಿಂದ ಕಳಚಿಕೊಂಡ ಶರಣ ಸಮಾಜ ತನ್ನದೇಯಾದ ನೆಲೆಯನ್ನು ಕಾಣಲು ಅನುಭವ ಮಂಟಪದ ಮೂಲಕ ಹೊಸದಾದ ಚಿಂತನೆಗಳನ್ನು ಮೂಡಿಸಿದ್ದು ಕೂಡ ಕಲ್ಯಾಣ ಕ್ರಾಂತಿಗೆ ಕಾರಣವಾಗಿರಬಹುದು. ಮನನೊಂದ ಬಸವಣ್ಣ ಕೂಡಲಸಂಗಮಕ್ಕೆ ಬಂದನು. ಹಾಗೆ ಹಡಪದ ಅಪ್ಪಣ್ಣನ ಮೂಲಕ ನೀಲಾಂಬಿಕೆಯನ್ನು ಕರೆಯಲಿಕ್ಕೆ ಹೋಗಿದ್ದು ಕಾವ್ಯಗಳಲ್ಲಿ ಕಾಣುತ್ತೇವೆ. ಹಾಗೆ ತಂಗಡಗಿಯಲ್ಲಿ ಆಕೆ ಸಮಾಧಿಯೆಂದು ಅಲ್ಲಿನ ಜನಾಭಿಪ್ರಾಯವಿರುವುದರಿಂದ ಈಕೆ ತಂಗಡಗಿಯಲ್ಲಿ ಐಕ್ಯವಾಗಿರಬಹುದು"[೧೨೬] ಎಂದು ತಿಳಿಸಿದರು. ಜೊತೆಗೆ ಗುಂಡಕನಾಳದ ಬಿರಾದಾರ ಶಂಕರಗೌಡ್ರು "ನೀಲಾಂಬಿಕೆ ಬಸವಕಲ್ಯಾಣದಿಂದ ಬಳಗಾನೂರ, ಮುದ್ದೇಬಿಹಾಳ, ತಂಗಡಗಿಗೆ ಬಂದ ಮೇಲೆ ಬಸವಣ್ಣನ ಐಕ್ಯದ ವಿಚಾರ ತಿಳಿದು, ತಾನು ಲಿಂಗದಲ್ಲಿ ಐಕ್ಯವಾದಳು ಎಂದು ತಿಳಿಸಿ ಈಕೆಯ ದೇವಸ್ಥಾನ ಬಳಗಾನೂರಲ್ಲಿ ಕಾಣಬಹುದು"[೧೨೭] ಎಂದು ತಿಳಿಸಿದರು. ಹಲವಾರು ಮಠಾಧೀಶರು ಹಾಗೂ ವಿದ್ವಾಂಸರೊಂದಿಗೆ ಚರ್ಚಿಸಿದಾಗ ನೀಲಾಂಬಿಕೆಯು ತಂಗಡಗಿಯಲ್ಲಿ ಐಕ್ಯವಾದ ಬಗ್ಗೆ ಹೇಳಿದರೆ ಹೊರತು, ಈಕೆಯು ಕ್ರಾಂತಿಯಲ್ಲಿ ಪಾಲ್ಗೊಂಡದ್ದನ್ನು ತಿಳಿಸುವುದಿಲ್ಲ. ಆದರೆ ಇವರೆಲ್ಲ ಹೇಳಿಕೆಗಳನ್ನು ಗಮನಿಸಿದಾಗ ನೀಲಮ್ಮ ಬಸವಣ್ಣ ಸಂಗಮಕ್ಕೆ ಬಂದದ್ದು ಗಮನಿಸಿ ಹಿಂದೆಯೇ ಬಂದಿರಬೇಕು ಎಂದು ಹೇಳುವ ಸಾಧ್ಯತೆ ಇದೆ.

ಬೀದರ್ ಜಿಲ್ಲೆ ಬಸವಕಲ್ಯಾಣದ ಮಲ್ಲಮ್ಮ ತಾಯಿ ಕಲ್ಯಾಣಕ್ರಾಂತಿಯಾಗಿದ್ದು, ಬಿಜ್ಜಳನ ಕೊಲೆಯಾಗಿದ್ದು, ಇದನ್ನೆಲ್ಲ ನಮ್ಮ ಹಿರಿಯರು ಹೇಳುತ್ತಿದ್ದರು. ಆದರೆ ಸೌಮ್ಯಳಾದ ನೀಲಾಂಬಿಕೆ ಯುದ್ಧದಲ್ಲಿ ಪಾಲ್ಗೊಂಡಳೋ ಇಲ್ಲವೋ ತಿಳಿಯದು. ಮುಂದೆ ಬಿಜಾಪುರ ಜಿಲ್ಲೆ ಕೂಡಲಸಂಗಮದ ಹತ್ತಿರ ತಂಗಡಗಿ ಊರಲ್ಲಿ ಐಕ್ಯವಾದಳೆಂದು ತಿಳಿಸಿದರು. ಬಸಪ್ಪನವರು ಕಲ್ಯಾಣಕ್ರಾಂತಿ ನಡೆಯಲಿಕ್ಕೆ ಜಾತಿನೇ ಕಾರಣವಾಗಿದೆ. ಏಕೆಂದರೆ ಹರಳಯ್ಯ ಮಧುವಯ್ಯರ ಮಕ್ಕಳ ಮದುವೆ, ಚಾಡಿಕೋರರು ಬಿಜ್ಜಳನಿಗೆ ತಿಳಿಸಿ, ಈ ಮಕ್ಕಳನ್ನು ಹಿಂಸೆಕೊಟ್ಟು ಕೊಂದರು. ಆಗ ಬಿಜ್ಜಳನ ಕೊಲೆಯಾಯಿತು ಎಂದು ಕೋಟೆಯನ್ನು ತೋರಿಸುತ್ತಾ ಹೇಳಿದರು. ಬಸಪ್ಪಜ್ಜರು ಮುಂದುವರಿದು ನೀಲಮ್ಮ ತಾಯಿ ಹಡಪದ ಅಪ್ಪಣ್ಣ ಕರೆದುಕೊಂಡು ಸಂಗಮಕ್ಕೆ ಹೋದರು. ಅಲ್ಲಿಯೇ ಐಕ್ಯವಾದರೆಂದು ತಿಳಿಸಿದರು. ಆದರೆ ಕಲ್ಯಾಣದಲ್ಲಿ ಐಕ್ಯವಾಗಿಲ್ಲ ಎಂಬುದು ಇದರಿಂದ ತಿಳಿಯಿತು ಮತ್ತು ಬಿಜಾಪುರ ಜಿಲ್ಲೆ ತಂಗಡಗಿಯ ಹಡಪದ ರಾಚಪ್ಪ ಯಜಮಾನರನ್ನು ಕೇಳಿದಾಗ ನೀಲಮ್ಮನವರು ಕಲ್ಯಾಣದಿಂದ ಬಳಗಾನೂರ ಮುದ್ದೇಬಿಹಾಳ ಮಾರ್ಗವಾಗಿ ತಂಗಡಗಿಗೆ ಬಂದರೆಂದು ತಿಳಿಸಿದರು. ಮತ್ತು ಆಕೆಯ ದಂತಕಥೆಯನ್ನು ಹೇಳಿದರು. ನೀಲಮ್ಮ ಬಂದಳು ಬಾಯಾರಿಕೆಯಾಗಿತ್ತು, ನೀರು ಕೊಡಲಿಲ್ಲ, ಅನ್ನವನ್ನು ನೀಡಲಿಲ್ಲ. ಆಗ ನಮ್ಮಲ್ಲಿಯ

ಸೊಸೆಯಂದಿರು, ನೀರು ಮತ್ತು ಆಹಾರವನ್ನು ನೀಡಿದರು. ಹಾಗಾಗಿ ನಮ್ಮ ಊರಿನಲ್ಲಿ ಸೊಸೆಯಂದಿರಿಗೆ ಒಳ್ಳೆಯ ಕೃಪೆ ತೋರಿದ್ದಾಳೆ. ಆದರೆ ನಮ್ಮ ಊರಿನ ಮಕ್ಕಳನ್ನು ಬೇರೆ ಊರಿಗೆ ವಿವಾಹ ಮಾಡಿದಾಗ ಒಂದಲ್ಲ ಒಂದು ತೊಂದರೆಯಲ್ಲಿ ಇರುತ್ತಾರೆ ಎಂದು ಹೇಳಿದರು. ಹಾಗೂ ತಂಗಿ-ಅಡಗಿದ ಊರು ತಂಗಡಗಿಯಾಗಿದೆ ಎಂದು ಹೇಳಿದರು.

ತಂಗಡಗಿಯ ಹಡಪದ ಅಪ್ಪಣ್ಣಸ್ವಾಮಿಜಿ ಅಪ್ಪ ಬಸವನೇ ತಂದೆ, ಅವ್ವ ನೀಲಮ್ಮಳೇ, ತಾಯಿ ಕಲ್ಯಾಣ ಶರಣ-ಶರಣೆಯರೇ ಎನ್ನ ಬಂಧು ಬಳಗವೆಂದು ಹೇಳುತ್ತಾ ಅಪ್ಪಣ್ಣ ತಂದೆ ನೀಲಮ್ಮ ತಾಯಿ ಬಸವಣ್ಣನವರ ಆಪ್ತಕಾರ್ಯದರ್ಶಿ, ಈಕೆ ಕಲ್ಯಾಣದಲ್ಲಿ ಐಕ್ಯವಾಗಿಲ್ಲ ಏಕೆಂದರೆ ಅಪ್ಪಣ್ಣನವರೆ ಕರೆದುಕೊಂಡು ಸಂಗಮಕ್ಕೆ ಬರುತ್ತಿದ್ದರು. ಬಸವಣ್ಣನವರ ಐಕ್ಯವಾದದ್ದು ತಿಳಿದು, ತಂಗಡಗಿಯ ಕೃಷ್ಣ ನದಿಯ ದಂಡೆಯಲ್ಲಿ ಪೂಜೆಯಲ್ಲಿ ತಲ್ಲೀನರಾದಾಗ ಐಕ್ಯರಾದರೆಂದು ತಿಳಿಸಿದರು. ಅಮರಗೋಳದ ಎಂ.ಎಚ್.ನದಾಫರು ನೀಲಾಂಬಿಕೆಯವರು ಕಲ್ಯಾಣಕ್ರಾಂತಿಯಾದ ಮೇಲೆ ಹಡಪದ ಅಪ್ಪಣ್ಣನವರೊಂದಿಗೆ ತಂಗಡಗಿಗೆ ಬಂದರು. ಆದರೆ ದುಃಖದಿಂದ ಕೂಡಿದ ನೀಲಮ್ಮನವರಿಗೆ ಸಮಾಧಾನ ಹೇಳುವವರು ಯಾರು ಇರಲಿಲ್ಲ. ಏಕೆಂದರೆ ಬಿಜ್ಜಳ ಹಳ್ಳಿಯಿಂದ ಹಳ್ಳಿಯ ಅಧಿಕಾರಿಗಳಿಗೆ ತಿಳಿಸಿದ್ದರಿಂದ, ಅನ್ನ ನೀರು ಕೊಡಬಾರದು ಎಂಬ ಆಜ್ಞೆಯಾಗಿತ್ತು. ಹೀಗಿದ್ದಾಗ ನೀಲಾಂಬಿಕೆ ತಂಗಡಗಿಗೆ ಬಂದು ಕೃಷ್ಣಾನದಿಯಲ್ಲಿ ಸ್ನಾನ ಮಾಡಿ ಪೂಜೆಯಲ್ಲಿಯೇ ಬಸವಣ್ಣನ ನೆನೆದು ಐಕ್ಯವಾದರು ಎಂದು ತಿಳಿಸಿದರು.

ಬಿಜಾಪುರ ಜಿಲ್ಲೆ ಹುನಗುಂದ ತಾಲೂಕು ಬೆಳಗಲ್ಲ ಈರಮ್ಮನವರು ತಂಗಡಗಿಯಿಂದ ನಮ್ಮ ಗ್ರಾಮವು ೧೫ ಕಿ.ಮೀ. ಆದರೆ ನಾವು ಆಗಾಗ, ಅಲ್ಲಿಗೆ ಹೋಗುತ್ತಿದ್ದೇವೆ. ಅಲ್ಲಿ ನೀಲಮ್ಮನ ಗದ್ದುಗೆ ಅಥವಾ ಸಮಾಧಿ ಸ್ಥಳವೆಂದು ಕರೆಯುತ್ತಾರೆ ಎಂದು ತಿಳಿಸಿದರು. ಕೂಡಲಸಂಗಮದ ಜಾತವೇದ ಮುನಿಸ್ವಾಮಿಗಳು, ಬಸವಣ್ಣ ಸಂಗಮಕ್ಕೆ ಬಂದು ಐಕ್ಯವಾದ ನಂತರ ನೀಲಾಂಬಿಕೆಯು ಬರುತ್ತಾಳೆ. ಹೊಳೆ ತುಂಬಿಬರುತ್ತಿದ್ದುದರಿಂದ ದಾಟಲಿಕ್ಕೆ ಆಗದೇ ಪೂಜೆಯಲ್ಲಿ ತಲ್ಲೀನಳಾಗಿ, ಐಕ್ಯವಾದಳು ಎಂದು ತಿಳಿಸಿದರು. ಹಾಗೂ ಕೂಡಲಸಂಗಮ, ಇಟಗಿ, ಧನ್ನೂರ, ತಮದಡ್ಡಿ(ಬಳಗಾನೂರ ಹತ್ತಿರ) ಕುಂಟೋಜಿ ಮುದ್ದೇಬಿಹಾಳ ಮುಂತಾದ ಈಕೆಯ ಸಮಾಧಿಯ ಪರಿಸರದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ, ಮೇಲಿನ ಉದಾಹರಣೆಗಳು ಬಹಳಷ್ಟು ಕಂಡುಬರುತ್ತವೆ. ಹಾಗಾಗಿ ಈಕೆಯ ಸಮಾಧಿಯು ಇದೇ ಇರಬಹುದು ಎಂದು ಊಹಿಸಬಹುದು.

ಬೆಳಗಾವಿ ಜಿಲ್ಲೆಯ ಪರಿಸರದಲ್ಲಿ ಅಂದರೆ ಬೈಲಹೊಂಗಲ ತಾಲೂಕಿನ ಮುರಕಿಬಾವಿಯು ಸಹಿತ ನೀಲಮ್ಮ ಐಕ್ಯ ಸ್ಥಳವೆಂದು ಪ್ರತೀತಿಯಿದೆ. ಆದರೆ ಅಲ್ಲಿಯ ಪರಿಸರದಲ್ಲಿಯ ಮುರಗೋಡ,

ಕಾದ್ರವಳ್ಳಿ, ಕಿತ್ತೂರ, ಬೆಳಗಾವಿ ಈ ಪರಿಸರದಲ್ಲಿ ಶರಣ ಶರಣೆಯರು ಉಳವಿಯ ಮಾರ್ಗವಾಗಿ ಹೋಗುವ ಸಂದರ್ಭದಲ್ಲಿ ಬಂದು ಹೋಗಿದ್ದಾರೆ ಎಂದು ಮುರುಗೋಡ ಶ್ರೀಗಳು ತಿಳಿಸಿದರು. ಮುರಕಿ ಭಾವಿಯಲ್ಲಿ ವಕ್ತೃಗಳನ್ನು ಸಂಪರ್ಕಿಸಿದ ಸಂದರ್ಭದಲ್ಲಿ, ನೀಲಾಂಬಿಕೆ ಇಲ್ಲಿ ಬಂದು ಸ್ನಾನ, ಪೂಜೆ ಮಾಡಿಕೊಂಡು ಹೋಗಿದ್ದಾರೆ. ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಬಾವಿ ಇದಾಗಿದೆ ಎಂದು ತಿಳಿಸುತ್ತಾ, ಅಲ್ಲಿಯ ಬಸಪ್ಪ, ಹನುಮಂತಪ್ಪ ಮುಂತಾದವರು ನೀಲಮ್ಮನ ಸಮಾಧಿ ಇದೆ ಎಂದು ಹೇಳಿದರು. ಆದರೆ ಇದು ಕೆಲವು ವರ್ಷಗಳ ಹಿಂದೆ ಪಾಳುಬಿದ್ದಿತ್ತು. ಇಂಚಲ ಶ್ರೀಗಳು ಹೇಳಿದಂತೆ ಈಕೆ ಕಲ್ಯಾಣನೀಲಮ್ಮ ಎಂದು ಹೇಳಿದ್ದು ಮತ್ತು ಈಕೆಯನ್ನು ನಾವು ಸ್ಮರಿಸುತ್ತೇವೆ ಎಂದು ಹೇಳಿದರು. ಆದರೆ ಇವರ ಮಾತುಗಳನ್ನು ಗಮನಿಸಿದಾಗ ಇದು ತೋರುಗದ್ದುಗೆಯಾಗಿದೆ ಎಂದು ಹೇಳಬಹುದು. ಇದನ್ನೆ ಎಂ.ಎಂ.ಕಲ್ಬುರ್ಗಿಯವರು ಸಹಿತ ತೋರುಗದ್ದುಗೆಯಾಗಿದೆ ಎಂದು ಹೇಳಿದರು.

ವಕ್ತೃಗಳ ವಿವರದಿಂದ ಕಲ್ಯಾಣಕ್ರಾಂತಿಯಲ್ಲಿ ಈಕೆಯ ಪಾತ್ರವು ಇಲ್ಲ. ಬಸವಣ್ಣ ಹೇಳಿಕಳಿಸಿದಂತೆ ಸಂಗಮಕ್ಕೆ ಬರುವ ಮಾರ್ಗದಲ್ಲಿ ತಂಗಡಗಿ ಗ್ರಾಮದಲ್ಲಿ ಐಕ್ಯವಾದಳು ಎಂಬುದು ತಿಳಿದುಬರುತ್ತದೆ. ಈಕೆಯನ್ನು ಕುರಿತು ಜನಪದ ಸಾಹಿತ್ಯದಲ್ಲಿಯ ಉಲ್ಲೇಖ

“ಕಲ್ಯಾಣ ಕ್ರಾಂತ್ಯಾಗಲು ಎಲ್ಲ ಶಿವಶರಣರಂದು
ತಲ್ಲಣಗೊಳ್ಳುತ ಕಲ್ಯಾಣಬಿಡಲು
ಅಲ್ಲೋಲಕಲ್ಲೋಲ ಕಲ್ಯಾಣ
ಬಲ್ಲಿದ ಬಿಜ್ಜಳನ ಕಲ್ಲೆದೆಯ ಮಂಚಣ್ಣ
ಕೊಲ್ಲಿಸಿಬಿಟ್ಟ ಕುತಂತ್ರದಿಂದಾ
ತಲ್ಲಣಗೊಂಡಳು ನೀಲಮ್ಮಾ”[೧೨೮]

ಕಲ್ಯಾಣದೊಳಗೆ ನಡೆದ ಕ್ರಾಂತಿಯ ವಿವರವನ್ನು ಈ ಜನಪದ ನೀಡುತ್ತಾ ಕ್ರಾಂತಿಯಾದ್ದರಿಂದ ಶಿವಶರಣರು ತಲ್ಲಣಗೊಳ್ಳುವ ಹಾಗೂ ಬಿಟ್ಟು ಹೋಗುತ್ತಾರೆ. ಕಠೋರ ಹೃದಯದ ಮಂಚಣ್ಣ ಬಿಜ್ಜಳನನ್ನು ಕೊಲೆ ಮಾಡಿಸುತ್ತಾನೆ. ನೀಲಮ್ಮ ಭಯಗೊಂಡಿದ್ದಾಳೆ. ಹಾಗೂ ಬಸವಣ್ಣ ಸಂಗಮಕ್ಕೆ ಬರುವಂತೆ ತಿಳಿಸುವನು. ಶರಣ ಶರಣೆಯರನ್ನು ಬಿಟ್ಟು ಹೋಗುವುದಿಲ್ಲ ಎಂದಾಗ “ಬಸವಣ್ಣ ನಿನಗಾಗಿ ಬಸವಳಿದು ನಿಂತಾನ ಎಣೆವ ಕೂಡಲದಾ ಸಂಗಮದಾಗ ಕುಶಲೋಪರಿಗಾಗಿ ಕಾದಾನ”[೧೨೯] ಎಂದು ಹೇಳಿದಾಗ ದುಃಖದಿಂದ

“ಅಕ್ಕ ಗಂಗಾಂಬಿಕೆ ದುಃಖದಿ ಮತ್ತೆ ಮರಗಿ
ಒಕ್ಕೊರಲಿನಿಂದ ತಂಗಿಯ ಅಪ್ಪುತಲಿ

ಬಿಕ್ಕುತೆ ಗಂಗಮ್ಮ ಬೀಳ್ಕೊಡಲು
ಶರಣರ ಸಲಹೆಯಂತೆ ಹೊರಡಲು ನೀಲಮ್ಮ
ತೊರೆದು ಕಲ್ಯಾಣವ ಹೊರಳಿ ನೋಡದೆ
ಮರಳಿ ಬಾರೆನು ಮತ್ತೆ ಶರಣರೆ"[೧೩೦]

ಈ ಜನಪದದಲ್ಲಿ ಅಕ್ಕ ಗಂಗಾಂಬಿಕೆ ಅಪ್ಪಿಕೊಂಡು ನೀನು ಅಪ್ಪಣ್ಣನೊಂದಿಗೆ ಸಂಗಮಕ್ಕೆ ಹೋಗಬೇಕು ಎಂದು ಹೇಳುತ್ತಾ ನೀಲಾಂಬಿಕೆ ಮತ್ತೆ ನಾನು ಬರುವುದಿಲ್ಲ ಎಂಬ ಈ ಮಾತು ನಾನು ಅಲ್ಲಿಯೇ ಐಕ್ಯವಾಗುತ್ತೇನೆ ಎಂಬುದು ಇರಬಹುದೇ? ಹಾಗಾದರೆ ಗಂಗಾಂಬಿಕೆ ಏಕೆ ಸಂಗಮಕ್ಕೆ ಹೋಗಲಿಲ್ಲ? ಇದರಿಂದ ತಿಳಿಯಬಹುದು ಈಕೆ ಸೌಮ್ಯ ಸ್ವಭಾವದವಳು. ಹಾಗಾಗಿ ಎಲ್ಲರನ್ನು ಬಿಳ್ಕೊಟ್ಟು ಕಲ್ಯಾಣದಿಂದ ಸಂಗಮಕ್ಕೆ ಬರುವಂತದ್ದನ್ನು ಹೀಗೆ ಉಲ್ಲೇಖಿಸುತ್ತದೆ.

"ಕಲ್ಯಾಣದಿಂದ ದಟ್ಟ ಕಾಡಿನೊಳು ನೇರ ದಿಟ್ಟ
ನಿರಂತರ ಹೆಜ್ಜೆ ಹಾಕಿ ಬಸವಾ ಬಸವಾ ಎನುತ
ತಂಗಡಗಿಯಲಿ ಲಿಂಗದಲಿ ಲೀನವಾದದ್ದು ಅಲ್ಲೋಲ ಕಲ್ಲೋಲ
ತಂಗಡಗಿ ಹತ್ತಿರ ಹರಿವ ಕೃಷ್ಣೆಯ ತಟದಲ್ಲಿ
ಭಕ್ತರ ಕೈಮಾಡಿ ಕರೆವ ನೀಲಮ್ಮದೇವಾಲಯ
ಇರದಿದ್ದರೆ ಇತಿಹಾಸವೆ ಅಲ್ಲೋಲ ಕಲ್ಲೋಲ"[೧೩೧]

ಈ ಜನಪದವು ಈಕೆಯು ಕಲ್ಯಾಣದಿಂದ ಕಾಡುಗಳಲ್ಲಿ, ನಿರಂತರವಾಗಿ ಭಯದಿಂದ ಇದ್ದು, ಬಸವಾ ಬಸವಾ ಎಂದು ತಂಗಡಗಿಯಲ್ಲಿ ಐಕ್ಯವಾಗುತ್ತಾಳೆ. ಜೊತೆಗೆ ಕೃಷೆಯ ತಟದಲ್ಲಿ ಇಂದಿಗೂ ಕಾಣಬಹುದು ಎಂಬುದನ್ನು ಈ ಜನಪದ ಸಾಹಿತ್ಯ ಹೇಳುತ್ತದೆ. ಆದರೆ ಎಲ್ಲಾ ಪದ್ಯದ ಕೊನೆಗೆ ಅಲ್ಲೋಲ ಕಲ್ಲೋಲ ಎಂದು ಬಳಸಿದ್ದು ಏಕೆ? ಬಹುಶಃ ಹಾಳಾದ ಪಟ್ಟಣ ಎಂಬುವ ವದಂತಿಯನ್ನು ಹೇಳಬಹುದು ಎಂದು ಸೂಚಿಸುತ್ತದೆ.

ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣನವರು ನೀಲಮ್ಮನನ್ನು ಕರೆದುಕೊಂಡು ಹೋಗುತ್ತಾರೆ ಎಂಬು ಉಲ್ಲೇಖ

"ಸತ್ಯವುಳ್ ಸರಣರಿಗೆ ಅವ್ರು ಎತ್ತಿ ಕೈಯಮುಗ್ದು
ಮತ್ತೆ ಬಸವಣ್ಣ ಹೊರುಟಾರು।
ನೀಲಮ್ಮ ಒನುಗೂಡಿ ಅವುರ್ತಂಗಮ್ನ ಕರುಕೊಂಡು
ಕಲ್ಯಾಣಬುಟ್ಟು ಕಡೆದಾರು।
ಅರವತ್ತಾರ್ಬೀದಿ ಜನುವೆಲ್ಲ ಮುತ್ತಿಗೆಯಾಗಿ

ನಮ್ ಕಾಪಾಡುವ ಕರ‍್ತು ಹೊರುವಾರು।
ಎಲ್ಲಿಗೋದಿರಿ ಎಂದು ಅವುರೆಲ್ಲರು ಕೇಳಿದರು
ಇದಿಲ್ಲೆ ಉಳಮಿಗೆ ನಾವು ಹೋಗ್ತಿವಿ"[೧೩೨]

ಬಸವಣ್ಣ ನೀಲಾಂಬಿಕೆಯನ್ನು ಕರೆದುಕೊಂಡು ಹೋಗುವಂತದ್ದು ಹಾಗೂ ಶರಣರೆಲ್ಲ ನಮ್ಮನ್ನು ಕಾಪಾಡುವರು ಯಾರು ಮತ್ತು ಎಲ್ಲಿಗೆ ಹೋಗ್ತಿರಿ ಎಂದಾಗ ಬಸವಣ್ಣನವರು ನಾವು ಉಳವಿಗೆ ಹೋಗುತ್ತೇವೆ ಎಂದು ಜನಪದ ಶರಣ ಕಾವ್ಯಗಳಲ್ಲಿ ಉಲ್ಲೇಖಗೊಂಡಿದೆ. ಮುಂದುವರಿದು ಬಿಜ್ಜಳನಿಗೆ ನೀನು ಸುಖವಾಗಿ ಇರು ಎಂದು ಹೇಳಿ ಹೋಗುವಂತ ಈ ಸಂದರ್ಭ ಬಸವಾದಿ ಪ್ರಮಥರಲ್ಲಿಯ ದೊಡ್ಡ ಗುಣವನ್ನು ಪ್ರತಿಬಿಂಬಿಸುತ್ತದೆ. ಹಾಗೆ ಕಲ್ಯಾಣದಿಂದ ಕಪ್ಪಡಿ ಸಂಗಮಕ್ಕೆ ಎಂದು ಪುರಾಣ ಕಾವ್ಯಗಳಲ್ಲಿ ಬಂದರೆ ಜನಪದರು ಇಲ್ಲ ನೀಲಮ್ಮನೊಂದಿಗೆ ಉಳುವಿಗೆ ಹೋದರು. ಹಾಗೂ ಬಸವಣ್ಣ ಕಲ್ಯಾಣ ಕ್ರಾಂತಿಯ ನೋವನ್ನು ಈ ಕಾವ್ಯದಲ್ಲಿ ತುಂಬಿ ಎಂದು ಹೇಳಬಹುದು.

ಕಲ್ಯಾಣದಲ್ಲಿ ಆಕೆಯ ಸಮಾಧಿಯನ್ನು ಕಾಣುವುದಿಲ್ಲ. ಆದರೆ ತಂಗಡಗಿಯಲ್ಲಿ ಈಕೆಯ ಸಮಾಧಿಯನ್ನು ಕಾಣುತ್ತೇವೆ. ಇಲ್ಲಿಯ ಜನರು ಈಕೆಯ ಬಗ್ಗೆ ಅಪಾರ ನಂಬಿಕೆ ಇಟ್ಟಿದ್ದಾರೆ. ಹಾಗೂ ಆಕೆ ಹಾಡಿದ ನೋಡು ನೋಡು ನೋಡು ನೋಡು ನೋಡು ಲಿಂಗವೆ ಈ ಹಾಡನ್ನು ಹಾಗೂ ದಂತಕಥೆಯು ಹಾಗೂ "ಸಂಗಮದ ಹತ್ತಿರದಿ ತಂಗಡಗಿ ತಾಣವದು ಲಿಂಗೈಕ್ಯ ನೀಲಮ್ಮನ ನಿಜನೆಲೆಯು ಕಂಗೊಳಿಸಿ ಪುಣ್ಯಕ್ಷೇತ್ರವು....."[೧೩೩] ಎನ್ನುವಂತೆ ಈಕೆಯು ಇಲ್ಲಿಯೇ ಐಕ್ಯವಾಗಿರಬೇಕೆಂದು ಮೌಖಿಕ ಹಾಗೂ ವಿದ್ವಾಂಸರ ಅಭಿಪ್ರಾಯದಿಂದ ಊಹಿಸಬಹುದು.

"ನೀಲಾಂಬಿಕೆಯ ಐಹಿಕ ಕಳೇಬರವನ್ನು ಜನರು ಇಲ್ಲಿಯೇ ಭೂಮಿಗತ ಮಾಡಿ ಆಕೆಯ ಸಮಾಧಿಯ ಪೂರ್ವಕ್ಕೆ ನೀಲಾಂಬಿಕೆಯ ದೇವಾಲಯವನ್ನೂ, ಅದರ ಪಶ್ಚಿಮಕ್ಕೆ ಹಡಪದಪ್ಪಣ್ಣಯ್ಯನ ದೇವಾಲಯವನ್ನು ಕಟ್ಟಿಸಿದ್ದಾರೆ. ಈ ಸ್ಥಾನವು ಪವಿತ್ರವಾದುದೆಂದು ಭಾವಿಸಿ ಜನರು ಅದನ್ನು ಸಂರಕ್ಷಿಸಿದ್ದಾರೆ. ಕೃಷ್ಣೆಯ ವಿಶಾಲವಾದ ಪಾತ್ರದ ಮಗ್ಗಲು ಬಹು ದೂರದಲ್ಲಿ ಕಾಣಿಸುತ್ತದೆ. ಯಾತ್ರಿಕರು ಅದನ್ನು ನೋಡಿ ನೀಲಾಂಬಿಕೆಯನ್ನು ಮೊದಲು ನೆನೆದು ಆ ಮೇಲೆ ಕೂಡಲಸಂಗಮಕ್ಕೆ ಕೂಡಲಸಂಗಮನಾಥನ ದೇವಾಲಯಕ್ಕೆ ನಮಸ್ಕರಿಸಲು ತೆರಳುತ್ತಾರೆ."[೧೩೪]

ರಾಜಶೇಖರ ಇಚ್ಚಂಗಿ ಇವರ ಪ್ರಕಾರ "ನೀಲಮ್ಮ ತಂಗಡಗಿಯ ಲಿಂಗದಲ್ಲಿ ಅಡಗಿಕೊಂಡಳು. ಆದ್ದರಿಂದ ಆ ಸ್ಥಳಕ್ಕೆ, ತಂಗಡಗಿ ಎಂಬ ಹೆಸರುಂಟಾಯಿತೆಂದು ನೀಲಮ್ಮನ ಸಮಾಧಿ ಮತ್ತು ದೇವಸ್ಥಾನಗಳು ಈ ಮಾತಿಗೆ ಸಾಕ್ಷಿಯಾಗಿ ಇಂದಿಗೂ ಇವೆ."[೧೩೫] ಈ ಮೇಲಿನ ಅಭಿಪ್ರಾಯದಂತೆ

ತಂಗಡಗಿಯಲ್ಲಿ ಇಂದಿಗೂ ಸಹಿತ ನೀಲಾಂಬಿಕೆಯ ಬಗ್ಗೆ ಶ್ರದ್ಧೆ, ಭಕ್ತಿ ಇಟ್ಟುಕೊಂಡು ಆಕೆಯ ಬಗ್ಗೆ ಜನಪದಕಾರರು ಸೋಬಾನಿ ಪದಗಳಲ್ಲಿ ಆಕೆಯನ್ನು ಹಾಡಿ ಹೊಗಳಿದ್ದಾರೆ ಎನ್ನಬಹುದು. ಮತ್ತೊಂದು ದಂತಕಥೆ ನೀಲಾಂಬಿಕೆ ಕೂಡಲಸಂಗಮನ ತಂಗಿ ಆಕೆಯನ್ನು ಹಬ್ಬಕ್ಕೆ ಕರೆದುಕೊಂಡು ಹೋದ ಸಂದರ್ಭದಲ್ಲಿ ಆತನ ಹೆಂಡತಿ ಬಹಳ ಕಷ್ಟವನ್ನು ಕೊಟ್ಟಳು. ಅದನ್ನು ಸಹಿಸಿಕೊಂಡು, ತವರು ಮನೆಗೆ ಸುಖವಾಗಲೆಂದು ಹಾರೈಸುತ್ತಾಳೆ. ಇಂಥ ಕಥೆಯನ್ನು ಕೂಡಲಸಂಗಮದ ಹತ್ತಿರವಿರುವ ಬೆಳಗಲ್ ಗ್ರಾಮದ ವೀರಮ್ಮ ಹೀರೇಮಠ ತಿಳಿಸಿದರು. ಮತ್ತು ಸೀಗೆ ಹುಣ್ಣಿಮೆ, ಗೌರಿ ಹುಣ್ಣಿಮೆಯಲ್ಲಿ ಸುಮಂಗಲಿಯರು ಜನಪದಗಳನ್ನು ಹಾಡುತ್ತಾರೆ. ಹಾಗಾಗಿ ಈ ಪರಿಸರದಲ್ಲಿ ನೀಲಾಂಬಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದರಿಂದ ತಂಗಡಗಿಯಲ್ಲಿಯೇ ಐಕ್ಯವಾಗಿರಬಹುದೆಂದು ಊಹಿಸಬಹುದು.

ಚಿದಾನಂದಮೂರ್ತಿಯವರು ಹೇಳುವಂತೆ "ಬಸವಣ್ಣನವರ ದೃಷ್ಟಿಯಲ್ಲಿ ಬಿಜ್ಜಳನೊಬ್ಬ 'ಭವಿ'ಯಾಗಿದ್ದ. ಭವಿ ಎನ್ನುವುದು ವೀರಶೈವರಲ್ಲದವರು ಸೂಚಿಸುವ ಪದ"[೧೩೬] ಹೀಗಾಗಿ ಬಿಜ್ಜಳನ ಮನಸ್ಸಿನಲ್ಲಿ ಕೋಪವು ಇರಬಹುದು ಎಂಬುದು ತಿಳಿಯುತ್ತದೆ. ಮುಂದುವರೆದು ಇವರೆ ಹೇಳುವಂತೆ "ಬಿಜ್ಜಳನಿಗೂ ಬಸವಣ್ಣನವರಿಗೂ ಅನೇಕ ಧಾರ್ಮಿಕ ವಿಚಾರಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಬಂದವು. ಬಿಜ್ಜಳನೋ ಸ್ವತಃ ಸಂಪ್ರದಾಯವಾದಿ, ಅವನ ರಾಜ್ಯದಲ್ಲಿದ್ದ ಮೇಲ್ಜಾತಿಯವರೆಲ್ಲ ಬಹುಮಟ್ಟಿಗೆ ಸಂಪ್ರದಾಯವಾದಿಗಳೇ. ಅವನು ವೈಯಕ್ತಿಕವಾಗಿ ಸಾಂಪ್ರದಾಯಿಕ ಶೈವಪಂಥಕ್ಕೆ ಸೇರಿದವನಾಗಿದ್ದ. ಈ ಪಂಥವನ್ನು ವೀರಶೈವ ಧರ್ಮವು ವಿರೋಧಿಸಿತು."[೧೩೭] ಇವರ ಹೇಳಿಕೆಯಂತೆ ರಾಜಕೀಯ ಗೊಂದಲ, ಧಾರ್ಮಿಕ ಗೊಂದಲಗಳು ಬಸವಣ್ಣ ಬಿಜ್ಜಳನ ನಡುವೆಯ ಸಂಬಂಧ ಸರಿಯಿರಲಿಲ್ಲ ಎಂಬುದು ತೋರುತ್ತದೆ.

"ಕಲ್ಯಾಣದಲ್ಲಿ ಶರಣರಿಗೂ ಅರಸ ಬಿಜ್ಜಳನಿಗೂ ತಾತ್ವಿಕ ಮತಭೇದವು ನಿರ್ಮಾಣವಾಯಿತು. ಹರಳಯ್ಯ-ಮದುವಯ್ಯ ಅವರ ಮಕ್ಕಳ ಮದುವೆಯ ಪೂರ್ವದಲ್ಲಿ ಆ ಲಗ್ನವನ್ನು ತಡೆಹಿಡಿಯಬೇಕೆಂದು ಬಿಜ್ಜಳನು ಬಸವಣ್ಣನವರಿಗೆ ಒತ್ತಾಯ ತಂದನು. ಆ ಮದುವೆಗೆ ಅನುಮತಿ ಕೊಡುವುದು ವೈಯಕ್ತಿಕವಾದುದಲ್ಲ. ಅದು ಅನುಭವ ಮಂಟಪದ ಶರಣರೆಲ್ಲರೂ ಸಮಾವೇಶಗೊಂಡು ದೀರ್ಘವಾಗಿ ಆಲೋಚಿಸಿ, ಚರ್ಚಿಸಿ, ಒಮ್ಮತದಿಂದ ಕೈಗೊಂಡ ಅನುಭವ ಮಂಟಪದ ನಿರ್ಣಯ ಅದನ್ನು ಬದಲಿಸುವ ಹಕ್ಕು ನನಗಿಲ್ಲ ಎಂಬುದು ಬಸವಣ್ಣನವರ ನಿಲುವು."[೧೩೮]

ಹರಳಯ್ಯ-ಮದುವಯ್ಯ ಮಕ್ಕಳಿಂದ ಇಡೀ ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸಿತು. ಇದನ್ನೆ ಕಾಯುತ್ತಿದ್ದ ಕೆಲವರು ಬಿಜ್ಜಳನಿಗೆ ಇಲ್ಲ-ಸಲ್ಲದ ಮಾತುಗಳನ್ನು ಹೇಳಿ ಅವನ ಮನಸ್ಸಿನಲ್ಲಿ ವಿಷ

ಬೀಜವನ್ನು ಬಿತ್ತಿದರು ಎನ್ನಬಹುದು. ಇದೇ ಸಂದರ್ಭ ರಾಜಕೀಯ ತೊಳಲಾಟ ಎದ್ದು ಕಾಣುತ್ತದೆ. ಇದಕ್ಕೆ ಪೂರಕವಾಗಿ ಲಲ್ಲೇಶ್ವರಿ ಹೀಗೆ ಅಭಿಪ್ರಾಯಪಡುತ್ತಾರೆ.

"ನೀಲಮ್ಮನವರು ಗಂಭೀರವಾಗಿ ಅಡಿ ಇಡುತ್ತ ನಿರ್ಧಾರದ ನುಡಿಯಲ್ಲಿ ಅಣ್ಣನನ್ನು ಉದ್ದೇಶಿಸಿ ಹೀಗೆ ನುಡಿದರು. ರಾಜ್ಯಕ್ಕೆ ಒಡೆಯರಾದ ನೀವು ನನ್ನ ಪತಿ ದೇವರನ್ನು ರಾಜ್ಯಬಿಡಿಸಿ ಕೂಡಲಸಂಗಮದತ್ತ ಕಳುಹಿಸಿಕೊಟ್ಟಿರಿ(ಎಳೆಹೂಟ) ಮರಣದಂಡನೆಯ ಆಜ್ಞೆಯನ್ನು ಹೊರಡಿಸಿರುವಿರಿ. ನನ್ನ ಮೇಲಿನ ಮತ್ತು ನನ್ನ ಪತಿದೇವರ ಮೇಲೆ ಇರುವ ಪ್ರೀತಿ-ವಿಶ್ವಾಸ ಎಲ್ಲಿ ಹೋದವು. ಕಲಚೂರಿ ಸಾಮ್ರಾಜ್ಯದ ವೈಭವ ಮತ್ತು ಪ್ರಗತಿಗೆ ಹಾಗೂ ರಾಜ್ಯ ವಿಸ್ತಾರಕ್ಕೆ ಕಾರಣರಾದ ನನ್ನ ಪತಿ ಬಸವ ದೇವರನ್ನು ಇಷ್ಟು ಬೇಗ ಮರೆಯಬಹುದೇ? ಶರಣರ ವಧೆಯ ನಂತರ ರಾಜ್ಯದಲ್ಲೆಲ್ಲ ಬಂಡಾಯ ಏಳದೆ ಬಿಟ್ಟಿತೇ? ಅದನ್ನು ಯಾರು ತಡೆದು ನಿಲ್ಲಿಸಬಲ್ಲರು. ನಿನ್ನ ಸುತ್ತಲಿರುವ ಅಧಿಕಾರಿಗಳನ್ನು ಅರ್ಥೈಸಿಕೊಂಡು ನಡೆಯಬೇಕು. ನಿನ್ನ ಬುದ್ದಿಯನ್ನು ಸಿಟ್ಟಿನ ಕೈಯಲ್ಲಿ ಕೊಡಬೇಡ."[೧೩೯] ಎಂದು ನೀಲಾಂಬಿಕೆ ಬಿಜ್ಜಳನಿಗೆ ಹೇಳಿದಳೆಂದು ತಿಳಿಸುತ್ತಾರೆ. ಆದರೆ ಆಡಳಿತ ಸುಭಿಕ್ಷೆಗೋ ಅಥವಾ ಚಾಡಿಕೋರರ ಮಾತಿನಿಂದ ಈ ನಿರ್ಧಾರವನ್ನು ಬಿಜ್ಜಳ ತೆಗೆದುಕೊಂಡನೆಂದು ತೋರುತ್ತದೆ.

ಸರಸ್ವತಿ ದೇವಿಯವರು ಹೀಗೆ ಅಭಿಪ್ರಾಯಡುತ್ತಾರೆ; "ನೀಲಲೋಚನೆ ಮಾಡಿದ ಮಹತ್ಕಾರ್ಯವೇನು? ಅವಳು ಕ್ರಾಂತಿ ಮಾಡಲಿಲ್ಲ, ಸಮಾಜವನ್ನು ಅಲ್ಲದೆ ರೂಪಿಸಲಿಲ್ಲ, ಧರ್ಮವನ್ನು ಪುನರುಜ್ಜೀವನಗೊಳಿಸಲಿಲ್ಲ, ಆದರೆ ಯಾರು ಎಲ್ಲವನ್ನು ಮಾಡಿದರೋ ಆ ಮಹಾನುಭಾವ ಜೀವನಕ್ಕೆ ನೆಮ್ಮದಿ ನೀಡಿ ಅವನ ಪ್ರಯೋಗಕ್ಕೆ ಸಾಧನವಾಗಿ, ಅವನ ಉದ್ದೇಶ ಸಾಧನೆಗಾಗಿ ತ್ರಿಕರಣ ಪೂರ್ವಕವಾಗಿ ತನ್ನ ಆಯುಷ್ಯವನ್ನು ಸವೆಸಿದ ಮಹಾನುಭಾವೆ."[೧೪೦] ಸರಸ್ವತಿಯವರ ಹೇಳಿಕೆಯಂತೆ ನೀಲಮ್ಮ ಬಸವಣ್ಣನಿಗೆ ತ್ರಿವಿಧ ರೀತಿಯಲ್ಲಿ ಬಸವಣ್ಣನವರ ಸೇವೆಯನ್ನು ಮಾಡಿದ್ದು ಹಾಗೂ ನಾನು ರಾಜನ ಸಾಕುತಂಗಿ, ಮಂತ್ರಿಯ ಮಗಳು ಅಷ್ಟೇ ಅಲ್ಲದೇ ನಾನು ಬಸವನಲ್ಲಿ ಅನುರಕ್ತಳು ಎಂಬುದನ್ನು ತೋರಿಸಿದ್ದಾಳೆ.

ನೀಲಾಂಬಿಕೆ ಬಸವಣ್ಣನೊಂದಿಗೆ ಸುಖವಾಗಿ ಜೀವನ ನಡೆಸುತ್ತಿದ್ದಳು. ಕಲ್ಯಾಣದಲ್ಲಿ ಹರಳಯ್ಯ-ಮಧುವಯ್ಯರ ಮಕ್ಕಳ ಪ್ರೇಮಾಂಕುರ ಬಹಳಷ್ಟು ಚರ್ಚೆಗೆ ಗ್ರಾಸವಾಯಿತು. ಇದು ಬಸವಣ್ಣನವರಿಗೆ ಪ್ರಶ್ನಾರ್ಥಕವಾಗಿದ್ದಿತು. ಆದರೆ ನೀಲಾಂಬಿಕೆ ಸರ್ವಸ್ವವೂ ಬಸವಣ್ಣನವರೇ ಆಗಿದ್ದರು. ಹೀಗಿದ್ದ ಸಮಯದಲ್ಲಿ ಸಮಕಾಲೀನ ಸಾಮಾಜಿಕ, ರಾಜಕೀಯ, ಸ್ಥಿತಿಗತಿಗಳು ಬಹಳಷ್ಟು ಕ್ರಮಿಸಿಬಿಟ್ಟಿದ್ದವು. ಇದನ್ನರಿತ ಬಸವಣ್ಣ ಮನನೊಂದು ಸಂಗಮಕ್ಕೆ ಹೋಗುವ ತಯಾರಿಯಲ್ಲಿದ್ದ ಸಮಯದಲ್ಲಿ ಹರಳಯ್ಯ ಮಧುವರಸರ ಮಕ್ಕಳ ಹಿಂಸೆಯನ್ನು ನೋಡದೆ

ಈತನ ಮನನೊಂದಿತ್ತು. ಆದರೆ ನೀಲಮ್ಮ ಬಿಜ್ಜಳನಲ್ಲಿ ಕೇಳಿಕೊಂಡಿರಬೇಕು. ಇದಕ್ಕೆ ಲಕ್ಕಣ್ಣ ದಂಡೇಶ

"ಉದಯವಾಗದ ಮುನ್ನ ದಂಡೇಶನಂ ಕರೆಸಿ

.........................ಮುದದಿ ದಂಡೇಶ ನಿಜ ಸತಿಸುತರ ಸಹಿತಂದು"[೧೪೧]

ಹಾಗೆ ಬಿಜ್ಜಳನೊಂದಿಗೆ ಸಾಕಷ್ಟು ವಾದ ವಿವಾದಗಳು ನಡೆದಿರಬೇಕು. ಬಸವಣ್ಣನೇ ಈ ಮದುವೆಗೆ ಕಾರಣ ಈತನು ಸಂಗಮಕ್ಕೆ ಹೋಗಲಿ ಅಥವಾ ಗಡಿಪಾರು ಶಿಕ್ಷೆ ನೀಡಿದ್ದೇನೆ ಎಂದಾಗ ಅಣ್ಣನಲ್ಲಿ ಕಿಂಕರಳಾಗಿ ಬೇಡಿಕೊಂಡಿರಬೇಕು.

ಬಿಜ್ಜಳ ಸಾಕು ತಂಗಿಯಾದ ನೀಲಾಂಬಿಕೆ ತನ್ನ ತಲೆಯನ್ನು ರಕ್ಷಿಸಲು ಅಥವಾ ಆತನನ್ನು ಕಲ್ಯಾಣದಲ್ಲಿಯೇ ಉಳಿಯಲು ಬೇಡಿಕೊಂಡಿರಬಹುದು. ಆದರೆ ಕಲ್ಯಾಣ ಕ್ರಾಂತಿ ನಿಶ್ಚಿತಕ್ಕೆ ಬಿಜ್ಜಳನೆ ಕಾರಣನಾಗಿದ್ದಾನೆಯೇ ಆಥವಾ ವೈಭವದ ಸಾಮ್ರಾಜ್ಯದ ಮೇಲೆ ವಿರೋಧಿಗಳ ಕಣ್ಣು ಬಿತ್ತೆ ಅಥವಾ ಬಸವಣ್ಣನವರ ವೈಚಾರಿಕ ಚಿಂತನೆ ಕ್ರಾಂತಿಗೆ ಕಾರಣವಾಯಿತೆ, ಇದರಲ್ಲಿ ನೀಲಾಂಬಿಕೆಯ ಶ್ರಮ ಎಲ್ಲರನ್ನು ಒಂದುಗೂಡಿಸುವಂತದ್ದು. ಅಲ್ಲಿಯ ಪುರೋಹಿತಶಾಹಿ ಇದನ್ನೆ ಮುಂದು ಇಟ್ಟುಕೊಂಡು ಬಸವಣ್ಣನು ಕಟ್ಟಿದ ಶರಣ ಪರಂಪರೆಯನ್ನು ನಾಶ ಮಾಡುವ ಉದ್ದೇಶವು ಇದ್ದಿರಬಹುದು. ಹಾಗಾಗಿ ಕವಿಕಾಡ ವಿರಚಿತ ಬಸವ ಶಿಖಾಮಣಿಯಲ್ಲಿ ಕವಿ ಬಸವಣ್ಣನ ಮುಖಾಂತರವಾಗಿ ಈ ಪದ್ಯವನ್ನು ಹೇಳಿಸುತ್ತಾನೆ.

"ಅರಸು ಮೀರಿದ ನಮ್ಮ ವಾಕ್ಯವ ನಾವಿಲ್ಲಿ। ಇರಬಾರದೆಂದು ಕಪ್ಪಡಿಗೆ

ತೆರಳಿದ ಬಸವಣ್ಣ ಕಲ್ಯಾಣದಿಂದಲಿ। ಪೊರಮಟ್ಟು ಮುಂದಕ್ಕೆ ಬರುತ"[೧೪೨]

ಬಸವಣ್ಣ ಈ ಎಲ್ಲಾ ಅಂಶಗಳನ್ನು ತಿಳಿದು ಮನನೊಂದು ಕೂಡಲಸಂಗಮಕ್ಕೆ ಹೋಗುತ್ತೇನೆ ಎಂದಾಗ ನೀಲಾಂಬಿಕೆ ಬಸವಣ್ಣನನ್ನು ಹೀಗೆ ಪ್ರಶ್ನಿಸಿರಬಹುದು ಎಂಬುದು ಆಕೆಯ ವಚನದಿಂದ ತಿಳಿಯಬಹುದು.

"ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯ
ನಟ್ಟುನಡು ಗ್ರಾಮವ ಕೆಡಿಸಿ–ಹೋದಿರಿ ಬಸವಯ್ಯ
ಹುಟ್ಟಿಲ್ಲದ ಬಂಜೆಗೆ ಮಕ್ಕಳ ಕೊಟ್ಟಿರಿ ಬಸವಯ್ಯ
ಆ ಮಕ್ಕಳ ಫಲವಿಲ್ಲದಂತೆ ಮಾಡಿದಿರಿ ಬಸವಯ್ಯ
ಸಂಗಯ್ಯನಲ್ಲಿ ನೀನೆಂತಪ್ಪ ಮಹಿಮನಯ್ಯಾ ಬಸವಯ್ಯಾ"[೧೪೩]

ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯ ನೀವೇ ಕಟ್ಟಿರುವ ಶರಣರ ನಾಡು ಕಲ್ಯಾಣವನ್ನು ಕೆಡಿಸಿದಿರಿ ಒಂದು ಶರಣ ಪರಂಪರೆ ಹುಟ್ಟು ಹಾಕಿದಿರಿ, ಆದರೆ ಅಲ್ಲಿ

ಫಲವಿಲ್ಲದಂತೆ ಅಂದರೆ ಸಂಸ್ಕಾರವಂತರನ್ನಾಗಿ ಸುಶಿಕ್ಷಿತ ಸಮಾಜವನ್ನು ನಿರ್ಮಾಣ ಮಾಡಲು ಹೊರಟ ನೀವೇ ಹೆದರಿ ಹೋದರೆ ಹೇಗೆ? ಸಂಗಯ್ಯನಲ್ಲಿ ನೀನು ಎಂಥ ಮಹಿಮೆಯನು ಹೊಂದಿದವನು ಎಂದು ನೀಲಾಂಬಿಕೆಯು ದಿಟ್ಟ ಮಾತುಗಳಿಂದ ಪ್ರಶ್ನಿಸಿರಬಹುದು. ಆದರೆ ಮನನೊಂದು ಯಾರಿಗೂ ಹಿಂಸೆಯನ್ನು ನೀಡದ ಬಸವಣ್ಣ ಮುಂದೆ ಮದುವರಸ ಮತ್ತು ಹರಳಯ್ಯನ ಮಕ್ಕಳ ಹಿಂಸೆಯನ್ನು ನೋಡಿ ಕೂಡಲಸಂಗಮಕ್ಕೆ ಹೋಗಿರಬಹುದು. ಅಲ್ಲಿ ಹೋದ ಮೇಲೆ ತನ್ನ ಹೆಂಡತಿಯಾದ ನೀಲಾಂಬಿಕೆಯನ್ನು ಕರೆದು ತಾ ಎಂದು ಕಳಿಸುತ್ತಾನೆ. ಇದು ಕವಿಕಾಡ ವಿರಚಿತ ಬಸವ ಶಿಖಾಮಣಿಯಲ್ಲಿ ಉಲ್ಲೇಖಿಸಿರುವುದು ಕಾಣುತ್ತೇವೆ.

"ಆಗ ಪೇಳಿದ ಬಸವಣ್ಣ ಅಪ್ಪಣ್ಣಗೆ । ಹೋಗಿ ನೀ ಪ್ರಮಥರಿಗರುಹಿ
ಬೇಗ ನೀಲಲೋಚನೆಯ ಕರೆತಾರೆಂದು ಸಾಗಿದ ಸಂಗಮಕಾಗಿ"[೧೪೪]

ಅಪ್ಪಣ್ಣನವರು ಬಸವಣ್ಣನವರ ಅಣತಿಯಂತೆ ನೀಲಮ್ಮನನ್ನು ಕರೆಯ ಹೋಗಲು ನೀಲಮ್ಮನು ಹೀಗೆ ಹೇಳುತ್ತಾಳೆ.

"ಈತನವೆ ಪರಂಜ್ಯೋತಿ ಸ್ವರೂಪನು, ಈತನಲ್ಲವೆ ಸದಾಶಿವನು
ಈತನಲ್ಲವೆ ನಮ್ಮ ಸಂಗಮನಲ್ಲಿಗೆ, ಏತಕ್ಕೆ ಬರಹೇಳಿದನು
ಶರಣು ಅಪ್ಪಣೆಗೆ ಶರಣು ದಂಡೇಶಗೆ ಶರಣು ಗಣಂಗಳಿಗೆಲ್ಲ
ಶರಣು-ಶರಣು ಎಂದು ತನ್ನಿಷ್ಟಲಿಂಗದೀ ಶರಣೆ ನೀಲಮ್ಮ ಬೆರೆದಳು"[೧೪೫]

ಎಂದು ನೀಲಮ್ಮ ಲಿಂಗೈಕ್ಯಳಾದಳು. ಅವಳ ಈ ವಿಚಾರವನ್ನು ಅಪ್ಪಣ್ಣನವರು ಬಸವಣ್ಣನವರಿಗೆ ತಿಳಿಸಿ ತಾವು ಲಿಂಗೈಕ್ಯರಾದರು. ನಂತರ ಸಂಗಮೇಶ್ವರನಲ್ಲಿ ಬಸವಣ್ಣನವರು ಅಂತರ್ದಾನರಾದರು. ಇಲ್ಲಿ ಮೊದಲಿಗೆ ನೀಲಮ್ಮ ಐಕ್ಯಳಾಗಿದ್ದಾಳೆ. ಕವಿ, ಕಾಲ ೧೭೦೦ ಎಂದುದರಿಂದ ಶತಮಾನಗಳ ಅಂತರ ಹಾಗೂ ಐತಿಹ್ಯಗಳ ಪಾಠಾಂತರ ಕಥಾರಚನೆಗೆ ವ್ಯತ್ಯಾಸಗೊಂಡಿರಬಹುದು.

ಅದೇ ರೀತಿ ಪ್ರಭುದೇವರ ಪುರಾಣದಲ್ಲಿ ಈಕೆಯ ಐಕ್ಯದ ವಿಚಾರ ತಿಳಿಯಬಹುದು.

"ಅಪ್ಪಣ್ಣ ನೀಲಲೋಚನೆಯ ಕರೆತಾರೆಂದು
ವೊಪ್ಪದಿಂ ನುಡಿಯಲಾಕ್ಷಣ ಬಂದು ಎಲೆಯಮ್ಮ
ಕಪ್ಪಡಿಯ ಸಂಗಮೇಶ್ವರನಲ್ಲಿಗಯ್ಯ ಚಿತ್ತಯಿಸಿದಪ ನಿಮ್ಮಬೇಗಂ
ಬಪ್ಪುದೆಂದೆಸಿರ್ದನೆನೆ ವಿತತ ಲಿಂಗಾರ್ಚನೆಯೊ
ಳೊಪ್ಪಿರ್ದಳಂ ಕೇಳ್ದು ನಗುತ ಶರಣೆಂದೆನುತ
ಕಪ್ಪುಗಳ ಲಿಂಗಮಂ ಸ್ತುತಿಯಾಲಿಂಗದೊಳು ನಿರ್ವಯಲನೈದೆ ಕಂಡಂ"[೧೪೬]

ಕವಿಕಾಡ ವಿರಚಿತ ಬಸವ ಶಿಖಾಮಣಿಯಲ್ಲಿ ಹಾಗೂ ಪ್ರಭುದೇವರ ಪುರಾಣದಲ್ಲಿ ಹಡಪದ ಅಪ್ಪಣ್ಣ ಬಸವಣ್ಣ ನಿಮ್ಮನ್ನು ಕರೆದುಕೊಂಡು ಬರಲು ಹೇಳಿದ್ದಾನೆ. ಅಂದಾಗ ನೀಲಮ್ಮಳು ಅಲ್ಲಿಯ ಸಂಗಮ ಇಲ್ಲಿಯೇ ಇದ್ದಾನೆ ಎಂದು ಹೇಳಿ ಪ್ರಮಥರಿಗೆ ಹೊಂದಿಸಿ ತನ್ನ ಇಷ್ಟಲಿಂಗದಲ್ಲಿ ಬೆರೆದಳು ಎಂದು ಕವಿಕಾಡ ಬಸವ ಶಿಖಾಮಣಿಯಲ್ಲಿ ಹೇಳಿದರೆ, ಪ್ರಭುದೇವರ ಪುರಾಣದಲ್ಲಿ ಇದೇ ಸಂದರ್ಭ ಕಂಡು ಈಕೆ ನಗುತ ಕಪ್ಪಾದ ಲಿಂಗವನ್ನು ಪ್ರಾರ್ಥಿಸಿ ಬಯಲಾದಳು. ಆದರೆ ಚನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲ.

"ಅಲ್ಲಮ ಪ್ರಭುವಲ್ಲಿ ನಿರವಯವನ್ನೈದೆ ಬಳಿ
ಕೆಲ್ಲಿಯೂ ಬಸವಣ್ಣ ನಿರದೆ ಸಂಗಮನಾಥ
ನಲ್ಲಿ ತಾನೈಕ್ಯವಾಗಲ್ಕಂಡು ಹಡಪದಪ್ಪಣ್ಣ ನೀ ನೀಲಾಂಬಿಕೆಗೆ
ನಿಲ್ಲದುಸೆರ್ದಿರ್ವರುಂ ತಮ್ಮಿಷ್ಟಲಿಂಗಂಗ
ಳಲ್ಲಿ ತಾವೈಕ್ಯರಾಗುವರಾಗ ಶಿವಶರಣ
ರಲ್ಲಿ ಕೆಲಕೆಲರೈಕ್ಯವಾಗುವರ್ ಸಿದ್ದರಾಮೇಶ ನಿಂ ಕೇಳೆಂದನು"[೧೪೭]

ಈ ಕಾವ್ಯದಲ್ಲಿ ಕರ್ತೃ ವಿರೂಪಾಕ್ಷ ಪಂಡಿತನು ನೀಲಾಂಬಿಕೆ ತನ್ನ ಲಿಂಗದಲ್ಲಿ ಐಕ್ಯವಾದಳು ಎಂದು ಹೇಳುತ್ತಾರೆ. ಆದರೆ ಇಲ್ಲಿ ಸಂಗಮನಾಥನಲ್ಲಿ ಎಂಬ ಪದ ಬಳಸಿರುವುದರಿಂದ ನೀಲಾಂಬಿಕೆಯು ಮತ್ತು ಹಡಪದ ಅಪ್ಪಣ್ಣ ಲಿಂಗಪೂಜೆಯನ್ನು ಮಾಡುತ್ತಾ ಸಂಗಮಕ್ಕೆ ಹತ್ತಿರವಿರುವ ತಂಗಡಗಿಯಲ್ಲಿ ಐಕ್ಯವಾಗಿಬಹುದು. ಏಕೆಂದರೆ ಕಾಲಜ್ಞಾನದ ಸಂಧಿಯಲ್ಲಿರುವುದನ್ನೆ ರಮೇಶ ಪಂ.ಲಿಂಗದಹಳ್ಳಿಯವರು ಪುಸ್ತಕದಲ್ಲಿಯ ಉಲ್ಲೇಖ

"ಅಲ್ಲಮ ಪ್ರಭುವಲ್ಲಿ ನಿರವಯ ಏನೈಡಿ ಬಳಿ
ಕೆಲ್ಲಿಯೂ ಬಸವಣ್ಣನಿರದೆ ಸಂಗಮನಾಥ
ನಲ್ಲಿ ತಾನೈಕ್ಯವಾಗಲ್ಕಂಡು ಹಡಪದಪ್ಪಣ್ಣ ನೀಲಾಂಬಿಕೆಗೆ
ನಿಲ್ಲದುಸಿರ್ದಿರ್ವರರುಂ ತಮ್ಮಿಷ್ಟ ಲಿಂಗಂಗ
ತಂಗಡಿಯಲ್ಲಿ ತಾವೈಕ್ಯರಾಗುವಾಗ"[೧೫೦]

ನೀಲಾಂಬಿಕೆಯು ತಂಗಡಿಯಲ್ಲಿಯೇ ಐಕ್ಯವಾದಳು ಎಂದು ರಮೇಶರು ತಮ್ಮ ಲಿಂಗನಿಷ್ಠೆ ನೀಲಾಂಬಿಕೆ ಪುಸ್ತಕದಲ್ಲಿ ಉಲ್ಲೇಖಿಸುತ್ತಾ ಫ.ಗು.ಹಳಕಟ್ಟಿಯವರ ಅಭಿಪ್ರಾಯ ಪಡುತ್ತಾರೆ. "ನೀಲಾಂಬಿಕೆ ತಂಗಡಗಿಯಲ್ಲಿ ಐಕ್ಯಳಾಗಿದ್ದಕ್ಕೆ ತಂಗಿ ಅಡಗಿದ ಊರು ತಂಗಡಗಿ ಎಂಬ ಹೆಸರು ಬಂದಿತೆಂದು ವಚನ ಪಿತಾಮಹರಾದ ಶ್ರೀ ಡಾ.ಫ.ಗು.ಹಳಕಟ್ಟಿಯವರು ಅಭಿಪ್ರಾಯ

ಪಟ್ಟಿದ್ದಾರೆ."[೧೪೯] ಈ ಅಭಿಪ್ರಾಯದಂತೆ ತಂಗಡಗಿಯಲ್ಲಿ ಐಕ್ಯವಾಗಿರಬಹುದು ಆದರೆ ಶೂನ್ಯ ಸಂಪಾದನೆಯಲ್ಲಿ

"ನೋಡು ನೋಡು ನೋಡು
ನೋಡು ನೋಡು ಲಿಂಗವೆ ನೋಡು
ಬಸವಯ್ಯನ ಮಾಡಿದಾಟವ
ಅಲ್ಲಿಗೆನ್ನನು ಬರಹೇಳಿದರಂತೆ
ಇಲ್ಲಿ ತಾನಿಲ್ಲದೆ ಸಂಗಯ್ಯನು?
........................................
.......ಅವರಂತಹ ಮಹಾತ್ಮರಿಗೂ
ಬಿಡಲಿಲ್ಲವಲ್ಲ................"[೧೫೦]

ಎಂಬ ಹಾಡನ್ನು ನೀಲಾಂಬಿಕೆ ಹಾಡಿದ್ದಾಗಿದೆ. ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣ ಹೇಳಿದಂತೆ ಕರೆಯಲಿಕ್ಕೆ ಹೋದ ಸಂದರ್ಭದಲ್ಲಿ ಈ ಹಾಡನ್ನು ಹಾಡಿ ಲಿಂಗೈಕ್ಯಳಾಗುತ್ತಾಳೆ ಎಂಬುದಾಗಿದೆ. ಆದರೆ ತಂಗಡಗಿಯ ನದಿಯ ಬಂಡೆಯ ಮೇಲೆ ಹಾಡುತ್ತಾ ಲಿಂಗದಲ್ಲಿ ಐಕ್ಯವಾದಳು ಎಂದು ಹೇಳುವ ಸಾಧ್ಯತೆ ಇದೆ. ಆದರೆ ಧರಣಿ ಪಂಡಿತನು ತನ್ನ ಬಿಜ್ಜಳರಾಯನ ಚರಿತ್ರೆಯಲ್ಲಿ ಬಸವಣ್ಣ ಸಾವನ್ನು ಅಪ್ಪಿದ ವಿಷಯ ತಿಳಿದ ನೀಲಾಂಬಿಕೆ ಹೇಗೆ ಸಾವನ್ನು ಹೊಂದಿದಳು ಎಂದು "ಬಸವ ಸತ್ತ ಸುದ್ದಿ ಊರಲೆಲ್ಲ ಕೇಳಲು, ಬಸವನ ಪೆಂಡತಿ ನೀಲಮ್ಮ ವಿಷಗೊಂಡು ಅಳಿದಾಳು, ಕೇಳಿದಾಕ್ಷಣದೊಳು, ವಸುಧೆಯಲ್ಲಿ ಬಲ್ಲಂತೆ"[೧೫೧] ಈ ರೀತಿ ಉಲ್ಲೇಖಿಸುತ್ತಾನೆ.

ಬಿಜ್ಜಳನ ಚರಿತ್ರೆಯಲ್ಲಿ ಧರಣಿ ಪಂಡಿತ ನೀಲಾಂಬಿಕೆ ಬಾಲ್ಯದ ಬಗ್ಗೆ, ಮದುವೆ ಹಾಗೂ ಜೀವನದ ಬಗ್ಗೆ ಏನು ಹೇಳುವುದಿಲ್ಲ. ಆದರೆ ಆಕೆಯ ಅಂತ್ಯವನ್ನು ಹೇಳುತ್ತಾನೆ. ಬಸವಣ್ಣ ಅಂತ್ಯದ ವಿಷಯ ಕೇಳಿ ಈತನ ಹೆಂಡತಿ ವಿಷವನ್ನು ಕುಡಿದು ಸಾವನ್ನಪ್ಪಿದಳು ಎಂದು ಹೇಳುತ್ತಾನೆ. ಆದರೆ ಚನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ ಹಾಗೂ ಸಿದ್ಧನಂಜೇಶ, ಕವಿಕಾಡ, ಬಸವಪುರಾಣ, ಲಿಂಗದೊಳಗೆ ಐಕ್ಯವಾದಳು ಎಂದು ಹೇಳುತ್ತಾರೆ. ಆದರೆ ಈ ಕುರಿತು ಅಧ್ಯಯನಕಾರರು ಹೇಳುತ್ತಾರೆ. ಆದರೆ ನೀಲಾಂಬಿಕೆ ವಿಷ ತೆಗೆದುಕೊಂಡು ಸಾವನ್ನಪ್ಪಿದರ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಹಾಗಾಗಿ ಜೈನ ಕವಿಯಾದ ಧರಣಿ ಪಂಡಿತನ ವಿಚಾರದಲ್ಲಿ ಸತ್ಯಾಂಶ ಇದೆಯೋ-ಇಲ್ಲವೋ ಎಂಬ ಸ್ಪಷ್ಟತೆ ಕಂಡುಬರುವುದಿಲ್ಲ.

ನೀಲಾಂಬಿಕೆಯೂ ಕರದಲ್ಲಿರುವ ಲಿಂಗಯ್ಯನಲ್ಲಿಯೇ ಐಕ್ಯಳಾದಳು ಎಂದು ಲಿಂಗಪುರಾಣಂ ಕರ್ತೃ ಗುರುಲಿಂಗದೇಶಿಕ "ನೀಲಲೋಚನೆಯಿಷ್ಟದಿಂ ತನುವನಡಗಿಸಲ್"[೧೫೫] ಈಕೆಯ ಇಚ್ಛೆಯಂತೆ ಐಕ್ಯವಾದಳು ಎಂದು ಕವಿ ಉಲ್ಲೇಖಿಸಿದ್ದಾನೆ. ಆದರೆ ವಿರೂಪಾಕ್ಷ ಪಂಡಿತನ ಹಾದಿಯನ್ನೆ ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರ ಕಾವ್ಯದಲ್ಲಿ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ-೨ರಲ್ಲಿ ಪ್ರಭುದೇವರ ಪುರಾಣ ಬಸವಶಿಖಾಮಣಿಯಲ್ಲಿ ಕಾಣುತ್ತೇವೆ. ಹಾಗಾಗಿ ಈಕೆಯ ಐಕ್ಯದ ಬಗ್ಗೆ ತಮ್ಮ ಇಷ್ಟಲಿಂಗದಲ್ಲಿ ಐಕ್ಯವಾದರೆಂದು ಹೇಳುವುದನ್ನೆ ನೋಡಿದರೆ, ಕಲ್ಯಾಣದಿಂದ ತಂಗಡಗಿಗೆ ಬಂದಿರಬಹುದು. ಬಸವಣ್ಣನವರು ಐಕ್ಯವಾದ ವಿಷಯ ತಿಳಿದು ಇಲ್ಲಿಯೇ ಐಕ್ಯವಾಗಿರಬಹುದೆಂದು ಊಹಿಸಬಹುದು. "ತಂಗಡಗಿ ಯಲ್ಲಿ ಅವಳ ಸಮಾಧಿಯೂ ಈಗಲೂ ಇದೆ. ಸಾಮಾನ್ಯವಾಗಿ ಜನರು ಪೂಜ್ಯರಾದವರ ಹೆಸರಿನಿಂದ ಸುಳ್ಳು ಸಮಾಧಿಗಳನ್ನು ರಚಿಸುವ ಸಂಭವವಿಲ್ಲ ಬಹುಕಾಲದಿಂದಲೂ ತಂಗಡಗಿಯಲ್ಲಿಯೇ ಆ ಸಮಾಧಿಯು ನೀಲಾಂಬಿಕೆಯದೆಂದು ಭಾವಿಸಿ ಅದು ಪುಣ್ಯಕ್ಷೇತ್ರವೆಂದು ಜನರು ತಿಳಿಸಿದ್ದಾರೆ."[೧೫೬] ಈಕೆಯ ಸಮಾಧಿಯು ಇರುವುದರಿಂದ ಈಗಾಗಲೇ ಮೌಖಿಕವಾಗಿ ಈಕೆಯ ಬಗ್ಗೆ ಚರ್ಚಿಸಿದ ಸಂದರ್ಭದಲ್ಲಿ ತಂಗಡಗಿಯಲ್ಲಿ ಐಕ್ಯವಾದಳು ಎಂದು ಬರುತ್ತದೆ. ಮತ್ತು ಈಗಲೂ ತಂಗಡಗಿಯಲ್ಲಿ ಈಕೆ ಹಾಡಿರುವ ನೋಡು ನೋಡು.... ಹಾಡನ್ನು ಹೇಳುತ್ತಾರೆ. ವಕ್ತೃಗಳು, ವಿದ್ವಾಂಸರು, ಮೌಖಿಕ ಸಾಹಿತ್ಯ ಚರಿತ್ರೆಯಿಂದ ನೋಡಿದಾಗ ಈಕೆ ಕಲ್ಯಾಣದಲ್ಲಿ ಲಿಂಗೈಕ್ಯವಾಗಿಲ್ಲ, ತಂಗಡಗಿಯಲ್ಲಿ ಐಕ್ಯವಾಗಿದ್ದಾಳೆಂದು ತೋರುತ್ತದೆ. ರಮೇಶರ ಅಭಿಪ್ರಾಯದಂತೆ "ಕಾಲಜ್ಞಾನ ವಚನಗಳ ಆಧಾರದ ಮೇಲೆ ನೀಲಾಂಬಿಕೆಯ ಜೀವಿತಾವಧಿಯನ್ನು ನಿರ್ದಿಷ್ಟಪಡಿಸ ಬಹುದು. ಜನನ ೩೦-೪-೧೧೩೪ ಆನಂದನಾಮ ಸಂವತ್ಸರದಿಂದ ಮರಣ ೨-೭-೧೧೬೭ ಸರ್ವಜಿತ ನಾಮ ಸಂವತ್ಸರದವರೆಗೆ ಅಂದರೆ ಕೇವಲ ೩೩ ವರ್ಷ ೨ ತಿಂಗಳು ೨ ದಿನಗಳ ಕಾಲ ಇಳೆಯ ಮೇಲೆ ಬದುಕಿದ್ದು"[೧೫೭]ಎನ್ನುತ್ತಾರೆ.

ನೀಲಾಂಬಿಕೆಯ ಐಕ್ಯದ ನಂತರ ಈಕೆಯು ಜನಮಾನಸದಲ್ಲಿ ಈಕೆಯ ಬಗೆಗೆ ಹೊಂದಿರುವ ಭಕ್ತಿಯ ಜಾತ್ರೆಗಳು ಉತ್ಸಾಹಗಳನ್ನು ಬಸವಕಲ್ಯಾಣ, ಕೂಡಲಸಂಗಮ, ತಂಗಡಗಿ, ಬಳಗಾನೂರ, ಕೇಸಾಪುರ, ಮುರಕಿಭಾವಿಗಳಲ್ಲಿ ಕಾಣಬಹುದಾಗಿದೆ.

**ಬಸವಕಲ್ಯಾಣ:** ಇಲ್ಲಿ ಈಕೆಯ ಆರಾಧನೆಯನ್ನು ಶ್ರಾವಣದಲ್ಲಿ ಆಚರಿಸುತ್ತಾರೆ. ಈಕೆಯ ವಚನಗಳನ್ನು ಸ್ವರವಚನಗಳನ್ನು ಹಾಡಿ ಪೂಜಿಸುತ್ತಾರೆ.

**ಬಳಗಾನೂರ:** ಈ ಊರಲ್ಲಿ ಬನದ ಹುಣ್ಣಿಮೆಯ ದಿನ, ರಥೋತ್ಸವ ಜರುಗುತ್ತದೆ. ಹಾಗೂ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ ಎಂದು ಶಿವಶಂಕರ ಸ್ವಾಮಿಗಳು ತಿಳಿಸಿದರು. ಹಾಗೂ ನೀಲಾಂಬಿಕೆ ಬಸವಣ್ಣ ಹಾಗೂ ಸಂಗಮೇಶ್ವರ ದೇವಾಲಯಗಳು ಇವೆ.

**ಕೇಸಾಪುರ:** ಕೇಸಾಪುರ ಗ್ರಾಮದಲ್ಲಿ ಪ್ರತಿ ಶ್ರಾವಣದ ಕೊನೆಯ ಅಮಾವಾಸ್ಯೆಯಂದು ಜಾತ್ರೆ ಮಾಡುತ್ತಾರೆ. ಹಾಗೂ ಉಡಿತುಂಬುವ ಕಾರ್ಯ ಜರುಗುತ್ತದೆ. ಹಾಗೂ ಪಲ್ಲಕ್ಕಿಯು ಜರುಗುತ್ತದೆ. ಅದು ಕೇಸಾಪುರ ದೇಸಾಯಿಯವರ ವಾಡೆಯಿಂದ.

**ಸಂಗಮ ಮತ್ತು ತಂಗಡಗಿ:** ದವನದ ಹುಣ್ಣಿಮೆ ಮುಂಚೆ ಕೂಡಲಸಂಗಮದಿಂದ ಪಾಲಕ್ಕಿ ಬಂದು ಕರೆದುಕೊಂಡು ಹೋಗುವುದು ಕೂಡಲಸಂಗಮಕ್ಕೆ. ನಂತರ ಹುಣ್ಣಿಮೆ ಮರುದಿನ ಬಸವಣ್ಣ ನೀಲಾಂಬಿಕೆಗೆ ವಿವಾಹ ಜರುಗುವುದು. ನಂತರ ರಥೋತ್ಸವ ಆದ ಬಳಿಕ ತಂಗಡಗಿಗೆ ಬಂದು ಮತ್ತೆ ಉಡಿತುಂಬಿಸುವ ಸಂಪ್ರದಾಯ, ಅಂದರೆ ತಂಗಡಗಿ ತವರುಮನೆ, ಗಂಡನ ಮನೆ ಕೂಡಲಸಂಗಮದ ರೀತಿಯಲ್ಲಿ ಆಚರಿಸುತ್ತಾರೆ.

**ಮುರಕಿಬಾವಿ:** ಇಲ್ಲಿಯೂ ಸಹಿತ ನೀಲಮ್ಮನ ತೋರಗದ್ದುಗೆ ಇದೆ. ಈ ದೇವಾಲಯಕ್ಕೆ ಕಲ್ಯಾಣನೀಲಮ್ಮನೆಂದು ಕರೆಯುತ್ತಾರೆ. ಇಲ್ಲಿಯೂ ಪೂಜೆ, ಆರಾಧನೆ, ನಡೆಯುತ್ತದೆ. ಈಕೆಯನ್ನು ಸ್ಮರಿಸುವುದು ಅಷ್ಟೆಯಲ್ಲ, ಈಕೆಯ ಬಗ್ಗೆ ಅನೇಕ ವಿದ್ವಾಂಸರು ಈಕೆಯ ಜೀವನ ಹಾಗೂ ವಚನ ಸಾಹಿತ್ಯ ಕುರಿತು ಅಧ್ಯಯನ ಮಾಡಿದ್ದಾರೆ. ನೀಲಾಂಬಿಕೆ ಜನಮಾನಸವನ್ನು ಗೆದ್ದಿದ್ದಾಳೆ ಎನ್ನಬಹುದು. ಈಕೆಯ ಕುರಿತು ಜನಪದಗಳು ಬಹಳಷ್ಟು ಸ್ಮರಿಸಿದ್ದನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ.

**ಅಡಿಟಿಪ್ಪಣಿಗಳು**

೧. ಸಂದರ್ಶನ ಅಭಿಪ್ರಾಯ, ಶ್ರೀಮತಿ ಶಿವಲಿಂಗಮ್ಮ ಕಟ್ಟಿ, ಹುಬ್ಬಳಿ

೨. ಅದೇ

೩. ಸಂದರ್ಶನ ಅಭಿಪ್ರಾಯ, ಡಾ.ಎಂ.ಎಂ.ಕಲಬುರ್ಗಿಯವರು, ಧಾರವಾಡ

೪. ಸಂದರ್ಶನ ಅಭಿಪ್ರಾಯ, ಎಸ್.ಶಿವಣ್ಣ, ಬೆಂಗಳೂರು

೫. ಸಂದರ್ಶನ ಅಭಿಪ್ರಾಯ, ಶ್ರೀಮುರಘಾ ಶರಣರು, ಚಿತ್ರದುರ್ಗ

೬. ಚಕ್ಕೆರೆ ಶಿವಶಂಕರ(ಸಂ) **ಕಲ್ಯಾಣದೊಳಗೊಂದು ಪಂಚಾಯಿತಿ,** ಪು.೧೩, ೧೪

೭. ಅದೇ, ಪು.೧೫

೮. ಎಸ್.ಎಸ್.ಭೂಸರಡ್ಡಿ(ಸಂ), **ಮಹಾಶರಣೆ ನೀಲಾಂಬಿಕೆ,** ಪು.೭

೯. ರಮೇಶ್ ಸಂ. ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೧೨೭

೧೦. ಗುಂಬೀಶಂ, **ಲಿಂಗನುಭಾವಿ ನೀಲಾಂಬಿಕೆ,** ಪು.೯–೧೦

೧೧. ಸಂಗಮ್ಮ ಕರವೀರ ಸೆಟ್ಟರ(ಸಂ), **ಶ್ರೀ ಬಸವೇಶ್ವರ ಲಾವಣಿ ಪದ,** ಪು.೪

೧೨. ಪಿ.ಕೆ.ರಾಜಶೇಖರ(ಸಂ), **ಕರಪಾಲ ಬಸವಪುರಾಣ,** ಪು.೨೬

೧೩. ಅದೇ, ಪು.೨೬, ೨೭

೧೪. ಎಸ್.ಎಸ್.ಭೂಸರಡ್ಡಿ(ಸಂ), **ಮಹಾಶರಣೆ ನೀಲಾಂಬಿಕೆ,** ಪು.೬೫

೧೫. ಅದೇ, ಪು.೬೬

೧೬. ಎಸ್.ಎಸ್.ಭೂಸರಡ್ಡಿ(ಸಂ), **ಮಹಾಶರಣೆ ನೀಲಾಂಬಿಕೆ,** ಪು.೬

೧೭. ಈಶ್ವರಚಂದ್ರ ಚಿಂತಾಮಣಿ(ಸಂ), **ಭಕ್ತಾನುರಾಗಿ ಬಂಥನಾಳ ಶಿವಯೋಗಿ,** ಪು.೪೯೫

೧೮. ಅದೇ, ೪೯೫

೧೯. ಎಂ.ಎಸ್.ಮದಭಾವಿ(ಸಂ), **ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ, ಚರಿತ್ರ ಸಾಹಿತ್ಯ ೨,** ಪು.೧೧೫

೨೦. ದೇವರಕೊಂಡರೆಡ್ಡಿ ಮತ್ತು ಶ್ರೀಮತಿ ಹನಮಾಕ್ಷಿಗೋಗಿ, ಪು.೧೬೦

೨೧. ರಮೇಶ್ ಸಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೭

೨೨. ಎ.ಗಾಯಿತ್ರಿ, **ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೩೯

೨೩. ಜಿ.ಎಸ್.ಉಪಾಧ್ಯ, **ಗೋದಾವರಿ ವರಂ ಇರ್ದ ಕನ್ನಡ ನಾಡು,** ಪು.೩೮

೨೪. ಅದೇ, ಪು.೩೮

೨೫. ಅದೇ, ೪೦

೨೬. ಪ್ರಪಂಚ ಪತ್ರಿಕೆ, ಹುಬ್ಬಳ್ಳಿ, ದಿ. ೨೧ನೇ ಜುಲೈ, ೧೯೮೯, ಪು.೪

೨೭. ಅದೇ, ಪು.೧೬

೨೮. ವಾಸುದೇವ ಬಡಿಗೇರ(ಸಂ), **ಬಸವನ ಬಾಗೇವಾಡಿ,** ಪು.೧೫೩

೨೯. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೧೨

೩೦. ಬಿ.ಕೆ.ಹಿರೇಮಠ(ಸಂ), **ಸುಕುಮಾರ(ತ್ರೈಮಾಸಿಕ), ಸಂಪುಟ ೭, ಸಂಚಿಕೆ ೩,** ೨೦೦೯ ಫೆಬ್ರವರಿ, ಪು.೧೩

೩೧. ಬಸವರಾಜ ಮಲಶೆಟ್ಟ(ಸಂ), **ಹರಿದ ಹೆದ್ದೊರೆ,** ಪು.೪೭೯

೩೨. ಸರೋಜಿನಿ ಮಹಿಷಿ, **ಕರ್ನಾಟಕ ಕವಯಿತ್ರಿಯರು,** ಪು.೧೧೮

೩೩. ಸಂ.ಶಿ.ಭೂಸನೂರ ಮಠ(ಸಂ), **ಸಿದ್ಧನಂಜೇಶನ ಗುರುರಾಜ ಚಾರಿತ್ರ,** ಪು.೧೪೨, ಪು.೧೦

೩೪. ಎಚ್.ದೇವೀರಪ್ಪ(ಸಂ), **ಸಿಂಗಿರಾಜನ ಬಸವರಾಜ ಚಾರಿತ್ರ,** ಪು.೧೦೭

೩೫. ಅದೇ, ಪು.೧೦೭

೩೬. ಬುರಡೇಕಟ್ಟಿ ಮಂಜಪ್ಪ, **ಶಿವಶರಣೆಯರು,** ಪು.೫೫

೩೭. ಎಸ್.ಬಸಪ್ಪ(ಸಂ), **ಶಿವತತ್ವ ಚಿಂತಾಮಣಿ,** ಪು.೨೬೫, ಪು.೬೮

೩೮. ಎಂ.ಎಚ್.ನದಾಫ, **ನೀಲಮ್ಮನ ನಿಲುವು,** ಪು.೧-೨

೩೯. ಎಂ.ಎಂ.ಕಲಬುರ್ಗಿ, **ಮಾರ್ಗಸಂಪುಟ ೧,** ಪು.೨೨೧

೪೦. ಅದೇ, ಪು.೨೨೨

೪೧. ಸಾವಿತ್ರಿ ನಾಗರಾಜಯ್ಯ, ಬಸವಪಥ, ಲೇಖನ-ನೀಲಾಂಬೆಯ ನಿಲುವು, ಸಂಪುಟ ೨೮, ಸಂಚಿಕೆ ೧೧, ಫೆಬ್ರವರಿ, ೨೦೦೭

೪೨. ಎಚ್.ದೇವೀರಪ್ಪ(ಸಂ), **ಬಸವರಾಜದೇವರ ರಗಳೆ,** ಪು.೧೨೩

೪೩. ಎ.ಗಾಯತ್ರಿ, **ಕನ್ನಡ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೪೦

೪೪. ಬಸವರಾಜ, ಜೆ.ಜವಳಿ, ದೇವೇಂದ್ರ ಕುಮಾರ, ಸಿ.ಹಕಾರಿ, **(ರಸಿಕಚಕ್ರ ಹರಿಹರದೇವನ) ಬಸವರಾಜದೇವರ ರಗಳೆ ೨೩**

೪೫. ಅದೇ, ಪು.೨೧

೪೬. ಆರ್.ಸಿ.ಹಿರೇಮಠ(ಸಂ), **ಬಸವರಾಜ ವಿಜಯಂ,** ಪು.LXXII-LXXIII

೪೭. ಎಂ.ಎಂ.ಕಲಬುರ್ಗಿ, **ಮಾರ್ಗ ಸಂಪುಟ ೧,** ಪು.೪೦

೪೮. ಎಂ.ಎಂ.ಕಲಬುರ್ಗಿ, **ಬಸವಣ್ಣನವರ ವಚನ ಸಂಪುಟ ೩೦೫,** ವಚನ ೧೧೧೭

೪೯. ಎಂ.ಎಸ್.ಸುಂಕಾಪುರ(ಸಂ), **ಪ್ರಭುಲಿಂಗಲೀಲೆ,** ಪು.೧೨೪, ಪ.೨೨, ಗತಿ.೯

೫೦. ಅದೇ, ೧೨೪, ಗತಿ-೯

೫೧. ಎಸ್.ವಿದ್ಯಾಶಂಕರ, **ವಚನಾನುಶೀಲನ,** ಪು.೩೬೪

೫೨. ಎಸ್.ಬಸಪ್ಪ, **ಶಿವತತ್ವ ಚಿಂತಾಮಣಿ,** ಪು.೨೬೫, ಪದ್ಯ, ೬೭

೫೩. ಬುರಡೇಕಟ್ಟಿ ಮಂಜಪ್ಪ, **ಶಿವಶರಣೆಯರು,** ಪು.೫೪, ೫೫

೫೪. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೨೬

೫೫. ಬುದ್ಧಯ್ಯಸ್ವಾಮಿ, ಮ.ಪುರಾಣಿಕ ಮಠ(ಸಂ), **ಶ್ರೀ ಪ್ರಭುದೇವರ ಪುರಾಣ,** ಪು.೧೯೨, ಪದ್ಯ.೨೮

೫೬. ಅದೇ, ೧೯೨, ಪದ್ಯ.೨೯

೫೭. ಎಂ.ಎಂ.ಕಲಬುರ್ಗಿ, **ಬಸವಣ್ಣನವರ ವಚನಸಂಪುಟ,** ಪು.

೫೮. ಎಚ್.ದೇವೀರಪ್ಪ(ಸಂ), **ಬಸವರಾಜ ಚಾರಿತ್ರ(ಸಿಂಗಿರಾಜ ಪುರಾಣ),** ಪು.೧೦೭, ಪ.೫೩

೫೯. ಎ.ಗಾಯಿತ್ರಿ, **ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೪೦

೬೦. ಸಂ.ಶಿ.ಭೂಸನೂರಮಠ(ಸಂ), ಸಿದ್ಧನಂಜೇಶನ **ಗುರುರಾಜ ಚಾರಿತ್ರ,** ಪು.೧೪೩, ಪ.೧೦, ೮ನೇ ಸಂಧಿ

೬೧. ಶಿವಬಸವಸ್ವಾಮಿಗಳು(ಸಂ), **ಶರಣಲೀಲಾಮೃತ,** ಪು.೧೬೧

೬೨. ಹ.ಕ.ರಾಜೇಗೌಡ(ಸಂ), **ಗರಣಿಯ ಬಸವಲಿಂಗನ ಬಸವೇಶ್ವರಕಾವ್ಯ,** ಪು.೫೦

೬೩. ಬಿ.ಎಸ್.ಸಣ್ಣಯ(ಸಂ), **ಕವಿಕಾಡ ವಿರಚಿತ ಬಸವಶಿಖಾಮಣಿ,** ಪು.೬೧

೬೪. ಅದೇ ಪು.೬೩

೬೫. ಜಿ.ಜಿ.ಮಂಜುನಾಥ(ಸಂ), **ಗುರುಲಿಂಗ ದೇಶಿಕ ವಿರಚಿತ ಲಿಂಗಪುರಾಣಂ,** ಪು.೨೧೦, ೨೧ನೇ ಸಂಧಿ

೬೬. ಅದೇ, ಪೀಠಿಕೆ-XIV

೬೭. ಅದೇ,

೬೮. ಅದೇ, ಪು.೨೧೪, ೨೧ನೇ ಸಂಧಿ, ಪ.೩೧

೬೯. ಬಿ.ನಂ.ಚಂದ್ರಯ್ಯ(ಸಂ), **ಬಸವಪವಾಡ,** ಪು.೨೮

೭೦. ಸಂದರ್ಶನ ಅಭಿಪ್ರಾಯ, ಗುಂಬೀಶಂ, ಗುಂಡಕನಾಳ, ಬಿಜಾಪುರ ಜಿಲ್ಲೆ

೭೧. ಸಂದರ್ಶನ ಅಭಿಪ್ರಾಯ, ಅಲ್ಲಮಪ್ರಭು ಬೆಟ್ಟದೂರ, ಕೊಪ್ಪಳ,

೭೨. ಸಂದರ್ಶನ ಅಭಿಪ್ರಾಯ, ಎಚ್.ಎಚ್.ಪಾಟೀಲ್, ಕೊಪ್ಪಳ

೭೩. ಸಂದರ್ಶನ ಅಭಿಪ್ರಾಯ, ಚೆನ್ನವೀರ ಕಣವಿಯವರು, ಧಾರವಾಡ

೭೪. ಸಂದರ್ಶನ ಅಭಿಪ್ರಾಯ, ಡಾ.ಎಂ.ಎಂ.ಕಲಬುರ್ಗಿಯವರು, ಧಾರವಾಡ

೭೫. ಎಸ್.ಎಸ್.ಭೂಸರಡ್ಡಿ, **ಮಹಾಶರಣೆ ನೀಲಾಂಬಿಕೆ,** ಪು.೫೮

೭೬. ಅದೇ, ಪು.೭

೭೭. ಅದೇ, ಪು.೮

೭೮. ಅದೇ, ಪು.೮

೭೯. ಅದೇ, ಪು.೮

೮೦. ಪಿ.ಕೆ.ರಾಜಶೇಖರ(ಸಂ), **ಜನಪದ ಬಸವಪುರಾಣ,** ಪು.೩೯, ೪೦, ೪೩

೮೧. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೧೫

೮೨. ಬಾಳಣ್ಣ ಸೀಗಿಹಳ್ಳಿ(ಸಂ), **ಫ.ಗು.ಹಳಕಟ್ಟಿ ಸಮಗ್ರಸಾಹಿತ್ಯ, ಕಾವ್ಯಸಾಹಿತ್ಯ,** ಪು.೬೫

೮೩. ಶಾಂತಾಇಮ್ರಾಪೂರ, **ಧರ್ಮ-ಮಹಿಳೆ-ಸಮಾಜ,** ಪು.೪೮

೮೪. ಬುರಡೇಕಟ್ಟಿ ಮಂಜಪ್ಪ, **ಶಿವಶರಣೆಯರು,** ಪು.೫೭

೮೫. ವೀರಣ್ಣರಾಜೂರ(ಸಂ), **ಶಿವಶರಣೆಯರ ವಚನಸಂಪುಟ**, ವ.ಸಂ.೮೩೪ ಪು.೨೬೪

೮೬. ಜಯಶ್ರೀ ದಂಡೆ, **ಫಲದೊಳಗಣ ರುಚಿ**, ಪು.೧೯೯

೮೭. ಎಚ್.ದೇವಿರಪ್ಪ(ಸಂ), **ಬಸವರಾಜ ದೇವರರಗಳೆ**, ಪು.೧೭೩

೮೮. ಅದೇ, ಪು.೧೭೪

೮೯. ಎಂ.ಎಂ.ಕಲಬುರ್ಗಿ, **ಮಾರ್ಗ ಸಂಪುಟ ೧**, ಪು.೨೨೩

೯೦. ಅದೇ, ೨೨೩

೯೧. ಅದೇ, ೨೨೩

೯೨. ಜಯಶ್ರೀದಂಡೆ, **ಫಲದೊಳಗಣ ರುಚಿ**, ಪು.೧೫೦

೯೩. ಆರ್.ಸಿ.ಹಿರೇಮಠ(ಸಂ), **ಭೀಮಕವಿಯ ಬಸವಪುರಾಣ**, ಪು.೧೭೪, ಸಂಧಿ–೧೦, ಪ.೪೩

೯೪. ಲಕ್ಕಣ್ಣ ದಂಡೇಶ ವಿರಚಿತ(ಸಂ), **ಶಿವತತ್ವ ಚಿಂತಾಮಣಿ**, ಪು.೨೬೭, ಪ.೭೩

೯೫. ಎಂ.ಎಸ್.ಸುಂಕಾಪುರ(ಸಂ), **ಪ್ರಭುಲಿಂಗ ಲೀಲೆ**, ಪು.೨೨೫, ಪದ್ಯ ೨೫

೯೬. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ**, ಪು.೨೧೮, ಪು.೬೭೧

೯೭. ಎಂ.ಎಂ.ಕಲಬುರ್ಗಿ(ಸಂ), ಬಸವಣ್ಣನವರ ವಚನಸಂಪುಟ, ಪು.೩೦೧, ೩೦೨, ವ.ಸಂ.೧೧೧೧

೯೮. ವಿಜಯಕುಮಾರ ಮಹಾನುಭಾವಿಗಳು, **ಬಸವಣ್ಣನವರು**, ಪು.೧೩೪

೯೯. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ**, ಪು.೨೧೨, ಪು.೧೦೪೮

೧೦೦. ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ, **ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಕರ**, ಪು.೫೯೭–೫೯೮

೧೦೧. ಶ್ರೀಚನ್ನಬಸವ ಸ್ವಾಮಿಗಳು(ಸಂ), **ತೋಂಟದ ಶ್ರೀ ಸಿದ್ಧಲಿಂಗಶಿವಯೋಗಿಗಳ ವಚನಗಳು**, ಪು.೧

೧೦೨. ಬಿ.ನಂ.ಚಂದ್ರಯ್ಯ(ಸಂ), **ಬಸವಪವಾಡ**, ಪು.೧೭೨

೧೦೩. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು**, ಪು.೨೮೮

೧೦೪. ಎಸ್.ವಿದ್ಯಾಶಂಕರ(ಸಂ), **ಸಿದ್ಧರಾಮೇಶ್ವರ, ವಚನಸಂಪುಟ**, ಪು.೨೮೮, ವ.೧೦೯೯

೧೦೫. ಎಸ್.ವಿದ್ಯಾಶಂಕರ(ಸಂ), **ಸಂಕೀರ್ಣ ವಚನಸಂಪುಟ ೨**, ಪು.೭೧, ವ.೧೮೮

೧೦೬. ಅದೇ, ಪು.೧೪೭, ವ.ಸಂ.೪೧೩

೧೦೭. ಎಸ್.ವಿದ್ಯಾಶಂಕರ(ಸಂ), **ಸಿದ್ಧರಾಮೇಶ್ವರ, ವಚನಸಂಪುಟ**, ಪು.೩೮೨, ವ.೧೩೮೮

೧೦೮. ಬಿ.ಆರ್.ಹಿರೇಮಠ(ಸಂ), **ಸಂಕೀರ್ಣ ವಚನ ಸಂಪುಟ ೪**, ಪು.೧೨೭, ವ.ಸಂ.೩೩೭

೧೦೯. ಎಸ್.ಶಿವಣ್ಣ(ಸಂ), **ಸಂಕೀರ್ಣ ವಚನಸಂಪುಟ ೬,** ಪು.೩೭೪, ವ.೭೫೩

೧೧೦. ಅದೇ, ಪು.೩೫೫, ವ.೭೭೨

೧೧೧. ವೀರಣ್ಣರಾಜೂರ(ಸಂ), **ಸಂಕೀರ್ಣ ವಚನಸಂಪುಟ ೫,** ಪು.೩೨೪, ವ.೬೨೫

೧೧೨. ಅದೇ, ಪು.೩೪೮, ವ.೬೪೯

೧೧೩. ಅದೇ, ಪು.೩೬೭, ವ.೬೭೩

೧೧೪. ಅದೇ, ಪು.೪೦೯, ವ.೭೧೭

೧೧೫. ರಾಜಶೇಖರ ಇಚ್ಚಂಗಿ, **ಸಂಸ್ಕೃತಿಯ ಶೋಧ,** ಪು.೩೩

೧೧೬. ಎಸ್.ಎಸ್.ಭೂಸರಡ್ಡಿ, **ಮಹಾಶರಣೆ ನೀಲಾಂಬಿಕೆ,** ಪು.೧೧, ೧೨

೧೧೭. ಅದೇ, ಪು.೧೩

೧೧೮. ಅದೇ, ಪು.೧೩

೧೧೯. ಅದೇ

೧೨೦. ಅದೇ, ಪು.೬

೧೨೧. ಅದೇ. ಪು.೭೧

೧೨೨. ಬಿ.ವಿ.ಶಿರೂರ(ಸಂ), **ಮೊಲ್ಲೆ ಬೊಮ್ಮಯ್ಯಗಳ ಕಾವ್ಯ,** ಪು.೩

೧೨೩. ಕೌಜಗೇರಿ ಬಸವಕುಮಾರ(ಸಂ), **ಬಸವಣ್ಣನವರ ಲೀಲೆಯು,** ಪು.೧೮

೧೨೪. ಸಂದರ್ಶನ ಅಭಿಪ್ರಾಯ, ಚೆನ್ನಮಲ್ಲಸ್ವಾಮಿಗಳು, ಕನಕಗಿರಿ

೧೨೫. ಸಂದರ್ಶನ ಅಭಿಪ್ರಾಯ, ನೀಲಗಂಗಾ ಚರಂತಿಮಠ, ಬೆಳಗಾವಿ

೧೨೬. ಸಂದರ್ಶನ ಅಭಿಪ್ರಾಯ, ಎಂ.ಎಂ.ಕಲಬುರ್ಗಿಯವರು, ಧಾರವಾಡ

೧೨೭. ಸಂದರ್ಶನ ಅಭಿಪ್ರಾಯ, ಗುಂಡಕನಾಳ ಬಿರಾದಾರ ಶಂಕರಗೌಡ್ರ, ಗುಂಡಕನಾಳ, ಬಿಜಾಪುರ ಜಿಲ್ಲೆ.

೧೨೮. ಎಂ.ಎಚ್.ನದಾಪ, ನೀಲಮ್ಮನ ನಿಲುವು, ೪೩

೧೨೯. ಅದೇ, ೪೪

೧೩೦. ಅದೇ,

೧೩೧. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೧೩೮

೧೩೨. ಪಿ.ಕೆ.ರಾಜಶೇಖರ, **ಜನಪದ ಶರಣಕಾವ್ಯಗಳು,** ೧೨೨, ೧೨೩

೧೩೩. ಈಶ್ವರಚಂದ್ರ ಚಿಂತಾಮಣಿ(ಸಂ), **ಭಕ್ತಾನುರಾಗಿ ಬಂಧನಾಳ ಶಿವಯೋಗಿ,** ಪು.೫೦೨

೧೩೪. ರಾಜಶೇಖರ ಇಚ್ಚಂಗಿ, **ಸಂಸ್ಕೃತಿ ಶೋಧ,** ಪು.೩೬

೧೩೫. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೯

೧೩೬. ಎಂ.ಚಿದಾನಂದಮೂರ್ತಿ, **ಬಸವಣ್ಣವರು,** ಪು.೬೦

೧೩೭. ಅದೇ, ಪು.೬೪

೧೩೮. ಲಲ್ಲೇಶ್ವರಿ, ಶಂ.ಮೂಗಿ, **ಬಸವಯುಗದ ಶಿವಶರಣೆಯರು,** ಪು.೩೪

೧೩೯. ಅದೇ, ಪು.೩೫

೧೪೦. ಸರಸ್ವತಿ ದೇವಿ ಗೌಡರ, **ಶಿವಶರಣೆಯರ ಚರಿತ್ರೆಗಳ ಸಂಗ್ರಹ,** ಪು.೨೨

೧೪೧. ಪಂಡಿತ ಬಸವಪ್ಪ(ಸಂ), **ಶಿವತತ್ವ ಚಿಂತಾಮಣಿ,** ಪು.೨೮೭, ಪದ್ಯ ೭೮

೧೪೨. ಬಿ.ಎಸ್.ಸಣ್ಣಯ(ಸಂ), **ಕವಿಕಾಡ ವಿರಚಿತ ಬಸವಶಿಖಾಮಣಿ,** ಪು.೧೧೪, ಪು.೧೪೯

೧೪೩. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೩೬, ವ.೭೭೦

೧೪೪. ಬಿ.ಎಸ್.ಸಣ್ಣಯ(ಸಂ), **ಕವಿಕಾಡ ವಿರಚಿತ ಬಸವಶಿಖಾಮಣಿ** ೧೧೪, ಪದ್ಯ.೧೬೦

೧೪೫. ಅದೇ, ೧೧೪

೧೪೬. ಬುದ್ಧಯ್ಯಸ್ವಾಮಿ, ಮ.ಪುರಾಣಿಕಮಠ(ಸಂ), **ಪ್ರಭುದೇವರ ಪುರಾಣ,** ಪು.೩೪೪, ೯ನೇ ಸಂಧಿ, ಪ.೧೫೮

೧೪೭. ವಿರೂಪಾಕ್ಷ ಪಂಡಿತನ, **ಚೆನ್ನಬಸವ ಪುರಾಣ,** ಪು.೭೩೮, ೬೨ನೇ ಸಂಧಿ, ಪು.೧೯

೧೪೮. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೨೪

೧೪೯. ಅದೇ, ಪು.೨೫

೧೫೦. ಜಯ ರಾಜಶೇಖರ ಜಿ.ವಿ., **ಶೂನ್ಯಸಂಪಾದನೆಯಲ್ಲಿ ಸ್ತ್ರೀ ಪಾತ್ರಗಳು,** ಪು.೩೨, ೩೩

೧೫೧. ಜಿ.ಜಿ.ಮಂಜುನಾಥನ್(ಸಂ), **ಗುರುಲಿಂಗದೇಶಿಕನ ಲಿಂಗಪುರಾಣಂ,** ಪು.೩೬೩

೧೫೨. ಮಾಸ್ತಿವೆಂಕಟೇಶ್ ಅಯ್ಯಂಗಾರ್, **ಧರಣಿ ಪಂಡಿತನ ಬಿಜ್ಜಳನ ಚರಿತ್ರೆ,** ಪು.೯೩, ಪದ್ಯ.೧೪೫

೧೫೩. ಈಶ್ವರಚಂದ್ರ ಚಿಂತಾಮಣಿ, **ಭಕ್ತಾನುರಾಗಿ ಭಂಥನಾಳ ಶಿವಯೋಗಿ,** ಪು.೫೦೦

೧೫೪. ರಮೇಶ್ ಪಂ.ಲಿಂಗದಳ್ಳಿ, **ಲಿಂಗನಿಷ್ಠೆ ನೀಲಾಂಬಿಕೆ,** ಪು.೨೫

ಅಧ್ಯಾಯ ಐದು

# ಗಂಗಾಂಬಿಕೆಯ ವಚನಗಳ ವಿಶ್ಲೇಷಣೆ

# ಅಧ್ಯಾಯ ಐದು

## ಗಂಗಾಂಬಿಕೆಯ ವಚನಗಳ ವಿಶ್ಲೇಷಣೆ

ಕನ್ನಡ ನಾಡಿನಲ್ಲಿ ೧೨ನೇ ಶತಮಾನ ಒಂದು ಬದಲಾವಣೆಯ ಘಟ್ಟವಾಗಿದೆ. ಇಲ್ಲಿ ಪ್ರಸ್ತುತ ವಚನಕಾರರು, ಕ್ರಿಯಾತ್ಮಕ ಚಟುವಟಿಕೆಯಿಂದ ಕೂಡಿದವರು ಹಾಗೂ ವೈಚಾರಿಕ ಸೃಜನಶೀಲತೆಯನ್ನು ಎತ್ತಿ ಹಿಡಿದವರು. ಹಾಗಾಗಿ ವಚನಗಳು ವ್ಯಾಪಕತೆಯಲ್ಲಿ ಇದು ಸಾಹಿತ್ಯವಾಗಿ, ವಚನಶಾಸ್ತ್ರವಾಗಿ, ವಚನ ವಾಙ್ಮಯವಾಗಿ ಬೆಳೆದುಬಂದಿದೆ. ಕೇವಲ ಅರಮನೆಯ ಸಾಹಿತ್ಯವಾಗಿದ್ದ ಒಂದು ಕಾಲಘಟ್ಟವನ್ನು ತಳ್ಳಿಹಾಕಿ, ಹೊಸದಾದ ಚಿಂತನೆಗಳ ಮೂಲಕ ಹೊಸದಾದ ಸ್ವರೂಪವನ್ನು ಪಡೆದಿದ್ದು ಈ ಕಾಲಘಟ್ಟದ ವಿಶೇಷತೆಯಾಗಿದೆ.

ಶಿವಶರಣ ಶರಣೆಯರು ಲೌಖಿಕದಿಂದ ಪಾರಮಾರ್ಥಿಕದ ಕಡೆಗೆ ಸಾಗಿ ಸುಜ್ಞಾನಿಗಳಾದರು. ಇಂತಹ ಹಲವಾರು ಶರಣ ಶರಣಿಯರಲ್ಲಿ ಬಾಳಿ ಬದುಕಿದ ಬಸವಣ್ಣನ ಸತಿ ಗಂಗಾಂಬಿಕೆಯು ಒಬ್ಬಳು. ಈಕೆಯೂ ಕೂಡ ವಚನಕಾರ್ತಿಯಾಗಿದ್ದಾಳೆ. ಈಕೆಯ ಒಂಬತ್ತು ವಚನಗಳು ಸಿಕ್ಕಿವೆ. ಆದರೆ ಈಕೆಯ ವಚನಗಳು ಬಹಳಷ್ಟು ಇದ್ದವು ಎಂಬುದನ್ನು ಸಿದ್ಧರಾಮಯ್ಯ ಹೇಳುತ್ತಾನೆ. ಅವು ಏನಾಯಿತು ಎಂಬುದು ತಿಳಿದುಬರುವುದಿಲ್ಲ. ಬಹುಶಃ ಕಲ್ಯಾಣ ಕ್ರಾಂತಿಯಲ್ಲಿ ಈಕೆಯ ವಚನಗಳು ನಾಶವಾಗಿರಬಹುದು. ಸಿಕ್ಕಿರುವ ವಚನಗಳಲ್ಲಿ ತನ್ನ ಮಗು ಐಕ್ಯವಾದ ಪರಿಯನ್ನು ತಿಳಿಸುತ್ತಾಳೆ. ಈ ದುಃಖವು ಈಕೆಯಲ್ಲಿ ಇಮ್ಮಡಿಯಾದದ್ದನ್ನು ಆತ್ಮ ನಿವೇದನೆಗಳ ಮೂಲಕ ವ್ಯಕ್ತಪಡಿಸುತ್ತಾಳೆ. ಹಾಗೆ ಈಕೆಯಲ್ಲಿಯ ಪತಿನಿಷ್ಠೆ, ಲಿಂಗದ ಮಹತ್ವ, ಹಾಗೂ ಸಮಕಾಲೀನ ಶರಣರನ್ನು ಕುರಿತ ಆಕೆಯ ನಿಲುವುಗಳನ್ನು ಈ ವಚನಗಳಲ್ಲಿ ಕಾಣುತ್ತೇವೆ.

ಬಸವಾದಿ ಶರಣರ ಈ ವಚನಗಳ ಕುರಿತು ಶ್ರೀ ಸಿದ್ಧರಾಮ ಸ್ವಾಮಿಗಳು ಹೀಗೆ ಅಭಿಪ್ರಾಯಪಡುತ್ತಾರೆ. "ಬಸವಾದಿ ಶಿವಶರಣರು ರಚಿಸಿರುವ ವಚನಗಳನ್ನು ಕೆಲವರು ಶಾಸ್ತ್ರ ಎಂದರೆ ಇನ್ನು ಕೆಲವರು ಸಾಹಿತ್ಯ ಎಂದು ಕರೆದರು. ಆದರೆ ವಚನಗಳು ಸಾಹಿತ್ಯಕ್ಕೆ ಸಾಹಿತ್ಯವಾಗಿ, ಶಾಸ್ತ್ರಕ್ಕೆ ಶಾಸ್ತ್ರವಾಗಿ ತಮ್ಮ ಅರ್ಥವಿಸ್ತಾರವನ್ನು ಪಡೆದುಕೊಳ್ಳುತ್ತಿರುವುದು ಅಷ್ಟೇ

ಸತ್ಯ"[೧] ಎಂದು. ಸಿದ್ಧರಾಮ ಸ್ವಾಮಿಗಳು ಹೇಳಿದಂತೆ ವಚನ, ಗದ್ಯ, ಪದ್ಯ, ಒಳಗೊಂಡದ್ದು ಅದಕ್ಕಾಗಿ ಈ ವಚನ ಪದದ ಅರ್ಥವನ್ನು ಎಂ.ಚಿದಾನಂದಮೂರ್ತಿಯವರು "ವಚನ ಎಂದರೆ ಸಂಸ್ಕೃತದಲ್ಲಿ ಮಾತು, ಮಾತನಾಡುವುದು, ವ್ಯಕ್ತಪಡಿಸುವುದು ಇತ್ಯಾದಿ ಅರ್ಥಗಳಿವೆ"[೨] ಎಂದು ಹೇಳಿದರೆ, ಡಾ.ಎಚ್.ಆರ್.ಪ್ರಭಾ ಅವರು "ವಚನ ಎನ್ನುವ ಪದಕ್ಕೆ ಬಹು ವಿಶಿಷ್ಟವಾದ ಮತ್ತು ಅತಿ ವಿಶಾಲವಾದ ಅರ್ಥವಿದೆ. ಮಾತು, ನುಡಿ, ಪ್ರಮಾಣ, ಪ್ರತಿಜ್ಞೆ ಇತ್ಯಾದಿ ಅರ್ಥದ ಪದರುಗಳಿವೆ. ಮಾತು ಕೊಡುವುದು, ಪ್ರಮಾಣ ಮಾಡುವುದು, ಆಣೆಯಿಟ್ಟು ಹೇಳುವುದು, ಶಪಥಗೈವುದು, ಪ್ರತಿಜ್ಞೆಗೈವುದು, ಭಾಷೆ ಕೊಡುವುದು ಈ ಮುಂತಾದ ಅರ್ಥಪರಂಪರೆಯೂ ವಚನ ಪದಕ್ಕಿದೆ."[೩] ಇವರ ಹೇಳಿಕೆಯಂತೆ ವಚನ ಎಂಬುದಕ್ಕೆ ಚಿದಾನಂದಮೂರ್ತಿಯವರು ಮಾತು ಎಂದರೆ ಪರ್ಯಾಯದ ಅರ್ಥವನ್ನು ಡಾ.ಪ್ರಭಾರವರು ಉಲ್ಲೇಖಿಸುತ್ತಾರೆ. ಆದರೆ ವಚನ ಎನ್ನುವ ಪದವು ಒಳ್ಳೆಯ ನುಡಿ, ಭಾಷೆ ಕೊಡುವಂತ ಸಂದರ್ಭ ಹಾಗೂ ಸತ್ಯತೆಯಿಂದ ಕೂಡಿದ್ದು, ಸಚ್ಚಾರಿತ್ರತೆ ಇತ್ಯಾದಿ ಪದಗಳನ್ನು ಹೊಂದುವಂತದ್ದು, ಈ ವಚನ ಎಂಬ ಪದದ ವೈಶಿಷ್ಟ್ಯತೆಯಾಗಿದೆ. ವಚನ ಸಾಹಿತ್ಯದಲ್ಲಿ ಬಾಹ್ಯ ಮತ್ತು ಆಂತರಿಕ ವಿಚಾರಗಳು ಒಳಗೊಂಡು, ರೂಪ, ವಸ್ತು, ಶೈಲಿ, ತಂತ್ರ, ಭಾಷೆಗಳ ಮುಖಾಂತರವಾಗಿ ರೂಪ ಪಡೆದಿವೆ. ಮುಂದುವರೆದು ಡಾ.ಪ್ರಭಾರವರು ವಚನದ ಬಗ್ಗೆ ಹೀಗೆ ಹೇಳುತ್ತಾರೆ. "ವಚನಕಾರರು ಭಾಷೆಯನ್ನು ಬಳಸಿಕೊಳ್ಳುವಾಗ ಸಂಸ್ಕೃತದಲ್ಲಿಯೂ ಸಂಸ್ಕೃತಕ್ಕೆ ಭಿನ್ನವೆಂಬಂಥ ಅರ್ಥ ಸಂಪತ್ತನ್ನು ಆ ಪದಗಳಿಗೆ ತುಂಬುವ ಸೃಜನ ಶೀಲತೆಯನ್ನು ಮೆರೆಯುತ್ತಾರೆ. ಉದಾಹರಣೆಗೆ ಕೆಲವು ಶಬ್ದಗಳನ್ನು ಗಮನಿಸಬಹುದು. ದಾಸೋಹ ಕಾಯಕ, ಜಂಗಮ, ಸ್ಥಾವರ, ಶೂನ್ಯ, ನಿಶೂನ್ಯ, ಮಹಾಶೂನ್ಯ ಮೊದಲಾದವು ಮೇಲಿನ ಪದಗಳನ್ನು ಸಂಸ್ಕೃತದಿಂದಲೇ ತೆಗೆದು ಕೊಂಡಿದ್ದರೂ ದಾಸೋಹ ಮತ್ತು ಕಾಯಕ ಶಬ್ದಗಳು ವಚನಕಾರರ ಒಂದು ಹೊಸ ಪರಿಭಾಷೆಯೇ ಆಗಿರುವುದನ್ನು ಗಮನಿಸಬಹುದು"[೪] ವಚನಗಳು ಸಂಸ್ಕೃತದ ಪ್ರಭಾವಕ್ಕೊಳಗಾದರೂ ತಮ್ಮದೇ ಆದ ಶೈಲಿ ಹಾಗೂ ದೇಸಿಯತೆಯಿಂದಾಗಿ ವಚನಕಾರರು ಜನಸಾಮಾನ್ಯರನ್ನು ಮುಟ್ಟಿದರು. ಕಾವ್ಯವೆಂದರೆ, ಹಾಗೂ ಸಾಹಿತ್ಯವೆಂದರೆ ತಿಳಿದವರ ಸ್ವತ್ತು ಎಂಬ ಮಾತಿಗೆ ಬದಲಾಗಿ ಎಲ್ಲರೂ ಓದಬಹುದಾದ, ಎಲ್ಲರೂ ಪಾಲ್ಗೊಳ್ಳಬಹುದಾದ ಕ್ಷೇತ್ರ ಎಂಬುದಾಗಿ ಮನವರಿಕೆ ಮಾಡಿಕೊಟ್ಟರು. ಅಷ್ಟೇ ಅಲ್ಲದೇ ರಾಜಸ್ಥಾನದಿಂದ ಜನಸಾಮಾನ್ಯನೆಡೆಗೆ ಸಾಹಿತ್ಯವನ್ನು ತಂದ ಶ್ರೇಯಸ್ಸು ವಚನಕಾರರದಾಗಿದೆ.

ಡಾ.ಪಿ.ವಿ.ನಾರಾಯಣರ ಅಭಿಪ್ರಾಯದಂತೆ "ಕನ್ನಡ ಭಾಷೆಯ ಸತ್ವವನ್ನು ಕಂಡಿದ್ದ ವಚನಕಾರರು ಆ ಸತ್ವವನ್ನು ಬಳಸಿಕೊಂಡದ್ದೇ ಅಲ್ಲದೇ ಕನ್ನಡ ಭಾಷೆಯ ಕಸುವನ್ನು ಬೆಳೆಸಿದರು. ಹಾಗೆ ಭಾಷೆಯನ್ನು ಬಳಸುವಾಗ ವಚನಕಾರರು ವಿಶಿಷ್ಟ ತಂತ್ರಗಳನ್ನು ಬಳಸಿ

ಅಭಿವ್ಯಕ್ತಿಯು ಸಮರ್ಥವಾಗಿ ನಡೆಯುವಂತೆ ಮಾಡಿದರು. ಆದರೆ ಈ ಬಗೆಯ ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಅವರು ಬಳಸಿದರೆಂದು ನಮ್ಮ ಅರ್ಥವಲ್ಲ; ಪ್ರತಿಭಾವಂತರಾದ ಹಲವರು ವಚನಕಾರರು ಪ್ರತಿಭೆ ಭಾಷೆಯನ್ನು ಬಳಸುವ ರೀತಿಯನ್ನು ಗುರುತಿಸಿತ್ತೆನ್ನುವುದು."[೫] ಇವರ ಅಭಿಪ್ರಾಯದಂತೆ ಶರಣರು, ಕನ್ನಡಭಾಷೆ, ಅದರಲ್ಲಿಯ ಗಟ್ಟಿತನದಿಂದ ವಚನಕಾರರು ಸಂಪೂರ್ಣವಾದ ಭಾಷಾ ಹಿಡಿತವನ್ನು ರೂಢಿಸಿಕೊಂಡಿದ್ದರು ಎಂಬುದನ್ನು ತಿಳಿಯಬಹುದು. ಉದಾಹರಣೆಗೆ

"ಅನ್ನವ ನೀಡುವವರಿಂಗೆ ಧಾನ್ಯವೆಸೆವಲೋಕ
ಅರ್ಥವ ಕೊಡುವವರಿಂಗೆ ಪಾಷಾಣ ವೆಸೆವಲೋಕ"[೬]

ಈ ವಚನದಲ್ಲಿ ಅಕ್ಕಮಹಾದೇವಿಯು, ತನ್ನದೇಯಾದ ಆಡು ಮಾತಿನಿಂದ ಅನ್ನವ ಕೊಡುವ ವ್ಯಕ್ತಿಗೆ ಧಾನ್ಯ ಕೊಡುವುದು ಈ ಜಗತ್ತು, ಆದರೆ ದುಡ್ಡುಕೊಡುವವರಿಗೆ ಪಾಷಾಣಗ ನೀಡುತ್ತದೆ. ಅಥವಾ ಹಿಂಸೆಕೊಡಬಹುದು ಎಂಬುದನ್ನು ಅತ್ಯಂತ ಸಹಜವಾದ ಮಾತುಗಳಲ್ಲಿ ವ್ಯಕ್ತಪಡಿಸಿದ್ದು ಕಾಣುತ್ತೇವೆ. ಪ್ರತಿ ವಚನಗಳ ಭಾಷೆ ಸರಳವಾಗಿರುವುದರಿಂದ ಅಲ್ಲಿ ವ್ಯಕ್ತವಾಗುವ ಪ್ರತಿಯೊಂದು ಪದವು ಅದರದೆಯಾದ ಸಂದೇಶವನ್ನು ನೀಡುತ್ತದೆ. ಇಂಥ ಪರಿಭಾಷೆಗಳ ಮೂಲಕ ಸಮಾಜದಲ್ಲಿಯ ಅಂಕುಡೊಂಕುಗಳನ್ನು ನೇರವಾಗಿ ಹೇಳಿ ಪ್ರಶ್ನಿಸುವಂತ ಭಾವನೆಯನ್ನು ಹೊಂದಿದ್ದು, ಸುಧಾರಣೆಯ ದ್ಯೋತಕವಾಗಿದೆ. ಹಾಗೂ ಗೂಢಾರ್ಥಗಳನ್ನು ಬಳಸಿ, ಅದರಲ್ಲಿ ಸತ್ವವನ್ನು ವಿಧ ವಿಧವಾಗಿ ಗ್ರಹಿಸುವ ಭಾಷೆಯು ವಚನಸಾಹಿತ್ಯವಾಗಿದೆ.

ವಚನಕಾರರು ತಮ್ಮ ವಚನಗಳಲ್ಲಿ ಜನಮಾನಸಕ್ಕೆ ಹತ್ತಿರವಾದ ಭಾಷೆಯಲ್ಲಿ ವಚನಗಳನ್ನು ಹೇಳಿದ್ದಾರೆ. ಹಾಗೂ ಆಡುಮಾತಿಗೆ ಹತ್ತಿರವಿರುವ ಗಾದೆಗಳು, ಒಗಟುಗಳು, ಜನಪದ ಕಥೆಗಳು, ಜೊತೆಗೆ ಪೌರಾಣಿಕ ಅಂಶಗಳನ್ನು ಕ್ರೋಢೀಕರಿಸಿ, ಅದರ ಮೂಲಕ ವಚನಗಳನ್ನು ಮತ್ತು ವಚನದ ಸಂದೇಶಗಳನ್ನು ತಿಳಿಸಿದ್ದಾರೆ. ಹಾಗೂ ವಸ್ತು, ರೂಪಗಳಲ್ಲಿ ಸಾಮಾಜಿಕ ಕಳಕಳಿಯಾಗಿರಬಹುದು ಅಥವಾ ಅಧ್ಯಾತ್ಮ ಎತ್ತರದ ಮಟ್ಟವನ್ನು ಕಾಣುತ್ತೇವೆ. ಇಲ್ಲಿ ಇಹಪರಗಳ ಚರ್ಚೆ, ಸತಿಪತಿಗಳ ಭಾವ, ಮೇಲುಕೀಳು ಈ ಗುಣಗಳ ಅಂಶಗಳನ್ನು ವಚನಗಳು ತುಂಬಿಕೊಟ್ಟಿವೆ. ವಚನ ಸಾಹಿತ್ಯದ ಆಶಯ ಇಲ್ಲಿ ಎಲ್ಲರೂ ಸಮಾನರು. ಕಾಯಕ, ದಾಸೋಹದ ಮೂಲಕ ವ್ಯಕ್ತಿ ಉಜ್ವಲತೆ ಹೊಂದಬೇಕು. ಮೂಢನಂಬಿಕೆ, ಕಂದಾಚಾರ, ಭ್ರಷ್ಟ ಆಡಳಿತವಿರಬಾರದು, ಸ್ನೇಹಪರವಾದ ಬದುಕು ಬಹಳ ಮುಖ್ಯ ಎಂಬುದಾಗಿದೆ. ಈ ಮೂಲ ಆಶಯದಿಂದ ಪ್ರಗತಿ ಸಾಧ್ಯ ಎಂಬುದನ್ನು ನೋಡಬಹುದು. ಇದಕ್ಕೆ ಪೂರಕವಾಗಿ "ವಚನ ಸಾಹಿತ್ಯ ಅಧ್ಯಾತ್ಮಿಕ ಹಾಗೂ ಸಾಮಾಜಿಕ ಅನುಭವಗಳ ಚಿಂತನೆಗಳ ಸತ್ಫಲ. ಅನುಭಾವ, ವಿಚಾರಶೀಲ ಸಂಹಿತೆ, ಆತ್ಮದ ವಿಚಾರ, ಸಾಧಕರೊಡನೆ ಹಂಚಿಕೊಂಡ ವಿಶೇಷ ಅನುಭವ"[೭] ಎಂದು ಡಾ.ಎಚ್.ಆರ್.

ಪ್ರಭಾ ಹೇಳುತ್ತಾರೆ. ಇದನ್ನೆ ಬಸವಾದಿ ಶರಣರ ವಚನಗಳ ಅಶಯುವಾಗಿತ್ತು. ತ್ವರಿತವಾದ ಘಟನೆಗಳು ಮೇಲ್ನೋಟಕ್ಕೆ ಕ್ರೂರವೆನಿಸಿದರೂ, ಅಂತವುಗಳಿಂದ ದೂರವಾಗಿ ಅನುಭಾವ ಅಥವಾ ಒಳ್ಳೆಯ ವಿಚಾರಗಳಿಂದ ಮನಪರಿವರ್ತನೆ ಸಾಧ್ಯ ಎಂಬುದನ್ನು ಸ್ಪಷ್ಟಗೊಳಿಸಬಹುದು.

ಇಂತಹ ವಚನಗಳ ಮೂಲಕ ಅಡಂಬರದ ಭಕ್ತಿ ಆಚರಣೆಗಳ ಕುರಿತು "ವೇಷವ ತೊಟ್ಟು ಗ್ರಾಸಕ್ಕೆ ತಿರುಗುವ ವೇಷಧಾರಿಗಳ ಕಂಡಡೆ ನಾಚಿತ್ತೆನ್ನ ಮನ"[೮] ಎಂದು ಅಮುಗೆ ರಾಯಮ್ಮ ಮುಖವಾಡ ಧರಿಸಿ ನಡೆಯುವವರನ್ನು ಕಂಡು ಎನ್ನ ಮನನಾಚಿತ್ತು ಎಂದರೆ, ಆಯ್ದಕ್ಕಿ ಲಕ್ಕಮ್ಮ "ಅಂಗಕ್ಕೆ ಬಡತನವಲ್ಲದೆ, ಮನಕ್ಕೆ ಬಡತನವುಂಟೆ?"[೯] ದೇಹಕ್ಕೆ ಬಡತನವಿದೆ ಅಂದರೆ ನಮಗೆ ಶರೀರ ಮುಚ್ಚಿಕೊಳ್ಳಲು ಬಡತನವಿದೆ. ಆದರೆ ಜ್ಞಾನವನ್ನು ಪಡೆಯಬೇಕೆಂದು ಆಸೆಪಡುವ ಮನಕ್ಕೆ ಬಡತನವಿಲ್ಲ. ಅಂಗದ ಬಡತನ ನಾಶವಾಗಿ ಹೋಗುತ್ತದೆ. ವಚನ ಸಾಹಿತ್ಯ ಅನೇಕ ರೀತಿಯ ಅಂಶಗಳಿಂದ ರೂಪುಗೊಂಡಿದ್ದನ್ನು ಕಾಣುತ್ತೇವೆ. ಇಂತಹ ವೈಚಾರಿಕ ಮನೋಭಾವದಿಂದ ಬೆಳೆದ ಶರಣ ಸಾಹಿತ್ಯ ವಾಸ್ತವ ಮನೋಧರ್ಮವನ್ನು ಎತ್ತಿ ಹಿಡಿದಿದೆ. ಹಾಗಾಗಿ ಶರಣರು ಸಮರ್ಥವಾದ ಚಿಂತನೆಗಳನ್ನು ವಚನ ಸಾಹಿತ್ಯದ ಮೂಲಕ ಪ್ರಚುತಪಡಿಸಿದ್ದಾರೆ ಎನ್ನಬಹುದು.

ವಚನ ಸಾಹಿತ್ಯ ರಚನೆಯಲ್ಲಿ ಶರಣರಷ್ಟೆಯಲ್ಲದೆ, ಶರಣಿಯರು ತೊಡಗಿದ್ದು, ಈ ಕಾಲಘಟ್ಟದ ವಿಶೇಷ. ಏಕೆಂದರೆ ಮಹಿಳೆಯನ್ನು ಕೀಳುಭಾವನೆಯಿಂದ ನೋಡುವ ಸಂಪ್ರದಾಯವಾದಿಗಳ ಮುಂದೆ ಅವಳ ಮೊನಚಾದ ಸಾಹಿತ್ಯದ ವಾಗ್‌ಝುರಿಯಿಂದ ಹಲವಾರು ಅಂಶಗಳನ್ನೊಳಗೊಂಡ ಸಾಹಿತ್ಯದ ವಾಕ್ ಪುಷ್ಪಗಳನ್ನು ಅರಳಿರುವುದನ್ನು ಅನುಭವ ಮಂಟಪದಲ್ಲಿ ಕಾಣಬಹುದಾಗಿದೆ. ಇಲ್ಲಿ ಸ್ತ್ರೀಗೆ ವಾಕ್ ಸ್ವಾತಂತ್ರವನ್ನು ನೀಡಿದ್ದರಿಂದ, ಶರಣೆಯರಿಂದ ಅನುಭವ, ಅನುಭಾವ ಕುರಿತಾದ ಚರ್ಚೆಯನ್ನು ಒಳಗೊಂಡಿದ್ದು ಕಾಣಬಹುದಾಗಿದೆ. ಇಂತಹ ಅನುಭವಿ ಮಣಿಗಳಾದ ಅಕ್ಕಮಹಾದೇವಿ, ಸತ್ಯಕ್ಕ, ರಾಯಮ್ಮ, ಸಂಕವ್ವೆ, ಲಿಂಗಮ್ಮ, ನಾಗಲಾಂಬಿಕೆ, ನೀಲಾಂಬಿಕೆಯರೊಂದಿಗೆ ಗಂಗಾಂಬಿಕೆಯೂ ಇದ್ದಾಳೆ. ಗಂಗಾಂಬಿಕೆ ಪತಿನಿಷ್ಠೆ ಮತ್ತು ವಚನ ಚಳುವಳಿಯಲ್ಲಿ ಪಾಲ್ಗೊಂಡು ವಚನಸಾಹಿತ್ಯ ರಕ್ಷಿಸಿದ ಕ್ರಿಯಾತ್ಮಕ ಕೆಲಸ ಈಕೆಯದಾಗಿದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಕೇವಲ ೯ ವಚನಗಳು ಮಾತ್ರ ದೊರೆತಿವೆ. ಆದರೆ ಸಮಕಾಲೀನ ವಚನಕಾರನಾದ ಸಿದ್ಧರಾಮೇಶ್ವರ ಈಕೆಯ ವಚನ ಸಂಖ್ಯೆ ಹಾಗೂ ಇತರ ಶರಣ ಶರಣಿಯರ ವಚನಸಂಖ್ಯೆಯನ್ನು ಉಲ್ಲೇಖಿಸುತ್ತಾನೆ.

"ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ
ಅಪ್ಪಯ್ಯಗಳ ವಚನ ನಾಲ್ಕುಲಕ್ಷದ ಮೂವತ್ತಾರು ಸಾಸಿರ

ಎಮ್ಮಯ್ಯಗಳ ವಚನ ವಚನಕ್ಕೊಂದು
ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ
ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾಸಿರ
..............................ಮಹಾದೇವ
ಕಪಿಲಸಿದ್ಧ ಮಲ್ಲಿಕಾರ್ಜುನ"[೧೦]

ಈ ವಚನದಲ್ಲಿ ಅಲ್ಲಮಪ್ರಭುಗಳ ವಚನ ಎರಡೆಂಬತ್ತು ಕೋಟಿ ಎಂದು ಹೇಳುತ್ತಾ, ಉಳಿದ ಶರಣ ಶರಣೆಯರ ವಚನ ಸಂಖ್ಯೆ ಕೊಟ್ಟು, ಈಕೆಯ ವಚನಗಳು ಲಕ್ಷದ ಎಂಟು ಸಾವಿರ ಎಂದು ಉಲ್ಲೇಖಿಸುತ್ತಾನೆ. ಆದರೆ ಈಕೆಯ ವಚನಗಳು ಏನಾದವು? ಇದರ ಬಗ್ಗೆ ಕ್ಷೇತ್ರಕಾರ್ಯದ ಸಮಯದಲ್ಲಿ ಮುರಗೋಡ ಶ್ರೀಗಳು ಹೀಗೆನ್ನುತ್ತಾರೆ. ಕಲ್ಯಾಣಕ್ರಾಂತಿ ಜರುಗಿದ ನಂತರದಲ್ಲಿ ಶರಣ ಸೈನ್ಯದೊಂದಿಗೆ ವಚನ ಗಂಟುಗಳನ್ನು ಹೊತ್ತುಕೊಂಡು ಉಳವಿಗೆ ಪ್ರಯಾಣ ಬೆಳೆಸಿದರು. ನಮ್ಮ ಪರಿಸರದ ಗ್ರಾಮವಾದ ಕಾದ್ರವಳ್ಳಿಯಲ್ಲಿ ಬಿಜ್ಜಳನ ಸೈನಿಕರೊಂದಿಗೆ ಯುದ್ಧವಾಯಿತು. ಆ ಸಂದರ್ಭದಲ್ಲಿ ಹಲವಾರು ವಚನ ಕಟ್ಟುಗಳು ನಾಶವಾದವು. ಆ ಸಂದರ್ಭದಲ್ಲಿ ಈಕೆಯ ವಚನಗಳು ನಾಶವಾಗಿರಬಹುದು ಎಂದು ತಿಳಿಸಿದರು. ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾವಿರ ಎಂದು ಸಿದ್ದರಾಮೇಶ್ವರ ಹೇಳುವುದು ನೋಡಿದರೆ, ಈಕೆಯ ವಚನಗಳು ನಾಶವಾಗಿರಬಹುದು ಎಂದು ತೋರುತ್ತದೆ. ಹಾಗೂ ಕಾದ್ರವಳ್ಳಿಯ ಪರಿಸರದಲ್ಲಿ ಕೇಳಿದಾಗ ಶರಣರು ವಚನ ಗಂಟುಗಳನ್ನು ಉಳವಿಗೆ ಸಾಗಿಸುವ, ಸಂದರ್ಭ ನಾಶವಾಗಿರ ಬಹುದು ಎನ್ನುತ್ತಾರೆ.

ಗಂಗಾಂಬಿಕೆಯು "ವಚನ ಸಾಹಿತ್ಯದ ರಕ್ಷಾಮಣಿಯಾಗಿ, ಗಣಚಾರದ ಗುಣಾನ್ವಿತೆಯಾಗಿ ಪತಿವ್ರತೆಯಾಗಿ ಇಂದಿಗೂ ಕಂಗೊಳಿಸುತ್ತಿದ್ದಾಳೆ"[೧೧] ಎಂದು ಎಸ್.ಮಟ್ಟಿ ಮತ್ತು ಪ್ರೊ.ಎಸ್.ಎಸ್. ಭೂಸರೆಡ್ಡಿ ಅಭಿಪ್ರಾಯಪಡುತ್ತಾರೆ. ಇವರ ಹೇಳಿಕೆಯಲ್ಲಿ ಉಕ್ತವಾದಂತೆ ಗಂಗಾಂಬಿಕೆ ಇತರರ ವಚನ ರಕ್ಷಿಸಿದರೆ, ತನ್ನ ವಚನದ ಬಗ್ಗೆ ನಿಷ್ಕಾಳಜಿ ವಹಿಸಿದಳೆ ಅಥವಾ ನಾಶವಾದವೋ ಎಂಬುದು ಸಂಶಯಾತ್ಮಕವಾಗಿದೆ ಎನ್ನಬಹುದು. ಹೀಗಿರುವ ಒಂಬತ್ತು ವಚನಗಳಲ್ಲಿಯೇ ವಿಶ್ಲೇಷಣೆಯನ್ನು ಹಾಗೂ ಇತರ ಅಧ್ಯಯನಕಾರರ ನಿಲುವುಗಳನ್ನು ಚರ್ಚೆ ಮಾಡಲಾಗುವುದು ಹಾಗೂ ಈಕೆಯ ಅಂಕಿತನಾಮ ಗಂಗಾಪ್ರಿಯ ಕೂಡಲಸಂಗಮವಾಗಿದೆ.

### ಅ. ಗಂಗಾಂಬಿಕೆಯ ವಚನಗಳಲ್ಲಿ ಆತ್ಮನಿವೇದನೆ

ಗಂಗಾಂಬಿಕೆಯು ಅನುಭಾವಿ ಶರಣೆ, ಈಕೆಯ ವಚನಗಳಲ್ಲಿ ಆತ್ಮನಿವೇದನೆಯಿದೆ. ಆತ್ಮನಿವೇದನೆ ಎಂದರೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವಿಕೆಯಾಗಿದೆ. ತನ್ನ ಮನದಾಳದ

ದುಃಖ ಇಮ್ಮಡಿಯಾಗಿ, ಅಸಹಾಯಕ ಸ್ಥಿತಿಯಿಂದ ಕೂಡಿದವಳಂತೆ ತೋರುತ್ತದೆ. ಏಕೆಂದರೆ ಅವಳ ಕಂದ ಸಾವನ್ನು ಅಪ್ಪಿದ್ದು ಹಾಗೂ ಬಸವಣ್ಣನ ಅಗಲುವಿಕೆ ಅಲ್ಲದೆ ಕಲ್ಯಾಣ ಕ್ರಾಂತಿ ಆಕೆಯ ಮನೋಭಾವಕ್ಕೆ ಬಂದಾಗ ಆಕೆಯ ಒಳತಿರುಳಿನ ಪ್ರಖರತೆಯಿಂದ ಈ ಮಾತುಗಳು ಹೊರಬಂದಿದೆ. ಅದರೊಂದಿಗೆ ಈ ವಚನಗಳಲ್ಲಿ ಕೂಡಲಸಂಗಮನಿಗೆ ನಾನು ಅರ್ಪಿತಳಾದೆ ಎಂಬುದಿದೆ.

"ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮಾ ಎನ್ನ ಒಡೆಯರು
ಫಲವಿಲ್ಲದ ಕಂದ ನಿರ್ಪನವಳಿಗೆ
ಎನಗೆ ಫಲವಿಲ್ಲ, ಕಂದನಿಲ್ಲ
ಇದೇನೋ ದುಃಖದಂದುಗ ಗಂಗಾಪ್ರಿಯ
ಕೂಡಸಂಗಮದೇವ"[೧೨]

ಈ ವಚನದ ಬಗ್ಗೆ ಡಾ.ಶಕುಂತಲಾ ಹೆಗಡೆಯವರ ಅಭಿಪ್ರಾಯ ಹೀಗಿದೆ. "ಈ ವಚನವು ನೀಲಾಂಬಿಕೆಗೊಬ್ಬ ಬಾಲಸಂಗನೆಂಬ ಮಗನಿದ್ದನೆಂಬ ಐತಿಹಾಸಿಕ ಸಂಗತಿಯನ್ನು ಸಾರುತ್ತದೆ. ಮಕ್ಕಳಿಲ್ಲದ ಗಂಗಾಂಬಿಕೆಗೆ ಇಷ್ಟಲಿಂಗ(ಚೆನ್ನಲಿಂಗ)ವನ್ನು ನೋಡಿ, ದುಃಖವನ್ನು ಮರೆಯಬೇಕೆಂದು ಬಸವಣ್ಣ ಸಮಾಧಾನ ಹೇಳಿರಬೇಕು. ಆದರೆ ಅವಳಿಗೆ ಬಾಲಸಂಗನಂತಹ ಕಂದನಿದ್ದೂ ಇಲ್ಲದಂತಾಯಿತು ತನಗಂತೂ ಫಲವೂ ಇಲ್ಲ ಕಂದನೂ ಇಲ್ಲ ಎನ್ನುವಂತಾಗಿದೆ. ಇದೆ ದುಃಖದಂದುಗ ಸ್ಥಿತಿ ಒದಗಿದೆ."[೧೩] ಬಹುಶಃ ಚೆನ್ನಬಸವಣ್ಣನೇ ನಿನ್ನ ಮಗನು ಎಂದಿರಬಹುದು. ಆತನನ್ನು ನೋಡಿ ನಿನ್ನ ದುಃಖವನ್ನು ಮರೆಯಬೇಕು ಎಂಬುದು ಆಗಿರಬಹುದು. ಚೆನ್ನಲಿಂಗ ಇಷ್ಟಲಿಂಗ ಸ್ವರೂಪ ಆತನನ್ನೇ ಪೂಜಿಸಿ ಮುಕ್ತಳಾಗು ಎಂದಾದರೆ, ವ್ಯಕ್ತಿಗತವಾಗಿ ಚೆನ್ನಬಸವಣ್ಣನಿಗೆ ಈ ಮಾತನ್ನು ಹೇಳಿರಬಹುದು.

ಡಾ.ಪ್ರೀತಿಶುಭಚಂದ್ರರ ಅಭಿಪ್ರಾಯ "ಬೆಡಗಿನ ವಚನದ ಪರಿಭಾಷೆಯಲ್ಲಿ ಕಂದ, ಶಿಶುವು ದೇಹಭಾವವನ್ನು ನೀಗಿಕೊಂಡ ಮುಗ್ಧ ಸಹಜಜ್ಞಾನಕ್ಕೆ ಪ್ರತೀಕ ಕಂದನಿಲ್ಲದ ಕೊರಗನ್ನು ಆಧ್ಯಾತ್ಮ ಸಾಧನೆಯ ಪಥದಲ್ಲಿನ ತೋಳಲಾಟದ ಸಂಕೇತವಾಗಿ ಅರ್ಥೈಸಬಹುದು."[೧೪] ಡಾ.ಪ್ರೀತಿಶುಭಚಂದ್ರರವರು ಬೆಡಗಿನ ವಚನ ಹಿನ್ನೆಲೆಯಲ್ಲಿ ಹೇಳುತ್ತಾ, ದೇಹಭಾವ ಮರೆತು ಆತ್ಮದ ಭಾವಕ್ಕೆ ಬರಬೇಕು. ಅಂದಾಗ ಆ ಪ್ರಾಪಂಚಿಕ ತೊಳಲಾಟ ಇಲ್ಲವಾಗಿ, ದುಃಖ ದುಮ್ಮಾನಗಳ ಪರಿವೆಯನ್ನು ಮರೆಯುವ ಸಂಕೇತವೆಂದು ಹೇಳುತ್ತಾರೆ. ಆದರೆ ಗಂಗಾಂಬಿಕೆಯು ಘನವಾಗಬೇಕು, ಒಳಭಾವದ ವಿಸ್ತಾರಕ್ಕೆ ಹೋಗಿ, ದೃಢಮನದಿಂದ ಪೂಜಿಸಿ ಪರಿಪೂರ್ಣ

ನಿರಂಜನ ಜ್ಯೋತಿಯಾಗಬೇಕು. ಅಂದಾಗ ಮಾತಿನಲ್ಲಿ ಲಿಂಗಕಳೆ ಬಂದು ಚೆನ್ನಲಿಂಗ(ಇಷ್ಟಲಿಂಗ)ವೇ ನಿನ್ನ ಮಗನಾಗಿ ನೀನು ಅವನಿಂದ ಸಂತೋಷವನ್ನು ಅಸ್ವಾಧಿಸಿ, ತನ್ಮಯತೆ ಕಡೆಗೆ ಬಂದಾಗ ಇನ್ನೆಲ್ಲಿಯ ದುಃಖ ಎಂಬುದನ್ನು ಈ ವಚನದಿಂದ ನೋಡಬಹುದು.

ಗಂಗಾಂಬಿಕೆಗೆ ಬಸವಣ್ಣ ಈ ರೀತಿಯಾಗಿ ಹೇಳಿರಬಹುದು. ಮುಖ್ಯವಾಗಿ ಶರಣ–ಶರಣೆಯರು ಲೌಖಿಕದಿಂದ ಅಲೌಕಿಕ ತತ್ವಕ್ಕೆ ಹೋಗಿದ್ದರು. ಜ್ಞಾನ ಎಂಬ ಶಿಶುವು ಬಹಳ ಮುಖ್ಯ, ಲೌಕಿಕದ ಮಗು ಕ್ಷಣಿಕ ಸುಖವನ್ನು ನೀಡುವಂತದ್ದು, ಪಾರಮಾರ್ಥಿಕ ಮಗು ಆತ್ಮಶುದ್ಧಿಯನ್ನು ನೀಡುವಂತದ್ದು, ಹಾಗೂ ನನಗೆ ಫಲಕೊಟ್ಟು ಕಸಿದುಕೊಂಡ ಎಂದರೆ ಅರಿವಿನ ಕಣ್ಣು ತೆರೆಯಿಸಿ, ಸುಜ್ಞಾನ ಸುಧೆಯನ್ನು ನೀಡಿ ಅದರ ಪರಮಾನಂದದಲಿ ಅನುಭವಿಸು ವಂತೆ ಸುಖ ಬೇಕೆ ಹೊರತು ಈ ಜಗದ ಜಂಜಾಟದ ದುಃಖವಲ್ಲ ಎಂಬುದನ್ನು ತಿಳಿಸಿ, ಪಾರಮಾರ್ಥಿಕ ಮಗನಾದ ಚೆನ್ನಲಿಂಗ ನಿನ್ನ ಮಗನು ಎಂದಿರಬಹುದು. ಆದರೆ ಶಾಂತಾದೇವಿ ಮಾಳವಾಡರು "ನೀಲಾಂಬಿಕೆ ಓರ್ವ ಬಾಲಕನಿಗೆ ಜನ್ಮವಿತ್ತಳು. ಗಂಗಾಂಬಿಕೆಗೆ ಆ ಭಾಗ್ಯವಿರಲಿಲ್ಲ ಹೆಣ್ಣು ಮಕ್ಕಳಿಗಿರುವ ಮಾತೃತ್ವದ ಬಯಕೆಯೊಮ್ಮೆ ಗರಿಗೆದರಿ ನಿಂತಾಗ ಬಸವಣ್ಣನವರು ಗಂಗಾಂಬಿಕೆಗಿತ್ತ ಸಮಾಧಾನವನ್ನು ಈಕೆ ವಚನರೂಪದಲ್ಲಿ ಹೊರ ಹೊಮ್ಮಿಸಿದ್ದಾಳೆ."[೧೫] ಆದರೆ ಗಂಗಾಂಬಿಕೆಗೆ ಮಗನಿದ್ದನು ಎಂಬುದನ್ನು ಹರಿಹರ ತನ್ನ ಕಾವ್ಯದಲ್ಲಿ ಸಿದ್ಧರಸನೆಂಬ ಶಿಶು ಹುಟ್ಟಿದ್ದನೆಂದರೆ, ಇವರು ಮುಂದುವರೆದು "ಮಕ್ಕಳಿಲ್ಲದ ಗಂಗಾಂಬಿಕೆ ಜ್ಞಾನನಿಧಿ ಚೆನ್ನಬಸವಣ್ಣನನ್ನು ತನ್ನ ಹೊಟ್ಟೆಯ ಮಗನಂತೆಯೇ"[೧೬] ಬೆಳೆಸಿದಳು ಎಂದು ಇವರ ಅಭಿಪ್ರಾಯವಾಗಿದೆ. ಏಕೆಂದರೆ ಚೆನ್ನಬಸವಣ್ಣನಿಗೆ ಎನ್ನ ಹಾಲುಂಬುಬಾ ಎಂದು ಕರೆಯುವ ಬಗೆ ಈಕೆಯ ವಚನದಲ್ಲಿ ವ್ಯಕ್ತವಾಗಿದೆ. ಜೊತೆಗೆ ಮಗನಿಲ್ಲ ಚೆನ್ನಬಸವಣ್ಣನೆ ಮಗನು ಎಂದರೆ "ಗಂಗಾಂಬಿಕೆಗೆ ಚೆನ್ನಲಿಂಗ ಎಂಬ ಮಗನೂ, ನೀಲಾಂಬಿಕೆಗೆ ಬಾಲಸಂಗಯ್ಯನೆಂಬ ಮಗನು ಇದ್ದರೆಂದು ಸ್ಪಷ್ಟವಾಗುತ್ತದೆ"[೧೭] ಎಂದು ಯು.ಎಂ.ಆನಿಗೋಳ ತಿಳಿಸುತ್ತಾರೆ. ಹಾಗಾದರೆ ಲಲಿತಾಂಬ ವೃಷಭೇಂದ್ರಸ್ವಾಮಿಯವರು ಯು.ಎಂ.ಅನಿಗೋಳರ ಅಭಿಪ್ರಾಯದಂತೆ ಹೇಳುತ್ತಾರೆ. "ನೀಲಾಂಬಿಕೆ ಮಗನಿಗೆ ಬಸವಣ್ಣನು ಬಾಲಸಂಗನೆಂದೂ, ಗಂಗಾಂಬಿಕೆಯ ಮಗನಿಗೆ ಚೆನ್ನಸಂಗನೆಂದೂ ಹೆಸರಿಟ್ಟಿದ್ದನೆಂದು ತಿಳಿದುಬರುತ್ತದೆ."[೧೮] ಇಬ್ಬರು ಈ ವಚನದ ಮೂಲಕ ನೀಲಾಂಬಿಕೆ ಮಗನಿದ್ದುದ್ದು, ಗಂಗಾಂಬಿಕೆಗೂ ಮಗುವಿದ್ದ ಬಗ್ಗೆ ಹೇಳಿದರೆ, ಪ್ರೊ. ಲಲಿತಾಂಬರವರು ಬಸವಣ್ಣನೆ ಇವರಿಗೆ ಹೆಸರನ್ನು ನಾಮಕರಣ ಮಾಡಿದನೆಂದು ತಿಳಿಸುತ್ತಾರೆ. ಆದರೆ ಬಿ.ಮಹಾದೇವಪ್ಪನವರು ಈ ವಚನ ವಿಶ್ಲೇಷಣೆಯನ್ನು ಭಿನ್ನವಾಗಿ ಮಾಡುತ್ತಾರೆ. ಮಹಾಮನೆಯ ಬಾಂಧವ್ಯ ಹಾಗೂ ಕುಟುಂಬದ ಸಂಖ್ಯೆ ಜೊತೆಗೆ ಗಂಗಾಂಬಿಕೆ, ನೀಲಾಂಬಿಕೆ, ಚೆನ್ನಬಸವಣ್ಣ, ಬಸವಣ್ಣ, ಬಾಲಸಂಗಯ್ಯ,

ನಾಗಲಾಂಬಿಕೆ ಇವರೆಲ್ಲಾ ದೇಹ ಬೇರೆ ಆತ್ಮ ಒಂದೇ ಎಂಬ ವಿಚಾರವನ್ನು ಈ ವಚನ ತನ್ನ ಅಂತರಾಳದಿಂದ ತಿಳಿಸುತ್ತದೆ ಎಂದು ಹೇಳುತ್ತಾರೆ. ಬಾಹ್ಯವಾಗಿ ಅವಳ ದುಃಖವನ್ನು ವ್ಯಕ್ತಪಡಿಸಿ, ಲೌಖಿಕದ ವಿಚಾರವನ್ನು ಹೇಳಿದ್ದು, ಅಂತರಿಕವಾಗಿ ಈ ಆರು ಜನರ ಕುರಿತಂತೆ ಕುಟುಂಬದ ಪರಿಚಯಾತ್ಮಕ, ಬಗೆಯೂ ಆಗಿದೆ ಎಂದು ಹೇಳುತ್ತಾ ಮುಂದುವರೆದು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಬಸವಣ್ಣನವರ ಏಕಮಾತ್ರ ಮಗ ಬಾಲಸಂಗಯ್ಯ, ಗಂಗಾಂಬಿಕೆಯ ಪುತ್ರನೋ ಅಥವಾ ನೀಲಾಂಬಿಕೆ ಪುತ್ರನೋ ಎನ್ನುವುದಕ್ಕೆ ಕಾವ್ಯಗಳಲ್ಲಿ ಒಮ್ಮತವಿಲ್ಲ. ಕಾರಣವೆಂದರೆ ಉಭಯರು ಮಗುವನ್ನು ಪರಪುತ್ರನೆಂಬಂತೆ ಕಾಣುತ್ತಿರಲಿಲ್ಲ. ನನ್ನ ತಿಳುವಳಿಕೆಯ ಪ್ರಕಾರ ಬಾಲಸಂಗಯ್ಯನನ್ನು ಗರ್ಭಧರಿಸಿ ಹೆತ್ತವಳು ಗಂಗಾಂಬಿಕೆ; ಆದರೆ ಮುದ್ದಿನಿಂದ ಲಾಲಾನೆ ಪಾಲನೆ ಮಾಡಿದವಳು ನೀಲಾಂಬಿಕೆ. ಬಾಲಸಂಗಯ್ಯನ ಮಲ ತಾಯಿಯೂ, ತಾಯಿಯ ತಂಗಿಯು ಆಗಿದ್ದ ನೀಲಾಂಬಿಕೆಯ ಅಥವಾ ನೀಲಲೋಚನೆಯ ಜೀವ, ಜೀವಾಳುವಾಗಿದ್ದನು. ಹೆತ್ತ ತಾಯಿಯನ್ನು ಮರೆತು ಚಿಕ್ಕಮ್ಮಳನ್ನೇ ಸರ್ವಸ್ವವೆಂದು ಭಾವಿಸಿದ್ದನು. ದೊಡ್ಡ ಮನೆತನದ ಕೂಸುಗಳಿಗೆ ವಯಸ್ಸು ಮೂರು ನಾಲ್ಕು ವರ್ಷಗಳೇ ಆದರೂ ಹೆತ್ತಮ್ಮಳಂತೂ ಹೆತ್ತಮ್ಮಳಾಗಿ ಇರುತ್ತಾಳೆ; ರಕ್ತ ಸಂಬಂಧ ಅವಿನಾಶಿಯಾದುದು, ಚಿಕ್ಕಮ್ಮಳನ್ನು ಪ್ರೀತಿಸುವುದು ಅವಳ ಅಪುತ್ರಕ ಭಾವನೆಯನ್ನು ಹೋಗಲಾಡಿಸುವುದು ತನ್ನ ಕರ್ತವ್ಯವೆಂಬ ಪ್ರಜ್ಞೆ ಜಾಗೃತವಾಗಿರುತ್ತದೆ."[೧೯] ಇವರು ಈ ವಚನ ವಿಶ್ಲೇಷಣೆಯನ್ನು ಈ ಮೇಲಿನ ಚರ್ಚೆಗಿಂತ ಭಿನ್ನವಾಗಿ, ಮಾಡಿ ಬಾಲಸಂಗಯ್ಯ ಗಂಗಾಂಬಿಕೆ ಮಗ ಎಂದು ಹೇಳುತ್ತಾ ನೀಲಾಂಬಿಕೆ ಈತನಿಗೆ ಚಿಕ್ಕಮ್ಮಳಾಗಬೇಕು ಎಂದು ಹೇಳುತ್ತಾರೆ. ಮುಂದುವರೆದು ಅವಳು ಅಪುತ್ರಕಳು ಆಗಿದ್ದಳು ಎಂದು ಹೇಳುತ್ತಾರೆ. ಹಾಗೆ "ಬಾಲಸಂಗಯ್ಯ ಮತ್ತು ನೀಲಾಂಬಿಕೆಯ ನಡುವೆ ಎಂತಹ ಅನ್ಯೋನ್ಯ ಮಮತೆ–ವಾತ್ಸಲ್ಯ ಉಂಟಾಗಿತ್ತೆಂದರೆ, ನೀಲಾಂಬಿಕೆಯು ತನ್ನ ವಚನಾಂಕಿತವಾಗಿ ಸಂಗಯ್ಯ ಎಂಬುದನ್ನು ಇರಿಸಿಕೊಂಡಿದ್ದಳು. ಅದು ತಮ್ಮ ಮನೆತನದ ಆರಾಧ್ಯದೈವ ಕೂಡಲ ಸಂಗಮದೇವರ ಹೆಸರು ಆಗಿದೆ; ತನ್ನ ಅನನ್ಯ ಕಂದ ಬಾಲಸಂಗಯ್ಯನ ಹೆಸರೂ ಆಗಿದೆ."[೨೦] ಇವರು ನೀಲಾಂಬಿಕೆಯು ಈತನ ಮೇಲಿನ ಪ್ರೀತಿ, ವ್ಯಾಮೋಹವನ್ನು ಹೇಳುತ್ತಾ, ಈತನ ಹೆಸರನ್ನೆ ವಚನಾಂಕಿತ ಮಾಡಿಕೊಂಡಳು ಎಂದು ಹೇಳುತ್ತಾರೆ.

ಗಂಗಾಂಬಿಕೆಯ ಮಗನು ನೀಲಾಂಬಿಕೆಯ ಮಡಿಲಲ್ಲಿ ಬೆಳೆಯುವುದು ಕಂಡು ಈಕೆಯು "ಇಂತ ಅವರ್ಣನೀಯ ಸನ್ನಿವೇಶದಲ್ಲಿ ಗಂಗಾಂಬಿಕೆ ಫಲಪಡೆದೂ ಪರದೇಶಿತನದ ದುಃಖ ದಂದುಗವನ್ನು ಅನುಭವಿಸುತ್ತಿರಬೇಕು. ಇಂತಹ ದುಃಖವನ್ನು ಬಲ್ಲವರು ಮಧುರ ವೇದನೆ

ಅಥವಾ ಸಿಹಿಯಾದ ನೋವು ಎಂದು ಕರೆದಿದ್ದಾರೆ. ಇಂತಹ ದುಃಖದಲ್ಲಿ ಆನಂದವೂ ಇರುತ್ತದೆ. ಹತಾಶೆಯೂ ಇರುತ್ತದೆ. ಅಭಿಮಾನವೂ ಇರುತ್ತದೆ. ನಿರಾಸೆಯೂ ಇರುತ್ತದೆ. ಅದು ವೇದನೆಯೆಂದರೆ ವೇದನೆ; ಉಲ್ಲಾಸವೆಂದರೆ ಉಲ್ಲಾಸ, ಚಿತ್ತವಿಹ್ವಲಗೊಳಿಸುವ ಕಾರ್ಯವದು."[೨೧] ಮಹಾದೇವಪ್ಪನವರ ಅಭಿಪ್ರಾಯದಂತೆ ಗಂಗಾಂಬಿಕೆಯು ಇಂಥ ಒತ್ತಡದಲ್ಲಿ ಇರುವುದನ್ನು ತನ್ನ ವಚನದಲ್ಲಿ ಹೇಳಿದ್ದಾಳೆ. ಕೊನೆಯ ಸಾಲಿನಲ್ಲಿ ದುಃಖ ಬರಲಿಕ್ಕೆ ಬಾಲಸಂಗಯ್ಯನ ಪ್ರೀತಿಯನ್ನು ಅಸ್ವಾದಿಸುವ ಉದ್ದೇಶವೂ ಆಗಿರಬಹುದೆಂದು ಹೇಳುತ್ತಾರೆ. ತನ್ನ ಕುಟುಂಬದ ಪ್ರೀತಿ ಈಕೆಯನ್ನು ಕಟ್ಟಿಹಾಕಿದ ಸಂಗತಿಯೂ ಆಗಿದೆ ಎಂದು ತಿಳಿಸಿದ್ದು, ಆಗಿರಬಹುದೇ ಎಂದು ಊಹಿಸಬಹುದು. ಈ ವಚನದಲ್ಲಿ ಸುಖ ದುಃಖಗಳನ್ನು, ನೋವು ನಲಿವುಗಳನ್ನು ತನ್ನ ಆಡು ಭಾಷೆಯಲ್ಲಿ ಹೇಳಿದರೂ ಆಂತರಿಕವಾಗಿ, ಬಾಹ್ಯವಾಗಿ ವಿವಿಧ ಅರ್ಥಗಳನ್ನು ಈ ವಚನ ವಿವರಿಸುತ್ತದೆ.

ಅಂಕಿತ ವಿಚಾರವನ್ನು ಹೀಗೆ ಅರ್ಥೈಸಬಹುದು. ಗಂಗಾಪ್ರಿಯ ಗಂಗಾಂಬಿಕೆಗೆ ಪ್ರಿಯನಾದ ಕೂಡಲಸಂಗಮದೇವಾ ಅಂದರೆ ಕೂಡಲಸಂಗಮ ಬಸವಣ್ಣನವರಂತೆ, ಇವಳಿಗೂ ಪ್ರಿಯನೇ ಎಂಬುದರಿಂದ ಗಂಡನ ಇಷ್ಟವೇ ತನ್ನಿಷ್ಟ ಎಂಬುದಾಗಿ ತಿಳಿಸುತ್ತಾಳೆ. ಇನ್ನೊಂದರ್ಥದಲ್ಲಿ ಗಂಗಾಪ್ರಿಯ ಎಂದರೆ ಬಸವಣ್ಣನವರ ಕೂಡಲಸಂಗಮನೇ ಎಂಬುದು ಅರ್ಥವಾಗಿರಬಹುದು. ಒಟ್ಟಿನಲ್ಲಿ ತನ್ನ ನಿಷ್ಠೆ ತನ್ನ ಪತಿಗೆ ಹಾಗೂ ಪತಿಗೆ ಅತ್ಯಂತ ಪ್ರಿಯನಾದ ಕೂಡಲಸಂಗಮನಿಗೆ ಎಂದಿರಬಹುದು. ಹಾಗೆ ಇನ್ನೊಂದು ಸಂದೇಹವೂ ಬರದಿರಲಾರದು. ಗಂಗಾಪ್ರಿಯ ಎಂಬುದರಿಂದ ಅವಳಿಗೂ, ಅವಳ ಹೆಸರಿಗೂ ಒಂದು ಅಸ್ತಿತ್ವವಿದೆ. ಕೂಡಲಸಂಗಮ ಬಸವಣ್ಣನವರಿಗೆಂತೋ ಅಂತೇ ಅವಳಿಗೂ ಪ್ರಿಯ ಅಂಕಿತವಾಗಬಲ್ಲದು ಎಂಬ ಆತ್ಮಾರ್ಥಕ ಭಾವವಿರಬಹುದು. ಕೇವಲ ಒಂಬತ್ತು ವಚನಗಳಿಂದ ಇವಳ ಅಂತರಾತ್ಮ ತಿಳಿಯುವುದು ಕಷ್ಟಸಾಧ್ಯ.

ಗಂಗಾಂಬಿಕೆಯ ಮಗು ಸಾವನ್ನಪ್ಪಿದ ಬಗೆಯನ್ನು ಹಾಗೂ ಒಂದು ಕ್ರೂರ ಪ್ರಾಣಿ ಬಂದು ಭಕ್ಷಿಸಿತು ಎಂದು ದುಃಖದ ಧ್ವನಿಯಲ್ಲಿ ಹೇಳಿ ಪರಿಸರದಲ್ಲಿಯ ಚಿತ್ರಣ ಕೊಡುತ್ತಾ ಹೇಳುವ ವಚನವನ್ನಿಲ್ಲಿ ಕಾಣಬಹುದು.

"ಒಂದು ಹಾಳಭೂಮಿಯ ಹುಲಿ ಬಂದು
ಎನ್ನ ಎಳಗರುವ ಭಕ್ಷಿಸಿತ್ತಲ್ಲಾ
ಆ ಹುಲಿ ಹಾಳಿಗೆ ಹೋಗದು
ಆ ಹುಲಿ ಎಳೆಗರುವ ಕಂಡು ಜನನಿಯಾಯಿತ್ತು
ಇದನೇನೆಂಬೆ ಗಂಗಾಪ್ರಿಯ ಕೂಡಲ ಸಂಗಮದೇವಾ?"[೨೨]

ಈ ವಚನದಲ್ಲಿ ಆಕೆಗೊಂದು ಮಗುವಿದ್ದಿರಬಹುದೆಂದು ಶಂಕಿಸಬಹುದಾಗಿದೆ. ಯಾವುದೇ ಭಯಾನಕ ಕಾರಣದಿಂದ ಆ ಮಗು ಸಾವನ್ನಪ್ಪಿರುವ ಸಾಧ್ಯತೆಯಿದೆ. ಆ ಹುಲಿ ದಾಳಿಗೆ ಅಂದರೆ ಈ ರೀತಿಗೆ ಈ ಕ್ರಮಕ್ಕೆ ಹೋಗುವಂಥದಲ್ಲ, ವಿಷಯವೆಂದರೆ ಕೊಂದಿರುವ ಹುಲಿಯೇ, ಆ ಕರುವ ಕಂಡು ಜನನಿಯಾಯಿತ್ತು. ಅಂದರೆ ಕೊಂದಿರುವ ಯಾವುದೋ ಶಕ್ತಿ ಮಗುವಿನ ಮೇಲೆ ಅಂತಃಕರಣ ತೋರಿಸಿರಬೇಕು. ಇದನ್ನು ಏನೆನ್ನುವುದು ಎಂದು ಅವಳೇ ಪ್ರಶ್ನೆ ಮಾಡುತ್ತಾಳೆ.

ಡಾ.ಶಕುಂತಲಾ ಹೆಗಡೆ ಈ ವಚನವು ತಾಯಿಯ ನೋವನ್ನು ಹೇಳುತ್ತದೆ. ಜೊತೆಗೆ ಪರಿಸರದ ಚಿತ್ರಣವನ್ನು ನೋಡಿ ಗೂಡಾರ್ಥದ ಒಡಲಿಗೆ ಸೇರಿದೆ ಎಂಬ ರೀತಿಯಲ್ಲಿ ಅಭಿಪ್ರಾಯಪಡುತ್ತಾರೆ "ಈ ವಚನವು ಕೂಡ ತಾಯ್ತನದ ಬೇಗುದಿಯನ್ನು ಚಿತ್ರಿಸುತ್ತದೆ. ಇದು ಗಂಗಾಂಬಿಕೆ ಬೆಡಗಿನ ವಚನದಂತಿದೆ, ಎಲ್ಲಿಂದಲೋ ಕಾಲವ್ಯಾಘ್ರ(ಹುಲಿ) ಬಂದು ಕಂದನನ್ನು ಆವರಿಸಿತು. ಅದು ಮತ್ತೆ ಮರಳಿ ಹೋಗಲಿಲ್ಲ. ಅದೇ ಜನನೀಯಾದಂತಾಯಿತಷ್ಟೇ ಅಲ್ಲ ಕಂದ ಬಿಟ್ಟುಕೊಡಲಿಲ್ಲ. ಇದಕ್ಕೆ ಏನೆಂಬೆ ಎಂದು ಪರಮಾತ್ಮನಿಗೆ ಪ್ರಶ್ನಾರ್ಥಕ ಚಿಹ್ನೆಯನ್ನಿಟ್ಟು ಗಂಗಾಂಬಿಕೆ ಕೇಳಿದ್ದಾಳೆ. ಸಾವೇ ತಾಯಿಯ ರೂಪ ತೊಟ್ಟಾಗ ಮಗು ಉಳಿಯುವ ಸಾಧ್ಯತೆ ಯಿದೆಯೇ ಎಂಬುದನ್ನು ಈ ವಚನದಲ್ಲಿ ಕಾಣುತ್ತೇವೆ."[೨೩]

"ಇಂದ್ರಿಯ ವಿಷಯ ವಾಸನೆಯುಳ್ಳ ಈ ದೇಹದಲ್ಲಿ ವಿಶ್ವವನ್ನೇ ಮುರಿದು ತಿನ್ನುವ ಶಕ್ತಿಯುಳ್ಳ ಕಾಲವ್ಯಾಘ್ರನಿಹನು. ಈ ಕಾಲ ವ್ಯಾಘ್ರನನ್ನು ಜ್ಞಾನ ಸುಧಾಮೃತದಲ್ಲಿ ಮೀಯಿಸಿ ಸುಜ್ಞಾನ ಮಾರ್ಗದಲ್ಲಿ ಒಯ್ಯಬೇಕಾಗಿದೆ. ಈ ಅರಿವು ಈ ಜ್ಞಾನ ಒಳಗೊಂಡರೆ ಅದೇ ಮಹಾ ಗಣಲಿಂಗ. ಹಾಗೆ ನೋಡಿದರೆ ಇದೊಂದು ಬೆಡಗಿನ ವಚನ."[೨೪] ಈ ವಚನವನ್ನು ಇನ್ನೊಂದರ್ಥದಿಂದ ಈಕೆ ಪೋಷಿಸಿದ ಯಾವುದೋ ವಸ್ತುವನ್ನು ಯಾರೋ ಕಿತ್ತುಕೊಂಡು ನಂತರ ಕರುಣೆ ತೋರಿಸುವ ಸಾಧ್ಯತೆಯಿದೆ. ಬಹುಶಃ ಜಂಗಮನೇನಾದರೂ, ಸಿರಿಯಾಳನ ತರಹ, ಮಗನೇ ಬೇಕೆಂದು ಭಿಕ್ಷೆ ಕೇಳಿರಬಹುದೇ ಇಲ್ಲಿ ಸಂಕಟ, ವೇದನೆ ಮೇಲೆ ತೋರುವಂತೆ ಕಂಡರೂ ಒಳಗೆ ಯಾವುದೋ ರಹಸ್ಯವಿರಬಹುದೇ? ಬಹುಶಃ ಬಿಜ್ಜಳನು ಅವನೇ ಸಾಕಿದ, ಬೆಳೆಸಿದ ಅನುಭವ ಮಂಟಪವನ್ನು ಅಥವಾ ಶರಣ ವಾತಾವರಣವನ್ನು ಹಾಳು ಮಾಡಿ ಕಡೆಗೆ ಅವನಿಗೆ ಪಶ್ಚಾತ್ತಾಪಗಂಡಿರುವ ಸೂಚನೆಯೇ, ಇಲ್ಲಿ ಹುಲಿ ಎಂದರೆ ರಾಜಪ್ರಭುತ್ವದ ದ್ಯೋತಕವೇ ಬಹುಶಃ ಇವೆಲ್ಲ ವಚನಗಳು(ಬಹುತೇಕ) ಬಸವಣ್ಣನವರ ಅಂತ್ಯವನ್ನು ಸೂಚಿಸುತ್ತಿರಬಹುದೇ ಎಂಬೆಲ್ಲ ಊಹೆಗಳು ಬರುತ್ತವೆ. ಮೇಲಾಗಿ ಶರಣ ಸಮೂಹದ ಹರಿಕಾರ, ಹಾಗೂ ಹುಲಿರೂಪ ತಾಳಿದ ಬಿಜ್ಜಳನು, ಕ್ರೂರತೆಯ, ಹಿಂಸೆಯ ರೂಪಕ್ಕೆ ಮರಳಿದ್ದು ಸಹಿತ ಬಿಂಬಿತವಾಗಬಹುದು. ಸಾಮಾನ್ಯವಾಗಿ ಹುಲಿ ಭಯ, ಪ್ರತಿಷ್ಠೆ, ಕ್ರೌರ್ಯದ ಸಂಕೇತವಾಗುವಲ್ಲಿ ರಾಜತ್ವದ ದ್ಯೋತಕವಾಗಿ

ಬಂದಿರಬಹುದೇ, ಸಮಕಾಲೀನ ಕಲ್ಯಾಣ ಕ್ರಾಂತಿಯನ್ನು ಸೂಚಿಸುತ್ತಿರಬಹುದೇ ಜನರ ಮಾತುಕೇಳಿ ಶರಣರನ್ನು ನೋಯಿಸಿದ ಬಿಜ್ಜಳ ಕಡೆಯಲ್ಲಿ ಮೃದುಧೋರಣೆ ತಾಳಿದನೇ ಎಂಬೆಲ್ಲ ಊಹೆಗಳು, ಭಯಂಕರ, ಹುಲಿ, ಎಳೆಗರು, ಜನನಿ ಎಂಬೆಲ್ಲ ಉಪಮೆಗಳೇ ಸಂಕೇತಗಳಾಗಿವೆ? ಹುಲಿ=ರಾಜತ್ವ, ಎಳಗರು= ಆಗತಾನೇ ಪ್ರವರ್ಧಮಾನಕ್ಕೆ ಬರುತ್ತಿರುವ ಶರಣ ಚಳುವಳಿ, ಜನನಿ=ಬಿಜ್ಜಳ ಮತ್ತೆ ಜನನಿ ಯಾಗುವುದು ಹೇಗೆ ಯೋಚಿಸಬಹುದು.

ನಂತರದಲ್ಲಿ ಬಸವಣ್ಣನ ಬಗೆಗೆ ತಿಳಿದು ಆತ್ಮಾವಲೊಕನ ಮಾಡಿಕೊಂಡು ಜನನಿಯಾಗಿರ ಬೇಕು. ಔಚಿತ್ಯ ಪೂರ್ಣವಾದ ಕಾಯಕ ದಾಸೋಹ ಪರಂಪರೆಯನ್ನು ಮೆಚ್ಚಿ ಪ್ರೋತ್ಸಾಹಿಸಿರಲೂ ಬಹುದು. ಮತ್ತೆ ಕಾಲಾನುಗತಿಯಲ್ಲಿ ಜಾಗ್ರತೆ ಪಡೆದಿರಬೇಕು ಎಂಬುದು ಇನ್ನೊಂದು ಅರ್ಥವಾಗಿದೆ. ಹಾಗೆ ಬೆಡಗಿನ ಸ್ವರೂಪದಲ್ಲಿ ನೋಡುವುದಾದರೆ ಆಧ್ಯಾತ್ಮಿಕ ಅನ್ನುವ ಭೂಮಿಯಲ್ಲಿ ಜಡದೇಹವನ್ನು ಜ್ಞಾನವೆಂಬುವ ಹುಲಿ ಬಂದು ಸೇವಿಸಿ, ಆ ದೇಹದ ವಿಷಯಾದಿಗಳನ್ನು ತೊಡೆದು ಹಾಕಿ, ವೈವಿಧ್ಯಪೂರ್ಣವಾದ ಅಸಂಖ್ಯ ಅನರ್ಘ್ಯ ಜ್ಞಾನ ರತ್ನಗಳಿಂದ ಪೋಣಿಸಿದಾಗ ಅಲ್ಲಿ ಮೋಹ ಅನ್ನುವಂತದ್ದು, ನಾಶವಾಗಿ, ಪಾರಮಾರ್ಥಿಕವಾದ ಜಗತ್ತು ಸೃಷ್ಟಿಯಾಗಿ ನ್ಯಾಯ, ಸತ್ಯತೆಯೆಂಬ ಶಿಶು(ಎಳೆಗರು) ಜನನಿಯಾಗಿ, ಸುಜ್ಞಾನದ ಕಾರ್ಯಗಳ ಮೂಲಕ ಕಾರಣಿಕ ಶರೀರದ ಅಭಿಮಾನಿಯಾಗಿ ಸಂಚರಿಸಿದಾಗ ಅಲ್ಲಿ ಪರಮಾತ್ಮನಾದ ಕೂಡಲಸಂಗಮನಿಗೆ ಪ್ರಿಯವಾಗಿದ್ದು ಎನಿಸುತ್ತದೆ. ಇಂಥ ಪ್ರಿಯವಸ್ತು ಜಗತ್ತನ್ನೇ ವ್ಯಾಪಿಸುತ್ತದೆ ಎಂಬ ಭಾವನೆಯಿಂದಲೂ ಈ ವಚನ ಕೂಡಿರಬಹುದು. ಹೀಗೆ ಆತ್ಮಜ್ಞಾನ ಒಡಲನ್ನು ತುಂಬದ ಅರ್ಥವನ್ನು ಸಹಿತ ಇರಬಹುದು ಎಂದು ಯೋಚಿಸಬಹುದು.

"ಇದೇನೊ, ಮೀರಿ ತೋರುವ ಮೂರುತಿ
ಪುಷ್ಪಗುಂಪಿನಲ್ಲಿ ಕಾಣದೆ ಹೋಗಿದೆ?
ಇದೇನೋ, ಮೀರಿ ತೋರುವ ಮೂರುತಿ
ಪುಷ್ಪಗುಂಪಿನಲ್ಲಿ ಕಾಣದೆ ಹೋಗಿದೆ
ಕರದಲ್ಲಿಯ ಲಿಂಗದಂತೆ ಉಲುಹದ ಸ್ಥಿತಿ ತೋರುತ್ತದೆ?
ಇಂತಪ್ಪ ಮೂರ್ತಿಯ ಕಂಡು
ಗಂಗಾಪ್ರಿಯ ಕೂಡಲಸಂಗನ ಶರಣನ ಸತಿಯಳು
ಧನ್ಯಳಾದಳು ಚೆನ್ನಬಸವಣ್ಣ"[೨೫]

ಬಸವಣ್ಣನವರನ್ನು ಕುರಿತು ಪದ್ಯ ರೂಪದ ವಚನವಿದಾಗಿದೆ. ಮೂರುತಿ ಸಾಮಾನ್ಯವಾದು ದಲ್ಲ ಅಸಾಮಾನ್ಯ ಮೂರುತಿಯೆ; ಇಷ್ಟಾದರೂ ದೊಡ್ಡ ಗುಂಪಿನಲ್ಲಿ ಅದನ್ನು ಗುರುತಿಸುವುದು

ಕಷ್ಟವಾಗಿದೆ. ಎಷ್ಟೇ ಅದ್ಭುತ ವ್ಯಕ್ತಿತ್ವ ಬಸವಣ್ಣನವರದಾದರೂ ಶರಣರ ಗುಂಪೇನು ಕಡಿಮೆಯದಲ್ಲ, ಅವರಲ್ಲಿ ಬಸವಣ್ಣನವರ ವರ್ಚಸ್ಸಿನ ವ್ಯಕ್ತಿತ್ವ ಕೂಡ ಕಾಣಲಾರದಷ್ಟು ಪ್ರಖರತೆ ಶರಣರ ತೇಜಸ್ಸಿನಲ್ಲಿ ಇದೆ. ಅದಕ್ಕಿಂತ ಹೆಚ್ಚಿನದಾಗಿ ಕಾಣುತ್ತಾನೆ. ಇಂಥ ಘನತರವಾದ ವಸ್ತು, ಆರೂ ತಿಳಿಯದ ಮಾರ್ಗದಲ್ಲಿ ನಡೆದು ಆತ್ಮಸಾಕ್ಷಾತ್ಕಾರ ಹೊಂದಿದ ಲಿಂಗದಂತೆ ಇಂತಹ ಮೂರ್ತಿಯ ಕಂಡು ನಿಜಲಿಂಗದರ್ಶನವಾಗಿರುವ, ಸತಿ ನಾನು ಧನ್ಯಳಾದೆ ಚೆನ್ನಬಸವಣ್ಣ ಎಂದು ಹೇಳುವ ಪರಿಯಾಗಿರಬಹುದು. ಆದರೆ ಯು.ಎಂ.ಅನಿಗೋಳ ಈಕೆಯ ವಚನವನ್ನು ಹೀಗೆ ಅರ್ಥೈಸುತ್ತಾರೆ. "ಗಂಗಾಂಬಿಕೆ ಮಹಾಪತಿವ್ರತೆ, ಭಾರತದ ಪ್ರಪ್ರಥಮ ಸ್ವತಂತ್ರ ವಿಚಾರವಾದಿ. ಮಹಾನುಭವಿ, ಜಗಜ್ಯೋತಿ ಬಸವಣ್ಣನವರ ಧರ್ಮಪತ್ನಿ, ಬಸವಣ್ಣನವರ ಬಾಳಿನಲ್ಲಿ ಬೆರೆತ ಸಮದರ್ಶಿನಿ, ಆತನ ಬಹುಮುಖ ವ್ಯಕ್ತಿತ್ವವನ್ನು, ಅತ್ಯಂತ ಸಮೀಪದಿಂದ ಕಂಡ ಪುಣ್ಯದ ಪುತ್ಥಳಿ. ಅಂತೆಯೇ ತತ್ವವೇತ್ತ ಬಸವಣ್ಣನವರು ಲಿಂಗದೊಳಗಾದಾಗ ತನ್ನ ಭಾವನೆಗಳನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ. ಆಕೆಯ ಹೃದಯದಿಂದ ಹೊರಹೊಮ್ಮಿದ ಸುಕೋಮಲ ಭಾವನೆಗಳು ಕಮಲದ ದಳಗಳಂತೆ ದಳದಳವಾಗಿ ಅರಳಿವೆ. ಲಿಂಗವನ್ನು ಪೂಜಿಸಿ ಲಿಂಗವೇ ಆದ ಬಸವಣ್ಣನವರ ಸ್ಥಿತಪ್ರಜ್ಞತೆ ಗಂಗಾಂಬಿಕೆಯಲ್ಲಿ ಸಹಜವಾಗಿ ವೀರಶೈವ ತತ್ವದ ಪ್ರತೀಕವಾಗಿ ಮೂಡಿಬಂದಿದೆ."[೨೬] ಇವರ ಅಭಿಪ್ರಾಯದಂತೆ ಗಂಗಾಂಬಿಕೆ ಬಸವಣ್ಣನು ಹೇಗೆ ಕಲ್ಯಾಣದಲ್ಲಿ ಕಾರ್ಯಗತನಾದನು, ಬುದ್ಧಿವಂತಿಕೆಯಿಂದ ಇದ್ದನು, ಸ್ವಚ್ಛಂದ ಹೃದಯದಿಂದ ಕೂಡಿದವನು, ಆತನ ಸತಿಯಾಗಿ ನಾನು ಧನ್ಯನಾದೆ ಎಂಬ ಅರ್ಥದಲ್ಲಿ ಹೇಳುತ್ತಾರೆ. ಬಸವಣ್ಣನಲ್ಲೆ ತನ್ನ ಆತ್ಮನಿವೇದನೆಯ ವಿಚಾರಗಳನ್ನು ವ್ಯಕ್ತಪಡಿಸುವುದನ್ನು ನೋಡಿದರೆ, ಆತನಲ್ಲಿದ್ದ ದಿವ್ಯಾನುಭವ ಹಾಗೂ ಅಪ್ರತಿಮ ಜ್ಞಾನಿಯಾಗಿದ್ದರಿಂದ ಈಕೆಯು ಆತನನ್ನು ಭಕ್ತಿ, ವಿನಯಗಳ ಮೂಲಕವಾಗಿ, ನೆನವಿಕೆಯಿಂದ ತಾನು ಧನ್ಯಳಾದೆ ಎಂಬ ಮನದಾಳದ ಸಂತೋಷ ಆ ಮೂರ್ತಿಯೇ ತಂದಿದೆ. ಆ ಮೂರ್ತಿಯೇ ನನಗೆ ಸರ್ವಸ್ವ, ಸರ್ವಜ್ಞ ಎಂಬುದರ ಮೂಲಕವಾಗಿ ಹೇಳಿ ಭಾವನಾತೀತಳಾಗಿ ಬಸವಣ್ಣನನ್ನು ಸ್ಮರಣೆ ಮಾಡಿದ್ದಾಳೆ.

ಗಂಗಾಂಬಿಕೆಯು ಬಸವಣ್ಣನ ಮೇಲೆ ಇಟ್ಟ ಪ್ರೀತಿ, ಮಮತೆಯನ್ನು ಕುರಿತು ತನ್ನ ಮನದಾಳದ ಮಾತುಗಳ ಮೂಲಕ ಮಹಾಜ್ಞಾನಿಯಾದ ಚೆನ್ನಬಸವಣ್ಣನಿಗೆ ಹೇಳುತ್ತಾಳೆ. ಶ್ರೀಮತಿ ಶಕುಂತಲಾ ಹೆಗಡೆಯವರು "ಕುರುಹುವಿಡಿದು ಕುರುಹುಗೆಡಬೇಕು' ಎಂಬುದು ಶರಣ ಧರ್ಮದ ಆಚರಣೆಯಾಗಿದೆ. ಈ ಉತ್ಕಟ ಭಕ್ತಭಾವವನ್ನನುಭವಿಸಿ, ಐಕ್ಯ ಸ್ಥಿತಿಗೇರಿ, ಲಿಂಗಾನಂದ ಸುಖವನ್ನು ಅನುಭವಿಸಿ ಗಂಗಾಂಬಿಕೆ ಧನ್ಯತೆಯನ್ನು ಪಡೆದಿದ್ದಾಳೆ. ತಾನು ಪಡೆದ ಅನುಭಾವವನ್ನು ಈ ವಚನದ ಮೂಲಕ ಚೆನ್ನಬಸವಣ್ಣನೊಂದಿಗೆ ಹೇಳಿಕೊಂಡಿದ್ದಾಳೆ.

[illegible]

ಆತನ ಬಗೆಗೆ ಗಂಗೆಗೆ ಪ್ರೀತ್ಯಾದಾರ."[೨೭] ಇಲ್ಲಿ ಗಂಗಾಂಬಿಕೆ ತನ್ನ ಆತ್ಮದ ಪರಿಶೋಧನೆ ಮಾಡಿಕೊಂಡ ಬಗೆಯನ್ನು ಚೆನ್ನಬಸವಣ್ಣನಿಗೆ ತಿಳಿಸುತ್ತಾಳೆ. ಈ ವಚನದ ಮೂಲಕ ಎಂದು ಅಭಿಪ್ರಾಯಪಡುತ್ತಾರೆ. ಜ್ಞಾನದ ಉಜ್ವಲತೆ ಪಡೆದ ಈಕೆ ತನ್ನ ಅಂಗೈಯಲ್ಲಿಯ ಲಿಂಗದಲ್ಲಿಯೇ ಶಿವನನ್ನು ಕಂಡು ಸಂತುಷ್ಟಳಾಗಿ ಈ ವಚನವನ್ನು ಹೇಳುತ್ತಾಳೆ ಎಂದು ಪ್ರೀತಿ ಶುಭಚಂದ್ರ ಹೀಗೆ ಅಭಿಪ್ರಾಯಪಡುತ್ತಾರೆ. "ಅನುಭಾವದ ಬೆಳಗನ್ನು ವೃದ್ಧಿಸಿಕೊಂಡ ಗಂಗಾಂಬಿಕೆಗೆ ಕರದ ಇಷ್ಟಲಿಂಗದಲ್ಲೇ ಶಿವಸಾಕ್ಷಾತ್ಕಾರವಾದ ಪರಿ ಈ ವಚನ ರೂಪದಲ್ಲಿ ಹೀಗೆ ವ್ಯಕ್ತವಾಗಿದೆ"[೨೮] ಎಂದು ಅಭಿಪ್ರಾಯಪಡುತ್ತಾರೆ. ಇದಕ್ಕೆ ಪೂರಕವಾದ ಈ ವಚನದ ಅರ್ಥವನ್ನು ಶಾಂತಾದೇವಿ ಮಾಳವಾಡರು, "ತ್ರಿಕಾಲ ಲಿಂಗಪೂಜಾ ನಿಷ್ಠಳಾದ ಗಂಗಾಂಬಿಕೆಗೆ ಶಿವಸಾಕ್ಷಾತ್ಕಾರವಾಗಿ ಆಕೆ ಸ್ವತಃ ಪರವಸ್ತು ಸ್ವರೂಪಳಾದುದು, ಆಕೆಯ ವಚನದಿಂದಲೇ ವಿಧಿತವಾಗುವುದು. ಕಾಯಕನಿರತಳೂ, ಜ್ಞಾನಸಂಪನ್ನಳೂ, ಭಕ್ತಿಭಾವಭರಿತಳೂ ಆದ ಗಂಗಾಂಬಿಕೆಯ ಭಕ್ತಿ ನಿಷ್ಠೆಗಳಿಗೆ ಮೆಚ್ಚಿ ಶಿವನು ಆಕೆಯ ಕರದ ಇಷ್ಟಲಿಂಗದಲ್ಲಿಯೇ ಸಾಕ್ಷಾತ್ಕಾರನಾದುದನ್ನು ಆಕೆಯ ವಚನದಿಂದಲೇ ಅರಿತುಕೊಳ್ಳಬಹುದಾಗಿದೆ."[೨೯] ಇವರ ಅಭಿಪ್ರಾಯದಂತೆ ಇಷ್ಟಲಿಂಗವನ್ನು ನೋಡಿ ಆನಂದಿತಳಾದ ಈಕೆ, ತನ್ನ ಅನುಭವವನ್ನು ತಿಳಿಸುತ್ತಾಳೆ ಎಂದು ಹೇಳುತ್ತಾರೆ.

ಈ ವಚನವನ್ನು ಇನ್ನೊಂದು ಅರ್ಥದಲ್ಲಿ ನೋಡಬಹುದು. ಯಾಕೆಂದರೆ ಮೇಲಿನ ಅಭಿಪ್ರಾಯಗಳು ಈಕೆಯ ವ್ಯಕ್ತಿತ್ವ, ಇಷ್ಟಲಿಂಗದ ಮೂಲಕ ಆಗಿರುವ ಅನುಭವ ತಿಳಿಸಿದರೆ, ಯು.ಎಂ.ಅನೆಗೋಳ ಬಸವಣ್ಣನನ್ನೆ ಕುರಿತು ಹೇಳಿದ್ದಾಳೆ ಎಂಬುದನ್ನು ತಿಳಿಸುತ್ತಾರೆ. ಬಸವಣ್ಣನ ಅದ್ಭುತ ತೇಜಸ್ಸು, ಹಾಗೂ ಆ ತೇಜಸ್ಸಿನಿಂದ ನಿರ್ಮಿತಗೊಂಡ ಅನುಭವ ಮಂಟಪ, ಒಂದ ಕ್ಕೊಂದು ಪೈಪೋಟಿ ಎದುರಿಸುತ್ತಿವೆ. ಇದು ಸಮಕಾಲೀನ ಸಂದರ್ಭದ ವಿವರ ಕೂಡಾ ಹೌದು. ಒಂದನೇ ಸಾಲಿನಲ್ಲಿ ಮೂರುತಿ ಅಸಾಮಾನ್ಯವೆಂದರೆ ಎರಡನೆ ಸಾಲಿನಲ್ಲಿ ಆಕೆ ಹೇಳುವ ಇನ್ನೊಂದು ಮಾತು ಬಸವಯ್ಯನದು ಅದ್ಭುತ ವ್ಯಕ್ತಿತ್ವ ಆದರೆ ಕರದಲ್ಲಿಯ ಲಿಂಗದಂತೆ, ಮೌನ ಧ್ಯಾನಸ್ಥ, ಐಕ್ಯ, ಮಾತಿಲ್ಲದ ಸ್ಥಿತಿಯಾಗಿದೆ. ಇಂತಹ ಅದ್ಭುತ ಚೇತನವನ್ನು ಕಂಡು ಗಂಗಾಪ್ರಿಯ ಕೂಡಲಸಂಗನ ಶರಣ ಬಸವಣ್ಣನ ಸತಿಯಾದ ತಾನು ಧನ್ಯಳಾದೆನು ಎಂದು ಚೆನ್ನಬಸವಣ್ಣನನ್ನು ಕುರಿತು ಹೇಳುತ್ತಾಳೆ. ಅಂದರೆ ಬಸವಣ್ಣನವರು ಐಕ್ಯವಾದ ನಂತರ ಹೇಳಿದ ಪದ್ಯವೇ? ಅಥವಾ ಅವರಿರುವಾಗಲೇ ಹೇಳಿದ ಸ್ಥಿತಿ ಇರಬಹುದೇ? ಐಕ್ಯವಾದ ನಂತರ ಎಂಬ ಮಾತು ಹೇಗೆ ಅನ್ವಯವಾಗುತ್ತೆ ಎಂದರೆ ಚೆನ್ನಬಸವಣ್ಣ ಮತ್ತು ಗಂಗಾಂಬಿಕೆಯಿಬ್ಬರು ಶರಣರನ್ನು ರಕ್ಷಿಸುವ ಹೊಣೆಗಾರಿಕೆ ಹೊತ್ತುಕೊಂಡಾಗ ಈ ವಚನ ಹೇಳಿರುವ ಸಾಧ್ಯತೆಯಿದೆ. ಅಲ್ಲದೇ ಗಂಗಾಂಬಿಕೆ ಆಚಾರಕ್ಕೆ ಬದ್ಧಳಾಗಿ ಸಂಪ್ರದಾಯಸ್ಥಳಾಗಿ ತೋರಿದರೂ ಕೂಡಾ

ಧೃತಿಗೆಡದೆ, ಸಹಜಸ್ವಭಾವ, ನಂಬಿಕೆ, ವಿಶ್ವಾಸಗಳೇ ಆಕೆಯ ಜೀವಾಳ. ಆಕೆ ಬಸವಣ್ಣನವರಲ್ಲಿ ಅನನ್ಯ ಭಕ್ತಿಪರಳಾಗಿದ್ದಳು. ಅಷ್ಟೇ ಅಲ್ಲದೇ ಸಮಯೋಚಿತ ಪ್ರಜ್ಞೆಯಿಂದ ಬಸವಣ್ಣನನ್ನು ಅನುಸರಿಸದೇ ಬಸವಣ್ಣನ ತತ್ವಗಳನ್ನು, ಶರಣರನ್ನು ಕಾಪಾಡಿದವಳು. ಬಸವಣ್ಣನವರು ಐಕ್ಯವಾದರೂ ಧೃತಿಗೆಡದೆ ಎಲ್ಲವನ್ನು ನಿಭಾಯಿಸಿದವಳು. ಒಂದು ಹಂತದಲ್ಲಿ ನಿರ್ಮಿತಿಗಿಂತ ಅದರ ಪರಿಪೋಷಣೆ ಅಥವಾ ಮುಂದಿನ ಸಮಾಜಕ್ಕೆ ಅದನ್ನು ಸುರಕ್ಷಿತವಾಗಿ ಒದಗಿಸುವಲ್ಲಿ ಆಕೆಯದು ದಿಟ್ಟ ಹೆಜ್ಜೆ, ಅಲ್ಲದೇ ಆಕೆಯದು ಮಹತ್ವದ ಪಾತ್ರ. ಹಾಗಾದಲ್ಲಿ ಸಮಯೋಚಿತ ವಿಚಾರಗೈದ ಗಂಗಾಂಬಿಕೆ ಕೂಡಾ ವಿಚಾರಪತ್ನಿಯೇ. ಆಕೆಯದ್ದು ಎರಡು ಹಂತ. ಆಚಾರ ಪತ್ನಿ ಅಂದರೆ ಪತಿನಿಷ್ಠೆಯನ್ನೆ ಜೀವಾಳವಾಗಿಸಿಕೊಂಡ ಹೆಣ್ಣುಮಗಳು. ನಂತರ ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ ಅಂದರೆ ಚೆನ್ನಬಸವಣ್ಣ ಎಂದು ತನ್ನ ಮಗನಾದ ಚೆನ್ನಲಿಂಗನನ್ನು ಆತ್ಮಸಂಧಾನ ಮಾಡಿಕೊಂಡಳೇ ಎಂಬುದು ತೋರುತ್ತದೆ.

ಅಕ್ಕನಾಗಮ್ಮನ ಮಗ ಚೆನ್ನಬಸವಣ್ಣನನ್ನೆ ಮಗನೆಂದು ತಿಳಿದು ಅವನಲ್ಲಿ ಹೆಚ್ಚು ಕಕ್ಕುಲತೆ ತೋರಿದಳೆ? ಅಥವಾ ಆಚಾರ ಮಾಡುತ್ತಲೇ ವಿಚಾರಪತ್ನಿಯಾಗಿ ಬೆಳೆದು ಸಂದರ್ಭ ಬಂದಾಗ ನಿಭಾಯಿಸಿದಳೇ ಎಂಬೆಲ್ಲ ಊಹೆಗಳು ಬರುತ್ತವೆ. ಬಸವಣ್ಣನನ್ನೆ ಆರಾಧಿಸುತ್ತಲೇ ದಾರ್ಶನಿಕ ತತ್ವಜ್ಞಾನಿ ಚೆನ್ನಬಸವಣ್ಣನ ಪ್ರಭಾವದಿಂದ ವಿಚಾರ ಪರತೆಯನ್ನು ಆಕೆ ಮೆರೆದಳು ಇಲ್ಲದಿದ್ದರೆ, ವೀರಾಗ್ರಣಿಯಾಗಿ ಬಿಜ್ಜಳನ ಸೈನಿಕರೊಂದಿಗೆ ಕಾದಾಡಿ ಮಡಿಯುವ ಸಂದರ್ಭ ಬರುತ್ತಿರಲಿಲ್ಲ. ಆಕೆ ಸಮಯ ಸ್ಫೂರ್ತಿಯಿಂದ ತೊಟ್ಟಿಲು ತೂಗುವ ಕೈ ಜಗವನ್ನೇ ತೂಗಬಲ್ಲುದು ಎಂಬ ಸಂದೇಶವನ್ನು ಕೂಡ ಕೊಟ್ಟಿದ್ದಾಳೆ. ಬಸವಣ್ಣನವರ ನಂತರ ಸಮರ್ಥ ಉತ್ತರದಾಯಿತ್ವವನ್ನು ಪ್ರಕಟಿಸಿದ್ದಾಳೆ.

ಇಲ್ಲಿ ಮೂರುತಿ ಎಂದರೆ ಬಸವಣ್ಣನವರು ಎಂದು ಗ್ರಹಿಸಲಾಗಿದೆ. ಶರಣರ ಗುಂಪಿನಲ್ಲಿ ಕಾಣದಿರುವ ಸ್ಥಿತಿಯನ್ನು, ಒಮ್ಮೊಮ್ಮೆ ಮೀರಿ ತೋರುವ ಸ್ಥಿತಿಯನ್ನು ವಿವರಿಸಿದ್ದಾಳೆ. ಆ ಮೂಲಕ ಸತಿಯಾದ ತಾನು ಧನ್ಯಳು ಎಂಬುದನ್ನು ಹಾಗೂ ವಚನ ಚಳುವಳಿಯ ಸಾಮಾಜಿಕ ಚಟುವಟಿಕೆಗಳನ್ನು ಹಾಗೂ ಶರಣರ ಗುಂಪಿನಲ್ಲಿ ಬೃಹದಾಕಾರವಾಗಿ ಬೆಳೆದ ಬಸವಣ್ಣನವರನ್ನು ಸ್ತುತಿಸಿದ್ದಾಳೆ.

ಒಟ್ಟಾರೆಯಾಗಿ ಈ ಮೂರು ವಚನಗಳಲ್ಲಿ ಆತ್ಮನಿವೇದನೆ ವ್ಯಕ್ತಪಡಿಸುವ ಸಂದರ್ಭ ಕಾಣುತ್ತೇವೆ. ಮಗನನ್ನು ಕಳೆದುಕೊಂಡು, ದುಃಖ ಸಂವೇದನೆ, ಒಂದು ಹಾಳ ಭೂಮಿಯಲ್ಲಿ ಹುಲಿ ಬಂದು ಭಕ್ಷಿಸುವ ಸಂದರ್ಭ ಹಾಗೂ ಇಷ್ಟಲಿಂಗದ ರೂಪದಲ್ಲಿ, ಬಸವನ ರೂಪದಲ್ಲಿ ತನ್ನ ಮನದಾಳತೆಯನ್ನು ವ್ಯಕ್ತಪಡಿಸುವ, ಆಲೋಚನೆಗಳು ನಾನಾ ರೀತಿಯ ಅರ್ಥವನ್ನು ಕಲ್ಪಿಸುವುದರೊಂದಿಗೆ ಗೂಢಾರ್ಥದ ವಚನಗಳ ಮೂಕ ವೇದನೆಯಾಗಿದೆ. ಈಕೆಯ ವಚನಗಳಲ್ಲಿ

ತನ್ನಲ್ಲಿಯ ಮನದಾಳದ ನೋವುಗಳ ಮೂಲಕ, ಆತ್ಮಕ್ಕೆ ಪರೀಕ್ಷೆಯ ಹಂತವಾಗಿ ಅರ್ಪಿಸಿಕೊಳ್ಳುವ ಮನೋಭಾವ ಅಭಿವ್ಯಕ್ತವಾಗಿದೆ.

**ಆ. ಗಂಗಾಂಬಿಕೆಯ ಪತಿನಿಷ್ಠೆ/ಬಸವನಿಷ್ಠೆ**

ಗಂಗಾಂಬಿಕೆಯಲ್ಲಿಯ ಪತಿನಿಷ್ಠೆಯನ್ನು ಈ ವಚನಗಳು ಹೇಳುತ್ತವೆ. ಸತಿಪತಿಗಳು ಬದುಕಿನಲ್ಲಿ ಒಪ್ಪಿಕೊಂಡು ನಡೆಯುವುದೇ ದಾಂಪತ್ಯ ಜೀವನ. ಗಂಗಾಂಬಿಕೆ ಆಚಾರನಿಷ್ಠಳು ಎಂಬುದರ ಮೂಲಕ ಪತಿನಿಷ್ಠೆಯನ್ನು ಮೆರೆದಿದ್ದಾಳೆ. ಬಸವಣ್ಣನ ಸರ್ವತೋಮುಖ ಬೆಳವಣಿಗೆಗೆ ಈಕೆಯ ಪ್ರೋತ್ಸಾಹವಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕೇವಲ ಇಂದ್ರಿಯ ಸುಖವನ್ನು ಬಯಸುವುದೇ ಅಲ್ಲ, ಎಂಬುದು ಈಕೆಯ ಕುರಿತು ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಸತಿಪತಿಗಳ ಸಾಮ್ಯತೆ, ಸಹಬಾಳ್ವೆಯು ಜೀವನದಲ್ಲಿ ಸುಖಿಯಾಗುವಂತೆ ಮಾಡುತ್ತದೆ. ಈಕೆಯ ವಚನಗಳಲ್ಲಿ ಅನನ್ಯವಾದ ನಿಷ್ಠೆಯನ್ನು ಬಸವಣ್ಣನಲ್ಲಿ ಕಂಡಿದ್ದಾಳೆ. ಆತನ ಪ್ರತಿಯೊಂದು ಕಾರ್ಯದಲ್ಲಿ ಸಹಾಯಕಳಾಗಿರಬೇಕು. ಹಾಗಾಗಿ ನನ್ನ ನಿಷ್ಠೆ ಪತಿನಿಷ್ಠೆಯಾಗಿದೆ ಎಂಬ ಭಾವವನ್ನು ವ್ಯಕ್ತಪಡಿಸಿದ್ದು, ಇವಳಲ್ಲಿ ಅಡಗಿದ ಅಚಲವಾದ ನಂಬಿಕೆ ತೋರಿಸುತ್ತದೆ. ಅಂತಹ ವಚನ ಈ ರೀತಿಯಾಗಿದೆ.

> "ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?
> ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ?
> ಇವಳ ಲಿಂಗನಿಷ್ಠೆ ಇವಳಿಗೆ
> ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
> ಗಂಗಾಪ್ರಿಯ ಕೂಡಲಸಂಗಮದೇವಾ"[೩೦]

ಈ ವಚನದಲ್ಲಿ ಪತಿಯ ಆಜ್ಞೆಯಂತೆ ನಡೆಯುವವಳು. ಹಾಗಾಗಿ ನನಗೆ ಯಾಕೆ ಪ್ರತಿಜ್ಞೆ, ಪತಿಯು ಕರೆದಲ್ಲಿ ಹೋಗದಿದ್ದರೆ ಯಾತನೆಯಲ್ಲವೆ. ಇವಳ ಲಿಂಗನಿಷ್ಠೆ ಎಂದರೆ ನೀಲಾಂಬಿಕೆ, ಈಕೆಯ ನಿಷ್ಠೆಯು ಲಿಂಗದಲ್ಲಿಯಾದರೆ ನನ್ನ ನಿಷ್ಠೆ ಪತಿಯಾಜ್ಞೆಯಲ್ಲಿ ಇದೆ ಎಂಬುದನ್ನು ಈ ವಚನ ಉಲ್ಲೇಖ ಮಾಡುತ್ತದೆ. ಆದರೆ "ಅವಳು ಸ್ವತಂತ್ರ ಮನೋಭಾವದವಳು. ಗಂಗಾಂಬಿಕೆ ಮಾತ್ರ ಸಂಪ್ರದಾಯಶೀಲ ಸತಿ, ಪತಿಯ ಆಜ್ಞಾಪಾಲನೆಯೇ ಪರಮಾತ್ಮ ಪೂಜೆ ಅನ್ಯನಿಷ್ಠೆ ಅವಳಿಗಿಲ್ಲ"[೩೧] ಎಂದು ಅಭಿಪ್ರಾಯಪಡುತ್ತಾರೆ. ನೀಲಾಂಬಿಕೆಗೆ ಗಂಗಾಂಬಿಕೆಗೆ ಇರುವ ವ್ಯತ್ಯಾಸವನ್ನು ಹೇಳುತ್ತಾರೆ. ಯು.ಎಂ.ಅನಿಗೋಳರ ಈ ವಚನದ ಬಗ್ಗೆ ಅಭಿಪ್ರಾಯ "ಪತಿಯ ನೆರಳಿನಲ್ಲಿ ಬಾಳಿದ ಹಿರಿಮೆ ಗಂಗಾಂಬಿಕೆಯದು. ನೀಲಾಂಬಿಕೆ ವಿಚಾರ ಪತ್ನಿಯಾದರೆ, ಗಂಗಾಂಬಿಕೆ ಆಚಾರಪತ್ನಿ ಎಂಬ ಮಾತಿಗೆ ಈ ವಚನವೇ ನಿದರ್ಶನ."[೩೨] ಗಂಗಾಂಬಿಕೆ

ಪತಿಯ ನೆರಳಿನಲ್ಲಿ ಬಾಳಿದ್ದಾಳೆ. ಈಕೆ ಆಚಾರಪತ್ನಿಯಾಗಿದ್ದಾಳೆ. ನೀಲಾಂಬಿಕೆ ವಿಚಾರಪತ್ನಿ ಎಂಬ ಅಭಿಪ್ರಾಯ ಹೇಳುತ್ತಾರೆ. ಡಾ.ಪ್ರೀತಿ ಶುಭಚಂದ್ರರು "ಪತಿಭಕ್ತಿ, ಲಿಂಗನಿಷ್ಠೆಗಳ ಮೂಲಕ ಆತ್ಮಶಕ್ತಿ ಬೆಳಸಿಕೊಂಡ ಗಂಗಾಂಬಿಕೆ ದಾಂಪತ್ಯ ಜೀವನದ ರೀತಿ ನೀತಿಗಳಾಚೆ ತನ್ನನ್ನು ವಿಕಸನಗೊಳಿಸಿಕೊಂಡಳು"[೩೩]ಎನ್ನುತ್ತಾರೆ.

ಡಾ.ಶಕುಂತಲಾ ಹೆಗಡೆ ಗಂಗಾಂಬಿಕೆಯ ಪತಿನಿಷ್ಠೆಯ ಕುರಿತು "ಪತಿಯಾಜ್ಞೆಯಲ್ಲಿ ನಡೆಯುವ ಸತಿಗೆ ಪ್ರತಿಜ್ಞೆ ಏಕೆ? ಎಂಬ ಪ್ರಶ್ನೆಯು ಆಗಿನ ಕಾಲದ ಎಲ್ಲ ಶಿವಶರಣೆಯರಿಗೂ ಅನ್ವಯವಾಗುತ್ತದೆ. 'ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರವುಂಟೆ?...' ಎಂಬ ಅಕ್ಕಮ್ಮನ ವಚನವು ಇದನ್ನೇ ಹೇಳುತ್ತದೆ. ಪ್ರತಿಜ್ಞೆ ಮಾಡಿದರು ಅದು ಸಾಧ್ಯವಾಗದಿದ್ದರೆ ಯಾತನೆ ಕಟ್ಟಿಟ್ಟ ಬುತ್ತಿ. 'ಇವಳ ಲಿಂಗ ನಿಷ್ಟೆ ಇವಳಿಗೆ' ಎಂಬುದು ನೀಲಾಂಬಿಕೆಯನ್ನು ಕುರಿತು ಹೇಳಿರಬೇಕು. ಲಿಂಗಪ್ರಾಣಿ ಎನಿಸಿಕೊಂಡ ನೀಲಾಂಬೆ ಕಲ್ಯಾಣದ ನೆಲಮಾಳಿಗೆಯ ಒಳಗಣ ಜ್ಞಾನಪ್ರಕಾಶ ಮಂಟಪದಲ್ಲಿ ಲಿಂಗಪೂಜಾ ನಿರತಳಾಗಿದ್ದಳು. ಅವಳ ಲಿಂಗಪೂಜಾ ಸಂಪತ್ತನ್ನು ಅನೇಕ ಶರಣರು ಹೊಗಳಿದ್ದು ಕಾಣುತ್ತೇವೆ."[೩೪] ಗಂಗಾಂಬಿಕೆ ಪತಿಯಾಜ್ಞೆಗೆ ವಿಮುಖಳಾಗದೆ, ನಡೆದುಕೊಳ್ಳುವ ಪರಿಯನ್ನು ತಿಳಿಸಿ ನೀಲಾಂಬಿಕೆ ತನ್ನದೆಯಾದ ನಿಲುವುಗಳ ಹೊಂದಿದಾಕೆ. ಈಕೆ ಲಿಂಗಮುಖಿಯಾಗಿ ಇರುತ್ತಿದ್ದಳು. ಆಗ ಬಸವಣ್ಣನ ಕರೆಗೆ "ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೆ... ಎಂಬ ವಚನ ನುಡಿದು ವಿಚಾರ ಪತ್ನಿಯಾಗಿ ಸ್ವತಂತ್ರ ಮನೋಧರ್ಮ ತೋರಿಸಿದ್ದಾಳೆ."[೩೫] ಹೀಗೆ ಗಂಗಾಂಬಿಕೆ ಸತಿಗೆ ಎಲ್ಲ ಪ್ರತಿಜ್ಞೆಗಳಿಗಿಂತ ಶ್ರೇಷ್ಠವಾದದ್ದು ಎಂದು ಈ ವಚನದಲ್ಲಿ ಬಿಂಬಿಸಿದ್ದಾಳೆ. ಇವರ ಅಭಿಪ್ರಾಯದಂತೆ ಬಸವಣ್ಣ ನೀಲಾಂಬಿಕೆಯನ್ನು ಬರಹೇಳಿದ್ದು ತಿಳಿಯುತ್ತದೆ. ಅದರೆ ಗಂಗಾಂಬಿಕೆಗೆ ಹೇಳಿಲ್ಲವೆ ಅಥವಾ ಪತಿಯು ಮಾಡಬೇಕಾದ ವಚನ ಸಾಹಿತ್ಯ ರಕ್ಷಣೆ, ಶರಣರ ಜೀವ ರಕ್ಷಣೆಯ ಕಾರ್ಯವನ್ನು ನಾನು ಮಾಡಬೇಕು, ನೀನು ಹೋಗು ಎಂದು ನೀಲಾಂಬಿಕೆಗೆ ಎಂದಿರಬೇಕು. ಬಹುಶಃ ಈ ಉತ್ತರವನ್ನು ಕೊಟ್ಟಾಗ ಈ ವಚನ ಹೇಳಿರಬೇಕು ಎನಿಸುತ್ತದೆ.

ಪ್ರೊ.ಲಲಿತಾಂಬ ವೃಷಭೇಂದ್ರಸ್ವಾಮಿಯವರು ಗಂಗಾಂಬಿಕೆಗೆ ಲಿಂಗಪೂಜೆಗಿಂತ ಪತಿಯಸೇವೆ ಬಹಳ ಮುಖ್ಯ. ಇವಳ ಲಿಂಗನಿಷ್ಠೆ ಇವಳಿಗೆ ಎಂದು ಬಸವಣ್ಣನ ಇನ್ನೊಬ್ಬ ಮಡದಿ ನೀಲಾಂಬಿಕೆಯನ್ನು ಕುರಿತು ಹೇಳಿದಂತಿದೆ ಎಂದು ನೀಲಾಂಬಿಕೆಗೆ ಲಿಂಗನಿಷ್ಠೆ ಮುಖ್ಯವಾದರೆ ಗಂಗಾಂಬಿಕೆಗೆ ಪತಿಯೇ ದೇವರಾಗಿದ್ದಾನೆ. ಪತಿಯ ಅಪ್ಪಣೆಯಂತೆ ನಿಷ್ಠೆಯು ಸರಿ ಕಾಣುವುದಿಲ್ಲ. ಈಕೆಯು ಮಾಡುವಂತ ಕ್ರಿಯೆ ಗಂಗಾಂಬಿಕೆಗೆ ನೋವು ತಂದಿರುವಂತದ್ದು ಎಂದು ಹೇಳುತ್ತಾ "ಪತಿನಿಷ್ಠೆಯೇ ನನಗೆ ಸರಿಯಾದ (ಸರಿಯಾದ) ಮಾರ್ಗ ಎಂದು ತನ್ನ ನಿಲುವನ್ನು ಇಲ್ಲಿ

ವ್ಯಕ್ತಪಡಿಸುತ್ತಾಳೆ. ಈ ವಚನದಿಂದ ಗಂಗಾಂಬಿಕೆ–ನೀಲಾಂಬಿಕೆಯರ ವ್ಯಕ್ತಿತ್ವದ ಭಿನ್ನತೆಯನ್ನು ಗಮನಿಸಬಹುದಾಗಿದೆ."[೩೬]

ಬಿ.ಮಹಾದೇವಪ್ಪನವರು ಈ ವಚನದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ. ಕಲ್ಯಾಣ ಕ್ರಾಂತಿಯ ಸಂದರ್ಭ ನೀಲಮ್ಮನಿಗೆ ಬರಹೇಳುವುದು, ನಾನು ಯಾಕೆ ಬರಲಿ ಎಂಬ ಪ್ರಶ್ನೆ ಮಾಡಿದ ನೀಲಾಂಬಿಕೆ "ಪರಿಣಾಮ ಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕ್ಕಯ್ಯ ಬಸವಾ?"[೩೭] ಎಂದು ಹೇಳಿಕಳಿಸಿದಾಗ ಗಂಗಾಂಬಿಕೆ ಈ ವಚನವನ್ನು ಹೇಳಿದ್ದಾಳೆ. "ಗಂಗಾಂಬಿಕೆಯರ ಬಾಳನೀತಿಯೇನೆಂದರೆ ಸತಿಗೆ ಪತಿಯಾಜ್ಞೆಯನ್ನು ಪಾಲಿಸುವುದೇ ಪ್ರತಿಜ್ಞೆಯಾಗಿರಬೇಕು. ಹೆಣ್ಣಿಗೆ ಬೇರೆ ಬೇರೆ ಪ್ರತಿಜ್ಞೆಯಿದ್ದರೆ, ಬೇರೆ ಬೇರೆ ವ್ರತಗಳಿದ್ದರೆ, ಅವು ಪತಿಯ ಪ್ರತಿಜ್ಞೆಗಳಿಂದ ಘರ್ಷಿಸುತ್ತಿದ್ದರೆ ಅಂಥ ಪ್ರತಿಜ್ಞೆಯನ್ನು ಪತಿಕರಿಸುವುದು ಯಾತನೆಯ ವಿಷಯವಾಗುತ್ತದೆ."[೩೮] ಇವರ ಅಭಿಪ್ರಾಯದಂತೆ ಪತಿಯಾಜ್ಞೆ ಪಾಲಿಸದಿದ್ದರೆ ಯಾತನೆಯ ವಿಷಯವೆಂದು ಹೇಳುತ್ತಾರೆ. ಈಕೆಯ ವಚನ ಸ್ಪಷ್ಟತೆಯಾಗಿದೆ. ಇದು ನೀಲಮ್ಮನಿಗಾಗಿ ಹೇಳಿದ್ದಾಳೆ ಎಂದು ಅಭೀಪ್ರಾಯಪಡುತ್ತಾ, ನೀನು ಸಂಗಮಕ್ಕೆ ಹೋಗಬೇಕು ಎಂದು ತಿಳಿಸುತ್ತಾಳೆ. ಇಲ್ಲಿ "ಗಂಗಾಂಬಿಕೆಯರ ನಿಲುವೇ ಸಮಯೋಚಿತವಾದುದಾಗಿತ್ತೆನಿಸುತ್ತದೆ. ಅಲ್ಲಿರುವ ಸಂಗಯ್ಯ ನಿಲ್ಲಿಲ್ಲವೇ?' ಎಂದು ಪ್ರಶ್ನಿಸಿಕೊಂಡು ನೀಲಾಂಬಿಕೆಯರಿಗೆ ಇತ್ತ ಶರಣ ಸೇನೆಯ ಜೊತೆಗೆ ಉಳಿವೆಯ ಕಡೆಗೂ ಸಾಗುವುದಾಗುವುದಿಲ್ಲ; ಸ್ವಇಚ್ಛೆಯ ಪ್ರಕಾರ ಬಹಳ ದಿವಸ ಕಲ್ಯಾಣದಲ್ಲಿಯೂ ಉಳಿಯುವುದಾಗುವುದಿಲ್ಲ ಕಲ್ಯಾಣದಲ್ಲಿರುವ ತ್ರಿಪುರಾಂತಕೇಶ್ವರ ಮತ್ತು ಸಂಗಮದಲ್ಲಿರುವ ಸಂಗಮೇಶ್ವರ ಒಬ್ಬರೇ ಆದರೂ ಮನುಷ್ಯ ಪರಿಸ್ಥಿತಿಯ ಕೈಗೊಂಬೆ"[೩೯] ಎಂಬುದನ್ನು ಈ ಅಭಿಪ್ರಾಯದಿಂದ ನೋಡಬಹುದು.

ಗಂಗಾಂಬಿಕೆ ನೀಲಾಂಬಿಕೆಗೆ ತಿಳಿಸಿದ ಸಂದರ್ಭ ಕಲ್ಯಾಣ ಕ್ರಾಂತಿಯ ಪರಿಸ್ಥಿತಿ ಕೆಟ್ಟಿದೆ ನಾನು ಪತಿನಿಷ್ಠೆ ಅಥವಾ ಪ್ರತಿಜ್ಞೆಗೆ ಒಳಪಟ್ಟವಳು ಎಂದರೆ ಇನ್ನೊಂದು ಅರ್ಥದಲ್ಲಿ ಈ ವಚನ ನೋಡಬಹುದು. ನನಗೆ ಆಗಲೇ ಪತಿಯಾಜ್ಞೆಯು ವಚನಗಂಟು ರಕ್ಷಣೆ ಜೊತೆಗೆ ಶರಣರನ್ನು ಕಾಪಾಡುವುದು ಮುಖ್ಯವಾಗಿದೆ. ಹಾಗಾಗಿ ನೀನು ಕಲ್ಯಾಣದಲ್ಲಿರುವುದು ಸೂಕ್ತವಲ್ಲ, ಏಕೆಂದರೆ ಪ್ರಾಣ ಅಪಾಯ, ತೊಂದರೆ, ಎರಡೂ ಒಂದಾದರೆ, ನೀನು ಮಾನಸಿಕ ವೇದನೆಗೆ ಒಳಗಾಗ ಬೇಕಾಗುತ್ತದೆ. ಅದಕ್ಕೆ ನೀನು ಪತಿಯತ್ತ ಸಾಗು ಎಂದಿರಬೇಕು. ನೀಲಾಂಬಿಕೆ ಇಲ್ಲಿಯೇ ನಾನು ಸಂಗಯ್ಯನಲ್ಲಿ ಒಂದಾಗುವೆ ಎಂದಾಗ ಪ್ರತಿಯಾಗಿ ಬಂದ ಬೇಸರದ ಮಾತುಗಳೇ ಈಕೆಯ ವಚನವಾಗಿದೆ ಎನ್ನಬಹುದು.

ಹಾಗೆ ಶಾಂತಾ ಇಮ್ರಾಪುರ ಈ ವಚನದಲ್ಲಿ ಪತಿಭಕ್ತಿಯನ್ನು ಕಾಣುತ್ತೇವೆ. ಹಾಗೂ ನೀಲಾಂಬಿಕೆಗೆ ಕುರಿತು ಹೇಳಿರುವಂತಿದೆ ಎಂದು ಅಭಿಪ್ರಾಯಪಡುತ್ತಾರೆ. “ಬಸವಣ್ಣನವರ ಅನುಭಾವಿಕ ವೈಚಾರಿಕ ಪ್ರಭೆಯಲ್ಲಿಯೇ ರೂಪುಗೊಂಡ ಚೆನ್ನಬಸವಣ್ಣನವರು, ಮನುಪ್ರಣೀತ ದಾಂಪತ್ಯ ಧರ್ಮವನ್ನೇ ಎತ್ತಿ ಹಿಡಿದಿರುವುದನ್ನು ಗಮನಿಸಿದರೆ. ಶರಣ ಸಂಸ್ಕೃತಿಯು ಸಮೂಹ ಸಂಸ್ಕೃತಿಯ ವಿಭಿನ್ನ ಆಲೋಚನಾಕ್ರಮಗಳನ್ನು ಸಮನ್ವಯಗೊಳಿಸುತ್ತಾ ಫಲಿಸಿದ ವಿಶಿಷ್ಟ ಚಿಂತನಾ ಕ್ರಮವೆನ್ನುವುದು ವಿಧಿತವಾಗುತ್ತದೆ. ನೀಲಾಂಬಿಕೆಯ ‘ವಿಚಾರಪತ್ನಿ’ಗೆ ಬದಲಾಗಿ ಗಂಗಾಂಬಿಕೆ ‘ವಿಧೇಯಪತ್ನಿ’ಯ ಮಾದರಿಯನ್ನೇ ಬೆಂಬಲಿಸಿರುವುದು ಅವಳ ವ್ಯಕ್ತಿ ವಿಶಿಷ್ಟತೆ, ಬಹುಶಃ ನೀಲಾಂಬಿಕೆಯನ್ನು ಉದ್ದೇಶಿಸಿಯೇ ನುಡಿದಂತಿರುವ ಒಂದು ವಚನದಲ್ಲಿ ಗಂಗಾಂಬಿಕೆ ನಂಬಿ ನಡೆದ ದಾಂಪತ್ಯ ಧರ್ಮ”[೪೦]ವಾಗಿದೆ ಎಂದು ಹೇಳುತ್ತಾರೆ.

ಗಂಗಾಂಬಿಕೆಯ ಈ ವಚನದಿಂದ ಹಲವಾರು ಸಂದಿಗ್ಧಗಳಿಗೆ ಸ್ಪಷ್ಟತೆ ಗೋಚರಿಸುತ್ತದೆ. ಕೆಲವು ಮಹಾಕಾವ್ಯಗಳು ನೀಲಮ್ಮನನ್ನು ಮಾತ್ರ ಬಸವಣ್ಣನವರು ಬರಹೇಳಿದರು ಎಂದಿವೆ. ಆದರೆ ಈ ವಚನದಿಂದ ಬಸವಣ್ಣನವರು ಬರಹೇಳಿದ್ದು ಇಬ್ಬರಿಗೂ, ನೀಲಮ್ಮನಿಗೆ ಲಿಂಗನಿಷ್ಠೆ ಕಾರಣ ಪತಿಯಾಜ್ಞೆ ಗಮನಿಸಲಿಲ್ಲದಿರಬಹುದು. ಆದರೆ ಗಂಗಾಂಬಿಕೆ ಪತಿನಿಷ್ಠೆ ಪ್ರತಿಜ್ಞೆಯಾದ ಪ್ರಯುಕ್ತ ಆಕೆ ವಚನದ ಕಟ್ಟು ಮತ್ತು ಶರಣರನ್ನು ಕರೆದುಕೊಂಡು ಹೊರಟಿರಬಹುದು. ದಾರಿಯಲ್ಲಿ ಸೋವಿದೇವನ ಸೈನಿಕರು ಅವರನ್ನು ಅಡ್ಡಗಟ್ಟಿ ದಿಕ್ಕಾಪಾಲಾಗಿಸಿರಬಹುದು. ಅಲ್ಲದೆ ಇನ್ನೊಂದು ವಿಷಯವನ್ನು ಊಹಿಸಬಹುದಾಗಿದೆ. ಅದೆಂದರೆ ನೀಲಮ್ಮ ಕಲ್ಯಾಣದಲ್ಲಿಯೇ ಲಿಂಗೈಕ್ಯಳಾದಳು. ಬೇರೆಲ್ಲೂ ಹೋಗಲಿಲ್ಲ ಎಂಬುದನ್ನು ಕೆಲವು ಕಾವ್ಯಗಳು ವಿವರಿಸುವುದನ್ನು ಈ ಹೇಳಿಕೆ ಸಮರ್ಥಿಸುತ್ತಿರಬಹುದೇ?

ಈಕೆಯ ವಚನವನ್ನು ಆಧ್ಯಾತ್ಮದ ಹಿನ್ನೆಲೆಯಲ್ಲಿ ನೋಡಿದಾಗ ಪತಿಯಾಜ್ಞೆಯನ್ನು ಸಹಧರ್ಮಿಣಿಯಾಗಿ ಪೂರೈಸುವಂತ ಕರ್ತವ್ಯ ಸತಿಯದಾಗಿದೆ. ಪತಿಯೇ ಸರ್ವಸ್ವ ಎಂದು ತಿಳಿದದ್ದು ಲೌಕಿಕ, ಪತಿಯೇ ದೇವರು ಎಂದು ಭಾವಿಸುವುದು ಶರಣಸತಿ ಲಿಂಗಪತಿ ಅಂಶವು ಆಗುತ್ತದೆ. ಇದು ಪಾರಮಾರ್ಥಿಕ ಚಿಂತನೆಯೂ ಕೂಡ. ಲಿಂಗಯ್ಯನ ಅಪ್ಪಣೆಯೇ ಪತಿನಿಷ್ಠೆ, ಸಹಜತೆ ಹಾಗೂ ಸಹಜಾನಂದ, ನಿಜಾನಂದ, ಅದೇ ಬ್ರಹ್ಮನಂದ ಪರಮ ಸುಖವನ್ನು ನಾನು ಪಡೆದೆನು ಅದಕ್ಕೆ ಲಿಂಗಯ್ಯ ಆಜ್ಞೆಯೆ ಪತಿಯ ಆಜ್ಞೆಯೆಂದು ಪರಿಭಾವಿಸಿದ ಗಂಗಾಂಬಿಕೆ ಮೇಲ್ನೋಟದ ಚಿಹ್ನೆ ನೀಲಾಂಬಿಕೆಯಲ್ಲಿ ಕಂಡು ಲಿಂಗನಿಷ್ಠೆಯಾಗಿದೆಯೇ ಹೊರತು, ಅಂತರಂಗದ ಚಿತ್ಕಳೆಯನ್ನು ಉತ್ಕರ್ಷ ಮಾಡುವ ಸಾಧನವಾಗಿಲ್ಲ ಹಾಗಾಗಿ ಸಾಧನೆಗೆ ಹೊರಡು ಎಂಬುದು ಕೂಡಾ ಆಗಿರಬಹುದು.

[illegible]

### ಇ. ಇಷ್ಟಲಿಂಗದ ಮಹತ್ವ/ಲಿಂಗನಿಷ್ಠೆ

ಈ ವಚನದಲ್ಲಿ ಗಂಗಾಬಿಕೆ ಲಿಂಗದ ಬಗ್ಗೆ ಮತ್ತು ಅದರ ಮಹತ್ವದ ಬಗ್ಗೆ ತಿಳಿಸಿದ್ದಾಳೆ. ಲಿಂಗ ಎಂದರೆ ಲಯವಿಲ್ಲದ್ದು, ಗಮನವಿಲ್ಲದ್ದು, ಯಾವುದೋ ಅದುವೆ ಲಿಂಗವಾಗಿದೆ. ಈ ಲಿಂಗ ಅಲಿಂಗನವಾದಾಗ, ದೇಹದಲ್ಲಿ ಚಿತ್ಕಳೆಯು ಹೊರಹೊಮ್ಮಿ, ಪ್ರಕಾಶಮಾನವಾದ ಜ್ಯೋತಿಯನ್ನು ಕಾಣುತ್ತೇವೆ. ಇದನ್ನೆ ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ ಹೀಗೆ ಹೇಳಿದ್ದಾನೆ.

“ಆಲಿ ನಿಂದರೆ ಸುಳಿದು ಸೂಸುವ
ಗಾಳಿ ನಿಲುವುದು ಗಾಳಿ ನಿಲೆಮನ
ಮೇಲೆ ನಿಲುವುದು ಮನವು ನಿಂದರೆ ಬಂದು ನಿಂದಿಹುದು
ಲೀಲೆಯಿಂದಾ ಬಂದನಿಂದಿರೆ
ಕಾಲ ಕರ್ಮವ ಗೆಲಿದು ಮಾಯೆಯ
ಹೇಳ ಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ”[೪೧]

ಕಣ್ಣಾಲಿ ನಿಂತರೆ ಶ್ವಾಸದಲ್ಲಿಯ ಗಾಳಿ ನಿಲ್ಲುತ್ತದೆ. ಗಾಳಿನಿಂತ ಕೂಡಲೇ, ಮನಸ್ಸು ಊರ್ಧ್ವಮುಖವಾಗುತ್ತದೆ. ನಂತರ ಬಿಂದು ನಿಲ್ಲುತ್ತದೆ. ಲೀಲೆಯಿಂದ ಬಿಂದುನಿಂತರೆ, ಕಾಲಕರ್ಮಗಳನ್ನು ಗೆದ್ದು, ಮಾಯೆಯನ್ನು ಗೆಲ್ಲಬಹುದು. ಇಲ್ಲಿ ಮಾಯೆ ಎಂದರೆ ಅಜ್ಞಾನ, ಮರೆವುದಾಗಿದೆ. ಲಿಂಗದ ಸಾಧನೆಯಿಂದ ಅಜ್ಞಾನದ ಕತ್ತಲೆಯನ್ನು ನಿವಾರಿಸುವಂತ ಸಾಧನೆಯೇ ಲಿಂಗಪೂಜೆಯಾಗಿದೆ. ಈ ಪೂಜೆ ಭಾವನೆಯಿಂದ ಬಂದು ಪ್ರಾಣಲಿಂಗವಾಗಿ ಮನದಲ್ಲಿ ನಿಂತು ಸ್ಥೂಲದಲ್ಲಿ ಇಷ್ಟಲಿಂಗವಾಗಿ ಅರ್ಚನೆಗೆ ಗೋಚರಿಸುತ್ತದೆ.

ಗಂಗಾಂಬಿಕೆಯು ಏನನ್ನು ಸಾಧಿಸಿದ್ದಾಳೇ, ಭಾವಿಸಿದ್ದಾಳೇ ಅಂತಹ ತಾತ್ವಿಕ ದರ್ಶನವೇ ಲಿಂಗದ ಮಹತ್ವವಾಗಿದೆ. ಹಾಗೂ ಈ ವಚನದಲ್ಲಿ ಬಿಂಬಿಸಿದ್ದಾಳೆ.

“ಲಿಂಗ ಕುಸುಮಗಳೆನ್ನಾಚಾರ ಲಿಂಗಕ್ಕಿಡಿಯೆ ಚೆನ್ನ
ಲಿಂಗವಸನದಂತರಂಗವಸನ ತರಿಸಿದಿಯೆ ಚೆನ್ನ
ಲಿಂಗದರ್ಚನೆ ಗುದಕವ ತರ ಪೋದೆಯೆ ಚೆನ್ನ
ಲಿಂಗನಿಮಿತ್ತ ಕುಸುಮಾರಾಮ ವಿರಚಿಸ ಹೋದೆಯೆ ಚೆನ್ನ
ಬಸವಯ್ಯನಾಚರಣೆ ಸೊಗಸಾಗದಾಗಿ ಹೋದೆಯೆ
ಗಂಗಾಪ್ರಿಯ ಕೂಡಲಸಂಗ ಚೆನ್ನ”[೪೨]

ಡಾ.ಶಕುಂತಲಾ ಹೆಗಡೆ ಈ ವಚನವನ್ನು ಕುರಿತು ಇಲ್ಲಿ ಚೆನ್ನ ಮತ್ತು ಚೆನ್ನಲಿಂಗ ಈ ಹೆಸರು ಈಕೆಯ ಮಗನ ಹೆಸರಾಗಿರಬೇಕು. ಆತನು ಐಕ್ಯವಾದದ್ದು, ಈಕೆಗೆ ದುಃಖ ಇಮ್ಮಡಿಸಿದಾಗ

ಈ ಚೆನ್ನ ಎಂಬ ಪದ ಬಳಸಿರಬೇಕು ಎಂದು ಹೇಳುತ್ತಾ, ಹೀಗೆ ಅಭಿಪ್ರಾಯಪಡುತ್ತಾರೆ. "ಗಂಗಾಂಬಿಕೆ ಆಚಾರ ಪತ್ನಿ, ವೀರಶೈವ ಧರ್ಮದಲ್ಲಿ ಆಚಾರವು ಲಿಂಗರೂಪವನ್ನು ಹೊಂದಿದೆ. ಅಂತರಂಗದ ಅರಿವಿಗೆ ಆಚಾರವು ಸಾಧನವಾದುದು. ಆಚಾರ ಲಿಂಗಕ್ಕೆ ಅನುಗುಣವಾಗಿ ಪೂಜೆಯ ವ್ಯವಸ್ಥೆಯನ್ನು ಮಾಡಿದೆಯಾ ಎಂದು ಈ ವಚನದಲ್ಲಿ ಮಗನಿಗೆ ಕೇಳುತ್ತಾಳೆ. ಲಿಂಗದೊಳಗಾದ ಮಗನನ್ನು ಕುರಿತು ಲಿಂಗ ನಿಮಿತ್ತದಲ್ಲಿ ವಿಶ್ರಮಿಸಲು ಹೋದೆಯಾ ಎಂದು ಅವಳು ಕೇಳುತ್ತಾ ಲಿಂಗೈಕ್ಯ ಹೊಂದಿದ ಮಗನಿಗೆ ಹಂಬಲಿಸುತ್ತಾಳೆ ಗಂಗಾಂಬಿಕೆ. 'ಬಸವಯ್ಯ ನಾಚರಣೆ ಸೊಗಸಾಗದೆ ಹೋದೆಯ' ಎಂದು ಕೇಳುವ ಮುಂದಿನ ಸಾಲು ಹೃದಯ ವಿದ್ರಾವಕವಾದುದು. ಮಗನು ಹೋಗಲು ಇದು ಒಂದು ಕಾರಣವಾಗಿರಬಹುದೇ ಎಂದು ಸೂಕ್ಷ್ಮವಾಗಿ ವಿಚಾರ ಮಾಡುತ್ತಾಳೆ. ಇಲ್ಲಿ ಚೆನ್ನ ಎಂಬುದು ಪ್ರತಿ ಸಾಲಿಗೂ ಬಂದಿರುವುದರಿಂದ ಅವಳಿಗೆ ಕಂದನನ್ನು ಕಳೆದುಕೊಂಡಿರುವ ದುಃಖವೆಷ್ಟಿದೆಯೆಂದು ಗುರುತಿಸಬಹುದು."[೪೩]

ಇಲ್ಲಿ ಲಿಂಗವಸನವೆಂದರೆ ಅಂತರಂಗದ ವಸನ. ಹಾಗೆ ಲಿಂಗದರ್ಚನೆಗೆ ಉದಕವ ತರುವೆಯಾ? ಲಿಂಗಕ್ಕಾಗಿ ವಿಶೇಷ ಆವರಣಗಳನ್ನು ಮಾಡಿಕೊಳ್ಳುವೆಯಾ ಎಂದು ಹೇಳುತ್ತಿರುವುದು ತನ್ನ ಕಂದ ಚೆನ್ನಲಿಂಗನಿಗೆ ಎಂದು ಭಾಸವಾಗುತ್ತದೆ. ಹಾಗೆ ಬಸವಣ್ಣನವರು ಹೇಳಿದ ಆಚರಣೆ ನಿನಗೆ ಸರಿಹೋಗಲಿಲ್ಲವೇ! ಇಲ್ಲಿ ಚೆನ್ನ ಎಂಬುದು ಆಕೆಯ ಮಗನಾದ ಚೆನ್ನಲಿಂಗನೇ ಎಂದು. ಈ ವಚನ ಸ್ಪಷ್ಟವಾಗಿ ಮಗನು ತೀರಿಹೋದುದರ ದುಃಖ ಸೂಚಕವಾಗಿ ಲಿಂಗಾರ್ಚನೆಗೆ ನೀರು ತರಲು ಹೋದೆಯ ವಿಶೇಷ ಆವರಣ ರಚಿಸಲು ಹೋದೆಯಾ? ಬಸವಣ್ಣನ ಆಚರಣೆ ಬೇಸರವಾಯಿತೆ ಎನ್ನುತ್ತಾಳೆ. ಲಿಂಗದ ವಸನವನ್ನೆ ಅಂತರಂಗದ ವಸನವಾಗಿಸಿದೆಯಾ ಎನ್ನುತ್ತಲೇ ಲಿಂಗ ಕುಸುಮವಾದೆಯಾ ಎಂದಿರಬಹುದು ಅಥವಾ ತನ್ನದು ಆಚಾರವೇ ಲಿಂಗ ಎಂಬುದನ್ನು ಸ್ಪಷ್ಟಪಡಿಸಿ ತಾನು ಆಚಾರಪತ್ನಿ ಎಂಬುದನ್ನು ಹೇಳಿದ್ದಾಳೆ. ಆ ಕ್ಷಣದ ಅಗತ್ಯತೆಗೆ ಅನುಗುಣವಾಗಿ ಕಾರ್ಯ ಹೆಚ್ಚು ಮಹತ್ವ ಎಂಬುದು ಆಕೆಯ ಮೊದಲ ವಾಕ್ಯ ದೃಢಪಡಿಸುತ್ತದೆ ಹಾಗೂ ಲಿಂಗದ ಮುಖಿಯಾಗಿಯೇ ನೀನು ಹೋದೆಯಾ ಎಂಬ ಮನದಾಳದ ವಿಚಾರಗಳನ್ನು ತಿಳಿಸಿ ಹೇಳಿದ್ದಾಳೆ.

**ಈ. ಗಂಗಾಂಬಿಕೆ ವಚನಗಳಲ್ಲಿ ಶರಣರನ್ನು ಕುರಿತ ನಿಲುವು**

ಇಲ್ಲಿ ಶರಣ ಚಳುವಳಿಯ ನೇತಾರ ಹಾಗೂ ಪತಿ ಬಸವಣ್ಣನನ್ನು ಕುರಿತು ಹಾಗೂ ಈತನ ವ್ಯಕ್ತಿತ್ವವನ್ನು ಬಿಂಬಿಸಿದ್ದಾಳೆ. ಹಾಗೆ ಸಿದ್ಧರಾಮ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯರ ಕುರಿತಾಗಿ ಮತ್ತು ಅವರ ಕಾರ್ಯ ವೈಖರಿಯನ್ನು ಹಾಗೂ ಆತ್ಮಸ್ಥೈರ್ಯದ ನುಡಿಗಳೊಂದಿಗೆ ವಚನ ಚಳುವಳಿಯ ಮುಂಚೂಣಿಯಲ್ಲಿ ಬರುವಂತೆ ಮಡಿವಾಳಯ್ಯನ ಬಗೆಗೆ ಈಕೆಯ

ವಚನವೇ ಪ್ರೇರಣೆಯಾಗಿರಬೇಕು ಎಂಬುದನ್ನು ಕಾಣಬಹುದು. ಹಾಗೆ ಈ ವಚನಗಳ ಧ್ವನಿ ವ್ಯಕ್ತಿನೆಲೆ ಕಾರ್ಯಶೀಲತೆ, ವ್ಯಕ್ತಿತ್ವ, ಜಾಗ್ರತೆಯನ್ನು ಮೂಡಿಸುವ ನಿಲುವುಗಳನ್ನು ಇಲ್ಲಿ ಕಾಣುತ್ತೇವೆ. ಚೆನ್ನಬಸವಣ್ಣನ ಜ್ಞಾನ, ವಿಚಾರಶೀಲತೆ ಈಕೆ ಈತನನ್ನು ತನ್ನ ಶಿಶುವಾಗಿದ್ದಾರೆ ಎಂದು ಹೇಳಿದ್ದು, ಅಲ್ಲದೆ ಆಧ್ಯಾತ್ಮಿಕ ಪ್ರತಿಭೆಯ ತಾಯಿಯಾಗಲು ಹಂಬಲಿಸಿದ್ದಾಳೆ. ಹಾಗೆ ಆತ್ಮಸಾಕ್ಷಾತ್ಕಾರದ ಮಹೋನ್ನತಿಯನ್ನು ಪಡೆಯಲು ಅಲ್ಲಮನ ದಿಗ್ದರ್ಶನ ಬಯಸಿದ ಆಕೆಯ ವಚನ ಇಂತಿದೆ.

"ನಮ್ಮಯ್ಯನ ಮನದಲ್ಲಿ, ಮಾತಿನಲ್ಲಿ ಸೂಸುವ ಮೂರ್ತಿ
ನೋಡ ನೋಡುತ್ತ ಬಯಲಾಯಿತ್ತಲ್ಲಾ
ಇದು ಅಲ್ಲಮಯ್ಯ ಮಾಡಿದ ಬೇಟ
ಹೋದುದು ನಿಶ್ಚಯವಾದಡೆ, ಕರುಳು ಕಳವಳಿಸುತ್ತಿದ್ದವು.
ಇಂತಪ್ಪ ಕಂದ ಪೋದಡೆಯೂ ಪೋಗಿಲ್ಲ
ಗಂಗಾಪ್ರಿಯ ಕೂಡಲ ಸಂಗನ ಶರಣಳ
ಮೊಲೆಯನುಂಬುದಕ್ಕೆ ಬಾರ, ಕೇಳಾ ಚೆನ್ನಬಸವಣ್ಣ"[೪೪]

ಈ ವಚನ ಅಲ್ಲಮನು ಬಸವಣ್ಣನವರನ್ನು ಭೇಟಿ ಮಾಡಿ ಅನುಭವ ಮಂಟಪದಲ್ಲಿ ಸ್ವಲ್ಪ ಕಾಲ ತಂಗಿದ್ದಾಗಿನ ಸಂದರ್ಭವೆನ್ನಬಹುದು. ಒಂದು ಸುಂದರಮೂರ್ತಿ(ಮಗು) ನೋಡ ನೋಡುತ್ತಲೇ ಇಲ್ಲವಾಯಿತು. ಇದು ಆಕೆಯ ಮಗು ಎನ್ನುವುದಕ್ಕಿಂತ ಮಗನಂತಿದ್ದ ಚೆನ್ನಬಸವಣ್ಣನನ್ನೆ ಕುರಿತದ್ದು ಎನ್ನಬಹುದು. ಚೆನ್ನಬಸವಣ್ಣ ಆಧ್ಯಾತ್ಮಿಕ ಮೂರ್ತಿ, ಆಧ್ಯಾತ್ಮಿಕ ಪ್ರಪಂಚಕ್ಕೆ ಅವನಿಗೆ ಅಲ್ಲಮಯ್ಯನು ಗುರುದೇವನು, ಅಂತಹ ವ್ಯೋಮ ಮೂರುತಿ ಎಲ್ಲಿ ಹೋದ, ಹೋದದ್ದು ನಿಜವಾದರೆ ಕರುಳೇ ಹಿಂಡಿದಂತಾಗುತ್ತದೆ. ಹೋದ ಜಾಗ ಕೂಡ ಪರಿಚಯದ ಜಾಗವಲ್ಲ, ಹಾಗಾದರೆ ಕಂದ ಎಲ್ಲಿ ಹೋದ? ಶರಣರ ವಚನಾಮೃತವನ್ನು ಉಣ್ಣುಬಾರಾ ಎಂಬುದು ವಚನಾರ್ಥವಾಗಿದೆ. ಈ ಮಾತುಗಳು ಚೆನ್ನಬಸವಣ್ಣನಿಗೆ ಹೇಳಿದ್ದು ಆಗಿದೆ ಎಂಬುದಕ್ಕೆ ಡಾ.ಪ್ರೀತಿಶುಭಚಂದ್ರರ ಮಾತು ಇಂತಿದೆ.

"ಚನ್ನಬಸವಣ್ಣನ ಸಾಧನೆಯ ಉನ್ನತಿಯನ್ನು ಆದರ್ಶವಾಗಿಟ್ಟುಕೊಂಡು ಗಂಗಾಂಬಿಕೆ? ಆ ಅನುಭಾವಜ್ಞಾನ ಶಿಶುವಿನ ಮಾತೆ ತಾನಾಗಬೇಕೆಂದು ಹಂಬಲಿಸಿದಳು. ಅಲ್ಲಮನಂತಹ ಮಹಾಸಾಧಕನ ಮಾರ್ಗದರ್ಶನದಿಂದ ಪಕ್ವವಾದ ಆಕೆಯ ಚೇತನದ ಅನುಭಾವಿಕ ಹಂಬಲ"[೪೫] ವನ್ನು ಪಡೆಯಬೇಕೆಂದು ತಿಳಿಸಿದರೆ, ಪ್ರೊ.ಲಲಿತಾಂಬ ವೃಷಭೇಂದ್ರಸ್ವಾಮಿಯವರು "ಚೆನ್ನಬಸವಣ್ಣ ನನ್ನು ತನ್ನ ಮಗ ಸತ್ತಿಲ್ಲ ಎಂದು ನನ್ನ ಕರುಳು ಹೇಳುತ್ತದೆ. ಅವನನ್ನು ಮೊಲೆಯುಂಬುದಕ್ಕೆ ಬರಲು ಹೇಳೆಂದು ಕೇಳಿರುವುದು, ಮಗನ ಮೇಲಿನ ತಾಯಿಯ ಮೋಹ ಮತ್ತು ಮಮತೆಯನ್ನು

ತೋರಿಸುತ್ತದೆ.[೪೬] ಇವರ ಅಭಿಪ್ರಾಯದಂತೆ ಚೆನ್ನಬಸವಣ್ಣನಿಗೆ ನನ್ನ ಮಗನ ಸಾವು ಆಗಿಲ್ಲ ಎಂದು ನನ್ನ ಮನ ಹೇಳುತ್ತದೆ. ಬೇಗ ಕರೆದು ತಾ ಎಂದು ಹೇಳುತ್ತಾಳೆ. ಆದರೆ ಡಾ.ಪ್ರೀತಿಶುಭ ಚಂದ್ರ ಚೆನ್ನ ಬಸವಣ್ಣನಿಗೆ ಮಗನೆಂದಳು ಅಂದರೆ ಇವರು ಬೇರೆ ಮಗನಿದ್ದಾನೆ ಎಂದು ಹೇಳುತ್ತಾರೆ. ಗಂಗಾಂಬಿಕೆಯ ವಚನಗಳು ಎಂಬ ಪುಸ್ತಕದ ಸಂಪಾದಕರಾದ ಎಸ್.ಎಸ್.ಮಟ್ಟಿ, ಎಸ್.ಎಸ್.ಭೂಸರಡ್ಡಿಯವರು ಗಂಗಾಂಬಿಕೆ ಮಗನ ಅಗಲುವಿಕೆಯಿಂದಾಗಿ ಆಕೆಯಲ್ಲಿ ದುಃಖ ಇಮ್ಮಡಿಯಾಯಿತು. ಈ ಸಂದರ್ಭವನ್ನು ಚೆನ್ನಬಸವಣ್ಣನಿಗೆ ತನ್ನ ನೋವನ್ನು ಹೇಳಿರುವ ವಚನವಾಗಿದೆ ಎಂದು ತಿಳಿಸುತ್ತಾ ಈ ಮಾತುಗಳನ್ನು ಹೇಳಿತ್ತಾರೆ. "ತನ್ನ ಹೃದಯ ಬಟ್ಟಲ ದೊಳಿಟ್ಟು ಜೋಕೆ ಮಾಡಿ ಬೆಳೆಸಿದ ಷಟ್‌ಸ್ಥಲ ಚಕ್ರವರ್ತಿ ಚಿನ್ಮಯ ಮೂರುತಿ ಚೆನ್ನಬಸವಣ್ಣನೊಂದಿಗೆ ತನ್ನ ಅಳಲನ್ನು ತೋಡಿಕೊಂಡಿದ್ದಾಳೆ. 'ಇದು ಅಲ್ಲಮಯ್ಯ ಮಾಡಿದ ಬೇಟ ಎಂಬುದನ್ನು ಹೇಳಲು ಆಕೆ ಮರೆತಿಲ್ಲ."[೪೭] ಇವರ ಅಭಿಪ್ರಾಯವೂ ಕೂಡ ಚೆನ್ನಬಸವಣ್ಣ ನೊಂದಿಗೆ ದುಃಖ ಹಂಚಿಕೊಂಡಿರುವುದು ಎಂಬುದಾಗಿದೆ.

ಶಾಂತಾದೇವಿ ಮಾಳವಾಡರು ಗಂಗಾಂಬಿಕೆಗೆ ಮಗನು ಇಲ್ಲದ್ದರಿಂದ ಚೆನ್ನಬಸವಣ್ಣನನ್ನೆ ಮಗನೆಂದು ನಂಬಿದ್ದಳು ಎಂದು ಹೇಳುತ್ತಾ "ಮಕ್ಕಳಿಲ್ಲದ ಗಂಗಾಂಬಿಕೆ ಜ್ಞಾನನಿಧಿ ಚೆನ್ನಬಸವಣ್ಣನನ್ನು ತನ್ನ ಹೊಟ್ಟೆಯ ಮಗನಂತೆಯೇ ವಾತ್ಸಲ್ಯದಿಂದ ಬೆಳೆಸಿದಳೆಂಬುದಕ್ಕೆ ಆಕೆಯ ಈ ವಚನ ಸಾಕ್ಷಿಯಾಗಿದೆ."[೪೮] ಎಂದು ಅಭಿಪ್ರಾಯಪಡುತ್ತಾರೆ. ಹಾಗೆ ಡಾ.ಶಕುಂತಲಾ ಹೆಗಡೆ ಇವರಿಗಿಂತ ಭಿನ್ನವಾದ ಅಭಿಪ್ರಾಯ ನೀಡುತ್ತಾರೆ. "ಗಂಗಾಂಬಿಕೆಯ ಇಲ್ಲಿ ಭಕ್ತಿಯ ಸ್ವರೂಪವನ್ನು ಶರಣರು ಅನೇಕ ವಿಧವಾಗಿ ವರ್ಣಿಸಿದ್ದಾರೆ. ಅಷ್ಟಾವರ್ಣಗಳನ್ನು ಅರಿತು, ಪಂಚಾಚಾರಗಳನ್ನು ಅಳವಡಿಸಿಕೊಂಡು ಷಟ್‌ಸ್ಥಲಗಳ ಒಂದೊಂದೇ ಮೆಟ್ಟಿಲನ್ನು ಏರಿ, ಶೂನ್ಯ ಸ್ಥಿತಿಯನ್ನು ತಲುಪಿದ್ದಾಳೆ ಗಂಗಾಂಬಿಕೆ. ಇಂಥ ನಿಲುವಿಗೇರಿ ನಿಂತ ಅವಳು ಪರಮಾತ್ಮನ ಮೇಲೆ ಇಟ್ಟುಕೊಂಡಿರುವ ಭಕ್ತಿಯನ್ನು ವಾತ್ಸಲ್ಯ ಭಾವದಲ್ಲಿ ಕಂಡುಂಡು ಈ ವಚನದಲ್ಲಿ ನಿರೂಪಿಸಿದ್ದಾಳೆ. ಅಲ್ಲದೆ ಅವಳು ಈ ವಚನದಲ್ಲಿ ಚನ್ನಬಸವಣ್ಣನಿಗೆ ಹೇಳಿದ್ದು ನೋಡಿದರೆ, ಅವಳಿಗೆ ಅವನ ಮೇಲಿರುವ ಪ್ರೀತಿ–ವಾತ್ಸಲ್ಯ ವ್ಯಕ್ತವಾಗುತ್ತದೆ."[೪೯]

ಗಂಗಾಂಬಿಕೆಯ ಈ ವಚನವನ್ನು ಇನ್ನೊಂದು ಅರ್ಥದಲ್ಲಿ ನೋಡಬಹುದು. ತನ್ನ ಮಗು ಸಾವನ್ನಪ್ಪಿದ ದುಃಖವನ್ನು ವ್ಯಕ್ತಪಡಿಸಿ, ನನ್ನ ಮಗುವಿನ ಅಗಲುವಿಕೆ, ಹೇಗೆ ಆಯಿತು ಎಂಬ ಕಳವಳ ಕೂಡ ಇರಬಹುದು. ಅಲ್ಲಮ, ಬಸವಣ್ಣ, ನೀನು ಚೆನ್ನಬಸವಣ್ಣನನ್ನು ಮಗನಂತೆ ಭಾವಿಸು, ಅವನು ಹೊಟ್ಟೆಯ ಮಗ, ಈತನು ಜ್ಞಾನದ ಆಗಸದಲ್ಲಿರುವ ಮೂರ್ತಿ, ನೋಡ ನೋಡುತ್ತಲೇ ಬಯಲಾಗಿತ್ತು, ಎಂದರೆ ಅಜ್ಞಾನವೆಂಬುದು ಹೋಗಿತ್ತು. ಅದು

ಅಲ್ಲಮನ ಆಟ-ನೋಟ, ಕೃಪೆಯಿಂದ. ಹಾಗಾಗಿ ನಾನು ಜ್ಞಾನದ ಸವಿಯನ್ನು ಪಡೆಯುವ ಹಂಬಲವಿದೆ. ಬೇಗ ಬಾ, ನೀನು ಜ್ಞಾನಾಮೃತ ನೀಡು, ನಾನು ಅಮೃತಧಾರೆಯ ಪ್ರೀತಿಯ ಹಾಲನ್ನು ನೀಡುವೆ. ಸವಿಯಲಿಕ್ಕೆ ಬಾರ ಎಂಬುದಾಗಬಹುದು. ಆದರೆ ಚೆನ್ನಬಸವಣ್ಣನ ಅರ್ಥ ತೆಗೆದುಕೊಂಡರೆ, ಎಲ್ಲಿಗೆ ಹೋಗಿದ್ದ ಎಂಬುದು ಪ್ರಶ್ನೆ. ಇದರ ಸಂದರ್ಭವನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಮುಂದುವರಿದು ನೋಡಿದರೆ ಈಕೆಯ ಅಧ್ಯಾತ್ಮದ ಔಚಿತ್ಯಪೂರ್ಣವಾದ ವಚನ ವಿಶ್ಲೇಷಣೆಯಾಗಿದೆ.(ತಾತ್ವಿಕ ನೆಲೆಗಟ್ಟಿನ ವಚನ ಇದು ಆಗಿದ್ದರಿಂದ ಭಾವುಕ ರೀತಿಯಲ್ಲಿ ಮೇಲ್ನೋಟದಲ್ಲಿ ಹೇಳಿದರೆ, ಆಂತರಿಕವಾಗಿ ದುಃಖ ಮರೆತು ಜ್ಞಾನದ ಖಣಿಯಾಗಲು ಹಂಬಲಿಸುವಂತದ್ದು ಇರಬಹುದು.

"ಬಸವಣ್ಣನ ಕೈಹಿಡಿದ ಗಂಗಾಂಬೆಗೆ ಮನೆಯು ಬರೇ ಮನೆಯಲ್ಲ; ಮಹಾ ಮನೆಯಾಯ್ತು. ದಂಪತಿಗಳ ಸರಸ ಸಲ್ಲಾಪದ ಏಕಾಂತದ ರಸನಿಮಿಷಗಳಿಗೆ ಅಲ್ಲಿ ಅವಕಾಶವೇ ಇಲ್ಲ. ಭಕ್ತಿ ಸಾಧನೆಯ ನಾನಾ ಹಂತದ ವ್ಯಕ್ತಿಗಳು ಬಂದು ತಮ್ಮ ಅನುಭವವನ್ನು ಬಿಚ್ಚಿಡುವ, ಬೆಲೆಗಟ್ಟುವ, ಅರ್ಥೈಸುವ 'ಅನುಭವ ಮಂಟಪ'ದಂತಹ ವ್ಯಾಪಕ ನೆಲೆ ಗಂಗಾಂಬಿಕೆಯ ದಾಂಪತ್ಯ ಜೀವನ ಕ್ಕೊದಗಿತ್ತು. ಅನುಭವ ಮಂಟಪದ ಜ್ಞಾನದಾಸೋಹ ಕಾರ್ಯದಲ್ಲಿ ಪತಿಯೊಡನೆ ಸರಿಸಮಾನವಾಗಿ ಕಾರ್ಯ ನಿರ್ವಹಿಸಬಲ್ಲ ಎತ್ತರಕ್ಕೆ ಆಕೆ ಏರಿದಳು. ಕಾಯಕದ ನೇಗಿಲಿಗೆ ಹೆಗಲೊಡ್ಡಿ ಭಕ್ತಿಯ ಬೆಳೆಯನ್ನು ಬೆಳೆಯ ಹೊರಟ ಬಸವಣ್ಣನ ಶ್ರಮವನ್ನು ಕಂಡಾಗ ಆಕೆಯ ಹೆಂಗರುಳು ಚುರ್ರೆಂದಿರಬೇಕು. ನಿಟ್ಟುಸಿರಿನೊಡನೆ ಗಂಗಾಂಬಿಕೆ ಈ ಮಾತುಗಳನ್ನು ಉಸುರಿದ್ದಾಳೆ."[೫೦]

ಇಲ್ಲಿ ಕೂಡ ಕಲ್ಯಾಣಕ್ರಾಂತಿಯ ಸಂದರ್ಭ ಗ್ರಹಿಸಬಹುದಾಗಿದೆ. ಮನಮಾತಿನಲ್ಲಿ ಎದ್ದುಕಾಣುವ ಬಸವಣ್ಣನವರು ನೋಡುನೋಡುತ್ತಲೇ ಕಾಣದಾದರು, ಇದು ಅಲ್ಲಮ್ಮಯ್ಯ ಮಾಡಿದ ಯೋಚನೆಯೇ, ಒಂದೊಮ್ಮೆ ಸತ್ಯವಾದರೆ, ಎಲ್ಲಿಗೆ ಹೋದರು ಕಂದ ಹೋದ ಕಡೆಗೆ ಹೊಗಿಲ್ಲ. ಅಂದರೆ ಮತ್ತೆ ಬರುತ್ತಾರೆಂಬ ವಿಶ್ವಾಸ, ಹಾಗಾದರೆ ಶರಣರ ಆಧ್ಯಾತ್ಮದಮೃತ ಉಣ್ಣಲು ಬರಬೇಕು ಎಂಬುದು ಅವಳ ತರ್ಕ. ಕೊನೆಯಲ್ಲಿ ಕೇಳು ಬಸವಣ್ಣಾ ಎಂಬುದರಿಂದ ಇದು ಒಂದರ್ಥ ಇನ್ನೊಂದು ಚೆನ್ನಬಸವಣ್ಣನನ್ನು ಕುರಿತು ಹೇಳಿರಬಹುದು. ಮಗನೆಂಬ ಅರ್ಥವಿಲ್ಲ ಕಾರಣ ಇಂತಪ್ಪ ಕಂದ ಪೋದಡೆಯೂ ಪೋಗಿಲ್ಲಾ ಎಂಬುದರಿಂದ ಮಗನಿಗೆ ಹೋಲಿಸಿ ಹೇಳುತ್ತಿದ್ದಾಳೆ. ಒಟ್ಟಿನಲ್ಲಿ ಇದು ಕಲ್ಯಾಣ ಕ್ರಾಂತಿಯ ದುರ್ಭರ ಪ್ರಸಂಗವೇ.

"ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೋ
ಮಾದಲಾಂಬಿಕಾನಂದನನು?
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ

ನೋಳ್ಪನೆಂತೊ
ಮಾದರಸನ ಮೋಹದ ಮಗನು?
ಸಾಂದ್ರವಾಗಿ ಲಿಂಗರ್ಚನೆ, ಲಿಂಗತೃಪ್ತಿ
ಅನುಗೆಯ್ವನೆಂತೊ
ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ"[೫೧]

ಪ್ರೊ.ಎಸ್.ಎಸ್.ಮಟ್ಟಿ, ಪ್ರೊ.ಎಸ್.ಎಸ್.ಭೂಸರಡ್ಡಿಯವರ ಸಂಪಾದಿತ ಗಂಗಾಂಬಿಕೆಯ ವಚನಗಳು ಪುಸ್ತಕದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. "ಐತಿಹಾಸಿಕ ದಾಖಲೆಯುಳ್ಳ ಅತ್ಯಂತ ಮಹತ್ವದ ವಚನವಿದು. ಗಂಗಾಂಬಿಕೆ ತನ್ನ ಪತಿಯ ಬಗೆಗಿನ ಉತ್ಕಟ ನಿಷ್ಠೆಯನ್ನು ಭಕ್ತಿಯನ್ನು ವ್ಯಕ್ತಪಡಿಸಿದ್ದಾಳೆ. ಬಸವಣ್ಣನವರ ಕಾರ್ಯಕ್ಷೇತ್ರ ವಿಶಾಲವಾದದ್ದು, ಎಷ್ಟೆಷ್ಟು ವಿಧವಾದ ಪಾತ್ರಗಳನ್ನು ಬಸವಣ್ಣ ಹೇಗೆ ಆಡುವನೋ ಎಂದು ಗಂಗಾಂಬಿಕೆಗೆ ಅಚ್ಚರಿ! ಒಂದೆಡೆ ಮಂತ್ರಿಯ ಕಾರ್ಯ, ಇನ್ನೊಂದೆಡೆ ಲಿಂಗಜಂಗಮರ ಸೇವೆ, ಬಸವಣ್ಣನ ಅಪೂರ್ವ ಶಕ್ತಿಯ ಬಗೆಗೆ ಮೆಚ್ಚುಗೆ; ಅನುಕಂಪ ಬಸವಣ್ಣನವರ ತಂದೆ ತಾಯಿಗಳ ಹೆಸರು ಇಲ್ಲಿ ಸ್ಪಷ್ಟಗೊಂಡಿದೆ. ಗಂಗಾಂಬಿಕೆಯ ಲೌಕಿಕ ಪ್ರಜ್ಞೆಯ ಪ್ರತೀಕವಾಗಿ ಈ ವಚನ ಮೂಡಿಬಂದಿದೆ."[೫೨] ಇವರ ಅಭಿಪ್ರಾಯದಂತೆ ಬಸವಣ್ಣನ ಕಾರ್ಯಕ್ಷೇತ್ರವನ್ನು ಹಾಗೂ ಈತನ ತಂದೆ ತಾಯಿಯ ಹೆಸರನ್ನು ತಿಳಿಸುವುದರೊಂದಿಗೆ, ಆತನ ಕಾರ್ಯವೈಖರಿ ಕಂಡು ಆಶ್ಚರ್ಯ ಪಡುತ್ತಾರೆ. ಅದೇ ರೀತಿ ಶಾಂತಾದೇವಿ ಮಾಳವಾಡರು ಕೂಡಾ "ಬಸವಣ್ಣನು ಮಂತ್ರಿಕಾರ್ಯದ ಹೊಣೆಯನ್ನು ಅನುಭವ ಮಂಟಪದ ಕಾರ್ಯಕಲಾಪಗಳನ್ನು ಮಹಾಮನೆಯ ದಾಸೋಹವನ್ನು, ಲಿಂಗ ಪೂಜೆಯನ್ನು ಏಕನಿಷ್ಠೆಯಿಂದ ಗೈವುದನ್ನು ಕಂಡ ಗಂಗಾಂಬಿಕೆ ಬಹಳ ಸುಂದರವಾಗಿ, ಹೃದಯಂಗಮವಾಗಿ ನಿರೂಪಿಸಿದ ವಚನ"[೫೩]

ಪ್ರೊ.ಶ್ರೀಮತಿ ಎಚ್.ಎಂ.ಬಿಳಗಿಯವರು ಈ ವಚನದಲ್ಲಿ ಬಸವಣ್ಣನ "ಬಹುಮುಖವಾದ ಕಾರ್ಯಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡ ಬಸವಣ್ಣನವರ ಅಗಾಧ ಶಕ್ತಿಗೆ ತಲೆಬಾಗುತ್ತಾಳೆ."[೫೪] ಈ ವಚನದ ಮೂಲಕ ಬಸವಣ್ಣನ ಅಮೋಘಕಾರ್ಯಕ್ಕೆ ಅಂದರೆ, ಕಾಯಕ, ದಾಸೋಹ, ಸಮಾಜ ಚಿಂತನೆ ಕಂಡು ತಲೆಬಾಗಿರಬಹುದು ಎಂದು ಹೇಳುತ್ತಾರೆ. ಡಾ.ಶಕುಂತಲಾ ಹೆಗಡೆಯವರು ಬಸವಣ್ಣ ತನ್ನನ್ನು ಈ ಸಮಾಜಕ್ಕೆ ಅರ್ಪಿಸಿದ ವ್ಯಕ್ತಿಯಾಗಿದ್ದಾನೆ. ಈತನ ವ್ಯಕ್ತಿತ್ವವನ್ನು ಕಂಡು ಗಂಗಾಂಬಿಕೆ ಬೆರಗಾಗಿ ಈ ವಚನ ಹೇಳಿದ್ದಾಳೆ ಹಾಗೂ ಬಿಜ್ಜಳನ ದಂಡನಾಯಕನಾಗಿ, ಕಾರ್ಯದಕ್ಷತೆ ಬಹಳ ಚುರುಕಾಗಿದ್ದು, ಹಾಗೂ ಆತ್ಮಜ್ಞಾನ ಪಡೆಯಲಿಕ್ಕೆ ಅನುಭವಮಂಟಪ, ಲಿಂಗಾನಂದದ ಮೂಲಕ ಸಂತೃಪ್ತತೆ ಕಂಡು ಗಂಗಾಂಬಿಕೆ ಈ ವಚನ

[illegible]

ಹೇಳಿದ್ದಾಳೆ ಎಂದು ಅಭಿಪ್ರಾಯಪಡುತ್ತಾ, "ಇಲ್ಲಿ 'ಮಾದರಸನ ಮಗ ಮಾದಲಾಂಬಿಕೆಯ ಮುದ್ದಿನ ಮಗ' ಎಂದು ಆತ್ಮೀಯತೆಯಿಂದ ಬಸವಣ್ಣನನ್ನು ಸಂಬೋಧಿಸಿ ನುಡಿದಿದ್ದರಿಂದ, ಆತನ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. ಅಲ್ಲದೆ ಆತನ ಕಾರ್ಯಕ್ಷಮತೆಯ ಅರಿವಾಗುತ್ತದೆ."[೫೫] ಇವರ ಅಭಿಪ್ರಾಯದಂತೆ ಬಸವಣ್ಣ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ ಎಂಬುದನ್ನು ಈ ವಚನ ತಿಳಿಸುತ್ತದೆ. ಅದೇ ರೀತಿ ಬಸವಣ್ಣನ ತಂದೆ ತಾಯಿ ಬಗ್ಗೆ ಕೂಡ ಸ್ಪಷ್ಟತೆಯಿದೆ.

ಈ ವಚನವನ್ನು ಇನ್ನೊಂದು ಅರ್ಥದಲ್ಲಿ ನೋಡುವುದಾದರೆ ಬಸವಣ್ಣನು ಬಿಜ್ಜಳನ ಆಸ್ಥಾನದಲ್ಲಿ, ಸರಿಯಾದ ಕರ್ತವ್ಯಶೀಲನು ಆಗಿದ್ದಾನೋ ಇಲ್ಲವೊ? ಅಂದರೆ ಕಲ್ಯಾಣ ಕ್ರಾಂತಿಯ ಪೂರ್ವದಲ್ಲಿ ಹಲವಾರು ವಿರೋಧಕ್ಕೆ ಒಳಗಾಗಿದ್ದ ಬಸವಣ್ಣನನ್ನು ಸೃಜನಶೀಲತೆಯಿಂದ ಕಾಯಕ ಮಾಡಲು ಬಿಡುತ್ತಾರೊ ಇಲ್ಲವೊ? ಹಾಗೆ ಸಾರ್ವತ್ರಿಕವಾಗಿ ಒಳ್ಳೆಯವನಾದ ಬಸವಣ್ಣನಿಗೆ ಲಿಂಗಾರ್ಚನೆ, ಜಂಗಮಸೇವೆ, ಲಿಂಗತೃಪ್ತಿಗೆ ಅಡೆತಡೆಗಳು ಬರುವಂತೆ ಬಾಸವಾದಾಗ ಈ ವಚನವನ್ನು ಹೇಳಿರಬೇಕು. ಇಲ್ಲಿ ಅಂಕಿತ ಕೊನೆಗೆ ಚೆನ್ನ ಎಂಬ ಪದ ಬಳಸಿರುವುದರಿಂದ ಚೆನ್ನಬಸವಣ್ಣನಿಗೆ ತನ್ನ ಪತಿಯ ತೊಂದರೆಯನ್ನು ಹೇಳಿರಬಹುದು.

ಗಂಗಾಂಬಿಕೆ ತನ್ನ ವಚನಗಳ ಮೂಲಕ ಕೆಲವು ವಿಷಯಗಳನ್ನು ತಿಳಿಸುತ್ತಾಳೆ. ಚಾರಿತ್ರಿಕಕ್ಕೆ ಸಂಬಂಧಿಸಿದಂತೆ ಕೆಲ ವಿಚಾರಗಳು ಇಲ್ಲಿ ಪ್ರಮುಖವಾಗಿವೆ. ಬಿಜ್ಜಳನ ವಿಚಾರ, ಕಲ್ಯಾಣ ಕ್ರಾಂತಿಗೆ ಸಂಬಂಧಿತ ವಿಚಾರ, ವಂಶವೃಕ್ಷಕ್ಕೆ ಸಂಬಂಧಿತ ವಿಚಾರ.

ಇಲ್ಲಿ ಬಸವೇಶ್ವರರು ಮಾದಲಾಂಬಿಕಾ ಹಾಗೂ ಮಾದರಸರ ಮಗನು ಎಂಬುದಾಗಿ ಸ್ಪಷ್ಟಪಡಿಸುತ್ತಾಳೆ. ಈ ಅಂಶ ಇಂಗಳೇಶ್ವರದ ಬಸವಣ್ಣನವರ ವಂಶವೃಕ್ಷದ ಕೋಷ್ಟಕಕ್ಕೆ ಸರಿ ಹೊಂದುತ್ತದೆ. ಅಲ್ಲದೆ ಕವಿಕಲ್ಪಿತ ಬಲದೇವ ಸಿದ್ಧರಸರು ಮಾದಲಾಂಬಿಕೆಗೆ ಸೋದರರಾಗುತ್ತಾರೆ. ಸೋದರ ಮಾವನೇ ಬಲದೇವ, ಸಿದ್ಧರಸರಾಗಿ ತಮ್ಮ ಹೆಣ್ಣು ಮಕ್ಕಳನ್ನು ಧಾರೆಯೆರೆಯುತ್ತಾರೆ. ಈ ಅಂಶ ಐತಿಹಾಸಿಕವಾಗಿ ಹಾಗೂ ಮೌಖಿಕನೆಲೆಯ chart ನಿಂದಾಗಿ ಪೂರಕವಾಗಿ ಸಾಧಿತವಾಗುತ್ತದೆ. ಅಲ್ಲದೇ ಗಂಗಮ್ಮನನ್ನು ಮಾವನ ಮಗಳಾಗಿ ಹಾಗೂ ದಂಡನಾಯಕನ ಮಗಳಾಗಿ ಚಿತ್ರಿಸಿರುವುದರಿಂದ ಅತ್ತೆ ಮಾವನ ಹೆಸರುಗಳನ್ನು ಗೌರವಸೂಚಕವಾಗಿ ಹಾಗೂ ಆತ್ಮೀಯ ಸಂಬಂಧದ ದ್ಯೋತಕವಾಗಿ ಆಕೆ ಸ್ಪಷ್ಟಪಡಿಸಿ ಸ್ಮರಿಸಿದ್ದಾಳೆ. ಎರಡನೆಯದಾಗಿ ಬಿಜ್ಜಳನ ವಿಚಾರ: ಇಲ್ಲಿ ಹರಗಣಭಕ್ತಿಯ ಮೂಲಕ ವಚನ ಚಳುವಳಿಯ ನೇತಾರತ್ವವನ್ನು ತಿಳಿಸಿದ್ದಾಳೆ. ಜಂಗಮ, ಶರಣ, ದಾಸೋಹ ಚಟುವಟಿಕೆಗಳನ್ನು ಏಕಕಾಲಕ್ಕೆ ಬಿಜ್ಜಳನರಮನೆಯ ನ್ಯಾಯದ ಮೂಲಕ ರಾಜಕಾರ್ಯಭಾರವನ್ನು ಸೂಚಿಸಿದ್ದಾಳೆ. ಬಿಜ್ಜಳನ ಎಂಬುದು ಹರಗಣಭಕ್ತಿ ಯಲ್ಲಿಯ ಕೆಲಸಕಾರ್ಯದೊಂದಿಗೆ ಸಮಾಜಮುಖಿ ಬಸವಣ್ಣ ಆಗಿದ್ದನು ಎಂಬುದನ್ನು ಗಂಗಾಂಬಿಕೆ

ತನ್ನ ವಚನದಲ್ಲಿ ಆಶ್ಚರ್ಯ ಚಕಿತಳಾಗಿ ಹೇಳಿದಂತೆ ತೋರುತ್ತದೆ. ಅಲ್ಲದೆ ಬಸವಣ್ಣ ವಿವಿಧ ಸಮಾಜೋಧಾರ್ಮಿಕ ಕಾರ್ಯದೊಂದಿಗೆ ಅರಮನೆಯಲ್ಲಿಯ ಕಾಯಕವನ್ನು ನಿಷ್ಠೆಯಿಂದ ಮಾಡಿದ್ದು ಈ ವಚನದಿಂದ ತಿಳಿದುಬರುತ್ತದೆ.

ಡಾ.ಪ್ರೀತಿಶುಭಚಂದ್ರರು ಗಂಗಾಂಬಿಕೆಯು ಸಿದ್ಧರಾಮನನ್ನು ಕುರಿತು ಹೇಳಿದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ. "ಮಹಾಮನೆಯ ಅನುಭವ ಮಂಟಪವು ಅತ್ಮಜ್ಞಾನದ ಬೆಳಗನ್ನು ಹೊತ್ತ ಹಲವು ಜೀವಿಗಳ ಸಂಗಮಕ್ಷೇತ್ರ. ಬೆಳಕು ಬೆಳಗನ್ನು ಕೂಡಿ ಬೆಳಗಿದ ಪ್ರಖರತೆ ಮತ್ತೂ ಹೆಚ್ಚುವಂತೆ ಶರಣರ ವ್ಯಕ್ತಿತ್ವ ಪರಸ್ಪರರಿಂದ ಪ್ರಭಾವಗೊಳ್ಳುತ್ತಿತ್ತು. ಕರ್ಮಯೋಗಿ ಸಿದ್ದರಾಮ ಜ್ಞಾನಯೋಗಿಯಾಗಿ ಮಹಾಮನೆಯ ಅತಿಥಿಯಾಗಿದ್ದ. ಆತನ ಆತ್ಮಶಕ್ತಿಯ ಪ್ರಭಾವಲಯ ಕ್ಕೊಳಗಾದ ಗಂಗಾಂಬಿಕೆ ಆತನನ್ನು ಮನದುಂಬಿ ಕೀರ್ತಿಸುತ್ತಾಳೆ."[೫೬] ಇಂತಹ ವಚನ ಹೀಗಿದೆ.

"ನೇತ್ರಮಧ್ಯದಲ್ಲಿ ಸೂಸುವ ತ್ರಿಣೇತ್ರನ ರೂಪವೇ ಸಿದ್ಧರಾಮಯ್ಯನಾದ
ಜಿಹ್ವೆ ಮಧ್ಯದಲ್ಲಿ ಸೂಸುವ ರುಚಿಯೇ ಸಿದ್ಧರಾಮಯ್ಯನಾದ
ಶ್ರೋತ್ರದಲ್ಲಿ ತುಂಬಿ ಪೂರೈಸುವ ಶಬ್ದವೇ ಸಿದ್ಧರಾಮಯ್ಯನಾದ
ಪ್ರಾಣದಲ್ಲಿ ತುಂಬಿ ತುಳುಕುವ ಮೂರ್ತಿಯೇ ಸಿದ್ಧರಾಮಯ್ಯನಾದ
ತ್ವಕ್ಕಿನಲ್ಲಿ ಅರಿವ ಮೂರ್ತಿಯೇ ಅಚ್ಚೊತ್ತಿದ ಸಿದ್ಧರಾಮಯ್ಯನಾದ
ಇಂತಪ್ಪ ಪರಶಿವಮೂರ್ತಿ ಸಿದ್ಧರಾಮಯ್ಯನ ಪಾದೋದಕವ
ಕೊಂಡು ಪರವಸ್ತು ನಾನಾದೆ, ಗಂಗಾಪ್ರಿಯ ಕೂಡಲಸಂಗಮದೇವ"[೫೭]

ಸಿದ್ಧರಾಮನ ವರಪ್ರಸಾದವನ್ನು ಈ ವಚನದಲ್ಲಿ ಹಾಡಿದ್ದಾಳೆ. ಸಿದ್ಧರಾಮಯ್ಯನ ಸ್ವರೂಪ ಶಿವನ ಮೂರನೇ ಕಣ್ಣಿಗೆ ಸಮಾನವಾದ ರೂಪ. ನಾಲಿಗೆಯಲ್ಲಿನ ಸ್ವಾದವೇ ಸಿದ್ಧರಾಮಯ್ಯ. ಕಿವಿಯಲಿ ಕೇಳುವ ಶಬ್ದವೇ ಸಿದ್ಧರಾಮಯ್ಯ ಘ್ರಾಣದಲ್ಲಿ ಬಿಂಬವೇ ಸಿದ್ಧರಾಮಯ್ಯ ಅರಿವಿನ ಮೂರ್ತಿಯೇ ಸಿದ್ಧರಾಮಯ್ಯ ಹೀಗೆ ಸರ್ವವಿಧದಲ್ಲಿ ಪರಶಿವನ ಮೂರ್ತಿಯೇ ಸಿದ್ಧರಾಮಯ್ಯ. ಅಂತವರ ಪಾದೋದಕವ ತೆಗೆದುಕೊಂಡು ನಾನು ನಾನಾಗಿಲ್ಲ ಎಂಬ ಮಾತನ್ನು ಹೇಳುತ್ತಾಳೆ. ಹಾಗೆ ಪ್ರೊ.ಲಲಿತಾಂಬರವರು "ಆಕೆಗೆ ಸಿದ್ಧರಾಮಯ್ಯ ಪರಮಪೂಜನೀಯನಾಗಿದ್ದ"[೫೮]ನೆಂದು ಹೇಳುತ್ತಾರೆ. ಶಾಂತದೇವಿ ಮಾಳವಾಡರು "ಸಿದ್ಧರಾಮೇಶನ ಆತ್ಮಶಕ್ತಿಯನ್ನು ಅರಿತುಕೊಂಡು ಗಂಗಾಂಬಿಕೆ"[೫೯] ಜ್ಞಾನಯೋಗಿಯಾದ ಸಿದ್ಧರಾಮನನ್ನು ತನು-ಮನದಿಂದ ಸ್ಮರಿಸಿದ್ದಾಳೆ ಎಂದು ಅಭಿಪ್ರಾಯಪಡುತ್ತಾರೆ. ಹಾಗೆ ಶಕುಂತಲ ಹೆಗಡೆಯವರು "ಸಿದ್ಧರಾಮಯ್ಯನ ಸ್ತುತಿ ಬಂದಿದೆ. ಪಂಚೇಂದ್ರಿಯಗಳಿಂದ ಹೊರಡುವ ರೂಪ, ರಸ, ಶಬ್ದ, ಗಂಧ ಸ್ಪರ್ಶವೆಲ್ಲ ಸಿದ್ಧರಾಮ ಮಯ

ವಾಗಿದೆ. ಆತನು ಸಾಕ್ಷಾತ್ ಪರಶಿವಮೂರ್ತಿ. ಅವನ ಪಾದೋದಕ ಕೊಂಡು ಧನ್ಯಳಾದೆನೆಂಬ ಭಾವ ಇಲ್ಲಿ ವ್ಯಕ್ತವಾಗಿದೆ."[೬೦] ಇವರ ಹೇಳಿಕೆಯಂತೆ ಸಿದ್ಧರಾಮಯ್ಯ ಪಂಚೇಂದ್ರಗಳನ್ನು ಗೆದ್ದಂತ ವ್ಯಕ್ತಿ, ಈತನು ಅಂತರಂಗ ಬಹಿರಂಗ ಶುದ್ಧನಾಗಿದ್ದನೆಂದು, ಸಾಕ್ಷತ್ ಶಿವನೇ ಆಗಿದ್ದನೆಂದು, ಹೇಳುತ್ತಾರೆ. ಆದರೆ ಇಲ್ಲಿ ಪಾದೋದಕ ಶಬ್ಧದ ಮಹತ್ವ ಬಹಳ ದೊಡ್ಡದು. ಅಷ್ಟಾವರ್ಣಗಳಲ್ಲಿ ಪಾದೋದಕ ಒಂದಾಗಿದೆ. ಇಲ್ಲಿ ಗುರುಲಿಂಗ ಜಂಗಮರು, ಪೂಜನೀಯ ವಸ್ತುಗಳು, ವಿಭೂತಿ, ರುದ್ರಾಕ್ಷಿ, ಮಂತ್ರ, ಸಾಧನ, ವಸ್ತುಗಳು ಪೂಜ್ಯನೀಯ ವಸ್ತುಗಳನ್ನು ಪೂಜಿಸಿದ ಫಲವೇ ಪಾದೋದಕ ಮತ್ತು ಪ್ರಸಾದವಾಗಿದೆ. ಇಂತಹ ಪವಿತ್ರತೆಯನ್ನು ಹೊಂದಲು ಸಿದ್ಧರಾಮನಲ್ಲಿಯ ಶಿವಜ್ಞಾನವು ಈಕೆಯನ್ನು ಪ್ರಭಾವಿತಗೊಳಿಸಿದೆ ಎನ್ನಬಹುದು.

ಸಿದ್ಧರಾಮಯ್ಯನ ಪ್ರಭಾವದಿಂದಾಗಿ ಆಕೆ ವೈಚಾರಿಕ ನಿಲುವನ್ನು ಅಥವಾ ಆಧ್ಯಾತ್ಮಿಕ ಒಲವನ್ನು ಪಡೆದುಕೊಂಡಿದ್ದಾಳೆ. ಹಾಗಾಗಿ ನಂತರದ ಒಂದೆರಡು ವಚನಗಳು ತಾತ್ವಿಕ ಚಿಂತನೆಯನ್ನು ಮೂಡಿಸುತ್ತವೆ. ಹಾಗೂ ಸ್ವಾಭಾವಿಕವಾಗಿಯೇ ಮನಸ್ಸು ಹರಿದಾಡಬಾರದು ಹಾಗೂ ಅವುಗಳ ವ್ಯಾಮೋಹ ಕಳೆದು ಮನವನೆಲ್ಲ ಸ್ವಚ್ಛಮಾಡಿ, ಶಿವನ ಒಲುಮೆ ಮಾಡಿಕೊಳ್ಳಬೇಕು. ಯಾಕೆಂದರೆ ಪರಶಿವಮೂರ್ತಿ ಎಂದಾಗ ಆತನಲ್ಲಿ ಈ ಗುಣವಿರುವುದ ರಿಂದಲೇ, ಶಿವ ಜೀವರ ಕೂಡುವಿಕೆಯು ಆದಲ್ಲಿ ಅಲ್ಲಿ ಶಿವ ಭಾವ ಬರುತ್ತದೆ. ಹಾಗೆ ಶರಣರಲ್ಲಿ ತಮ್ಮನ್ನು ತಾವು ಅರ್ಪಿಸುವ ಗುಣ ಹೊಂದಿದ್ದು ಕಾಣುತ್ತೇವೆ. ಆ ಮೂಲಕ ಮನವನಡಗಿಸುವಂತ ಈ ಪಂಚೇಂದ್ರಿಗಳನ್ನು ಗೆದ್ದು, ಜ್ಞಾನಶಕ್ತಿಯೊಂದಿಗಿನ ಬಾಂಧವ್ಯವನ್ನು ಪಡೆದುಕೊಳ್ಳುವುದು ತಾತ್ವಿಕತೆಯಾಗಿದೆ. ಈ ಶಕ್ತಿಯನ್ನು ಸಿದ್ಧರಾಮ ಪ್ರಭುದೇವರಿಂದ ವಿಕಸಿತಗೊಳಿಸಿಕೊಂಡಿದ್ದು, ಹಾಗೆ ಮನಸ್ಸಿನ ಅಗಾಧ ಶಕ್ತಿಯನ್ನು ಕೇಂದ್ರೀಕರಿಸಿ, ಉನ್ನತ ಆತ್ಮಸಾಧನೆಯನ್ನು ಕಂಡುಕೊಂಡು ಲಿಂಗಾಂಗ ಸಾಮರಸ್ಯಗಳ ಮೂಲಕ ಸಿದ್ಧರಾಮ ಶಿವಯೋಗ ಸಾಧನೆಯ ಮೂಲಕ ಆಧ್ಯಾತ್ಮದ ಊರ್ಧ್ವತೆಯನ್ನು ಕಂಡುಕೊಂಡಂತವನ್ನು ಗಂಗಾಂಬಿಕೆ ಸ್ಮರಿಸಿದ್ದಾಳೆ. ಅಂತಪ್ಪ ಪರಶಿವನ ಸ್ವರೂಪವನ್ನು ಪಾದೋದಕವ ಕೊಂಡು ಪರವಸ್ತು ನಾನಾದೆ ಎಂದು ಹೇಳುತ್ತಾಳೆ.

ಸಿದ್ಧರಾಮಯ್ಯನ ಪ್ರಭಾವದಿಂದ ಆಕೆ ವೈಚಾರಿಕ ನಿಲುವನ್ನು ಅಥವಾ ಒಂದು ಅಧ್ಯಾತ್ಮಿಕತೆ ಯನ್ನು ಪಡೆದುಕೊಂಡಂತಿದೆ. ಹಾಗಾಗಿ ಆಕೆಯ ಒಂದೆರಡು ವಚನಗಳು ತಾತ್ವಿಕ ಚಿಂತನೆಯನ್ನು ಮೂಡಿಸುತ್ತವೆ. ಬಹುತೇಕ ವಚನಗಳು ವೈಯಕ್ತಿಕತೆಯ ಪ್ರತಿಫಲದಂತಿವೆ. ಆದರೆ ಒಂದೆರಡು ವಚನಗಳು ಆಧ್ಯಾತ್ಮಿಕ ಚಿಂತನೆಯನ್ನು ಮಂಡಿಸುತ್ತವೆ. ಆದರೆ ಅಂಕಿತದ ವಿಷಯವನ್ನು ಈ ರೀತಿಯಾಗಿ ನಿಷ್ಕರ್ಷಿಸಬಹುದು. ಈಕೆಯ ವಚನಗಳ ಅಂಕಿತದಲ್ಲಿ ಯಾವುದೇ ಗೊಂದಲವಿಲ್ಲ

ಎನ್ನಬಹುದು. ಗಂಗಾಪ್ರಿಯ ಕೂಡಲಸಂಗಮದೇವ ಎಂಬುದು ಎಲ್ಲಾ ವಚನಗಳಲ್ಲೂ ಇದೆ. ಕೆಲವು ವಚನಗಳಲ್ಲಿ ಮುಂದೆ ಸಿದ್ಧರಾಮಯ್ಯ ಅಥವಾ ಚೆನ್ನಬಸವಣ್ಣಾ ಎಂದಿದೆ. ಹಾಗಾಗಿ ನೀಲಮ್ಮನ ಹಾಗೇ ಅಂಕಿತದ ವ್ಯತ್ಯಾಸಗಳಿಲ್ಲ ಹಾಗೂ ಆ ಮೂಲಕ ಬೇರೆ ಬೇರೆ ಸ್ತರಗಳಿರುವುದನ್ನು ಗುರುತಿಸುವ ಪ್ರಮೇಯವೇ ಇಲ್ಲ. ಅವಳದು ಎಲ್ಲ ವಿಚಾರದಲ್ಲೂ ಶಿಸ್ತುಬದ್ಧ(ಆಚಾರಬದ್ಧ) ನಡವಳಿಕೆ ನಿಷ್ಠೆ ಎದ್ದು ತೋರುತ್ತದೆ. ಅವಳ ಏಕೈಕ ಸಾಧನೆ ನಿಷ್ಠೆ ಮತ್ತು ಏಕೋಭಾವ ಈ ನಿಲುವು ಬಹುಶಃ ಕಾದರವಳ್ಳಿಯಲ್ಲಿ ಆಕೆ ಸೈನಿಕರೊಡನೆ ಹೋರಾಡುವವರೆಗೂ ಇದೆ. ಅದು ಬಸವನಿಷ್ಠೆ ಎಂದೇ ಹೇಳಬೇಕಾಗುತ್ತದೆ. ಅಥವಾ ಒಂದು ಹಿನ್ನೆಲೆಯಲಿ ಗಂಗಾಪ್ರಿಯ ಅಂದರೆ ಗಂಗೆಗೆ ಪ್ರಿಯನಾದ ಶಿವನೇ/ಗಂಗಾಂಬಿಕೆಗೂ ಪ್ರಿಯನಾದ ಕೂಡಲ ಸಂಗಮನೇ ಎಂಬರ್ಥವೂ ಇದೆ.

ಗಂಗಾಂಬಿಕೆ ಕಟ್ಟಕಡೆಯ ಕೈಂಕರ್ಯವಾಗಿ ಕಲ್ಯಾಣ ಕ್ರಾಂತಿಯ ನಂತರ ಉಳವಿಗೆ ಹೊರಟ ಶರಣ ಸಮೂಹವನ್ನು ವೈರಿ ಪಡೆಯವರು ಮುತ್ತಿದಾಗ ಹೋರಾಡಿ ವೀರ ಮರಣವನ್ನಪ್ಪಿದಳು. ಮುಂದಾಳುವಾಗಿ ವೀರ ಮಡಿವಾಳ ಮಾಚಿದೇವನ ಬಗ್ಗೆ ಕೊಂಡಾಡಿ ಶರಣ ಸೈನ್ಯಕ್ಕೆ ಮುಂದಾಳು ಆಗೆಂದು ಪ್ರೋತ್ಸಾಹಿಸಿದಳು. ತೊಟ್ಟಿಲ ತೂಗುವ ಕೈ ಜಗವನ್ನೇ ತೂಗಬಲ್ಲದು ಎಂಬ ಮಾತಿಗೆ ಸಾಕ್ಷಿಯಾದಳು. ಹೆಣ್ಣೊಬ್ಬಳು ಅನುಭಾವ ವೀರಾಗ್ರಣಿ, ಸತಿಶಿರೋಮಣಿ ಏನೆಲ್ಲಾ ಪಾತ್ರ ನಿರ್ವಹಿಸಬಲ್ಲಳು ಎಂಬುದಕ್ಕೆ ಅವಳು ನಿದರ್ಶನ. ಮಡಿವಾಳ ಮಾಚಿದೇವನ ಕುರಿತು ವಚನ ಹೀಗಿದೆ.

"ಮಡಿವಾಳಣ್ಣಂಗೇಕೆ ಬಾರದವ್ವಾ ಕರುಣಾರಸ?
ಮಡಿವಾಳಣ್ಣಂಗೇಕೆ ಬಾರದವ್ವಾ ಶೌರ್ಯರಸ?
ಮಡಿವಾಳಣ್ಣಂಗೇಕೆ ಬಾರದವ್ವಾ ಅದ್ಭುತರಸ?
ಮಡಿವಾಳಣ್ಣಂಗೇಕೆ ಬಾರದವ್ವಾ ಗಂಗಾಪ್ರಿಯ
ಕೂಡಲ ಸಂಗನ ಶರಣ ಪ್ರಾಣದಾನರಸ ಸಿದ್ಧರಾಮಯ್ಯ"[೬೧]

ಈ ವಚನದಲ್ಲಿ ಮಡಿವಾಳ ಮಾಚಿದೇವನಲ್ಲಿ ಅಡಗಿದ್ದ ಗುಣಗಳನ್ನು ತಿಳಿಸಿದ್ದಾಳೆ. ಹಾಗೆ ಆತನನ್ನು ಶರಣರ ರಕ್ಷಣೆ ಮತ್ತು ವಚನ ಸಾಹಿತ್ಯದ ಗಂಟುಗಳ ರಕ್ಷಿಸುವಂತ ಕಾರ್ಯಕ್ಕೆ ಮುಂದಾಗು ಎಂದು ಪ್ರೇರೇಪಿಸುವಂತದ್ದು ಇಲ್ಲಿ ತೋರುತ್ತದೆ.

ಈತನ ಬಗೆಗೆ ಹೇಳಿರುವ ವಿಚಾರವನ್ನು ಯು.ಎಂ.ಅನಿಗೋಳ ಹೀಗೆ ಅಭಿಪ್ರಾಯಪಡು ತ್ತಾರೆ. "ಗಣಚಾರವೇ ಮೈವೆತ್ತ ವೀರಭದ್ರನ ಅವತಾರವೆನಿಸಿದ ಮಡಿವಾಳ ಮಾಚಿದೇವನ ಉದ್ರೇಕ, ಅವೇಶವನ್ನು ಗಮನಿಸಿದ ಕರುಣಾಮೂರ್ತಿ ಗಂಗಾಂಬಿಕೆ ಆತನ ದುಡುಕಿಗೆ ತನ್ನ

ತಲ್ಲಣವನ್ನು ಮೃದು ಮಧುರವಾಗಿ ಪ್ರಕಟಿಸಿದ್ದಾಳೆ."[೬೨] ಕ್ರಾಂತಿಯಲ್ಲಿ ಪಾಲ್ಗೊಂಡು ಯುದ್ಧದಲ್ಲಿ ತನ್ನನ್ನೆ ತಾನು ಮರೆತು ರೌದ್ರಾವತಾರ ತಾಳಿದ ಮಡಿವಾಳಯ್ಯನಿಗೆ ಈ ಮಾತುಗಳನ್ನು ವ್ಯಕ್ತಪಡಿಸಿದ್ದಾಳೆ ಎಂದು ಅಭಿಪ್ರಾಯಪಡುತ್ತಾರೆ. "ಶರಣ ಸೈನ್ಯದ ಮುಂದಾಳು ವೀರಮಡಿವಾಳ ಮಾಚಿದೇವನ ವ್ಯಕ್ತಿತ್ವವನ್ನು ಕುರಿತು ಹಾಡಿ, ಸೈನ್ಯವನ್ನು ಹುರಿದುಂಬಿಸಿದ ಪ್ರೇರಕ ಶಕ್ತಿಯಾಕೆ"[೬೩] ಎಂದು ಡಾ.ಪ್ರೀತಿಶುಭಚಂದ್ರ ಅಭಿಪ್ರಾಯಪಡುತ್ತಾರೆ. ಯ.ಎಂ.ಅನಿಗೋಳರು ಗಂಗಾಂಬಿಕೆ ಮಡಿವಾಳಯ್ಯ ಯುದ್ಧದ ವೈಖರಿ ನೋಡಿ ತಲ್ಲಣವಾಗಿ ಈ ಮಾತು ಹೇಳಿದ್ದಾಳೆ ಎಂದರೆ, ಡಾ.ಪ್ರೀತಿಶುಭ ಚಂದ್ರರು ಈಕೆ ವಚನಕ್ರಾಂತಿಗೆ ಪ್ರೇರಕ ಶಕ್ತಿಯಾಗಿದ್ದಳು ಎಂದು ಹೇಳುತ್ತಾರೆ.

ಗಂಗಾಂಬಿಕೆಯ ವಚನಕ್ಕೆ ಸಂಬಂಧಿಸಿದಂತೆ ಈ ಮೇಲಿನ ಅಭಿಪ್ರಾಯ ಶರಣಕ್ರಾಂತಿಗೆ ಪ್ರೇರಣೆ ನೀಡಿದ್ದ ವಚನವೆಂದರೆ ಡಾ.ಶಕುಂತಲ ಹೆಗಡೆಯವರು "ಈ ಸಂದರ್ಭವು ಸಿದ್ಧರಾಮಯ್ಯನನ್ನು ಸಂಬೋಧಿಸಿ ಗಂಗಾಂಬಿಕೆ ಹೇಳಿದ್ದರಿಂದ, ಇದು ಆತನ ಸಮ್ಮುಖದಲ್ಲಿ ನಡೆದದ್ದಾಗಿಬಹುದು. ಒಮ್ಮೆ ಬಸವಣ್ಣನು ನಿದ್ರಿಸುತ್ತಿದ್ದುದು ಪಡಿಹಾರರಿಂದ ತಿಳಿದು ಶಿವಭಕ್ತರು ಮಹಾಮನೆಗೆ ಬಂದು ಮರಳಿ ಹೋಗಿರುತ್ತಾರೆ. ಆಗ ಗಂಗಾಂಬಿಕೆ ಬಸವಣ್ಣನನ್ನೆಬ್ಬಿಸಲು ಬಂದಾಗ ಶರಣರೇ ಜೀವಾಳವಾಗಿದ್ದ ಆತನ ಪ್ರಾಣಪಕ್ಷಿ ಅವರೊಂದಿಗೆ ಹಾರಿ ಹೋಗಿರುವುದನ್ನು ಕಂಡು ಗಾಬರಿಯಾಗುತ್ತಾಳೆ. ಆ ಸಮಯದಲ್ಲಿ ಮಡಿವಾಳ ಮಾಚಯ್ಯ, ಸಿದ್ಧರಾಮಯ್ಯ ಇನ್ನಿತರ ಶರಣರು ಇದ್ದಿರಬೇಕು. ಮಾಚಯ್ಯನನ್ನು ನೋಡಿ, ನುಡಿದ ಈ ವಚನ ಶೋಕ ಗೀತದಂತಿದೆ."[೬೪] ಇವರ ಅಭಿಪ್ರಾಯದಂತೆ ಗಂಗಾಂಬಿಕೆ ಬಸವಣ್ಣನ ಪ್ರಾಣ ಶರಣರೊಂದಿಗೆ ಹೋದ ಸಂದರ್ಭದಲ್ಲಿ ದುಃಖಿತಳಾದ ಈಕೆ ಮಡಿವಾಳಯ್ಯರಿಗೆ ಪರಿಪರಿಯಾಗಿ ಬೇಡುವಂತದ್ದು ವ್ಯಕ್ತವಾಗಿರಬಹುದು. ಮುಂದುವರಿದು ಹೀಗೆ ಹೇಳುತ್ತಾರೆ. "ಕರುಣರಸ, ಶೌರ್ಯರಸ(ವೀರ), ಅದ್ಭುತರಸಗಳು ಈ ವಚನದಲ್ಲಿ ಬಂದದ್ದು ನೋಡಿದರೆ ಗಂಗಾಂಬೆ ಒಬ್ಬ ಪಂಡಿತೆಯಾಗಿದ್ದಳೆಂದು ತಿಳಿದುಬರುತ್ತದೆ. 'ಮಡಿವಾಳಂಗೇಕೆ ಬಾರದವ್ವಾ' ಎಂಬ ಕ್ರಿಯಾಪದ ಮೇಲಿಂದ ಮೇಲೆ ಬಂದು ಕರುಣ ರಸ ಉಕ್ಕಿಸಿದೆ."[೬೫] ಇವರ ಅಭಿಪ್ರಾಯದಂತೆ ಕ್ರಿಯಾತ್ಮಕ ಅಲೋಚನೆಯನ್ನು ಇಲ್ಲಿ ತುಂಬಿದ್ದಾಳೆ. ಹಾಗೆ ಎ.ಗಾಯತ್ರಿಯವರು "ಮಡಿವಾಳ ಮಾಚಿದೇವರ ಮಹತ್ವವನ್ನು ಈ ವಚನದಲ್ಲಿ ಚಿಂತಿಸುತ್ತಾ ಆತನಿಗೆ ಕರುಣ, ಶೌರ್ಯ, ಅದ್ಭುತರಸಗಳು ಬಾರದಿದ್ದರೂ ಸಿದ್ಧರಾಮಯ್ಯ ದಾನರಸದಲ್ಲಿ ಶ್ರೇಷ್ಠನೆಂದು ಅರುಹುತ್ತಾಳೆ."[೬೬] ಇವರು ಅಭಿಪ್ರಾಯಪಟ್ಟಂತೆ ಮಡಿವಾಳಯ್ಯನಲ್ಲಿ ಈ ಎಲ್ಲ ಗುಣಗಳು ಇಲ್ಲದಿದ್ದರೂ, ಸಿದ್ಧರಾಮನಲ್ಲಿ ದಾನ ಗುಣವನ್ನು ಕಾಣುತ್ತೇವೆ ಎಂದು ಹೇಳುತ್ತಾರೆ. ಆದರೆ ಮಡಿವಾಳ ಮಾಚಯ್ಯ ಗಣಚಾರಿ, ಆತನಲ್ಲಿ ಶೌರ್ಯತ್ವವಿರುವುದರಿಂದಲೇ ಕಲ್ಯಾಣಕ್ರಾಂತಿಯ ನೇತೃತ್ವ ವಹಿಸಿದ್ದು ಎಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ.

ಬಿ.ಮಹಾದೇವಪ್ಪ ಈ ವಚನದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ. "ಶರಣೆ ಗಂಗಾಂಬಿಕೆಯು ಶೋಕಗೀತೆಯಾಗಿ ಈ ವಚನವನ್ನು ಹಾಡಿರಬಹುದು. ಮಡಿವಾಳಣ್ಣನಿಗೆ ಕೇತಯ್ಯನವರ ಬಗ್ಗೆಯೂ ಬಸವಣ್ಣನವರ ಬಗ್ಗೆಯೂ ಕರುಣಾರಸ ಹರಿಯಬಹುದಾಗಿತ್ತಲ್ಲಾ! ಇಬ್ಬರ ಚೇತನಗಳನ್ನು ಸೆಳೆದೊಯ್ದ ಶಿವನ ವಿರುದ್ಧ ಶೌರ್‍ಯರಸ ಮೂಡಬಹುದಾಗಿತ್ತಲ್ಲಾ! ನೋಡುಗರೆಲ್ಲರಿಗೂ ಅದ್ಭುತರಸ ತೋರುವಂತೆ ವೀರಗಂಟೆಯ ಮಡಿವಾಳ ಮಾಚಯ್ಯ ಮನಸ್ಸು ಮಾಡಿದರೆ ಉಭಯರಿಗೂ ಪ್ರಾಣದಾನ ಮಾಡಬಹುದಾಗಿತ್ತಲ್ಲಾ ಎಂದು ಆಕ್ರಂದನ ಮಾಡಿದಾಗ ನಿಜವಾಗಿಯೂ ಮಾಚಯ್ಯನವರಿಗೆ ಕರುಣರಸ, ಶೌರ್‍ಯರಸ, ಅದ್ಭುತರಸ ಒಮ್ಮೆಲೆ ಉಂಟಾಗಿ ಜೋರಾಗಿ ತನ್ನ ಕೈಯ ಗಂಟೆ ಬಾರಿಸುತ್ತಾರೆ. ಕಾಯಕದಲ್ಲಿ ನಿರತನಾಗಿದ್ದ ಕೇತಯ್ಯನ ಜೀವವನ್ನು ಹಿಂತಿರುಗಿಸದಿದ್ದರೆ, ಕೇತಯ್ಯನ ಹಿಂದೆ ಹೊದ ಬಸವರಸರ ಪ್ರಾಣವನ್ನು ಹಿಂತಿರುಗಿಸದಿದ್ದರೆ ಮರ್ತ್ಯದಲ್ಲಿ ಶಿವನ ಪೂಜೆಯನ್ನೆ ಬಹಿಷ್ಕರಿಸಬೇಕಾಗುತ್ತದೆಯೆಂದು ಅರ್ಭಟಿಸಿದಾಗ ದೇವಲೋಕವೇ ತಲ್ಲಣಗೊಂಡು ಉಭಯರಲ್ಲಿಯೂ ಪುನಃ ಚೇತನ ಪ್ರವೇಶ ವಾಗುವುದಂತೆ"[೬೭] ಈ ಅಭಿಪ್ರಾಯ ಕಥೆ ಹಂದರವನ್ನು ಪಡೆದಿದೆ. ಇಲ್ಲಿ ಇದನ್ನು ನಂಬಬೇಕೆ? ಎಂದು ಬಿ.ಮಹಾದೇವಪ್ಪನವರು ಹೇಳುತ್ತಾರೆ. ಜಂಗಮ ಪ್ರಾಣಿಯಾದ ಬಸವಣ್ಣ ಸತ್ಯನಿಷ್ಠ ಕಾಯಕದ ಕೇತಯ್ಯನವರು ಕಾಯಕಕ್ಕೆ ದ್ರೋಹ ಮಾಡಿದರೆ, ಜೀವ ಹೋದಂತೆ, ಹಾಗೆ ಜಂಗಮಕ್ಕೆ ತಪ್ಪಿ ನಡೆದರೆ, ದ್ರೋಹಿಯಾದರೆ ಪ್ರಾಣ ಹೋದಂತೆ ಎಂದು ತಿಳಿಯಬಹುದು. ಯಾಕೆಂದರೆ ಗುರುಲಿಂಗ, ಜಂಗಮರಲ್ಲಿ ಅನನ್ಯತೆ ಹೊಂದಿದ್ದ ಬಸವಣ್ಣನ ಬಹುತರ ಜವಾಬ್ದಾರಿಯನ್ನು ತಿಳಿಸುವಂತ ಕೆಲಸವನ್ನು ಘಂಟೆ ಬಾರಿಸುವುದರ ಮೂಲಕ ಎಚ್ಚರಿಕೆ ನೀಡಿರಬಹುದು. ಇವರ ಹೇಳಿಕೆಯಿಂದ ಊಹಿಸಬಹುದು. ಹಾಗೆ ಈ ವಚನದ ಕಲ್ಯಾಣ ಕ್ರಾಂತಿಯ ಹೊಗೆ ಪಸರಿಸಿರುವುದನ್ನು ನೋಡಬಹುದಾಗಿದೆ. ಆಗ ಶರಣರಿಗೆ ವಿಪತ್ತು ಬಂದಿರುತ್ತದೆ. ಶರಣರನ್ನು ಹುಡುಕಲು ಸೈನಿಕರನ್ನು ಬಿಡಲಾಗುತ್ತದೆ. ಶರಣರಿಗೆ ಹಾಗೂ ವಚನ ಕಟ್ಟುಗಳಿಗೆ ರಕ್ಷಣೆ ಇಲ್ಲದಾಗುತ್ತದೆ. ಆಗ ಶರಣ ಚಳುವಳಿ ನಾಯಕತ್ವವನ್ನು ವಹಿಸಿಕೊಂಡ ಗಂಗಾಂಬಿಕೆ ಸ್ವತಃ ಹೋರಾಡಲು ಪ್ರೇರೇಪಿಸುತ್ತಾಳೆ. ವಚನ ಚಳುವಳಿಯ ಅಂತಿಮಘಟ್ಟದ ನಾಯಕಿಯಾಗಿ, ವಚನ ಚಳುವಳಿಯ ಸ್ಮೃತಿಯನ್ನು ಕಾಪಾಡುವುದಕ್ಕಾಗಿ ವೀರಾವೇಶದಿಂದ ಹೋರಾಡುತ್ತಾಳೆ. ಆಕೆ ಮೌನಿಯೂ ಹೌದು, ಸಂದರ್ಭ ಬಂದರೆ ಸೇನಾನಿಯೂ ಹೌದು ಎಂಬುದನ್ನು ಆಕೆಯ ಈ ವಚನ ದೃಢಪಡಿಸುತ್ತದೆ ಎನ್ನಬಹುದು.

ಗಂಗಾಂಬಿಕೆ ಮಡಿವಾಳ ಮಾಚಯ್ಯನನ್ನು ವ್ಯಕ್ತಿನೆಲೆಯಲ್ಲಿ ನೋಡದೆ ಒಂದು ಶಕ್ತಿ ನೆಲೆಯಲ್ಲಿ ಕಂಡಿರಬಹುದು. ಹಾಗಾಗಿ ಅವನಲ್ಲಿಯ ಅಗಾಧವಾದ ಗುಣಗಳನ್ನು ಕಂಡು ಸಿದ್ಧರಾಮಯ್ಯನಿಗೆ ತಿಳಿಸುವಂತದ್ದು, ಹಾಗೂ ಕಲ್ಯಾಣ ಕ್ರಾಂತಿಯ ಆಗುಹೋಗುಗಳ ಬಗ್ಗೆ

[illegible]

ನಡೆಸಿದ ಚಿಂತನೆ ಮಾಡುವ ಸಂದರ್ಭದಲ್ಲಿಯೂ ಹೇಳಿರಬಹುದು. ಈ ಮಾತುಗಳು ಮಡಿವಾಳಯ್ಯನಿಗೆ ಧೈರ್ಯ ಸ್ಥೈರ್ಯ ತುಂಬಿ, ಶರಣ ಸೈನ್ಯದೊಂದಿಗೆ ನೀನು ಶರಣರನ್ನು ಮತ್ತು ವಚನ ಸಾಹಿತ್ಯವನ್ನು ಉಳಿಸುವುದು ನಿನ್ನಲ್ಲಿ ಒಳಗೊಂಡಿದೆ ಎಂಬ ಪ್ರಚೋದನೆಯಾಗಿದೆ. ಹಾಗೂ ಬಿಜ್ಜಳನ ಸೈನಿಕರಿಂದ ಶರಣರನ್ನು ಮತ್ತು ವಚನ ಸಾಹಿತ್ಯ ರಕ್ಷಿಸುವ ಹೊಣೆ ನಿನ್ನದು ಎಂದು ಈ ವಚನದ ಮೂಲಕ ಹೇಳಿರಬಹುದು.

ಗಂಗಾಂಬಿಕೆ ವಚನ ವಿಶ್ಲೇಷಣೆಯಲ್ಲಿ ವಿದ್ವಾಂಸರು ಅನೇಕ ರೀತಿಯಿಂದ ಈಕೆಯ ವಚನ ವ್ಯಾಖ್ಯಾನ ಅಭಿಪ್ರಾಯ ತಿಳಿಸಿದ್ದಾರೆ. ಈಕೆಯ ವಚನಗಳಲ್ಲಿ ಮುಖ್ಯವಾಗಿ ಆತ್ಮನಿವೇದನೆ ಯನ್ನು ಹೊಂದಿದ್ದು ಒಂದು ಕಡೆಯಾದರೆ, ಪತಿನಿಷ್ಠ ಇಷ್ಟಲಿಂಗದ ಮಹತ್ವ ಹಾಗೂ ಶರಣರನ್ನು ಕುರಿತ ನಿಲುವುಗಳನ್ನು ಕಾಣುತ್ತೇವೆ. ಇದರಲ್ಲಿ ಆತ್ಮಶುದ್ಧಿ ಆಂತರಿಕತೆಯನ್ನು ಬಿಂಬಿಸಿದ್ದನ್ನು ಕಾಣುತ್ತೇವೆ. ಹಾಗೂ ವ್ಯಕ್ತಿ ನೆಲೆಯಲ್ಲಿ ಬಸವಣ್ಣ, ಮಡಿವಾಳ ಮಾಚಿದೇವ, ಚೆನ್ನಬಸವಣ್ಣ ಸಿದ್ಧರಾಮಯ್ಯರನ್ನು ಗುರುತಿಸಿದ್ದು, ಹಾಗೆ ಈಕೆಯ ವಚನಗಳಲ್ಲಿ ಮನಶುದ್ಧಿ, ಪರಿಸರ, ಪರಸ್ಪರ ಬಾಂಧವ್ಯ ಹಾಗೂ ತಾತ್ವಿಕ ಸಿದ್ಧಾಂತವನ್ನು ಅನುಭವದ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

ಒಟ್ಟಾರೆಯಾಗಿ ಗಂಗಾಂಬಿಕೆಯ ವಚನಗಳಲ್ಲಿ ವೈಚಾರಿಕ ಸಂವೇದನೆಯನ್ನು ಕಾಣುತ್ತವೆ. ಆಕೆಯಲ್ಲಿಯ ಪ್ರೇರಣಾಶಕ್ತಿ ಒಂದಾದರೆ, ಇನ್ನೊಂದು ಪತಿನಿಷ್ಠೆ ಬಹಳ ಮುಖ್ಯವಾಗಿ ಕಾಣುತ್ತದೆ. ಕೇವಲ ವಾಸ್ತವಿಕ ಅಂಶಗಳು ಈಕೆಯ ಆತ್ಮನಿವೇದನೆಯನ್ನು ಹೇಳಿದರೆ, ಪರಿಪೂರ್ಣತೆಯನ್ನು ಪಡೆಯಲು ಲಿಂಗದ ಮಹತ್ವದ ವಚನ ಬಿಂಬಿಸಿದೆ. ಹಾಗೆ ಬಹುಶಃ ಮಡಿವಾಳ ಮಾಚಯ್ಯನನ್ನು ಕಲ್ಯಾಣ ಕ್ರಾಂತಿಗೆ ಪ್ರೇರಣೆ ಮಾಡಿದರೆ, ಸಿದ್ಧಗಾಮಯ್ಯನನ್ನು ಆಧ್ಯಾತ್ಮದ ಹರಿಕಾರ ಎನ್ನುವಷ್ಟರ ಮಟ್ಟಿಗೆ ಈಕೆಯ ಹೇಳಿದ್ದಾಳೆ. ಹಾಗೆ ಚೆನ್ನ=ಸವಿ, ಅಥವಾ ಚೆನ್ನ ಬಸವಣ್ಣನ ಮೂಲಕ ಜ್ಞಾನದ ಹಂಬಲತೆಯನ್ನು ಪಡೆಯುವ ಆಕಾಂಕ್ಷೆಯನ್ನು ಕಾಣುತ್ತೇವೆ. ಗಂಗಾಂಬಿಕೆ ತನ್ನದೆಯಾದ ವಿಚಾರಗಳನ್ನು ಈ ವಚನದ ಒಡಲಿನಲ್ಲಿ ತುಂಬಿದ್ದಾಳೆ.

ಗಂಗಾಂಬಿಕೆಯ ಪತಿನಿಷ್ಠೆ, ಕಲ್ಯಾಣಕ್ರಾಂತಿಯಲ್ಲಿ ಪಾಲ್ಗೊಂಡಿರುವ ತ್ಯಾಗ ಗುಣ ಹಾಗೂ ಆಕೆಯಲ್ಲಿ ಅಡಗಿರುವ ಸಮರ್ಪಣಾ ಭಾವವನ್ನು ಈಕೆಯ ವಚನಗಳಿಂದ ಕಾಣುತ್ತೇವೆ. ಹಾಗೆ ಈಕೆಯಲ್ಲಿಯ ವಿಧೇಯತೆಯು ಈಕೆಯನ್ನು ಆಚಾರಪತ್ನಿಯಾಗಿ ತೋರಿಸುತ್ತದೆ. ಕೇವಲ ಆಚಾರಕ್ಕೆ ನಿಷ್ಠಳಾಗದೇ ಕರ್ತವ್ಯದಲ್ಲಿ ಅಂದರೆ ಪತಿನಿಷ್ಠೆಯಿರಬಹುದು. ಶರಣರನ್ನು ಕಲ್ಯಾಣ ಕ್ರಾಂತಿಗೆ ಹುರಿದುಂಬಿಸಿದ್ದು ಈ ಎಲ್ಲ ಪರಿಕಲ್ಪನೆ ಈಕೆಯನ್ನು ಆಚಾರಪತ್ನಿಯಾಗಿ ರೂಪಿಸಿವೆ. ಬಸವಣ್ಣನ ಜೊತೆಗೆ ಸಾಮರಸ್ಯವಾಗಿ, ಬದುಕುವುದಲ್ಲದೆ, ಅನುಭವ ಮಂಟಪದಲ್ಲಿ ಕಾರ್ಯಶೀಲಳಾಗಿ

ಹಾಗೂ ಸ್ವಾಭಾವಿಕವಾಗಿ ಜೀವಿಸಿದ್ದು ಎನ್ನುವ ರೀತಿಯಲ್ಲಿ ಈಕೆಯ ವಚನಗಳು ಬಿಂಬಿಸಿವೆ. ಸುಂದರವಾದ ಹೂವುಗಳು ಎನ್ನ ಆಚಾರ ಲಿಂಗಕ್ಕೆ ಎನ್ನುವ ನುಡಿಗಳ ಮೂಲಕ ನನ್ನ ಕೆಲಸ ಪ್ರಾಮಾಣಿಕತೆಯಿಂದ ಕೂಡಿರಬೇಕು ಎಂಬುದು ತೋರುತ್ತದೆ. ಈಕೆಯ ಆಲೋಚನೆಗಳು ಪರಿಸರದ ಹಿನ್ನೆಲೆಯಲ್ಲಿ ಹೇಳುವುದರ ಮೂಲಕ ವಾಸ್ತವ ಅಂಶವನ್ನು ಬಿಜ್ಜಳನಿಗೆ ಹುಲಿಯ ರೂಪದ ಮೃಗವಾಗಿದ್ದಾನೆ. ಅಥವಾ ಕಲ್ಯಾಣ ಎನ್ನುವ ಕರುವನ್ನು ತಿಂದು ಹಾಕಿದನು ಅಥವಾ ಮುಟುಕುಗೊಳಿಸಿದನು ಎನ್ನುವುದು ನೋಡಿದರೆ ಬಹುಶಃ ಬಿಜ್ಜಳ ಬಸವಣ್ಣನ ವಿಚಾರಧಾರೆಗಳಿಗೆ ಒಪ್ಪಿದ್ದನೋ ಇಲ್ಲವೋ ಎಂಬುದು ಈಕೆಯ ವಚನದ ಮೂಲಕ ತಿಳಿಯುತ್ತದೆ.

ಒಟ್ಟಿನಲ್ಲಿ ಈಕೆಯ ಒಂಬತ್ತು ವಚನಗಳ ಒಟ್ಟು ಸಂದೇಶ ಆತ್ಮನಿವೇದನೆಗಳ ಮೂಲಕ ಬಹಿರಂಗ ಮತ್ತು ಅಂತರಂಗದ ವಿಚಾರಗಳನ್ನು ವ್ಯಕ್ತಪಡಿಸುವುದು ಹಾಗೂ ಉತ್ತಮ ಕಾರ್ಯಶೀಲನಾದ ಬಸವಣ್ಣನ ಸತಿಯಾಗಿ ನಾನು ಧನ್ಯಳಾದೆ? ಎಂಬ ಧನ್ಯತಾಭಾವವಿದೆ. ಅಂದರೆ ಒಬ್ಬ ಉತ್ತಮ ಪತಿಯೊಂದಿಗೆ ಜೀವಿಸಿದೆ ಎಂಬ ಹೆಬ್ಬಯಕೆಯೂ ಆಗಿದೆ. ತನ್ನ ದುಃಖದ ಮೂಲಕ ತನ್ನ ನಿವೇದನೆಯನ್ನು ಭಗವಂತನಿಗೆ ಅರ್ಪಿಸುವುದು ಆಗಿದೆ. ಗಂಗಾಂಬಿಕೆ ಶರೀರ ಸ್ವಚ್ಛತೆಯೊಂದಿಗೆ ಮನಸ್ಸು ಕೂಡ ಪ್ರಾಂಜಲತೆಯಿಂದ ಕೂಡಿರಬೇಕು ಎನ್ನುತ್ತಾಳೆ. ಹಾಗೂ ಶರಣರ ಕುರಿತು ಹೇಳುವುದರೊಂದಿಗೆ ಅವರ ಆಧ್ಯಾತ್ಮಿಕ ಪ್ರಖರತೆ ಜೊತೆಗೆ ವ್ಯಕ್ತಿತ್ವವನ್ನು ತಿಳಿಸಿದ್ದಾಳೆ.

**ಅಡಿಟಿಪ್ಪಣಿಗಳು**

೧. ಸಿದ್ಧರಾಮ ಸ್ವಾಮಿಗಳು, **ವಚನಾರ್ಥ ಚಿಂತನ,** ಪು.Viii

೨. ಎಂ.ಚಿದಾನಂದಮೂರ್ತಿ, **ವಚನ ಸಾಹಿತ್ಯ,** ಪು.೧

೩. ಎಚ್.ಆರ್.ಪ್ರಭಾ, **ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಮಹಾದೇವಿಯಕ್ಕ ಒಂದು ತೌಲನಿಕ ಅಧ್ಯಯನ,** ಪು.೯

೪. ಅದೇ, ಪು.೧೭

೫. ಪಿ.ವಿ.ನಾರಾಯಣ, **ವಚನಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ,** ಪು.೩೩

೬. ವೀರಣ್ಣರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ,** ವ.ಸಂ.೧೪, ಪು.೬

೭. ಎಚ್.ಆರ್.ಪ್ರಭಾ, **ಮಹಾದೇವಿಯರ ಒಂದು ತೌಲನಿಕ ಅಧ್ಯಯನ,** ಪು.೨೦

೮. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ,** ಪು.೧೯೪, ವ.ಸಂ.೬೦೭

೯. ಅದೇ, ಪು.೧೯೯, ವ.ಸಂ.೬೨೩

೧೦. ವಿದ್ಯಾಶಂಕರ, **ಸಿದ್ಧರಾಮೇಶ್ವರ ವಚನ ಸಂಪುಟ,** ಪು.೩೬೦, ವ.ಸಂ.೧೯೨

೧೧. ಎಸ್.ಎಸ್.ಮಟ್ಟಿ, ಪ್ರೊ.ಎಸ್.ಎಸ್.ಭೂಸರಡ್ಡಿ(ಸಂ), **ಗಂಗಾಂಬಿಕೆಯ ವಚನಗಳು,** ಪು.೭

೧೨. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೮, ವ.ಸಂ.೬೭೧

೧೩. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೬

೧೪. ಪ್ರೀತಿಶುಭಚಂದ್ರ, **ಸೃಜನೆಯ ಮೂಡು,** ಪು.೨೫೪

೧೫. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ, **ಬಸವೇಶ್ವರ ಸಮಕಾಲೀನರು,** ಪು.೨೪೨

೧೬. ಅದೇ, ೨೪೨

೧೭. ಯು.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೧೧೫

೧೮. ನೀಲಗಂಗಾ ಚರಂತಿಮಠ(ಸಂ), **ಶಿವಶರಣೆಯರ ಚರಿತಾಮೃತ,** ಪು.೧೯೯

೧೯. ಬಿ.ಮಹಾದೇವಪ್ಪ, **ಅರಿವು–ಆಚಾರ,** ಪು.೪೬೧

೨೦. ಅದೇ, ಪು.೪೬೧–೪೬೨

೨೧. ಅದೇ, ಪು.೪೬೨

೨೨. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ವ.ಸಂ.೬೭೩, ಪು.೨೧೮

೨೩. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೬, ೫೭

೨೪. ಯು.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೧೧೫

೨೫. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೮

೨೬. ಯು.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೧೧೭

೨೭. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೫

೨೮. ಪ್ರೀತಿಶುಭಚಂದ್ರ, **ಸೃಜನೆಯ ಮೂಡು,** ಪು.೨೫೫

೨೯. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೩೦

೩೦. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೯, ವ.ಸಂ.೬೭೬

೩೧. ಚ.ವಿ.ಮುಳಗುಂದ, **ಮಾತೋಶ್ರೀ,** ಪು.೧೬೪

೩೨. ಯು.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೧೧೯

೩೩. ಪ್ರೀತಿ ಶುಭಚಂದ್ರ, **ಸೃಜನೆಯ ಮೂಡು,** ಪು.೨೫೪

೩೪. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೨, ೫೩

೩೫. ಅದೇ, ಪು.೫೩

೩೬. ನೀಲಗಂಗಾ ಚರಂತಿಮಠ(ಸಂ), **ಶಿವಶರಣೆಯರ ಚರಿತಾಮೃತ,** ಪು.೧೧೯

೩೭. ಬಿ.ಮಹಾದೇವಪ್ಪ, **ಅರಿವು–ಆಚಾರ,** ಪು.೪೬೪

೩೮. ಅದೇ, ಪು.೪೬೪

೩೯. ಅದೇ, ಪು.೪೬೪

೪೦. ಎಚ್.ಎಚ್.ಶ್ರೀಮತಿ(ಸಂ), **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,** ಪು.೧೦೮

೪೧. ಎಂ.ಎಸ್.ಸುಂಕಾಪುರ(ಸಂ), **ಪ್ರಭುಲಿಂಗ ಲೀಲೆ,** ಪು.೨೩೮, ಪದ್ಯ.೨೨

೪೨. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೯, ವ.೬೭೮

೪೩. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೭

೪೪. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೧೧೮

೪೫. ಪ್ರೀತಿಶುಭಚಂದ್ರ, **ಸೃಜನೆಯ ಮೂಡು,** ಪು.೨೫೪

೪೬. ನೀಲಗಂಗಾ ಚರಂತಿಮಠ(ಸಂ), **ಶಿವಶರಣೆಯರ ಚರಿತಾಮೃತ,** ಪು.೧೧೦

೪೭. ಎಸ್.ಎಸ್.ಮಟ್ಟ, ಪ್ರೊ.ಎಸ್.ಎಸ್.ಭೂಸರಡ್ಡಿ(ಸಂ), **ಗಂಗಾಂಬಿಕೆಯ ವಚನಗಳು,** ಪು.೨೨

೪೮. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೨೯

೪೯. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೫, ೫೬

೫೦. ಪ್ರೀತಿಶುಭಚಂದ್ರ, **ಸೃಜನೆಯ ಮೂಡು,** ಪು.೨೫೧

೫೧. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೨೦, ವ.೬೭೯

೫೨. ಎಸ್.ಎಸ್.ಮಟ್ಟಿ, ಪ್ರೊ.ಎಸ್.ಎಸ್.ಭೂಸರಡ್ಡಿ(ಸಂ), **ಗಂಗಾಂಬಿಕೆಯ ವಚನಗಳು,** ಪು.೨೪

೫೩. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೨೯

೫೪. ಎಚ್.ಎಂ.ಬಿಳಗಿ(ಸಂ), **ಶಿವಶರಣೆಯರು ಜೀವನ ಮತ್ತು ಸಾಧನೆ,** ಪು.೨೮

೫೫. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೨

೫೬. ಪ್ರೀತಿಶುಭಚಂದ್ರ, **ಸೃಜನೆಯ ಮುಡು,** ಪು.೨೫೫

೫೭. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನಸಂಪುಟ,** ಪು.೨೧೯

೫೮. ನೀಲಗಂಗಾ ಚರಂತಿಮಠ(ಸಂ), **ಶಿವಶರಣೆಯರ ಚರಿತಾಮೃತ,** ಪು.೧೦೮

೫೯. ಬಿ.ಡಿ.ಜತ್ತಿ, ಡಿ.ಎನ್.ಮಲ್ಲಪ್ಪ(ಸಂ), **ಬಸವೇಶ್ವರ ಸಮಕಾಲೀನರು,** ಪು.೨೨೯

೬೦. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೩

೬೧. ವೀರಣ್ಣರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ,** ಪು.೨೧೯

೬೨. ಯ.ಎಂ.ಅನಿಗೋಳ, **ಗಂಗಾಂಬಿಕೆ ಬಸವಣ್ಣ ಹಾಗೂ ಸಮಕಾಲೀನರು,** ಪು.೧೧೮

೬೩. ಪ್ರೀತಿಶುಭಚಂದ್ರ, **ಸೃಜನೆಯ ಮೂಡು,** ಪು.೨೫೬

೬೪. ಶಕುಂತಲಾ ಹೆಗಡೆ, **ಗಂಗಾಂಬಿಕೆ,** ಪು.೫೪

೬೫. ಅದೇ, ಪು.೫೪

೬೬. ಎ.ಗಾಯಿತ್ರಿ, **ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೩೦

೬೭. ಬಿ.ಮಹಾದೇವಪ್ಪ, **ಅರಿವು-ಆಚಾರ,** ಪು.೪೬೭

## ಅಧ್ಯಾಯ ಆರು

# ನೀಲಾಂಬಿಕೆಯ ವಚನಗಳ ವಿಶ್ಲೇಷಣೆ

# ಅಧ್ಯಾಯ ಆರು

## ನೀಲಾಂಬಿಕೆಯ ವಚನಗಳ ವಿಶ್ಲೇಷಣೆ

ನೀಲಮ್ಮನ ವಚನಗಳು ಮೇಲ್ನೋಟಕ್ಕೆ ಆತ್ಮ ನಿವೇದನೆ, ಬಸವನಿಷ್ಠೆ, ಲಿಂಗನಿಷ್ಠೆ, ವೈಚಾರಿಕತೆ ಹಾಗೂ ಶರಣರ ಕುರಿತ ವಚನಗಳಾಗಿ ಕಾಣುತ್ತವೆ. ಅಂತರ್ಯದಲ್ಲಿ ಪ್ರತಿ ವಚನವು ಅನೇಕ ಹೊಳಹುಗಳನ್ನು ಒಳಗೊಂಡಿದೆ. ಆಕೆಯ ವಚನಗಳು ತುಂಬಾ ಶ್ಲೇಷಾರ್ಥವುಳ್ಳವುಗಳಾಗಿ ಮೊಗೆದಷ್ಟು ಅರ್ಥ ಚಿಮ್ಮಿಸುವ ಚಿಲುಮೆಗಳಾಗಿವೆ. ವಚನಗಳು ಮೇಲ್ನೋಟದ ವಸ್ತು ವಿಷಯಗಳ ನಿರೂಪಣೆಯಾಗಿದೆ. ಹಲವಾರು ವಿಷಯಗಳನ್ನು ಹುದುಗಿಸಿಕೊಂಡ ಚಿಂತನಾರ್ಹ ಆಕರಗಳೆನಿಸಿದೆ. ಇಲ್ಲಿ ಪ್ರಮುಖವಾಗಿ ೫ ವಿಭಾಗಗಳಲ್ಲಿ ಈ ವಿಚಾರಗಳನ್ನು ಪ್ರಸ್ತುತಪಡಿಸ ಬಹುದಾಗಿದೆ. ೧. ಚಾರಿತ್ರಿಕ/ಸಾಂದರ್ಭಿಕ ಘಟನಾವಳಿಗಳು ೨. ಅಕ್ಕಮಹಾದೇವಿಯ ಸಾಹಿತ್ಯಿಕ ನಿಲುವು ೩. ಪ್ರತಿಮೆಗಳಿಲ್ಲದ ನೇರ ಅಭಿವ್ಯಕ್ತಿ/ಸ್ವಂತ ವಿಚಾರ ಮಂಡಿಸುವ ಕ್ರಮ ೪. ಶೋಧ ಪರತೆ/ವೈಚಾರಿಕತೆ ೫. ಅನುಭವದಿಂದ ಅನುಭಾವದೆಡೆಗಿನ ಪಯಣ

ಈ ಐದು ಅಂಶಗಳಲ್ಲಿ ಅತಿಯಾಗಿ ಬಿಂಬಿತವಾಗಿರುವ ಅಂಶ ಅನುಭವವನ್ನು ಅನುಭಾವವಾಗಿ ಆಕೆ ಸ್ವೀಕರಿಸಿದ ಬಗೆಯಲ್ಲಿ. ನಂತರ ಬರುವ ಎಲ್ಲ ವಿಚಾರಗಳು ಅಷ್ಟೇ ಪ್ರಭಾವಶಾಲಿಯಾಗಿ ಮೂಡಿಬಂದಿವೆ. ಈ ವಚನಗಳಲ್ಲಿ ವೈಯಕ್ತಿಕವಾಗಿ ಬಸವನಿಷ್ಠೆ ಎದ್ದು ತೋರುವ ಅಂಶವಾಗಿದೆ. ವಚನಗಳಲ್ಲಿ ಸಮಕಾಲೀನ ಚಿತ್ರಣದ ಮೂಲಕ ಸಾಂದರ್ಭಿಕ ಘಟನೆಗಳು ಹಾಗೂ ಪರಿಣಾಮ ವಿವರಿಸುವ ಮೂಲಕ ಚಾರಿತ್ರಿಕತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಭಾವಾಭಿವ್ಯಕ್ತಿ ಹಾಗೂ ಭಾಷೆಯ ಬಳಕೆಯ ರೀತಿಯನ್ನು ಅಲ್ಲಲ್ಲಿ ಬಹುವಾಗಿ ಅಕ್ಕಮಹಾದೇವಿಯ ರಚನೆಗಳಿಗೆ ಹೋಲಿಸಬಹುದಾಗಿದೆ. ಸ್ತ್ರೀವಾದಿಗಳು ಗುರುತಿಸುವ ಕ್ರಮದಂತೆ ಮೊದಲು ಕವಿಯಿತ್ರಿಯರು ಭಾವನೆಗಳನ್ನು ನೇರವಾಗಿ ವ್ಯಕ್ತಪಡಿಸದೇ ರಾಧಾಕೃಷ್ಣರ ಮೂಲಕ ಹೇಳಿಸುವ ಕ್ರಮವಿತ್ತು. ಆದರೆ ನಂತರ ನೇರ ಅಭಿವ್ಯಕ್ತಿ ಆರಂಭವಾಯಿತು ಎಂಬುದು. ಆದರೆ ಅಕ್ಕಮಹಾದೇವಿಯಿಂದ ನೀಲಮ್ಮನವರೆಗೂ ಯಾವುದೇ ಸಂದಿಗ್ಧತೆ ಇಲ್ಲದೆ, ಪ್ರತಿಮೆಗಳಿಲ್ಲದೇ

ನೇರ ನಿರೂಪಣೆ ಶೈಲಿ ಇಲ್ಲಿದೆ ಎಂಬುದು ಗಮನಾರ್ಹವೆನಿಸಿದೆ. ವಚನಗಳು ಆಯಾ ಸಂದರ್ಭದ ತುಡಿತಗಳಾಗಿರದೇ ಶೋಧಪರತೆ ಅಥವಾ ವೈಚಾರಿಕ ರೀತಿಯ ಹುಡುಕಾಟವನ್ನು ಪ್ರಸ್ತಾಪಿಸುತ್ತವೆ. ಕಡೆಗೆ ಹಾಗೂ ಅತಿ ಮುಖ್ಯ ಚರ್ಚೆಯಾಗಿ ಈ ವಚನಗಳು ಆಕೆ ತನ್ನ ಅನೇಕ ಅನುಭವಗಳನ್ನು ಹೇಳಿಕೊಂಡು ಅದರ ಪರಿಣಾಮವನ್ನು ವಿವರಿಸುವ ಕಡೆಯಲ್ಲಿ ಆತ್ಮಸಾಕ್ಷಾತ್ಕಾರ ನೆಲೆಯಲ್ಲಿ ಪರ್ಯವಸಾನವಾಗುತ್ತವೆ. ಈ ವಚನಗಳು ಸಾಕಷ್ಟಿವೆ. ಇಲ್ಲಿ ಹುಡುಕಾಟ ಹಾಗೂ ದೊರಕುವಿಕೆಯ ಒಂದು ಸಮಗ್ರ ಪ್ರಕ್ರಿಯೆಯಾಗಿ ಈ ವಚನಗಳನ್ನು ಪರಿಭಾವಿಸಬಹುದಾಗಿದೆ. ಹುಡುಕಾಟದಲ್ಲಿ ತನ್ನದೇ ಆದ ನೆಲೆಗಳು, ಶರಣರು, ಬಸವಣ್ಣ, ಸಂಗಯ್ಯ ಹೀಗೆ ಒಂದು ಸಾಮಾಜಿಕ ವೃತ್ತವಿದೆ. ಇಲ್ಲಿಯ ವಚನಗಳ ಪ್ರಕಾರ ಮೇಲ್ನೋಟಕ್ಕೆ ಎರಡು ಹಂತಗಳಲ್ಲಿ ವಚನಗಳಲ್ಲಿ ದ್ವಿಭಾಗಿಸಬಹುದಾದರೂ ಆಂತರ್ಯದಲ್ಲಿ ಅದು ಸಮಗ್ರ ವೃತ್ತವೇ. ಹೇಗೆಂದರೆ ಮೊದಲು ತನ್ನ ತಾನರಿಯುತಲೇ ಬಸವಣ್ಣನವರ ಪ್ರಭಾವಕ್ಕೆ ಒಳಗಾಗುವ ರೀತಿಯನ್ನು ತಿಳಿಸುತ್ತಾಳೆ. ನಂತರ ಬಸವಣ್ಣನವರಿಂದ ಸಂಗಯ್ಯನಲ್ಲಿ ಒಂದಾಗುವ ಪರಿಯನ್ನು ತಿಳಿಸುತ್ತಾಳೆ. ಹಾಗೆಯೇ ಬಸವಣ್ಣನವರ ಐಕ್ಯದ ನಂತರ ಮತ್ತೆ ಬಸವ ನಿಷ್ಠೆ ಜಾಗೃತವಾಗುತ್ತದೆ. ಬಸವನಿಷ್ಠೆ–ಲಿಂಗನಿಷ್ಠೆ–ಬಸವನಿಷ್ಠೆಯಾಗಿ ಕಾಣುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಹೀಗೆ ವಚನಗಳನ್ನು ವಿಶ್ಲೇಷಿಸಿದಾಗ ಅನೇಕ ರೀತಿಯ ಹೊಳಹುಗಳು ಕಂಡುಬರುತ್ತವೆ. ಈ ವಚನಗಳೆಲ್ಲ ತತ್ಕಾಲೀನ(ಸಮಕಾಲೀನ) ಸಂವೇದನೆಗಳಾಗಿ ಭಾಸವಾದರೂ ಸಾರ್ವಕಾಲಿಕ ನೆಲೆಯಲ್ಲಿ ತಾತ್ವಿಕ/ಚಿಂತನೆಗಳಾಗಿ ಮಂಡಿತವಾಗಿದೆ.

೧. **ಚಾರಿತ್ರಿಕ/ಸಾಂದರ್ಭಿಕ ಘಟನಾವಳಿಗಳು:** ವಚನಗಳಲ್ಲಿ ಉಕ್ತವಾದ ಈ ಅಂಶ ಈಗಾಗಲೇ ಚರ್ಚಿತವಾಗುತ್ತಿರುವ ಹಲವಾರು ಅಂಶಗಳಿಗೆ ಪ್ರಧಾನ ಆಕರವಾಗಿದೆ. ನೇರವಾಗಿ ಅಲ್ಲಲ್ಲಿ ಸೂಚ್ಯವಾಗಿ ಹೇಳುತ್ತಿರುವ ನೀಲಮ್ಮನ ವಚನಗಳು ಸ್ಪಷ್ಟವಾಗಿ ಬಸವಣ್ಣನವರ ಕಾಲಾವಧಿಯ ಸಮಗ್ರ ಘಟನಾವಳಿಗಳನ್ನು ನಮ್ಮ ಮುಂದಿಡುತ್ತವೆ. ಆಯಾ ವಚನಗಳ ಮೂಲಕ ಆ ಅಂಶ ಸ್ಪಷ್ಟಪಡಿಸಬಹುದು.

> "ಆದಿಯಾಧಾರವಿಲ್ಲದಂದು ಕಳೆ ಬೆಳೆ ಮೊಳೆದೋರದಂದು
> ..................................................
> ..................................................
> ಅಪ್ರತಿಮ ಶಿವಗಣಂಗಳ ಮಹತ್ವಮಂ ಮೆದಾತ ನಮ್ಮ ಬಸವಯ್ಯನು
> ಪ್ರಣವದ ಬೀಜವಂ ಬಿತ್ತಿ ಪಂಚಾಕ್ಷರಿಯ ಬೆಳೆಯಂ ಬೆಳೆದು
> ಪರಮ ಪ್ರಸಾದವನೊಂದು ರೂಪುಮಾಡಿ ಮೆರದು

ಭಕ್ತಿಫಲವನುಂಡಾತ ನಮ್ಮ ಬಸವಯ್ಯನು
ಚೆನ್ನಬಸವನೆಂಬ ಪ್ರಸಾದಿಯಂ ಪಡೆದು
ಅನುಭವಮಂಟಪವನು ಮಾಡಿ
ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು"[೧]

ಇಲ್ಲಿ ಬಸವಣ್ಣನವರ ಸಮಗ್ರ ಕ್ಷೇತ್ರಕಾರ್ಯ ವರದಿ ರೂಪವಾಗಿದೆ. ಅನುಭವ ಮಂಟಪ ಇದ್ದ ಖಚಿತತೆ ಇಲ್ಲಿ ಸ್ಪಷ್ಟವಾಗಿದೆ. ಚೆನ್ನಬಸವನನ್ನು ರೂಪಿಸಿದ ಹಾಗೂ ಅವನೇ ಮಗನಂತಿದ್ದ ಎಂಬ ವಿವರವೂ ಸ್ಪಷ್ಟವಿದೆ.

"ನಾಡಿನ ಹೆಣ್ಣುಗಳೆಲ್ಲರು ಬನ್ನಿರೆ ಅಕ್ಕಗಳಿರಾ
.....................................
................................
ನಮ್ಮ ಸಂಗಯ್ಯನಲ್ಲಿ
ಬಸವನೈಕ್ಯ ಬಯಲಿಲ್ಲದ ಬಯಲು"[೨]

ಬಸವಣ್ಣನವರು ಕೂಡಲಸಂಗಮನಲ್ಲಿ ಐಕ್ಯವಾದ ವಿಚಾರವನ್ನು ಇದು ತಿಳಿಸುತ್ತದೆ. ಹಾಗೂ ಬಯಲಿಲ್ಲದ ಬಯಲು, ಬಯಲೆಂದರೆ ಬಯಲು ಆದರೆ ಸಮತಟ್ಟಾದ ನೆಲವಲ್ಲ ಎಂಬುದು ಹಾಗಿರಬೇಕು.

"ಮುನ್ನಲೊಂದು ಶಿಶು ಹುಟ್ಟಿತ್ತು
............................"[೩]

ಇದು ಕೂಡ ಬಸವಣ್ಣನವರ ಐಕ್ಯವನ್ನೇ ಹೇಳುತ್ತದೆ. "ಆ ಮಾಣಿಕ್ಯ ಕೆಲವು ವರ್ಣವ ತೋರಿ ಬಯಲನೆ ನೆಮ್ಮಿತ್ತು ಮಾಣಿಕ್ಯನ ಕುರುಹಿಲ್ಲ ಬಯಲಿಂಗೆ ಬಣ್ಣವಿಲ್ಲ....... ಸಂಗಯ್ಯನಲ್ಲಿ ಹೆಸರಳಿದ ಬಸವಂಗೆ ಕುರುಹಿಲ್ಲ.

"ಅಲ್ಲಲ್ಲಿಯ ಶರಣರು ಅಲ್ಲಲ್ಲಿಯೇ ನಿಂತಾ
......................................
ಸಂಗಯ್ಯನ ಮುಖವರಿತೆನಯ್ಯ"[೪]

ಇದು ಕಲ್ಯಾಣ ಕ್ರಾಂತಿಯ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ. ಕೆಲವರು ಶರಣರು ಬೇರೆಲ್ಲಿಯೋ ಹೋಗಿ ನಿಂತರು(ಅಲ್ಲಲ್ಲಿ ನಿಂತಾ)ಎಂಬುದು ಬೇರೆ ಬೇರೆ ಕಡೆ ಹೋಗಿ ನಿಂತಿರುವುದನ್ನು ಸ್ಪಷ್ಟೀಕರಿಸುತ್ತದೆ. ಭಕ್ತಿ ಇಲ್ಲವಾಯಿತು. "ಅಲ್ಲಲ್ಲಿಯ ಕಾಯವಲ್ಲಲ್ಲಿಯೇ

ಸಂದು" ಅನೇಕ ಶರಣರು ಅಲ್ಲಲ್ಲಿಯೆ ಐಕ್ಯವಾದರು. ನಾನು ಅಲ್ಲಲ್ಲಿಯೇ ಅಡಗಿಯಾನು ಅನುಮಿಷ ದೃಷ್ಟಿಯುಳ್ಳವಳಾದೆನು" ನಾನು ಕೂಡ ಅಡಗಿ ಸಂಗಯ್ಯನಲ್ಲಿ ದೃಷ್ಟಿ ಇಟ್ಟೆನು ಎಂಬುದನ್ನು ನೀಲಮ್ಮ ಸ್ಪಷ್ಟಪಡಿಸುತ್ತಾಳೆ.

"ಎಸಳೆಸಳ ಹೊಸೆದು ನೋಡುವ ಯೋಗಿಗಳು
ಬಸವ(ನ) ಅಯಿಕ್ಯವ ಕಾಣದಾದರು
ರೂಪ ನಿರೂಪಿಸುವ ಯೋಗಿಗಳು
ಬಸವನ ಅಯಿಕ್ಯವ ಕಾಣದಾದರು
ಸಂಗಯ್ಯ ನಿಮ್ಮ ಬಸವನ ಅಯಿಕ್ಯವ ಬಲ್ಲಾತ ಚೆನ್ನಬಸವಣ್ಣನು"[೫]

ಇದು ನೇರವಾಗಿ ಬಸವಣ್ಣನವರು ಐಕ್ಯವಾದುದನ್ನು ತಿಳಿಸುತ್ತದೆ. ಅಷ್ಟೇ ಅಲ್ಲದೆ ಬಯಲಾದರು ಎಂಬ ಸೂಚ್ಯಾರ್ಥಕ್ಕಿಂತ ಇದು ಸ್ಪಷ್ಟಾರ್ಥ ಒಳಗೊಂಡಿದೆ. ಅಲ್ಲದೇ ಈ ವಿಚಾರ ಗೊತ್ತಿರುವುದು ಚೆನ್ನಬಸವಣ್ಣನವರಿಗೆ ಮಾತ್ರವೇ ಎಂದು ಅವರ ಉತ್ತರಾಧಿಕಾರಿತ್ವವನ್ನು ಸೂಚ್ಯವಾಗಿ ತಿಳಿಸುತ್ತಾಳೆ.

"ಇಪ್ಪೆಯ ಹೂವನ್ನು...............
.....................................
ನಮ್ಮ ನಿಮ್ಮ ಸಂಸರ್ಗದಲ್ಲಿ ನಿರೂಪಮಾಕಾರಮೂರ್ತಿಗಳಾಗಿ
..................................................
..................................................
ಬಸವನಲ್ಲಿ ಎಮಗೆ ತೆರಪಿಲ್ಲವಯ್ಯ
ಹಡಪದಪ್ಪಣ್ಣ ಭಾವಶೂನ್ಯರು ನಾನು ಸಂಗಯ್ಯ"[೬]

ಹಡಪದಪ್ಪಣ್ಣವರ ಸಮಕಾಲೀನತೆಯನ್ನು ಇವರ ಕುಟುಂಬಕ್ಕೆ ಅವರು ಆತ್ಮೀಯರಾಗಿದ್ದ ರೆಂಬುದನ್ನು ಈ ವಚನ ದೃಢಪಡಿಸುತ್ತದೆ. ಶರಣರ ವಿಚಾರವಾಗಿ ನೀಲಮ್ಮನವರು ಎಷ್ಟು ಹೊಗಳಿದ್ದಾರೆ ಎಂಬುದು ಗಮನಾರ್ಹ. ಜೊತೆಗೆ ಅಪ್ಪಣ್ಣನವರು ಜ್ಞಾನಿ ಎಂಬುದು ಗಮನೀಯ ಸಂಗತಿ.

"ಯತಿಯರ ಮನವನತಿ................
.................................................
ಅಪ್ಪಣ್ಣ ತಂದ ಅಪ್ರತಿಮ ಶಿವಾಚಾರ"[೭]

ಇಲ್ಲಿ ಅಲ್ಲಮಪ್ರಭುಗಳಿಗೂ, ಬಸವಣ್ಣನವರಿಗೂ ನಡೆವ ಸಂವಾದ ಹಾಗೂ ಅಪ್ಪಣ್ಣನವರ ಜ್ಞಾನದ ಸಂದರ್ಭ ವರ್ಣಿತವಾಗಿದೆ.

"ಎನಗೇನೆಂಬೆನೆಂಬ ಸಂದೇಹ.......

..............................................

ಅಪ್ರಮಾಣದೊಳಿಗೆ ಅಯಿಕ್ಯವಾದೆನಯ್ಯ

...........................................

ಬಯಲ ಸುಖವನುಂಡೆನಯ್ಯ"[೮]

ಇಲ್ಲಿ ಎರಡು ಪ್ರಸಂಗಗಳನ್ನು ಅನ್ವಯಿಸಬಹುದಾಗಿದೆ. ಬಸವನಿಷ್ಠೆಯ ನಂತರದ ಘಟ್ಟದಲ್ಲಿ ನಂತರ ನೀಲಮ್ಮ ತನ್ನನ್ನು ತಾನು ಅರಿತು "ಮುಕ್ತಾಂಗನೆಯಾದೆನು" ಎಂದು ಸಂಗಮನಾಥನನ್ನು ಅರಿತಿರುವ ಸಾಧ್ಯತೆ. ಇನ್ನೊಂದು ಬಸವಣ್ಣನವರ ಐಕ್ಯದ ನಂತರ ನಾನೆಂಬ ಸಂದೇಹ ಹರಿದು ಐಕ್ಯವಾದುದನ್ನು ಸೂಚಿಸಿದ್ದಾರೆ ಎನ್ನಬಹುದು.

"ಬಸವಣ್ಣನೇ ಗುರುವೆಂದು............

...............................................

..................................................

ಮಹಾಮನೆಯಲ್ಲಿ ಸುಖಿಯಾದೆ, ಸಂಗಯ್ಯ"[೯]

ಇಲ್ಲಿ ಮಹಾಮನೆಯ ಸ್ಪಷ್ಟೋಕ್ತಿ ಹಾಗೂ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು ಜಿಲ್ಲಾಳದೇವರು, ಇಹ ಪಗೆಯೊಂಡರು ಸಮಕಾಲೀನ ಶರಣರೆಂಬುದು ತಿಳಿದುಬರುತ್ತದೆ. ಅನುಭವಮಂಟಪ, ದಾಸೋಹ, ಮಹಾಮನೆ ಈ ಪರಿಕಲ್ಪನೆಗಳ ಸ್ಪಷ್ಟತೆ ಗೋಚರಿಸುತ್ತದೆ.

"ಲಕ್ಷದ ಮೇಲೆ ತೊಂಬತ್ತಾರು ಸಾವಿರ

ಜಂಗಮದ ಮಾಡಿ ಕೇಳಿಯಿತ್ತಿಂದಿಂಗೆ

ಊಡಿವಳಿಯಿತ್ತಿಂದಿಂಗೆ

ಅವರ ಸಂಗವಳಿದು

ನಿರಾಲಿಂಬ ಮೂರ್ತಿಯ ಇರವು ಕಾಣಿಸಿತಯ್ಯ ಸಂಗಯ್ಯ

ಬಸವನರೂಪೆನ್ನಲ್ಲಿಯಡಗಲೂ"[೧೦]

ಬಸವಣ್ಣನವರು ಲಕ್ಷದ ೯೬ ಸಾವಿರ ದಾಸೋಹ ಕಾರ್ಯಕ್ರಮ ನಡೆಸುತ್ತಿದ್ದುದು, ಜಂಗಮರು ಊಟಮಾಡುತ್ತಿದುದು ಇಂದಿಗೆ ನಿಂತು ಹೋಯಿತು ಎಂಬುದಾಗಿ ತಿಳಿಸುತ್ತಾ ಬಸವಣ್ಣನವರು ಐಕ್ಯವಾದುದನ್ನು ತಿಳಿಸುತ್ತಾರೆ.

೨. **ಅಕ್ಕಮಹಾದೇವಿಯ ನಿಲುವು:** ಬಹಳಷ್ಟು ಲೇಖಕರು ಹಾಗೂ ವಿಮರ್ಶಕರು ನೀಲಮ್ಮನನ್ನು ಅಕ್ಕಮಹಾದೇವಿಗೆ ಹೋಲಿಸುತ್ತಾರೆ. ಆಶ್ಚರ್ಯವೆಂದರೆ ನೀಲಮ್ಮರಾಗಲಿ, ಇತರ ಶರಣೆಯರಾಗಲಿ ಅಕ್ಕಮಹಾದೇವಿಯನ್ನು ಪ್ರಸ್ತಾಪಿಸುವುದೇ ಇಲ್ಲ. ಆದರೆ ಅವರನ್ನು ಅನುಸರಿಸಿದ ಧಾಟಿ ಕಂಡುಬರುತ್ತದೆ. ಹಾಗಾಗಿ ಇವರ ವಚನಗಳಲ್ಲಿ ಬಳಸಿದ ಶೈಲಿ, ಭಾಷೆ, ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ತೌಲನಿಕವಾಗಿ ನೋಡುವ ಸಾಧ್ಯತೆಯಿದೆ.

"ಎಸಳ ಪಂಜರದ ಪಕ್ಷಿಯೆ ನೀನೆಲ್ಲಿ ತೋರೆ ಎಲ್ಲಿಯಡಗಿದೆ?
ಎತ್ತಳ ಭ್ರಮೆ ಎತ್ತಳನುಕೂಲತೆ
ಎನಗೆತ್ತಳ ಮಾಯದ ಸಂಗವಯ್ಯ
ನಾನೆತ್ತಲಿ? ಬಸವನೆತ್ತ?
ಮನವೆತ್ತ? ತನುವೆತ್ತ?
ಸಂಗಯ್ಯನೆತ್ತ ಹೋದೆತ್ತ"[೧೧]

ಇದು ಅಕ್ಕಮಹಾದೇವಿಯ ಪ್ರಾಕೃತಿಕ ವರ್ಣನಾ ಸ್ವರೂಪದ

"ಎತ್ತಣ ಮಾಮರ ಎತ್ತಣ ಕೋಗಿಲೆ
..........................ಎಂಬುದಕ್ಕೆ ಪರ್ಯಾಯವಾಗಿದೆ."[೧೨]

"ಐಕ್ಯವ ತೋರಿ ಅಜಾತನಲ್ಲಿ ನಿಂದ ಬಸವಾ
ಅರ್ಪಿತವಲ್ಲಿ ನಿರಾಭಾರಿಯಾದ ಬಸವಾ
ಅನು ಸುಖ ಸಂಯೋಗಿಯಾದೆ ನಿನ್ನಲ್ಲಿ ಬಸವಾ
ಎನಗೆ ಹೇಸರಳಿಯಿತ್ತು ಕುರುಹಳಿಯಿತ್ತು ಬಸವಾ
ಸಂಗಯ್ಯ ನಿನ್ನೊಳಗಡಗಿ ನೀನೆನ್ನೊಳಗಡಗಲು
................................"[೧೩]

ಅಕ್ಕಮಹಾದೇವಿ ವಚನ

"ಚಿಲಿಪಿಲಿ ಎಂದು ಓದುವ ಗಿಳಿಗಳಿರಾ
...................................
ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು ಹೇಳಿರೆ"[೧೪]

ಚೆನ್ನಮಲ್ಲಿಕಾರ್ಜುನನರಸಿ ಹೊರಟ ಅಕ್ಕಮಹಾದೇವಿ ತನ್ನಾಸೆ ಹೇಳಿಕೊಂಡಂತೆ ತನ್ನ ಗಂಡ ಚೆನ್ನಮಲ್ಲಿಕಾರ್ಜುನ ಎಂದ ವಚನದ ಹಾಗೆ

ನೀಲಮ್ಮನವರು ತಮ್ಮಾಸೆಯನ್ನು ಹೇಳಿಕೊಳ್ಳುತ್ತಾರೆ

"ಕಾಮವನಳಿದ ಹೆಣ್ಣಲ್ಲ ನಾನು ಕಾಮ ಉಂಟೆನಗೆ
ಕಾಯ..................
......................................
ಅಂಗದ ಸಂಗವ ಹಿಂಗಿ ಅಂಗವಳಿದೆನಯ್ಯಾ
....................................
.............................."[೧೫]

ಅಕ್ಕಮಹಾದೇವಿ ಗಿಡಮರಗಳನ್ನು ಕೇಳುತ್ತ ಹೊರಟ ಹಾಗೆ ನೀಲಮ್ಮ ಕೂಡ ತನ್ನ ಪತಿಯನ್ನು ಹುಡುಕುವ ಪರಿಯನ್ನು ಈ ಕೆಳಗಿನ ವಚನ ಹೇಳುತ್ತದೆ.

"ಎಲ್ಲೈ ಅಯ್ಯಗಳಿರಾ ಎಲೆಗಳಿದ ವೃಕ್ಷದ ಕಂಡಿರೆ?
ಎಲೆಯಯ್ಯಗಳಿರಾ ಕೂಹಿಲ್ಲದ ಮೋದ್ಯದ ಕಂಡಿರೆ?
ಎಲೆ ಸ್ವಾಮಿಗಳಿರಾ ನಿಮ್ಮ ಸಾವಿನ ದರ್ಪಣವ ಕಂಡಿರೆ?
ಸಂಗಯ್ಯನಲ್ಲಿ ಸ್ವಯವಳಿದ ಬಸವನ ಕುರುಹ ಕೇಳಿರೆ"[೧೬]

ಅಕ್ಕ ಹೇಳುವ ಹಾಗೆ

"ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ
.......................................
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದನು."[೧೭]

ನೀಲಮ್ಮನವರು

"ನಾಡಿನ ಹೆಣ್ಣುಗಳೆಲ್ಲರೂ ಬನ್ನಿರೆ ಅಕ್ಕಗಳಿರಾ
ಅಕ್ಕನರಸ ಬಯಲ ಕಂಡು ಬಡ್ಡಿ ಬಯಲಾದನು
ಅಕ್ಕಗಳಿರಸ ನಿಲ್ಲದೆ ನಿರಕ್ಕರ ನಾದನು
ನಮ್ಮ ಸಂಗಯ್ಯನಲ್ಲಿ
ಬಸವನೈಕ್ಯ ಬಯಲಿಲ್ಲದ ಬಯಲು"[೧೮]

ಅಕ್ಕ ಹೇಳುವ ಪುರುಷ ವಿರೋಧಿ ನೆಲೆಯಲ್ಲಿ ನೋಡುವುದಾದರೆ ಲೋಕದ ಗಂಡಂದಿರನ್ನು ಒಲೆಯೊಳಗೆ ಇಕ್ಕುವೆ ಎಂದು ಹೇಳಿದಂತೆ.

ನೀಲಮ್ಮನವರು ಸಹಿತ ಪುರುಷ, ಮಡದಿ ಎಂಬ ಪದಗಳಿಂದ ಮುಕ್ತವಾಗಿ ಮುಂದುವರೆದು ಹೇಳುತ್ತಾರೆ.

"ಮಡದಿ ಎನ್ನಲಾಗದು ಬಸವಂಗೆ ಎನ್ನನು
ಪುರುಷನನಲಾಗದು ಬಸವಂಗೆ ಎನ್ನನು
ಉಭಯದ ಕುಳಹರಿದು ಬಸವಂಗೆ ಶಿಶುವಾನಾದೆನು
ಬಸವನನ್ನ ಶಿಶುವಾದ
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಚ್ಚಿದ ಮಿರದೆ ಬಸವನೊಳಗಾನಡಗಿದೆ"[೧೯]

**ಸ್ವಂತ ವಿಚಾರ ಮಂಡಿಸುವ ಕ್ರಮ** : ಮೊದಲು ಸಾಹಿತ್ಯದಲ್ಲಿ ಮಹಿಳೆಯೊಬ್ಬಳು ಕಾವ್ಯ ರಚನೆಗೆ ತೊಡಗುವಾಗ ಕೃಷ್ಣ–ರಾಧಾ ಸಂವಾದ, ಪ್ರೀತಿ ಇತ್ಯಾದಿ ಅಂಶಗಳನ್ನು ಕಾಣಬಹುದಾಗಿದೆ. ಅವಳ ಮನಸ್ಸಿನ ನೇರ ಅಭಿವ್ಯಕ್ತಿ ಸಾಧ್ಯವಾಗಿಲ್ಲ ಎಂಬ ವಾದವೊಂದಿದೆ. ಆದರೆ ಅಕ್ಕಮಹಾದೇವಿಯಾಗಿ ನೇರ ಅಭಿವ್ಯಕ್ತಿಯ ಕ್ರಮವನ್ನು ಗಮನಿಸಬಹುದಾಗಿದೆ. ಇದು ಆಕಾಲಕ್ಕಿದ್ದ ಸ್ವತಂತ್ರ ವಿಚಾರಪರತೆಯನ್ನು ತೋರಿಸುತ್ತದೆ.

೧. "ನಾನು ನಿಮ್ಮವಳಲ್ಲವಯ್ಯಾ, ನಾನು ಅನಿಮಿಷನವರವಳು

......................................................

ನಾನು ಬಸವಯ್ಯನ ಮನೆಯ ತೊತ್ತಿನ ಮಗಳು"[೨೦]

ಇಲ್ಲಿ ಶರಣರನ್ನು ಸ್ತುತಿಸಿದ್ದಾಳೆ. ಅಲ್ಲದೇ ತನ್ನ ಗುರುತನ್ನು ಆ ಮೂಲಕ ಸ್ಪಷ್ಟೀಕರಿಸಿಕೊಂಡಿದ್ದಾಳೆ.

೨. "ಮಡದಿ ಎನಲಾಗದು.............

........................................"[೨೧]

ಇಲ್ಲಿ ಅವಳ ಸ್ವತಂತ್ರ ಅಭಿವ್ಯಕ್ತಿ ಹಾಗೂ ವೈಚಾರಿಕತೆಯನ್ನು ಗುರುತಿಸಬಹುದಾಗಿದೆ. ಹಾಗೂ ಸಂಗಮನಾಥನ ಏಕಕಾಲಕ್ಕೆ ಬಸವಣ್ಣನವರೊಂದಿಗಿನ ಭಾವವನ್ನು ಸ್ಪಷ್ಟಪಡಿಸಿದ್ದಾಳೆ.

೩. "ಹಂದೆಯಲ್ಲ ನಾನು ಹರುಷದ ಧೈರ್ಯ.......

................................................"[೨೨]

"ಭ್ರಮೆಯಡಗಿ ಕಲೆನಷ್ಟವಾಗಿ ಮುಖವರತು ಮನ ವಿಚಾರವ ಕಂಡೆನಯ್ಯ ಸಂಗಯ್ಯ"[೨೩] ಎನ್ನುವ ಮೂಲಕ ತನಗೂ ಅಸ್ಮಿತೆಯಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾಳೆ.

೪. ಎತ್ತಳ ಮನವ ನತ್ತತ್ತಲಡಗಿಸಿದೆ ಬಸವಾ

....................ನಿಮ್ಮರಿವಿನಲ್ಲಿ ಸಂಗಯ್ಯ"[೨೪]

೫. "ಎನಗೆ ಸಂಸಾರ ಬಂಧ................"[೨೫]

ಸಂಸಾರದ ಸಾರ, ಸಸ್ಸಾರತೆಯನ್ನು ಆಕೆಯು ಅನುಭವಿಸಿ ತನ್ನನ್ನು ತಾನು ಅರಿತವಳಾಗಿ ತೋರುತ್ತಾಳೆ.

೬. "ಮಡದಿ ಎಂಬ ಶಬ್ದ ನಿಶ್ಯಬ್ದವಾದಡೆ......

........................................................"[೨೬]

ಎಂದು ಹೇಳುತ್ತಲೇ ದ್ವಂದ್ವಾತ್ಮಕ ನಿಲುವು ಪ್ರಕಟಿಸುತ್ತಾಳೆ. 'ಬಸವನ ಹರುಷವನರೆದರೆ ನಾನೈಕ್ಯ ಸಂಪನ್ನೆಯಯ್ಯಾ ಸಂಗಯ್ಯ" ಎಂದು ಏಕಕಾಲಕ್ಕೆ ವಿರೋಧ ಹಾಗೂ ಪರಧೋರಣೆ ಕಾಣಬರುತ್ತದೆ. ಮೇಲ್ನೋಟದ ವಸ್ತುವಾದರೂ ಆಂತರ್ಯದಲ್ಲಿ ಅದು ಕೇವಲ ಸಂಸಾರಿಕತೆಗೆ ನಮ್ಮ ನಿಲುವಿಲ್ಲ. ಅದನ್ನು ಮೀರಿದ ವಚನಕ್ರಾಂತಿಯಿಂದ ಬಸವಣ್ಣನವರು ಹರುಷದಿಂದಿದ್ದರೆ ನಾನು ಸುಖಿ ಎಂಬ ಭಾವ ಇಲ್ಲಿದೆ.

೭. "ಹೆಸರಿಲ್ಲದ ರೂಪ ಕಂಡು

ಹೆಸರಿದು ಹೆಣ್ಣು ರೂಪ ತಾಳಿದೆ ನಾನು

...................................."[೨೭]

ತನ್ನತಾನರಿವ ಬಗೆಯಾಗಿ ನೀಲಮ್ಮನವರು ಇಲ್ಲಿ ಹೇಳುತ್ತಾರೆ.

೮. "ಕಾಮವನಳಿದ ಹೆಣ್ಣಲ್ಲ ನಾನು.....

......................................"

೯. ಹಿರಿಯತನಕ್ಕೆ ಹೆಣ್ಣೆಂದು ಕರೆದರೆ

.............................."[೨೮]

ಇಲ್ಲಿ ಹೆಣ್ಣು ಎಂಬುದೇ ಸಾಧನೆಗೆ ಅಡ್ಡಿಯಾಗಬಾರದೆಂದು ತಿಳಿಸುತ್ತ. ಹೆಣ್ಣು ಸಂಸಾರ ಇವೆಲ್ಲವುಗಳಿಂದ ಸಾಧನಾಮಾರ್ಗದಿಂದ ಸಾಧಿಸಿದ ವ್ಯಕ್ತಿಯೆಂದು ತಿಳಿಸುತ್ತಾಳೆ.

**ಶೋಧನಾ ನಿಲುವು** : ನೀಲಮ್ಮನವರು ವಿಚಾರಪತ್ನಿಯೆಂಬುದಕ್ಕೆ ಕಾರಣ ಅವರಲ್ಲಿರುವ ಶೋಧನಾಪರತೆ, ಅವರ ಸಾಧನೆಯ ಛಲ, ಅವರ ವಚನಗಳ ಮೂಲದ್ರವ್ಯಶೋಧನೆ(ಹುಡುಕಾಟ).

"ದ್ವಯಲಿಂಗವೆಂಬರು

.............................

.........................

ನಿಃಪ್ರಪಂಚಿಯಾನಾದೆನಯ್ಯ"[೨೯]

ಇಲ್ಲಿ ನೀಲಮ್ಮನವರು ದ್ವಯ ಹೋಗಿ ಏಕತೆ ಬರಬೇಕು ಅಂದಾಗ ಈ ಪ್ರಪಂಚದಲ್ಲಿಯ ವಾಸನಾತ್ರಯಗಳಿಂದ ದೂರವಾಗಿ ನಿರಾಕಾರ ಸ್ಥಿತಿ ತಲುಪುತ್ತೇವೆ. ಮುಂದುವರೆದು ಹೇಳುತ್ತಾರೆ. "ಇರವಿಲ್ಲದ ವಸ್ತುವ ಕಂಡು ಪರವಶದ ಮೂರ್ತಿಯನರಿದೆನಯ್ಯ......"[೩೦] ಹಾಗಾಗಿ ಈಕೆಯಲ್ಲಿ ಸದಾ ಶೋಧನೆಯಿಂದ ಪಾರಮಾರ್ಥಿಕ ನಿಲುವು ಕಾಣಲು ಹಂಬಲಿಸುತ್ತಾ "ಮನದ ಮಧ್ಯದ ಮೂರ್ತಿಯರಿದು....."[೩೧] ಒಂದು ನಿಶ್ಚಲಭಾವಕ್ಕೆ ಒಂದು ಶಿವಸುಖದ ಸಂಪ್ರೀತಿ ಪಡೆಯಲು ಮುಂದಾಗುವುದೊಂದಿಗೆ ತನ್ನ ಮನದಲ್ಲಿಯ ಶೋಧನೆ ಮಾಡಿ ಸ್ವಯಂ ರೂಪಿಯಾಗಿ ನಿರಾಕಾರದ ತುತ್ತ ತುದಿಗೆ ಏರುವ ಸ್ಥಿತಿಯ ಮೂಲಕ ತನ್ನಲ್ಲಿಯೇ ಸರ್ವಶಕ್ತನನ್ನು ಹುಡುಕುವ ಪರಿಗೆ ಬಂದು, ನಂತರದಲ್ಲಿ ನಿರಾಕಾರದ ನಿರ್ಮಲತೆಗೆ ಬಂದಿದ್ದು ಈಕೆಯ ವಚನಗಳಲ್ಲಿ ಕಂಡುಬರುತ್ತದೆ.

**ಅನುಭವದಿಂದ ಅನುಭಾವದೆಡೆಗಿನ ಪಯಣವಾಗಿ:** ನೀಲಮ್ಮನವರು ಅನುಭವದಿಂದ ಹೇಳಿದ ವಚನಗಳಾಗಿ ಕಂಡುಬಂದಿವೆ. ನಂತರದಲ್ಲಿ ಅನುಭಾವಕ್ಕೆ ನಡೆಯುವಂತದ್ದು. ಈಕೆಯಲ್ಲಿ ಕಾಣುತ್ತೇವೆ. ಈ ನಿಶ್ಚಲ ಭಾವನೆಗಳು ಒದಗಿಸಲಿಕ್ಕೆ ಮೂಲಕರಣ ಅಧ್ಯಾತ್ಮ ಸಾಧನೆ. ಶರಣರ ಸಂಗ, ಈಕೆಯನ್ನು ಅನುಭಾವಿಯ ವಿಚಾರ ತತ್ಪರತೆ ಒಲುವಿನತ್ತ ಸಾಗಿದ್ದನ್ನು ಕಾಣಬಹುದು.

"ಎಲೆಗಳೆದ ಮರದಲ್ಲಿ ನೆಳಲನರಸಲಿಲ್ಲ
ಕಳೆಯರತ ದೀಪದಲ್ಲಿ ಬೆಳಗನರಸಲಿಲ್ಲ
.....................................
.....................................
ಸಂಗಯ್ಯನಲ್ಲಿ ಕಾಯವಿಲ್ಲದ ಕರುಣೆಯಾದೆನು ನಾನು"[೩೨]

ಎಲೆಯಿಲ್ಲದ ಮರದಲ್ಲಿ ನೆರಳೆ ಬಯಸಲಿಕ್ಕೆ ಸಾಧ್ಯವಿಲ್ಲ. ಹಾಗೆ ಕಲ್ಮಶವನ್ನು ಕಳೆದು ಶುದ್ಧತೆಯಾದಲ್ಲಿ ಮನ ಪರಿಶುದ್ಧದಿಂದ ಅನುಭಾವ ಸ್ಥಿತಿಯ ತೋರಣ ಕಟ್ಟಿದ್ದು, ಗೋಚರಿಸುತ್ತದೆ. ಹಾಗೆ ಅನುಭವದಿಂದ ಅನುಭಾವ ಸ್ಥಿತಿಗೆ ಬಂದಾಗ ವಿಶಾಲತೆಯ ಗುಣ ಒಡಮೂಡಿ, ನಿರಾಕಾರತ್ವದ ಸ್ಥಿತಿಯನ್ನು ತಲುಪುವಂತದ್ದು ಹೇಳುತ್ತಾಳೆ. ಹಾಗೆ

"ಪ್ರಣವಿಲ್ಲದ ಪಂಚಾಕ್ಷರಿಯ ತಿಳಿಯಲು
ಆ ಪಂಚಾಕ್ಷರಿಯನರೆದು ಆನುಬದುಕಿದೆನಯ್ಯ......"[೩೩]

ಅನುಭಾವ ಸ್ಥಿತಿಗೆ ಬರಲು ತಾತ್ವಿಕನೆಲೆ ಅವಶ್ಯ. ಅದನ್ನು ತಿಳಿದ ಮೇಲೆ ಇನ್ನಾವುದು ಅವಶ್ಯಕತೆ ಬರುವುದಿಲ್ಲ ಎಂಬುದನ್ನು ಹೇಳುತ್ತಾಳೆ. ಅಲ್ಲದೆ "ಆನು ಇಹಪರದ ಹಂಗು ಹರಿದು ಆನು ಸುಖಿ ಪ್ರಸನ್ನ ರೂಪಾಯಿತ್ತಯ್ಯ ಸಂಗಯ್ಯ"[೩೪] ಎಂಬುದರ ಮುಖಾಂತರ ಈ ಜಗತ್ತಿನ ಜಂಜಾಟ ನನಗೆ ಬೇಡವೆಂದು ಹೇಳುತ್ತಾಳೆ. ಹಾಗೆ "ಅಲ್ಲದ ಅನುಭಾವಕ್ಕೆ ಅಲ್ಲದ ವಿವರವ ಕಂಡು ಆನು ಬದುಕಿದೆನ್ನಯ ಸಂಗಯ್ಯ"[೩೫] ಅನುಭಾವದ ನಿಜಸ್ಥಿತಿ ತಿಳಿದು ಜೀವಾತ್ಮ ಪರಮಾತ್ಮನಾಗಲಿಕ್ಕೆ ಸಾಧನೆಯು ಬಹಳ ಮುಖ್ಯ ಎಂಬುದನ್ನು ಸ್ಪಷ್ಟಪಡಿಸುತ್ತಾಳೆ.

ನೀಲಾಂಬಿಕೆಯ ವಚನಗಳ ಅಂಕಿತನಾಮದ ಬಗ್ಗೆ ಪ್ರೊ.ಶ್ರೀಮತಿ ಎಚ್.ಎಂ.ಬೀಲಗಿಯವರು "ಬಸವ ಪ್ರಿಯ ಕೂಡಲಸಂಗಮದೇವಾ, ಸಂಗಯ್ಯ, ಸಂಗನ ಗುರುಬಸವಾ"[೩೬] ಎಂಬುದಾಗಿ ಅಭಿಪ್ರಾಯಪಟ್ಟರೆ, ನೀಲಲೋಚನೆಯ ವಚನಗಳು ಎಂಬ ಪುಸ್ತಕ ಸಂಪಾದಕರಾದ ಸಿ.ಕೆ.ಪರಶುರಾಮಯ್ಯನವರು ಪೀಠಿಕೆಯಲ್ಲಿ ನೀಲಾಂಬಿಕೆಯ ವಚನಗಳ ಅಂಕಿತನಾಮದ ಬಗ್ಗೆ "ಡಾ.ಎಲ್.ಬಸವರಾಜು ಅವರು "ಶಿವದಾಸ ಗೀತಾಂಜಲಿಯ", ಗ್ರಂಥಸ್ಥ ಗೀತೆಗಳ ಅಂಕಿತ ಮತ್ತು ಕರ್ತೃಗಳು" ಎಂಬ ಭಾಗದಲ್ಲಿ ಸಂಗ, ಸಂಗನಪ್ರಭು, ಸಂಗಮನಾಥ, ಸಂಗಯ್ಯ ಎಂಬುದು ನೀಲಲೋಚನೆಯಮ್ಮನ ಹಾಡುಗಳ ಅಂಕಿತವೆಂದು ಗುರುತಿಸಿರುವರು. ಶೂನ್ಯಸಂಪಾದನೆಯಲ್ಲಿ 'ಸಂಗನ ಗುರುಬಸವಾ"[೩೭] ಎಂದು ಬರುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಹಾಗೆ ಎಂ.ಎಂ.ಕಲ್ಬುರ್ಗಿಯವರು "ನೀಲಲೋಚನೆಯ ಹೆಸರಿನಲ್ಲಿ ಸಂಗ, ಸಂಗಪ್ರಭು, ಸಂಗಮನಾಥ, ಸಂಗಯ್ಯ ಸಂಗನಗುರುಬಸವಾ, ಬಸವಪ್ರಿಯ ಕೂಡಲ ಸಂಗಮದೇವಾ ಮುದ್ರಿಕೆಯ ಅನೇಕ ವಚನ, ಸ್ವರವಚನಗಳು ಸಿಗುತ್ತವೆ"[೩೮] ಎಂದು ಹೇಳುತ್ತಾರೆ. ಈ ವಿದ್ವಾಂಸರ ಅಭಿಪ್ರಾಯದಿಂದ ಈಕೆಯ ಅಂಕಿತನಾಮ ವಚನದ್ದೆ ಎಂಬುದು ತಿಳಿಯುತ್ತದೆ. ಹಾಗೂ ಈ ಅಂಕಿತನಾಮವನ್ನು ಈಕೆ ಸಂದರ್ಭಾನುಸಾರವಾಗಿ ಬಳಸಿರಬಹುದು. ಈಕೆಯ ವಚನಗಳು ಕೇವಲ ೧೨೬ ವಚನಗಳನ್ನು ೧೯೯೩ರಲ್ಲಿ ಪ್ರಕಟವಾದ ಡಾ.ವೀರಣ್ಣ ರಾಜೂರ ಸಂಪಾದನೆಯಲ್ಲಿಯ ಶಿವಶರಣೆಯರ ವಚನ ಸಂಪುಟದಲ್ಲಿ ಕಾಣುತ್ತೇವೆ. ಆದರೆ ಡಾ.ಸಾ.ಸಿ.ಮರುಳಯ್ಯ ಮತ್ತು ಎಸ್.ಶಿವಣ್ಣ "ತಿಪಟೂರ ತಾಲ್ಲೂಕು, ಹೊನ್ನಹಳ್ಳಿ ಕರಿಸಿದ್ಧೇಶ್ವರ ಮಠದ ಹಸ್ತಪ್ರತಿಗಳ ಶೋಧ ನಡೆಸಿದಾಗ ಒಂದು ಓಲೆಕಟ್ಟಿನಲ್ಲಿ ಕಂಡುಬಂದ ನೀಲಮ್ಮನವರ ೨೮೮ ವಚನಗಳನ್ನೇ ಇಲ್ಲಿ ಪ್ರಕಟಿಸಲಾಗಿದೆ"[೩೯] ಎಂದು ನೀಲಮ್ಮನ ವಚನಗಳು ಎಂಬ ಪುಸ್ತಕಕ್ಕೆ ಮುಮ್ಮಾತು ಬರೆದ ಡಾ.ಬಿ.ಡಿ.ಜತ್ತಿಯವರು ಅಭಿಪ್ರಾಯಪಡುತ್ತಾರೆ.

೨೦೦೧ರಲ್ಲಿ ಡಾ.ವೀರಣ್ಣ ರಾಜೂರ ಶಿವಶರಣೆಯರ ವಚನ ಸಂಪುಟ ಮರುಮುದ್ರಣದಲ್ಲಿ ೨೮೮ ವಚನಗಳು ದೊರೆಯುತ್ತವೆ. ಹಾಗೂ ಈಕೆಯ ಸ್ವರವಚನಗಳು ಎಲ್.ಬಸವರಾಜ ಅವರು ಸಂಪಾದನೆ ಮಾಡಿರುವ ಶಿವದಾಸ ಗೀತಾಂಜಲಿ, ಪ್ರೊ.ಮಲ್ಲಿಕಾರ್ಜುನ ಲಠ್ಠೆಯವರ

ಸ್ವರವಚನಗಳು ಒಂದು ವಿವೇಚನೆ ಎಂಬ ಪುಸ್ತಕದಲ್ಲಿ ಸಿ.ಕೆ.ಪರಶುರಾಮಯ್ಯರ ನೀಲಲೋಚನೆ ವಚನಗಳು ಎಂಬ ಸಂಪಾದನೆ ಕೃತಿಯಲ್ಲಿ, ಎಸ್.ಎಸ್.ಭೂಸರಡ್ಡಿಯವರ ಮಹಾಶರಣೆ ನೀಲಾಂಬಿಕೆ ಪುಸ್ತಕದಲ್ಲಿ ಈಕೆಯ ಸ್ವರವಚನಗಳನ್ನು ಕಾಣಬಹುದಾಗಿದೆ. ಅಲ್ಲದೆ ಈಕೆಯ ಕಾಲಜ್ಞಾನ ವಚನಗಳನ್ನು ಕಾಣುತ್ತೇವೆ. ಈ ವಚನಗಳನ್ನು ಕೃಷ್ಣಯ್ಯ ಶೆಟ್ಟಿಯವರು ಕಲಿಯುಗದ ಕಾಲಜ್ಞಾನ ಎಂಬ ಶೀರ್ಷಿಕೆ ಅಡಿಯಲ್ಲಿ ಸಂಪಾದಿಸಿದ್ದಾರೆ. ಜೊತೆಗೆ "ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ"[೪೦] ಎಂದು ಸಮಕಾಲೀನ ವಚನಕಾರ ಸಿದ್ಧರಾಮಯ್ಯ ತಿಳಿಸುತ್ತಾರೆ. ಹಾಗಾದರೆ ಈಕೆಯ ವಚನಗಳು ಕಲ್ಯಾಣಕ್ರಾಂತಿಯಲ್ಲಿ ನಾಶವಾದವೋ ಅಥವಾ ಕ್ರಾಂತಿಯಾದ ಸಂದರ್ಭದಲ್ಲಿ ಕೆಲವು ಮಠಗಳಲ್ಲಿ ಮನೆಗಳಲ್ಲಿ ಉಳಿದಿರಬಹುದೇ ಎಂದು ಊಹಿಸಬಹುದು.

ಮೇಲ್ನೋಟದ ವಿಚಾರಗಳಾಗಿ ಕೆಲವು ಅಂಶಗಳು ಈಕೆಯ ವಚನಗಳಲ್ಲಿ ಕಾಣಬರುತ್ತವೆ. ಅಲ್ಲದೇ ಗಂಗಾಂಬಿಕೆಯ ವಚನಗಳಿಗೂ, ಈಕೆಯ ವಚನಗಳಿಗೂ ಹೋಲಿಕೆಗಳಿವೆ. ಆ ಅಂಶಗಳು ಇಂತಿವೆ.

**ಆತ್ಮ ನಿವೇದನೆ**

ಈಕೆಯ ಜೀವನಕ್ಕೆ ಸಂಬಂಧಪಟ್ಟಂತಹ ವೈಯಕ್ತಿಕ ವಿಚಾರಗಳನ್ನು ಕುರಿತ ವಚನಗಳನ್ನು ಇಲ್ಲಿ ಚರ್ಚಿಸಲಾಗುವುದು. ಹಾಗೂ ಆಕೆಯ ಸಂಸಾರದ ಬಗೆ ಹಾಗೂ ಮಗುವನ್ನು ಕಳೆದುಕೊಂಡಾಗ ಆಕೆಯ ದುಃಖ ಮತ್ತು ಸಂತೈಸಿಕೊಳ್ಳುವ ಬಗ್ಗೆ. ಬಸವನೊಂದಿಗೆ ಸಂಬಂಧ, ಕಲ್ಯಾಣದ ಬಗ್ಗೆ ಮನದ ಹಂಗು ತೊರೆದು ಬಸವನಿಷ್ಠೆಯ ಕಡೆಗೆ ಸಾಗಿದ್ದನ್ನು ಕಾಣಬಹುದು. ಹಾಗೆ ಸಂಸಾರದ ನಿಜದ ಬಗೆಗೆ ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ.

> "ಆನೆತ್ತಲಿ ಸಂಸಾರವೆತ್ತ । ಆನೆತ್ತಲಿಕಾಯವೆತ್ತ
> ಆನೆತ್ತಲೀ ನಿಜ ಮಹತ್ವವೆತ್ತ ।
> ಸಂಗಯ್ಯನೆತ್ತ, ಬಸವನೆತ್ತ, ಆನೆತ್ತ"[೪೧]

ಈಕೆಗೆ ಸಂಸಾರದ ನಿತ್ಯದ ಬದುಕು ಹಾಗೂ ವಾಸ್ತವ ಸ್ಥಿತಿಯನ್ನು ಮೀರುವ ಹಂತಕ್ಕೆ ಬರುವ ಸಂದರ್ಭವನ್ನು ಈ ವಚನ ತೋರಿಸುತ್ತದೆ. ಹಾಗೂ ಈಕೆಯು ಕಾಯದ ಹಂಗು ಕುರಿತು ಹೇಳುತ್ತಾ, ನಿಜ ಸಂಸಾರದ ಸತ್ವವನ್ನು ಪಡೆಯಬೇಕಾದರೆ ತಾತ್ವಿಕತೆಯತ್ತ ಬಂದಾಗ ಸಾಧ್ಯವೆಂಬುದಾಗಿದೆ ಎನ್ನುವುದನ್ನು ಈ ಕೆಳಗಿನ ವಚನ ತಿಳಿಸುತ್ತದೆ.

> "ಎನಗೆ ಸಂಸಾರ ಬಂಧ ಕಾರಣವೇನೆಂದು ಕೇಳಲು
> ಎನಗೆ ಸಂಸಾರವಿಲ್ಲವಂದೆ ಹೋಯಿತ್ತು ಇಲ್ಲವೆಂದೇ ಹೇಳಿತ್ತು
> ........................."[೪೨]

ಸಂಸಾರದಲ್ಲಿ ಮುಕ್ತತೆಯಿರಬೇಕು. ಹಾಗಾದರೆ ಮಾತ್ರ ಸುಖಿ ಸಂಸಾರ, ಆ ಸಂಸಾರವು ಆಧ್ಯಾತ್ಮದ್ದು ಆಗಿದೆ ಎಂಬುದರ ಹಂಬಲ ವಿಶ್ವ ಕುಟುಂಬವಾಗಿದೆ. ಹಾಗೂ ಮನದಲ್ಲಿಯ ಸಂತೋಷವನ್ನು ಇಲ್ಲಿ ಕಾಣಬೇಕು. ಜೊತೆಗೆ ತುರ್ಯಾತೀತ ಭಾವಕ್ಕೆ ಹೋಗಿ ನಿಲ್ಲಬೇಕು. ಅದು ಸುಜ್ಞಾನ ಸಂಸಾರವಾಗಿದೆ ಎಂಬುದು ಈಕೆಯ ವಚನದಿಂದ ತಿಳಿಯಬಹುದು. ಹಾಗೆ ಕಾಮವಾಸನೆ ಇರಬಾರದು ಈ ಕೆಳಗಿನ ವಚನದಲ್ಲಿ ಉಲ್ಲೇಖಿಸುತ್ತಾಳೆ.

"ಕಾಮವನಳಿದ ಹೆಣ್ಣಲ್ಲ ನಾನು, ಕಾಮ ಉಂಟೆನಗೆ
ಕಾಯ ಸಂಸಾರ ವಳಿಯಿತ್ತೆಂಬ
ಕಾಮ ಸೀಮೆ ನಿಸ್ಸೀಮೆಯಳಿದು
ಕಲ್ಪಿತವ ಕಂಡುಳಿದು ಬದುಕಿದೆನಯ್ಯ ಸಂಗಯ್ಯ
ಕಾಮಿಯಾನಾಗಿ ಕಾಮದ ಹಂಗ ಹರಿದೆನು ಬಸವಾ
..................................
.............ನಾನು ಸುಖಿಯಾದೆನಯ್ಯ
ಸಂಗಯ್ಯ ಬಸವನಲ್ಲಿ
ಕಾಮಿತ ಸುಖವ ಕಂಗೊಳಿಸಿದ ಗುರುವೆ
ಕಲ್ಪಿತವ ನಷ್ಟವ ಮಾಡಿದ ಗುರುವೆ
...............................................
................ಸಂಗಯ್ಯನ ಗುರುಬಸವಾ"[೪೩]

ಈ ಮೇಲಿನ ವಚನಗಳು ಮೇಲಿನ ವಚನ ನಾನು ಕಾಮವನ್ನು ಅಳಿದ ಹೆಣ್ಣು ಅಲ್ಲ ಕಾಮವಿದೆ ಅಂದರೆ ಇಲ್ಲಿ ಕೇವಲ ಬೋಗದ ಸ್ಥಿತಿಯಲ್ಲ, ಆಸೆಯು ನನಗೆ ಇದೆ ಎಂಬ ಅರ್ಥವನ್ನು ಹೇಳುತ್ತದೆ. ಶರೀರ ಧರ್ಮ ಹೋಗಿ, ನಿಸ್ಸೀಮತೆಯನ್ನು ಪಡೆದುಕೊಂಡು ಪರತತ್ವದಲ್ಲಿ ಬದುಕನ್ನು ಪಡೆಯುವೆ ಎಂದಾದರೆ, ಪರಮಮೂರ್ತಿಯಾದ ಸಂಗಯ್ಯನಲ್ಲಿ ನಾನು ಸುಖಿಯಾಗಲು ಬಯಸುವೆ ಎಂಬುದಾಗಿದೆ. ಇದಕ್ಕೆ ಪೂರಕವಾಗಿ ಗುಂ.ಬೀ.ಶಂ.ರು ಹೀಗೆ ಅಭಿಪ್ರಾಯಪಡುತ್ತಾರೆ. "ನನ್ನ ನಾನರಿತಿರುವೆನೆಂಬ ನೆನೆಯ ನಿರ್ವಯಗೊಳಿಸಿಕೊಂಡು ಬಸವನಲ್ಲಿ ಅಂದರೆ ಪರಮ ಆತ್ಮನಲ್ಲಿ ನಿರಾವಲಂಬಿಯಾದೆ. ಆ ನಿರಾವಲಂಬದ ಹಂಗು ಹರಿದು ಮಹಾಘನದಲ್ಲಿ ಒಂದಾಗಿ ನಾನು ಸುಖಿಯಾದೆನು."[೪೪]

ಹಾಗಾಗಿ ನಾನು ಲೌಕಿಕದ ಸುಖ ತೊರೆದು, ನಿಜ ಸುಖ ಬಯಸುವೆ ಎಂದು ಹೇಳುತ್ತಾಳೆ.ಈ ಸುಖ ಭೋಗಗಳನ್ನು ಮರೆತಾಗ ಮಾತ್ರ ಕಾಮದ ಹಂಗು ಹೋಗಲಿಕ್ಕೆ ಸಾಧ್ಯ ಎಂಬುದನ್ನು ಈ ವಚನ ನೀಡುತ್ತದೆ.

"ಕಾಯದ ಹಂಗು ಹರಿದು, ಕಲ್ಪಿತದ ಗುಣವ ನಷ್ಟವ ಮಾಡಿ
ಮನವಿಲ್ಲದೆ ಆ ಮನಕ್ಕೆ ವಿವೇಕ ತೃಪ್ತಿಯನರಿಯಲು
ವಿಶಿಷ್ಟದನುಜ್ಞೆಯಾಯಿತ್ತಯ್ಯಾ...... ಎನ್ನಕಾಯವೆ
ತೃಣರೂಪವಯ್ಯ"[೪೫]

ಕಾಯದ ಪರಿಯನ್ನು ದಾಟಿ, ಸಮರ್ಥವಾದ ಬದುಕನ್ನು ಕಾಣಬೇಕು ಎಂದು ಈ ವಚನದಲ್ಲಿ "ಕಾಯವಿಲ್ಲದೆ ಕಾಯಕ್ಕೆ ಕಲ್ಪತದ ಸಯದಾನವ ಕೂಡಲಿಕ್ಕಲು...... ಸಂಗಯ್ಯ, ನಾನು ನಿಮ್ಮ ಹೆಸರಿಲ್ಲದ ಮಗಳು"[೪೬] ಈ ವಚದಲ್ಲಿ ಕಾಯದ ಕೆಟ್ಟ ಗುಣಗಳನ್ನು ಅಳಿದು ಸಯದಾನವ=ಕಾಯವನ್ನೆ ಸಮರ್ಪಿಸುವಂತದ್ದು, ಈ ಕಾಯವಿಲ್ಲದೆ ಇದ್ದರೆ, ಬಯಲು ಕಾಣುತ್ತೇವೆ. ಅಂದರೆ ಅಲ್ಲಿ ಏನು ಇಲ್ಲ ಎಂಬುದು. ತನ್ನನ್ನೆ ದೃಷ್ಟಿಯಾಗಿ ತೆಗೆದುಕೊಂಡು ನಿಜಮೂರ್ತಿಯಾದ ಸಂಗಯ್ಯನಲ್ಲಿ ಬೆರೆತವಳು. ಅಥವಾ ಹೆಸರಿಲ್ಲದ ಮಗಳು ಎಂದರೆ ಕಾಯವಿಕಾರತೆ ಹೋಗಿ, ಪರಿಪಕ್ವತೆಯ ಹಂತವಾಗಿದೆನ್ನಬಹುದು. ಇಂತಹ ಮಹತ್ವ ಪಡೆದ ಕಾಯ ಹೋಗುತ್ತದೆ.

"ಕಾಯವಿಲ್ಲದೆ ಪ್ರಾಣವಿರದು, ಪ್ರಾಣವಿಲ್ಲದೆ ಕಾಯವಿರದು ಅ ಕಾಯ ಪ್ರಾಣಕ್ಕೆ ಮೂಲಿಗನಾದ ಬಸವ, ಬಸವನಿಲ್ಲದೆ ಭಾವ ನೆಲೆಗೊಳ್ಳದು. ಭಕ್ತಿ ಸಂಗಸಂಯೋಗವಾದರೆ...."[೪೭] ಈ ವಚನದಲ್ಲಿ ಕಾಯ ಮುಖ್ಯವೆಂಬುದನ್ನು ಹೇಳುವಂತೆ ಬಸವಣ್ಣನು ಕಾಯಕ್ಕೆ ಜೀವನ ತುಂಬುವಂತ ವ್ಯಕ್ತಿ, ಈತನಿಲ್ಲದೆ ನನ್ನ ಬದುಕು ಇಲ್ಲ, ಹಾಗೆ ಅಂತರಂಗದ ವಿಕಾಸಕ್ಕೂ ಈತನೆ ಕಾರಣ, ಈತನ ಇರುವಿಕೆಯೇ ನನಗೆ ಒಂದು ಮಹಾಶಕ್ತಿಯಾಗಿದೆ. ಹಾಗೂ ಬಸವನಲ್ಲಿ ಏಕತೆಯನ್ನು ಕಾಣುವ ಉದ್ದೇಶದಿಂದ ನಾನು ಬಹುತರ ರೂಪಿಯಾದ (ವ್ಯಕ್ತಿತ್ವ) ಈತನಲ್ಲಿ ತನ್ನ ಸಂಗ ಸಂಯೋಗವಾದರೆ ನಾನೆ ಧನ್ಯಾತ್ಮಳು ಎಂಬ ಭಾವ ತುಂಬಿ ಆತ್ಮನಿವೇದನೆ ಮಾಡಿದ್ದಾಳೆ. ಮುಂದುವರೆದು ಕಾಯಕ್ಕೆ ಸಂಬಂಧಿಸಿದ ಇನ್ನಿತರ ವಿಚಾರಗಳನ್ನು ಪ್ರಸ್ತುತಪಡಿಸುತ್ತಾಳೆ.

"ಕಾಯವಿಲ್ಲದೆ ಪುಷ್ಪಕವ ಕಂಡ ನಮ್ಮ ಬಸವಯ್ಯನು
...........................................................
...............ಬಸವನ ರೂಪು ತದ್ರೂಪವಾಯಿತ್ತು"[೪೮]

ಇಲ್ಲಿ ನೀಲಾಂಬಿಕೆಯು ಬಸವಣ್ಣನ ಬಗೆಗೆ ಹೇಳುತ್ತಾ, ಈತನು ನಿರಾಕಾರವಾದ ಹೂವು ಅಂದರೆ(ಪುಷ್ಪ) ದೇವರು ಕಂಡಿರಬಹುದು. ಹಾಗೆ ಸ್ವಯಂಭುವಾಗಿ ಹೂವಿನ ರಥವೇರಿದ ಬಸವಣ್ಣ ಸಾಕ್ಷಾತ್ ಸಂಗಯ್ಯನಾಗಿದ್ದಾನೆ ಎಂದು ಈ ವಚನದಲ್ಲಿ ಹೇಳುತ್ತಾ ಭಾವುಕಳಾಗಿದ್ದಾಳೆಂದು

ತೋರುತ್ತದೆ. ಈ ವಚನಕ್ಕೆ ತಾತ್ಪರ್ಯವನ್ನು ಗುಂ.ಬೀ.ಶಂ.ರು ಹೀಗೆ ಬರೆದಿದ್ದಾರೆ. "ಕಾಯದ ಪ್ರಾಪಂಚಿಕ ವಿಕಾರ ಗುಣಗಳನ್ನು ತಿಳಿದುಕೊಂಡು, ಸರ್ವಸಂಗಪರಿತ್ಯಾಗಿಯಾಗಿ, ಕಾಯವಿದ್ದೂ ಇಲ್ಲದಂತೆ ನಿಃಕಾಯ ಸ್ವರೂಪನಾಗಿ ಸುಜ್ಞಾನದ ಸುವಿಚಾರಧಾರಿಯಾಗಿ, ಸಾಮಾನ್ಯ ಸ್ಥಾನ ತೊರೆದು ಉನ್ನತ ಸ್ಥಾನದಲ್ಲಿ ನೆಲೆನಿಂತನು. ಸರ್ವಕ್ರಿಯೆಗಳು ಸುಗಂಧಭರಿತವಾಗಿ ಅಂದರೆ, ನಿತ್ಯ ನಿಜ ಜ್ಞಾನದಿಂದ ಕೂಡಿದವುಗಳಾಗಿ ವಿಶ್ವಾತ್ಮನ ಒಲುಮೆಯಲ್ಲಿ ಹೂವಾದನು. ಬಸವ–ಸಂಗಯ್ಯನೆಂಬ ಎರಡಳಿದು ಒಂದಾದನು."[೪೯] ಇವರ ಅಭಿಪ್ರಾಯದಂತೆ ಬಸವಣ್ಣ ಹೂವಿನಂತೆಯಾಗಿ ಅಂದರೆ ಪರಮಾತ್ಮನಲ್ಲಿ ತಾನೆ ತಾನು ಆದನು ಎಂಬುದಾಗಿ ಹೇಳುತ್ತಾರೆ.

"ಸಂಶಯವೆನಗಿಲ್ಲವಯ್ಯ ಸಂಶಯ ಸಂಬಂಧವ ತಿಳಿದು ಸದಾಚಾರವನರಿದು ಬದುಕಿದೆನು ನಿಮ್ಮರಿವಿನಲ್ಲಿ ಸಂಗಯ್ಯ"[೫೦] ನೀಲಾಂಬಿಕೆಯಲ್ಲಿ ಅರ್ಥಪೂರ್ಣವಾದ ಜೀವನ ನಡೆಸಿದ್ದಾಳೆ ಎಂಬುದರಿಂದಲೆ, ಬಸವನಲ್ಲಿ ಸಂಶಯ ಹೋಗಿ, ಆತನಲ್ಲಿ ಪರಿಪೂರ್ಣವಾದ ಅರಿಪನಲ್ಲಿ ಒಂದಾಗುವೆ–ಎಂದು ಹೇಳುವುದು ನೋಡಿದರೆ ಇವಳಿಗೆ ಬಸವಣ್ಣನ ಜ್ಞಾನ ಮತ್ತು ಕ್ರಿಯಾಶೀಲವಾದ ಬದುಕು ಮುಖ್ಯವಾಗಿತ್ತು ಎಂದು ತೋರುತ್ತದೆ. ಬಸವಣ್ಣ ನೀಲಾಂಬಿಕೆಯನ್ನು ವಿವಾಹವಾದ ಪರಿಯನ್ನು ಈ ವಚನ ವ್ಯಕ್ತಪಡಿಸುತ್ತದೆ.

"ಮಂಗಳ ಸೂತ್ರವ ಕಟ್ಟಲು
ಆ ಮಂಗಳ ಸೂತ್ರಕ್ಕೆ ಮಣಿಯ ಪವಣಿಸಲು
ಆ ಮಣಿಯ ದ್ವಯದಾರದಲ್ಲಿ ದಾರವಿದಾರವಾಯಿತ್ತು
ಆ ದಾರದ ಮಧ್ಯದಲ್ಲಿ ಬೆಳಗುದೋರಿತ್ತಯ್ಯ
ಸಂಗಯ್ಯನಲ್ಲಿ ಹಿಂಗದ ಸುಖವ ಕಂಡೆನು"[೫೧]

ಸಂಸಾರ ಬಂಧನಕ್ಕೆ ಒಳಗಾಗುವ ಪೂರ್ವದಲ್ಲಿ, ಪತಿಯು ಸತಿಯ ಕೊರಳಿಗೆ ಕಟ್ಟುವಂತದ್ದೆ, ಮಂಗಳ ಸೂತ್ರವಾಗಿದೆ. ಈ ಸೂತ್ರಕ್ಕೆ ಮಣಿಯನ್ನು ಪೋಣಿಸುತ್ತಾರೆ. ಅದು ಎರಡು ಕಡೆ ಅಂದರೆ ಇಲ್ಲಿ ಒಂದು ಪತಿಯದ್ದು, ಮತ್ತೊಂದು ಸತಿಯದು ಎಂಬ ಭಾವನೆ. ಆ ಮಾಂಗಲ್ಯ ಸೂತ್ರ ಮಧ್ಯದಲ್ಲಿ ೨ ಪದಕಗಳು ಇರುತ್ತವೆ. ಇಂತಹ ಪದಕಗಳು ಬೆಳಕು ದೋರಿತ್ತು ಎಂದು ಹೇಳುವ ನೀಲಾಂಬಿಕೆ, ತನ್ನ ಪ್ರತಿಯೊಂದು ಕಾರ್ಯದಲ್ಲಿ ಸಹಭಾಗಿಯಾಗಿ ಬದುಕುವ ಭಾವವಿದೆ.

"ಮಡದಿ ಎಂಬ(ಶಬ್ದ) ನಿಶ್ಯಬ್ಧವಾದಡೆ ನಾನೀಗ ನಿಜಸುಖಿ ಬಸವಾ"[೫೨] ಈಕೆಯ ಈ ವಚನ ನಾನು ಬಸವನಿಗೆ ಮಡದಿಯಾಗಿ, ನಂತರ ಈ ಸಮಾಜದಲ್ಲಿ ನಾನು ಹೇಗೆ ಬಾಳಬೇಕೆಂದು ತಿಳಿದ ಮೇಲೆ ಮಡದಿಯೆಂಬ ಶಬ್ದವು, ಇಲ್ಲವಾದಾಗ ನಿಜಸುಖಿಯಾದೆನು

ಎಂಬುದನ್ನು ಭಾವುಕಳಾಗಿ ನೀಲಾಂಬಿಕೆ ಹೇಳುತ್ತಾಳೆ. ಆದರೆ ಇಲ್ಲಿ ಈಕೆಯ ವಚನ ಸಾಂಸಾರಿಕ ಜೀವನದಿಂದ ಕಳಚಿಕೊಂಡು, ಶರಣಸತಿ ಲಿಂಗಪತಿ ಭಾವಕ್ಕೆ ಬರಲು ಹವಣಿಸುವಂತ ವಚನವಾಗಿದೆ.

ನೀಲಾಂಬಿಕೆ ಈ ಕೆಳಗಿನ ವಚನದಲ್ಲಿ ವಿಷಯಾದಿಗಳನ್ನು ಮರೆತು ಶಿಶುವಿನ ರೂಪ ತಾಳಿದರೆ, ಮುಗ್ಧತೆಯು ಬಂದು, ಭಾವನಾತ್ಮಕ ಸಂಬಂಧ ಉಂಟಾಗಲು ಸಾಧ್ಯ ಎಂಬುದನ್ನು ವ್ಯಕ್ತಪಡಿಸುತ್ತಾಳೆ.

"ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷ ನೆನಲಾಗದು ಬಸವನ ಎನಗೆ
ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವನೆನ್ನ ಶಿಶುವಾದನು
ಪ್ರಮಥರು ಪುರುತರು ಸಾಕ್ಷಿಯಾಗಿ
ಸಂಗಯ್ಯ ನಿಕ್ಕಿದ ದಿಬ್ಯದ ಮೀರದೆ ಬಸವನೊಳಗಾನಡಗಿದೆ"[೫೩]

ಈ ವಚನಕ್ಕೆ ಪೂರಕವಾಗಿ ಡಾ.ಜಯಶ್ರೀ ದಂಡೆಯವರ ಅಭಿಪ್ರಾಯ.

"ಕಾಮವಾಸನೆ ಇಲ್ಲದ ಮುಗ್ಧ ಶಿಶುವಿನ ಭಾವನೆ ಇಲ್ಲಿ ವ್ಯಕ್ತವಾಗಿದೆ. ನೀಲಾಂಬಿಕೆಯ ನಿಲುವು 'ಮಡದಿ–ಪುರುಷ' ಎಂಬ ಸೀಮಿತ ಅರ್ಥಕ್ಕಿಂತ ಮಿಗಿಲಾದುದು. ಕೇವಲ ದೈಹಿಕ ಸುಖ, ಕ್ಷಣಿಕ ತೃಪ್ತಿಗಾಗಿ ಸತಿಪತಿಗಳಾಗಿ ಲೌಖಿಕ ಜೀವನ ಸಾಗಿಸುವುದಕ್ಕಿಂತ, ಅಮುಷ್ಮಿಕ ಭಾವನೆಗಳ ಅಗರವಾಗಿ ಆ ಸ್ಥರದಲ್ಲಿ ನಿಂತು ಸತಿ–ಪತಿ ಭಾವದ ವಿಚಾರ ಮಾಡಿದಾಗ ಮೂಡಿದ ನೀಲಾಂಬಿಕೆಯ ಚಿಂತನೆ ಇಲ್ಲಿ ಗರಿಗೆದರಿ ನಿಂತಿದೆ. ಅಲ್ಪ ಆಸೆಯ ಉಭಯದ ಹಂಗನ್ನು ಹರಿದೊಗೆದು, ಸತಿಗೆ–ಪತಿ ಶಿಶುವಾಗಿ, ಪತಿಗೆ–ಸತಿ ಶಿಶುವಾಗಿ ಪರಿಣಮಿಸಿದುದಾಗಿ ಹೇಳುತ್ತಾಳೆ. ತಾನೇಕೆ ಈ ಸಾಕ್ಷಿಯನ್ನು ಕೊಡುತ್ತಿರುವೆನೆನ್ನುವುದಕ್ಕೆ ಸಂಗಯ್ಯನಿಕ್ಕಿದ 'ದಿವ್ಯ' (ನಿಶ್ಚಿತವಾದ ಸಾಕ್ಷಿ, ಪುರಾವೆಗಳಿಲ್ಲದಾಗ ಅಪರಾಧವನ್ನು ನಿರ್ಣಯಿಸಲು ಮಾಡುವ ಉಗ್ರ ಪರೀಕ್ಷೆ)ವೇ ಕಾರಣ ಎನ್ನುತ್ತಾಳೆ."[೫೪] ಆದರೆ ಪ್ರೊ.ಎಸ್.ಎಸ್.ಭೂಸರಡ್ಡಿಯವರು ಈ ವಚನವು ಪಾರಮಾರ್ಥಿಕ ಅನುಭವದ್ದು ಆಗಿದೆ. ಹಾಗೆ ಈ ಜಗತ್ತಿನಲ್ಲಿ ಇಂತಹ ಭಾವಪೂರ್ಣತೆಯಿಂದ ಕೂಡಿದ ವಚನ, ಕಾಣಲಿಕ್ಕೆ ಸಾಧ್ಯವಿಲ್ಲ. ಕೇವಲ ಐಹಿಕ ಸುಖ ಮುಖ್ಯವಲ್ಲ ಎಂಬುದು ಕಾಣುತ್ತೇವೆ ಎಂದು ಹೇಳುತ್ತಾ "ಬಸವಣ್ಣ ನೀಲಮ್ಮನ ಶಿಶುವಾಗಿದ್ದಾನೆ. ಲಿಂಗ ಬೇರೆಯಲ್ಲ, ಬಸವ ಬೇರೆಯಲ್ಲ ಕರಸ್ಥಳಕ್ಕೆ ಚುಳುಕಾಗಿ ಬಂದ ಲಿಂಗದೇವನ ಲಾಲನೆ–ಪಾಲನೆ ಮಾಡುವ ತಾಯಿ ಯಾರು? ನೀಲಮ್ಮನ ಸಹಸ್ರಾರು ಭಾವಗಳು ಅವಳ ಮನಸ್ಸಿನ ಹೋರಾಟ, ಶಾಂತಿ, ಸಾಮರಸ್ಯ ಮುಂತಾದವುಗಳನ್ನು ಈ ವಚನಗಳಿಂದ ಸ್ಪಷ್ಟವಾಗಿ ಗುರುತಿಸಬಹುದಾಗಿದೆ."[೫೫]

ಬಸವಣ್ಣ ಮತ್ತು ನೀಲಾಂಬಿಕೆಯ ಸಂಬಂಧ ಶಿಶುವಿನ ರೂಪವಾದ ಮೇಲೆ, ಬಸವನಲ್ಲಿ ಅಚಲವಾದ ನಿಷ್ಠೆ, ಸಂತೈಸುವ ಗುಣ, ಅಹಂಭಾವವನ್ನು ತೊಡೆದು ಹಾಕುವಂತ ಭಕ್ತಿಯ ನಿರ್ಭರತೆಯಿದ್ದುದರಿಂದಲೇ ನಾನು ವಿಚಾರ ಪತ್ನಿಯೆಂದು ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ.

"ಪಾರ್ವತಿಯ ರೂಪಕಂಡು ಪರಶಿವನ ಸಂಗ ನಿಸ್ಸಂಗವಾಗಿ
ತಾಯಿ ಮಗನಂಗದಿಂದ ತನುವಳಿದು ನಿರಾಭಾವ ರೂಪವನೆಯ್ದಿ
ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿ
ಯಾದೆನಯ್ಯ ಸಂಗಯ್ಯ"[೫೬]

ಈ ವಚನ ಬಸವಣ್ಣನಲ್ಲಿಯೇ ಸರ್ವಸ್ವವಾಗುವ ಗುಣ ಕಂಡೊಡನೆ, ತಾಯಿಮಗನಂತೆಯಾಗಿ, ಅಭಿಮಾನ, ಉತ್ಸಾಹ, ತೋರಿ, ಈಕೆಯ ಪ್ರಾಮಾಣಿಕತೆಯು ಇಮ್ಮಡಿಯಾಗಿ, ವಿಚಾರವಂತಿಕೆಯನ್ನು ಪಡೆದು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳುವ ಈಕೆಯ ನಿಲುವನ್ನು ಇಲ್ಲಿ ಕಾಣುತ್ತೇವೆ. ಮತ್ತು ಬಸವಣ್ಣ ಈಕೆಯನ್ನು ಪಾರ್ವತಿ ರೂಪವಾಗಿ ಕಂಡಿರಬೇಕು ಹಾಗಾಗಿ ಎಂ.ಎಂ.ಕಲ್ಬುರ್ಗಿಯವರು ಹೀಗೆ ಅಭಿಪ್ರಾಯಪಡುತ್ತಾರೆ. "ಇವಳಿಗೂ ಬಸವಣ್ಣನಿಗೂ ಇದ್ದ ದೈವೀ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ. ಬಸವಣ್ಣನಿಗೆ ತಾನು 'ವಿಚಾರಪತ್ನಿ'ಯೆಂದು ಈಕೆ ಹೇಳಿದುದು ಜಾಗತಿಕ ದಾಖಲೆಯಾಗುವಂತ ಅಪೂರ್ವ ಮಾತಾಗಿದೆ"[೫೭] ಎಂದು ಹೇಳುತ್ತಾರೆ. ಆದರೆ ಬಸವನಲ್ಲಿ ಅರಿವು ಹಂಚಿಕೊಂಡಿದ್ದರಿಂದ, ಈಕೆ ನಾನು ವಿಚಾರ ಪತ್ನಿಯಾಗಿದ್ದೇನೆ ಎಂಬುದರಲ್ಲಿ ಸಂಶಯವಿಲ್ಲವೆನ್ನಬಹುದು.

ಇಲ್ಲಿ ವಿವಿಧ ರೀತಿಯಲ್ಲಿ ಅರ್ಥವನ್ನು ಕಾಣಲಾಗುತ್ತೆ. ೧. ತಾಯಿ ಮಗನ ಸಂಬಂಧವಾದಲ್ಲಿ ಈಕೆಯನ್ನು ಹೊಗಳಿ ಪಾರ್ವತಿ ಎಂದಿರಬೇಕು. ಅದರಂತೆ ಪರಶಿವನ ಸಂಗ ಎಂದರೆ ಶರಣಸತಿ–ಲಿಂಗಪತಿ ಭಾವ ತುಂಬಿದ್ದು ಆಗಿದೆ. ಹಾಗೆ ಶರೀರ ವಳಿದು ನಿರಾಭಾರ ಸ್ಥಿತಿಯನ್ನು ತಲುಪಿ ಬಸವನ ಅನುಭವದ ಮೂಲಕ ಜ್ಞಾನ ಸಂಪಾದನೆ ಯಾಗಿದ್ದರಿಂದ ವಿಚಾರಪತ್ನಿಯೆಂದಿರಬೇಕು. ೨. ಬಸವಣ್ಣನನ್ನೆ ಜ್ಞಾನ ಚಕ್ಷುವಿನಂತೆ ಕಂಡ ಈಕೆ ಆತನಲ್ಲಿ ನಿರ್ಮಲತ್ವದಿಂದ ತಾನು ಶುಚಿಯಾಗಿ, ವಿಚಾರಪತ್ನಿಯೆಂದಿರಬೇಕು. ಒಟ್ಟಾರೆಯಾಗಿ ನೀಲಮ್ಮನ ವಚನದಲ್ಲಿ ಬಸವನ ಮಡದಿಯು ಕ್ರಿಯಾಶೀಲಳು ಎಂಬುದನ್ನು ಸೂಕ್ಷ್ಮತೆಯಿಂದ ಗಮನಿಸಬೇಕಾಗುತ್ತದೆ. ಹಾಗೆ ಬಸವನ ಮತ್ತು ಈಕೆಯ ಸಂಬಂಧ ಕೇವಲ ಭೋಗದ ರೀತಿಯಲ್ಲಿ ಇರಲಿಲ್ಲವೆಂಬುದು ಇಲ್ಲಿ ವ್ಯಕ್ತವಾಗುತ್ತದೆ. ಹಾಗಾಗಿಯೇ ಇವರ ಮಗು ಸಾವನ್ನಪ್ಪಿದಾಗ ದುಃಖ ನೂರ್ಮಡಿಯಾಗಿ ಬಂದರೂ ಸಮಾಧಾನ ಮಾತುಗಳೇ ಕರುಣಾರಸವಾಗಿ ತಾಯಿ, ಮಗನಂತೆ ಇಬ್ಬರು ಜೀವಿಸಿರಬೇಕು ಎಂಬುದು ತೋರುತ್ತದೆ.

ನೀಲಾಂಬಿಕೆ ಮಗನ ಸಾವನ್ನು ಹಾಗೂ ಮನದ ಕೊರಗನ್ನು ಅವಳ ವಚನಗಳಲ್ಲಿ ಹೇಳಿಕೊಳ್ಳುತ್ತಾಳೆ.

"ಮುನ್ನಲೊಂದು ಶಿಶುಹುಟ್ಟಿತ್ತು
ಆ ಶಿಶುವಿನ ಕೈಯಲೊಂದು ಮಾಣಿಕ್ಯವ ಕೊಡಲು
ಆ ಮಾಣಿಕ್ಯ ಹಲವು ವರ್ಣವನೆ ತೋರಿ ಬಯಲನೆ ನೆಮ್ಮಿತ್ತು
ಮಾಣಿಕ್ಯದ ಕುರುಹಿಲ್ಲ; ಬಯಲಿಂಗೆ ಬಣ್ಣವಿಲ್ಲ;
ಸಂಗಯ್ಯನಲ್ಲಿ ಹೆಸರಳಿದ ಬಸವಂಗೆ"[೫೮]

ಈ ವಚನದಲ್ಲಿ ನನಗೆ ಶಿಶು ಜನನವಾಗಿತ್ತು. ಆ ಶಿಶುವಿನ ಕೈಯಲ್ಲಿ ಮಾಣಿಕ್ಯ ಕೊಡಲು ಹಲವು ರೀತಿಯಲ್ಲಿ ಸಂತೋಷಪಡಿಸಿ, ಬಯಲಾಯಿತು. ಆ ಬಯಲು ಕಂಡ ಮಾಣಿಕ್ಯದ ಕುರುಹು ಕಾಣದೆ ಹೋಯಿತು ಎಂದು ಬಸವಣ್ಣನಿಗೆ ತಿಳಿಸಿದಂತೆ ತೋರುತ್ತದೆ. ಈ ವಚನಕ್ಕೆ ಜಯಶ್ರೀ ದಂಡೆಯವರ ಅಭಿಪ್ರಾಯ "ತನ್ನ ಗರ್ಭಂದಿದುದಯಿಸಿ ಅನರ್ಘ್ಯರತ್ನೋಪಾದಿಯಲ್ಲಿ ಝಗಮಗಿಸುವ ತೇಜೋಮಯ ಲಿಂಗವೇ ಬಾಲಸಂಗ ಎನ್ನುವಂತೆ ಜನಿಸಿದ ಕಂದ ಇನ್ನಿಲ್ಲವಲ್ಲ ಎಂಬ ನೋವು ಅವಳನ್ನು ಹಿಂಡಿದೆ. ಚಿಕ್ಕವನಿರುವಾಗಲೇ ಇಷ್ಟಲಿಂಗ ಪೂಜಾನಿಷ್ಟನಾಗಿದ್ದ. ಬಾಲಲೀಲೆಗಳನ್ನು ತೋರಿ ಆ ಲಿಂಗದಲ್ಲಿಯೇ ಐಕ್ಯನಾದ ರೀತಿಯನ್ನು ಬಣ್ಣಿಸುತ್ತಾ ಬಸವಣ್ಣನೇ ಹೆಸರಳಿದ ಮಹಿಮನಾದ್ದರಿಂದ ಅವರ ಮಗನಿಗೂ ಶಬ್ದದ ಹಂಗಿಲ್ಲ. ಮಾಣಿಕ್ಯದ ಕುರುಹನ್ನು ಬಯಲ ಬಣ್ಣವನ್ನೊಂದು ಮಾಡಿ, ತಾನದರಲ್ಲಿ ಒಂದಾಗಿ ಹೋದನಲ್ಲ ಎನ್ನುತ್ತಾಳೆ."[೫೯]

ಆ ಲಿಂಗದ ಸ್ವರೂಪದ ಮಗುವನ್ನು ಹೂವಿಗೆ ಹೋಲಿಸಿ ಈ ವಚನದಲ್ಲಿ ಹೇಳುತ್ತಾಳೆ. "ಆ ಹೂವಿಂಗೆ ರೂಪಿಲ್ಲ ಆ ರೂಪಿಂಗೆ ಕಾಯವಿಲ್ಲ ಆ ಕಾಯವಿಲ್ಲದ ಹೂವನುಂಬ ಶಕ್ತಿ ಬಯಲಾದನಯ್ಯ ಸಂಗಯ್ಯ"[೬೦] ಈ ವಚನದಲ್ಲಿ ಮಗು ಹುಟ್ಟಿತ್ತು, ರೂಪಿಲ್ಲ ಹಾಗು ಕಾಯವಿಲ್ಲ, ಇಂತ ಮಗು ಸಂಗಯ್ಯನಲ್ಲಿ ಬಯಲು ಹೊಂದಿತ್ತು ಎಂದು ತಿಳಿಯುತ್ತದೆ. ಆದರೆ ಈಕೆಯು ಸಂಕೇತಗಳ ಮೂಲಕ ತನ್ನ ಮನದಾಳದ ಮಾತುಗಳನ್ನು ಸ್ಪಷ್ಟಪಡಿಸಿದ್ದಾಳೆ. ಜೊತೆಗೆ ತನ್ನ ಮನವನ್ನೆ ಸಂತೈಸುವ ಗುಣಕ್ಕೆ ಬಂದಿರುವುದನ್ನು ಈ ವಚನದಲ್ಲಿ "ಆಗಿಂಗೆ ಮುಯ್ಯಾನದಿರು, ಚೇಗಿಂಗೆ ಬೆಂಬೀಳದಿರು ಆಹಾ ಮನವೆ, ಸಂತೈಸಿಕೊ ನಿನ್ನ ನೀನೆ......."[೬೧] ಎಂದು ಹೇಳುವಂತದ್ದು, ಮನಸ್ಸಿನಲ್ಲಿ ಎಷ್ಟೇ ನೋವು ಇದ್ದರೆ, ಬೇರೆಯವರನ್ನು ನೋಡಿ ಸಂತಸಪಡಬೇಕು. ಏಕೆಂದರೆ ಭೋಗಾದಿ ಭೋಗವೆಲ್ಲವು ಸಂಗಯ್ಯ ಅಧೀನವಾಗಿದ್ದಾಗ, ಯಾರ ಸಮಾಧಾನವು ನನಗೆ ಮುಖ್ಯವಲ್ಲ ಹಾಗಾಗಿ ನಾನೆ ನನ್ನ ಮನಕ್ಕೆ ಧೈರ್ಯ ತುಂಬಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಾಳೆ.

ಈ ವಚನಕ್ಕೆ ಪೂರಕವಾಗಿ ಪ್ರೊ.ಎಚ್.ಎಂ.ಬಿಳಗಿಯವರ ಅಭಿಪ್ರಾಯ ಹೀಗಿದೆ; "ಲೌಕಿಕ ಕಷ್ಟ–ಸುಖಗಳನ್ನು, ಸ್ತುತಿ–ನಿಂದೆಗಳನ್ನು ಒಂದಾಗಿ ಪರಿಭಾವಿಸುವ ಎಲ್ಲವೂ ದೈವಾದೀನ ಎಂದು ತನ್ನನ್ನೆ ತಾನು ಸಂತೈಸಿಕೊಳ್ಳುವ ಸಂಕಲ್ಪ ಶರಣೆಯದಾಗಿದೆ."[೬೨]

ಬುರಡೇಕಟ್ಟಿ ಮಂಜಪ್ಪರು ಈ ವಚನದ ಬಗ್ಗೆ "ಜೀವನದಲ್ಲಿ ಜೀವಿಯ ಕೈಯಲ್ಲಿ ಏನೂ ಇಲ್ಲ. ಎಲ್ಲ ಆಗು ಹೋಗುಗಳು ಶಿವನ ಇಚ್ಛೆ, ಎಂದು ಹೇಳಿದ್ದಾರೆ. ಇದು ಪಾರಂಪರಿಕವಾಗಿ ಭಾರತೀಯ ಸಂಸ್ಕೃತಿಯಲ್ಲಿ ಕಂಡು ಕೇಳಿ ಬರುವ ಸಾಮಾನ್ಯ ಅಭಿಪ್ರಾಯವಾಗಿದೆ. ನೀಲಾಂಬಿಕೆಯವರು ಸಹ ಇದನ್ನೆ ಸಮರ್ಥಿಸಿಕೊಂಡಿದ್ದಾರೆ. ಲಾಭಕ್ಕೆ ಹಿಗ್ಗಲೂ ಬಾರದು ನಷ್ಟಕ್ಕೆ ಕುಗ್ಗಲೂ ಬಾರದು. "ಸ್ತುತಿನಿಂದೆಗಳಿಗೆ ನೊಂದೆನಾದಡೆ ಅಂಗೈಯಲ್ಲಿದ್ದ ಗುಹೇಶ್ವರ ಲಿಂಗಕ್ಕೆ ದೂರ"[೬೩] ಎಂಬ ಪ್ರಭುದೇವರ ಮಾತು ಸಹ ಇದನ್ನೇ ಪುಷ್ಟೀಕರಿಸುತ್ತದೆ. ಶಿವಶರಣರ ಒಟ್ಟಾರೆ ಜೀವನದ ದರ್ಶನವೂ ಇದೆ ಆಗಿದೆ. ನೀಲಮ್ಮನವರು ಇದಕ್ಕೆ ಹೊರತಲ್ಲ, ಅವರು ಸಹ ಮಗನ ಅಗಲುವಿಕೆಯ ದುಃಖವನ್ನು ಮಹಾಮನೆಯ ಕೆಲಸ ಕಾರ್ಯಗಳಲ್ಲಿ ತೊಡಗುವುದರ ಮೂಲಕ ಮರೆಯುತ್ತಾರೆ. ಇವರ ಹೇಳಿಯಂತೆ ಮನುಷ್ಯನಲ್ಲಿ ಸಹಜವಾಗಿ ದುಃಖ ಅವರಿಸಿ ಬದುಕಿನ ಸಂತೋಷವನ್ನು ಕಿತ್ತುಕೊಳ್ಳುತ್ತದೆ ಎಂಬುದನ್ನು ಪ್ರಸ್ತುತಪಡಿಸಿ, ಇಂಥ ಸಮಯದಲ್ಲಿ ಕಾಯಕ ಅಥವಾ ಮಹಾಮನೆಯ ಸೇವೆಯೇ ದುಃಖ ಮರೆಯುವಿಕೆಗೆ ಆಸರೆಯಾಗಿದೆ. ಇಂತಹ ನಿಲುವುಗಳ ಮೂಲಕ ಧೈರ್ಯಗೊಂಡು ಕಾಯಕ, ದಾಸೋಹ, ಅನುಭವ ಮಂಟಪದಲ್ಲಿ ಆನಂದವಾಗಿ ಜೀವನ ಕಳೆದದ್ದು ತೋರುತ್ತದೆ. ಇದರಿಂದ ಪ್ರತಿಯೊಬ್ಬರಿಗೂ ನೋವು ನಲಿವುಗಳು ಬದುಕಿನಲ್ಲಿ ಬಂದು ಹೋಗುತ್ತವೆ. ಇದು ಕಾಲನೇಮವಾಗಿದೆ ಎಂಬುದನ್ನು ಈಕೆಯ ವಚನದಿಂದ ತಿಳಿಯಬಹುದು.

ಅತಿಯಾದ ಸಂತೋಷ, ಆನಂದ ಮನುಷ್ಯನನ್ನು ದುಃಖಕ್ಕೆ ನೂಕುತ್ತದೆ ಎಂಬುದನ್ನು ಈಕೆಯ ಈ ವಚನ ಸ್ಪಷ್ಟತೆಯನ್ನು ನೀಡುತ್ತದೆ.

"ನಾಡನಾಳ ಹೋದರೆ, ಆ ನಾಡು ಆಳುವ ಒಡೆಯಂಗೆ ನಾಡೆ ಹಗೆಯಾಯಿತ್ತು
ಹಗೆಯಳಿದು ನಿಸ್ಸಂಗವಾಯಿತ್ತು
ನಿಸ್ಸಂಗ ವೇದ್ಯವಾಗಿ
ಸಂಗಯ್ಯನಲ್ಲಿ ಮುಕ್ತಳಾದೆನು ನಾನು"[೬೪]

ಈ ವಚನ ಬಿಜ್ಜಳನಿಗೆ ಹೇಳಿದಂತೆ ತೋರುತ್ತದೆ. ಏಕೆಂದರೆ ನಾಡನಾಳುವ ಪ್ರಭುವಿಗೆ ಅಲ್ಲಿಯ ಮೂಲಭೂತ ವಾದಿಗಳು ಹಗೆಯನ್ನು ಸೃಷ್ಟಿ ಮಾಡಿದ್ದು ಹಾಗೂ ಇಂತಹ ಹಗೆತನ ನಾಶವಾಗಿ ಪರಮಾತ್ಮನಲ್ಲಿ ನಾನು ಮುಕ್ತಳಾದೆ ಎಂದು ಹೇಳುವುದು ನೋಡಿದರೆ, ಬಹುಶಃ

ಕಲ್ಯಾಣದಲ್ಲಿ ನಡೆದ ಕ್ರಾಂತಿಯ ಕುರಿತು ಹೇಳಿದಂತೆ ತೋರುತ್ತದೆ. ಸಮಕಾಲೀನ ಸಂದರ್ಭವನ್ನು ಪ್ರಸ್ತುತಪಡಿಸಿದ್ದಾಳೆ. ಹಾಗೆ "ನಡೆ ನೋಟವಿಲ್ಲ ತೃಪ್ತಿಯ ಕೊಡಲು....."[೬೫] ಸಂತೃಪ್ತಿಯ ಬದುಕು ಕೊನೆಗಾಲದಲ್ಲಿ ಇಲ್ಲವಾಗಿತ್ತು. ಸುಯಿಧಾನ=ರಕ್ಷಣೆ ಎಂಬುದು, ಸಹ ಕೊಡುವವರು ಯಾರು? ಇದು ನಡುಕ ತರುವಂತದ್ದು ಆಗಿದೆ ಎಂದು ತಿಳಿಸುತ್ತಾಳೆ.

ನೀಲಾಂಬಿಕೆ ಕಲ್ಯಾಣದ ಬಗ್ಗೆ ಹೇಳುತ್ತಾ

"ಕಲ್ಯಾಣವಿಲ್ಲ ಕೈಲಾಸವಿಲ್ಲ ಬಸವಾ
ಕಲ್ಯಾಣವಿಲ್ಲದ ಕಾರಣ ಕೈಲಾಸವಿಲ್ಲವೆನಗೆ, ಬಸವಾ
ಆ ಕಲ್ಯಾಣ ಕೈಲಾಸವಾಯಿತ್ತು ಬಸವಾ
ಆ ಕಲ್ಯಾಣವಳಿದು ಕೈಲಾಸವಾದ ಬಳಿಕ, ಬಸವ
ನ ಮೂರ್ತಿಯಿಲ್ಲ ಬಸವನ ಮೂರ್ತಿಯ
ನರಿಯದ ಕಾರಣ ಕೈಲಾಸವಿಲ್ಲ ಕಲ್ಯಾಣ
ವಿಲ್ಲವಯ್ಯಾ ಸಂಗಯ್ಯ"[೬೬]

ಈ ವಚನದಲ್ಲಿ ಕಲ್ಯಾಣದ ಬಗ್ಗೆ ಹೇಳುತ್ತಾಳೆ. ಕಲ್ಯಾಣ ಬಸವನಿದ್ದ ಸಮಯದಲ್ಲಿ ಕೈಲಾಸವಾಯಿತ್ತು. ಅಂತಹ ಮೂರ್ತಿಯೇ ಇಲ್ಲವೆಂದ ಮೇಲೆ ಅದು ಹೇಗೆ ಕೈಲಾಸ ಎಂಬ ಪ್ರಶ್ನೆಯನ್ನು ಹಾಕುತ್ತಾಳೆ. ಏಕೆಂದರೆ ಬಸವಣ್ಣನು ತಾತ್ವಿಕ ನೆಲೆಯಿಂದ ಕಟ್ಟಿದ ಕಲ್ಯಾಣ, ದುಷ್ಟರ ಬೀಡಾಗಿದೆ ಎಂಬ ನಿಲುವು ಈಕೆಯದಾಗಿದೆ. ಆದರೆ ಈ ವಚನದ ಬಗೆಗೆ ಗುಂಬೀಶಂರು "ತನ್ನ ತಾನರಿಯುವ ಕಲ್ಯಾಣದಲ್ಲಿ ನಿತ್ಯ ಮುಕ್ತತೆಯ ಕೈಲಾಸ ತನ್ನಲ್ಲಿಯೇ ಉಂಟು. ಈ ನಿತ್ಯ ಮುಕ್ತತೆಯಲ್ಲಿ ಕಲ್ಯಾಣಭಾವವೂ ಕೂಡ ಗೌಣ. ಅಲ್ಲಿ ತಾನೇತಾನಾದಾಗ ನಿರವಯದಲ್ಲಿ ನಿಂದಾಗ ತಾನು ಇಲ್ಲ. ಆ ನಿರಂಜನತ್ವದಲ್ಲಿ ಕೈಲಾಸವಿಲ್ಲ, ಕಲ್ಯಾಣವಿಲ್ಲ ನಿರವಯಭಾವ."[೬೭] ಈ ವಚನದಲ್ಲಿ ಕಲ್ಯಾಣ ಕೈಲಾಸ ಎಂಬುದು ಭಾವನಾತೀತವಾಗಿದ್ದು ಹಾಗೂ ಈ ಕಲ್ಯಾಣ ರಂಜನವಿಲ್ಲದ್ದೆ ನಿರಂಜನತ್ವಕ್ಕೆ ಬಂದಿದೆ ಎಂದು ಅಭಿಪ್ರಾಯಪಡುತ್ತಾರೆ.

ಡಾ.ಶ್ರೀ.ಜ.ಚ.ನಿ.ನೀಲಲೋಚನೆಯ ವಚನಗಳಲ್ಲಿ ಬಸವಣ್ಣ ಎಂಬ ಪುಸ್ತಕದ ಮುನ್ನುಡಿಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಸರಿಪಡಿಸಿರಿ ಇದ್ದುದೊಂದು ಕಾಯಕಲ್ಯಾಣ, ಇದ್ದುದಿನ್ನೊಂದು ಕಲಾತ್ಮ ಕೈಲಾಸ; ಕಾಯವಳಿದ ಬಳಿಕ ಕಲಾತ್ಮ ಕೈಲಾಸವಿರಲು ಸಾಧ್ಯವಿಲ್ಲ. ಕಾಯ ಕಲ್ಯಾಣ ಹೋದುದಿನ್ನೆಲ್ಲಿಯೂ ಅಲ್ಲ; ಕಲಾತ್ಮಕೈಲಾಸವಾಗಿ, ಆ ಕಲಾತ್ಮ ಕೈಲಾಸ ಕಳಾತ್ಮ ಪರಮಾತ್ಮವಾದ ಬಳಿಕ ಕಲಾತ್ಮ ಬಸವಮೂರ್ತಿಯಿರಲು ಸಾಧ್ಯವಿಲ್ಲ. ಬಸವನ ಮೂರ್ತಿಯನರಿಯದ ಮೇಲೆ ಆತನಾಧಾರದಲ್ಲಿದ್ದ ಕಾಯ ಕಲ್ಯಾಣವಾಗಲಿ ಕಲಾತ್ಮ ಕೈಲಾಸವಾಗಲಿ ಇರಲು ಸಾಧ್ಯವೆ? ಇಲ್ಲಿ ಇಬ್ಬರ ನಿರಾಳ ಮೂರ್ತಿತ್ವ ನಿರೂಪಿತವಾಗಿದೆ."[೬೮]

ಕಲ್ಯಾಣದ ಬಗೆಗೆ ಮುಂದುವರೆದು ನೀಲಾಂಬಿಕೆ ಈ ವಚನದಲ್ಲಿ ಕಲ್ಯಾಣ ನೋಡುವಡೆ ಗೋಚರಿಸುವುದಿಲ್ಲ. ಅದು ವ್ಯೋಮಕಾಯ ರೂಪದ್ದು, ಹಾಗೆ ನಿಜಾನಂದದ ಸ್ವರೂಪದ್ದು ಎನ್ನುವರ್ಥದಲ್ಲಿ ಈ ವಚನದ ನಿಲುವು ಒಳಗೊಂಡಿದೆ.

"ನೋಡುವಡೆ ಎನ್ನ ಕಣ್ಣಿಂಗೆ ಗೋಚರವಲ್ಲ
ಆ ಕಾಯ ಕಲ್ಯಾಣ
ಆ ಕಾಯ ಕಲ್ಯಾಣದೊಳಗೆ
ಸರೋವರದಷ್ಟದಳಂಗಳ ಮಧ್ಯದಲ್ಲಿ.........
..............................."[೯೯]

ಇಲ್ಲಿ ಈಕೆಯು ಕಲ್ಯಾಣ ಇರುವಿಕೆ ಕಾಯ ಕಲ್ಯಾಣ ಇದು ಸೂಕ್ಷ್ಮವಾಗಿ ಗೋಚರಿಸು ವಂತದ್ದು, ಅಂದರೆ ಅಷ್ಟದಳ ಕಮಲದಲ್ಲಿ ಕಾಣುವಂತ ಪಶ್ಚಿಮ ಶಿಖಾಚಕ್ರದ ಕುರಿತು ಹೇಳುತ್ತಾಳೆ. ತನ್ನ ವೈಯಕ್ತಿಕ ಸಾಧನೆಯಲ್ಲಿ ಕಾಯವನ್ನು ಪರಿಶುದ್ಧತೆಗೆ ತರಲು ಈ ವಚನವನ್ನು ಹೇಳಿರಬಹುದು. ಹಾಗೆ ಕಲ್ಮಶದಿಂದ ಕೂಡಿದ ಬುದ್ಧಿ ಹೋಗಿ ಸುಬುದ್ಧಿಯನ್ನು ಪಡೆಯಬೇಕು ಎಂದು ಈ ವಚನ "ಮುನ್ನಳ ದೋಷವೆನ್ನ ಬೆನ್ನ ಬಿಡದಯ್ಯ......."[೨೦] ಈ ಕಾಯವನ್ನು ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರದಿಂದ ದೂರವಿರಿಸಿ, ಮಾಡಿದ ಪಾಪವನ್ನು ನಾಶ ಮಾಡಿಕೊಳ್ಳಲು ಗುರುಲಿಂಗ ಜಂಗಮಕ್ಕೆ ಮನವ ಅರ್ಪಿಸಬೇಕು. ಆದರೆ ಈಕೆ "ಬಸವನನರಿಯದೆ ಕೆಟ್ಟಪಾಪಿಯಾನು ಶಬ್ದದ ಹಂಗಿಗಳಲ್ಲಯ್ಯ ನಾನು"[೨೧] ಹೇಳಿದ್ದು ನೋಡಿದರೆ ಬಸವನ ಗುಣವನ್ನು ಅರಿಯದಿದ್ದುದು ಏಕೆ? ಹಾಗೂ ಕೆಟ್ಟ ಪಾಪಿಯಾನು ಎಂದು ಹೇಳುವುದು ಏಕೆ? ಬಹುಶಃ ಈಕೆಯಲ್ಲಿಯ ಒಂದನೆಯ ಹಂತವಾದ ಜೀವನ, ಅಥವಾ ಬಸವನಲ್ಲಿ ಆಗ ತಾನೆ ಬದುಕಿಗೆ ಹತ್ತಿರವಾದಾಗ ಸಂಸಾರ ಗೊಂದಲದ ಸ್ಥಿತಿಯಾಗಿರಬೇಕು.

ಬಸವನ ತಪ್ಪು ಇಲ್ಲವೆಂದು ತಿಳಿದು ಈ ಮಾತನ್ನು ಹೇಳಿರಬೇಕು. ಹಾಗೂ ಪತಿಯ ಪಾರಮಾರ್ಥದ ಬದುಕು ಕಂಡು ಬೇಸತ್ತು ಈ ನುಡಿಗಳನ್ನು ವ್ಯಕ್ತಪಡಿಸಿದ್ದಾಳೆಂದು ಕಾಣುತ್ತದೆ. ಹಾಗೆ ಬದುಕಿಗೆ ನಿಜತ್ವದ ನೆಲೆಯನ್ನು ಕಾಣಬೇಕಾದರೆ, ಈ ಕಾಯಕ್ಕೆ ಕೆಲವು ಗುಣಗಳು ಮುಖ್ಯ ಎಂಬುದನ್ನು ಈ ವಚನದಲ್ಲಿ "ಮುನ್ನಲೊಂದು ಕಾಯವಿಡಿದು ನಾನು ಹುಟ್ಟಿ ಆ ಹುಟ್ಟಿದ ಕಾಯಕ್ಕೆ ನಿಜದ ಮೂರ್ತಿಯ ಅನುವ ತಿಳಿದು ವಿನಯ ಪರಳಾದೆನು ವೀರತ್ವದ ಸಂಗದ ಮೂರ್ತಿಯನರಿದು ನಾನು ಬದುಕಿದೆನಯ್ಯ ಸಂಗಯ್ಯ"[೨೨] ಇಲ್ಲಿ ಪ್ರಮುಖವಾಗಿ ಈ ಕಾಯಕ್ಕೆ ಜೀವ ಬಂದ ಮೇಲೆ ಪರಮಾತ್ಮನ ಅನುವ ತಿಳಿಯಬೇಕು ಹಾಗೂ ವಿನಯ ವೀರತ್ವದಿಂದ ಅಂತಪ್ಪ ಮೂರ್ತಿಯನರಿದು ಬದುಕಿದೆ ಎಂಬ ಭಾವುಕ ರೀತಿಯಲ್ಲಿ ತನ್ನನ್ನೆ

ಸಮರ್ಪಿಸುವಂತ ಗುಣ ಕಂಡಿದ್ದಾಳೆ. ಈಕೆಯಲಿ ಆಧ್ಯಾತ್ಮಿಕದೊಂದಿಗೆ ವೈಚಾರಿಕತೆಯ ಅಂಶವನ್ನು ಪಡೆಯಲಿಕ್ಕೆ ಭದ್ರ ಬುನಾದಿಯೆಂಬರ್ಥದಲ್ಲಿ ಹೇಳುತ್ತಾಳೆ.

ಈ ಭವದಲ್ಲಿ ಮುನ್ನವೆ ಜನಿಸಿದರು ನನ್ನಲ್ಲಿ ಆತ್ಮ ಸುಖ ಹೆಚ್ಚಲು ಯಾವ ಸಂಗಮಾಡಬೇಕು ಎಂದು ಈ ವಚನದಲ್ಲಿ ಉಲ್ಲೇಖಿಸುತ್ತಾಳೆ.

"ಮುನ್ನವೆ ಮುನ್ನವೆ ಹುಟ್ಟಿದೆ ನಾನು
ಆ ಮುನ್ನವೆ ಮುನ್ನ ಆನು ಪ್ರಸನ್ನ....
.............ಶಕ್ತಿ ಸಂಗವಳಿದು ಸಮಯಾಚಾರವಳವಡಲು
ಪ್ರಭಾಪೂರಿತಳಾಗಿ ಬದುಕಿದೆನಯ್ಯ ಸಂಗಯ್ಯ"[೭೩]

ನಾನು ಮುನ್ನವೆ ಹುಟ್ಟಿದೆ, ಹಾಗೂ ಶಕ್ತಿಯನ್ನು ಪಡೆಯಲು ಸಮಯಾಚಾರಗಳು ಬಹಳ ಅವಶ್ಯ, ಅವುಗಳೂ ಅಚ್ಚ ಪ್ರಸಾದಿ, ನಿಚ್ಚ ಪ್ರಸಾದಿ, ಸಮಯ ಪ್ರಸಾದಿ ಈ ಆಚರಣೆಗಳನ್ನು ಮಾಡಿದಾಗ ಪ್ರಭಾಪೂರಿತಳಾಗಿ ಬದುಕಿದೆನು ಎಂದು ಹೇಳುತ್ತಾಳೆ. ಅಂದರೆ ತನ್ನ ವೈಯಕ್ತಿಕತೆಯಿಂದ ನಡೆದಿರುವ ದೋಷಗಳು ಕಳೆದು, ಆತ್ಮದ ನಿಜದ ಕುರುಹು ಕಾಣಲು ಮುಂದಾಗಿದ್ದು ಕಾಣುತ್ತೇವೆ. ಇದಕ್ಕೆ ಮುಖ್ಯವಾಗಿ ಹಂಗನ್ನು ಇಲ್ಲವಾಗಿಸಬೇಕು. ಅದು ಮಾತಿನ ಹಂಗು, ಮನದ ಹಂಗು, ತೊರೆದಾಗ ಮಾತ್ರ ಬಯಲುಂಡ ಅನುಭವ ಬರುತ್ತದೆ ಎಂದು ಈ ಕೆಳಗಿನ ವಚನಗಳು ತಿಳಿಸುತ್ತವೆ.

"ಮಾತನಳಿದು ಮನವಳಿದು
ಭೀತಿಯ ಕಳೆದು ಪ್ರಸಂಗವ ಕಳದು
.........................................
...........ಸಂಗಯ್ಯ, ನಿಮ್ಮ ಬಸವನ ಹಂಗ ಕಳದೆ ನಾನು.
ಮಾತಿನ ಹಂಗಿಲ್ಲದವಳಾದೆ ನಾನು
ಅಜಾತನ ಒಲುಮೆಯಿಲ್ಲದವಳಾದೆ ನಾನು
ಪ್ರಣವದ ಹಂಗಿಲ್ಲದವಳಾದೆ ನಾನು
...................................................
............ಪರಂ ಜ್ಯೋತಿಯ ವಸ್ತುವ ಕಂಡು
ನಾನು ಬದುಕಿದೆನಯ್ಯ ಸಂಗಯ್ಯ
ಮಾತಿನ ಹಂಗೇತಕ್ಕೆ ಮನವೇಕಾಂತದಲ್ಲಿನಿಂದ ಬಳಿಕ ಬಸವಯ್ಯ?
.........................................ಸಂಗಯ್ಯ ಬಸವನಕುರು

ಹಿಲ್ಲದ ಮೂರ್ತಿಯಾದ ಬಳಿಕ
ಮಾತಿಲ್ಲದವನ ಕೂಡೆ ಮಾತನಾಡ ಹೋದಡೆ
ಎನ್ನ ಮಾತಿನ ಪ್ರಸಂಗವ ನುಡಿಯಲೊಲ್ಲ ಬಸವಯ್ಯನು
............................ಸಂಗಯ್ಯನ ಹೆಸರಿಲ್ಲದ ವೃಕ್ಷವನರಿದ
ಬಸವಯ್ಯನು"[೭೪]

ಈ ಮೇಲಿನ ವಚನಗಳ ನಾಲ್ಕು ಸಾಲುಗಳು ಮಾತಿನ ಹಂಗು ಹಾಗೂ ಮನದ ಹಂಗು ತೊರೆಯಲಿಕ್ಕೆ ಹಾಗು ಈ ಭೌತಿಕ ಪ್ರಪಂಚದಿಂದ, ದೂರವಾಗಿ ಪರಮಮೂರ್ತಿಯ ನೆನಹು ಹೊಂದಬೇಕು ಎಂದು ತಿಳಿಸುವ ಸಾಧನಗಳಾಗಿವೆ.

ಪ್ರಾಪಂಚಿಕವಾದ ಜೀವನದಲ್ಲಿ ಸಂದೇಹ, ಬಹಳಷ್ಟು ಉಲ್ಬಣಿಸಿರುವುದರಿಂದ ವಿಷಯಾದಿಗಳು ಗಮನವಿಲ್ಲದೆ ಹೋಗಿ ಕಲುಷಿತ ಮಾಡುತ್ತವೆ. ಇಂತಹ ಸಂದರ್ಭದಲ್ಲಿ ಆತ್ಮದ ಕಳೆಯ ಕಡೆಗೆ ಧಾವಿಸಲು ನಾನು ಬಸವನ ಹಂಗು ಕಳೆಯುವೆ ಎಂದು ಹೇಳಿದರೆ ಮಾತಿನ ಹಂಗು ಹರಿದು ಪ್ರಣವಕ್ಷರಗಳಲ್ಲಿ ಬಂದು ಪರಂಜ್ಯೋತಿಯ ವಸ್ತುವನ್ನು ಕಂಡು ಶುದ್ಧತೆಯ ಪ್ರಸಾದದ ಭೋಗಿಸಿ ಬದುಕುವ ಇಚ್ಛೆಯನ್ನು ತಿಳಿಸುವುದರೊಂದಿಗೆ ಮನ ಏಕಾಂತದಲ್ಲಿರಲು ಮಾತುಗಳು ಹಂಗು, ದೇವಹಂಗು, ಹಾಗೆ ಬಸವನದ್ದು ಕೂಡ ಹಂಗು ತೊರೆದಾಗ ನಾನು ಆಚಾರನಿಷ್ಠಳಾಗಿದ್ದೇನೆ. ಈ ಪರದೆಯಿಂದ ಹೊರಬಂದು ಕುರುಹಿಲ್ಲದ ಮೂರ್ತಿಯಾದ ಬಸವನಲ್ಲಿ ಕಂಡೆನು ಎಂಬುದನ್ನು ತಿಳಿಸುತ್ತಾಳೆ. ಹಾಗೆ ಮಾತನಾಡದವನ ಕೂಡ ಮತ್ತೆ ಮತ್ತೆ ಮಾತನಾಡುವುದು ಹೇಗೆ ಅದೇ ರುಚಿಯಾದ ಮಾತಿನ ಪ್ರಸಂಗ ಒಮ್ಮೊಮ್ಮೆ ಹಂಗು ಹರಿದ ಪ್ರಸಂಗ ಇದರಿಂದ ನಾನು ಗಟ್ಟಿಯಾಗಿ ನಿಲ್ಲಲು ಬಸವಯ್ಯ ನನಗೆ ಆಸರೆಯಾದ ಎಂಬುದನ್ನು ವಿರಹದ ಮಾತುಗಳೆ ತುಂಬಿ ಈ ಲೋಕದ ಹಂಗಿಗೆ ಬಹಿಷ್ಕಾರ ಹಾಕುವ ವಿವೇಚನೆ ಇದರಲ್ಲಿ ಕಂಡುಬಂದಿದೆ. ಹಾಗಾಗಿ ಈಕೆಯು ಅಚಲವಾದ ಗುರಿಯನ್ನು ಮುಟ್ಟಬೇಕು ಎಂಬ ಉದ್ದೇಶದಿಂದ ಈ ಗುಣಗಳನ್ನು ಕಳೆದುಕೊಳ್ಳಲು ನಿರ್ಧರಿಸಿ, ಅನುಪಮ, ನಿರಂಜನತ್ವದ ಕಡೆಗೆ ಸಾಗಬೇಕು ಎಂಬುದು ಈ ವಚನಗಳ ಆಶಯವಾಗಿದೆ.

ಈ ವಚನಗಳಿಗೆ ಪೂರಕವಾಗಿ ಡಾ.ಜಯಶ್ರೀ ದಂಡೆಯವರು ಹೀಗೆ ಹೇಳುತ್ತಾರೆ. "ನೀಲಾಂಬಿಕೆ ಎತ್ತಿದ ಮಾತಿನ ಪ್ರಸಂಗವನ್ನೇ, ಮರೆ ಮಾಚುತ್ತಾನೆ. ಆಕೆಯನ್ನು ಅನುಭಾವದ ವಿಷಯದತ್ತ ಎಳೆದುಕೊಂಡು ಹೋಗುತ್ತಾನೆ. ಅವನ ವ್ಯಕ್ತಿತ್ವಕ್ಕೆ ಮಾರುಹೋಗಿದ್ದ ನೀಲಾಂಬಿಕೆಯೂ ಆ ಕ್ಷಣವೇ ತನ್ನ ವೇದನೆಯ ಮಾತಿನ ಹಂಗನ್ನು ಹರಿದೊಗೆಯುತ್ತಾಳೆ. ಆ ಪ್ರಸಂಗದ ಸಂಗವನ್ನು ಕೆಡಿಸಿ ಬಸವಲಿಂಗ ಪರವಶನಾಗಿ ಕುಳಿತುಕೊಳ್ಳುತ್ತಾನೆ. ಬಸವನ ಈ ನಿಲುವು

[illegible]

ನೀಲಾಂಬಿಕೆಯ ಮನಃಪರಿವರ್ತನೆಗೆ ಮಾರ್ಗಮಾಡಿಕೊಟ್ಟಿತು. ಸಂಸಾರ ಭಂದ, ದೇಹೇಂದ್ರಿಯ ವ್ಯಸನಗಳಿಂದ ತುಂಬಿದ ದೇಹದ ಉಲುಹನ್ನು ಅಡಗಿಸಿಬಿಟ್ಟ ಬಸವನನ್ನು ದುಃಖ ಸಮಯದಲ್ಲಿ ಕೊಂಡಾಡುತ್ತಾಳೆ."[೨೫] ಇವರ ಅಭಿಪ್ರಾಯದಂತೆ ನೀಲಾಂಬಿಕೆ ಬಸವಣ್ಣನಿಂದಲೇ ಆತ್ಮಸ್ಥೈರ್ಯದ ಗುಣವನ್ನು ಕಲಿತಿದ್ದರು, ಅವನಲ್ಲಿಯ ದುಃಖ ಮರೆಸುವಿಕೆ ಹಾಗೂ ಎಂಥ ಕಷ್ಟಗಳು ಕಂಡರೂ, ಸಂತೋಷದಿಂದ, ಎದುರಿಸುವ ಮನಸ್ಸು ಈಕೆಗೆ ಬಂದಿದೆ ಎಂದು ಹೇಳುತ್ತಾರೆ. ಈಕೆಯು ಹಂಗು, ಮಾತುಗಳಿಂದ ದೂರವಾಗಿ, "ಮಾತಿನಲ್ಲಾದ ಮಥನವ ಮಾಡಿ ಮೆರೆದೆ ಬಸವಾ ನೀತಿಯಿಲ್ಲದೆ ನಿಜವತೋರಿ ಮೆರದೆ ಬಸವಾ......"[೨೬] ಇಂತವನ ನಡೆ ಶುದ್ಧ ನುಡಿ ಶುದ್ಧವಾಗಿದೆ. ಈತನ ನಿಜ ಅರಿವು ಆಗಿ ತೃಪ್ತಿಯ ಪಡೆಯಬೇಕು. ಆಗ "ಮಾತಿನಲ್ಲವೆನಗೆ; ಆ ಮಾತು ನುಡಿಯಲಿಲ್ಲವೆನಗೆ...."[೨೭] ಎಂದು ಹೇಳುತ್ತಾ ಸೀಮೆಯನಳಿದು ಸೀಮಾತಿತಳಾಗಿ, ಈ ಲೋಕದ ಭ್ರಾಂತಿಯಳಿದು ನಿಜವಾದ ಮೂರ್ತಿಯನ್ನು ಕಾಣಲು ಬಸವ ಭಾವ ನನಗೆ ಮುಖ್ಯವಾಗಿದೆ. ಈ ಭಾವದಿಂದಲೇ ಸಾಧನೆಗೆ ಮಾರ್ಗವಾಗಿದೆ ಎನ್ನುತ್ತಾಳೆ.

ನೀಲಾಂಬಿಕೆಯೂ ನಾನು ಮನವಿಚಾರದಲ್ಲಿ ಪರಿಶುದ್ಧಳು ಎಂಬುದನ್ನು ತೋರಿಸಿ, ಹಾಗೂ ನಾನು ಗಟ್ಟಿಗಳಾದ ಹೆಣ್ಣು ಎಂಬುದನ್ನು ಈ ವಚನದ ಮುಖಾಂತರವಾಗಿ ಹೇಳುತ್ತಾಳೆ.

"ಹಂದೆಯಲ್ಲ ನಾನು
ಹರುಷದ ಧೈರ್ಯವುಳ್ಳ ಹೆಣ್ಣು ನಾನು
ಕಾಮವ ನಳಿದವಳಾನಾದ ಕಾರಣ
ಬಸವನ ಹಂಗೆ ನಗಿಲ್ಲವಯ್ಯ
ಭ್ರಮೆಯಡಗಿ ಕಲೆನಷ್ಟವಾಗಿ ಮುಖವರತು
...................."[೨೮]

ಈ ವಚನದಲ್ಲಿ ಹಂದೆಯ ಶಬ್ದ ಬಳಸಿ ಕಠೋರತೆಯ ಅಂಶವನ್ನು ಇಲ್ಲಿ ಹೇಳುತ್ತಳೆ. ಹಂದೆ ಅತವಾ ಹಂದಿ, ಇದು ಊರ ಸ್ವಚ್ಛಗೊಳಿಸುವ ಪ್ರಾಣಿ. ಇಂತಹ ಹೊಲಸಿನಿಂದ ಕೂಡಿದ ಶರೀರವನ್ನು ಶುದ್ಧಗೊಳಿಸಿದ್ದೇನೆ. ಮತ್ತು ಕಾಮಾದಿಗಳನ್ನು ಅಳಿದ ಬಳಿಕ ಬಸವ ಹಂಗ ನನಗೆ ಏಕೆ? ತಾನು ಇನ್ನೊಬ್ಬರ ಆಶ್ರಯಬೇಡುವಳಲ್ಲ ಎಂಬ ಹರುಷದ ಮಾತುಗಳ ಮೂಲಕ ನಾನು ಧೈರ್ಯದಿಂದ ಕೂಡಿದ ಹೆಣ್ಣು ನನಗೆ ಯಾರ ಭ್ರಮ ಇಲ್ಲದಾಗಿ ಪರಮಾತ್ಮನ ಕುರುಹನ್ನು ಕಾಣಲು ಮುಂದಾಗುವೆ ಎಂಬುದರ ಮೂಲಕ ತನಗೆ ಸಂಸಾರದ ಆಸೆ ಇಲ್ಲವೆನ್ನುತ್ತಾಳೆ. ಮತ್ತು ನಾನು ಹೆಣ್ಣು ರೂಪಾವಿಲ್ಲದಾಗಿದೆ ಎಂಬುದನ್ನು ಹೇಳಿ ಹಿರಿಯತನಕ್ಕೆ ಹೆಣ್ಣೆಂದು ಕರೆದರೆ ಆ ಹೆಣ್ಣು ರೂಪಾದ ನಾಮವು ನಿರ್ನಾಮವಯ್ಯ....."[೨೯]

ಎಂಬ ಮಾತುಗಳ ಮೂಲಕ ನಾನು ಹೆಣ್ಣು ರೂಪ ಇಲ್ಲವಾಗಿ ಏಕಾಂತದ ನಿಲುವಿಗೆ ಬಂದಿದ್ದೇನೆ ಎಂದು ಹೇಳುತ್ತಾ ತನ್ಮಯತೆಯ ಸ್ವರೂಪ ಪಡೆಯಲು ಮುಂದಾಗಿ ಗಂಡು-ಹೆಣ್ಣು ಎಂಬ ಭಾವಮರೆತು ಹೋಗಬೇಕು ಎಂಬುದು ಈ ವಚನದ ಉದ್ದೇಶವಾಗಿದೆ.

ನೀಲಾಂಬಿಕೆ ಈ ಕೆಳಗಿನ ವಚನ ನಾನು ಈ ಭವಕ್ಕೆ ಬಂದು ಎಲ್ಲವನ್ನು ಬಿಟ್ಟೆ ಎಂಬುದರ ಮುಖಾಂತರ ನನಗೆ ಹುಟ್ಟು, ತೊಟ್ಟ ಬಟ್ಟೆ ಈ ಎಲ್ಲ ಸುಖ ಕಳೆದು, ನಿರಂಗಿ=ಅಗವಿಲ್ಲದವಳಾಗಿ ಬಯಲು ಕಂಡೆ ಮತ್ತು ನಿಜದ ಚೈತನ್ಯ ವಸ್ತುವನ್ನು ಕಾಣಲು ಬಸವನ ಬೆಸುಗೆಯನು ಕುಡ ಕಳೆದುಕೊಂಡು ನಿಜದ ಕುರುಹ ತಿಳಿಯಲು" ಸಂಗಯ್ಯನಲ್ಲಿ ರೂಪವಳಿದ ಹೆಣ್ಣು ನಾನು"[೬೦] ಎಂದು ಹೇಳುತ್ತಾ ಹೆಣ್ತತನವನ್ನು ಕಳೆದು, ಪರಮಾತ್ಮನಲ್ಲಿ ಕೂಡಿ, ನಿಜಾನಂದ ಪ್ರಭೆಯಾಗಬೇಕು ಎಂದು ಹೇಳುತ್ತಾಳೆ. ಹಾಗೆ ಈ ಹೆಣ್ಣಿಗೆ ರೂಪ, ಹೆಸರು ಅಳಿದು "ಹೆಣ್ಣು ರೂಪ ತಾಳಿದೆ ನಾನು"[೬೧] ಎಂಬ ಭಾವನೆ ವ್ಯಕ್ತಪಡಿಸಿ, ಅಲ್ಲಿ ಕಾಣದ ವಸ್ತು ಕಂಡು ಪರಂಜ್ಯೋತಿ ಸ್ವರೂಪ ಲಿಂಗವೆ ನಾನು ಆದೆನು ಎಂದು ಹೇಳುತ್ತಾ ಕಾಯಕ್ಕೆ ಕತ್ತಲು ಬಂದಾಗ ಜ್ಞಾನದ ಸುಧೆಚೆಲ್ಲಿದಾಗ ಅಲ್ಲಿ ಸ್ವಯಂಭು ರೂಪಿತವಾಗಿ, ಆತ್ಮಗಳು ಒಂದೇ ಎಂಬುದನ್ನು ತೋರಿಸುತ್ತವೆ ಈ ಹಂತಕ್ಕೆ ನಾನು ತಲುಪಲು ಮುಂದಾಗುವೆ ಎಂಬ ಅಭಿಮತ ಈ ವಚನದಲ್ಲಿ ಕಾಣುತ್ತೇವೆ.

"ಆಡಲಿಲ್ಲವಯ್ಯಾ ನಾನು ಹೆಣ್ಣು ರೂಪ ಧರಿಸಿ;
ನುಡಿಯಲಿಲ್ಲವಯ್ಯಾ ನಾನು ಹೆಣ್ಣು ರೂಪಧರಿಸಿ
ನನು ಹೆಣ್ಣಲ್ಲದ ಕಾರಣ, ನಾನು ಇರಪರ ನಾಸ್ತಿಯಾದವಳಯ್ಯಾ
ನಾನು ಉಭಯದ ಸಂಗವ ಕಂಡು ಕಾಣದಂತಿದ್ದೆನಯ್ಯಾ
ಸಂಗಯ್ಯ, ಬಸವ ಬಯಲ ಕಂಡಕಾರಣ"[೬೨]

ಈ ವಚನವು ಮೇಲೆ ಹೇಳಿದ ಪರಿಯಲ್ಲಿ ಚರ್ಚೆಗೆ ಬರುತ್ತದೆ. ನಾನು ಹೆಣ್ಣಾಗಿ ಆಡಲಿಲ್ಲ, ನುಡಿಯಲಿಲ್ಲ, ಏಕೆಂದರೆ ನನಗೆ ಇಹಪರ ಬದುಕು ಇಲ್ಲವಾಗಿದೆ. ಹಾಗೂ ಉಭಯತ್ವದ ಭೇದವು ಇದ್ದು ಇಲ್ಲವಾಗಿದೆ. ಹಾಗಿದ್ದಲ್ಲಿ ಸಂಗಯ್ಯ ಬಸವ ಬಯಲು ಕಂಡ ಕಾರಣ ಎಂಬುದನ್ನು ಹೇಳುವುದರಿಂದ ಬಸವನ ಐಕ್ಯ ಕುರಿತು ಹೇಳಿರಬಹುದು.

ಈ ವಚನಕ್ಕೆ ಡಾ.ಜಯಶ್ರೀ ದಂಡೆಯವರ ಹೇಳಿಕೆಯಲ್ಲಿ ಹೀಗಿದೆ. "ತನ್ನ ಪ್ರತಿಯೊಂದು ಕಾರ್ಯದಲ್ಲಿಯೂ ಹೆಣ್ಣೆಂಬ ರೂಪವನ್ನು ಅಡ್ಡ ತರದೇ ಇರುವುದನ್ನು ಇಲ್ಲಿ ಎತ್ತಿ ಹೇಳಿದ್ದಾಳೆ. ಇಲ್ಲಿ ನೀಲಾಂಬಿಕೆ ಬಳಸಿದ 'ಆಡಲಿಲ್ಲವಯ್ಯ ನುಡಿಯಲಿಲ್ಲವಯ್ಯಾ' ಎಂಬ ಎರಡು ಶಬ್ದಗಳೂ ಒಂದೇ ಅರ್ಥವನ್ನು ಕೊಡುತ್ತವೆ. ಹಾಗಾದರೆ ಅದನ್ನೇ ಪುನರಾವೃತ್ತಿ ಮಾಡುವ ಅವಶ್ಯಕತೆ

ಇತ್ತೇ? ಅಂದ ಮೇಲೆ ಆಡು–ನುಡಿ ಭಿನ್ನ ಅರ್ಥಗಳನ್ನು ಕೊಡುತ್ತವೆ. ಆ ಉದ್ದೇಶದಿಂದಲೇ ಹೀಗೆ ಹೇಳಿರಬಹುದು. ಮತ್ತೊಬ್ಬ ಹೆಣ್ಣನ್ನು ತೆಗೆಳುವುದು, ನಿಂದಿಸುವುದು, ಮತ್ತೊಬ್ಬರ ಅವನತಿಗಾಗಿ ಕೆಲಸಂದರ್ಭಗಳಲ್ಲಿ ಬಣ್ಣ ಬದಲಾಯಿಸುವುದು, ಯಾವಾಗಲೂ ಮತ್ತೊಬ್ಬರ ತಲೆಕೆಡಿಸುವುದಕ್ಕಾಗಿಯೇ ವಿವರಿಸುವುದು. ಇವುಗಳನ್ನು ಕೆಲವಾರು ಹೆಣ್ಣುಮಕ್ಕಳು ಜೀವದ ಉಸಿರಿನಂತೇ ರೂಢಿಸಿಕೊಂಡು ಬಿಟ್ಟಿರುತ್ತಾರೆ"[೮೩] ಎಂದು ಅಭಿಪ್ರಾಯಪಡುತ್ತಾರೆ. ಜಯಶ್ರೀ ದಂಡೆ ಮುಂದುವರೆದು ಹೀಗೆ ಹೇಳುತ್ತಾರೆ. "ಇದರ ಹಿಂದೆ ಯಾವುದೋ ಪ್ರಬಲವಾದ ಕಾರಣವಿರಬಹುದು. ತಾನು ಬಸವಣ್ಣನ ಎರಡನೆಯ ಹೆಂಡತಿ, ಹಾಗೆಂದು ತಿಳಿದು ಗಂಗಾಂಬಿಕೆಯನ್ನು ದೂಷಿಸುವ, ಅಕ್ಕ ನಾಗಮ್ಮನನ್ನು ನಿಂದಿಸುವ, ಬೇರೊಬ್ಬ ಹೆಣ್ಣನ್ನು ತೆಗಳುವ ಕೆಲಸವನ್ನು ಯಾವುದೇ ಸಂದರ್ಭದಲ್ಲಿಯೂ ತಾನು ಮಾಡಲಿಲ್ಲ"[೮೪] ನೀಲಾಂಬಿಕೆಯಲ್ಲಿ ದೂಷಿಸುವ ಗುಣವಿಲ್ಲ, ಈಕೆ ಎಲ್ಲರನ್ನು ಗೌರವದಿಂದ ನೋಡಿರಬೇಕು ಎಂಬುದು ಇವರ ಹೇಳಿಕೆಯಿಂದ ತಿಳಿಯುತ್ತದೆ. ಹಾಗೆ ಈ ವಚನ ಕುರಿತು ಗುಂ.ಬೀ.ಶಂ.ರ ಅಭಿಪ್ರಾಯ "ನಿಸರ್ಗದ ಉತ್ಪತ್ತಿಗನುಗುಣವಾಗಿ, ಬಾಹ್ಯ ರೂಪದ ಅಂಗ ರಚನೆಯಲ್ಲಿ ಹೆಣ್ಣು ರೂಪಧರಿಸಿದರೂ ಪ್ರಾಪಂಚಿಕ ಸುಖ ದುಃಖಗಳ ನುಡಿ ನುಡಿಯಲ್ಲಿಲ್ಲ. ಅಂದರೆ ಶರೀರವೆಂಬ ಆಕಾರದ ಹೆಣ್ಣಾದರೂ ಕಾಯಗುಣದ ವಿಕಾರತೆಗೆ ಒಳಗಾದವಳಲ್ಲ. ತಪ್ಪಿಯೂ ಆ ಗುಣಗಳನ್ನು ಬಯಸಿದ ವಳಲ್ಲ ನುಡಿದವಳಲ್ಲ. ಏಕೆಂದರೆ ಈ ಕಾಯದಲ್ಲಡಗಿದ ಆತ್ಮ ಹೆಣ್ಣು ಅಲ್ಲ, ಗಂಡು ಅಲ್ಲ, ಇಹ ಪರಗಳಾಚೆಯೂನಿರವಯುಳಾದವಳು"[೮೫] ಎನ್ನುತ್ತಾರೆ.

"ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ
ಪುಣ್ಯವಿಲ್ಲದ ಪಾಪಿಯ?
ನಾನು ಇಹಪರಕ್ಕೆ ದೂರಳಯ್ಯಾ
ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ
ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ
ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲವಯ್ಯ"[೮೬]

ಬಸವನ ಸಂಗದಿಮದ ಮತ್ತೆ ಭಕ್ತಿಯ ಸಾರ ತಿಳಿದು, ಹೆಣ್ತನ ನನಗೆ ಇಲ್ಲವಾಗಿದೆ ಎಂದು ನಾನು ಆಧ್ಯಾತ್ಮಿಕ ಹಂತದ ಶರಣೆ. ಹೆಣ್ಣು ಅಲ್ಲ ಎಂಬುದನ್ನು ವ್ಯಕ್ತಪಡಿಸಿದಂತೆ ತೋರುತ್ತದೆ.

ನೀಲಾಂಬಿಕೆಯಲ್ಲಿ ಬಸವಣ್ಣನಿಲ್ಲದೆ ತಾನು ಪಶ್ಚಾತ್ತಾಪ ಪಟ್ಟ ವಿರಹವೇದನೆಯನ್ನು ಈ ರೀತಿ ವ್ಯಕ್ತಪಡಿಸಿದ್ದಾಳೆ.

“ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯಾ
ನಟ್ಟು ನಡುಗ್ರಾಮವ ಕೆಡಿಸಿ ಹೋದಿರಿ ಬಸವಯ್ಯಾ
ಹುಟ್ಟಿಲ್ಲದ ಬಂಜೆಗೆ ಮಕ್ಕಳ ಕೊಟ್ಟಿರಿ ಬಸವಯ್ಯಾ
ಆ ಮಕ್ಕಳ ಫಲವಿಲ್ಲದಂತೆ ಮಾಡಿದಿರಿ ಬಸವಯ್ಯಾ
ಸಂಗಯ್ಯನಲ್ಲಿ ನೀನೆಂತಪ್ಪ ಮಹಿಮನಯ್ಯಾ ಬಸವಯ್ಯಾ?”[೮೭]

ಈ ವಚನದಲ್ಲಿ ಅರಣ್ಯದಲ್ಲಿ ಬಿಟ್ಟಂತೆ, ಗ್ರಾಮ ಕೆಡಿಸಿದಂತೆ, ಹಾಗೂ ಮಕ್ಕಳೆ ಆಗದ ಬಂಜೆಗೆ ಮಗು ಕೊಟ್ಟಿರಿ, ಮುಂದೆ ಆ ಮಗುವಿನ ಬೆಳೆಯುವಿಕೆ ಹಾಗೂ ಅದರ ಫಲವಿಲ್ಲದಂತೆ ಮಾಡಿದಿರಿ ಎಂದು ಬಸವಣ್ಣನಿಗೆ ಪ್ರಶ್ನಿಸುತ್ತಾಳೆ. ನೀನು ಸಂಗಯ್ಯನಲ್ಲಿ ಮಹಿಮನೆ? ಎಂದು. ಆದರೆ ಇಲ್ಲಿ ಬಸವನ ಅಗಲುವಿಕೆ ಗೂಡಾರ್ಥದಲ್ಲಿ ವ್ಯಕ್ತಪಡಿಸಿದ್ದಾಳೆ. ಈ ವಚನ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಸವಣ್ಣ ಕೂಡಲಸಂಗಮಕ್ಕೆ ಹೋಗಿದ್ದನ್ನು ಹೇಳುವ ವಚನವಾಗಿದೆ. ಹಾಗೆ ಜಯಶ್ರೀ ದಂಡೆಯವರು ಈ ವಚನದ ಬಗ್ಗೆ “ಕಲ್ಯಾಣದಾಗರವನ್ನಾಗಿ ಮಾಡಿದ ಕಲ್ಯಾಣದಲ್ಲಿ ಕಲ್ಯಾಣ ಭಾವನೆಗೆ ಎಡೆಯೆ ಇಲ್ಲ ಎಂದ ಮೇಲೆ ಇಲ್ಲಿದ್ದೇನು ಪ್ರಯೋಜನ? ಎಂಬ ಪ್ರಶ್ನೆ ತಲೆದೋರಿ, ಮುಗ್ಧಬಸವ ಹೋಗಿಬಿಡುತ್ತಾನೆ. ಈ ಸಂದರ್ಭದಲ್ಲಿ ಕಲ್ಯಾಣ ಕಾಡುಮೃಗಗಳ ಅವಾಸ್ಥಾನವಾದಂತೆ ನೀಲಾಂಬಿಕೆ ಕಂಡಿರಬೇಕು. ಅದಕ್ಕಾಗಿಯೇ ಆಕೆ ‘ಅಡ್ಡಡವಿಯಲ್ಲಿ ಬಿಟ್ಟು ಹೋದಿರಿ’ ಎಂಬ ಮಾತನ್ನು ಹೇಳಿರಬೇಕು. ಒಟ್ಟಿನಲ್ಲಿ ಆ ಸಂದರ್ಭದ ನೀಲಾಂಬಿಕೆಯ ವೇದನೆಯ, ಹಂಬಲದ ಫಲವಾಗಿ ಈ ವಚನ ಮೂಡಿ ಬಂದಿದೆಯೇನೋ ಎನಿಸುತ್ತದೆ.”[೮೮] ಡಾ.ಶಾಂತಾ ಇಮ್ರಾಪುರ “ನೀಲಲೋಚನೆಯ ಹೃದಯ ವೇದನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಶೋಕ ಪೂರ್ಣ ವಚನಗಳನ್ನು ಕುರಿತು ವಿದ್ವಾಂಸರು ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ದೊರಕಿರುವ ಕಾವ್ಯಗಳಲ್ಲಿ ಮೊಟ್ಟ ಮೊದಲ ಶೋಕಗೀತೆ ಎಂದು ನಿರ್ಣಯಿಸಿದುದು ಮನನೀಯವಾಗಿದೆ.”[೮೯] ಇವರ ಹೇಳಿಕೆಯಂತೆ ಇದು ಶೋಕ ಗೀತೆಯಾಗಿದೆ. ಈಕೆಯ ಮನದ ನೋವನ್ನು ಶಾಂತಾ ಇಮ್ರಾಪುರರವರು ಮುಂದುವರೆದು ಮಾತನ್ನು ಈ ಹೇಳಲು ಕಾರಣ ಹರಳಯ್ಯ ಮಧುವಯ್ಯರ ಕೊಲೆಯನ್ನು ಸಹಿಸದ ಬಸವಣ್ಣ ಕಲ್ಯಾಣ ತೊರೆದು ಸಂಗಮದ ಕಡೆಗೆ ಹೋಗಿದ್ದು ಕಂಡು “ಅಂಥ ದುಃಖದ ಸಂದರ್ಭದಲ್ಲಿಯೂ ಸಂಯಮ ವಿವೇಕಗಳನ್ನು ಕಳೆದುಕೊಳ್ಳದ ನೀಲಲೋಚನೆ ಹೇಳುವ ಮಾತುಗಳು ಆಕೆಯ ಅನುಭಾವದ ಸತ್ವವನ್ನು ಎತ್ತಿ ತೋರಿಸುತ್ತವೆ.”[೯೦] ಹಾಗೆ ಡಾ.ಎಂ.ಎಸ್.ವೇದಾ ರವರು

"ಬಸವಣ್ಣನವರ ಮರಣಾನಂತರದ ಸ್ಥಿತಿ ಅವಳ ಗಟ್ಟಿತನವನ್ನು ಮರೆಸಿ ಅವಳನ್ನು ಅನಾಥಭಾವ, ತಬ್ಬಲಿತನಗಳಲ್ಲಿಯೇ ಇರಿಸಿಬಿಡುತ್ತವೆ"[೯೧] ಎಂದು ಹೇಳುತ್ತಾರೆ. ಬಸವಣ್ಣನ ಅಗಲುವಿಕೆಯಿಂದ ನೀಲಾಂಬಿಕೆ ದುಃಖಿತಳಾಗಿ ಆಕೆಗೆ ಊಟವು ಸಹಿತ ವಿಷವಾಗಿತ್ತು ಎಂಬ ಭಾವನೆಯನ್ನು ಈ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಅಡಲಿಲ್ಲದ ಊಟವನುಣ ಹೋದಡೆ
ಆ ಊಟವೆನಗೆ ವಿಷವಾಯಿತ್ತಯ್ಯ ಸಂಗಯ್ಯ"[೯೨]

ಈಕೆಯಲ್ಲಿಯ ನೋವು ತುಂಬಿದ ಭಾವನೆಯನ್ನು ಈ ವಚನ ತಿಳಿಸಿ, ಇಂತಹ ಸಂದರ್ಭದಲ್ಲಿ ಬಸವನ ನೆನಪುಗಳು ಹೆಚ್ಚಾಗಿ ಕಾಣಿಸಿಕೊಂಡಾಗ ಈಕೆ ಊಟವನ್ನು ಮಾಡಲಿಕ್ಕೆ ಹೋದರೆ ಆ ಊಟವೆನಗೆ ವಿಷವಾಗಿತ್ತು ಎಂಬುದನ್ನು ನೋಡಿದರೆ ಇವರಿಬ್ಬರಲ್ಲಿದ್ದ, ಬಾಂಧವ್ಯ, ಪ್ರೀತಿ, ಎಷ್ಟಿತ್ತು ಎಂಬುದು ತಿಳಿಯುತ್ತದೆ. ಈಕೆಯ ನೋವಿನ ವೇದನೆಯು ಈ ವಚನದಲ್ಲಿ "ಅಡವಿಯ ಹುಯ್ಯಲು ಮೇಲುವರಿಯಿತ್ತು. ಎನ್ನ ಮೇಲುವರಿವ ಹುಯ್ಯಲ ಬೆಳಸಿ ನಾನು ನಿಜ ಪ್ರಸಂಗಿಯಾದೆನಯ್ಯ....."[೯೩] ಇಲ್ಲಿ ಅಡವಿಯಲ್ಲಿ ಈಕೆಯು, ಹುಯ್ಯಲು ಎಂದರೆ ಆಕ್ರಂದನ ಹೆಚ್ಚಾಗಿತ್ತು. ಹಾಗೆ ಸಮಾಧಾನಿಯಾಗಿ ನಿಜದ ಕುರುಹು ಕಂಡು, ನಿಃಶೂನ್ಯ ಮಂಟಪದಲ್ಲಿ ಅವಲಂಬನೆಯಿಲ್ಲದೆ, ಇದ್ದೆನು ಎಂಬುದನ್ನು ವ್ಯಕ್ತಪಡಿಸುತ್ತಾ ನಿಜದ ನಿಲುವಿನತ್ತ ಸಾಗಿದ್ದು ಕಂಡುಬರುತ್ತದೆ. "ಅಡಿಯಿಡಲಿಲ್ಲ ನುಡಿಯನೇನೆಯಲಿಲ್ಲ, ಸರಸವೆನಲಿಲ್ಲ ಆ ಸರಸ ವಿರೂಪಾದ ಬಳಿಕ ಪ್ರಸಾದವೆನಲಿಲ್ಲ..."[೯೪] ಇಲ್ಲಿ ವೈಯಕ್ತಿಕ ಸಂಬಂಧಗಳನ್ನು ದಾಟಿ ಹೇಳುತ್ತಾ ಬಸವಣ್ಣನು ಸರಸ ಮತ್ತು ಮಾತು ಇಲ್ಲವಾಗಿ ಪ್ರಸಾದಿ ತತ್ವಕ್ಕೆ ಬಂದು ಹಾಗೆ ಎತ್ತರದ ನಿಲುವಿಗೆ ಅಂದರೆ ಬೇಕು ಬೇಡೆಂಬ ತಾತ್ವಿಕ ಪರಿಣಾಮದಲ್ಲಿ ನಾನು ಅಡಗಿದ್ದೇನೆ ಎಂದು ಹೇಳುತ್ತಾಳೆ. ಅಂದರೆ ಹಂತಹಂತವಾಗಿ ಈಕೆಯ ವಚನ ಉನ್ನತೀಕರಣದತ್ತ ಸಾಗಿವೆ ಎಂದು ತೋರುತ್ತದೆ.

"ಅಲ್ಲಲ್ಲಿಯ ಸುಖಂಭೋ ಎನಲಿಲ್ಲ
ಅಲ್ಲಲ್ಲಿಯ ಪಶುತ್ವವಿಲ್ಲಂಭೋ
ಆ ಪಶು ಕಾಯವಂ ಕಳದು ಆನು
ಪರಿಣಾಮವಡಗಿದವಲಯ್ಯಾ......"[೯೫]

ಈ ವಚನ ಅಂತರಂಗದ ಶಾಂತಿ ಪಡೆಯಲು ಹಾಗೂ ನಿರ್ಮಲ ಭಾವ ಬರಬೇಕಾದರೆ, ನಾವುಗಳು ಸುಖದ ಹಂಗುಬಿಟ್ಟು, ಪಶುತ್ವದ ಭಾವನೆಗಳು ಎಲ್ಲಿ ಮೂಡುತ್ತವೆ. ಅಂತಹ ಸಮಯದಲ್ಲಿ ಕಿತ್ತು ಹಾಕಿ, ಭವಾರಣ್ಯದೊಳಗೆ ಹೊಕ್ಕು ದೇವನೋಲುಮೆಗೆ ಮುಂದಾಗಬೇಕು ಮತ್ತು ಕಾಯ ಪರಿಪಕ್ವತೆ ಪಡೆದು, ಪರ ವಸ್ತುವಿನ ನೆಲೆಯ ತಿಳಿದು ಪರಮ ಪ್ರಸಾದಿಯ

ಗುಣವನ್ನು ಪಡೆದೆ, ಶುದ್ಧ ಮೂರ್ತಿಯಾದೆನು ಎಂದು ತನ್ನ ಪರಿವರ್ತನಾ ಹಂತವನ್ನು ವಿವರಿಸುತ್ತಾಳೆ. ಹಾಗೆ ಈ ಪಶುತ್ವ ಭಾವನೆ ಹೋದಲ್ಲಿ ಎಲ್ಲವನ್ನು ತಿಳಿಯಬಹುದು ಎಂದು ಈ ವಚನದಲ್ಲಿ "ಎಲ್ಲವನರಿಯಬಹುದೆ ಎಂದು ನಾನು ತಿಳಿಯಲು..... ಸಂಗಯ್ಯ"[೯೬] ಎಂದು ತನ್ನೊಳಗೆ ಪ್ರಶ್ನೆ ಮಾಡುತ್ತಾ ಈಕೆ ಅರಿವು ಸಂಪಾದನೆಗೆ ಮುಂದಾಗಲು ಯೋಚಿಸುವಂತಿದೆ. ಹಾಗೆ ಮುಂದುವರೆದು "ಎಲ್ಲವನರಿಯೆಂದರೆ ಎನಗೆ ಎಲ್ಲರಲ್ಲಿಯ ಪರಿಣಾಮವಡಂಗಿ ಪರಂಜ್ಯೋತಿರ್ಲಿಂಗವ ಕಂಡು ನಾನು ಸುಖಿಯಾದೆನಯ್ಯಾ ಸಂಗಯ್ಯ"[೯೭] ಎಲ್ಲವನ್ನು ತಿಳಿಯುವ ಹಂಬಲ ಉಂಟಾಗಿದ್ದರೂ ಎಲ್ಲ ಶರಣರ ಜ್ಞಾನ ಪ್ರಕಾಶದ ಚಿತ್ಕಳೆ ನನ್ನಲ್ಲಿ ಅವರಿಸಿ ನಾನು ಸುಖಿಯಾಗಿದ್ದೇನೆ ಎಂದು ಈ ವಚನದಲ್ಲಿ ತಿಳಿಸಿದ್ದಾಳೆ. ಎಲ್ಲವನ್ನು ತಿಳಿಯುವ ಹಂಬಲ ಉಂಟಾಗಿದ್ದರು ಎಲ್ಲ ಶರಣರ ಜ್ಞಾನದ ಪ್ರಕಾಶದ ಚಿತ್ಕಲೆ ನನ್ನಲ್ಲಿ ಅವರಿಸಿ ನಾನು ಸುಖಿಯಾಗಿದ್ದೇನೆ ಎಂದು ಈ ವಚನದಲ್ಲಿ ತಿಳಿಸಿದ್ದಾಳೆ.

ನೀಲಾಂಬಿಕೆಯಲ್ಲಿ ಜ್ಞಾನಾದಾಹ ಹೆಚ್ಚಾಗಿ ಆಕೆ ಈ ವಚನವನ್ನು ಹೇಳುತ್ತಾಳೆ.

"ಎಲೆಯಿಲ್ಲದೆ ಮರಕಾಯಾಯಿತ್ತು
ಆ ಮರ ಫಲವಾಯಿತ್ತು, ಆ ಫಲ ನಿಃಫಲವಾಯಿತ್ತು
...........................ಸಂಗಯ್ಯ"[೯೮]

ಈ ವಚನ ಬೆಡಗಿನ ರೂಪದಲ್ಲಿದೆ, ಎಲೆಯಿಲ್ಲದೆ ಮರ ಕಾಯಾಯಿತ್ತು, ಈ ಕಾಯ ಗುರುವಿನ ಹಸ್ತಮಸ್ತಕ ಸಂಯೋಗದಿಂದ ಜ್ಞಾನ ಎನ್ನುವ ಕಾಯಿ ಉದಯವಾಗುತ್ತೆ ಅದು ಫಲವಾಗಿ, ಮತ್ತೆ ಆ ಫಲ ಇಲ್ಲವಾಗಿತ್ತು, ಅಂದರೆ ಸುಜ್ಞಾನ ಕಾಯದಲ್ಲಿ ಪ್ರವೇಶವಾಗಿ, ಅಜ್ಞಾನವನ್ನು ನಿಃಫಲ ಇಲ್ಲವಾಗುವುದನ್ನೆ ಹೇಳಿ ಸುಖದ ಹಂತಕ್ಕೆ ನಾನು ತಲುಪಿದೆ. ಅಂದರೆ ಬ್ರಹ್ಮರಂಧ್ರದ ಮೂಲಕ ನಾನು ಆನಂದಿತಳಾದೆ ಎಂಬುದನ್ನು ಹೇಳಿ, ಆ ಜ್ಞಾನ ಪಡೆಯುವ ಮುನ್ಸೂಚನೆಯಂತೆ ಮುಂದಾಗುವ ಪರಿ ಇಲ್ಲಿದೆ.

ತನ್ನ ಅಂತರಾತ್ಮದ ತಾತ್ವಿಕತೆಯನ್ನು ಹೆಚ್ಚಿಸಲು ಹಾಗೂ ಸಮರ್ಪಕವಾದ ಸುಖವನ್ನು ಕಾಣಬೇಕಾದರೆ, ಅಂತಹ ದಿವ್ಯಮೂರ್ತಿಯ ಕೃಪೆಯಿಂದ ಮಾತ್ರ ಎಂಬುದನ್ನು ಈ ವಚನದಿಂದ ತಿಳಿಸುತ್ತಾಳೆ.

"ಏತರಲ್ಲಿಯೂ ತೆರಹಿಲ್ಲವೆನಗೆ
ಸುಖ ಎನಗೆ; ಸುಖದಿಂದ ವಿಪತ್ತನಳಿದೆನಯ್ಯಾ
ವಿಚಾರವ ತಿಳಿದು ನಿಃಪತಿಯಾದೆನಯ್ಯ ಸಂಗಯ್ಯ
ಏತರಲ್ಲಿಯೂ ಪರಿಣಾಮವಿಲ್ಲವೇತರಲ್ಲಿಯೂ ಗಮನವಿಲ್ಲ

ವೇತರಲ್ಲಿಯೂ ವಿವೇಕದನುಭವವಿಲ್ಲ.
ವಪ್ರತಿಮನ ಸುಖವ ಕಂಡು
ಆನು ವಿವೇಕ ವಿವರವ ತಿಳಿದೆನಯ್ಯ
.........ವಿವರವರಕಂಡೆನಯ್ಯ ಸಂಗಯ್ಯ"[೯೯]

ನೀಲಾಂಬಿಕೆಯಲ್ಲಿ ಸಾಧನೆಯ ಪಥದತ್ತ ಸಾಗುವ ಸಂದರ್ಭ ಏತರಲ್ಲಿಯೂ ಸುಖ ಕಾಣದೆ ಈಕೆ ನೋವಿನಲ್ಲಿ ಮರುಗಿ ಸಮರ್ಪಣಾಭಾವವನ್ನು ಅರ್ಪಿಸುತ್ತಾ, ಎನಗೆ ಗತಿ, ಮತಿ, ನೀನೆಯಲ್ಲ ಎಂದು ಈ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಎನಗಿನ್ನಾರು ಗತಿಯಿಲ್ಲವಯ್ಯ
ಎನನಿನ್ನಾರು ಪ್ರತಿಯಿಲ್ಲವಯ್ಯ
ಎನ್ನಯ್ಯನ ಪ್ರಾಣವೇ ನಾನಾದ ಕಾರಣ
ಎನಗಿನ್ನಾರು ಸರಿಯ ಕಾಣೆನಯ್ಯ
ಎನಗೆ ಮುಖವನರಿಯದಿರಲು
ಮುಖ ಸ್ವರೂಪಿಯಾದೆನಯ್ಯ ಸಂಗಯ್ಯ"[೧೦೦]

ಈ ವಚನ ಬಸವಣ್ಣ ಅಗಲುವೆಯಿಂದ ನೊಂದ ಈಕೆ, ನಾನು ಬಸವಣ್ಣ ಪ್ರಾಣವಾಗಿದ್ದೆ ಎನಗೆ ಯಾರು ಗತಿಯಿಲ್ಲ ಎಂಬ, ಮಾತನ್ನು ಹೇಳಿ ಬಸವ ನಿಲ್ಲದೆ ಅಬಲೆಯಾಗಿದ್ದೇನೆ. ಅಂತಹ ಸ್ವರೂಪ ಮೂರ್ತಿ ಸಂಗಯ್ಯ ನೀನೆ ಎನಗೆ ಸರ್ವಸ್ವ ಎಂದು ಬೇಡುವ ಪರಿಯನ್ನು ಇಲ್ಲಿ ಕಾಣುತ್ತೇವೆ. ಈಕೆಯು ಅರ್ಪಣಾಭಾವದ ತುಮಲತೆಯನ್ನು ಈ ವಚನದಲ್ಲಿ ತುಂಬಿದ್ದಾಳೆ.

"ಎನಗಿನ್ನೇನು ಎನಗಿನ್ನೇನು ಎನಗಿನ್ನೇನು
ಎನಲೇನು ಕಾರಣ ಬಸವಾ?
ಎನಗಿನ್ನಾವುದು ಪರಿಣಾಮದ ನೆಲೆಯಿಲ್ಲ ಬಸವಾ
ಎನಗೆ ನಿನ್ನ ರೂಪು ನಿರೂಪಾದ ಬಳಿಕ ಭಕ್ತಿಸಾರಾಯ
ದ ಪಥವ ನೊಲ್ಲೆನಯ್ಯಾ ಸಂಗಯ್ಯನ
ಗುರುಬಸವಾ"[೧೦೧]

ಈ ವಚನದಲ್ಲಿ ಈಕೆಯು ನನಗೇನುಬೇಕು, ಬಸವನು ಇಚ್ಛಿಸಿದ ಜ್ಞಾನ ಪ್ರಸಾದವನ್ನು ಉಣಬಡಿಸಿದ್ದಾನೆ. ಹಾಗೆ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ನಾನು ಕೂಡಿದ್ದೇನೆ. ಜೊತಗೆ ಗುರು, ಲಿಂಗ, ಜಂಗಮ, ಪ್ರಸಾದ ಈ ಸಾರಾಯ ಸಂಪತ್ತಿನ ಮಹತ್ವ ತಿಳಿದಿದ್ದೇನೆ. ಹಾಗೂ

ಇದರಿಂದ ಆನಂದಿತಳಾಗಿದ್ದೇನೆ. ಇಷ್ಟು ಜ್ಞಾನ ಆಗರ ನೀಡಿದೆ ಎಂದು ಇದರಲ್ಲೆ ನಾನು ಸಫಲತೆ ಹೊಂದುವೆ ಎಂಬ ಭಾವನೆಯನ್ನು ಈ ವಚನದಲ್ಲಿ ಬಿಂಬಿಸಿದ್ದಾಳೆ.

ಒಟ್ಟಾರೆಯಾಗಿ ನೀಲಾಂಬಿಕೆ ವೈಯಕ್ತಿಕ ಬದುಕು ಸುಖದಿಂದ ಕೂಡಿಲ್ಲ ಎಂಬುದು ತಿಳಿಯುತ್ತದೆ. ಈಕೆ ಸದಾ ಕಷ್ಟಜೀವಿ. ಜೊತೆಗೆ ಜ್ಞಾನದ ದಾಹತೆಯನ್ನು ನೀರಾಪೇಕ್ಷೆ ಪಡುವಂತವಳು ಆಗಿದ್ದಾಳೆ. ಈಕೆಯ ಸ್ವಂತಿಕೆಯಲ್ಲಿ ನಿಷ್ಠೆಯುಳ್ಳವಳು. ಅಹಂಕಾರ ಮಮಕಾರಗಳ ಪರಿಮಿತಿಗೆ ಸಿಲುಕದೆ, ನಾನು ಸಾಧಕಳು ಎಂಬ ಭಾವನೆಯನ್ನು ವ್ಯಕ್ತಪಡಿಸಿ, ಒಮ್ಮೊಮ್ಮೆ ಸಂಯಮ ನೀತಿಯಿಂದ ಹೇಳಿದರೆ ಒಮ್ಮೊಮ್ಮೆ ಸತ್ಯನಿಷ್ಠರತೆಯ ಗುಣಗಳು ಒಳಗೊಂಡಿವೆ. ಈಕೆಯ ಈ ವೈಯಕ್ತಿಕ ಭಾವನೆಗಳು, ತನ್ನ ಮನಸ್ಸಿನ ವಿಸ್ತಾರತೆ, ಜೊತೆಗೆ ಅಪ್ರತಿಮವಾದ ಮೂರ್ತಿಯ ಕಾಣಲು ಹವಣಿಸುವ ಬಗೆಯನ್ನು ಜೊತೆಗೆ ಸಾಂಸಾರಿಕ ಸುಖ ಭೋಗಗಳು ಈ ಶರೀರಕ್ಕೆ ಮುಖ್ಯವಲ್ಲ, ಇದಕ್ಕೆ ಜ್ಞಾನ, ಅರಿವು, ಒಳ್ಳೆಯ ಸೃಜನಶೀಲವಿಚಾರ ಭಾವನೆಗಳ ಪೂರ್ವಾಶ್ರಯದ ಜಿಡ್ಡನ್ನು ತ್ಯಜಿಸಿ ನಿರ್ಮೋಹದ ಸ್ಥಿತಿಯನ್ನು ಈಕೆಯಲ್ಲಿ ತುಂಬಿದಂತೆ ಭಾಸವಾಗುತ್ತದೆ. ಅಚಲ ಶ್ರದ್ಧೆಯು ವಿಷಯಾದಿಗಳನ್ನು ಕಳೆದು ಮುಕ್ತಿಯ ಹಂತದ ಮೆಟ್ಟಿಲುಗಳನ್ನು ಏರುವುದು ಆಗಿದೆ. ಹಾಗೂ ಗುರು, ಲಿಂಗ, ಜಂಗಮಕ್ಕೆ ತನು, ಮನ, ಧನ, ಅರ್ಪಿಸಿ ಸುಖಿಯಾಗುವ ಬಗೆಯನ್ನು ಬಸವಣ್ಣನಿಂದ ತಿಳಿದ ಈಕೆ ಸದ ಪರಿಣಾಮಗಳ ಸಂಗ ಬಯಸುವುದು. ಜೊತೆಗೆ ಒಡನಾಟದಿಂದ ತನ್ಮಯತೆಯನ್ನು ಕಾಣುವ, ಜ್ಞಾನದ ಹಂಬಲ ಪಡೆಯುವ ಇಚ್ಛೆಯನ್ನು ಕಾಣುತ್ತೇವೆ. ಹಾಗೆ ಈಕೆಯು ವೈಯಕ್ತಿಕತೆಯಿಂದ ಬಸವನಿಷ್ಠೆಯತ್ತ ಸಾಗುವ ಪರಿಯನ್ನು ಇಲ್ಲಿ ಕಾಣುತ್ತೇವೆ.

### ೧.೨. ನೀಲಾಂಬಿಕೆ ವಚನಗಳಲ್ಲಿ ಬಸವನಿಷ್ಠೆ

ನೀಲಾಂಬಿಕೆ ತನ್ನ ವಚನಗಳಲ್ಲಿ ವೈಯಕ್ತಿಕ ಅಂಶಗಳನ್ನು ತುಂಬಿ, ಬಸವನಿಷ್ಠೆಯ ಕಡೆಗೆ ಬರುತ್ತಾಳೆ. ವೈಯಕ್ತಿಕದಲ್ಲಿ ಕೇವಲ ನಾನು ಹೆಣ್ಣಲ್ಲ, ಜ್ಞಾನರೂಪಕ್ಕೆ ಮಾರುಹೋದ ಆತ್ಮ, ತನು ಶುದ್ಧ, ಭಾವ ಶುದ್ಧವಾಗಬೇಕು ಅದಕ್ಕೆ ಬಸವನೆನ್ನ ಹೃದಯ, ಎನ್ನುವಂತ ಅತ್ಯಂತ ನಿಶ್ಚಲ ಭಾವನೆಯಿಂದ ಬಸವನನ್ನು ಸ್ಮರಿಸುವುದು, ಆತನ ಪ್ರಭಾವ, ವ್ಯಕ್ತಿತ್ವ, ಸಮರ್ಪಣಾಭಾವ, ಆಗರ, ಶರಣರ ಪಥದ ನಾಯಕ ಎಂಬ ಮುಂತಾದ ವಿಚಾರಗಳನ್ನು ಬಸವನ ಬಗ್ಗೆ ಹೇಳುತ್ತಾ ಬಸವನಿಷ್ಠೆಯತ್ತ ಸಾಗಿದ್ದು ಕಾಣುತ್ತೇವೆ. ಇಲ್ಲಿ ಈತನ ಜೀವನದೊಂದಿಗೆ ನಾನು ಕೂಡ ಗಾಳಿಯಲ್ಲಿ ಸುಗಂಧ ಬೆರತಂತೆ, ಹಾಲಿನಲ್ಲಿ ಸಕ್ಕರೆ ಬೆರೆತಂತೆ ಎಂಬ ಭಾವನೆ ವ್ಯಕ್ತಪಡಿಸಿ. ಆತನ ಅಗಲುವಿಕೆಯ ವಿರಹವೇದನೆಯನ್ನು ಈಕೆಯ ವಚನಗಳಲ್ಲಿ ಕಾಣುತ್ತೇವೆ. ಹಾಗೆ ಈಕೆಯಲ್ಲಿ ಅತಿಮುಖ್ಯ ವಿಷಯವೆಂದರೆ ಎಲ್ಲರೂ ಬಸವಣ್ಣನನ್ನು ಮೂರ್ತಿಕರಿಸಿದರೆ,

ಆದರೆ ನೀಲಮ್ಮ ಬಸವನನ್ನು ತನ್ನದೇಯಾದ ವಿಭಿನ್ನ ನೆಲೆಗಳಿಂದ ಹುಡುಕಿದಳು. ಈ ಶೋಧ ಹಂತ ಹಂತವಾಗಿ ವಿಕಾಸ ಹೊಂದಿದ್ದನ್ನು ಗಮನಿಸಬಹುದಾಗಿದೆ. ಬಹುಶಃ ನೀಲಮ್ಮನ ವಚನಗಳ ಮೂಲಕ ಬಸವಣ್ಣನನ್ನು ಅರಿಯುವ ಕ್ರಮವೊಂದಿದೆ ಎನಿಸುತ್ತದೆ. ಬಸವಣ್ಣನಲ್ಲಿ ತನ್ನ ಅಸ್ತಿತ್ವ ಹುಡುಕ ಹೊರಟ ಆಕೆ ಕಡೆಗೆ ಸಂಗಯ್ಯನಲ್ಲಿ ತನ್ನ ಅಸ್ತಿತ್ವ ಕಂಡುಕೊಂಡಿರುವ ಸಾಧ್ಯತೆ ಇದೆ.

ಡಾ.ವಿಜಯಶ್ರೀ ಸಬರದ ಬಸವಪಥದಲ್ಲಿಯ ನೀಲಾಂಬಿಕೆಯೆಂಬ ಲೇಖನದಲ್ಲಿ ಈಕೆಯನ್ನು ಕುರಿತು "ನೀಲಾಂಬಿಕೆಯ ಹೆಣ್ತನದ ಸಹಜ ಭಾವನೆಗಳ ಪರಿಣಾಮಕಾರಿಯಾದ ಅಭಿವ್ಯಕ್ತಿಯಿದೆ. ಬಸವಣ್ಣನ ವ್ಯಕ್ತಿ ವಿಶಿಷ್ಟತೆಯನ್ನು ಸ್ಮರಿಸುತ್ತಲೇ ಬಸವಣ್ಣನನ್ನು ಹುಡುಕುವ, ಬಸವಣ್ಣನಿಗಾಗಿ ಪರಿತಪಿಸುವ ಭಾವದಲ್ಲಿ ಪತಿ ಪ್ರೀತಿ–ಭಕ್ತಿ–ಗೌರವ ಭಾವವು ಅಡಗಿದೆ. ಈ ವಿಚಾರ ನೀಲಾಂಬಿಕೆಯ ವ್ಯಕ್ತಿತ್ವದ ಔನ್ನತ್ಯವನ್ನು ಎತ್ತಿತೋರಿಸುತ್ತದೆ."[೧೦೨] ಡಾ.ವಿಜಯಶ್ರೀ ಮುಂದುವರೆದು ಈಕೆಯ "ವಚನಗಳ ಭಾವ ಅಕ್ಕಮಹಾದೇವಿಯ ವಿರಹವನ್ನು ನೆನಪಿಸುತ್ತದೆ. ಆದರೆ ಅಕ್ಕಮಹಾದೇವಿಯ ವಿರಹವೇದನೆಯ ಭಾವತೀವ್ರತೆ ಅವಳ ವಚನಗಳಲ್ಲಿ ಕಂಡಷ್ಟು ಇವಳ ವಚನಗಳಲ್ಲಿ ಕಂಡುಬರುವುದಿಲ್ಲ. ಬಸವಣ್ಣನ ಅಸ್ತಿತ್ವದಲ್ಲಿ ತನ್ನ ಅಸ್ತಿತ್ವವನ್ನು ಕಾಣುವ ನೀಲಾಂಬಿಕೆಗೆ ಬಸವಣ್ಣನಿಲ್ಲದ ಬದುಕು ಶೂನ್ಯವಾಗಿತ್ತೆಂಬ ಭಾವಕ್ಕೆ ಅವಳ ವಚನಗಳು ನಿದರ್ಶನವಾಗಿವೆ."[೧೦೩] ಇವರ ಅಭಿಪ್ರಾಯದಂತೆ ಅಕ್ಕಮಹಾದೇವಿಯ ಆತ್ಮಬಲವನ್ನು ಹೆಚ್ಚಿಸಿ ಕೊಳ್ಳಲು ಹಾಗೂ ಹೊರಗಿನ ಪ್ರಾಪಂಚಿಕ ವಾಸನೆಯನ್ನು ತೊಡೆದುಹಾಕಿ ಚನ್ನಮಲ್ಲಿಕಾರ್ಜುನನ್ನು ಎಲ್ಲ ಅಂಶಗಳಲ್ಲಿ ಕಾಣಲಿಕ್ಕೆ ಹೋಗುವುದನ್ನೆ ಕಂಡರೆ ನೀಲಾಂಬಿಕೆಯಲ್ಲಿ ಬಸವನನ್ನು ಕಳೆದುಕೊಂಡ ವೇದನೆ ಮೂಡುತ್ತದೆ. ಆದರೆ ಅಕ್ಕ ದೀರ್ಘವಾಗಿ ಪರಿಸರ, ಪ್ರಾಣಿ–ಪಕ್ಷಿ, ಗುಡ್ಡಬೆಟ್ಟ ಜೀವಿ ತುಂಬಿವೆ ಎಂಬ ಭಾವನೆಯಿಂದ ಅವುಗಳಿಗೆ ಕೇಳುತ್ತಾ ಹೋದರೆ ನೀಲಾಂಬಿಕೆ ಬಸವನನ್ನು ಅಂತರಾತ್ಮದಿಂದ ಆತನ ಸ್ವರೂಪ, ವ್ಯಕ್ತಿತ್ವ ಹಾಗೂ ಕಾಯಕ ದಾಸೋಹ ಮತ್ತು ಆತನ ಕ್ರಿಯಾಶೀಲ ಬದುಕನ್ನು ಮನತುಂಬಿ ಸ್ಮರಿಸುವುದನ್ನು ಇಲ್ಲಿ ಕಾಣುವ ಸಾಧ್ಯತೆ ಇದೆ. ಬಸವಣ್ಣನೆ ನನಗೆ ಸರ್ವಸ್ವವೆಂದು ನೀಲಾಂಬಿಕೆಯ ವಚನವು ಈ ರೀತಿಯಾಗಿ ಹೇಳುತ್ತದೆ.

> "ಎನಗೆ ಲಿಂಗವು ನೀವೆ ಬಸವಯ್ಯ
> ಎನಗೆ ಸಂಗವು ನೀವೆ ಬಸವಯ್ಯ
> ಎನಗೆ ಪ್ರಾಣವು ನೀವೆ ಬಸವಯ್ಯ
> ಎನಗೆ ಪ್ರಸಾದವು ನೀವೆ ಬಸವಯ್ಯ
> ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯ
> ಎನಗೆ ಸಂಗಯ್ಯನು ನೀವೆ ಬಸವಯ್ಯಾ"[೧೦೪]

ಈ ವಚನದಲ್ಲಿ ನೀಲಾಂಬಿಕೆಗೆ ಬಸವಣ್ಣನ ಅಧ್ಯಾತ್ಮದ ಇಂಗಿತವನ್ನು ಅರಿತ ನೀಲಾಂಬಿಕೆ ಲಿಂಗ, ಸಂಗ, ಪ್ರಾಣ, ಪ್ರಸಾದ ಎಲ್ಲವೂ ನೀವೆ ಎಂದು ಹೇಳುತ್ತಾ, ಜ್ಞಾನ ಎನ್ನುವ ಪ್ರಭೆಯ ಮೂರ್ತಿಯಾಗಿ ಕಂಡ ಬಳಿಕ ಎನ್ನ ದೈವ ಸಂಗಯ್ಯ ನೀನೆಯಾಗಿದ್ದಿಯಾ ಎಂದು ಹೃದಯ ವೈಶಲ್ಯತೆಯಿಂದ ಈತನ ವೈಶಿಷ್ಟ್ಯತೆಯನ್ನು ತಿಳಿಸುತ್ತಾಳೆ. ಈ ವಚನ ಕುರಿತು ಸಾವಿತ್ರಿ ನಾಗರಾಜಯ್ಯರ ಅಭಿಪ್ರಾಯ "ಬಸವಣ್ಣನವರ ಮಣಿಹದ ವೈಖರಿಯನ್ನು ವೀಕ್ಷಿಸುತ್ತ ಅನುಭವಿಯಾಗಿ, ಅನುಭಾವಿಯಾಗಿದ್ದಳು. ಅವಳಿಗೆ ಬಸವನ ನಾಮ ಬಸವ ಬಸವನವರೇ ಆಗಿದ್ದರು ಎನ್ನುವುದಕ್ಕೆ ಅವಳ ವಚನ"[೧೦೫]

ಈ ವಚನವನ್ನು ಕುರಿತು ಗಂಬೀಶಂರು "ಬಸವಣ್ಣನವರ ಅನುಗ್ರಹದಿಂದ ಅವರ ಭಕ್ತಿಜ್ಞಾನ ವೈರಾಗ್ಯವನ್ನು ನೀಲಾಂಬಿಕೆಯು ತನ್ನಲ್ಲಿ ಅಳವಡಿಸಿಕೊಂಡಿರುವುದು ಇಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಆದ್ದರಿಂದಲೇ ತನಗೆ ಗುರುಸಂಗ ಅಂದರೆ ಲಿಂಗ, ಪ್ರಾಣ, ಪ್ರಸಾದ, ನಿತ್ಯ ನಿಜಜ್ಞಾನದ ನಿಜಾನಂದ ಪ್ರಭೆ ಎಲ್ಲವೂ ಬಸವನೇ ಆಗಿದ್ದಾನೆ"[೧೦೬] ಎಂದು ಹೇಳುತ್ತಾರೆ. ಹಾಗೆ ಬಸವಣ್ಣ ಕರುಣಾಮೂರ್ತಿಯಾಗಿದ್ದನೆಂದು ಈ ವಚನ ಹೀಗೆ ಹೇಳುತ್ತದೆ.

"ಅರುವೆರಳುದ್ದ ದೇಹದ ಮಾಡಿದೆ ಕರುಣೆ ಬಸವಾ
ಬೆರಸಿ, ಬೇರಿಲ್ಲದೆ ಇದ್ದೆ ಬಸವಾ
ನೆರೆನಂಬಿದೆ ನಿಮ್ಮುವ ಬಸವಾ
...........ಸಂಗನ ಬಸವಾ ಮೂಲ ಕರ್ತೃ
ನಾನು ನಿನಗೆ"[೧೦೭]

"ಅರಿಯೆನರಿಯೆ ನಾನು, ಏನುವನರಿಯೆನಯ್ಯ;
ಎಲ್ಲವ ಮರದೆನಯ್ಯ,
ಎಲ್ಲಾ ಪುರಾತರ ಹಂಗ ಹರಿದು ನಾನು
ಸಂಗ ನಿಸ್ಸಂಗಿಯಾದೆನು
ಗುಣ ಕಥನದ ಮಾತ ಹರಿದು
ಬಸವ ಬಸವಾಯೆಂಬ ಮಾತಿನ ಭ್ರಮೆಯ ಕಳೆದುಳಿದೆನಯ್ಯ"[೧೦೮]

ಬಸವಣ್ಣ ನೀಲಮ್ಮರು ಅಧ್ಯಾತ್ಮ ಜೀವಿಗಳು, ಜೊತೆಗೆ ದಾಸೋಹಂಭಾವವನ್ನು ಕಲಿಸಿದ್ದು ಬಸವಣ್ಣನೆನಬಹುದು. ಆದರೆ ಈ ವಚನದಲ್ಲಿ ನೀಲಾಂಬಿಕೆಗೆ ಈತನ ಅಗಲುವಿಕೆಯಿಂದ ನನಗೆ ಜ್ಞಾನ ಬೇಕಾಗಿಲ್ಲ, ತತ್ವ ಬೇಕಾಗಿಲ್ಲ. ನಾನು ತಿಳಿದಿದ್ದರು ಮರೆಯುವೆ. ನನಗೆ ಯಾವ ಪುರಾತನರ ಹಂಗು ಇಲ್ಲ.

“ಅರಿವಡೆ ನಾನು ಅರಿವುಳ್ಳ ಹೆಣ್ಣಲ್ಲ;
ಮರವಡೆ ನಾನು ಮರೆಯಿಲ್ಲ ಕಾಮಿನಿಯಲ್ಲ
ಏನು ರೂಪಿಲ್ಲ ವೆನಗೆ,
ಏನು ನೆಲೆಯಿಲ್ಲವೆನಗಯ್ಯ ಸಂಗಯ್ಯ”[೧೯೯]

ನೀಲಾಂಬಿಕೆಯಲ್ಲಿ ಬಸವನ ಅಗಲುವಿಕೆಯಿಂದ ಉದಾತ್ತ ಭಾವನೆಗಳು ಹೊಮ್ಮಿರುವುದನ್ನು ಕಾಣುತ್ತೇವೆ. ಅರಿತಿದ್ದೇನೆ ಆದರೆ ಅರಿವುಳ್ಳ ಹೆಣ್ಣಲ್ಲ ಎಂಬುದರ ಮುಖಾಂತರ ತನ್ನಲ್ಲಿಯ ಮೋಹ ಹೋಗಿ ನಿರ್ಮೋಹದತ್ತ ನಾನು ಬಂದಿದ್ದೇನೆ. ಅಂದ ಬಳಿಕ ನಾನು ಕಾಮಿನಿಯಲ್ಲ, ನನ್ನಲ್ಲಿ ರೂಪವಿಲ್ಲ, ನನ್ನದೆಯೆಂದು ಹೇಳುವ ಬಾಹ್ಯ ಸೌಂದರ್ಯ ಇಲ್ಲವಾಗಿ, ಬಸವ ರೂಪು ನನಗೆ ಒಂದೆಯಾಗಿ ಕಾಣುತ್ತದೆ. ಇನ್ನೊಂದರ್ಥದಲ್ಲಿ ನೀನು ವಿಚಾರವಂತೆ ನಿನ್ನಲ್ಲಿ ರೂಪು, ಲಾವಣ್ಯ ಮೆಚ್ಚುಗೆಯಾಗಿದೆ. ಹೀಗಿದ್ದರೂ ಕುರುಪಿಯ ಹಾಗೆ ಕುಳಿತ್ತಿದ್ದಿಯಾ? ಹಾಗೆ ನೆಲೆಯೇ ಇಲ್ಲವೆಂದು ತಿಳಿದಿದ್ದೀಯಾ ಎಂದು ತನ್ನ ಮನಸ್ಸಿಗೆ ಹೇಳಿ ಸಂತೈಸಿರಬೇಕು. ಒಮ್ಮೊಮ್ಮೆ ಮನಸ್ಸಿನ ತಾಕಲಾಟಕ್ಕೆ ಒಳಗಾದಲ್ಲಿ ಈ ಮಾತುಗಳು ಸಹಜವಾಗಿ ಉಲ್ಬಣಿಸುವುದನ್ನು ಈಕೆಯ ವಚನಗಳಲ್ಲಿ ಕಾಣಬಹುದು. ಹಾಗೆ ಮುಂದಿನ ವಚನದಲ್ಲಿ ಬಸವಣ್ಣನಲ್ಲಿಯ ಆಧ್ಯಾತ್ಮದ ಔನ್ನತ್ಯವು ಈ ವಚನದಲ್ಲಿ ಮೂಡಿಬಂದಿದೆ.

“ಅರಿಯದ ಶಬ್ದದ ಕುರುಹಿಂಗೆ ತಂದ ಬಸವಯ್ಯನು
ಆ ಕುರುಹ ನೆರಡ ಮಾಡಿದ ಬಸವಯ್ಯನು
ಅವೆರಡ ಒಂದರಲ್ಲಿ ವೇಧಿಸಿ ಸಂಗಯ್ಯನಲ್ಲಿ
ಸ್ವಯಲಿಂಗಿಯಾದನಯ್ಯ ಬಸವಯ್ಯನು”[೧೧೦]

ಈ ವಚನ ಸರ್ವಶಕ್ತನಾದ ಪರಮಾತ್ಮನ ಸ್ವರೂಪದಲ್ಲಿಯ ಇಷ್ಟಲಿಂಗವನ್ನು ಈ ಜಗತ್ತಿಗೆ ತಂದ ಜೊತೆಗೆ ಅಂಗ ಮತ್ತು ಲಿಂಗದ ಮೂಲಕ ಅಂಗಸಂಗವ ಕಳೆದು, ತಾನೇ ನಿಜತ್ವದ ನಿರುಪಮಾಕಾರನಾಗಿ, ಸ್ವಯಂ ಲಿಂಗಿಯಾಗಿದ್ದಾನೆ. ಬಸವಣ್ಣ ಎಂದು ಈ ವಚನ ಹೇಳುತ್ತದೆ. ಹಾಗೆ ಭಕ್ತಸ್ಥಲ ಮೂಲಕ ಬಸವನ ಶ್ರೀಪಾದದಲ್ಲಿ ಅಡಗುವೆ ಎಂದು ಈ ಕೆಳಗಿನ ವಚನದ ಉಲ್ಲೇಖ.

“ಎನಗೆ ಇಲ್ಲಿ ಏನು ಬಸವಾ ಬಸವಾ?
ಎನಗೆ ಅದರ ಕುರುಹೇನು ಬಸವಾ?
ಎನಗೆ ಬಸವ ನಡೆದ ಭಕ್ತಿಸ್ಥಲದಲ್ಲಿ ನಿಂದು
ಭಕ್ತಿ ಸ್ಥಳ ಬಸವನಲ್ಲಿ ಕುರುಹಳಿದು

ನಾನು ಬಸವನ ಶ್ರೀಪಾದದಲ್ಲಿ
ಉರಿಯುಂಡ ಕರ್ಪೂರದಂತಡಗಿದ ಬಳಿ ಸಂಗಯ್ಯಾ?"[೧೧೧]

ನೀಲಾಂಬಿಕೆ ಬಸವನಲ್ಲಿ ಅನನ್ಯ ಭಕ್ತಿಯ ಮೂಲಕ ಆತನ ಇರುವಿಕೆ ಕಂಡು ಹಾಗೂ ಭಕ್ತ ಸ್ಥಲದಲ್ಲಿ ನಡೆದು, ಆತನ ಸದಾಚಾರ ಮಾರ್ಗದಲ್ಲಿ ನಡೆದು ಆತನ ಭಕ್ತಿ, ಜ್ಞಾನ, ವೈರಾಗ್ಯ ವಿಚಾರ ತಿಳಿದು, ನಾನು ಬಸವನ ಶ್ರೀಪಾದದಲ್ಲಿ ಅಡಗಿದೆ. ಅದರ ಕುರುಹು ಇಲ್ಲದೇ ಹೋದೆ ಎಂದು ಹೇಳುತ್ತಾ ಉರಿಯುಂಡ ಕರ್ಪೂರದಲ್ಲಿ ಅಡಗಿದೆ ಎಂಬ ಮಾತನ್ನು ಹೇಳುವುದರ ಮೂಲಕ ಬಸವನ ಶ್ರೀಪಾದದಲ್ಲಿ ಬಹುಶಃ ಐಕ್ಯವಾದೆ ಎಂದಿರಬಹುದು. ಅಥವಾ ಬಯಲಿನಲ್ಲಿ ಬಯಲಾದೆ ಎಂಬಂತೆಯೂ ಹೇಳಿರಬಹುದು. ಹಾಗೆ ಬಸವನ ಶಕ್ತಿ ಅನನ್ಯತೆಯನ್ನು ಕುರಿತು, ಹಾಗೂ ಆಧ್ಯಾತ್ಮಿಕದ ಎತ್ತರಕೆ ಏರಿದ ಸಾಧಕನಾಗಿ ಕಾಣುವಂತೆ ತೋರಿದ್ದಾಳೆ. ಈ ವಚನದಲ್ಲಿ

"ಎರಡಿಲ್ಲದ ವಸ್ತುವೆನೀನೆರಡಾದೆಯಲ್ಲ ಬಸವಯ್ಯ
ಎರಡನೇಕೀಕರಿಸಿ ಭ್ರಮೆಯ ಬಿಡಿಸಿದೆಯಲ್ಲ ಬಸವಯ್ಯ
ಭ್ರಮೆಯನಳಿದು ಪರಿಣಾಮದ ಸಂಗವ ಮಾಡಿದೆಯಲ್ಲ ಬಸವಯ್ಯ
ತೆರಹಿಲ್ಲದ ವಸ್ತುವಾದೆಯಲ್ಲಾ ಬಸವಯ್ಯ ಗುರುವೆ
ಸಂಗಯ್ಯನಲ್ಲಿ ಸದುಹೃದಯನಾದೆಯಲ್ಲ ಬಸವಯ್ಯ"[೧೧೨]

ಈ ವಚನದಲ್ಲಿ ಶರಣಸತಿ–ಲಿಂಗಪತಿ ಭಾವವನ್ನು ಹೇಳುತ್ತದೆ. ಇಲ್ಲಿ ಆತ್ಮ ಒಂದೇ ಎಂಬುದು ತಿಳಿದ ಮೇಲೆ ಭ್ರಮೆಯಿಲ್ಲವಾಗಿ, ಅಲ್ಲಿ ಜ್ಞಾನ ಚಿಗುರು ಒಡೆದು ಸುಜ್ಞಾನ ಅನ್ನುವ ಫಲ ವಸ್ತುವಾಗುತ್ತದೆ. ಅಂತಹ ಪರಮಚೈತನ್ಯ ವಸ್ತುವೇ, ಬಸವಯ್ಯ. ಆತನು ಸಂಗಯ್ಯನಲ್ಲಿ ಸಹಜಾನಂದದಲ್ಲಿ ನೆಲೆನಿಂತಿದ್ದಾನೆ ಎಂದು ಹೇಳುತ್ತಾಳೆ.

ಬಸವಣ್ಣನು ಅನುಭಾವಿಯಾಗಿದ್ದ ಹಾಗೂ ಆತನ ಕಾರ್ಯತತ್ಪರತೆಯು ಸಮರ್ಪಣ ಭಾವದಿಂದ ಕೂಡಿದೆ ಎಂದು ಈ ವಚನ

"ಎಸಳದಳವನಳಿದು ನಿಂದ ಬಸವಾ
ದಳರೂಪಿತದಲ್ಲಿ ಕುರುಹಡಗಿದ ಬಸವಾ
ಕುರುಡಿನ ರೂಪಕಂಡು ದೃಢ ಸ್ವೂಪಪನರಿದು
ಅನುಭಾವಿಯಾಗಿ ಅನುಭಾವದಿಂದ ಮುಕ್ತಿಯ ಕಂಡು
ಮುಖ ವಿಕಸಿತವನೆಯ್ದಿ ನಿಂದನಯ್ಯ ಸಂಗಯ್ಯನಲ್ಲಿ
ಬಸವಯ್ಯನು"[೧೧೩]

ಎಂದು ನೀಲಮ್ಮ ಮನ, ಬುದ್ಧಿ, ಚಿತ್ತ, ಅಹಂಕಾರಗಳನ್ನು ಕಳೆದು, ಹೂವಿನ ಪಕಳೆಯಂತೆ ಕಾಣುತ್ತಿದ್ದಾನೆ. ಆ ದಳಗಳಲ್ಲಿ ಚಿತ್ಕಳೆಯಾಗಿ ಕಂಡು, ಅದರ ಮೂಲಕ ತನ್ನ ಸ್ವರೂಪ ಅರಿದು, ನಿಷ್ಕಳ ಭಾವನೆಯ ಚಿಲುಮೆ ಹೊಮ್ಮಿ, ಅನುಭಾವಿಯಾಗಿ, ಮುಕ್ತಿಯ ಕಂಡು, ದಿವ್ಯ ವ್ಯಕ್ತಿತ್ವದಲ್ಲಿ ಆಕರ್ಷಿತನಾಗಿ, ಸಂಗಯ್ಯನಲ್ಲಿ ಸುಖನೆಮ್ಮದಿಯ ಕೇಂದ್ರಬಿಂದು ಆಗಿದ್ದಾನೆ ಎಂದು ಹೇಳುತ್ತಾಳೆ. ನೀಲಾಂಬಿಕೆ ಬಸವಣ್ಣನನ್ನು ಆತನ ಪ್ರಭಾವವನ್ನು ಈ ವಚನದಲ್ಲಿ ಹೀಗೆ ಗುರುತಿಸಿದ್ದಾಳೆ.

"ಎಸೆವಾಕ್ಷರ ಕುರುಹ ಕಂಡು  
ಆನು ಬಸವಾ ಬಸವಾ ಎನುತಿರ್ದೆನಯ್ಯಾ  
ಬ್ರಹ್ಮವನರಿದು ಮೂರ್ತಿಯ ಇರವನರಿದೆನಯ್ಯಾ  
ಸಂಗಯ್ಯನಲ್ಲಿ ಕುರುಹೇನಳಿದೆನು"[೧೧೪]

ಈ ವಚನವು ಪಂಚಾಕ್ಷರ ಮಹಾಮಂತ್ರದ ಮೂಲಕ ನಿಜದ ಅರಿವು ತಿಳಿದು, ನೀಲಾಂಬಿಕೆ ಬಸವನನ್ನು ಸ್ಮರಿಸಿದೆ ಎನ್ನುತ್ತಾಳೆ. ಬ್ರಹ್ಮವನರಿದು ಎಂದರೆ ಮಹಾಜ್ಞಾನವರಿದು. ಆಂತರಿಕ ತೊಳಲಾಟ ನಿಲ್ಲಿಸಿ ನಿಶ್ಚಯಾತ್ಮಕವಾಗಿ ಅರಿತು, ನಿಖರವಾದ ಗುರುತುಗಳನ್ನು ಕಂಡು ಆನಂದಿತಳಾದೆ ನಾನು ಎಂದು ಹೇಳುತ್ತಾಳೆ. ಆದರೆ ಸೂಕ್ಷ್ಮತೆಯಿಂದ ನೋಡಿದಾಗ ಈ ವಚನ ಪಾರಮಾರ್ಥಿಕತೆ ಯನ್ನು ಮೀರಿದ್ದು ಆಗಿ ಕಾಣುತ್ತದೆ. ದೇಹ, ಜೀವ, ಈ ಎರಡಕ್ಕೆ ಉಸಿರು ಮಂತ್ರ ಈ ಪ್ರಾಣವಾಯು ನಿಂತಾಗ ನಿರಾಕಾರ ಬಿಂದು ಇಲ್ಲವಾಗಿ, ಕತ್ತಲು ಬರುತ್ತದೆ. ಈ ಕತ್ತಲಿಗೆ ಬೆಳಕು ಎಂಬ ಮೂರ್ತಿ, ಅದೇ ಪರವಸ್ತು ಬಂದು ನೆಲಸಿದಾಗ, ಅಜ್ಞಾನವು ಸುಳಿವಿಲ್ಲದೆ ನಾಶವಾಗಿ, ಜ್ಞಾನದ ಭಾವಬೆಳದಿಂಗಳು ಕಾಣುವಲ್ಲಿ ಮುಂದಾಗುವ ಸೂಚನೆಯನ್ನು ಈ ವಚನ ತಿಳಿಸಬಹುದು. ಹಾಗೆ ಸದಾ ಇರುವಿಕೆಯ ಮಹಾ ಕರ್ತೃವಾಗಿ ಸ್ವಯಲಿಂಗಿಯಾಗಿದ್ದಾನೆ ಎಂದು ಈ ವಚನ

"ಏತರಲ್ಲಿಯೂ ಹೆಸರಿಲ್ಲದ ಕುರುಹು ಈ ವಸ್ತು ಬಸವಯ್ಯನು  
...................................................  
.................ಸಂಗಯ್ಯನಲ್ಲಿ ಬಸವ ಸ್ವಯಲಿಂಗಿಯಾದ ಬಳಿಕ"[೧೧೩]

ತನ್ನದೆಯಾದ ಸಾಕಾರ ರೂಪಿಯಾಗಿ ಗುರುತನ್ನು ಕೊಟ್ಟು, ಪರಂಜ್ಯೋತಿಯ ರೂಪದ ಮೂರ್ತಿಗೆ, ನೆಲೆಯೆಂಬುದು ಇಲ್ಲ. ಅದು ಪರಿಪೂರ್ಣದ ಹಂತ ತಲುಪಿ ಬೆಳಕು ಪ್ರಜ್ವಲವಾಗಿ, ಭವದ ವಾಸೆ ಕಳೆದು ಶುದ್ಧತೆಯತ್ತ, ಸಾಗಿತ್ತು. ಅದು ಬೇರೆಯ ವಸ್ತುವಲ್ಲ, ಬಸವನ ರೂಪವೇ ಆಗಿದೆ. ಹಾಗೆ ದೀಪ, ಮುಟ್ಟಿ ದೀಪವಾದಂತೆ ಸಂಗಯ್ಯನಲ್ಲಿ ಬಸವಣ್ಣ ತಾನೇ ಕುರುಹು

ಆಗಿದ್ದಾನೆ. ಹಾಗೆ ಆತ್ಮದ ಮೂಲಶಕ್ತಿಯಾಗಿ ಕಂಗೊಳಿಸಿದ್ದಾನೆ. ಅಂಗಜೀವಿ, ಲಿಂಗಜೀವಿಯಾದಲ್ಲಿ ಸ್ವಯಂಭುವಾಗಿ, ಅದರಲ್ಲಿ ಆತ್ಮದ ಲೀನತೆ ಒಳಗೊಂಡುದ್ದರಿಂದ ಸಂಗಯ್ಯನಲ್ಲಿ ಸ್ವಯಂಲಿಂಗಿಯೆಂದು ಹೇಳಿದ್ದಾಳೆ. ಬಸವಣ್ಣನು ತನ್ನದೆಯಾದ ರೀತಿಯಲ್ಲಿ ಬದುಕುವನು. ಅವನು ಯಾರ ಹಂಗಿನಲ್ಲಿ ಇಲ್ಲದವನು ಎಂಬುದನ್ನು ಈ ವಚನ ಹೇಳುತ್ತದೆ.

"ನಮ್ಮ ಹಂಗಿಗನಲ್ಲ ಬಸವಯ್ಯನು
ನಮ್ಮ ಸಂಗಿಗನಲ್ಲ ಬಸವಯ್ಯನು
ನಮ್ಮ ಇರದವನಲ್ಲ ಬಸವಯ್ಯನು
ನಮ್ಮ ಪರದವನಲ್ಲ ಬಸವಯ್ಯನು
ಪ್ರಸಾದ ವೇದ್ಯ ಶರಣ ಬಸವಯ್ಯನು
ಪ್ರಸನ್ನ ಕಾಯವಾದನಯ್ಯ ಸಂಗಯ್ಯಾ"[೧೧೬]

ಬಸವಣ್ಣ ಯಾರ ಹಂಗಿನಲ್ಲಿ ಬದುಕಿಲ್ಲ. ಜೊತೆಗೆ ಕೆಟ್ಟವ ಸಂಗಿಯಲ್ಲಿ, ಹಾಗೂ ಬೇಕೆಂದು ಕೇಳಿದರೆ ಅದು ಕಾಯಗುಣ ಆಗುತ್ತದೆ ಎಂದ ಬಸವಣ್ಣ ಕೇವಲ ಭೌತಿಕ ವಸ್ತುಗಳಿಗೆ ಎಂದು ಆಸೆ ಪಟ್ಟಿಲ್ಲ. ಹಾಗೆ ಇಹ, ಪರದವನು ಅಲ್ಲ ಪರಾತ್ಪರ ಯೋಚನೆಯುಳ್ಳ ಶುದ್ಧ ಮನಸ್ಸಿನಿಂದ ಕೂಡಿದವನು. ಇಂತಹ ಪರಿಪೂರ್ಣತ್ವದ ಕಾಯವನ್ನು ಹೊಂದಿದವನು ಬಸವಣ್ಣ ಎಂಬ ನಿಲುವು ಸ್ಪಷ್ಟತೆಯಿಂದ ನೀಲಾಂಬಿಕೆ ಚಿತ್ರಿಸಿದ್ದಾಳೆ. ಈ ವಚನಕ್ಕೆ ಗುಂಬೀಶಂರ ಅಭಿಪ್ರಾಯ ಹೀಗಿದೆ. "ಬಸವಣ್ಣನವರು ಸಂಸಾರಿಕವಾಗಿ, ಉನ್ನತ ಅಧಿಕಾರಿಯಾಗಿದ್ದರು. ಪ್ರಾಪಂಚಿಕರ ಹಂಗಿನವರಲ್ಲ, ಅವರ ಸಂಗಿಗನಲ್ಲ, ಇಹ-ಪರಗಳ ವಿಕಾರ, ಸಕಾರ ಗುಣಗಳನ್ನು ಮೀರಿದ ನಿರ್ವಿಕಾರನು, ಪ್ರಸಾದ ಬಲ್ಲವ, ತಾನೇ ಪ್ರಸಾದಿಯಾದವ ಬಸವಣ್ಣ. ಸದಾ ಪ್ರಸನ್ನ ಕಾಯದವ, ಸಚ್ ಚಿತ್ ಆನಂದ ಪರಿಪೂರ್ಣಿಯೆಂದು ಶರಣೆ ನೀಲಾಂಬಿಕೆಯು ಬಸವಣ್ಣನವರು ಬಯಲಲ್ಲಿ ಬಯಲಾದ ಸ್ಥಿತಿಯನ್ನು ನಿರೂಪಿಸಿದ್ದಾಳೆ."[೧೧೭] ಇವರ ಅಭಿಪ್ರಾಯದಂತೆ ಬಸವಣ್ಣ ನಿರ್ಮಲದಿಂದ ಕೂಡಿದವನು. ನಿಜದ ಆನಂದ ಅರಿತ ಶರಣ ಸಂಗಯ್ಯನಲ್ಲಿ ಬೆರತ ಬಗೆಯನ್ನು ತಿಳಿಸುತ್ತಾರೆ. ಅದರಂತೆ ಈ ಕಾಯವನ್ನು ಶುದ್ಧಗೊಳಿಸಿ ತಾನೇ ಶುದ್ಧತ್ವದ ಪರಮಾವಧಿಯನ್ನು ಪಡೆದು ಅಧ್ಯಾತ್ಮದ ಉನ್ನತಿಯ ನಿರಾಕಾರ ಸ್ಥಿತಿಯಾಗಿದ್ದಾನೆಂದು ಹೇಳಬಹುದು.

ಬಸವ ಮತ್ತು ಈಕೆಯ ಮನಗಳು ಹೇಗಿದ್ದವು ಎಂಬುದನ್ನು ಈ ವಚನದಿಂದ ತಿಳಿಯಬಹುದು.

"ಬುದ್ಧಿಯನಳಿದು ನಿರ್ಬುದ್ಧಿ ವಂತಳ ಸಂಗದಿಂದ
ನಾನು ಸುಖವ ಕಂಡೆನೆಂದು ನುಡಿದ ನೆಂದೆ ಬಸವಾ

ಬಸವನ ಹಂಗು ಹರಿದು

ಅನು ಸಂಗಯ್ಯನಲ್ಲಿ ಸುಖಿಯಾದೆನಯ್ಯಾ ಸಂಗಯ್ಯ"[೧೧೮]

ಬಸವಣ್ಣ ಜೀವನ ಕ್ರಮವನ್ನು ಅಸ್ವಾದಿಸುವ ಈಕೆ ಈ ವಚನದಲ್ಲಿ ತನ್ನನ್ನೆ ಪ್ರಶ್ನಿಸುವ ಮೂಲಕ ಈಕೆಯಿಂದ ಸುಖವ ಕಂಡೆ ಎಂದು ಹೇಳಿದೆ ಬಸವ, ನನ್ನ ಸಂತೋಷಕ್ಕಾಗಿ ನೀನು ಹೇಳಿರಬಹುದು. ಆದರೆ ನಿನ್ನ ಹಂಗು ಹರಿದಿದ್ದೇನೆ. ನಿನ್ನ ಸುಖಕ್ಕಿಂತ ಸಂಗಯ್ಯನ ನೆನೆಯುವ ಸುಖದಲ್ಲಿ, ಸುಖಿಯಾಗಿದ್ದೇನೆ ಎಂದು ಹೇಳುತ್ತಾಳೆ. ಬಸವಣ್ಣ ಜಂಗಮ ಪ್ರಾಣಿಯಾಗಿದ್ದ ಎಂಬುದನ್ನು ಹಾಗೂ ಲಕ್ಷದಮೇ ತೊಂಬತ್ತಾರು ಸಾವಿರ ಗಣಂಗಳಿಗೆ ದಾಸೋಹ ಕೈಂಕರ್ಯತೆ ಯನ್ನು ಈ ವಚನದಲ್ಲಿ ನೋಡಬಹುದು.

"ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ

ಮಾಡುವ ಮಾಟವಳಿಯಿತ್ತು ಬಸವಾ;

ಇಂದಿಗೆ ಊಟವಳಿಯಿತ್ತು ಬಸವಾ

ಇಂದಿಂಗೆ ಅವರ ಸಂಗವಳಿದು

ನಿರಾಲಂಬ ಮೂರ್ತಿಯ ಇರವು ಕಾಣಿಸಿತಯ್ಯಾ ಬಸವಾ

ಸಂಗಯ್ಯಾ, ಬಸವನ ರೂಪು ಎನ್ನಲ್ಲಿ ಅಡಗಲು"[೧೧೯]

ಈ ವಚನವನ್ನು ಕಲ್ಯಾಣಕ್ರಾಂತಿಯ ಕೊನೆಯ ಗಳಿಗೆಯಲ್ಲಿ, ಅಂದರೆ ಬಸವಣ್ಣ ಸಂಗಮಕ್ಕೆ ಹೋಗುವ ಸಂದರ್ಭವೆನಿಸುತ್ತದೆ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ದಾಸೋಹ ಇಂದಿಗೆ ನಿಂತ ಹಾಗೆ, ಮತ್ತು ಅವರ ಸಂಗವಳಿದು ಹೋಗುತ್ತದೆ. ಆಶ್ರಯವಿಲ್ಲದವರು ಆಗಿ ಬಿಡುತ್ತಾರೆ. ಯಾಕೆಂದರೆ ಇವರಿಗೆ ಪ್ರಸಾದ ನೀಡುವ ಮೂರ್ತಿಯ ಇರುವುದನ್ನು ಕುರಿತು ನಿತ್ಯ ನಡೆಯುವ ಚಟುವಟಿಕೆಗಳು ಕಲ್ಯಾಣದಲ್ಲಿ ಬಸವನಿಲ್ಲದೆ ತಟಸ್ಥವಾಗಿದ್ದಾವೆ ಎಂಬ ನೋವಿನ ವೇದನೆಯ ಮೂಲಕ ಜಂಗಮರ ಸ್ಥಿತಿ ಏನಾಯಿತೊ? ಎಂಬುದು ಒಂದಾದರೆ, ಬಸವನ ಐಕ್ಯದ ಕುರಿತು ತಿಳಿದ ಈಕೆ ರೋಧಿಸುತ್ತಾ ಈ ವಚನ ಹೇಳಿರಬೇಕು ಮತ್ತು ಬಸವನು ಸಂಗಯ್ಯನಲ್ಲಿ ಅಡಗಿದಂತೆ, ಬಸವನ ರೂಪ ನನ್ನೊಳಗೆ ಅಡಗಲಿ ಎಂದು ಪ್ರಾರ್ಥಿಸುತ್ತಾಳೆ. ಹಾಗೆ ಈಕೆಯ ವೇದನೆ ಹೆಚ್ಚಿ ನಾನು ಯಾರ ಹಂಗಿಗಳಲ್ಲ ನಿನ್ನ ಇರವು ಕಂಡು ಬದುಕಿದೆನು ಎಂದು ಈ ವಚನದಲ್ಲಿ ಹೇಳುತ್ತಾಳೆ.

"ಲಿಂಗದ ಹಂಗಿಗಳಲ್ಲ ನಾನು ಬಸವಾ

ಜಂಗಮದ ಹಂಗಿಗಳಲ್ಲ ನಾನು ಬಸವಾ

.....................................

........................................

ಪ್ರಸನ್ನ ಮೂರ್ತಿಯಲಡಗಿದ ಬಸವನ ಇರವ ಕಂಡು

ಬದುಕಿದೆನಯ್ಯಾ ಸಂಗಯ್ಯ"[೧೨೦]

ಈ ವಚನವು ವಿರಹವೇದನೆಯ ವಚನವಾಗಿದೆ. ಈಕೆಯಲ್ಲಿ ಬಸವನ ಕಳೆದುಕೊಂಡ ನೋವು, ಬಹಳಷ್ಟು ತೀವ್ರತೆಗೆ ಹೋಗಿ ನನ್ನ ಬಸವನೆ ಇಲ್ಲದ ಮೇಲೆ ನಿಮ್ಮಗಳ ಹಂಗೇಕೆ ಎನ್ನುವ ಭಾವನೆಗೆ ಬಂದಿರುವುದನ್ನು ಈ ವಚನ ಧ್ವನಿಸುತ್ತದೆ. ಇಲ್ಲಿ ಲಿಂಗ, ಜಂಗಮ, ಪ್ರಸಾದದ, ಹಂಗು(ಆಕೆಯನ್ನು) ಇಲ್ಲದಾಗಿದೆ. ಶರಣಸತಿ–ಲಿಂಗಪತಿ ಪರಿಣಾಮವಿದು ನಡೆಯದು ಆಗಲ್ಲ, ಬಸವಾ ನೀನು ಎಲ್ಲವನ್ನು ನನ್ನೊಳಗೆ ಅಡಗಿಸಿದ್ದಿಯಾ ಹಾಗಾಗಿ ಇಂತಪ್ಪ ಪ್ರಸನ್ನ ಮೂರ್ತಿಯಾದ ನಿನ್ನ ಇರವ ಕಂಡು ಅಥವಾ ನಿನ್ನ ನೆನಪಿನಲ್ಲಿ ನಾನು ಬದುಕುತ್ತೇನೆ ಎಂದು ಈ ವಚನದಲ್ಲಿ ಹೇಳುತ್ತಾಳೆ. ಈಕೆಯಲ್ಲಿಯ ಬಸವನಿಷ್ಠೆಯ ತುಮುಲತೆ, ಈಕೆಯನ್ನು ಹೀಗೆ ಮಾತನಾಡಿಸುತ್ತದೆ. ಬಸವನನ್ನು ಅಗಲಿದ ನಂತರ ಈಕೆಗೆ ಎಲ್ಲ ವಿಷಯಗಳಲ್ಲಿ ಉದಾಸೀನ ತೋರಿದ್ದು ಈಕೆಯ ವಚನಗಳಲ್ಲಿ ವ್ಯಕ್ತವಾಗುತ್ತದೆ.

"ಸಮಯಾಚಾರವಡಗಿದ ಬಸವಾ

ಸಂಗನಿಸ್ಸಂಗವಾದ ಬಸವಾ

ಶಬ್ದ ವಡಗಿದ ಬಸವಾ ಶೂನ್ಯವಳಿದ ಬಸವಾ

................................

................................

ಕಾಯವನಳಿದನಯ್ಯಾ ಸಂಗಯ್ಯನ ಗುರುಬಸವ"[೧೨೧]

ಶಿವ ಸಮಯ ಪಾಲಕನಾದ ಬಸವಣ್ಣ ದೇಹಾದಿಗಳ ಪರಿವೆ ಇಲ್ಲದೆ, ಜ್ಞಾನದ ಚಕ್ಷುವಿನಲ್ಲಿ ಕೂಡಿಕೊಂಡು ಅಡಗಿದ ಬಸವ, ಜೊತೆಗೆ ನಿರಾಕಾರದ ನಿಲುವು ಪರಮ ಮೂರ್ತಿಯ ಕಂಡು ಬೆಳಕೆ ಇಲ್ಲದ ಹಾಗೆ ಕಂಡು ನಿಶ್ಚಲ ರೂಪ ಈತನು ಕಾಯ ಅಳಿದನು ಸಂಗಯ್ಯನಲ್ಲಿ ಎಂದಿದ್ದಾಳೆ. ಈಕೆಯಲ್ಲಿ ಬಸವಣ್ಣ ಭಾವಕ್ಕೆ ಬಂದವನು, ಜೀವಾತ್ಮನೊಳು ಬೆರತವನು. ಹಾಗೆ ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಬಟ್ಟ ಬಯಲಾದ ಬಗೆಯನ್ನು ನೀಲಾಂಬಿಕೆ ವಿರಹವೇದನೆಯ ಮೂಲಕ ಎತ್ತರ ಮಟ್ಟಕ್ಕೆ ಏರಿದ ಬಸವಣ್ಣ ಸ್ಥಿತಿ ನಿರಾಕಾರದ್ದು ಸ್ವರೂಪದಲ್ಲಿ ರೂಪಗೊಂಡಿದೆ.

ಬಸವಣ್ಣ ಎಂತಹ ಮೂರ್ತಿಯೆಂದು ಹೇಳುವ ಮೂಲಕ ಈ ಕೆಳಗಿನ ವಚನದಲ್ಲಿ

"ಸಯದಾನವರತ ಬಸವಾ

ಸಂಭ್ರಮ ಮೂರ್ತಿ ಬಸವಾ

ಸಂಗನಿಸ್ಸಂಗ ಬಸವಾ

..............................

ಬಸವ ಬಯಲನೆಯ್ದಿ ಅನು ಬಯಲಸಿ ಕಂಡೆನಯ್ಯಾ

ಸಂಗಯ್ಯ"[೧೨]

ಈ ವಚನದಲ್ಲಿ ಮನವನ್ನೆ ನೈವೇದ್ಯ ಮಾಡಿದ ಸಂತೋಷದ ಮೂರ್ತಿ, ಭವದ ಬಂಧನಗಳಿಗೆ ಒಳಗಾಗದೆ, ಆತ್ಮರೂಪನಾಗಿ, ಏನೂ ಕಲ್ಮಷತೆ ಕಾಣದೆ ಹಾಗೆ ಬಯಲಿನಲ್ಲಿ ಬಯಲಾದ ಬಗೆಯನ್ನು ಸರ್ವಶೂನ್ಯತೆಯ ತತ್ವಕ್ಕೆ ನಿಂತ ಬಸವನಲ್ಲಿ ನಾನು ಬಯಲುಗೊಂಡೆನು ಎಂದು ಹೇಳುತ್ತಾಳೆ. ಬಸವಣ್ಣನಿಗೆ ನಾನು ಹತ್ತಿರವಾಗಿರುವವಳು ಬಸವ ಹೆಜ್ಜೆ ನನ್ನ ಹೆಜ್ಜೆಯಾಗಿದೆ ಎಂಬುದನ್ನು ತೋರ್ಪಡಿಸಿದ್ದಾಳೆ.

ಶರಣನಿಗೆ ಅವಸ್ಥೆಗಳ ಪರಿವೆಯನ್ನು ಕಳೆದುಕೊಂಡು, ನಿರ್ಭಾವದ ಭಾವವನ್ನು ಹೊಂದಿ, ಜಗವಿದೆ, ಜೀವಭಾವ ತುಂಬಿದೆ ಎಂಬ ಒಳನೋಟದ ಸ್ಥಿತಿಯನ್ನು ಹಾಗೂ ಬಯಲಿನಲ್ಲಿ ಬೆರೆತ ಬಗೆಯನ್ನು ಈ ಕೆಳಗಿನ ವಚನ ಸ್ಪಷ್ಟಪಡಿಸುತ್ತದೆ.

"ಅಂಡಜವಳಿದ ಬಸವಾ; ಪಿಂಡಜವಳಿದ ಬಸವಾ;
ಆಕಾರವಳಿದ ಬಸವಾ; ನಿರಾಕಾರವಳಿದ ಬಸವಾ;
ಸಂಗವಳಿದ ಬಸವಾ; ನಿಸ್ಸಂಗವಳಿದ ಬಸವಾ;
ಸಂಗಯ್ಯನಲ್ಲಿ ಸ್ವಯಲಿಂಗವಾದ ಬಸವಾ.
ಅಂಡಜವ ಕಲ್ಪಿಸಲು ಆ ಅಂಡಜದ ರೂಪೆನ್ನಲಿಲ್ಲ ಕಾರಣ
ಸಂಗಯ್ಯ, ಗುರುಬಸವನೆನ್ನ ಕಾಯದಲ್ಲಿ ಕಯ್ಯಲಗಿನಂತಿದ್ದನು.
ಅಂಡದಲ್ಲಿಯೊಂದು ಆಕಾರದ ರೂಪು ಹುಟ್ಟಿತು
ಆ ಆಕಾರದ ರೂಪಿನಲ್ಲಿ ಅನುವಿನ ಮೂರ್ತಿಯ ಭಕ್ತಿ ಹುಟ್ಟಿತ್ತು
..................................................
..................................ಸಂಗಯ್ಯ"[೧೩]

ಈ ವಚನಗಳಲ್ಲಿ ಬ್ರಹ್ಮಸೃಷ್ಟಿಯನ್ನು ಅಳವಡಿಸಿಕೊಂಡು ಬಂದದ್ದನ್ನು ಹಾಗೂ ದೇಹದಲ್ಲಿ ಹುಟ್ಟಿದ ಸಕಲ ಜೀವರಾಶಿಗಳಿಗೆ ಭಿನ್ನವಾಗಿ ಬಸವನಿದ್ದಾನೆ. ಹಾಗೂ ಅಂಡಜ, ಪಿಂಡಜಗಳ ಅಳಿದು, ಆಕಾರವಿಲ್ಲದೆ, ನಿರಾಕಾರತ್ವದ ಮೆಟ್ಟಲನ್ನು ಏರಿ ಆತನು ಸ್ವಯಂಭು ಆಗಿ ನಿಂತಿದ್ದಾನೆ. ಜೊತೆಗೆ ಬ್ರಹ್ಮ ಸೃಷ್ಟಿಯ ಕಲ್ಪಿಸಲು ಆ ರೂಪದಲ್ಲಿ ಕಾಣದೆ ಸಂಗಯ್ಯ ರೂಪವಾಗಿ ನಿಂತು ನನ್ನ ಕಾಯದಲ್ಲಿ ಸ್ಫೂರ್ತಿಯನ್ನು ನೀಡಿದ್ದು ಅಲ್ಲದೆ ಪರಿಣಾಮದ ಸ್ವರೂಪನಾಗಿದ್ದಾನೆ.

ಹಾಗೆಯೇ ದೇಹ ಆಕಾರಗೊಳ್ಳಲು ಕ್ರಿಯೆ ಬಹಳ ಮುಖ್ಯ. ಆ ಕ್ರಿಯೆಯು ಆಕಾರದ ರೂಪಿನಲ್ಲಿ ಬಿಂದುವಾಗಿ ಹುಟ್ಟಿ ಭಕ್ತಿಯ ಪರಾಕಾಷ್ಠೆಯೊಳಗೆ ತಲ್ಲೀನವಾಗಿ, ಅಲ್ಲಿ ಸುಂದರವಾದ ನಿಜಮೂರ್ತಿಯ ಕುರುಹು ಅರಳಿ ನಿಂದಿತ್ತು. ನಂತರದಲ್ಲಿ ಅದು ಮಹಬೆಳಗಿನೊಳಗೆ ಲೀನವಾಗಿತ್ತು. ಆ ಮೂರ್ತಿಯೇ ಬಸವಯ್ಯ ಎಂದು ಹೇಳುತ್ತಾಳೆ. ಈ ವಚನದ ಕೊನೆಯ ಸಾಲಿಗೆ ಪ್ರೊ. ಗುಂಬಿಶಂರು ಹೀಗೆ ಹೇಳುತ್ತಾರೆ.

"ಅಂಗದಾಧಾರದಲ್ಲಿ ಜ್ಞಾನಕ್ರಿಯಾ ಭಗವತ್ತ ಸಾಧನೆಯಲ್ಲಿ ಪರಮ ಸುಖವನ್ನು ಅನುಭವಿಸುತ್ತ ಅನಂತವಾದ ವಿಶ್ವಾತ್ಮದಲ್ಲಿ ಐಕ್ಯಗೊಂಡು ತಾನೇ ತಾನಾಗಿ ಒಂದಾಗಿ ನಿಲ್ಲುವುದೇ ನಿರ್ವಲಯ ಸ್ಥಿತಿ. ಈ ಸ್ಥಿತಿ ತಲುಪಲು ಅಂಗರೂ ಪದಾಧಾರ. ಈ ಆಧಾರ ನಿರಾಧಾರಗೊಳಿಸುವ ಭಕ್ತಿ ಇವೆಲ್ಲವೂ ಬೇಕೆಂಬುದು ಈ ವಚನದಲ್ಲಿಯ"[೧೨೪] ನಿಲುವು ಆಗಿದೆ.

"ಅನುಭಾವದ ನಿಜಸಾರವಾಗಿ ನಿಂದನೆಮ್ಮ ಬಸವಯ್ಯನು
ವಿವೇಕದ ಸಂಗವೆ ನಿಜಸಂಗವಾಗಿ ನಿಂದನೆಮ್ಮ ಬಸವಯ್ಯನು
ಭಾವದ ಬಯಲಿಂಗೆ ಬಣ್ಣವಿಟ್ಟನೆಮ್ಮ ಬಸವಯ್ಯನು
ಇತರೇತರ ಮಾರ್ಗವಳಿದು, ಗಮನ ನಾಸ್ತಿಯಾದನೆಮ್ಮ ಬಸವಯ್ಯನು
ಸಂಗಯ್ಯನಲ್ಲಿ ಉಭಯ ಕುಳ ನಾಸ್ತಿಯಾದನೆಮ್ಮ ಬಸವಯ್ಯನು"[೧೨೫]

ಬಸವಣ್ಣನಲ್ಲಿ ಅನುಭವ ಅನುಭಾವವಾಗಿ ಅರಿವಿನ ಕಣ್ಣು ತೆರೆದು, ಗುಣದೋಷಗಳ ಪರಿಶೀಲನೆಯಿಂದ ಈತನ ಸಂಗ ನಿಜಸಂಗವಾಗಿ ನಿಂತು ಅಂದರೆ ಸಮರಸ ಭಾವನೆಗಳು ಒಡಮೂಡಿ, ನಿರಾಕಾರದ ಸ್ವರೂಪವನ್ನು ತೋರಿದನು. ಇತರರಿಗೆ, ನಿರ್ದೇಶನ ಮಾಡಿ, ಆಕಾರವಳಿದು ನಿರಾಕಾರ ಸ್ಥಿತಿಗೆ ಬಂದ ಮೇಲೆ ಸಂಗಯ್ಯನ ಕೃಪೆ ನಮಗೆ ಆಗುತ್ತದೆ ಎಂದ ಮೇಲೆ ಸಂಗಯ್ಯ ಬಸವಯ್ಯನಲ್ಲಿ ದ್ವಂದ್ವತೆ ಇಲ್ಲವಾಗಿ, ಒಂದೇ ವಸ್ತುವಾಗಿವೆ. ಅದುವೇ ಚಿತ್‌ಶಕ್ತಿಯ ಕುರುಹು ಎನ್ನಬಹುದು.

ಈ ವಚನಕ್ಕೆ ಪೂರಕವಾದ ಅಭಿಪ್ರಾಯವನ್ನು ಪ್ರೊ.ಗುಂಬೀಶಂರು "ಶರಣೆ ನೀಲಾಂಬಿಕೆಯು ಬಸವಣ್ಣನವರ ಪರತತ್ವದ ಪರಮ ಪ್ರಕಾಶದ ಪ್ರಖರತೆಯನ್ನು ಪ್ರಮಾಣಿಸಿದ್ದಾಳೆ. ಬಸವಣ್ಣನವರು ಸ್ವಾನುಭಾವದ ನಿಜಸಾರವಾಗಿ ಸ್ವವಿವೇಕದ ಸಂಗದ ನಿಜಸಂಗವಾಗಿ, ಅಂದರೆ ನಿತ್ಯಜ್ಞಾನ ಪರಿಪೂರ್ಣಿಯಾಗಿ ಭಾವದ ಬಯಲ ಸ್ವರೂಪವನ್ನು ಸಕಲರಲ್ಲಿ ತೋರಿದ, ನಿಜದರ್ಶನ ಮಾಡಿದ ಆ ಬಯಲ ಮಾಹಿತಿಯನ್ನು ಮೆರೆದನೆಂದರ್ಥ."[೧೨೬]

"ಆಡದ ಭಾಷೆಯ ನುಡಿವಳಲ್ಲಿ ನಾನು ಬಸವಾ
ಆ ನುಡಿಯ ಭಾಷೆಯ ಕೇಳುವಳಲ್ಲ ನಾನು ಬಸವಾ

ರೂಪಳಿದ ನಿರೂಪಿಯಾನು ಬಸವಾ
ಅಂಗವಳಿದ ನಿರಂಗಿಯಾನು ಬಸವಾ
ದ್ವಯವಳಿದ ಪ್ರಸಾದಿಯಾನು ಬಸವಾ
ಪರಿಣಾಮವರತ ಹೆಣ್ಣೆಂದು ಉಮ್ಮವರೆನ್ನ
ಹೆಸರಿಡಲು ನಾನು ಬಸವನ ಪಾದದಲ್ಲಿ
ತಲ್ಲೀಯವಾದೆನಯ್ಯಾ ಸಂಗಯ್ಯಾ"[೧೨೭]

ಈ ವಚನದಲ್ಲಿ ಬಾಹ್ಯ ಮತ್ತು ಆಂತರಿಕ ಅಂಶಗಳು ಒಳಗೊಂಡಿವೆ. ಇಲ್ಲಿ ಮೇಲ್ನೋಟದಲ್ಲಿ ನಾನು ಆಡಿದ್ದ ಭಾಷೆಯಂತೆ ನಾನು ನುಡಿಯುತ್ತೇನೆ ವಿನಃ ಬೇರೆಯ ಭಾಷೆಯನ್ನು ಬಳಸಿಲ್ಲ ಜೊತೆಗೆ ಬಸವ ಹೇಗೆ ಬದುಕಿದನೋ ಹಾಗೆ ಬದುಕು ಸಾಗಿಸುವುದು ನನ್ನ ಕರ್ತವ್ಯ. ಹಾಗೆ ನನ್ನಲ್ಲಿ ಎರಡು ಗುಣವಿಲ್ಲ. ಅಂದರೆ ಬಸವ ಇದ್ದಾಗ ಒಂದು ತರ, ಇಲ್ಲದಾಗ ಒಂದು ಬದುಕು ನನ್ನದಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದರೆ, ಆಂತರಿಕವಾಗಿ ನನ್ನ ನಡೆ ನುಡಿಯಲ್ಲಿ ಬದಲಾವಣೆಯಿಲ್ಲ, ರೂಪವಿದ್ದರೂ ಆ ರೂಪಕ್ಕೆ ನಿರೂಪವಾಗಿಬಿಟ್ಟಿದ್ದೇನೆ. ಹಾಗಾಗಿ ಈ ಕಲ್ಮಷದಿಂದ ಕೂಡಿದ ಶರೀರವನ್ನು ತೊಡೆದುಹಾಕಿ, ಏಕಾತ್ಮದ ನೆಲೆಯಲ್ಲಿ ಪ್ರಸಾದಿಯಾಗಿ ನಿನ್ನ ನಿಜಸ್ಥಿತಿಯ ತಿಳಿಯಲು ಆತ್ಮಳಾಗಿ ನಿಂತಿರುವೆ. ಈ ಆತ್ಮಕ್ಕೆ ಸ್ತ್ರೀ–ಪುರುಷ ಬೇಧವಿಲ್ಲ. ಹಾಗಾಗಿ ಇಂತಹ ತುರ್ಯಾತೀತ ಸ್ಥಿತಿಯನ್ನು ನಾನು ಬಸವನ ಪಾದದಲ್ಲಿ ನಿಲ್ಲಿಸಿದ್ದೇನೆ ಎಂದು ಹೇಳುತ್ತಾಳೆ. ಇಲ್ಲಿ ಸ್ಪಷ್ಟತೆಯೆಂದರೆ ನಿಜದ ಕುರುಹುವಿನತ್ತ ಸಾಗುವ ಮುಖ್ಯ ಉದ್ದೇಶವಾಗಿದೆ. ಈ ವಚನಕ್ಕೆ ಅಲ್ಲದ ನುಡಿಗಳನ್ನು ದ್ವಯಭಾವದ ಪ್ರಾಪಂಚಿಕ ಆಸೆ ಆಮಿಷಗಳ ನುಡಿಗಳನ್ನು ನುಡಿಯಲಾರೆ, ಪರರು ಆಡಿದ ಅಂಥ ನುಡಿಗಳನ್ನು ಕೇಳಲಾರೆ, ಒಟ್ಟಿನಲ್ಲಿ ನೀಲಾಂಬಿಕೆಯು ಪ್ರಾಪಂಚಿಕ ಸರ್ವ ಸುಖಭೋಗಗಳಿಂದ ಮುಕ್ತಳಾದವಳೆಂದರ್ಥ."[೧೨೮]

ಬಸವಣ್ಣ ನನ್ನ ಸರ್ವಸ್ವವಾಗಿದ್ದ ಎನ್ನುವುದಕ್ಕೆ ಈ ಕೆಳಗಿನ ವಚನ ಸಾಕ್ಷಿಯಾಗಿದೆ.

"ಎನಗೇನೂ ತೋರದಂದು ನಮ್ಮವ್ವೆಯ ಮಗನಾಗಿದ್ದ ನಮ್ಮ ಬಸವಯ್ಯನು
ಎನಗೇನೂ ಕಾಣಿಸದಂದು ಹುಟ್ಟಿಸುವ ಕರ್ತನಾಗಿದ್ದ ನಮ್ಮ ಬಸವಯ್ಯನು
ಸಂಗ ನಿಸ್ಸಂಗವಿಲ್ಲದಂದು ಸಮಯಾಚಾರಿಯಾಗಿದ್ದ ನಮ್ಮ ಬಸವಯ್ಯನು
ತನುಮಥನವಿಲ್ಲದಂದು ನಿರೂಪ ರೂಪಮಾಡಿದನಯ್ಯಾ
ಸಂಗಯ್ಯ ನಿಮ್ಮ ಬಸವಯ್ಯನು"[೧೨೯]

ನೀಲಾಂಬಿಕೆ ಈ ವಚನದಲ್ಲಿ ತನಗೆ ಬಸವಣ್ಣ ಯಾವ ಪರಿಯಾಗಿ ಕಂಡ ಎಂಬುದನ್ನು ತಿಳಿಸುತ್ತಾಳೆ. ಹಾಗೂ ತಾಯಿಯಾಗಿ, ಹುಟ್ಟಿಸುವ ಕರ್ತನಾಗಿ, ಪರಬ್ರಹ್ಮ ವಸ್ತುವನ್ನು ಅರಿತವನಾಗಿ,

ತ್ರಿವಿಧ ದಾಸೋಹಿಯಾಗಿ ಕಂಡಿದ್ದಾನೆ ಎಂದು ಹೇಳುತ್ತಾಳೆ. ಅಂದರೆ ಆತನಲ್ಲಿದ್ದ ಸಾತ್ವಿಕತೆಯನ್ನು ಎತ್ತಿ ತೋರಿದ್ದಾಳೆ. ಈ ವಚನಕ್ಕೆ ಗುಂ.ಬೀ.ಶಂ.ರು ಹೀಗೆ ಹೇಳುತ್ತಾರೆ. "ಆದಿ–ಅಂತ್ಯವಿಲ್ಲದ ಅನಂತನಲ್ಲಿ ಯಾವುದೇ ಕ್ರಿಯೆಯಿಲ್ಲದಾಗ ಆ ಅನಂತದಲ್ಲಿ ಅವಿರ್ಭೂತಗೊಂಡು ಶಕ್ತಿಯ ಮಗನಾಗಿದ್ದ ಬಸವ ಆಕಾರ ರೂಪಗೊಳ್ಳುವ ಮುನ್ನವೇ ಆಕಾರಕ್ಕೆ ರೂಪುಕೊಡುವ ಕರ್ತನಾಗಿದ್ದ"[೧೩೦] ಎಂಬುದರ ಮುಖಾಂತರ ಬಸವನಲ್ಲಿಯ ಆಕಾರ ನಿರಾಕಾರತ್ವದ ಗುಣವನ್ನು ಹೇಳುತ್ತಾರೆ. ಹಾಗೆ ಬಸವಣ್ಣ ಕೂಡ ಅಂತರ್‌ಗತವಾದ ವಿಚಾರಧಾರಿಯಾಗಿದ್ದರಿಂದಲೇ ನೀಲಾಂಬಿಕೆ ಆತನಲ್ಲಿ ಗುಣ, ವಿಚಾರಗಳು ಆಕೆಯಲ್ಲಿ ರೂಪು ಗೊಳ್ಳಬೇಕು ಎಂಬ ಮಹಾದಾಸೆಯು ಇರಬಹುದು.

ಪತಿಯೊಂದಿಗೆ ಪಾರಮಾರ್ಥಿಕ ಸಾಧನೆಯ ಗುಟ್ಟನ್ನು ನಾನು ಯಾವ ರೀತಿ ಕಂಡೆ ಎಂಬುದನ್ನು ಈ ವಚನದಲ್ಲಿ ಹೇಳಿದ್ದಾಳೆ.

"ಕಾಲವ ಕಂಡ ಬಸವಾ, ಕಲ್ಪಿತವ ಕಂಡ ಬಸವಾ
ಕಾಲ ಕಲ್ಪಿತ ವರ್ಜಿತನಾದೆ ಬಸವಾ
ನಯ ನುಡಿಯಿಲ್ಲದ ಬಸವಾ
ನೀ ನಿಃಪತಿಯಾದೆಯಾ ಸಂಗಯ್ಯನ ಗುರುಬಸವಾ"[೧೩೧]

ಬಸವಣ್ಣನಲ್ಲಿದ್ದ ಕಾಲವೆಂದರೆ ಯಮ, ಕಲ್ಪಿತವೆಂದರೆ ತೊಂದರೆ, ಈ ಎರಡನ್ನು ಕಂಡಿದ್ದಾನೆ. ಆದರೆ ನಾನು ಈ ಎರಡರಿಂದ ವರ್ಜಿತಳಾದೆ, ಹಾಗೆ ಮುಂದುವರೆದು ಹೇಳುತ್ತಾಳೆ. "ಕಲ್ಲ ಮಲೆಯ ಕಡಿದಾತ ಬಸವಯ್ಯನು, ಕಾಲನ ಗೆಲಿದಾತ ಬಸವಯ್ಯನು ಎಲ್ಲವ ಮರೆದಾತ ಬಸವಯ್ಯನು ಜ್ಞಾನವನರಿದಾತ ಬಸವಯ್ಯನು ಸಂಗಯ್ಯನಲ್ಲಿ ಬೆರೆದು ನಿಃಪತಿಯಾದಾತ ನಮ್ಮ ಬಸವಯ್ಯನು"[೧೩೨] ಭಾವದ ಬಯಲಿಗೆ ಬಂದಂತ ವ್ಯಕ್ತಿ ಬಸವಣ್ಣನು. ಹಾಗಾಗಿ ನನ್ನನ್ನು ಕಠಿಣತೆಯಿಂದ ಸರಳತೆಗೆ ತಂದ, ಹಾಗೂ ಯಮನನ್ನು ಗೆದ್ದಾತ, ಎಲ್ಲ ಜಂಜಾಟ ಮರೆತು, ಜ್ಞಾನಿಯಾದ ಸಂಗಯ್ಯನಲ್ಲಿ ಲೀನವಾಗಿ, ಮಾಗಿದ ಹಣ್ಣಿನಂತೆ ಆಗಿದ್ದಾನೆ ಎಂದು ಹೇಳುತ್ತಾಳೆ.

ಬಸವನ ಸ್ತುತಿ ಮಾಡುತ್ತಾ ಆತನು ಐಕ್ಯವಾದ ವಿಚಾರಕ್ಕೆ ಮರುಗಿದ ಈಕೆ ಈ ವಚನದಲ್ಲಿ "ತುನುವಾವುದಯ್ಯಾ ಬಸವಾ? ಮನವಾವುದಯ್ಯಾ ಬಸವಾ? ನೆನಪಿನ ಪರಿಣಾಮವಾವುದಯ್ಯಾ ಬಸವಾ? ಉಭಯದ ಗುಣ ನಷ್ಟವಾದ ಬಳಿಕ ಪ್ರಸನ್ನ ಸುಖಭಾವವುಂಟೆ ಸಂಗಯ್ಯನ ಗುರುಬಸವಾ"[೧೩೩] ನೀಲಾಂಬಿಕೆಯ ಆತ್ಮ ಶಕ್ತಿಯ ಭಾವನೆ ತುಂಬಿಕೊಳ್ಳಲು ಪ್ರೇರಕ ಶಕ್ತಿಯಾಗಿ ಕಂಡು ಬಸವಣ್ಣನಿಗೆ ಪ್ರಶ್ನೆ ಮಾಡುತ್ತಾಳೆ. ತನು, ಮನ, ಯಾವುದು

ಎಂದು ಕೇಳುತ್ತಾ, ಈ ಉಭಯತ್ವವೆ ಇಲ್ಲವಾಗಿ ಏಕಾಂತ ಸ್ವರೂಪಿ ನೀನಾದೆ ಬಸವಣ್ಣ ಎಂದು ಹೇಳುತ್ತಾ, ಹಾಗೆ ತನುಮನ ಬೇರೆಯಲ್ಲ, ಇದು ಪರಮಾರ್ಥದ ಮೂಲಕ ಶುದ್ಧಗೊಂಡಲ್ಲಿ, ಇದರ ವ್ಯಾಪ್ತಿ ವಿಸ್ತರಿಸಿ, ಅಲ್ಲಿ ಜ್ಞಾನ ಅನ್ನುವಂತದ್ದು, ಒದಗಿ ಸುಖಿಯಾಗಲಿಕ್ಕೆ ಸಾಧ್ಯ ಎಂಬುದನ್ನು ತಿಳಿಸುತ್ತಾಳೆ. ಈ ವಚನದ ಇಂಗಿತವನ್ನು ಕುರಿತು ಗುಂಬೀಶಂರು ಹೀಗೆ ಹೇಳುತ್ತಾರೆ. "ತನುಮನಗಳೆರಡರ ವಿಕಾರತೆಯಳಿದು, ಎರಡರ ಭಾವ ನಷ್ಟವಾಗಿ, ತೃಪ್ತಿಯ ಭಾವ ಕೂಡ ನಷ್ಟವಾದಾಗ ಪ್ರಸನ್ನ ಸುಖದ ಭಾವವೂ ಇರದು. ಅಲ್ಲಿ ಕೇವಲ ತಾನೇ ತಾನಾದ ವಿರವಯತೆಯುಂಟು."[೧೩೪]

ಬಸವಣ್ಣನ ಐಕ್ಯದ ಪರಿಯನ್ನು ಈ ಕೆಳಗಿನ ವಚನದಲ್ಲಿ ನಿರೂಪಿಸುವ ಬಗೆ

"ಐಕ್ಯವ ತೋರಿ ಅಜಾತನಲ್ಲಡಗಿದ ಬಸವಾ
ಅರ್ಪಿತದಲ್ಲಿ ನಿರಾಭಾವಿಯಾದ ಬಸವಾ
ಆನು ಸುಖ ಸಂಯೋಗಿಯಾದೆ ನಿಮ್ಮಲ್ಲಿ ಬಸವಾ
ಎನಗೆ ಹೆಸರಳಿಯಿತ್ತು ಕುರುಹಳಿಯಿತ್ತು ಬಸವಾ
ಸಂಗಯ್ಯ ನಿನ್ನೊಳಡಗಿ ನೀನೆನ್ನೊಳಡಗಲು"[೧೩೫]

ಈ ವಚನಕ್ಕೆ ಗುಂಬೀಶಂರು ಹೀಗೆ ಹೇಳುತ್ತಾರೆ. "ಐಕ್ಯ ಸ್ಥಲದಲ್ಲಿ ಮೆರೆದು ಪರಮ ಆತ್ಮನಲ್ಲಿ ಅಡಗಿದ ಬಸವ, ಸರ್ವಾರ್ಪಿತದಲ್ಲಿ ನಿರಾಭಾರಿಯಾದ ಬಸವನ ಕೃಪೆಯಿಂದ ಬಸವನಲ್ಲಿ ಅಂದರೆ ಪರಮ ಆತ್ಮನಲ್ಲಿ ಸುಖಿ ಸಂಯೋಗಿಯಾದೆ. ಅಂದರೆ ಪ್ರಕಾಶದಲ್ಲಿ ಪ್ರಕಾಶವಾದೆ"[೧೩೬] ಎಂದು ಹೇಳುತ್ತಾ ಬಸವನಲ್ಲಿಯ ಪರಿಪೂರ್ಣತೆಯನ್ನು ತಿಳಿಸಿ ಐಕ್ಯದ ಸ್ಥಿತಿಯನ್ನು ತಿಳಿಸುತ್ತಾರೆ. ಹಾಗೂ ನೀಲಾಂಬಿಕೆ ಆ ಬೆಳಕಿನಲ್ಲಿ ಬೆಳಕಾದ ಬಗೆಯನ್ನು ಹೇಳಿಕೊಂಡಿದ್ದನ್ನು ವ್ಯಕ್ತಪಡಿಸುತ್ತಾರೆ. ನೀಲಾಂಬಿಕೆಯಲ್ಲಿ ಬಸವನ ಐಕ್ಯವನ್ನು ಮತ್ತು ಅಗಲಿಕೆ ನೋವನ್ನು ಹೀಗೆ ಹೇಳುತ್ತಾಳೆ.

"ನಾಡಿನ ಹೆಣ್ಣುಗಳೆಲ್ಲಾ ಬನ್ನಿರೆ ಅಕ್ಕಗಳಿರಾ
ಅಕ್ಕನರಸ ಬಸವಯ್ಯನು ಬಯಲ ಕಂಡು ಬಟ್ಟಬಯಲಾದನು
ಅಕ್ಕನರಸನಿಲ್ಲದೆ ನಿರಕ್ಕರನಾದನು ಬಸವಯ್ಯನು
ನಮ್ಮ ಸಂಗಯ್ಯನಲ್ಲಿ ಬಸವಯ್ಯನೈಕ್ಯ
ಬಯಲಿಲ್ಲದ ಬಯಲು"[೧೩೭]

ಹಾಗೂ ಈಕೆಯ ಮನದ ನೋವನ್ನು ಎ. ಗಾಯಿತ್ರಿಯವರ ಹೀಗೆ ಹೇಳುತ್ತಾರೆ. "ಸಮಸ್ತ ನಾಡಿನ ತನ್ನ ಜೊತೆಗಾರ್ತಿಯರಾದ ಹೆಣ್ಣು ಮಕ್ಕಳನ್ನು ಕರೆದು, ಬಸವಯ್ಯನು ಬಟ್ಟ

ಬಯಲಾದನು. ಬಸವಣ್ಣನು ಸಂಗಯ್ಯನಲ್ಲಿ ಅಂತ್ಯವೇ ಇಲ್ಲದ ಬಯಲ ನೋಡಿರಿ ಎಂದು ಹೇಳುವ ಪರಿ ಬಸವಣ್ಣನ ಐಕ್ಯದ ವಿಶಿಷ್ಟ ಕುರುಹು."[೧೩೮] ಈಕೆಯು ಪತಿಯ ಐಕ್ಯವನ್ನು ತಿಳಿಸುವ ಹಾಗೂ ಸಂಗಯ್ಯನಲ್ಲಿ ಬೆರೆಯುವ ಅಂಶವನ್ನು ಈ ರೀತಿಯಲ್ಲಿ ತಿಳಿಸುತ್ತಾರೆ.

ಡಾ.ಜಯಶ್ರೀ ದಂಡೆಯವರು "ಸಾಮಾನ್ಯವಾಗಿ ಪ್ರತಿಯೊಬ್ಬ ಹೆಣ್ಣು ಮಗಳೂ ತನ್ನ ಗಂಡನ ಐಕ್ಯದ ಸುದ್ದಿಯನ್ನು ಕೇಳಿ ದಿಕ್ಕುಗಾಣದೇ, ಮುಗಿಲೇ ಹರಿದು ಮೈಮೇಲೆ ಕಳಚಿದಂತೆ ರೋದಿಸುತ್ತಾಳೆ. ಯಾರ ಸಮಾಧಾನದ ಮಾತೂ ಈ ಸಮಯದಲ್ಲಿ ಆಕೆಗೆ ಹಿತವನ್ನು ನೀಡದು. ಅದೇ ಅನುಭವ ನೀಲಾಂಬಿಕೆಗೂ ಆಗಿದೆ. ಆ ದುಃಖದ ಆವೇಗವನ್ನು ನುಂಗಲಾಗದೇ ಎಲ್ಲ ಹೆಣ್ಣು ಮಕ್ಕಳಿಗೂ ತಿಳಿಸಬೇಕೆಂಬ ರೀತಿಯಲ್ಲಿ ಎಲ್ಲರನ್ನು ಕರೆಯುತ್ತಾಳೆ."[೧೩೯] ಬಸವಣ್ಣನನ್ನು ಕಳೆದುಕೊಂಡ ನಾನು ಅಡವಿಯಲ್ಲಿಯ ಪಶುವಿನಂತೆ ಆಗಿದ್ದೇನೆ ಎಂದು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾಳೆ.

"ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ನಾನು ಪ್ರಳಾಪಿಸುತ್ತಿದ್ದೆನಯ್ಯಾ
ಕಡುದುಃಖದಿಂದ ಮರುಗಲು, ಶರಣ ಚನ್ನಣ್ಣನರಿದು
ಶಿವಾ ಶಿವಾ ಎಂಬ ಮಂತ್ರವನರುಹಿ
ಅಳಲುವ ಬಳಲಿಕೆಯ ಕಳೆದನಯ್ಯಾ
ಸಂಗಯ್ಯನಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತಿದ್ದೆನು"[೧೪೦]

ಈ ವಚನಕ್ಕೆ ಪೂರಕವಾದ ಅಭಿಪ್ರಾಯವನ್ನು ಡಾ.ಜಯಶ್ರೀ ದಂಡೆ ಹೀಗೆ ಹೇಳುತ್ತಾರೆ. "ಚನ್ನಬಸವಣ್ಣನ ವ್ಯಕ್ತಿತ್ವಕ್ಕೆ ಶರಣೆನ್ನದವರೇ ಇಲ್ಲೆನ್ನಬಹುದು. ಕಡು ದುಃಖವಾಗಿ ಕಣ್ಣುಕಟ್ಟಿ ಅಡವಿಯಲ್ಲಿ ಬಿಟ್ಟ ಪಶುವಿನಂತೆ, ಮಾರ್ಗತಪ್ಪಿ ತಾನು ಶೋಕಿಸುತ್ತಿರುವಾಗ ತನ್ನ ಬಸವಣ್ಣ 'ಶಿವ ಶಿವ' ಎಂಬ ಮಂತ್ರದಿಂದ ಎಲ್ಲವನ್ನೂ ಮರೆಯಲು ಸಾಧ್ಯವೆಂದು ಹೇಳಿ, ತನ್ನ ಅಳಲಿಕೆ–ಬಳಲಿಕೆಗಳನ್ನು, ದುಃಖದಾವೇಶವನ್ನು ನಿಮಿಷಾರ್ಧದಲ್ಲಿಯೇ ಕಳೆದುಬಿಟ್ಟನೆಂದೂ, ತನ್ನ ಮನಸ್ಸೀಗ ಗಟ್ಟಿಯಾಯಿತೆಂದೂ ಹೇಳುತ್ತಾಳೆ."[೧೪೧] ಇವರ ಅಭಿಪ್ರಾಯದಂತೆ ನೀಲಾಂಬಿಕೆಯ ವೇದನೆ ನಿಲ್ಲಲು ಚೆನ್ನಬಸವಣ್ಣ ನೀಡಿದ ಜ್ಞಾನದ ಕಿರಣಗಳು ಆಕೆಯನ್ನು ಆಧ್ಯಾತ್ಮಿಕದ ಕಡೆಗೆ ವಾಲಲು ಮಾರ್ಗವಾಯಿತು ಎಂಬುದು. ಆದರೆ ಈಕೆಯ ದುಃಖಕ್ಕೆ ಸಾಂತ್ವನ ನೀಡುವುದರೊಂದಿಗೆ ಹೊಸದಾದ ಚೈತನ್ಯತೆ ಹಚ್ಚಬಾರದು ತುಂಬಿದ್ದನ್ನು ಇಲ್ಲಿ ಕಾಣಬಹುದು.

ಪ್ರೊ.ಎಸ್.ಎಸ್.ಭೂಸರಡ್ಡಿಯವರು ಈ ವಚನವನ್ನು ಕುರಿತು "ಆಧ್ಯಾತ್ಮಿಕ ಸಾಧನೆ ಸಿದ್ಧಿಯಲ್ಲಿ ಚೆನ್ನಬಸವಣ್ಣ ತೋರಿದ ದಾರಿಯನ್ನು ನಿರೂಪಿಸುವ ಈ ವಚನ ಕೃತಜ್ಞತೆಯ ಸಂಕೇತ. ಬಸವಾದಿ ಪ್ರಮಥರ ತೊತ್ತಿನ ಪಡಿದೊತ್ತಿನ ಮುದ್ದಿನ ಮಗಳಾಗಿ ಬೆಳೆದ ಆತ್ಮಿಕ

ಸಂಬಂಧವನ್ನು ಎತ್ತಿ ಹೇಳುವ ಈ ವಚನವಂತೂ ಆಕೆಯ ಕಿಂಕರ ಭಾವಕ್ಕೆ ನಯ–ವಿನಯ ಸೌಜನ್ಯತೆಗೆ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ"[೧೪೨] ಎಂದು ಹೇಳುತ್ತಾರೆ. ಆದರೆ ಈಕೆಯಲ್ಲಿ ಪ್ರೇಮದ ಗುಣ ಹಾಗೂ ಉನ್ನತಮಟ್ಟದ ತಾತ್ವಿಕ ನಿಲುವು ರೂಪಗೊಳ್ಳಲು ಬಸವಣ್ಣ ಕಾರಣನಾಗಿದ್ದ. ಅಂತಹ ವ್ಯಕ್ತಿಯನ್ನು ಕಳೆದುಕೊಂಡ ಮೇಲೆ ನಾನು ಪಶುವಿನಂತೆ ಎಂಬ ಭಾವ ಬಂದಿರಬಹುದು. ಹಾಗೆ ಈಕೆಯಲ್ಲಿ ಬಸವನಿಲ್ಲದೆ ಬದುಕು ಅಸಾಧ್ಯವಾದುದು ಎಂಬ ಭಾವವಿದೆ. ಈತ ತನ್ನಿಚ್ಛೆಯಂತೆ ಬದುಕಿ ಬಯಲಾದರು, ನಾನು ಅವನ ನಿಷ್ಠೆಯಲ್ಲಿ ಇರುವವಳು. ಹಾಗಾಗಿ "ನಿಷ್ಠೆಯೆಂಬುದನೊಂದ ತೋರಿ ಇಷ್ಟ ಪ್ರಾಣಭಾವದಲ್ಲಿ ಕಷ್ಟವನಳಿದೆನಯ್ಯ ಕಾಯದ ಸಂಗವಳಿದು ಕಾಮನಿಃಕಾಮವಾಗಿ ನಿಂದೆನಯ್ಯ....... ಬಸವನಡಗಿದ ಕಾರಣ ಕಾಯವ ನಾನಳಿದೆನು."[೧೪೩] ಈಕೆಯಲ್ಲಿದ್ದ ನಿಷ್ಠೆಯು ಇಷ್ಟ ಪ್ರಾಣ ಭಾವಸಂಬಂಧಿತದಲ್ಲಿ ಒಳಗೊಂಡಿದೆ. ಕೇವಲ ಸುಖದಲ್ಲಿ ಅಲ್ಲದೇ ಪ್ರತಿಯೊಂದು ಸಮಯದಲ್ಲಿ ನಾನು ಬಸವನಿಗೆ ಸವೆಸಿದ್ದೇನೆ. ಅದರಂತೆ ಇಂದು ಕಾಯವಳಿದು, ಕಾಯದ ಆಸೆಯಿಲ್ಲದೆ, ಅನುಭವ ಸುಖದಲ್ಲಿ ನಿರಾಶೆಯಾಗಿ ಬಸವನ ಇರುವಿಕೆಯ ರೂಪಕಂಡು ಬದುಕಿ, ನಂತರದಲ್ಲಿ ಈತನು ಐಕ್ಯವಾದಂತೆ ನಾನು ಐಕ್ಯಗೊಂಡೆನು ಎಂದು ಹೇಳುತ್ತಾಳೆ. ಇಲ್ಲಿ ನೀಲಾಂಬಿಕೆಯು ಐಕ್ಯ ಸ್ಥಿತಿಗೆ ಬಂದು ಬೇಕು, ಬೇಡ ಎಂಬ ಭವ ಬೀಜಗಳನ್ನು ನಾಶಗೊಳಿಸಿ, ಇಂದಿನ ಬದುಕು ಇಂದಿಗೆ ಕೊನೆ ಗೊಳ್ಳಲಿ ನಾಳೆಯ ಆಸೆ ನನಗೆ ಇಲ್ಲ, ನನ್ನ ಆಸೆಯೆಂದರೆ ಬಸವನ ಸ್ಥಿತಿ ತಲುಪಿ, ನಾನು ಅವನಂತೆ ಕಾಯವನ್ನು ಅಳಿಯುವುದೇ ಆಗಿದೆ ಹೊರತು ಬದುಕುವುದು ನನಗೆ ಇಚ್ಚೆಯಿಲ್ಲವಾಗಿದೆ ಎಂದು ಹೇಳುತ್ತಾಳೆ. ಬಸವನ ಅಗಲುವಿಕೆಯ ದುಃಖದಲ್ಲಿ ಬಸವ ನಾಮವನ್ನು ಸ್ಮರಿಸುವಂತ ಹಲವಾರು ವಚನಗಳನ್ನು ಕಾಣಬಹುದು. ಹಾಗೆಯೇ "ಬಸವಾ ಬಸವಾ ಎಂಬ ಶಬ್ದ ವಡನಿತ್ತು ಬಸವ ಬಸವಾಯೆಂಬ ರೂಪು ನಿರೂಪಾಯಿತ್ತು. ಬಸವನ ಕಾಯವಳಿದು ನಿರಾಕುಳವಾಗಲು ಅನು ಬಸವಾ ಬಸವಾ ಬಸವಾಯೆಂದು ಬಯಲಾದೆನಯ್ಯ."[೧೪೪] ಈ ವಚನದಲ್ಲಿ ನೀಲಾಂಬಿಕೆಯ ಸಮರ್ಪಣಾ ಭಾವವನ್ನು ಕಾಣುತ್ತೇವೆ. ಬಸವಾ ಎಂಬ ಪದ ಅಂಕುರಿಸಿ, ರೂಪವಾಗಿ, ಕ್ಷಣಮಾತ್ರದಲ್ಲೇ ಇಲ್ಲವಾಗಿತ್ತು. ಬಸವನ ಶರೀರ ನಾಶವಾಗಿ, ಗಡಿಬಿಡಿಯಿಲ್ಲದೆ ನಾನು ಈತನ ಸ್ಮರಣೆ ಮಾಡಿ ಬಯಲನ್ನು ಕಂಡೆ ಎಂದು ಹೇಳುತ್ತಾಳೆ. ಈಕೆಯ ಭಾವದಲ್ಲಿ ಪತಿಯ ನಾಮಧೇಯ ಕಂಗೊಳಿಸಿ, ಸುಂದರಥೇಯ ರೂಪ ತೋರಿ, ಮಂಜಿನಲ್ಲಿ ಕರಗಿದಂತೆ ಈ ತನು ಇಲ್ಲವಾಗಿ, ಇದನ್ನು ಕಂಡ ಈಕೆ ಬಸವಾ ಬಸವಾ ಎಂದು ಸ್ತುತಿಸಿ ಐಕ್ಯವಾದಳೆಂದು ತೋರುತ್ತದೆ. ಆದರೆ ಈ ವಚನವನ್ನು ಕುರಿತು ಗುಂಬೀಶಂರು ಹೀಗೆ ಹೇಳುತ್ತಾರೆ. "ಫಲಾಫಲಗಳು ಎಲ್ಲವೂ ಬಸವಮಯವಾಗಿತ್ತು. ಆದ್ದರಿಂದಲೇ ತಾನು ನಿತ್ಯ ನಿರವಯದಲ್ಲಿರಲು ಆಗ ಬಸವನ ಶಬ್ದ, ರೂಪು, ಅಡಗಿ ಎರಡಳಿದು ಒಂದಾಗಿ ನಿಶ್ಚಿಂತವಾಯಿತು. ನಾನು ಬಸವಾ ಬಸವಾಯೆಂದು

ಅನಂತಾತ್ಮದಲ್ಲಿ ಬಯಲಾದೆನೆಂದು ತನ್ನ ನಿತ್ಯ ನಿಜೈಕ್ಯತೆಯನ್ನು ಇಲ್ಲಿ ಅನುಭಾವಿಸಿದ್ದಾಳೆ"[೧೪೫] ಎಂದು ಹೇಳುತ್ತಾ "ಬಸವನ ಬಯಲ ವಿಚಾರವ ತಿಳಿದ ಭ್ರಮೆಯನಳಿದು ಅನುಬದುಕಿದೆನಯ್ಯ"[೧೪೬] ಎಂದು ಹೇಳಿದರೆ ಒಮ್ಮೊಮ್ಮೆ ಈ ಜೀವವೆ ಬೇಡ ಎನ್ನುವ ರೀತಿಯಲ್ಲಿ ಹೇಳಿದರೆ ಆತನ ನೆನೆಯುತ್ತಾ ಬದುಕುವೆ, ಜೊತೆಗೆ "ಬಸವನರಿವು ನಿರಾಧಾರವಾಯಿತ್ತು ಬಸವನ ಮಾಟ ನಿರ್ಮಾಣವಾಯಿತ್ತು, ಬಸವನ ಭಕ್ತಿ ಬಯಲನೆ ಕೂಡಿ ನಿರ್ವಯಲಾಯಿತ್ತು. ಬಸವಾ ಬಸವಾ ಬಸವಾ ಎಂಬ ಶಬ್ದವಡಗಿ ನಿಶ್ಯಬ್ದವಾಯಿತ್ತಯ್ಯ ಸಂಗಯ್ಯಾ"[೧೪೭] ಎನ್ನುತ್ತಾಳೆ. "ಬಸವನ ಹೆಸರಳಿಯಿತ್ತು, ಬಸವನ ಕುರುಹಳಿಯಿತ್ತು......"[೧೪೮] ಬಸವನೆ ಈ ವಚನದಲ್ಲಿ ಶೂನ್ಯನಾಗಿ, ನಿಲ್ಲುತ್ತಾನೆ. ಜೊತೆಗೆ ಕಾಯದ ಕರ್ಮವ ಅರಿದು(ಅರಿತು), ಓಂಕಾರ ಪ್ರಣವ ಮೂರ್ತಿ ಬಸವನನ್ನು ಆಧರಿಸಿ ಜೀವಿಸಿದೆನು ಎಂದು ಹೇಳುತ್ತಾಳೆ. "ಬಸವಯ್ಯಾ ಬಸವಯ್ಯಾ ಹುಯ್ಯಲಿಲ್ಲದ ಹುಲ್ಲೆಯಾದೆಯಾ? ಬಸವಯ್ಯಾ ಬಸವಯ್ಯಾ ಕಾಯವಿಲ್ಲದ ದೇಹಿಯಾದೆಯಾ? ಬಸವಯ್ಯಾ ಬಸವಯ್ಯಾ ಕರ್ಮ ವಿರಹಿತನಾದೆಯಾ? ಸಂಗಯ್ಯನಲ್ಲಿ ನಿರ್ಮಳ ಮೂರ್ತಿ ಬಸವಯ್ಯಾ"[೧೪೯] ಬಸವಣ್ಣ ನಿರಾಕಾರ ತಾಳಿದ ವ್ಯಕ್ತಿ. ಇಂತಹ ಬಸವಣ್ಣನು ಅಳಿವಿಲ್ಲದವನು ಜೊತೆಗೆ ಸಾಧು ಪ್ರಾಣಿಯಾದ ಜಿಂಕೆಯ ಹಾಗೆ ಕಾಯವಿಲ್ಲದ್ದು, ಕರ್ಮರಹಿತನು, ಸಂಗಯ್ಯನಲ್ಲಿ ಶುದ್ಧಾತ್ಮನಾದ ಬಸವಣ್ಣ ರೂಪವನ್ನು ನೆನೆಯುವುದರೊಂದಿಗೆ ಮನಸ್ಸಿನ ವಿರಹ ಭಾವನೆಯನ್ನು ವ್ಯಕ್ತಪಡಿಸಿದ್ದಾಳೆ. ನೀಲಾಂಬಿಕೆಯಲ್ಲಿ ಎಲೆ, ಲತೆ, ವೃಕ್ಷ ಮೊದಲಾದವುಕ್ಕೆ ನನ್ನ ಪತಿಯ ಕಂಡಿರೇನು ಎಂದು ಕೇಳುತ್ತಾಳೆ. ಒಂದು ಕಡೆ ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನ್ನು ಹುಡುಕುವ ಪರಿಯಲ್ಲಿ ಪ್ರಾಣಿ, ಪಕ್ಷಿ, ಗಿಡ, ಮರಗಳನ್ನು ಹಾಗೂ ಪರಿಸರದ ವಸ್ತುಗಳನ್ನು ಕೇಳುವಂತೆ ಈಕೆಯು ತನ್ನ ಪತಿಯ ಕುರಿತು ಈ ವಚನಗಳಲ್ಲಿ ಹೀಗೆ ಪ್ರಶ್ನಿಸಿದ್ದಾಳೆ.

"ಎಲೆ ಅಯ್ಯಗಳಿರಾ, ಎಲೆಗಳೆರ ವೃಕ್ಷವ ಕಂಡಿರೆ ಬಸವನ
..............................................
ಸಂಗಯ್ಯನಲ್ಲಿ ಸ್ವಯವಳಿದ ಬಸವನ ಕುರುಹ ಕಂಡಿರೆ?
ಎಲೆ ಅಯ್ಯಾ ಎಲೆ ಅಯ್ಯಾ ಏಕಾಕ್ಷರ ರೂಪ ಬಸವಾ
................ಸಂಗಯ್ಯ, ಎಲೆಯಿಲ್ಲದ ವೃಕ್ಷವಾದ
ಬಸವಯ್ಯನು
ಎಲೆ ಅಯ್ಯಾ ಬಸವಾ
ಏನಯ್ಯಾ ಸಂಗಯ್ಯಾ ಬಸವ
ಎಲೆ ಅಯ್ಯಾ ಬಸವಾ, ಕರಸ್ಥಲಬಯಲಾಯಿತ್ತೆನಗೆ

......................ಸಂಗಯ್ಯ ಬಸವ ಹೋದನತ್ತ

ನಾನಡಗಿದೆಯ್ಯಾ ನಿಮ್ಮಲಿತ್ತ"[೧೫೦]

ಈ ವಚನಗಳಲ್ಲಿ ನೀಲಾಂಬಿಕೆಯು ಬಸವನನ್ನು ಕಾಣದೆ ಇರುವ ಸಂದರ್ಭವನ್ನು ವ್ಯಕ್ತಪಡಿಸಿದ್ದಾಳೆ. ಪ್ರತಿಯೊಂದು ವಸ್ತುವನ್ನು ಕೇಳುತ್ತಾ ತನ್ನ ಬಸವನನ್ನು ಕಂಡಿರೇನು, ಆತನು ಇಲ್ಲದೆ, ನಾನು ಇಲ್ಲ ಎಂಬ ಭಾವನೆ ವ್ಯಕ್ತಪಡಿಸಿ, ತನ್ಮೂಲಕ ತಾತ್ವಿಕ ಹೋಲಿಕೆಗಳೊಂದಿಗೆ ಕೇಳುತ್ತಾಳೆ. ಹಾಗೆ "ಎಲೆಗಳೆದ ಮರದಲ್ಲಿ ನೆಳಲನರಸಲಿಲ್ಲ..........."[೧೫೧] ಮುಂದುವರೆದು ಈಕೆಯು ಯಾರನ್ನು ಅವಲಂಬಿಸಲಿಲ್ಲ ಎಂದು ಹೇಳುತ್ತಾ ನೆರಳು, ಬೆಳಕು, ಪರಮಾತ್ಮನ ಕಾಣುವಿಕೆಯ ಹಂಬಲ, ಕೊನೆಗೆ ಬಸವನನ್ನು ಬಿಡುವುದಿಲ್ಲ ಕಾಯ ನಿರಾಕಾರದ ವ್ಯಕ್ತಿ ಬಸವನಾಗಿದ್ದಾನೆ. ಹಾಗಾಗಿ ದೇಹವಿದ್ದರು, ದೇಹವಿಲ್ಲದ(ಶೂನ್ಯದ ರೂಪದಲ್ಲಿ) ಹಾಗೆ ನಾನು ಆಗಿದ್ದೇನೆ ಎಂದು ಹೇಳುತ್ತಾಳೆ. ಈಕೆಯ ಬಸವನಿಷ್ಠೆ ಅಂತಃಕರಣವನ್ನು ತುಂಬಿದ್ದು ಹಾಗೂ ಬಸವನ ಗುಣಗಳನ್ನು ಆತನ ಸ್ಥಿತಿಯನ್ನು ಜೊತೆಗೆ ಸಹಜಶೀಲತೆಯನ್ನು ವ್ಯಕ್ತಪಡಿಸುತ್ತಾ, ಕಾಯಾ, ವಾಚಾ, ಮನಸಾದಿಂದ ನಾನು ಬಸವನೊಂದಿಗೆ ಜೀವನವನ್ನು ನಡೆಸಿದ್ದೇನೆ. ಹಾಗಾಗಿ ಒಬ್ಬ ಸತಿ ಎನ್ನುವುದಕ್ಕಿಂತ ಬಸವಣ್ಣ ನೀಲಾಂಬಿಕೆಗೆ ಪ್ರಾಣವಾಗಿ, ಜೀವನವನ್ನು ಅರ್ಥವಾಗಿ, ಕೊನೆಗೆ ಮುಕ್ತಿಗೆ ಅಥವಾ ಪರಿಶುದ್ಧತೆಗೆ, ಸಾಧನೆಯ ಪ್ರತೀಕವಾಗಿದ್ದನು. ಈಕೆಯ ಅಧ್ಯಾತ್ಮ ನಿಲುವುಗಳಿಗೆ ಪ್ರೇರಕ ಶಕ್ತಿಯಾಗಿದ್ದನು ಎನಿಸತ್ತದೆ. ಯಾಕೆಂದರೆ ಈಕೆಯ ಉನ್ನತ ಮಟ್ಟದ ವಿಚಾರಗಳು, ಬಸವಣ್ಣನನ್ನು ಉನ್ನತೀಕರಿಸಿ, ಸತ್ವಯುತವಾದ ವ್ಯಕ್ತಿಯಾಗಿದ್ದಾನೆ ಎಂದು ತೋರಿಸುತ್ತದೆ. ಈಕೆಯಲ್ಲಿ ಉಭಯತ್ವದ ಗುಣ ಹೋಗಿ ಏಕತ್ವ ಮಾದರಿಯಲ್ಲಿ ಕಂಡು, ಬಸವನಿಷ್ಠೆ ಪರಿಪೂರ್ಣವಾಗಿ ವ್ಯಾಪಿಸಿದ್ದನ್ನು ಕಾಣುತ್ತೇವೆ.

## ೧.೩. ನೀಲಾಂಬಿಕೆಯ ವಚನಗಳಲ್ಲಿ ಲಿಂಗನಿಷ್ಠೆ

ಅಧ್ಯಾತ್ಮಿಕ ಸಾಧನೆ ಮತ್ತು ಸಿದ್ಧಿಯ ಅತ್ಮೋನ್ನತಿಗಾಗಿ, ಲಿಂಗಾಂಗ ಸಾಮರಸ್ಯದ ಕುರುಹನ್ನು ವೀರಶೈವ ಧರ್ಮದಲ್ಲಿ ಕಾಣುತ್ತೇವೆ. ಹಾಗೆ ಲಿಂಗಪೂಜೆಯ ಮೂಲಕ ಏಕಾಂತದ ಹಂತಕ್ಕೆ ಬಂದು, ಮನಸ್ಸಿನ ತೊಳಲಾಟ, ತೊಡೆದುಹಾಕಿ ಭವನ ಕಡೆಗೆ ಸಾಗುತ್ತ, ನಿರಾಕಾರದ ಸ್ಥಿತಿಯನ್ನು ತಲುಪುವ ಕ್ರಮವನ್ನು ಕಾಣುತ್ತೇವೆ. ಇಂತಹ ಅಪರಿಮಿತ ಪ್ರಕಾಶದ, ದೈವಿಗುಣಗಳನ್ನು ಅಳವಡಿಸಿಕೊಂಡು ತಮ್ಮದೇಯಾದ ಆಧ್ಯಾತ್ಮಿಕ ವಿಚಾರಗಳ ಮೂಲಕ ದಿಗ್ದರ್ಶಕರಾಗಿ ಬಸವಾದಿ ಶಿವಶರಣರು ಹಾಗೂ ಶರಣೆಯರು ಈ ಮಾರ್ಗದಲ್ಲಿ ನಡೆದು, ಘನಕ್ಕೆ ಘನವಾಗಿ ಕಂಡಿದ್ದಾರೆ. ಇವರ ಸಮಕಾಲೀನಳು, ಬಸವನ ವಿಚಾರಪತ್ನಿ, ಲಿಂಗಾನುಭಾವಿ ನೀಲಾಂಬಿಕೆಯು ಸಹಿತ ಲಿಂಗಾನಂದದಲ್ಲಿ ತೊಡಗಿ ಹಾಗೂ ಸಾಧಿಸಿ ಅನುಭವಿಸಿ ವ್ಯಕ್ತಪಡಿಸಿದ್ದು ಈಕೆಯ ವಚನಗಳಲ್ಲಿ

ಕಂಡುಬರುತ್ತದೆ. ಹಾಗೆ ನೀಲಾಂಬಿಕೆ ತನ್ನ ವಚನಗಳಲ್ಲಿ ವಿನೂತನವಾದ, ಆಧ್ಯಾತ್ಮ ಮನೋಭಾವದ ವಿಚಾರಗಳನ್ನು ಕಾಣುತ್ತೇವೆ. ಹಾಗಾಗಿ ಮೌಲ್ಯಯುತವಾದ ಅಷ್ಟಾವರ್ಣ, ಪಂಚಾಚಾರ, ಷಟಸ್ಥಲ ಪರಿಕಲ್ಪನೆ ಪದರುಗಳನ್ನು ತೆರೆದು ನೋಡಿದಾಗ ಆತ್ಮಸಾಧನೆಯ ದ್ಯೋತಕವೆಂಬಂತೆ ಗೋಚರಿಸುವುದನ್ನು ಕಾಣುತ್ತೇವೆ.

ಈ ಲಿಂಗಾಂಗ ಸಾಮರಸ್ಯದಲ್ಲಿ ಈಕೆಯ ಅನುಕರಣೆ ಬಹಳ ಮಹತ್ವವಾಗಿದೆ. ಏಕೆಂದರೆ ಈಕೆಯು ನಿಷ್ಠೆಯಿಂದ ಕೂಡಿದವಳು ಎಂಬುದಕ್ಕೆ ಈಕೆಯಲ್ಲಿಯ ಹಂತ ಹಂತವಾದ ಬದಲಾವಣೆ, ಅಂದರೆ ಬಸವನಿಷ್ಠೆಯಲ್ಲಿ ಅಧ್ಯಾತ್ಮಿಕ ಒಲವು-ನಿಲುವುಗಳನ್ನು ನಿರ್ಧರಿಸಿ, ಲಿಂಗನಿಷ್ಠೆ ಮಾರ್ಗದತ್ತ ಸಾಗಿ ವೈಚಾರಿಕವಾಗಿ ಗಟ್ಟಿಗಳಾಗಿದ್ದನ್ನು ಕಾಣಬಹುದು. “ನೀಲಾಂಬಿಕೆ ಕೊನೆಯ ಗಳಿಗೆಯಲ್ಲಿ ಮಾತ್ರ ಪತಿಯ ಮಾತನ್ನು ಒಪ್ಪಿಕೊಳ್ಳದೆ ತನ್ನ ವೈಚಾರಿಕ ಸ್ವಾತಂತ್ರ್ಯವನ್ನು ಅನುಭವಿಸುತ್ತಾಳೆ. ಸ್ಥಾವರವನ್ನು ಜೀವನವಿಡೀ ಅಲ್ಲಗೆಳೆದ ತನ್ನ ಪತಿ ಮತ್ತೆ ಸ್ಥಾವರ ಲಿಂಗದಲ್ಲಿ, ಕೂಡಲಸಂಗಯ್ಯನಲ್ಲಿ ಐಕ್ಯವಾಗುವ ವಿಚಾರ ಮಾಡಿ ಅಲ್ಲಿಗೆ ಹೋಗಿದ್ದು ಆಕೆಯನ್ನು ತಲ್ಲಣಗೊಳಿಸುತ್ತದೆ. ಅಳಿವ ಸ್ಥಾವರವನ್ನು ಪೂಜಿಸಕೂಡದು ಎಂಬ ಪತಿಯ ಸಿದ್ಧಾಂತವನ್ನು ಕೊನೆಯ ಕ್ಷಣದವರೆಗೂ ಪರಿಪಾಲಿಸಿಕೊಂಡು ಬರುತ್ತಾಳೆ”(೧೫) ಎಂದು ಡಾ.ಗುರುದೇವಿ ಹುಲೆಪ್ಪನವರ ಮತ ಅಭಿಪ್ರಾಯ ಪಡುತ್ತಾರೆ. ಆದರೆ ಈಕೆಯ ಲಿಂಗನಿಷ್ಠೆಯು ಪರಿಶುದ್ಧತೆಗಾಗಿ ಎಂಬುದು ತಿಳಿಯುತ್ತದೆ. ಬಸವಣ್ಣ ಎತ್ತರದ ಮಟ್ಟದಲ್ಲಿ ನಿಂತು ಹೇಳಿದ ವಿಚಾರಗಳನ್ನು ತಪ್ಪದೇ ನಡೆಸಿದವಳು. ನೀಲಾಂಬಿಕೆ ಎನ್ನಬಹುದು. ಹಾಗಾಗಿ ಅಲ್ಲಿದ್ದ ಸಂಗಮ ಇಲ್ಲಿಲ್ಲವೆ ಎಂಬ ಪ್ರಶ್ನೆ ಮಾಡುವುದ ರೊಂದಿಗೆ ವೈಚಾರಿಕ ಪ್ರಜ್ಞೆಗೆ ಸಾಕ್ಷಿಯಾಗಿದ್ದಾಳೆ. ಹಾಗೆ ಆತ್ಮದ ಮಹಾಬೆಳಗನ್ನು ಕಾಣಲಿಕ್ಕೆ ಈಕೆ ಹವಣಿಸಿ ಇಹಪರದ ಭ್ರಾಂತಿಯ ಬಿಟ್ಟು, ಆರುಗುಣಗಳನ್ನು ಅಳಿದು ನಿಜದ ಅರಿವು ಕಾಣಲಿಕ್ಕೆ, ಹಾಗೂ ಶರಣತ್ವದ ಪರಮಾವಧಿ ಮುಟ್ಟಿ, ಐಕ್ಯದ ಸ್ಥಿತಿಯನ್ನು ಕಾಣುವ ಉದ್ದೇಶವನ್ನು ಈ ವಚನಗಳು ವ್ಯಕ್ತಪಡಿಸುತ್ತವೆ.

ನೀಲಾಂಬಿಕೆಯ ಈ ತಾತ್ವಿಕ ನಿಲುವು ವೀರಶೈವ ಸಿದ್ಧಾಂತವನ್ನು ಹೇಳುತ್ತದೆ. ಈ ಮೂಲಕ ಮನುಷ್ಯನ ಭಾವವನ್ನು ಶುದ್ಧಗೊಳಿಸುವ ಪರಿಯನ್ನು ಕುಮಾರ ದೇವರು ಸಂಪಾದನೆ ಮಾಡಿರುವ ಶಿವಯೋಗ ಎಂಬ ಸ್ಮರಣ ಸಂಪುಟದಲ್ಲಿಯ ಶಿವಯೋಗ ಎಂಬ ಲೇಖನದಲ್ಲಿ ಲೇಖಕ ಡಾ.ಅನ್ನದಾನ ಸ್ವಾಮಿಗಳು ಹೀಗೆ ಅಭಿಪ್ರಾಯಪಡುತ್ತಾರೆ. “ವೀರಶೈವ ಸಿದ್ಧಾಂತವು ತನ್ನದೇ ಆದ ವಿಶಿಷ್ಟ ಸ್ಥಾನಮಾನವನ್ನು ಹೊಂದಿದೆ. ಅಷ್ಟಾವರಣವನ್ನೇ ಅಂಗವಾಗಿಸಿಕೊಂಡ ಶರಣನು ಪಂಚಾಚಾರಗಳನ್ನು ಪ್ರಾಣವಾಗಿಸಿಕೊಳ್ಳುತ್ತ ಷಟ್‌ಸ್ಥಲಾತ್ಮಕವಾಗಿ ಮುನ್ನಡೆಯುತ್ತಾನೆ. ಭಕ್ತಸ್ಥಲದ ಉಪಕ್ರಮದಿಂದ ಐಕ್ಯನ ಐಕ್ಯಸ್ಥಿತಿಯಲ್ಲಿ ಉಪಸಂಹಾರವಾಗುತ್ತದೆ. ಒಂದಾದುದು

ನೂರೊಂದಾಗಿ ಪುನಃ ಒಂದರಲ್ಲಿ ಸಮರಸವಾಗುವ ತತ್ವ ಪುರುಷನೇ ತಾನಾಗುವ ಶುಭಯೋಗ ವೀರಶೈವರದು. ಇದುವೆ 'ಶಿವಯೋಗ'ವೆನಿಸಿದೆ. ಇದಕ್ಕೆ ಲಿಂಗಾಂಗ ಸಮರಸವೆಂತಲೂ ಖ್ಯಾತಿ ಬಂದಿದೆ"[೧೫೩] ಎಂದು ಹೇಳುತ್ತಾರೆ. ಆದರೆ ವೀರಶೈವ ಸಿದ್ಧಾಂತದ ಮೂಲಕ ತತ್ವದ ಮೆಟ್ಟಿಲನ್ನು ಏರುವ ಸ್ಥಿತಿಯನ್ನು ತಿಳಿಸುತ್ತಾರೆ. ಈ ಮೂಲಕ ಲಿಂಗದ ಚಿತ್ಕಳೆಯನ್ನು ಧರಿಸುವ ಹಂತವನ್ನು ಮುಂದುವರೆದು ಹೇಳುತ್ತಾರೆ. ಡಾ.ಅನ್ನದಾನ ಸ್ವಾಮಿಗಳು "ಈ ಜಗತ್ತು ಆತ್ಮ ಶಕ್ತಿಯ ವಿಕಾಸಮಾರ್ಗಕ್ಕೆ ಸಾಧನವಾಗಿರುವುದು. ಜಗತ್ತಾದರೂ ಶಿವಮಯವಾಗಿರುವುದರಿಂದ ಜೀವನು ಗುರುಕರುಣೆಯಿಂದ ಶಿವಸಂಸ್ಕಾರ ಪಡೆದು ತನ್ನ ಅರುಹಿನ ಕುರುಹನ್ನೇ ಲಿಂಗವನ್ನಾಗಿ ದೊರಕಿಸುವನು. ಅರ್ಚನ, ಅರ್ಪಣ, ಅನುಭವ ಪಥಗಳಿಂದ ಲಿಂಗವೇ ತಾನಾಗುವನು."[೧೫೪] ಇವರ ಅಭಿಪ್ರಾಯದಂತೆ, ಕಾಯಕ್ಕೆ ಸಂಸ್ಕಾರ ಮುಖ್ಯ ಎಂಬುದನ್ನು ಹೇಳುತ್ತಾರೆ. ಅದನ್ನೆ ಶರಣರ ತನುಶುದ್ಧ, ಮನಶುದ್ಧ, ಭಾವಶುದ್ಧತೆಗೆ ಈ ಲಿಂಗವೇ ದರ್ಪಣವಾಗಿತ್ತು ಎಂಬುದನ್ನು ಬಸವಣ್ಣ ಕರಿಯ ಕನ್ನಡಿಯಲ್ಲಿ ಅಡಗಿದಂತೆ, ನೀನು ನನ್ನೊಳಗೆ ನೆಲೆಸು ಲಿಂಗವೇ ಎಂದರೆ "ಕನ್ನಡಿಯು ನೋಡುವ ಅಣ್ಣಗಳಿರಾ, ಜಂಗಮ ನೋಡಿರೆ, ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪು...."[೧೫೫] ಎಂದು ಬಸವಣ್ಣನವರು ಹೇಳುತ್ತಾರೆ. ಬಹಿರಂಗದ ತಪ್ಪುಗಳಿಗೆ ಹಿರಿಯರ ಮಾರ್ಗದರ್ಶನ ಅಥವಾ ನಾನು ತಪ್ಪಿಷ್ಥ ಎಂದು ತಿಳಿದು ಪರಿವರ್ತನೆಯಾದರೆ, ಅಂತರಂಗದ ಸ್ವಚ್ಛತೆಗೆ ಲಿಂಗಾಂಗ ಸಾಮರಸ್ಯವೇ ಮುಖ್ಯವಾಗಿ ಲಿಂಗದ ಮುಖ ಜಂಗಮನಾಗಿದ್ದಾನೆ ಎಂದು ಬಸವಣ್ಣ ಹೇಳುತ್ತಾರೆ. ಹಾಗಾಗಿ ಲಿಂಗವೆಂದರೆ ಲಯವಿಲ್ಲದ್ದು, ಗಮನವಿಲ್ಲದ್ದು ಆಗಿದೆಯೋ ಅದುವೇ ಲಿಂಗವಾಗಿದೆ. ಇಂತಹ ಸಿದ್ಧಾಂತದ ಮೂಲಕ ನೀಲಾಂಬಿಕೆ ಲಿಂಗನಿಷ್ಠೆಯ ಮೂಲಕ ನಿರಾಕಾರ ರೂಪನಾದ ಪರಮಾ(ನಾ)ತ್ಮನು, ಸಾಕಾರರೂಪ ಪಡೆಯಲು, ಗುರುವಿನಿಂದ ಶುದ್ಧಗೊಂಡು ಇಷ್ಟಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಳ್ಳುವಂತದ್ದು, ಜೊತೆಗೆ, ಸ್ಥೂಲ, ಸೂಕ್ಷ್ಮಕಾರಣಿಕ ಶರೀರಗಳ ಕುರಿತು ತಿಳಿಯಬೇಕು ಜೊತೆಗೆ ಪೂಜಿಸುವ ಕ್ರಮವನ್ನು ಮೊದಲು ತಿಳಿಯಬೇಕೆಂದು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾಳೆ.

> "ಕ್ರಮವನರಿಯದೆ ಪೂಜೆಯ ಮಾಡ ಹೋದರೆ
> ಕ್ರಮದಲ್ಲಿಯೆ ಸಂದಿತ್ತು ಶಿವಲಿಂಗದಲ್ಲಿಯೆ ಸಂದಿತ್ತು
> ಆ ಪೂಜೆಯ ಕ್ರಮವನಳಿದೆನಯ್ಯ ಸಂಗಯ್ಯ"[೧೫೬]

ಈ ವಚನದಲ್ಲಿ ಮೊದಲು ಪೂಜೆಯ ಕ್ರಮ ಅರಿತು ಪೂಜಿಸಬೇಕು, ಹಾಗೆ ಕ್ರಮ ತಿಳಿಯದೆ ಲಿಂಗವ ಪ್ರಾರ್ಥಿಸಿದರೆ, ಉಪಯೋಗವಿಲ್ಲ. ಹಾಗಾಗಿ ಈ ಕ್ರಮ ತಿಳಿದು ನಂತರದಲ್ಲಿ ಮರೆತು ನಿರಾಕಾರ ಸ್ಥಿತಿಯ ಪೂಜೆ ನಡೆಯಬೇಕು. ಅದು ಪ್ರಕೃತಿ ಪೂಜೆಯಾಗಿ ಮಾರ್ಪಡುತ್ತದೆ.

ಮತ್ತು ಲಿಂಗಾಂಗ ಸಾಮರಸ್ಯದ ಭಾವುಕತೆ ನೆಲೆಗೊಳ್ಳುತ್ತದೆ. ಆಗ "ಲಿಂಗವಿದ್ದರೇನು? ಆ ಲಿಂಗಕ್ಕೆ ಶಿವಸೂತ್ರದನುಭಾವ ನೆಲೆಗೊಳ್ಳದನ್ನಕ್ಕ? ಆ ಲಿಂಗಕ್ಕೆ ಶಿವಸೂತ್ರ ಸಂಬಂಧದಿಂದ ಸಂಗಯ್ಯನಲ್ಲಿಯಾನು ಪ್ರಸಾದಿಯಾದೆನಯ್ಯ."[೧೫೭] ಲಿಂಗವಿರುವುದು ಮುಖ್ಯವಲ್ಲ. ಆ ಲಿಂಗಕ್ಕೆ ಶಿವನ ಕಳೆ ಜೊತೆಗೆ ಅನುಭಾವ ಇರಬೇಕು ಅಂದಾಗ ಆ ಲಿಂಗಕ್ಕೆ ಬೆಲೆ ಬರುತ್ತದೆ. ಜೊತೆಗೆ ಮಂತ್ರ ಸಂಬಂಧ ಕೂಡಿ ಆ ದೇವನಲ್ಲಿ ಒಂದಾಗಲು ಕಾರಣವಾಗುತ್ತದೆ ಎಂದು ಹೇಳುತ್ತಾಳೆ. ಆಗೂ ಶಿವನಿಗೆ ಅರ್ಪಿತವಾದ ಮೇಲೆ ಪ್ರಸಾದವೆನಿಸುತ್ತದೆ. ಹಾಗೆ ನಾನು ಸಮರ್ಪಿತಳಾದೆ ಎಂಬುದನ್ನು ಈ ವಚನದ ಮೂಲಕ ಸ್ಪಷ್ಟಪಡಿಸುತ್ತಾಳೆ.

> "ಲಿಂಗದ ಸಂಗದಲ್ಲಿ ಹುಟ್ಟಿ
> ಜಂಗಮದ ಸಂಗದಲ್ಲಿ ಬೆಳೆದು
> ಭೇದವಡಗಿ ಬೆಳಗು ನಿರ್ವಯಲಾಗಲು
> ಅನುಸುಖಿಯಾದೆನಯ್ಯಾ ಸಂಗಯ್ಯ"[೧೫೮]

ಇಲ್ಲಿ ಲಿಂಗಾಂಗ ಸಂಬಂಧಿಯಾದ ಸಾಧಕನು ಪ್ರತಿಯೊಂದು ಸಂದರ್ಭದಲ್ಲಿ ಭಾವನಾತ್ಮಕ ವಾಗಿ ಕಾಣುವ ಸ್ಥಿತಿಯನ್ನು ಈ ವಚನದಲ್ಲಿ ಕಾಣುತ್ತೇವೆ. ಯಾಕೆಂದರೆ ಭವಿ ಭಕ್ತನಾಗಿ ಹುಟ್ಟಿದ್ದು, ಲಿಂಗದ ಮುಖಿಯ ಸಂಸ್ಕಾರದಿಂದ ನಂತರದಲ್ಲಿ ಒಳ್ಳೆ ಆಚಾರ ಸನ್ನಡತೆಯನ್ನು ಜಂಗಮ ಸಂಗದಲ್ಲಿ ಕಲಿತು ಬೆಳೆಯುವ ಸ್ಥಿತಿ ಹಾಗೂ ಪರಿಪೂರ್ಣತೆಯ ಮಟ್ಟದಲ್ಲಿ ಬಂದು, ಪವಿತ್ರ ಭಾವನೆಯಿಂದ ಆ ಚಿದ್ಘನತ್ವದ ನೆನೆದು ಸುಖಿಯಾಗಿ ಶೂನ್ಯದ ಪರಿಯನ್ನು ಮುಟ್ಟಿದಾಗ ಆತ್ಮಸಾಕ್ಷಾತ್ಕಾರ ಪಡೆಯುವ ಅಂಶವನ್ನು ಇಲ್ಲಿ ವ್ಯಕ್ತಪಡಿಸಿದ್ದಾಳೆ.

ನಿಜದ ಸುಖವನರಿಯಬೇಕು ಹಾಗೂ ಆತ್ಮಲಿಂಗದ ಅನುಸಂಧಾನವಾಗಬೇಕು. ಇದರ ಪರಿಣಾಮವೇ ನಿಜಾನಂದ ಸ್ಥಿತಿಯಾಗಿದೆ ಎಂದು ಈ ವಚನದಲ್ಲಿ ಹೇಳುತ್ತಾಳೆ.

> "ಆಡಲಿಲ್ಲ ಹಾಡಲಿಲ್ಲ ನುಡಿಯಲಿಲ್ಲ ನಡೆಯಲಿಲ್ಲ
> ಪ್ರಾಣವಿಲ್ಲ ಪ್ರಸಾದವಿಲ್ಲ ಪರಿಣಾಮವಿಲ್ಲ
> ಇರದಂಗ ಸಂಗ ಸುಖವಿಲ್ಲ
> ಎವೆಯಿಕ್ಕಲಿಲ್ಲ ಎವೆಗಳೆಯಲಿಲ್ಲ
> ಜವೆಯರಿದು ಸವಿಗೂಟವನನು ಭವ
> ಸುಖವ ಕಂಡೆನಯ್ಯ ಸಂಗಯ್ಯ"[೧೫೯]

ಈ ಅಂಗವನ್ನು ಶುದ್ಧಗೊಳಿಸುವಂತ ಪ್ರಕ್ರಿಯೆಯನ್ನು ಅರಿತು ನಡೆಯಬೇಕು ಇಲ್ಲದಿದ್ದರೆ ಕಾಯ ಅಶುದ್ಧತೆ ಹೊಂದುತ್ತದೆ. ಆದರೆ ನೀಲಾಂಬಿಕೆ ಈ ವಚನದಲ್ಲಿ ನಿರಾಕಾರದ ಸ್ಥಿತಿಯಲ್ಲಿ

ಬಂದ ಮೇಲೆ, ಈ ಎಲ್ಲ ಸ್ಥಿತಿಗಳು ಇಲ್ಲವಾಗುತ್ತವೆ. ಆಗ ಪರಮಾನಂದದ ಪ್ರಕಾಶ ಮೂರ್ತಿಯ ದರ್ಶನದಿಂದ ಸುಖಿಯಾಗಿದ್ದೇನೆ ಎಂದು ಹೇಳುತ್ತಾಳೆ. ಇಲ್ಲಿ ತನ್ನ ಇರುವಿಕೆ ಮರೆತು, ಶೂನ್ಯದ ನಿಜದ ನಿಲುವು ಒಂದಲ್ಲ. ಇವುಗಳ ಅವಶ್ಯಕತೆ ಇಲ್ಲವಾಗುತ್ತದೆ ಎಂದು ತಿಳಿಸುತ್ತಾಳೆ. ಅಷ್ಟಾವರ್ಣ ಪರಿಕಲ್ಪನೆಯ ಮೂಲಕ ಮೂರ್ತಿಯ ಇರುವಿಕೆಯ ಸ್ವರೂಪವನ್ನು ಈ ವಚನದಲ್ಲಿ ತಿಳಿಸುತ್ತಾಳೆ.

"ಅರಿಯೆನರಿಯೆನಿಂತಹ ಮೂರ್ತಿಯ, ಅರಿಯದವನಲ್ಲ
ನಾನು ಬೆರಸಿರಲು ಸುಖದಿಂದ ಪ್ರಣವಾಕ್ಷರವಾಯಿತ್ತಯ್ಯ
ಆ ಪ್ರಣವಾಕ್ಷರವೆ ಪ್ರಸಾದವಾಯಿತ್ತು
ಆ ಪ್ರಸಾದದ ನೆಲೆಯಿಂದ ಮನವಿಶೇಷವಾಯಿತ್ತು
ವಿಶೇಷ ವಿಚಾರದಿಂದ ವಿನಯಾತ್ಮ ಪ್ರಸಾದಿ ಯಾನಾದೆನಯ್ಯ
ಸಂಗಯ್ಯ, ನಿಮ್ಮ ಬಸವನಿಂದಲಾನು ಪರಿಣಾಮಿಯಾದೆನು"[೧೬೦]

ಇಲ್ಲಿ ಮುಖ್ಯವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಮೂಲಕ ದೇಹಕ್ಕೆ ಚೈತನ್ಯ ಒದಗಿಸಿ; ಆ ಸುಖದಿಂದ ಓಂಕಾರ ಪ್ರಣವಾಕ್ಷರವಾಗಿ, ಈ ಪ್ರಣವಾಕ್ಷರವೆ ಪ್ರಸಾದವಾಗಿ ಇದು ಎಂತ ಪ್ರಸಾದವೆಂದರೆ ಸದ್ಭಾವ ಪ್ರಸಾದವಾಗಿದೆ. ಈ ಪ್ರಸಾದದ ಸುಖದಿಂದ ತನುಮನಗಳು ಪವಿತ್ರತೆ ಪಡೆದು, ಪರಿಣಮಿಸುವೆ ಬಸವನಿಂದ ಎಂಬುದನ್ನು ತಿಳಿಸುತ್ತಾಳೆ.

ನೀಲಾಂಬಿಕೆಯು ಪ್ರಸಾದ ಕುರಿತು ಈ ವಚನಗಳಲ್ಲಿ ಹೀಗೆ ವ್ಯಕ್ತಪಡಿಸುತ್ತಾಳೆ.

"ಎಡೆಯ ಮಾಡಿದ ಏಕವಾರಕ್ಕೆ ಮುನ್ನವೇ ತೀರಿತ್ತು
ತೀರಿದ ಪ್ರಸಾದವನುಣ ಹೋದರೆ ಉಂಡವರೆಲ್ಲಾ ನನ್ನ ಗಂಡರಾದರು
ಅವರ ಕಂಡು ನಾನು ಮರುಳುಗೊಂಡರೆ
ಮಹದ್‌ನುಭವದಲ್ಲಿ ಕೂಟವಾಯಿತ್ತಯ್ಯ ಸಂಗಯ್ಯ
ಎಡೆಯಲ್ಲಿ ಹುಟ್ಟಿದ ಭಕ್ತಿ ಎಡೆಯಲ್ಲಿಯೆ ಅಡಗಿತ್ತು
ಕಡೆಮುಟ್ಟಿ ನಡೆಯಲು ಆ ಕಡೆಯಳ ಸುಖವನರಿದು
ಅರಿವನರಿದೆನಯ್ಯ
ಅವಾವ ಕಾಲವೂ ಅವಾವ ವಸ್ತುವೆನಗೆ ಹೃದಯವೆ ಕಂಡು
ಮೂರ್ತಿ ಅನಿಮಿಷವಾಯಿತ್ತಯ್ಯ ಸಂಗಯ್ಯ
ಎಡೆಯಿಲ್ಲ ಕಡೆಯಿಲ್ಲ ಎನಗೆ ಎಲೆ ಅಯ್ಯ
ಪ್ರಾಣಲಿಂಗದ ಸಂಬಂಧದ ನೆಲೆಯ ಕಂಡಿಹೆನೆಂದರೆ

.........................ಪರಮಸುಖ ಮೂರ್ತಿಯಾದೆ
ನಯ್ಯ ಸಂಗಯ್ಯ
ಎಡೆಯಿಲ್ಲದ ಭಕ್ತಿಯ ಮಾಡ ಹೋದರೆ
ಆ ಭಕ್ತಿ ನಿಷ್ಫಲವಾಯಿತ್ತಯ್ಯ
...............ಪ್ರಸಾದಿಯಾದೆನಯ್ಯ ಸಂಗಯ್ಯ
ಎಡೆಯಿಲ್ಲದೂಟವನುಂಡು ತಳವಳಿದು
ತನುಮನ ಧನಂಗಳನಳಿದು
ನಾನು ನಿಃ ಪ್ರಪಂಚಿಯಾದೆನಯ್ಯ
ನಿರಂಗ ಸಂಗವಾಗಿ
ನಿಯಮನಳಿದುಳಿದೆನಯ್ಯ ಸಂಗಯ್ಯ"[೧೬೧]

ಈ ಮೇಲಿನ ವಚನಗಳ ಮೊದಲ ಐದು ಸಾಲುಗಳಲ್ಲಿ ನೀಲಾಂಬಿಕೆಯು ಪ್ರಸಾದ ಕುರಿತು ಹೇಳುತ್ತಾಳೆ. ಇಲ್ಲಿ ಎಡೆಯೆಂದು ಸಂಬೋಧಿಸುತ್ತಾ, ಅಷ್ಟಾವರ್ಣಗಳಲ್ಲಿ ಕೊನೆಯದಾದ ಪ್ರಸಾದದ ಮಹತ್ವವನ್ನು ಕುರಿತು ಹಾಗು ಪರಮಮೂರ್ತಿಯಾದೆನು ಅಂದರೆ ನಿರಾಕಾರ ಭಾವವನ್ನು ನಾನು ಹೊಂದಿದೆ. ಅಥವಾ ಅನಿಮಿಷನ ಯೋಗದಂತೆಯಾದೆನು. ಅನಂತರದ ಸಾಲುಗಳು ಪ್ರಾಣಲಿಂಗ ಸಂಬಂಧದಿಂದ ಕೂಡುವಿಕೆಯನ್ನು ಹಾಗೂ ಏಕತ್ವದ ಅನುಭವ ಪಡೆದು ಅಂಗವಳಿದು ಲಿಂಗವಾಗಿ, ಪ್ರಪಂಚವಾಸನೆಯಲ್ಲಿ ಮರೆತು ಸಂಗಯ್ಯನಲ್ಲಿ ಅರ್ಪಿತದ ನಿಲವುಗಳು ಈ ವಚನಗಳಲ್ಲಿ ಸ್ಪಷ್ಟವಾಗಿದೆ. ಈ ವಚನಗಳಿಗೆ ಪೂರಕವಾಗಿ ಗುಂಬೀಶಂರು ಹೀಗೆ ಅಭಿಪ್ರಾಯ ಪಡುತ್ತಾರೆ. "ಇಲ್ಲಿ ಬರುವ 'ಎಡೆ'ಯೆಂದರೆ ನೈವೇದ್ಯ ಪ್ರಸಾದವೆಂದಲ್ಲ, ಎಡೆಯೆಂದರೆ ಮೂಲ ಸ್ಥಾನ, ಅಂದರೆ ಕೆಲವರ ಭಕ್ತಿ, ತಾತ್ವಿಕವಾದುದು, ಮಿತ ಸ್ಥಿರವಿರದವರ ಭಕ್ತಿ ಮೂಡುವುದರಲ್ಲಿಯೇ ನಾಶವಾಗುವುದು. ಭಕ್ತಿ ಕಡೆಮುಟ್ಟಬೇಕು. ಪ್ರಪಂಚದ ಆಶೆ ಆಮಿಷೆಗಳ ಸಕಾಮದಿಂದ ಕೂಡಿದ ಭಕ್ತಿ ಆಯಾ ವಸ್ತುಗಳಲ್ಲಿಯೇ ನಾಶವಾಗುವುದು ನಿಜವಾದ ನಿಷ್ಕಾಮ ಭಕ್ತಿಯಲಿ ಕೊನೆಯವರೆಗೆ ಕ್ರಿಯಾ ರೂಪಿಯಾಗಿರುವುದು ನಿತ್ಯ ನಿಜದ ನಿರ್ಮಲ ಭಕ್ತಿಯಿಂದ ನಿಜದರಿವು ನಿರ್ದೇಶಿಸುವುದು. ಅವಾವಕಾಲವೂ ಆವಾವ ವಸ್ತು ಹೃದಯಂಗಮವಾಗಿ ನಿಜತ್ವದ ಮೂರ್ತಿಗೊಂಡು ಇಷ್ಟಲಿಂಗದಲ್ಲಿ ಅನಿಮಿಷವಾಗಿ ಬೆಳಗಿತು. ಇಂಥ ಭಕ್ತಿ ಕಡೆಯವರೆಗೆ ನಿತ್ಯ ಸುಖವ ನೀಡುವುದು. ಇದುವೇ ನಿತ್ಯ ನಿಜದ ನಿರವಯ ಭಕ್ತಿ. ಈ ಭಕ್ತಿಯಲ್ಲಿಯೇ ನಿತ್ಯ ಮುಕ್ತತೆಯೆಂಬುದು."[೧೬೨] ಇವರ ಅಭಿಪ್ರಾಯದಂತೆ ನಿರ್ಮಲಮೂರ್ತಿಗೆ ತನ್ನ ವಿಷಯಾದಿಗಳನ್ನು ಸಮರ್ಪಿಸಿ, ನಾನು ಆತ್ಮಜ್ಞಾನ ಪಡೆದು ಆ ಪರಾತ್ಪರ ವಸ್ತುವಿನಲ್ಲಿ ಲೀನವಾಗುವೆ ಎಂದು

ಹೇಳುತ್ತಾರೆ. ಆದರೆ ಹಲವಾರು ಬಗೆಯಲ್ಲಿ ಅಲೌಕಿಕವಾಗಿ ಬೆಳೆದವಳು ನೀಲಾಂಬಿಕೆ. ಆಕೆಯ ಹೊಯ್ದಾಡುವ ಹಂತವನ್ನು ನಿಲ್ಲಿಸಿ, ಇಷ್ಟಮೂರ್ತಿಯ ನಿಷ್ಠೆಯಲ್ಲಿ ಕೂಡುವ ವಿಚಾರ ಬಹಳ ಮುಖ್ಯವಾಗಿ ಈ ವಚನಗಳಲ್ಲಿ ನಿರೂಪಿತವಾಗಿದೆ.

ಈಕೆ ಲೌಕಿಕ ಹಂಗಹರಿದು ಪಾರಮಾರ್ಥಿಕದ ಹಾದಿಯ ಕುರಿತು ಇಲ್ಲಿ ಹೇಳಿಕೊಂಡಿದ್ದು, ಹಾಗೂ ಭಾವುಕ ರೀತಿಯಲ್ಲಿ ವ್ಯಕ್ತಪಡಿಸಿದ ವಚನ ಇಂತಿದೆ.

> "ಎನಗಿನ್ನೇನು ಎಮ್ಮಯ್ಯನೈಕ್ಯವನೈದಿದ ಬಳಿಕ
> ಎನಗೆ ಕಾಯವಿಲ್ಲ; ಎನಗೆ ಪ್ರಾಣವಿಲ್ಲ
> ಎನಗೆ ಹೃದಯದ ಹಂಗಹರಿದು
> ಪರಿಣಾಮ ಪ್ರಸಾದಿಯಾದೆನಯ್ಯಾ ಸಂಗಯ್ಯ"[೧೬೮]
> "ಎನಗೆ ಈ ಪ್ರಾಣದ ಕುರುಹಿಲ್ಲವಯ್ಯ
> ಎನಗೆ ಪ್ರಾಣಪ್ರಸಾದದ ಕುರುಹಿಲ್ಲವಯ್ಯ
> ಎನಗೆ ಅಂಗನಿರಂಗದ ಕುರುಹಿಲ್ಲವಯ್ಯ
> ಎನಗೆ ವಿಶೇಷದಾಯತವಿಲ್ಲವಯ್ಯ
> ಎನಗೆ ಪ್ರಾಣ ಪರಿಣಾಮದನುಕೂಲವಿಲ್ಲವಯ್ಯ ಸಂಗಯ್ಯ"[೧೬೯]

ನೀಲಾಂಬಿಕೆಯಲ್ಲಿ ಭೌತಿಕವಾದ ಕುರುಹುಗಳನ್ನು ಕಳೆದು, ಅಗಮ್ಯವಾದ ಶಕ್ತಿಯನ್ನು ಕಂಡುಕೊಳ್ಳಲು, ಆನಂದವಿಲ್ಲದೆ, ನಿರಾಶಳಾಗಿ ಹೀಗೆ ಈ ವಚನದಲ್ಲಿ ಹೇಳಿಕೊಂಡಿದ್ದಾಳೆ. ಹಾಗೆ

> "ಎನಗೆ ಎಲ್ಲಿಯೂ ಕಾಣಿಸದು ಇರಪರದ ಸಿದ್ಧಿಯು
> ಎನಗೆ ಏನೂ ತೋರದು ಮೂರ್ತಿಯ ಹಂಗು
> ಎನಗೇನೂ ಅರುಹಿಸದು ಇಷ್ಟದ ಪ್ರಸಾದ
> ಇಹಲೋಕ ಸಂಬಂಧ ನಿರ್ಮಲಾಕಾರವಾಯಿತ್ತಯ್ಯ
> ಸಂಗಯ್ಯ"[೧೬೫]

ಈ ಮೇಲಿನ ವಚನದಲ್ಲಿ ಅಂಗದ ಭಾವವಳಿದ ಲಿಂಗಸಂಬಂಧಿಯಾಗಿ, ಸ್ವಯಂ ರೂಪವಾದಾಗಿನ ಹಂತ ಯಾವುದರ ಹಂಗು, ಸಿದ್ಧಿ, ಕಾಣಿಸುವುದಿಲ್ಲ. ಪ್ರಸಾದದ ಪಾವಿತ್ರ್ಯತೆಯಿಂದ ಈ ಲೌಕಿಕ ಸಂಬಂಧ ಬೆಳಕಿನಲ್ಲಿ ಕೂಡಿಕೊಂಡಿದೆ.

ಜ್ಞಾನ ಬರಬೇಕಾದರೆ ಕ್ರಿಯೆ ಬಹಳಮುಖ್ಯ ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಜ್ಞಾನವಿಲ್ಲದ ಕ್ರೀಯ ಮಾಡಿದಲ್ಲಿ ಫಲವೇನಯ್ಯ?
ಆ ಜ್ಞಾನವು ಕ್ರೀಯೆಯ ಸಂಬಂಧಿಸಲು
ಅಪ್ರಮಾಣದ ಪ್ರಕಾಶವ ಕಂಡು
ಅರುವನರಿದು ತಿಳಿಯಲು ಸಂಗಯ್ಯನಲ್ಲಿ
ಪ್ರಸಾದಿಯಾದೆನಯ್ಯ"[೧೬೬]

"ಅಣ್ಣೆವಾಲ ಕರೆದು, ಪುಣ್ಯದ ಕಡ ಗೋಲಿನಲ್ಲಿ ಕಡೆದು
ಕಂಪಿಲ್ಲದ ತುಪ್ಪವನು ಅನಂತ ಹಿರಿಯರಿಗೆಡೆ ಮಾಡಿ
ಉಣಬಡಿಸಲೊಡನೆ, ಊಟ ನಿರಾಕುಳವಾಗಿ ನಿಂದಿತ್ತು
ಪ್ರಾಣವಿಲ್ಲದೆ ಪರಿಣಾಮಿಗಳಾದರು ಅನಂತಕೋಟಿ ಹಿರಿಯರು
ಅವರುಂಡ ಪ್ರಸಾದವನುಣ ಹೋದಡೆ ಎನಗವಧಿಯಾಯಿತಯ್ಯಾ
ಹಿರಿಯತನದುಪಕಾರವ ನೋಡದೆ
ಅವರ ಕಡಿದು ಅನಡಿಯಿಟ್ಟೆನಯ್ಯಾ ಸಂಗಯ್ಯನಲ್ಲಿಗೆ"[೧೬೭]

ಈ ಮೇಲಿನ ವಚನದಲ್ಲಿ ಸಿಹಿಯಾದ ಹಾಲನು ಕರೆದು, ಆ ಹಾಲನ್ನು ಮೊಸರು ಮಾಡಿ, ಜ್ಞಾನ ಎಂಬ ಪುಣ್ಯದ ಕಡಗೋಲಿನಿಂದ ಕಡೆದು ಅದರಿಂದ ಬೆಣ್ಣೆಯನ್ನು ಕಂಪಿಲ್ಲದೆ ತುಪ್ಪವ ಮಾಡಿ, ನನ್ನ ಅನುಭವದ ಮಾತುಗಳನ್ನು ಅರ್ಪಿಸಿದಾಗ, ಹಿರಿಯರಿಗೆ ಅದು ಪ್ರಸಾದವಾಗಿ, ಸೊಗಸಾದ ರೀತಿಯಲ್ಲಿ ಸವಿದು. ಅಂತಹ ಪ್ರಸಾದವನ್ನು ಸ್ವೀಕರಿಸಬೇಕು ಎಂಬ ಹಂಬಲ. ಆದರೆ ಪರಿಣಾಮಿಗಳ ಈ ಪ್ರಸಾದದಿಂದ ಎನ್ನ ಮನಶುದ್ಧವಾಗಿದೆ. ಮತ್ತು ಹಿರಿಯರ ಕೃಪೆಯಿಂದ ಹಿರಿಯತನದ ಉಪಕಾರವನ್ನು ಸ್ಮರಿಸಿ ಅವರು ನಡೆದ ಹಾದಿಯಲ್ಲಿ ನಾನು ನಡೆಯುವೆ ಎಂದು ಹೇಳುತ್ತಾಳೆ. ಜೊತೆಗೆ ಸಂಗಯ್ಯನತ್ತ ಸಾಗುವೆ ಎಂದರೆ ಭವದಿಂದ ಬಯಲಿಗೆ ಸಾಗುವ ಪರಿ ಇಲ್ಲಿದೆ.

ನೀಲಾಂಬಿಕೆ ಘನತ್ವದ ಸ್ಥಿತಿಯನ್ನು ಈ ವಚನದಲ್ಲಿ ವ್ಯಕ್ತಪಡಿಸುವ ಪರಿ ಹೀಗೆ ಇದೆ.

"ಇಬ್ಬರು ನಾವು ಒಂದೆಡೆಯನುಂಡೆವು
ಉಂಬ ಊಟದಲ್ಲಿ ತೃಪ್ತಿಯ ತಳದು
ತನು ಸೊಜಿಗವಾಯಿತ್ತಯ್ಯ
ಮನಮಗ್ನವನ್ನೈ ಮಹಾಲಿಂಗದತ್ತ
ಶುದ್ಧಿ ನಿಃಶುದ್ಧಿಯಾಯಿತ್ತಯ್ಯ

ಅಡಗಿದೆನಡಗಿದೆನತ್ತತ್ತಲೆ ನಾನು
ಉಡುಗಿದೆನೀ ಕಾಯವ
ಉಭಯದ ಸಂಗವ ಹರಿದು
ಉಲುಹಡಗಿದ ವೃಕ್ಷವಾದೆನಯ್ಯ ಸಂಗಯ್ಯ"[೧೬೮]

ಶರಣಸತಿ ಲಿಂಗಪತಿಯಾಗಿ ನಾವು ಇಬ್ಬರು ಕೂಡಿ ಆ ಮಹಾಘನದ ಅನುಭವ ಎಂಬ ಪ್ರಸಾದವನ್ನು ಪಡೆದೆವು. ಆದರೆ ತೃಪ್ತಿಯಾಗೆ, ತನುವಿಗೆ ಮುಜುಗರವಾಗಿ ಮನವು ಮಗ್ನತೆಯಿಲ್ಲದೆ, ಆಗ ಮಹಾಲಿಂಗದ ಕುರುಹ ತಿಳಿದು, ಶುದ್ಧವಾಗಿ, ಬೆರೆತೆನು ಆ ಘನದಲ್ಲಿ ಆಗ ಉಭಯತ್ವವು ಹರಿದು ಚಿಗುರಿದ ವೃಕ್ಷದಂತೆ ನಾನು ಆಗಿದ್ದೇನೆ. ಹಾಗೂ ಪರಬ್ರಹ್ಮದ ಪರಮಾನಂದದಲ್ಲಿ ಮಿಂದು ನಿತ್ಯ ನಿತ್ಯತೆಯ ಕಡೆಗೆ ಸಾಗಿದೆನು ಎಂದು ಹೇಳುತ್ತಾಳೆ.

ನೀಲಾಂಬಿಕೆ ಮಹಾ ಪಂಚಾಕ್ಷರಿ ಮಂತ್ರದಿಂದ ನಾನು ಶುದ್ಧಳಾದೆ ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಒಡಲಳಿದ ಕಾರಣ ಒಡಲಿಲ್ಲದ ಹೆಣ್ಣು ನಾನಾದೆನಯ್ಯ ಬಸವಾ
ಪ್ರಾಣವಿಲ್ಲದ ಪಂಚಾಕ್ಷರಿಯ ತಿಳಿಯಲು
ಆ ಪಂಚಾಕ್ಷರಿಯ ನರಿದು ಅನು ಬದುಕಿದೆನಯ್ಯಾ ಬಸವಾ
ಗಮನ ನಿರ್ಗಮನ ಸೂಚನೆಯಾಯಿತ್ತು
ಸಂಗಯ್ಯನಲ್ಲಿ ಹೃದಯದ ಕತ್ತಲೆಯಳಿದು
ಹೃದಯ ಪ್ರಸನ್ನೆಯಾದೆನಯ್ಯಾ ಬಸವಯ್ಯಾ"[೧೬೯]

ಪ್ರಸಾದಿ ಸ್ಥಲದ ಮೂಲಕ ಇಹದ ಹಂಗ ಕಳೆದುಕೊಂಡೆನು ಎಂದು ಈ ಕೆಳಗಿನ ವಚನದಲ್ಲಿ ಸೂಚಿಸುತ್ತಾಳೆ.

"ದ್ವಯ ಲಿಂಗವೆಂಬರು
ದ್ವಯ ಲಿಂಗವಿಲ್ಲದವಳೆಂದರಿಯರು
ಪ್ರಸಾದಿಯೆಂದೆಂಬರೆನ್ನ;
ಪ್ರಸಾದದ ಹಂಗಿಲ್ಲದವಳೆಂದರಿಯದೆನ್ನ
ಗುರುವಚನ ರಚನೆಯನರಿದು
ನಿಃ ಪ್ರಪಂಚಿಯಾನಾದೆನಯ್ಯಾ ಸಂಗಯ್ಯ"[೧೭೦]

ಸದ್ಭಾವನೆಗಳನ್ನು ಕೊಡುವ ಆಚಾರಲಿಂಗ ಗುರುಲಿಂಗದಲ್ಲಿ ಉಭಯತ್ವವ ಕಾಣದೆ ಅಳವಡಿಸಿಕೊಂಡು, ಪವಿತ್ರ ಭಾವನೆಯಿಂದ ಅರಿವಿನ ಪ್ರಸಾದದಲ್ಲಿ ಮಿಂದು, ವಿಷಯ ಸುಖವನ್ನು

ಗುರುವಚನದ ಮೂಲಕ ತಿಳಿದು, ಜಂಜಡವಿಲ್ಲದ ರೀತಿಯಲ್ಲಿ ನಾನು ಆದ ಮೇಲೆ ಈ ಪ್ರಪಂಚದ ಹಂಗು ನನಗೇಕೆ ಎಂಬ ಪ್ರಶ್ನೆಯನ್ನು ಮಾಡಿಕೊಂಡು ತನುಶುದ್ಧಿಯಿಂದ ಮನಶುದ್ಧಿ, ಭಾವಶುದ್ಧತೆಯಾಗಿ ಪರಿಣಮಿಸುವ ಬಗೆಯನ್ನು ತಿಳಿಸುತ್ತಾಳೆ. ಹಾಗೆ

"ಇರವಿಲ್ಲದ ವಸ್ತುವ ಕಂಡು ಪರವಶದ ಮೂರ್ತಿಯನರಿದೆನಯ್ಯ
ಪರಬ್ರಹ್ಮದ ಕಲ್ಯಾಣದಲ್ಲಿ ಪರವಶಿವತತ್ತ್ವವ ಕಂಡೆನಯ್ಯ
ಪರಕಾಯ ಪ್ರವೇಶಿಯಾಗಿ ಪರತರ ಸುಖವನರಿದು
ಬದುಕಿದೆನಯ್ಯ ಸಂಗಯ್ಯ"[೧೭೧]

ನಿರಾಕಾರ ಸ್ಥಿತಿಯ ವಸ್ತು ಕಂಡು, ಪರಮ ಚೈತನ್ಯ ಮೂರ್ತಿಯ ಕಂಡೆ, ಮಂಗಳಮಯ ವಾದ ಶಿವಸಾಯುಜ್ಯದ ತತ್ವವ ಕಂಡು, ಬೇರೆಯವರ ಮನಸ್ಸಿನಲ್ಲಿರುವ ಪರತರ ಸುಖವನರಿತು, ಬದುಕಿದೆ ಎಂದು ಹೇಳುತ್ತಾಳೆ. ಪರಕಾಯ ಎಂದರೆ ಇನ್ನೊಬ್ಬರ ಶರೀರದಲ್ಲಿ ಬೆರೆತು ಎಂದಾಗುತ್ತೆ. ಅಂದರೆ ಸಂಗದ ಮುಖಾಂತರ ಶಿವಾನುಭವದ ಚಿಂತನೆ ಬಗ್ಗೆ ಹೇಳುವಂತೆ ತೋರುತ್ತದೆ. ನೀಲಾಂಬಿಕೆ ತನ್ನ ಅಂತರಂಗದ ನುಡಿಗಳನ್ನು ಲಿಂಗಯ್ಯನಲ್ಲಿ ವ್ಯಕ್ತಪಡಿಸುವ ಬಗೆ ಈ ವಚನದಲ್ಲಿ ಕಾಣುತ್ತದೆ.

"ಏನೆಂದೆನ್ನ ಬಹುದಯ್ಯ? ಎಂತೆಂದೆನ್ನಬಹುದೆಯ್ಯ?
ಈ ಘನದ ವಿಚಾರವ? ಈ ಘನದಲ್ಲಿ
ಇಹಪರದ ಸುಖವ ಕಂಡು ಕೊಡುವೆನೆಂದು ಹೋದರೆ
ಆ ಲಿಂಗವೆನ್ನ ಕರದೊಳಗೆ ತಾನೆಯಡಗಿತ್ತು
ನಾನಡಗಿ ನನ್ನ ವಿಚಾರವ ತಿಳಿಯಲು
ನಾನು ಬದುಕಿದೆನಯ್ಯ ಸಂಗಯ್ಯ"[೧೭೨]

ಆಧ್ಯಾತ್ಮದ ಸಾಧನೆಯಲ್ಲಿ ಘನದ ಬಗ್ಗೆ ತಿಳಿಯಬೇಕು. ಈ ಘನಕ್ಕೆ ಇಹಪರದ ಸುಖವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಯಾಕೆಂದರೆ ತಾನೆ ತಾನು ಆದ ಪರವಸ್ತು. ಆ ಘನರೂಪದ ಲಿಂಗ ಎನ್ನ ಕರದೊಳಗೆ ನೆಲೆಸಿದಾಗ, ನಾನು ಲಿಂಗದಲ್ಲಿ ಅಡಗಿ ಸುಜ್ಞಾನ ಎಂಬ ವಿಚಾರ ತಿಳಿದು, ಜೀವಿಸುವೆನು ಎಂದು ಹೇಳುತ್ತಾಳೆ. ಹಾಗೆ ಈ ಕೆಳಗಿನ ವಚನದಲ್ಲಿ ಲಿಂಗಾಂಗ ಸಾಮರಸ್ಯದಿಂದ ಶಿವಸೂತ್ರಧಾರಿಯಾದೆ ಎಂದು ಹೇಳುವ ಬಗೆ ಹೀಗಿದೆ.

"ಮೂನೂಲ ನಳಿದೆ ಮುಖವ ಕಳದೆ
ಆ ಮುಖ ವಿಮುಖವಾಗಿ ವಿಚಾರವ ತಿಳಿದು
ವಿನೇಯ ಪರತತ್ತ್ವವನಳಿದು ನಿಃಶೂನ್ಯ ಶಬ್ದವಾಗಿ

ಉರಿಯುಂಡ ಕರ್ಪೂರದಂತೆ ತೆರೆ ಹಿಲ್ಲದೆ ನಿಂದೆನಯ್ಯ
ನಿಂದು ನಿರ್ವಯಲಾಗಿ ಲಿಂಗ ಲಿಂಗಾಂಗಿಯಾನಾಗಿ
ನೀರೊಳಗೆ ನೀರು ಬೆರದಂತಾನಾದೆನಯ್ಯಾ
ಸಂಗಯ್ಯ ಸಂಗಯ್ಯ ಶಿವಸೂತ್ರಧಾರಿಯಾನಾದೆನು"[೧೭೩]

ಕೆಟ್ಟ ಗುಣಗಳ ಅಳಿದು ಸಾಧಕಳಾಗಿ ವಿಚಾರ ತಿಳಿದು ವಿನಯ ಪರತತ್ವವಳಿದ ನಿರಾಕಾರ ಸ್ಥಿತಿಯಲ್ಲಿ ಅಡಗಿ ಉರಿಯುಂಡ ಕರ್ಪೂರದಂತೆ, ಕಾಣದೆ ಹೋದೆನೆಂದು ಹೇಳುತ್ತಾ, ಲಿಂಗದ ಮುಖಾಂತರ ಲಿಂಗಾಂಗಿಯಾಗಿ ಸಮರಸದಂತೆ ಜಲದೊಳಗೆ ಜಲ ಬೇರಿಸಿದಂತೆ ಪರಿಪಕ್ವತೆಯ ಸುಗಮದಾರಿಯೆಂದರೆ ಶಿವ ಸಂಬಂಧಿಯಾಗುವುದು ಅಥವಾ ಶಿವನಲ್ಲಿ ಲೀನವಾಗುವುದು. ಚಿದಾನಂದ ಸ್ವರೂಪದ ಕಲ್ಪನೆಯ ಮೂಲಕ ನಿರ್ಬಯಲಿಗೆ ಸಾಗುವ ಕ್ರಮವನ್ನು ವಿವರಿಸಿದ್ದಾಳೆ. ಹಾಗೆ ಶಿವಸೂತ್ರದಾರಿಯಾಗಿ "ಸಂಗಯ್ಯ ಸಂಗಯ್ಯ ನಿರಾಕಾರವೇನಯ್ಯ? ಲಿಂಗಾಕಾರ ನಿರಾಕಾರ ಒಡಲು ಅಂಗಲಿಂಗ ಸುಯಿದಾನವಾಯಿತ್ತಯ್ಯ ಎನ್ನ ಸುಯಿದಾನ ನಿರವಯವಯ್ಯ ಸಂಗಯ್ಯ"[೧೭೪]ನಲ್ಲಿ ಕಾಣಬೇಕಾದರೆ "ಸ್ಥೂಲ–ಸೂಕ್ಷ್ಮ–ಕಾರಣ ಎಂಬ ಮೂರು ಶರೀರಗಳಲ್ಲಿ ಸ್ಥೂಲ ಶರೀರಕ್ಕೆ ಇಷ್ಟಲಿಂಗದ ಲೇಪ, ಸೂಕ್ಷ್ಮ ಶರೀರಕ್ಕೆ ಪ್ರಾಣಲಿಂಗದ ಲೇಪ, ಭಾವಲಿಂಗಕ್ಕೆ  ಕಾರಣ ಶರೀರದ ಸಂಬಂಧವಿದೆ."[೧೭೫] ವ್ಹಿ.ಜಿ.ಮಾರಿಹಾಳ ಅಭಿಪ್ರಾಯಪಡುತ್ತಾರೆ. ಇವರ ಹೇಳಿಕೆಯಂತೆ ಭಾವಲಿಂಗ ಮುಖಾಂತರ ಕಾರಣಿಕ ಹಂತಕ್ಕೆ ಬರುತ್ತದೆ. ಹೀಗಿದ್ದಾಗ ಸಂಗಯ್ಯನಲ್ಲಿ ನಿರಾಕಾರ ಸ್ಥಿತಿಯನ್ನು ಪಡೆಯುವ ತವಕವನ್ನು ಕಾಣುತ್ತೇವೆ. ಹಾಗೆ ಅಂಗಲಿಂಗಕ್ಕೆ ರಕ್ಷಣೆ ನೀಡಿದಂತೆ ಎನ್ನ ಸುಯಿದಾನ ಬಂದು ಬಯಲಿನ ಸ್ಥಿತಿಯನ್ನು ಕಂಡೆನು ಎಂದು ಹೇಳುತ್ತಾಳೆ. ನೀಲಾಂಬಿಕೆ ಅಧ್ಯಾತ್ಮ ಜಗತ್ತಿನ ಸಂಬಂಧವನ್ನು ಸೂಚಿಸಿ, ಆ ಪಥದಲ್ಲಿ ನಡೆಯುವುದು, ಹಾಗೂ ಪರಶಿವನ ಸಾಕ್ಷಾತ್ಕಾರದ ತವಕವನ್ನು ತಿಳಿಸಿ, ಲೋಕಾನುಭವದೊಂದಿಗೆ ಆತ್ಮಾನುಭವ ಪಡೆಯಬೇಕು. ಈ ತಾತ್ವಿಕ ಚಿಂತನೆಗಳು ಈ ಕೆಳಗಿನ ವಚನದಲ್ಲಿ ವ್ಯಕ್ತವಾಗಿವೆ.

"ಆದಿಯಾಧಾರವಿಲ್ಲದಂದು, ಕಳೆಮೊಳೆದೋರದಂದು,
ಕಾಮ ನಿಃಕಾಮವಿಲ್ಲದಂದು, ವೀರ ವಿತರಣವಿಲ್ಲದಂದು,
ಯುಗ ಜುಗವಿಲ್ಲದಂದು, ಪಿಂಡಾಂಡ ಬ್ರಹ್ಮಾಂಡವಿಲ್ಲದಂದು
ಏನೂ ಏನೂ ಇಲ್ಲದಂದು, ಎಲ್ಲಾ ಮೂರ್ತಿಗಳು ನೆಲೆಗೊಳ್ಳದಂದು
..............................................................
ಭಕ್ತಿ ಸ್ಥಲವನಳಿದು ಭಾವವಡಗಿ ಬಟ್ಟಬಯಲ ಕೂಡಿ
ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು"[೧೭೬]

ಈ ವಚನವು ವೀರಶೈವ ಸಿದ್ಧಾಂತವನ್ನು ವಿವರಿಸುತ್ತಾ, ಸೃಷ್ಟಿಯ ಮೂಲವನ್ನು ಕುರಿತು ಹೇಳುತ್ತಾ, ಬಸವಣ್ಣನಿಗೆ ಈ ಸೃಷ್ಟಿಯ ರಹಸ್ಯ ತಿಳಿಯದೆ ಇದ್ದಾಗ ನಾದಾತೀತಾವಾದ ವಿಷಯವನ್ನು ಶಬ್ಧಕ್ಕೆ ತಂದು, ಅದನ್ನು ಮೂರು ಅಕ್ಷರಗಳಲ್ಲಿ ಅ.ಉ.ಮ.ನಾದ ಬಿಂದು ಕಲೆಗೆ ತಂದು. ಈ ಅಕ್ಷರಗಳನ್ನು ಮೂರು ರೂಪಮಾಡಿ ಇಷ್ಟಲಿಂಗ ಪ್ರಾಣಲಿಂಗ, ಭಾವಲಿಂಗ(ಸ್ಥೂಲ, ಸೂಕ್ಷ್ಮ, ಕಾರಣ) ರೂಪಕ್ಕೆ ತಂದು ಪೃಥ್ವಿ, ತೇಜ, ವಾಯು, ಆಕಾಶ, ಈ ಐದು ತತ್ವಗಳನ್ನೆ ಐದು ಮುಖಮಾಡಿ, ಈ ಜಗತ್ತಿನ ಸೃಷ್ಟಿಗೆ ಆದಿಯಾದನು ಬಸವಣ್ಣ.

ಈ ಸೃಷ್ಟಿಯ ಮುಖವನ್ನು ಕಂಡು ಐದು ಶಕ್ತಿಯರು ಹುಟ್ಟಿದರು ಇಚ್ಛಾಶಕ್ತಿ, ಜ್ಞಾನಶಕ್ತಿ, ಪರಾಶಕ್ತಿ, ಆದಿಶಕ್ತಿ, ಚಿತ್‌ಶಕ್ತಿಗಳು ಹುಟ್ಟಿದವು. ಹಾಗೂ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಎಂಬ ಮೂರ್ತಿಗಳನ್ನು ಸೃಷ್ಟಿಸಿದ. ಈ ಪಂಚಮೂರ್ತಿಗಳಿಂದ ಉತ್ಪತ್ತಿಯಾದ ಲೋಕವನ್ನು ನೋಡಲೆಂದು, ಕಲ್ಯಾಣವನ್ನೆ ಕೈಲಾಸಮಾಡಿ, ಅಮರಗಣಂಗಳು, ಪ್ರಮಥಗಣಂಗಳು, ಆಚಾರ್ಯಾದಿ ಮಹಾಲಿಂಗ ಸಂಪನ್ನರನ್ನು ಇಲ್ಲಿ ಕರೆತಂದು, ಈ ಮರ್ತ್ಯಲೋಕವನ್ನೇ ಶರಣಕ್ಷೇತ್ರ ಮಾಡಿದ ಬಸವಣ್ಣ ಈ ತತ್ವ ಸಂಪದವನ್ನು ಎಲ್ಲಾ ಶರಣರಿಗೆ ನೀಡಿ. ಸಾಧನೆಯ ತುತ್ತತುದಿಗೆ ಏರಿದ್ದನ್ನು ಹಾಗೂ ಭಕ್ತಿಸ್ಥಲದ ಮೂಲಕ ಭಕ್ತನ ಕರ್ತವ್ಯ, ನಿಷ್ಠೆ ಹಾಗೂ ಕ್ರಿಯಾಬದ್ಧವಾದ ಆಚರಣೆ ತಿಳಿದು, ಭಾವುಕನಾಗಿ ನಿರಾಕಾರತ್ವಕ್ಕೆ ಹೋಗಿ, ಸಂಗಯ್ಯನಲ್ಲಿ ಬೆರೆತು ಸ್ವಯಲಿಂಗಿಯಾಗಬೇಕು ಎಂದು ಈ ವಚನದಲ್ಲಿ ತಿಳಿಸುತ್ತಾಳೆ. ಹಾಗೆ ಈ ವಚನ ಬಸವನಿಷ್ಠೆಯಿಂದ ಲಿಂಗನಿಷ್ಠೆಗೆ ತೊಡಗಿ ಅನುಭವ, ಅನುಭಾವದ ನೆಲೆಯತ್ತ ಸಾಗುವಂತದ್ದು ಆಗಿದೆ. ನೀಲಾಂಬಿಕೆಯಲ್ಲಿಯ ಲಿಂಗನಿಷ್ಠೆ ಅಂತರಂಗ ಸ್ವಚ್ಚತೆಯ ಮೂಲಕ ಉತ್ಕೃಷ್ಟತೆಗೆ ತಲುಪಿದ್ದು ಕಾಣುತ್ತೇವೆ. ಹಾಗೂ ಹಲವು ವಿಷಯಾದಿಗಳು ಹೋಗಬೇಕು. ಆಗ ಮನಸ್ಸಿನ ಅಂತರಾಳವು ಬಲಿಯುತ್ತದೆ. ಜೊತೆಗೆ ಹಲವು ಜಿಜ್ಞಾಸೆಗಳಿಂದ ಕೂಡಿದ ಈಕೆ, ಲಿಂಗಾಂಗ ಸಾಮರಸ್ಯದ ಮೂಲಕ ಹಾಗೂ ತತ್ವಾಚರಣೆಗಳಿಗೆ ಸಂಬಂಧಿತಳಾಗಿ, ಹೆಚ್ಚು ನಿರಾಕಾರತ್ವದ ನಿಲುವು ಕಂಡುಬರುತ್ತದೆ. ವೈಚಾರಿಕ ಮಟ್ಟಕ್ಕೆ ಬಂದು ಲಿಂಗ ಪೂಜೆಗಿಂತ, ಭಾವಪೂಜೆ ಮುಖ್ಯವೆಂದು ಹೇಳುತ್ತಾ ಶೂನ್ಯತ್ವವನ್ನು ಪ್ರತಿಪಾದಿಸುತ್ತಾಳೆ. ಈ ಮೂಲಕ ಅನುಭವ ಪಡೆದು, ತಾತ್ವಿಕ ನಿಲುವುಗಳನ್ನು ತನಗೆ ಅಳವಡಿಸಿಕೊಂಡು ಅನುಭಾವಿಯ ಯೋಚನೆಯಲ್ಲಿ ಮುಂದಾಗಿದ್ದು ಕಾಣಬಹುದಾಗಿದೆ.

### ೧.೪. ಅನುಭವದಿಂದ ಅನುಭಾವದವರೆಗೆ

ನೀಲಾಂಬಿಕೆಯ ವಚನಗಳಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯದ ವಿಚಾರಧಾರೆಗಿಂತ, ತತ್ವನಿಷ್ಠೆಗೆ ಹೆಚ್ಚು ಒತ್ತು ಕೊಟ್ಟಿದ್ದನ್ನು ಕಾಣುತ್ತೇವೆ. ಈಕೆ ಅಂತರಂಗ ಬಹಿರಂಗದ ಕೃಷಿಗೆ

ಆದ್ಯತೆ ನೀಡಿದ್ದು, ಹಾಗೂ ಆ ಮೂಲಕ ವೈಚಾರಿಕ ನೆಲೆಯನ್ನು ಕಂಡುಕೊಂಡಿದ್ದು, ಅನುಭವವಾಗಿ, ಆ ಮೂಲಕ ಉದಾತ್ತೀಕರಣದ ಹಂತಕ್ಕೆ ಬಂದು, ಸಂಪ್ರದಾಯದ ಚೌಕಟ್ಟನ್ನು ಮೀರಿ ಅನುಭಾವದ ಶಿಖರಕ್ಕೆ ಏರಿದ್ದು ಈಕೆಯ ಜೀವನದ ದಿಕ್ಕನ್ನೆ ಬದಲಾಯಿಸಿತು. ಇದರ ಪರಿಣಾಮ ಭವಚಕ್ರವನ್ನು ದಾಟಿ ಹೋಗುವ ಸ್ಥಿತಿಯನ್ನು ಅನುಭವಿಸಿ ತಾನು ಕಂಡ ಸತ್ಯವನ್ನು ತನ್ನ ವಚನಗಳಲ್ಲಿ ಬಿತ್ತರಿಸಿದ್ದಾಳೆ ಹಾಗೂ ಪರಮಾತ್ಮ–ಜೀವಾತ್ಮ ಒಂದೆಯಾಗಿದ್ದಾನೆ. ಆದ್ದರಿಂದ ಅದನ್ನು ಅನುಭವಿಸಿ, ಪ್ರತಿಯಾಗಿ ಅನುಭಾವದ ವಿಚಾರಗಳಿಗೆ ಈಕೆ ಶ್ರೀಕಾರ ಹಾಕಿದ್ದಾಳೆ. ಹಾಗೆ ನಾನು ಹೇಗೆ ಅನುಭವಿಯಾದೆ ಎಂಬುದನ್ನು ಈ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಹುಟ್ಟಿಲ್ಲದ ಭೂಮಿಯಲ್ಲಿ ಹುಟ್ಟಿದೆ ನಾನು
ನಾನು ಹುಟ್ಟಿ ಕಾಯವ ಸ್ಥಿರವಾಗಿ
ಅಸ್ಥಿರ ಸುಸ್ಥಿರವಾಗಿ ಅನು ಅನುಭವದಾಯಕಳಾದೆನು
ಅನು ಸುಖದುಃಖವ ಕಳೆದು
ಅನುಭವಿಯಾದೆನಯ್ಯ ಸಂಗಯ್ಯ"[೧೭೭]

ಅಜ್ಞಾನದಲ್ಲಿಯ ಭೂಮಿಯಲ್ಲಿ ಜನಿಸಿದೆ, ಆದರೆ ಕಾಯಕ್ಕೆ ಜ್ಞಾನ ಜ್ಯೋತಿಯ ಸ್ಪರ್ಶದಿಂದ ಕಾಯ ಹೊಯ್ದಾಟದಲ್ಲಿದ್ದರೂ ಅದು ಸುವ್ಯವಸ್ಥೆಗೆ ಬಂದುದ್ದರಿಂದ ಅನುಭವಿಕಳಾದೆ ಹಾಗೂ ನನ್ನಲ್ಲಿಯ ಸುಖ ದುಃಖವ ಕಳೆದುಕೊಂಡು ಅನುಭವಿಯಾಗಿದ್ದೇನೆ ಎಂದು ಹೇಳುತ್ತಾಳೆ.

"ಅಲ್ಲಲ್ಲಿಯ ಸುಖಂಭೋ ಎನಲಿಲ್ಲ
ಅಲ್ಲಲ್ಲಿಯ ಪಶುತ್ವವಿಲ್ಲಂಭೋ
ಆ ಪಶು ಕಾಯವಂ ಕಳದು ಅನು ಪರಿಣಾಮವಡಗಿದವಳಯ್ಯಾ
ಪರಿಣಾಮದ ವಿವರದಿಂದ ಪರವಸ್ತುವಿನ ನೆಲೆಯ ತಿಳಿದು
ಪರಮ ಪ್ರಸಾದಿಯಾದೆನು
ಪ್ರಾಣಯೋಗ ಪ್ರಸಾದಮೂರ್ತಿಯುಳ್ಳವಳಾದ ಕಾರಣ
ಆನು ಬಸವಾ ಬಸವಾ ಬಸವಾ ಎನುತಿರ್ದೆನಯ್ಯಾ ಸಂಗಯ್ಯಾ"[೧೭೮]

ನೀಲಾಂಬಿಕೆ ಈ ವಚನದಲ್ಲಿ ನಾನು ಲೌಕಿಕ ಸುಖವನ್ನು ಎಂದು ಬಯಸಲಿಲ್ಲ. ಏಕೆಂದರೆ ನನ್ನಲ್ಲಿಯ ಭೌತಿಕ ಕಾಯದ ಗುಣ ಹೋಗಿದೆ. ಅದು ಪಶುತ್ವದ ರೂಪದಲ್ಲಿ ಇತ್ತು. ಆದರೆ ಆ ಗುಣವಿಲ್ಲ ಎಂದು ಹೇಳುತ್ತಾ, ಪರಿಣಾಮದ ವಿವರದಿಂದ ಆ ಚೈತನ್ಯ ಮೂರ್ತಿಯ ನೆಲೆ ತಿಳಿದು ಪರಮ ಪ್ರಸಾದಿಯಾದೆನು. ಪ್ರಾಣಯೋಗದಿಂದ ನಿಜಾತ್ಮ ಮೂರ್ತಿಕಂಡು ಆನು ಬಸವಾ ಎಂದು ಸ್ಮರಿಸುವೆ ಮತ್ತು ಸುಖಿಯಾದೆ ಎಂದು ಹೇಳುತ್ತಾಳೆ. ಪಶುತ್ವ ಭಾವನೆಯಿಂದ

ಮುಕ್ತಳಾದ ಈಕೆ ಅಂಗಕ್ಕೆ ಬೆಲೆಕೊಡದೆ, ಘನವ ತಿಳಿಯಲು ಮುಂದಾಗುವ ಬಗೆಯನ್ನು ಈ ಕೆಳಗಿನ ವಚನಗಳಲ್ಲಿ ಹೇಳುತ್ತಾಳೆ.

"ಅಂಗವಡಗಿ ನಿರಂಗಿಯಾನಾದೆನು
ನಿರಂಗಸಂಗ ಮಂತ್ರದ ಮಂತ್ರದಿಂದ
ಮನೋವಿಲಾಸವ ಕಂಡು ಮೂರ್ತಿಯನರಿದು
ಆ ಮೂರ್ತಿ ಸಂಗ ಹಿಂಗಿ
...........................................
............ವಿಶುದ್ಧದಾಯಕಳು ನಾನಾದೆನಯ್ಯ ಸಂಗಯ್ಯ
ಅಂಗನೆಯ ಸಂಗವ ಮಾಡಿಹೆನು ನಾನು
ಅನು ವಂಗನೆಯಲ್ಲಿ
ಆ ಅಂಗನೆಯ ಅಂಗಸಂಗವ ಕಂಡು ನಿಂದವಳಯ್ಯ
ನಿಲವನರಿದು, ನೆಲೆಯ ತಿಳಿದು
ಆನುಬದುಕಿದೆನಯ್ಯ ಸಂಗಯ್ಯ
ಅಂಗದ ಸಂಗವ ಹಿಂಗಿ ಅಂಗವಳಿದೆನಯ್ಯ
ಆ ಅಂಗವನಳಿದ ಬಳಿಕ
ಅಣೋರಣೀಯಾನ್ ಮಹತೋಮಹೀಮಾನ್'ಯೆಂಬ
ಶಬ್ದವಡಗಿತ್ತು
....................................
.................................
......................................
ಆನು ಇಹಪರದ ಹಂಗಹರಿದು
ಸುಖವಿಸುಖ ಪ್ರಸನ್ನ ರೂಪಾಯಿತ್ತಯ್ಯ
ಸಂಗಯ್ಯ"[೧೭೬]

ಈ ಮೂರು ವಚನಗಳು ಅಂಗದ ಕುರಿತು ಹೇಳುತ್ತವೆ. ಜೊತೆಗೆ ಶುದ್ಧತೆಯ ಹಂತವನ್ನು ತಲುಪಲು ಹೇಳುತ್ತಾಳೆ. ಶರೀರ ಹೋಗಿ ನಿತ್ಯಾನಂದ ಪರಮ ಸುಖದ ಅಂಶಗಳನ್ನು ಒಳ ಗೊಂಡು, ಆ ಘನದ ಮಹತ್ವವನ್ನು ತಿಳಿದು ಲೌಕಿಕ ಪಾರಮಾರ್ಥಗಳ ಹಂಗುಹರಿದು ನಿಲ್ಲಬೇಕು. ಅಂತಹ ಸಾತ್ವಿಕ ಯೋಚನೆಗಳ ಮೂಲಕ ಮನಸ್ಸು ಗಟ್ಟಿಗೊಂಡು, ಪ್ರಸನ್ನಮೂರ್ತಿಯ

ಸುಖವನ್ನು ಕಂಡೆನು ಎಂದು ಹೇಳುತ್ತಾಳೆ. ಆದರೆ ಹೊರಜಗತ್ತಿನ ಜಂಜಡವನ್ನು ಕಳೆದು ಏಕಾಂತದ ನಿಲುವು ಸಾಧಿಸ ಹೊರಟು ಅನುಭವ ಮಾತುಗಳ ಮೂಲಕ ಅನುಭಾವದೆಡೆಗೆ ಸಾಗಲು ಮುಂದಾಗಿದ್ದಾಳೆ ಎಂಬುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು.

"ಅತೀತ ವಡಗಿ, ನಿರಾಲಂಬದ ಮನದ ಮೂರ್ತಿಯಂತಿಳಿದು
ಮನೋವ್ಯಾಧಿಯಂ ಪರಿಹರಿಸಿಕೊಂಡು,
ಭಾವದ ಸೂತಕವಳಿದು ಬ್ರಹ್ಮದ ನೆಮ್ಮುಗೆಯಂ ತಿಳಿದು
ಮನವಿಶ್ರಾಂತಿಯನೆಯ್ದಿ, ವಿಚಾರದನುಭವವನರಿದು
ವಿವೇಕದಿಂದಾನು ವಿಶೇಷ ಸುಖವ ಕಂಡೆನಯ್ಯಾ
ಸಂಗಯ್ಯಾ, ಬಸವನಿಂದಲಿ"[೧೪೦]

ಈಕೆಯು ವೈಯಕ್ತಿಕದ ಮೂಲಕ ಅನುಭಾವದ ನಿಲುವು ಕಾಣುವ ಪರಿಯನ್ನು ಹೇಳುತ್ತಾಳೆ. ಆಶ್ರಯವಿಲ್ಲದ ಜೀವಕ್ಕೆ ಜ್ಞಾನದ ವೃಕ್ಷ ಆಸರೆಯಾಗಿ, ಮನಸ್ಸಿನ ನೋವು ಪರಿಹರಿಸಿ ಭಾವದಲ್ಲಿ ಸೂತಕ ಕಳೆದು ಪರಬ್ರಹ್ಮದ ಮೂಲಕ ನೆಮ್ಮದಿಯ ಕಂಡು, ಅಧ್ಯಾತ್ಮಿಕ ಸ್ಥಿರತೆ ಬಂದು ನೆಲೆಗೊಂಡಲ್ಲಿ ನಾನು ಸುಖಿಯಾದೆ ಎಂದು ಹೇಳುತ್ತಾಳೆ. ಹಾಗೆ

"ಆಡದ ನುಡಿಯ ನುಡಿದೆನನ್ನ ಮನ ತುಂಬಿ
ಮದದ ಹಂಗು ಹರಿದು, ಮಾತವಳಿದು
ಉಳಿದ ಪ್ರಸಂಗ ಪ್ರಸನ್ನವನರಿದು
ಅರಿಯದ ಮುಕ್ತಿಯ ಮರದು, ಕುರುಹನಳಿದು
ನಾನು ನಿಂದೆನಯ್ಯ ಸಂಗಯ್ಯ"[೧೪೧]

ಈ ವಚನದಲ್ಲಿ ಆಡಬಾರದ ನುಡಿಯನ್ನು ಆಡಿ, ನನ್ನ ಮದದ ಹಂಗು ಹರಿದು ಹೋಗಿದೆ ಮಾತು ನಿಂತಿದೆ. ಹಾಗೆ ಅರುವಿನ ಕಡೆ ಸಾಗಿ ಆಕಾರವಿಲ್ಲದೆ ನಿರಾಕಾರ ಸ್ಥಿತಿಗೆ ಬಂದಿದ್ದೇನೆ ಎಂದು ಹೇಳುವ ಪರಿಯಾಗಿದೆ. ಪರಮಾತ್ಮನ ಇರುವು ತಿಳಿದಾಗ ಹಮ್ಮುಬಿಮ್ಮುಗಳು ನಾಶವಾಗಿ ಸುಖವ ಪಡೆಯಬೇಕು ಎಂದು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಇರವರಿದು ಪರವ ಮರದೆ
ಆ ಪರವನರಿದು ಪರಬ್ರಹ್ಮವ ಕಂಡೆನಯ್ಯ
ಆ ಪರಬ್ರಹ್ಮವ ಸುಯಿಧಾನವ ಮಾಡಿ
ಸುಖವ ಪಡೆದೆನಯ್ಯ ಸಂಗಯ್ಯ"[೧೪೨]

ಇಹ ಸುಖದಲ್ಲಿದ್ದ ನಾನು ಪರಮಾತ್ಮನ ಮರೆತಿದ್ದೆ, ಮರೆತ ಕಷ್ಟವ ತಿಳಿದು ಪರಬ್ರಹ್ಮನನ್ನು ಕಾಣಲು ತವಕಿಸಿದೆ. ಆ ಪರಬ್ರಹ್ಮದ ಇರುವಿಕೆ ತಿಳಿದು, ಎಚ್ಚರಗೊಂಡು ಸುಜ್ಞಾನದ ಸುಖವ ಪಡೆದನು ಎಂದು ತಿಳಿಸುತ್ತಾಳೆ. ಸುಖದುಃಖಗಳಲ್ಲಿ ಯಾರ ಆಶ್ರಯವಿಲ್ಲದೆ ಅನು ಬದುಕಿದೆನು ಎಂದು ಈ ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸುತ್ತಾಳೆ.

"ಎನ್ನ ಕೈಯಳ ಮಾತುವೆನ್ನ ಕೈಯಲಡಗಿತ್ತು
ಎನ್ನ ವಿಧಾನದ ಜ್ಯೋತಿ ವಿವೇಕದಲ್ಲಿಯಡಗಿತ್ತು.
.......................................
.......................................
ಸುಖದುಃಖಗಳ
ಸಂಗಯ್ಯ ಬಸವನೆನ್ನಲ್ಲಿ ಯಡಗಲು"[೧೮೩]

ನನ್ನಲ್ಲಿಯ ಕೆಟ್ಟ ಗುಣಗಳಿಂದ ಕೂಡಿದ ಮಾತುಗಳು ಜ್ಞಾನದಲ್ಲಿ ಅಡಗಿ ಎನ್ನ ಕ್ರಿಯಾತ್ಮಕತೆ ವಿವೇಕದಲ್ಲಿ ಬೆರೆತು, ಸೌಮ್ಯತ್ವದ ಸುಖವ ಕಂಡು ಪರಿಶುದ್ಧಿಯಾದೆ, ನನಗೆ ಭ್ರಮೆಯಿಲ್ಲದೆ, ಮತ್ತು ಭಕ್ತಿಯಲ್ಲದೆ, ಹೋಗಿದ್ದರಿಂದ ಭಾವ ನಿರ್ಭಾವವಾಗಿ ಶರೀರದ ಸೂತಕ, ಮನಸ್ಸಿನ ಸೂತಕ ಕಳೆದು ನಾನು ಪ್ರಕಾಶತೇಜೋ ಮೂರ್ತಿಯನ್ನು ಬೆರೆತು, ಸುಖ ದುಃಖಗಳನ್ನು ಅಳಿದು ಯಾರ ಚಿಂತೆಯಲ್ಲಿ ಕಾಲಕಳೆಯದೆ ಬಸವನು ನನ್ನಲ್ಲಿ ಇರಲು ನನಗೆ, ಯಾರ ಸಹಾಯ ಬೇಕಿಲ್ಲ ಎಂದು ಹೇಳುವ ಸ್ಥಿತಿ ಬಸವನ ಅಗಲುವಿಕೆಯಿಂದ ಬೇಕುಬೇಡಗಳನ್ನು ಗೆಲ್ಲುವ ಆಕಾಂಕ್ಷಿಯಾಗಿ ಅನುಭವದ ಸುಖಸಾಗರದಲ್ಲಿ ಮಿಂದು ಅನುಭಾವದ ನಿಲುವಿಗೆ ಏರಿದ್ದು ಇಲ್ಲಿ ಅಡಕವಾಗಿದೆ. ಹಾಗೆ ಅಂತರಂಗದ ಸುಖದ ಛಾಯೆ ಈಕೆಯಲ್ಲಿ ಮೂಡಿದಾಗ "ಎನಗೇನೆಂಬೆನೆಂಬ ಆ ಸಂದೇಹ ಹರಿದು ಅಪ್ರಮಾಣದೊಳಗೆ ಐಕ್ಯವಾದೆನಯ್ಯ ನಾನು. ಆನು ಅನುಭವ ಸುಖಿಯಾಗಿ ಆ ಸುಖ ತೃಪ್ತಿಯ ಕಂಡು ಬಯಲ ಸುಖವನುಂಡೆನಯ್ಯ ಬಸವಯ್ಯ, ಸಂಗಯ್ಯ ನಾನು ಮುಕ್ತಂಗನೆಯಾದೆನು"[೧೮೪] ಎಂದು ಹೇಳುತ್ತಾ ನೀಲಾಂಬಿಕೆ ಎನ್ನ ಮನದಲ್ಲಿ ಭವದ ಸಂದೇಹ ಹರಿದು, ಐಕ್ಯ ಸ್ಥಿತಿಗೆ ಬಂದು, ನಾನು ಅನುಭವಸುಖಿಯಾಗಿ ಆ ನಿಜಾನಂದ ಪರಮಸುಖದಲ್ಲಿ ತೊಡಗಿ ನಾನು ಬಯಲ ಕಂಡೆನು, ಹಾಗಾಗಿ ನಾನು ಮುಕ್ತಾಂಗನೆಯಾಗಿದ್ದೇನೆ. ಯಾಕೆಂದರೆ ಈ ಭವದ ಬಂಧನದಿಂದ ಬಿಡುಗಡೆಯಾಗಿ, ಸ್ವತಂತ್ರ ವಿಚಾರಕ್ಕೆ ಬಂದದ್ದನ್ನು ನಾನು ಮುಕ್ತಳಾಗಿದ್ದೇನೆ ಎಂದು ಹೇಳಿರಬಹುದು. ಹಾಗಾಗಿ "ನಡೆವ ಕಾಲಿಂಗೆ ಶಕ್ತಿ ನಿಃಶಕ್ತಿಯಾಯಿತ್ತು. ನುಡಿವ ನಾಲಗೆಗೆ ವಚನ ನಿರ್ವಚನವಾಯಿತ್ತು. ಶಬ್ದ ನಿಃಶಬ್ದವಾಗಿ ಪ್ರಾಣ ಪರಿಣಾಮವಾಗಿ ಕಾಯದ ಕುರುಹನಳಿದು ಶಬ್ದ ನಂದಿಯಾದೆನಯ್ಯ

ಸಂಗಯ್ಯ"[೧೮೫] ಇಲ್ಲಿ ಅಜ್ಞಾನ ಅನ್ನುವಂತದ್ದು ಆವರಿಸಿದಾಗ ಶಕ್ತಿಯಿದ್ದರೂ ನಿಃಶಕ್ತಿಯಂತೆ, ಹಾಗೆ ಒಳ್ಳೆಯ ಮಾತನ್ನು ಹೊಂದಿ ಪರಿಪೂರ್ಣತೆಯತ್ತ ಸಾಗಿ ಶಬ್ದ ನಿರಾಕಾರವಾಗಿ ಪ್ರಾಣ ತೃಪ್ತಿಯನ್ನು ಹೊಂದಿ ಕಾಯದ ಸ್ವರೂಪ ಘನವ ಕಂಡು ಜ್ಞಾನದ ಆಗರವಾಗಿದ್ದೇನೆ ಎಂದು ಹೇಳುತ್ತಾಳೆ. ಅದರಂತೆ ಈಕೆ ಆಚಾರಗಳ ಮೂಲಕ ಉನ್ನತಿ ಪಡೆಯಲು ಈ ವಚನದಲ್ಲಿ ಹೀಗೆ ಹೇಳುತ್ತಾಳೆ.

"ಭೃತ್ಯಾಚಾರವಳಿಯ ಭೃತ್ಯವನನುಭವಿಸಿದೆನು
ಅಪ್ರತಿಮಲಿಂಗ ನಿಜಾನಂದ ಸುಖವ ಕಂಡು ಸುಯಿದಾನಿಯಾದನಾದೆನಯ್ಯ
ಎಲೆಯಯ್ಯ ಏನೆಂದೆನ್ನೆ ನಿಮ್ಮ ಮಹದ ಆಯತವ?
ಮಹದನುಭವವ ಕಂಡು ಸುಖಿಯಾದೆನಯ್ಯ ಸಂಗಯ್ಯ"[೧೮೬]

ಈ ಮೇಲಿನ ವಚನದಲ್ಲಿ ಭೃತ್ಯಾಚಾರ ಪಂಚಾಚಾರಗಳಲ್ಲಿ ಒಂದು ನಾನು ಕಿಂಕರತ್ವದಿಂದ ವರ್ತಿಸಿ, ಸೇವೆಗೆ ಭಾಜನನಾಗಬೇಕು ಎಂದು ತಿಳಿಸುವಂತದ್ದು, ಇಲ್ಲಿ ಕೂಡ ನೀಲಾಂಬಿಕೆ ಸದಾ ಸೇವೆಗೆ ಅರ್ಪಿಸುವ ಗುಣದಿಂದ ಮಹಾ ಅನುಭವ ಸಿಕ್ಕಿತು. ಇಂತಹ ದೃಢವಾದ ಭಕ್ತಿಯಿಂದ ಮಹಾಲಿಂಗದಲ್ಲಿ ನಿಜಾನಂದದ ಸುಖವ ಕಂಡು ಸದಾ ಎಚ್ಚರದಿಂದ ಶಿವಯೋಗದಲ್ಲಿ ಮಗ್ನನಳಾಗಿ ಭಾವಶೂನ್ಯವಾಗಿ, ಶಿವಸ್ವರೂಪ ಜ್ಯೋತಿಯಂತೆ ಅಖಂಡವಾದ ಮಹದನುಭವ ನನ್ನನ್ನು ಸುಖಿಯಾಗಿಸಿದೆ ಎಂದು ಹೇಳುತ್ತಾಳೆ. ಆದರೆ ಮಾಯದ ಮಂಕು ಹರಿದು ವಿಶ್ವಾತ್ಮಳು ಆಗುವ ಪರಿಯನ್ನು ಎಂದು ಈ ಕೆಳಗಿನ ವಚನದಲ್ಲಿ ಕಾಣುತ್ತೇವೆ.

"ಮಾಯದ ಮನದ ಕರ್ಮದ ಹಂಗುಹರಿದು
ಅನುಭವವ ನನ್ನಲ್ಲಿಯಡಗಿಸಿ
ನಾನು ನಮ್ಮಯ್ಯನಲ್ಲಿ ನಮಸ್ಕಾರವನಳಿದೆನಯ್ಯ
ನಮಸ್ಕಾರವನಳಿದು ನಮೋ ವಿಶ್ವರೂಪಳಾದೆನಯ್ಯ
ಸಂಗಯ್ಯ"[೧೮೭]

ಇಲ್ಲಿ ಮನಸ್ಸಿನ ಕತ್ತಲೆ ಹಾಗೂ ಕರ್ಮದ ಕಲ್ಮಶ ಭಾವನೆಯನ್ನು ಕಿತ್ತು ಹಾಕಿ, ಉದಾರತ್ವದ ಗುಣಗಳಿಂದ ಸದ್ಗುಣಗಳ ಪಡೆದು, ಅನುಭವ ಪಡೆದೆ. ಹಾಗೆ ಪತಿಯಲ್ಲಿ ಶರಣು ಹೋಗಿ, ನಿರಾಳತ್ವದ ಸ್ಥಿತಿಗೆ ಬಂದ ಮೇಲೆ ಈ ಜಗತ್ತಿನ ಎಲ್ಲವನ್ನು ಮರೆತು, ನಾನು ವಿಶ್ವಾತ್ಮನೆಯ ಸ್ಥಿತಿಗೆ ಬಂದೆ ಎಂದು ಹೇಳುತ್ತಾ, ಭಾವ ಪ್ರಸನ್ನತೆಯ ರೂಪ ತಾಳಿದ್ದು ಈ ವಚನದಲ್ಲಿ ನೋಡಬಹುದು.

"ಮೌಕ್ತಿಕದ ಮಂಟಪ ಕಟ್ಟಿ
ಮನೆಯೊಳಗೆ ತೋರಣಗಟ್ಟಿದವು
ಮಾಣಿಕ್ಯದ ವರ್ಣದ ತೋರಣವು
ಆ ಮಾಣಿಕ್ಯದ ವರ್ಣದ ತೋರಣವ ಕಂಡು
ಆ ತೋರಣವ ಸರಗೊಳಿಸಿ
ಸರದ ಮುಂದೆ ಮಧ್ಯ ಸ್ವರೂಪವಾಗಿ
ಆನು ನಿಜ ಪರಿಣಾಮಿಯಾದೆನಯ್ಯ ಸಂಗಯ್ಯ"[೧೮೮]

ಪ್ರಕೃತಿಯಲ್ಲಿಯ ಮುತ್ತು, ಸುಂದರವಾಗಿ ಮತ್ತು ಬೆಲೆಬಾಳುವುದಾಗಿದೆ. ಹಾಗೆ ಈ ವಚನದಲ್ಲಿ ನೀಲಾಂಬಿಕೆ ಈ ಶರೀರವೆಂಬ ಮುತ್ತನ್ನು ಮಂಟಪ ಮಾಡಬೇಕು. ಜ್ಞಾನದಿಂದ ಎಂದು ಹೇಳುತ್ತಾ, ಅಂತ ದಿವ್ಯಪ್ರಕಾಶದ ಮೂಲಕ ಮಾಣಿಕ್ಯ ತೋರಣವ ಮಾಡಿ, ಆ ತೋರಣವು ಪರಿಣಾಮ ಎತ್ತರಕ್ಕೆ ಏರಿದಾಗ ಅಲ್ಲಿ ಸಾಧನೆಯ ಹಂತದ ಯಶಸ್ಸು ಕಾಣಲು ಸಾಧ್ಯ. ಹಾಗೂ ಐಕ್ಯದ ನಿಃಶೂನ್ಯಕ್ಕೆ ಬರಲು ಕಾರಣವಾಗುತ್ತೆ ಹಾಗೆ ಅನುಭವದ ಮುತ್ತು, ಅನುಭಾವಿಕವಾದ ಮೇಲೆ ಮಾಣಿಕ್ಯವಾಗಿ ನಿಲ್ಲುವ ಸ್ಥಿತಿ ಆಗಿದೆ. ಅದರಂತೆ ನೀಲಾಂಬಿಕೆಯಲ್ಲಿಯ ಹಂತ ಹಂತವಾದ ಅನುಭಾವಿಕ ನೆಲೆಯನ್ನು ಈ ಮೂಲಕ ಗುರುತಿಸಬಹುದು. ನೀಲಾಂಬಿಕೆಯಲ್ಲಿ ಕಾಯ ಮಂತ್ರಕಾಯವಾದ ಬಗೆಯನ್ನು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾಳೆ.

"ಮೃತವಳಿದು ಕಾಯವುಳ್ಳವಳಾದೆ
ಅಮೃತವಿಲ್ಲದ ರಸವನುಂಡು ಅಮೃತಕಾಯಳಾದೆ
ವಿಭ್ರಮದ ಸೂಚನೆಯ ಹಂಗಿಲ್ಲದೆ
ಪ್ರಣವ ಕಾಯಿಯಾನಾದೆನಯ್ಯ ಸಂಗಯ್ಯ"[೧೮೯]

ಈ ವಚನ ಶಿವಯೋಗದ ತುತ್ತತುದಿಗೆ ಏರಿದ್ದನ್ನು ಹೇಳುತ್ತದೆ. ಇಂತಹ ಈ "ಶಿವಯೋಗವು ಅತ್ಯಂತ ಪುರಾತನವಾದ ಭಾರತೀಯ ಯೋಗವಾಗಿದೆ. ಲಿಂಗ ಪೂಜೆಯು ಅದರ ಅಂಗ ವಾಗಿದೆ."[೧೯೦] ಎಂದು ವ್ಹಿ.ಜಿ.ಮಾರಿಹಾಳ ತಿಳಿಸುತ್ತಾರೆ. ಮನುಷ್ಯ ಶಿವಯೋಗದಿಂದ ಭಾವಾತೀತ ನಾಗುತ್ತಾನೆ. ಯೋಚಿಸುವ ಗುಣ ಒಡಲಲ್ಲಿ ತುಂಬಿ ಅನುಭಾವದ ಹಂತಕ್ಕೆ ಏರಿದ್ದು ಶಿವಯೋಗ ದಿಂದ ಎನ್ನಬಹುದು. ಶಿವಯೋಗದಿಂದ ಪ್ರಯೋಜನ ಏನು ಎಂಬುದನ್ನು ವ್ಹಿ.ಜಿ.ಮಾರಿಹಾಳರು ಹೀಗೆ ಅಭಿಪ್ರಾಯಪಡುತ್ತಾರೆ. "ಶಿವಯೋಗದ ಮೂಲ ಉದ್ದೇಶವು ಸಾಕ್ಷಾತ್ಕಾರ, ಸಾಮರಸ್ಯ, ಅತ್ಯಂತಿಕ ಸತ್ಯದ ಅರಸುವಿಕೆಯೇ ಆಗಿದೆ. ನಮಗೆ ಬೇಕಾದ ಆತ್ಮಸಾಂತಿ, ಆತ್ಮಶಕ್ತಿ ಸ್ವಾತಂತ್ರ್ಯಗಳು ಈ ಯೋಗದಿಂದ ಸಾಧ್ಯವಾಗಿದೆ."[೧೯೧]

ಶಿವಯೋಗದ ಹಂತಕ್ಕೆ ಏರಿದಾಗ ಸಾವನ್ನು ಅಪ್ಪಿದ ರೀತಿಯಲ್ಲಿ ಕಾಯ ಕಾಣುತ್ತದೆ. ಯಾಕೆಂದರೆ ಯೋಗದ ಮೂಲಕ ಚಕ್ರಗಳ ಶುದ್ಧಿಸಿಕೊಂಡು ಬ್ರಹ್ಮರಂಧ್ರಕ್ಕೆ ಬಂದು ನಂತರ ಪಶ್ಚಿಮ ಶಿಖಾಚಕ್ರದಲ್ಲಿ ನೆಲೆಗೊಂಡಾಗ ಅಮೃತಪಾನವ ಸವಿದು, ಗಟ್ಟಿಯಾದ ಕಾಯವಾಗಿ, ಭ್ರಮೆಯ ನಿರಸನವಿಲ್ಲದೆ, ಜೊತೆಗೆ ಜಡತ್ವದ ಹಂಗು ಇಲ್ಲದೆ ಓಂಕಾರ ರೂಪಿನ ಕಾಯವಾಗಿ ಪರಿವರ್ತನೆಯಾದದ್ದು, ಮೃತನಂತೆ ಕಂಡರೂ ಕಾಯದಲ್ಲಿ ಓಂಕಾರನಾದದ ಉಸಿರು ನೆಲೆಯಾಗಿ ನಿರಾಕಾರದ ಸ್ಥಿತಿಯು ಕಾಣುತ್ತದೆ. ಹಾಗೆ "ಎಸಳಕ್ಷರವ ಕಂಡು ಎಸಳ ಬಗೆಯ ತಿಳಿದು ನಿಜಸುಖಿಯಾದೆನಯ್ಯ ನಾನು ಇಷ್ಟಪ್ರಾಣ ಭಾವದಲ್ಲಿ ಪ್ರಸನ್ನ ಮೂರುತಿಯ ನೆಲೆಯ ಕಂಡೆನಯ್ಯ ಸಂಗಯ್ಯ"[೯೮೨] ಜ್ಞಾನ ಪ್ರಭೆಯತ್ತ ಹೊರಟ ಈಕೆ ಲಿಂಗಮುಖವಾಗಿ, ಇಷ್ಟ, ಪ್ರಾಣ, ಭಾವಲಿಂಗಗಳಲ್ಲಿ ತನ್ಮಯರಾಗಿ, ಈಡಾ, ಪಿಂಗಳ, ಸುಷಮ್ನ ನಾಡಿಗಳ ಮುಖಾಂತರ ಜಾಗ್ರತಳಾಗಿ ಮಹಾಮಂತ್ರವಾದ ಓಂನಮಃ ಶಿವಾಯ ಎಂಬ ಷಡಕ್ಷರಿ ಜಪವ ಮಾಡಿ, ಶಿವಯೋಗ ಔನ್ನತ್ಯವನ್ನು ತಿಳಿದು ಸಾಧಿಸಿದಾಗ ಅಂತಹ ಪ್ರಸನ್ನ ಮೂರ್ತಿಯ ನೆಲೆ ಸಿಗುತ್ತದೆ ಎಂದು ಈ ವಚನದಿಂದ ತಿಳಿಯಬಹುದು. ಆದರೆ ನೀಲಾಂಬಿಕೆಯಲ್ಲಿಯ ಭಾವುಕತೆಯ ಮೂಲಕ ಆಕೆಯಲ್ಲಿ ತನ್ನದೆಯಾದ ಅನುಭಾವಿಕ ಅಂಶಗಳನ್ನು ತಾತ್ವಿಕ ಹಿನ್ನೆಲೆಯಲ್ಲಿ ಹೇಳುತ್ತಾ ಭಕ್ತಸ್ಥಲದಿಂದ ಐಕ್ಯಸ್ಥಲದ ಸ್ಥಿತಿಯ ಹಂತವನ್ನು ಇಲ್ಲಿ ವ್ಯಕ್ತಪಡಿಸುವುದನ್ನು ಕಾಣುತ್ತೇವೆ.

"ಅರುಹನರಿಯಲು ಕುರುಹ ಮರೆಯಲೇಬೇಕು
ಅರುಹನುಗೊಳಿಸಲು
ಆನು ಪ್ರಸನ್ನ ಮೂರ್ತಿಯ ಪಡೆದೆನಯ್ಯ
ಆನು ಉಭಯವಳಿದು ನಿರಾಭಾರಿ ಯಾದೆನಯ್ಯ
ನಿರ್ಮಲ ನಿಜವ ಕಂಡು ಮುಕ್ತಿಪದವ ಪಡೆದೆನಯ್ಯ ಸಂಗಯ್ಯ"[೯೮೩]

ಈ ಮೇಲಿನ ವಚನದಲ್ಲಿ ಜ್ಞಾನವನ್ನು ತಿಳಿದುಕೊಳ್ಳಲು ಕುರುಹ ಮರೆಯಬೇಕು, ಯಾಕೆಂದರೆ ಅಲ್ಲಿ ಬೇಕು ಬೇಡೆಂಬುದು ಇರುವುದಿಲ್ಲ. ಹಾಗಾಗಿ ಎತ್ತರಕ್ಕೆ ಏರಿದ ಈಕೆ ಅಂತಹ ಸ್ಥಿತಿಯನ್ನು ಕಂಡು ಪ್ರಸನ್ನಮೂರ್ತಿಯ ಚಿತ್ಕಳೆಯಿಂದ ಉಭಯತ್ವ ಅಳಿದು ನಿರಾಭಾರಿಯ ಹಂತಕ್ಕೆ ಬಂದು ನಿರ್ಮಲತ್ವದ ನಿಜವ ಕಂಡು ಮುಕ್ತಿಯ ಪಥಕ್ಕೆ ಹೋದೆನು ಎಂದು ಹೇಳುತ್ತಾಳೆ. ಇಲ್ಲಿಯ ಮುಕ್ತಿ ಎಂದರೆ ನಿಜಸ್ಥಿತಿಯನ್ನು ತಿಳಿಯುವುದು ಆಗಿದೆ. ನಂತರದಲ್ಲಿ ಶೂನ್ಯತ್ವದ ಸ್ಥಿತಿಯ ಕುರಿತು ಈ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಅನಳಿದೆನು ನೀನಳಿದೆನೆಂಬ ಶಬ್ದವಡಗಿ ನಿಃಶಬ್ದವಾಗಿ
ನಿಃಶೂನ್ಯ ಮಂಟಪದಲ್ಲಿ ನಿಂದು

ನಾನು ಉರಿಯುಂಡ ಕರ್ಪೂರದಂತಾದೆನಯ್ಯ
ಕರ್ಪೂರ ಉರಿಯುಂಡು ಕರವಳಿದು ಸುಖವ ಉಡಗಿದೆನಯ್ಯ
ಸುಖವಡಗಿ ದುಃಖ ನಿರ್ದ್ವಂದ್ವವಾಗಿ
ನಿರೂಪು ಸ್ವರೂಪವಾಯಿತ್ತಯ್ಯ ಸಂಗಯ್ಯ"[೧೯೪]

ಈ ವಚನದಲ್ಲಿ ನೀಲಾಂಬಿಕೆ ಭೇದಭಾವ ಆಧ್ಯಾತ್ಮದಲ್ಲಿ ಕಾಣಲಾಗದು. ಯಾಕೆಂದರೆ ಅಂತರಾತ್ಮ ಒಂದೇ ಇದೆ. ಹಾಗಿದ್ದಲ್ಲಿ ಶಬ್ಧವೇ ಇಲ್ಲದಾಗ, ನಿರಾಕಾರ ಮಂಟಪದಲ್ಲಿ ನಿಂದು, ನಾನು ಉರಿಯುಂಡ ಕರ್ಪೂರದಂತೆಯಾದೆ ಆದರೆ, ಕರ್ಪೂರ ಅಗ್ನಿ ಸ್ಪರ್ಶದಿಂದ ಇಲ್ಲವಾಗಿದೆ. ಅದರಂತೆ ದೇಹ ಜ್ಞಾನದಲ್ಲಿ ಬೆರೆತಾಗ, ಅಜ್ಞಾನ ಕಾಯ ಸುಟ್ಟು, ನಿರ್ಮಲತ್ವದ ಕಾಯ ಉಳಿದು ಸುಖವ ಕಂಡು, ಅಂತಹ ನಿರೂಪ ಸ್ಥಿತಿ ನಾನು ಆಗಿದ್ದೇನೆ ಎಂದು ಹೇಳುತ್ತಾಳೆ. ಈಕೆಯಲ್ಲಿ ಇಂತಹ ನಿರಾಕಾರ ಸ್ಥಿತಿಯಿಂದ ಧನ್ಯತೆಯ ಭಾವ ಈಕೆಯಲ್ಲಿ ತುಂಬಿರುವ ಸಾಧ್ಯತೆ ಇದೆ. ಹಾಗೆ "ಏಕಸಂಗ ನಿಸ್ಸಂಗವಾಗಿ ಪ್ರಸಾದದ ಹಂಗಿಗಳಲ್ಲ ಪ್ರಣವದ ಅಕ್ಷರ ರೂಪವಡಗಿ ನಿಂದು ಏಕೋ ದೇಹವಾಯಿತ್ತೆನಗೆ"[೧೯೫] ಎಂದು ಹೇಳುತ್ತಾಳೆ. ಆದರೆ ಈಕೆಯಲ್ಲಿಯ ಅಂತಃಸುಖವೂ ಹೆಚ್ಚಿ, ಅರ್ಪಿತ ಮನೋಭಾವದಿಂದ ಓಂಕಾರದಲ್ಲಿ ಅಡಗಿ ನಿರಾವಯಸ್ಥಿತಿಗೆ ಬಂದಿದ್ದನ್ನು ಹೇಳುತ್ತಾಳೆ. ಹಾಗೆ ಮುಂದುವರೆದು ಏಕತ್ವದ ನೆಲೆಯಲ್ಲಿ ಯೋಚಿಸುವ ಪರಿಯನ್ನು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾಳೆ.

"ಏಕಾಕಾರ ನಿರಾಕಾರವಾಯಿತ್ತಯ್ಯ
ಏಕಾಕಾರ ಶಿವಸುಖವಾಯಿತ್ತಯ್ಯ
ಅಧಿಕದ ತನುವನರಿದು
ಆನು ಬದುಕಿದೆನಯ್ಯ ಸಂಗಯ್ಯ"[೧೯೬]

ಈ ನಿರಾಕಾರ ಸ್ಥಿತಿ ಬಂದಲ್ಲಿ "ಪ್ರಾಣವಿಲ್ಲ ಪ್ರಸಾದವಿಲ್ಲ ಪರಿಣಮದರುಹು ಮುನ್ನವೆಯಿಲ್ಲ ಪರವಶದನುಭಾವವ ಕಂಡು ಅನುಭವಸುಖಿಯಾದೆನಯ್ಯ ಆನು ಅನುಭವ ಪರಿಣಾಮಿಯಾದೆನಯ್ಯ ಸಂಗಯ್ಯ"[೧೯೭] ಎನ್ನುತ್ತಾಳೆ. ಹಾಗೆ ನಾನು ಅನುಭವಶೀಲಳಾಗಿ ಮುಕ್ತಿಯ ಹಂತಕ್ಕೆ ಹೊರಟವಳು ಎಂದು ಈ ಕೆಳಗಿನ ವಚನದಲ್ಲಿ ಹೇಳಿಕೊಂಡಿದ್ದಾಳೆ.

"ಶಿವತತ್ವದ ಕಾಣದ ಮುನ್ನ
ಅನುಭವ ತತ್ವವ ಕಾಣಲಾಯಿತ್ತಯ್ಯಾ ಬಸವಾ
ಆನು ಅನುಭವ ಶೀಲವನರಿದು
ಮುಕ್ತಾಂಗನೆಯಾದೆನಯ್ಯಾ ಬಸವಾ

ಆನು ಮುಕ್ತಾಂಗನೆಯಾಗಿ ನಿಜದಲ್ಲಿ ನಿಲಲು
ಬಸವನ ಕುರುಹು ತಿಳಿದು
ಇಷ್ಟಮೂರ್ತಿಯ ನಿಷ್ಠೆಯನರಿವೆನಯ್ಯಾ ಸಂಗಯ್ಯಾ"[೧೯೮]

ನೀಲಾಂಬಿಕೆ ಕಲಿಯುಗ, ಕೃತಯುಗ, ದ್ವಾಪರಯುಗ ಹಾಗೂ ತ್ರೇತಾಯುಗದಲ್ಲಿ ಹುಟ್ಟಿ ಬೆಳೆದೆನು ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಕಲಿಯುಗದಲ್ಲಿ ಹುಟ್ಟಿ ಆ ಕಲಿಯುಗದಲ್ಲಿ ಬೆಳೆದೆನಯ್ಯ
..................................................
..................................................
ಎನಗೆ ಪ್ರಾಣವಿಲ್ಲ ಎನಗೆ ಕಾಯವಿಲ್ಲ
ನಾನೇ ತರಲ್ಲಿಯೂ ಹೊಂದಿದವಳಲ್ಲ
ಅಜಾತನ ಕಲ್ಪಿತ ಸಂಬಂಧವಾಗಲು
ಆನು ನಿಮ್ಮೈಕ್ಯದಲ್ಲಿ ನಿಂದೆನಯ್ಯ ಸಂಗಯ್ಯ"[೧೯೯]

ನೀಲಾಂಬಿಕೆ ಈ ವಚನದಲ್ಲಿ ಅನುಭಾವದ ಎತ್ತರಕ್ಕೆ ಏರಿದ ಮೇಲೆ ಬಹುಶಃ ಕಲ್ಪಿತ ರೀತಿಯಲ್ಲಿ ಈ ವಚನ ಹೇಳಿರಬೇಕು. ಏಕೆಂದರೆ ಕಲಿಯುಗ, ಕೃತಯುಗ, ದ್ವಾಪರಯುಗ, ತ್ರೇತಾಯುಗದಲ್ಲಿ ಹುಟ್ಟಿ, ಬೆಳೆದಿದ್ದರಿಂದ ಎನಗೆ ಪ್ರಾಣವಿಲ್ಲ. ಹಾಗೂ ಶರೀರವಿಲ್ಲ ಎಂಬುದು ನಿರಾಕಾರ ಸ್ಥಿತಿಯನ್ನು ಹೇಳುತ್ತದೆ. ಹಾಗೆ ಮುಂದುವರೆದು ನಾನು ಏತರಲ್ಲಿಯೂ ಕೂಡಿಕೊಂಡಿಲ್ಲ. ಆದರೆ ಪರಮಾತ್ಮನ ಕಲ್ಪಿತ ಸಂಬಂಧವಾಗಿದ್ದರಿಂದ, ನಾನು ಐಕ್ಯ ಸ್ಥಿತಿಗೆ ಬಂದು ನಿನ್ನೊಳಗೆ ಬೆರೆತಿದ್ದೇನೆ ಎಂದು ಹೇಳುತ್ತಾಳೆ. ಈಕೆಯ ಸಹಜಸ್ಥಿತಿ, ಜೊತೆಗೆ ಭೇದವಿಲ್ಲದ ನೋಟ ಹಾಗೂ ನಿರ್ಭಯದ ಸ್ಥಿತಿ ಕೂಡಿದ್ದರಿಂದ ಅಜಾತನೊಂದಿಗೆ ಬರೆಯಲು, ಮುಂದಾಗುವ ಪರಿ ಈಕೆಯದಾಗಿದೆ.

ನೀಲಾಂಬಿಕೆ ಎಲ್ಲ ಸ್ಥಿತಿಯನ್ನು ಮೀರಿದ ವಿಚಾರವನ್ನು ವ್ಯಕ್ತಪಡಿಸಿ ತಾನು ಬಯಲಲ್ಲಿ ಬಯಲಾಗುವುದನ್ನು ಕೆಳಗಿನ ವಚನದಲ್ಲಿ ಅಭಿವ್ಯಕ್ತಿಸಿದ್ದಾಳೆ.

"ಮುಯ್ಯೂರ ಮನೆಯೊಳಗೆ ನಾನು ಸಂಸಾರವ ಮಾಡುತ್ತಿರಲು
ಮೂವರು ದಿಬ್ಬಣಿಗರು ಬಂದು
ಮುಖಕನ್ನಡಿಯ ತೋರಿ ಮುದ್ದುಗೈಯಲು
ಆನು ಮೂಲ ಪ್ರಣವಸ್ವರೂಪಳಾದೆನು
........................................

..........................................

తెరెహిల్లదిర్దేనయ్య సంగయ్య నిమ్మల్లి

ಬಸವಯ್ಯನೆನ್ನಲ್ಲಿ ಅಡಗಲು"[೨೦೦]

ಈ ವಚನ ಬೆಡಗಿನ ಸ್ವರೂಪವನ್ನು ಹೋಲುತ್ತದೆ. ಈ ಶರೀರವನ್ನು ಅಣವಮಲ ಮಾಯಮಲ, ಕಾರಣಿಕ ಮಲತ್ರಯಗಳಿಂದ ಕೂಡಿದ ಶರೀರ ಶುದ್ಧಗೊಳಿಸಲು ಗುರು, ಲಿಂಗ, ಜಂಗಮರ ಕಾರುಣ್ಯಕ್ಕೆ ಪಾತ್ರಳಾಗಿ, ಈ ಶರೀರದ ಮೋಹ ಕಳೆದು, ಲಿಂಗ ಮುಖೇನ, ಮನಶುದ್ಧಗೈದು ಅರ್ಚನೆ, ಅರ್ಪಣೆ ಅನುಭಾವದ ಮೂಲಕ ಪೂಜಿಸಿ, ನಾನು ಓಂಕಾರ ಸ್ವರೂಪಳಾದೆನು. ನನ್ನ ಸಕಲ ಕಾರ್ಯಗಳಲ್ಲಿ ಹಿತವಾಗುವಂತೆ ಸುಖವ ತೋರಿದ ಅಂತಹ ಘನವ ನೆನೆಯುತ್ತಾ, ಉರಿಯುಂಡ ಕರ್ಪೂರದಂತೆ ಆ ಘನದಲ್ಲಿ ಬೆರೆತು ಬಯಲು ಕಂಡೆನು ಇದಕ್ಕೆ ಬಸವನು ಎನ್ನಲ್ಲಿ ಅಡಗಲು ನಾನು ನಿರಾಕಾರ ಸ್ಥಿತಿ ತಲುಪಿದೆ ಎಂದು ಹೇಳುತ್ತಾಳೆ. ಹಾಗೆ ಪ್ರೊ.ಗುಂಭೀಶಯ ಈ ವಚನಕ್ಕೆ ಹೀಗೆ ಅಭಿಪ್ರಾಯಪಡುತ್ತಾರೆ. "ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳನ್ನವಲಂಬಿಸಿದ ನನಗೆ ಇಷ್ಟ, ಪ್ರಾಣ, ಭಾವ, ಲಿಂಗಗಳೆಂಬ ಮೂವರು ದಿಬ್ಬಣಿಗರು ಅಂದರೆ ವರಗಳು ಬಂದು ನನ್ನ ನಿಜದರ್ಶನ ಮಾಡಿಸಿ ನನ್ನಲ್ಲಿ ಆನಂದಿಸಲು ನಾನು ನಾನಾದೆಂಬುವ ಮೂಲದ ಮಹಾತ್ಮ ಸ್ವರೂಪವನ್ನರಿತು ಆ ಮಹಾ ಆತ್ಮಸ್ವರೂಪಳಾದೆನು. ಭವದಲ್ಲಿ ಒಂದು ಹೆಣ್ಣು ಬಾಲ್ಯಾವಸ್ಥೆಯಲ್ಲಿ ತಂದೆ, ಯೌವ್ವನಾವಸ್ಥೆಯಲ್ಲಿ ಪತಿ, ಮುಪ್ಪಾವಸ್ಥೆಯಲ್ಲಿ ಸುತನನ್ನು ಆಶ್ರಯಿಸಿ ಭವದಿಂದ ಬಿಡುಗಡೆಯಾಗುವಂತೆ ಇಷ್ಟ, ಪ್ರಾಣ, ಭಾವಲಿಂಗಗಳನ್ನು ಆಶ್ರಯಿಸಿ ಅಪ್ರತಿಮ ನಿಜಸುಖವನನುಭವಿಸಿ ಉರಿಯುಂಡ ಕರ್ಪೂರದಂತೆ ಬಯಲಭಾವಿಯಾಗಿ ಬಯಲಲ್ಲಿ ಬಯಲಾಗಿ ನಿತ್ಯಾನಂದದ ನಿಜ ಸುಖದಲ್ಲಿ ಒಂದಾಗಿರುವೆನೆಂದು ಹೇಳಿಕೊಂಡಿದ್ದಾಳೆ."[೨೦೧]

ನೀಲಾಂಬಿಕೆಯ ಒಲವು ತನುಶುದ್ಧ, ಮನಶುದ್ಧ ಭಾವಶುದ್ಧತೆಯ ಕಡೆಗೆ ಸಾಗಿದ್ದು, ನಂತರದಲ್ಲಿ ಈಕೆ ಪರಿಶುದ್ಧತೆ ಪಡೆದಿದ್ದೇನೆ, ಇನ್ನೂ ಬಯಲಿನ ಮಾರ್ಗವೇ ನನ್ನ ಅಂತಿಮ ಗುರಿ ಎಂದು, ನಿಜವಾದ ಶರಣಪಥ ಅನುಭವಿಸಿ, ವಿಷಯವಾಸನೆಗಳನ್ನು ಕಳೆದುಕೊಂಡು ನನಗೆ ಈ ಲೋಕದ ಭಾಷೆಗಳಿಂದ ದೂರವಾಗುವಿಕೆಯ ಹಂತ ಈ ಮೇಲಿನ ವಚನವಾಗಿದೆ. ಮನಸ್ಸು ನೊಂದಿದೆ, ಬೆಂದಿದೆ, ಅನುಭವಿಸಿದೆ. ಹೀಗಿದ್ದಾಗಲೂ ನನ್ನ ಅಂತಿಮ ತೀರ್ಮಾನ ಬಯಲು ಕಾಣುವುದು ಎಂದು ಹೇಳುವ ಪರಿ ಒದಗಿದಾಗ ಆಕೆಯ ಬದುಕಿನಲ್ಲಿ ನಡೆದ ಅನುಭವ ಅನುಭಾವಿಕ ನೆಲಗಳನ್ನು ಕಂಡ ಈಕೆ ಈ ವಚನವನ್ನು ಹೇಳಿರಬೇಕು ಎನಿಸುತ್ತದೆ. ಆಗ ಈ ದೇಹ ಅನಿಶ್ಚಿತತೆ ಎಂದು ತಿಳಿದಾಗ ಈ ಕೆಳಗಿನ ವಚನಗಳನ್ನು ಹೇಳಿರಬಹುದು.

“ಎಸರ ಪಂಜರದ ಪಕ್ಷಿಯೆ ನೀನೆಲ್ಲಿ ತೋರಿ ಎಲ್ಲಿಯಡಗಿದೆ?
ಎತ್ತಳ ಭ್ರಮೆ ಎತ್ತಳನು ಕೂಲತೆ
ಎನಗೆತ್ತಳ ಮಾಯದ ಸಂಗವಯ್ಯ?
ನಾನೆತ್ತಲ? ಬಸವನೆತ್ತ?
ಮನವೆತ್ತ? ತನುವೆತ್ತ
ಸಂಗಯ್ಯನೆತ್ತ ಹೋಗತ್ತ
ಎಸಳು ಬಿಳಿದು ಆ ಎಸಳ ಕಂಪಿನ ವರ್ಣದ ಮುಂದೆ
ಕಂಪಿನ ಕುಸುಮವ ನೋಡ ನೋಡ ಹೋದರೆ
ಆ ಎಸಳೆಸಳಿಗೆ ಬಂದು ತುಂಬಿಗಳ ಒಳಗವ ಮೂರುತಿ
ಗೂಡಿದರು........................................
................ಆನುಬದುಕಿದೆನಯ್ಯ ಸಂಗಯ್ಯ
ಎಸಳೆಸಲ ಮಾಡಿಸಲು
..............................................
..............................................
ಆ ಬಯಲಿಂಗೆ ಈ ಬಯಲ ಸುಖವ ಕೂಡಿಸಿ
ಸುಖಪರಿಣಾಮಿಯಾದೆನಯ್ಯ ಸಂಗಯ್ಯ”[೨೦೨]

ಈ ವಚನಗಳ ಮೊದಲ ಮೂರು ಸಾಲುಗಳು ಸುಂದರವಾದ ಗರಿಗಳಿಂದ ಕೂಡಿದ ಪಕ್ಷಿಯೇ ನೀನು ಎಲ್ಲಿ ಇದ್ದಿಯಾ, ಎಲ್ಲಿ ಅಡಗಿದೆಯಾ ಎಂದು ಬಸವಣ್ಣನನ್ನು ಸಂಬೋಧಿಸಿದರೆ ಹೂವಿನ ಪಕಳೆ ಬಿಳಿದು, ಕಂಪಿನ ವರ್ಣದ ಕುಮದ ಸ್ವರೂಪ ಬಸವಣ್ಣ, ಬಿಡಿ ಬಿಡಿಯಾದ ಹೂವೆ ಎಂದು ಪರಿಮಳ ರೂಪಿಯಾದ ಬಸವಣ್ಣನ ಅಗಲುವಿಕೆಯನ್ನು ಚಿತ್ರಿಸುತ್ತಾಳೆ. ಅಕೆಯ ಅನುಭಾವಿಕ ಪದಗಳ ಮೂಲಕ ನಾನು ಎತ್ತ, ಬಸವನತ್ತ ಎಂದು ಹೇಳುವ ಮೂಲಕ ತನುಮನ ಆತನಲ್ಲಿ ಕೂಡಿದ್ದು ಆಗಿದೆ. ಆದ್ದರಿಂದ ಬಯಲ ಕಾಣಬೇಕು. ಪರಿಮಳವಿದ್ದಲ್ಲಿ ಕುಸುಮಕ್ಕೆ ಬೆಲೆ, ಅಲ್ಲಿ ದುಂಬಿಗಳ ಸ್ನೇಹ ಹೇಗೊ, ಆ ನಿರಾಕಾರ ಮೂರ್ತಿಯ ಇರುವ ತಿಳಿಯಲು ನಾನು ಬದುಕಿದೆ. ಆ ಪರಾತ್ಪರನ ಇರುವಿಕೆ ಕಂಡು ಬಯಲು ಕಾಣುವೆ ಎಂತಹ ಬಯಲು ಎಂದರೆ ಬಯಲಲ್ಲಿ ಬಯಲ ಕೂಡಿಸಿದರೆ ನಿರ್ಭಯಲ ಸ್ಥಿತಿ ತಲುಪಿ ಸುಕ ಪರಿಣಾಮಿಯಾದೆನಯ್ಯ ಎಂದು ಹೇಳುತ್ತಾಳೆ. ಈಕೆಯಲ್ಲಿಯ ಭಾವರಹಿತವಾದ ಬದುಕು ಮತ್ತು ಕುರುಹು ಅಳಿದ ಸ್ಥಿತಿ ಈಕೆಯಲ್ಲಿಯ ಅನುಭಾವದ ಪಕ್ವತೆಯನ್ನು ತೋರಿಸುತ್ತದೆ.

ನೀಲಾಂಬಿಕೆ ನಿರಾಕಾರ ಸ್ಥಿತಿಯ ತಲುಪಿದ ಮೇಲೆ ಈಕೆಯ ಮನದಾಳದ ಆಸೆಯನ್ನು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಎದೆ ಬಿರಿವನ್ನಕ್ಕರ, ಮನದಣಿವನ್ನಕ್ಕರ,
ನಾಲಗೆ ನಲಿದೋಲಾಡುವನ್ನಕ್ಕರ,
ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯಾ,
ಶಿವನಾಮಾಮೃತದ ತಂದೆರೆಸು ಕಂಡಯ್ಯ
ಶಿವನಾಮಾಮೃತದ ತಂದೆರೆಸು ಕಂಡೆಲೆ ಹರನೆ
ಬಿರಿ ಮುಗುಳಂದದ ಶರೀರ
ನಿಮ್ಮ ಚರಣದ ಮೇಲೆ ಬಿದ್ದುರುಳುವೆ ಸಂಗಯ್ಯ"[೨೦೩]

ನೀಲಾಂಬಿಕೆಯಲ್ಲಿಯ ಅನುಭವ ಮತ್ತು ಅನುಭಾವ ಹಂತ ಹಂತವಾಗಿ ಮೊಳಕೆಯೊಡೆದದ್ದು ಕಾಣುತ್ತೇವೆ. ಈಕೆಯು ಮೊದಲು ಅನುಭವದ ಗುರುತುಗಳ ಮೂಲಕ ಸತ್ವಯುತವಾದ ವಿಚಾರಗಳನ್ನು ವ್ಯಕ್ತಪಡಿಸಿ ಅನುಭಾವಕ್ಕೆ ಬರುತ್ತಾಳೆ. ವಾಸ್ತವತೆಯ ಅಂಶಗಳು ಲೀನವಾಗಿ ನಿರಾಕಾರ, ನಿರಾಲಂಬ, ನಿರಾಭಾರಿ ಸ್ಥಿತಿಯನ್ನು ಕಾಣುವ ಭಾವಾತೀತಳಾಗಿ ಕಾಣುತ್ತಾಳೆ. ಈಕೆಯಲ್ಲಿಯ ಸಮರ್ಥನೆಯ ಗುಣ ಮಹಾನುಭಾವಿಯನ್ನಾಗಿ ಮಾಡಿದೆ. ಹಾಗೂ ವಿಷಯಾದಿಗಳನ್ನು ಮರೆತು ನಾನು ಉರಿಯುಂಡ ಕರ್ಪೂರದಂತೆಯಾಗಿದ್ದೇನೆ ಎಂದು ಹೇಳುವುದರ ಮೂಲಕ ಬಯಲಿನ ಪರಿಯನ್ನು ಪದೇ ಪದೇ ವಿನೂತನ ರೀತಿಯಲ್ಲಿ ಹೇಳುತ್ತಾಳೆ. ಕೊನೆಯದಾಗಿ ತನ್ನನ್ನೆ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾ ಈ ಜಗತ್ತಿನ ಜಡತ್ವವನ್ನು ತನಗೆ ಹೋಲಿಸಿಕೊಂಡು ಮರುಗುತ್ತಾಳೆ. ಹೆಚ್ಚಾನು ಹೆಚ್ಚು ಭಾವತುಂಬಿ ಹೇಳುವಂತದ್ದು, ಹಾಗೆ ವಿರಹ ವೇದನೆಯ ಮೂಲಕ ಆ ಘನದ ಪರಿಯನ್ನು ಹಾಗೂ ಅದನ್ನು ಕಾಣುವ ಸಾಧನಾ ಹಂತ, ಕಂಡಿದ್ದೇನೆ. ಅನುಭವಿಸಿದ್ದೇನೆ ಎಂದು ತಿಳಿದು ನಿರಾಕಾರತ್ವಕ್ಕೆ ಒಳಗಾಗುವ ಅಂಶ ಅನುಭವದಿಂದ ಅನುಭಾವದವರೆಗೆ ಈಕೆಯ ಅಂತರಾಳದ ವಿಚಾರಧಾರೆಗಳು ಮೂಡಿಬಂದಿವೆ.

### ೧.೫. ಶರಣರನ್ನು ಕುರಿತ ನಿಲುವುಗಳು

ನೀಲಾಂಬಿಕೆ ತನ್ನ ಸಮಕಾಲೀನ ಶರಣರನ್ನು ಕುರಿತು ತನ್ನ ವಚನಗಳಲ್ಲಿ ಸ್ಮರಿಸಿದ್ದಾಳೆ. ಅವರ ಉದಾತ್ತವಾದ ನಿಲುವುಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡು, ಅವರಲ್ಲಿಯ ಪರಿಪೂರ್ಣವಾದ ಜ್ಞಾನವನ್ನು ಪಡೆಯಲು ಮುಂದಾಗಿದ್ದಾಳೆ. ಹಾಗೂ ಅವರಿಂದ ತತ್ವದ ಪ್ರಭಾವಕ್ಕೆ ಒಳಗಾಗಿರುವಂತೆ ತೋರುತ್ತದೆ. ಹಾಗಾಗಿ ಬಸವಣ್ಣನವರನ್ನು ಪ್ರೀತಿಸಿದಂತೆ ಇವರನ್ನು

ಭಾವನಾತ್ಮಕ ಸಂಬಂಧದಿಂದ ಪ್ರೀತಿಸಿದ್ದಾಳೆ. ಇವರಿಂದ ಒಳ್ಳೆಯ ಆದರ್ಶ ವಿಚಾರ ಸದಾಚಾರತೆ, ಶಿವಯೋಗ ಕಾರ್ಯಸಿದ್ಧಿ ಹಾಗೂ ಅನುಭವದ ವಿಚಾರಗಳನ್ನು ಹುಲುಸಾಗಿ ಹಾಗೂ ಗಟ್ಟಿಯಾಗಿ ಈಕೆಯಲ್ಲಿ ಬೆಳೆಯಲು ಶರಣರ ನಿಲುವುಗಳೇ ಕಾರಣವೆನ್ನಬಹುದು.

ನೀಲಾಂಬಿಕೆ ಆಧ್ಯಾತ್ಮ ಕ್ಷೇತ್ರಕ್ಕೆ ಬಂದ ಮೇಲೆ ಭಾವನಾತ್ಮಕವಾದ ಸಂಬಂಧವನ್ನು ಶರಣರಲ್ಲಿ ತೋರಿಸಿದ್ದಾಳೆ ಹಾಗೂ ನಾನು ಶರಣರ ವಂಶದವಳು ಎಂದು ಈ ಕೆಳಗಿನ ವಚನದಲ್ಲಿ ಹೇಳಿದ್ದಾಳೆ.

"ಅಲ್ಲಮನ ವಂಶದವಳು ನಾನು
ಅಜಾತ ಶರಣರ ವಂಶದವಳು ನಾನು
ಅಪ್ರತಿಮ ಶರಣರ ವಂಶದವಳು ನಾನು
ಆಗಮಾ ನಂದಿಗಳ ವಂಶದವಳಾನು
ನಾನು ಆವ ದೇಶದಲ್ಲಿಯಿದ್ದಡೇನು?
ನಾನು ಅವಸ್ಥಾನದಲ್ಲಿಯಿದ್ದಡೇನು?
ಸಂಗಯ್ಯನಲ್ಲಿ ಬಸವ ಸ್ವಯಲಿಂಗಿಯಾದನು"[೨೦೪]

ನೀಲಾಂಬಿಕೆಯಲ್ಲಿ ಲಿಂಗನಿಷ್ಠೆ, ಅನುಭಾವ, ಬೆಳೆಯಲಿಕ್ಕೆ ಕಾರಣ ನಾನು ಶರಣ ವಂಶದವಳು. ಯಾಕೆಂದರೆ, ಇವರೆಲ್ಲ ಅನುಭಾವಿಗಳ ತೋರಣಕಟ್ಟಿದವರು ತತ್ವದ ಸುಖಿ ಪ್ರಸಾದಿಗಳು ಆಗಿದ್ದಾರೆ. ಹಾಗಾಗಿ ಅಲ್ಲಮನ ವಂಶಜಳು ಎನ್ನುವುದರ ಮೂಲಕ ಆತನಲ್ಲಿಯ ತಾತ್ವಿಕ ಭಾವನೆಗಳನ್ನು ಮೈಗೂಡಿಸಿಕೊಂಡು ನಡೆದವಳು. ಹಾಗಾಗಿ ಆಜಾತ, ಅಪ್ರತಿಮ, ಆಗಮಾನಂದಿಗಳ ವಂಶದವಳು. ಏಕೆಂದರೆ ಇವರಲ್ಲಿ ಈ ಎಲ್ಲ ಗುಣಗಳು ಅಳವಡಿಸಿಕೊಂಡಿದ್ದರು. ಹಾಗಾಗಿ ನಾನು ಅಜಾತವರ, ಅಪ್ರತಿಮ ಶರಣರ ವಂಶದವಳು. ಆದ್ದರಿಂದ ಆವಸ್ಥಾನದಲ್ಲಿದ್ದರೂ ಭಯವಿಲ್ಲ. ಏಕೆಂದರೆ ನನ್ನ ಮೂಲನೆ ಗಟ್ಟಿತನದ ವಂಶ ಹಾಗಾಗಿ ಸಂಗಯ್ಯನಲ್ಲಿ ಬಸವ ಲೀನವಾದರು ನಾನು ಧೈರ್ಯದಿಂದ ಇರುವೆ ಎನ್ನುವುದರ ಮೂಲಕ ಬಸವನ ಅಗಲುವಿಕೆಯ ಸಂದರ್ಭದಲ್ಲಿ ತನ್ನ ಆತ್ಮಕ್ಕೆ ಧೈರ್ಯ ಹೇಳುವಂತ ವಚನವಾಗಿದೆ.

ನೀಲಾಂಬಿಕೆ ಶರಣರನ್ನು ಹಾಗೂ ಅವರ ಬಾಂಧವ್ಯವನ್ನು ಯಾವ ರೀತಿ ಪಡೆದಿದ್ದಳು ಎಂಬುದನ್ನು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಬಸವಣ್ಣನೆ ಗುರುವೆಂದು ಭಾವಿಸಲಾಗಿ
ಎನಗೆ ಬಸವಣ್ಣನೆ ಗುರುವಾದನಯ್ಯಾ
ಚೆನ್ನಬಸವಣ್ಣನೆ ಲಿಂಗವೆಂದು ಭಾವಿಸಲಾಗಿ

ಎನಗೆ ಚೆನ್ನಬಸವಣ್ಣನೆ ಲಿಂಗವಾದನಯ್ಯಾ
ಪ್ರಭುದೇವರೆ ಜಂಗಮವೆಂದು ಭಾವಿಸಲಾಗಿ
ಎನಗೆ ಪ್ರಭುದೇವರೆ ಜಂಗಮನಾದನಯ್ಯಾ
ಚಿಲ್ಲಾಳದೇವನೆ ದೇಹವೆಂದು ಭಾವಿಸಲಾಗಿ
ಎನಗೆ ಚಿಲ್ಲಾಳ ದೇವನೆ ದೇಹವಾದನಯ್ಯಾ
ಇಹಃಪಗೆಯಾಂಡರೆ ಧನವಾದನಯ್ಯಾ
ಇಂತೀ ಐವರ ಕಾರುಣ್ಯ ಪ್ರಸಾದವನುಂಡು
ಮಹಾಮನೆಯಲ್ಲಿ ಸುಖಿಯಾದೆ ಸಂಗಯ್ಯಾ"[೨೦೫]

ನೀಲಾಂಬಿಕೆ ಕಲ್ಯಾಣದ ಶರಣ ಮಹಾನುಭಾವಿಗಳಿಂದ ನಾನು ಪವಿತ್ರಳಾದೆ ಎಂಬುದರ ಮೂಲಕ ಅಷ್ಟಾವರ್ಣ ಪರಿಕಲ್ಪನೆಗೆ ಈ ಶರಣರನ್ನು ಹೋಲಿಸಿದ್ದಾಳೆ. ಬಸವಣ್ಣನನ್ನು ಗುರುವನ್ನಾಗಿ ಭಾವಿಸಿ, ಆತನಲ್ಲಿ ಗುರುತ್ವ ಶಕ್ತಿಯನ್ನು ಪಡೆದೆ, ಚೆನ್ನಬಸವಣ್ಣ ಲಿಂಗದ ರೂಪದಲ್ಲಿ ಕಂಡು, ಲಿಂಗದ ಮುಖಿಜಂಗಮವಾದ್ದರಿಂದ, ಎನ್ನ ಮನಕ್ಕೆ ಚಲನಶೀಲ ಶಕ್ತಿಯನ್ನು ಪ್ರಭು ನೀಡು ಎಂದು ಬೇಡುತ್ತಾ ದೇಹದ ಮಮಕಾರ ಅಳಿಯಲಿಕ್ಕೆ ಚಿಲ್ಲಾಳದೇವನಲ್ಲಿ ಅರಿಕೆ ಮಾಡುತ್ತಾ, ಇವರ ಶಕ್ತಿಯಿಂದ ನಾನು ಶುದ್ಧಳಾಗಿ ದ್ರವ್ಯವಾದೆನು. ಈ ಐವರ ಕಾರುಣ್ಯದಿಂದ ಇವರ ಅನುಭವ ಎಂಬ ಪ್ರಸಾದ ಉಂಡು ಅನುಭವ ಮಂಟಪದ ಮಹಾಮನೆಯಲ್ಲಿ ಸುಖಿಯಾದೆ ಎಂದು ಹೇಳುತ್ತಾಳೆ. ಇಲ್ಲಿ ಈ ಐವರನ್ನು ಶ್ರೇಷ್ಠ ಮಟ್ಟದಲ್ಲಿ ನಿಂತು ನೋಡುತ್ತಾ, ಅವರಲ್ಲಿಯ ಗುರುತರವಾದ ಜ್ಞಾನವನ್ನು ಪಡೆಯಲು ಹವಣಿಸುವ ರೀತಿಯನ್ನು ಕಾಣಬಹುದು.

ನೀಲಾಂಬಿಕೆ ಹಿರಿಯ ಶರಣರ ಸಂಗವನ್ನು ಕುರಿತು ಈ ಕೆಳಗಿನ ವಚನದಲ್ಲಿ ಈ ರೀತಿಯಾಗಿ ಹೇಳುತ್ತಾಳೆ.

"ಅಲ್ಲಮನ ಸಂಗ, ಅಜಗಣ್ಣನ ಸಂಗ
ಕಕ್ಕಯ್ಯನ ಸಂಗ, ಚಿಕ್ಕಯ್ಯನ ಸಂಗ,
ಎಲ್ಲರ ಸಂಗ, ಯತಿಗಳ ಸಂಗ, ಜತಿಗಳ ಸಂಗ
ಮಾನ್ಯರಸಂಗ, ಮುಖ್ಯರಸಂಗ,
ಸಂಗಯ್ಯ, ಎನ್ನಸಂಗ, ಎನ್ನ ಬಸವಯ್ಯನ ಸಂಗಯ್ಯಾ"[೨೦೬]

ಈ ಶರಣರಲ್ಲಿ ನಾನು ಭಾವನಾತ್ಮಕವಾದ ಸಂಗವನ್ನು ಮಾಡಿದ್ದೇನೆ. ಇವರಲ್ಲಿ ಅಡಗಿದ ತಾತ್ವಿಕತೆಯನ್ನು ಅಳವಡಿಸಿಕೊಳ್ಳಲು ಇವರ ಸಂಗ ಮುಖ್ಯವಾಗಿದೆನ್ನಬಹುದು. ಅಲ್ಲಮ ವೈರಾಗ್ಯದ ಪ್ರತಿರೂಪ, ಅಜಗಣ್ಣ ಅರಿವಿನ ಮೂರ್ತಿ, ಕಕ್ಕಯ್ಯ ಪ್ರಸಾದಿ ತತ್ವದ ಚೇತನ,

ಚಿಕ್ಕಯ್ಯ ಮಹಾನುಭಾವಿ, ಈ ಎಲ್ಲರ ಸಂಗ ನನಗೆ ಯತಿಗಳ ರೂಪವಾಗಿ ಕಂಡಿದ್ದಾರೆ. ಯತಿಗಳ, ಮಹಾಂತರ, ಮಾನ್ಯರ, ಮುಖ್ಯರ ಸಂಗವು ನನ್ನ ಭವವನ್ನು ಅಳಿದು ಪರತತ್ವದ ಕಡೆಗೆ ಸಾಗಲು ಮುಖ್ಯರಾಗಿದ್ದಾರೆ. ಹಾಗೆ ಸಂಗಯ್ಯನ ಸಂಗವನ್ನು ಬಸವಯ್ಯ ಒದಗಿಸಿದ್ದು ಆತನ ವ್ಯಕ್ತಿತ್ವ ಹೇಳುತ್ತದೆ. ಇಂತವರ ಸಂಗದಿಂದ ನಾನು ಪರಿಶುದ್ಧಳಾಗುವೆ ಎಂಬ ಆಲೋಚನೆಯನ್ನು ಇಲ್ಲಿ ಕಾಣುತ್ತೇವೆ. ಹಾಗೆಯೇ ಶರಣರಿಗೂ ತನಗೂ ಇರುವ ಭಾವನಾತ್ಮಕ ಸಂಬಂಧ ಹೇಳುತ್ತಾ, ಯೋಗದ ಸ್ಥಿತಿಗೆ ಬರಬೇಕೆಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಅಲ್ಲಲ್ಲಿಯ ಶರಣರು ಅಲ್ಲಲ್ಲಿಯೇ ನಿಲ್ಲಲು
ಅಲ್ಲಲ್ಲಿಯ ಭಕ್ತಿ ಅಲ್ಲಲ್ಲಿಯೇ ಅಡಗಿತ್ತು
ಅಲ್ಲಲ್ಲಿಯ ಕಾಯವಲ್ಲಲ್ಲಿಯೇ ಸಂದು ನಾನು
ಅಲ್ಲಲ್ಲಿಯೆ ಅಡಗಿಯಾನು ಅನಿಮಿಷ ದೃಷ್ಟಿಯುಳ್ಳವಳಾದೆನು
ಅಲ್ಲಲ್ಲಿಯೇ ಭ್ರಮಿಸಲು ಭ್ರಮೆಯಡಗಿ ಸಂಗಯ್ಯನಲ್ಲಿ
ಮುಖವರಿತೆನಯ್ಯ ಬಸವ ಪ್ರಭುವೆ"[೨೦೭]

ಈ ವಚನ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಹೇಳಿದ ವಚನವಿರಬಹುದು. ಹರಳಯ್ಯ ಮಧುವರಸರ ಕೊಲೆ ಮತ್ತು ಬಿಜ್ಜಳನ ಹತ್ಯೆಯಿಂದ ಕಲ್ಯಾಣ ಉದ್ವಿಗ್ನತೆಯಿಂದ ಕೂಡಿದ ಸಮಯದಲ್ಲಿ ಶರಣರು ಕಲ್ಯಾಣಬಿಟ್ಟು ತಮತಮಗೆ ಬೇಕಾದ ಸ್ಥಳಗಳಿಗೆ. ಹೋದರು. ಬಸವಣ್ಣ ಸಂಗಮಕ್ಕೆ ಹೋದರೆ, ಪ್ರಭು ಶ್ರೀಶೈಲಕ್ಕೆ, ಚೆನ್ನಬಸವಣ್ಣ ನಾಗಲಾಂಬಿಕೆ ಹಲವಾರು ಶರಣರು ಉಳವಿಗೆ, ಸಿದ್ಧರಾಮನು ಸೊಲ್ಲಾಪುರಕ್ಕೆ ಹೀಗೆ ತಮಗೆ ಇಷ್ಟಬಂದಲ್ಲಿ ನೆಲಸಿದರು. ಕೆಲವರು ತಮ್ಮ ಇಚ್ಚೆಯಲ್ಲಿಯೇ ದೃಷ್ಟಿ ಬೆರೆತರು. ಆದರೆ ನಾನು ಅನಿಮಿಷ್ಯ ದೃಷ್ಟಿಯುಳ್ಳವಳಾಗಿ, (ಇಷ್ಟಾರ್ಥ ಕಲ್ಪಿತದ ದೃಷ್ಟಿಯೋಗ ಸಾಧಕ ಅಲ್ಲಮನಿಗೆ ಪ್ರೇರಕನಾದ) ಈತನ ಸಾಧನೆಯ ತಿಳಿದು ಭ್ರಮೆಯಡಗಿ ಸಂಗಯ್ಯನಲ್ಲಿ ಬೆರೆತೆನೆಂದು ಹೇಳುತ್ತಾಳೆ.

ಈ ವಚನಕ್ಕೆ ಗುಂಬೀಶಂರು ಹೀಗೆ ಅಭಿಪ್ರಾಯಪಡುತ್ತಾರೆ. "ಕಲ್ಯಾಣದಲ್ಲಿ ಧರ್ಮಕ್ರಾಂತಿ ಯಾಗಲು ಧರ್ಮಕರ್ತಾರನಾದ ಬಸವಣ್ಣನವರು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ತೆರಳಿದರು. ಆಗ ಕಲ್ಯಾಣದಲ್ಲಿಯ ಶರಣರೆಲ್ಲ ತಮ್ಮ ತಮ್ಮ ನೆಲೆಗೆ ನಿಲ್ಲಲು ಭಕ್ತಿಯಡಗಿತು. ಕೆಲವರು ಕಾಯವನ್ನು ತೊರೆದು ಲಿಂಗದಲ್ಲಿ ಬೆಳಗಿದರು. ನಾನು ಕೂಡ ಇಷ್ಟಲಿಂಗದ ಅನಿಮಿಷ ದೃಷ್ಟಿಯಲ್ಲಿ ಅಡಗಿದೆನು. ಅಂದರೆ ಲಿಂಗದಲ್ಲಿ ನಿಜೈಕ್ಯದಲ್ಲಿ ಮೆರೆದೆನು. ಭವದ ಭ್ರಮೆಗಳೆಲ್ಲ ಅಡಗಿ ಲಿಂಗಸಂಗದಲ್ಲಿ ಸ್ವಯಂ ಪ್ರಕಾಶದಲ್ಲಿ ಪ್ರಕಾಶಿಸಿದೆನೆಂಬುದನ್ನು ನೀಲಾಂಬಿಕೆ ಅರುಹಿದ್ದಾಳೆ."[೨೦೮] ಇವರ ಹೇಳಿಕೆಯಂತೆ ಶರಣರ ಬೆರೆಯುವಿಕೆ ಮತ್ತು ಅನುಮಿಷ ದೃಷ್ಟಿಯಲ್ಲಿ

ನೀಲಾಂಬಿಕೆ ಅಡಗಿದ್ದನ್ನು ಹಾಗೂ ಶರಣರ ನೆಲೆಯು ಈ ಸಂದರ್ಭದಲ್ಲಿಯ ನೋವುಗಳ ಕುರಿತು, ಮನದಾಳದ ಭಾವನೆಯನ್ನು ನೋಡಬಹುದು. ಹಾಗೆ ನೀಲಾಂಬಿಕೆಯಲ್ಲಿಯೂ ಈ ಅನಿಮಿಷ ಯೋಗಶಕ್ತಿಯಿಂದ ಸಾಧನೆ ಮಾಡಿ ಲಿಂಗದಲ್ಲಿ ಬೆರೆತಳು ಯೋಗ ಧೈರ್ಯವನ್ನು ಮಾನಸಿಕ ಸಮತೋಲನ ಕಾಪಾಡುತ್ತದೆ ಎಂಬುದು ತಿಳಿಯುತ್ತದೆ.

ನೀಲಮ್ಮ ಭಾವಶೂನ್ಯಳಾದ ಸ್ಥಿತಿಯನ್ನು ಹಡಪದ ಅಪ್ಪಣ್ಣನವರಿಗೆ ಮನವರಿಕೆ ಮಾಡುವ ಪರಿಯನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು.

> "ಇಪ್ಪೆಯ ಹೂವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು
> ಸರ್ಪನ ಶಿವಕಂಠದಲ್ಲಿ ಮೂಗುತಿಯ ಸರಗೊಳಿಸಿದೆ ನಯ್ಯಾ
> ನಾವಲ್ಲಿದ್ದಡೇನು, ನಾವಿಲ್ಲಿದ್ದಡೇನು?
> ನಮ್ಮ ನಮ್ಮ ಸಂಸರ್ಗದಲ್ಲಿ ನಿರುಪಮಾಕಾರಮೂರ್ತಿಗಳಾಗಿ
> ನಿರವಯವನೈದಿ ನಿಜಸುಖಿಗಳಾದೆವು
> ಬಸವನಲ್ಲಿ ಎಮಗೆ ತೆರಪಿಲ್ಲವಯ್ಯಾ, ಅಪ್ಪಣ್ಣಾ
> ಭಾವಶೂನ್ಯಳು ನಾನು ಸಂಗಯ್ಯನಲ್ಲಿ...."[೨೯]

ನೀಲಾಂಬಿಕೆ ಈ ವಚನವನ್ನು ಹಡಪದ ಅಪ್ಪಣ್ಣ ಸಂಗಮಕ್ಕೆ ಕರೆಯಲು ಬಂದ ಸಮಯದಲ್ಲಿ ಹೇಳಿರಬೇಕು. ಯಾಕೆಂದರೆ ಬಸವಣ್ಣ ನಮ್ಮನ್ನು ಒಂದು ಹೂವಿನಂತೆ ಅಂದರೆ ಸುವಾಸನೆಯುಳ್ಳ ಹೂವಲ್ಲ ಮುಳ್ಳುಕಂಟೆಯಿಂದ ಕೂಡಿದ್ದು. ಆ ಹೂವನ್ನು ಸರಿಗೊಳಿಸಲು ಹೋಗಿ, ಮುಳ್ಳುಕಂಟಿಯ ಸಿಪ್ಪೆಯಲ್ಲಿ ಹಿಂಡಿದಂತೆಯಾಗಿದೆ. ಹಾಗು ಸರ್ಪದ ತಲೆಯಲ್ಲಿ, ಮೂಗುತಿಯಿಟ್ಟಿರೆ. ಆದರೆ ಉಪಯೋಗವೇಸು. ಅವರವರ ಬದುಕಿಗೆ ನಿರುಪಮಾಕಾರನಾಗಿ, ತೋರಿದ ಬಸವಣ್ಣ, ಕಲ್ಯಾಣ ಏನಾಯಿತು? ಆತನನ್ನು ನಂಬಿದವರ ಸ್ಥಿತಿ ಏನಾಯಿತು? ಬಸವಣ್ಣ ಮುಳ್ಳುಕಂಟಿಯಲ್ಲಿ ಮುಳ್ಳುಸಿಪ್ಪೆಯಲ್ಲಿ ಮುಳ್ಳು, ಆದರೆ ನೋವು ಬಸವನಿಗೆ ಎಂಬ ಮನದಾಳದ ವೇದನೆಯನ್ನು ಹೇಳುತ್ತಾ, ನಾವಿಲ್ಲಿದ್ದಡೇನು ಉಪಯೋಗ ನಿರವಯದತ್ತಾ ಸಾಗಿ ನಿಜಸುಖಿಯಾಗುವೆ ಎಂದು ಭಾವಶೂನ್ಯಳಾಗಿ ನೀಲಾಂಬಿಕೆ ಅಪ್ಪಣ್ಣನಿಗೆ, ಬಸವಣ್ಣನ ತೆರಪಿಲ್ಲದ ಬಗೆಯನ್ನು ಹೇಳುತ್ತಾಳೆ.

ಈ ವಚನಕ್ಕೆ ನೀಲಲೋಚನೆಯ ವಚನಗಳಲ್ಲಿ ಬಸವಣ್ಣ ಎಂಬ ಕೃತಿಗೆ ಮುನ್ನುಡಿ ಬರೆದ ಡಾ.ಶ್ರೀ ಜ.ಚ.ನಿ.ಯವರ ಅಭಿಪ್ರಾಯ ಹೀಗಿದೆ. "ನೀಲಮ್ಮನ ಕಾಯ ನಿಃಕಾಯವಾಗಿತ್ತು; ಮನ ನಿರ್ಮನವಾಯಿತ್ತು, ಭಾವ ನಿರ್ಭಾವವಾಯಿತ್ತು. ಅಲ್ಲಿ ಇಲ್ಲಿ ಎಂಬ ಕವಲು(ಅಂತರ) ಉಳಿದಿರಲಿಲ್ಲ, ಅವರಿಬ್ಬರ ಸಂಸರ್ಗ ಸನ್ನಿಹಿತವಾಗಿತ್ತು. ಅವರಿಬ್ಬರೂ ನಿರುಪಮಾಕಾರ

ಮೂರ್ತಿಗಳಾಗಿ ನಿರವಯಿಗಳಾಗಿ ನಿಜಸುಖಿಗಳಾಗಿದ್ದರು. ಬಸವಣ್ಣನವರಲ್ಲಿ ನೀಲಮ್ಮನಿಗೆ ತೆರಪಿರಲಿಲ್ಲ. ತೆರಪಿಗೆ ಅಂದರೆ ಬಿರುಕಿಗೆ ಕಾರಣ ಭಾವ! ಭಾವವಿರುವಲ್ಲಿ ಭಾವಾಂತರ ಭಾವ ನಾಂತರಗಳು. ಭಾವಶೂನ್ಯವಾಗಿ ನಿರ್ಭಾವವುಂಟಾದಲ್ಲಿ ಬಿರುಕೆಲ್ಲಿ? ಭಿನ್ನಭಾವಗಳೆಲ್ಲಿ? ನೀಲಮ್ಮ ನಿರ್ಭಾವಿಯಾಗಿ ಬಸವಣ್ಣನಲ್ಲಿ ತೆರಪಿಲ್ಲದಂತಾಗಿದ್ದಳು. ಅವಳದು ಬಸವಣ್ಣನಲ್ಲಿ ಸುಖ ಸಂಯೋಗ ವಾಗಿತ್ತು. ಅವಳು ಐಕ್ಯವಾದ ಬಸವನಲ್ಲಿ ಐಕ್ಯಳಾಗಿ ನಿರಾಭಾರಿಯಾದವನಲ್ಲಿ ನಿರಾಭಾರಿಣಿಯಾಗಿ ಮೈಮನ ಭಾವ ಜೀವಿಗಳ ಜಡಭಾವವನ್ನು ತೆಗೆದು ಹಾಕಿದ್ದಳು."[೨೧೦]

ನೀಲಾಂಬಿಕೆ ಭಾವಶೂನ್ಯಳಾದ ಮೇಲೆ ಬಸವಣ್ಣನ ಭ್ರಮೆ ನಮಗೇಕೆ ಬೇಕು ಎಂಬ ನಿಲುವನ್ನು ಅಪ್ಪಣ್ಣನಿಗೆ ತಿಳಿಸುತ್ತಾಳೆ.

"ಯತಿಯರ ಮನವನತಿ ವಿರತಾಕಾರವ ಮಾಡಿ ಕಂಡೆನಯ್ಯ
ಆ ಯತಿಗಳು ಅತಿ ವೀರ ಸಂಬಂಧಿಗಳಾಗಿರಲು
.....................................................
......................................................
ಅಪ್ಪಣ್ಣ ತಂದ ಅಪ್ರತಿಮ ಶಿವಾಚಾ ನೆಲೆಯಾಗಿರಲು
ಆನು ಶಿವ ಶುಭವಂತಳಾದೆನಯ್ಯಾ
ಸಂಗಯ್ಯನಲ್ಲಿ ಬಸವನ ಭ್ರಮೆ ನಮಗೇಕಯ್ಯಾ"[೨೧೧]

ಅನುಭವ ಮಂಟಪಕ್ಕೆ ಅಲ್ಲಮ ಪ್ರಭು ಮತ್ತು ಅವನ ಶಿಷ್ಯರನ್ನು ಯತಿಯರು ಎಂದು ಕರೆದಿರಬೇಕು. ಯಾಕೆಂದರೆ ಇಂತ ಅನುಭಾವಿಗಳ(ಆಮಂತ್ರಣವಿಲ್ಲದೆ) ಆಗಮನ ವಿಷಯ ತಿಳಿಸಿದ ಅಪ್ಪಣ್ಣನಿಗೆ ಈ ಮಾತನ್ನು ಹೇಳಿರಬೇಕು. ಅಲ್ಲದೆ ಆ ಯತಿಗಳು ಆಧ್ಯಾತ್ಮಿಕ ಸಂಬಂಧಿಗಳು, ವೀರತ್ವದ ಗಣಾಚಾರಿಗಳು ಇಂತವರ ಬರುವಿಕೆಯು ವಿಷಯ ತಿಳಿಸಿದ್ದು ಸಂತೋಷ ತಂದಿದೆ. ನಾನು ಅವರ ದರ್ಶನದಿಂದ ಶಿವಾತ್ಮಳು ಹಾಗಾಗಿ ನನಗೆ ಬಸವನ ಭ್ರಮೆ ಇಲ್ಲದಾಗಿದೆ ಎಂದು ಹೇಳುತ್ತಾಳೆ. ಈಕೆಯಲ್ಲಿ ಶರಣರ ನಡೆ, ನುಡಿ ಹಾಗೂ ಅವರ ಬದುಕಿನ ಎಲ್ಲಾ ಮಜಲುಗಳು ಅನುಭವಿಸುವ ತವಕವನ್ನು ಈ ವಚನದಲ್ಲಿ ಕಾಣುತ್ತೇವೆ.

ಬಸವಣ್ಣ ಐಕ್ಯವಾದದ್ದನ್ನು ಬಲ್ಲಾತ ಚೆನ್ನಬಸವಣ್ಣನಾಗಿದ್ದಾನೆ ಎಂದು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾಳೆ.

"ಎಸಳೆಸಳ ಹೊಸದು ನೋಡುವ ಯೋಗಿಗಳು
ಬಸವನೈಕ್ಯವರು ಕಾಣದಾದರು
ರೂಪ ನಿರೀಕ್ಷಿಸುವ ಯೋಗಿಗಳು

ಬಸವನೈಕ್ಯವ ಕಾಣದಾದರು
ಸಂಗಯ್ಯಾ, ನಿಮ್ಮ ಬಸವನೈಕ್ಯವ ಬಲ್ಲಾತ
ಚೆನ್ನಬಸವಣ್ಣನು"[೨೧೨]

ಬಸವಣ್ಣನ ಐಕ್ಯವಾಗಿದ್ದನ್ನು ದಳ ದಳ ರೂಪದಲ್ಲಿ ನಿರಂತರ ಯೋಗ ಸಾಧನೆ ಮಾಡಿದ ಯೋಗಿಗಳಿಗೆ ತಿಳಿಯದಾಯಿತು. ಸದಾಲಿಂಗನಲ್ಲಿ ಏಕಾಂತದೊಳಗೆ ಇದ್ದು, ಲಿಂಗದಲ್ಲಿ ರೂಪ ಕಾಣುವ ಯೋಗಿಗಳಿಗೂ ಬಸವನೈಕ್ಯ ತಿಳಿಯಲಿಲ್ಲ. ಆದರೆ ಬಸವನ ಐಕ್ಯ ಅವಿರಳಜ್ಞೆ ಚೆನ್ನಬಸವಣ್ಣನಿಗೆ ತಿಳಿಯಿತು ಎಂಬುದನ್ನು ನೀಲಾಂಬಿಕೆ ಹೇಳುತ್ತಾಳೆ. ಚೆನ್ನಬಸವಣ್ಣ ಶಿವಯೋಗ ಸಾಧಕ ಮತ್ತು ಪ್ರಪಂಚದಲ್ಲಿ ನಡೆಯುವ ಕಾರ್ಯಗಳನ್ನು ತನ್ನ ಜ್ಞಾನದ ಮೂಲಕ ತಿಳಿಯುವ ಸಾಧನವಿರಬಹುದು. ಹಾಗಾಗಿ ಯೋಗಿಗಳಿಗೆ ತಿಳಿಯದಾದದ್ದು ಚೆನ್ನಬಸವಣ್ಣನಿಗೆ ತಿಳಿಯಿತು ಎಂದು ಹೇಳುವುದರ ಮೂಲಕ ಚೆನ್ನಬಸವನ ವ್ಯಕ್ತಿತ್ವವನ್ನು ಹೇಳಿದ್ದಾಳೆ.

ಶರಣರು ನೀಲಾಂಬಿಕೆ ಹಿತಕಾರಿಗಳಾಗಿದ್ದರು ಹಾಗೂ ಅವರ ಪಥದಲ್ಲಿ ನಡೆದನು ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಎನಗೆ ಹಿತಕಾರಿಗಳಾಗಿ ಇದ್ದವರೀ ಶರಣರು
ಎನಗೆ ಪ್ರಭೆದೋರಿ ಇದ್ದವರೀ ಶರಣರು
ಎನಗೆ ಸಂಗ ನಿಸ್ಸಂಗ ಕೊಟ್ಟವರೀ ಶರಣರು
ಆ ಶರಣಪಥವ ನೋಡ ಹೋದರೆ,
ಆನು ನೋಡದ ಬಲವು ಒಲವೆ ಆಯಿತಯ್ಯ ಸಂಗಯ್ಯ ಸಂಗಯ್ಯ"[೨೧೩]

ಅನುಭವ ಮಂಟಪದಲ್ಲಿಯ ಜ್ಞಾನವಾಹಿನಿ ಶರಣರು ನನಗೆ ಹಿತವನ್ನು ಬಯಸಿದ್ದಾರೆ. ಪ್ರಭೆ ಅಂದರೆ ತಾತ್ವಿಕ ಮಾರ್ಗವನ್ನು ತೋರಿದವರು ಹಾಗೂ ಒಳ್ಳೆಯರು ಕೆಟ್ಟದ್ದನ್ನು ಯೋಚಿಸುವ ಗುಣವ ಕೊಟ್ಟವರು ಶರಣರು, ಇವರು ಹಾಕಿದ ಪಥದಲ್ಲಿ ಹೋದರೆ ನನಗೆ ಆತ್ಮಬಲವು ಹೆಚ್ಚಿದೆ ಎಂದು ತನ್ನ ಮನದಾಳದ ನುಡಿಗಳನ್ನು ಈ ವಚನದ ಮೂಲಕ ಅರುಹಿದ್ದಾಳೆ. ಇಂತಹ ಶರಣರ ಪ್ರೀತಿ ವಾತ್ಸಲ್ಯದ ಹೊನಲು ತಾಯಿರೂಪದಲ್ಲಿ ಸಿಕ್ಕಿದ್ದು ಅಕ್ಕ ನಾಗಮ್ಮಳಾಗಿದ್ದಾಳೆ ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಎನಗೆ ಹಾಲೂಟವನಿಕ್ಕುವ ತಾಯೆ
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಲಗಿಪ್ಪ ತಾಯೆ, ಪರವಸ್ತುವನಂಬಿದ ತಾಯೆ
ಬಸವನ ಗುರುತಾಯೆ

ಸಂಗಯ್ಯನಲ್ಲಿಸ್ವಯಲಿಂಗಿಯಾದೆಯಾ, ಅಕ್ಕನಾಗಮ್ಮ
ತಾಯೆ"[೨೧೪]

ಈಕೆಯನ್ನು ಅಕ್ಕನಾಗಮ್ಮನು ಹೇಗೆ ಪ್ರೀತಿಸಿದಳು ಹಾಗೂ ತಾಯಿಯ ಮಮತೆಯನ್ನು ನೀಡಿದ ಬಗೆಯನ್ನು ಇಲ್ಲಿ ಕಾಣುತ್ತೇವೆ. ಇಲ್ಲಿ ಹಾಲೂಟವನಿಕ್ಕುವ ತಾಯಿ ಎಂದರೆ ಆಧ್ಯಾತ್ಮದ ಹಾಲೂಟವಾಗಿದೆ. ಜೊತೆಗೆ ಪರಿಣಾಮ ತೋರಿ, ಆ ಪರಾತ್ಪರನ ಸುಖವನ್ನು ಕಾಣಲಿಕ್ಕೆ ಮಾರ್ಗ ತೋರಿದಾಕೆ, ಈಕೆ ಬಸವನಿಗೆ ಗುರುತಾಯಿಯಾಗಿದ್ದಾಳೆ. ಹಾಗಾಗಿ ಈಕೆಯ ವ್ಯಕ್ತಿತ್ವವನ್ನು, ನಡೆದ ದಾರಿಯನ್ನು ತಿಳಿಸುತ್ತಾ, ಸಂಗಯ್ಯನಲ್ಲಿ ಅಕ್ಕ ನಾಗಮ್ಮ ಬೆರೆತ ಬಗೆಯನ್ನು ತಿಳಿಸುತ್ತಾಳೆ. ಹಾಗಾಗಿ ಇಂತಹ ತಾತ್ವಿಕ ನಿಲುವು ಮತ್ತು ಯೋಗ ಸಾಧನೆ ಬರಬೇಕಾದರೆ ಈ ತಾಯಿಯ ಮಾರ್ಗದರ್ಶನ ಮುಖ್ಯವಾಗಿದೆನ್ನಬಹುದು. ನೀಲಾಂಬಿಕೆ ಅನುಮಿಷ ಪ್ರಸಾದವನುಂಡು ಪ್ರಸನ್ನ ಮೂರ್ತಿಯತ್ತ ಸಾಗುತ್ತಿದ್ದೇನೆ ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಸಂಗನ ಕೂಟಕ್ಕೆ ತೆರಹಿಲ್ಲ
ಆ ಸಂಗನ ಕೂಟಕ್ಕೆ ತೆರಹಿಲ್ಲದ ಕಾರಣ
ಬಸವನ ಭಕ್ತಿಗೆ ನೆಲೆಯಿಲ್ಲವಯ್ಯಾ
ಆನಂದ ಪ್ರಸಾದ ಅನಿಮಿಷ ಪ್ರಸಾದವನುಂಡು
ಬದುಕಿದೆನಯ್ಯಾ ಸಂಗಯ್ಯಾ"[೨೧೫]

ಪರಮಾತ್ಮನ ಸಂಪರ್ಕಕ್ಕೆ ಮುಂದಾಗಬೇಕು, ಇದಕ್ಕೆ ಅವಕಾಶವಿಲ್ಲ. ಯಾಕೆಂದರೆ ಪರಮಾತ್ಮನ ಕುರುಹು ತಿಳಿದ ಕಾರಣ ಬಸವನ ಭಕ್ತಿಗೂ ನೆಲೆಯಿಲ್ಲವಯ್ಯ. ಏಕೆಂದರೆ ಆನಂದ ಮೂರ್ತಿಯಾದ ಅನುಮಿಷನ ಯೋಗ ಸಾಧನೆಯ ಪ್ರಸಾದವ ಭುಂಜಿಸಿರುವೆ, ಇಲ್ಲಿ ಅನುಮಿಷ ಪದಕ್ಕೆ, ಅ=ಇಲ್ಲ, ನುಮಿಷ=ನೆಟ್ಟ ನೋಟ. ಈ ನೋಟದಿಂದ ಎಲ್ಲವು ತಿಳಿದು ಬದುಕಿದೆ ಎಂದು ಹೇಳುತ್ತಾಳೆ. ಹಾಗೂ ಆಧ್ಯಾತ್ಮಿಕ ಒಳತಿರಳನ್ನು ಮತ್ತು ನಿರಾಕಾರ ಸ್ಥಿತಿಗೆ ತಲುಪಿದ್ದನ್ನು ಕಾಣಬಹುದು. ಶರಣರೊಂದಿಗಿನ ಭಾವನಾತ್ಮಕ ಸಂಬಂಧವನ್ನು ಹಾಗೂ ಕಿಂಕರತ್ವದ ಭಾವನೆಯನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು.

"ನಾನು ನಿಮ್ಮವಳಲ್ಲವಯ್ಯಾ, ನಾನು ಅನಿಮಿಷನವರವಳು,
ನಾನು ನಿಮ್ಮವಳಲ್ಲವಯ್ಯಾ, ನಾನು ಅಜಗಣ್ಣನವರವಳು
ನಾನು ನಿಮ್ಮವಳಲ್ಲವಯ್ಯಾ, ನಾನು ಪ್ರಭುವಿನ ಸಂತತಿಯವಳು
ನಾನು ನಿಮ್ಮವಳಲ್ಲವಯ್ಯಾ, ನಾನು ಮಾದಾರ ಚೆನ್ನಯ್ಯನ ಮೊಮ್ಮಗಳು
ನಾನು ನಿಮ್ಮವಳಲ್ಲವಯ್ಯಾ, ನಾನು ಪ್ರಸಾದಿಗಳ ಮನೆಯ ಕೀಳುದೊತ್ತು

ನಾನು ನಿಮ್ಮವಳಲ್ಲವಯ್ಯಾ, ನಾನು ಸಂಗಯ್ಯ

ನಾನು ಬಸವಯ್ಯನ ಮನೆಯ ತೊತ್ತಿನ ಮಗಳು"[೨೧೬]

ನೀಲಾಂಬಿಕೆ ಈ ಎಲ್ಲ ವಚನಗಳಲ್ಲಿ ಪರಿಣಾಮಿಗಳ, ಯೋಗ ಸಾಧಕರ ಹಾಗೂ ವೈರಾಗ್ಯನಿಧಿಗಳ ಮತ್ತು ಮಾತೃ ಸ್ವರೂಪದಿಂದ ಕಂಡ ಶರಣರನ್ನು ಕುರಿತು, ಹೇಳುತ್ತಾ ಅವರಿಂದ ಪ್ರಪಂಚದ ವಾಸನೆಗಳನ್ನು ಕಳೆದು ಅಂತರ್ಮುಖಿಯಾಗಬೇಕು ಹಾಗೂ ಚರಾಚರಾತ್ಮ ವಸ್ತುವಿನಲ್ಲಿ ಪ್ರೇಮತ್ವ ಕಾಣಬೇಕು. ಹಾಗೂ ಅನುಭಾವದ ಹಂತಕ್ಕೆ ಏರುವಾಗ ದ್ವಂದ್ವ ಭಾವಗಳು ಬರುತ್ತವೆ. ಅದನ್ನು ಶಿವಯೋಗದಿಂದ ಪರಿಹರಿಸಿಕೊಳ್ಳಬೇಕು ಎಂಬುದು ಈಕೆಯ ವಚನಗಳಿಂದ ತಿಳಿಯುತ್ತವೆ. ಇಂತಹ ದ್ವಂದ್ವಾತ್ಮಕತೆಯನ್ನು ಶರಣರು ಪರಿಹರಿಸಿಕೊಳ್ಳಲು ಅನುಭವ ಮಂಟಪದ ಚರ್ಚೆಯು ಅವರಿಗೆ ಉತ್ತರವಾಗಿ ದೊರಕುತ್ತಿತ್ತು. ಹಾಗಾಗಿ ನೀಲಾಂಬಿಕೆ ಅಜ್ಞಾನವನ್ನು ಜ್ಞಾನದ ಚಕ್ಷುವಿನ ಮೂಲಕ ಹೋಗಲಾಡಿಸಬೇಕು. ಇಂತಹ ಸ್ಥಿತಿಗೆ ಬರಬೇಕಾದರೆ ಹಿರಿಯ ಶರಣರ ಸಾಧನೆಯ ಪಥ ಬಹಳ ಮುಖ್ಯ ಎಂಬುದನ್ನು ಹೇಳುತ್ತಾ, ಈಕೆ ಅವರಂತೆ ಉನ್ನತ ಸ್ಥಿತಿಯನ್ನು ತಲುಪಲು ಮುಂದಾಗಿದ್ದು ಕಾಣುತ್ತೇವೆ.

### ಆ. ನೀಲಾಂಬಿಕೆಯ ಸ್ವರವಚನಗಳು

ಹನ್ನೆರಡನೇ ಶತಮಾನದ ಶರಣರ ಕೊಡುಗೆಯೆಂದರೆ ಅವರ ವೈಚಾರಿಕ ಚಿಂತನೆಯುಳ್ಳ ವಚನಸಾಹಿತ್ಯವಾಗಿದೆ. ಈ ಮೂಲಕ ತಮ್ಮ ಅಭಿವ್ಯಕ್ತಿಯನ್ನು ಮೂಡಿಸಿ, ಪ್ರಖರವಾದ ಸಾಹಿತ್ಯ ಕೃಷಿಯ ಮುಖಾಂತರ ಸಮಾಜದಲ್ಲಿಯ ನ್ಯೂನತೆಯ ವಿರುದ್ಧ, ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಹಾಗೆ ಇಂತಹ ವಚನಗಳನ್ನು ಕೃಷಿ ಮಾಡಿದ್ದು ಅಲ್ಲದೇ, ವಚನೇತರ ಸಾಹಿತ್ಯವಾಗಿ ಸ್ವರವಚನ ಗಳನ್ನು ರಚಿಸಿದ್ದಾರೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂತಹ ಸ್ವರವಚನಗಳನ್ನು ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮೇಶ್ವರ ಮಹಾದೇವಿಯಕ್ಕ, ಆದಯ್ಯ, ಹಾವಿನಾಳ ಕಲ್ಲಯ್ಯ ಚೆನ್ನಬಸವಣ್ಣ ಮುಂತಾದವರು ಅಲ್ಲದೆ ನೀಲಾಂಬಿಕೆ ಸ್ವರವಚನ ರಚಿಸಿದ್ದಾಳೆ. ಈಕೆಯ ಸ್ವರವಚನಗಳನ್ನು ಎಲ್.ಬಸವರಾಜು ಸಂಪಾದಿಸಿರುವ ಶಿವದಾಸಗೀತಾಂಜಲಿಯಲ್ಲಿ, ಹಾಗೂ ಮಲ್ಲಿಕಾರ್ಜುನ ಶಿವಪ್ಪ ಲಠ್ಠೆಯವರ ಸ್ವರವಚನಗಳು ಒಂದು ವಿವೇಚನೆ, ಶೂನ್ಯಸಂಪಾದನೆಯಲ್ಲಿ, ಡಾ.ಕೆ.ರವೀಂದ್ರನಾಥ ಸಂಪಾದನೆಯ ಬಸವಯುಗದ ವಚನೇತರ ಸಾಹಿತ್ಯ ಪ್ರೊ.ಎಸ್.ಎಸ್.ಭೂಸರಡ್ಡಿ ಯವರ ಮಹಾಶರಣೆ ನೀಲಾಂಬಿಕೆ, ಸಿ.ಕೆ.ಪರಶುರಾಮಯ್ಯ ಸಂಪಾದಿತ ನೀಲಲೋಚನೆ ವಚನಗಳು, ಈ ಕೃತಿಗಳಲ್ಲಿ ನೀಲಾಂಬಿಕೆ ಸ್ವರವನಗಳನ್ನು ಸಂಪಾದಿಸಿರುವುದು ಕಾಣಬಹುದಾಗಿದೆ.

ಸ್ವರವಚನಗಳ ಬಗ್ಗೆ ಕೆಲವುವಾದ ವಿವಾದಗಳಿವೆ. ೧೯೯೯ ಸಾಹಿತ್ಯ ವಿಮರ್ಶೆ ಪುಸ್ತಕದಲ್ಲಿ ಡಾ.ಬಸವರಾಜ ಮಲಶೆಟ್ಟಿಯವರ ಸ್ವರವಚನ-ಸಾಹಿತ್ಯ-ಒಂದು ಮರುವಿಚಾರ ಎಂಬ ಲೇಖನದಲ್ಲಿ

ಸ್ವರವಚನ ಸಾಹಿತ್ಯ ೧೫ನೇ ಶತಮಾನದಲ್ಲಿ ಮಹಾಲಿಂಗದೇವ 'ಏಕೋತ್ತರ ಷಟ್‌ಸ್ಥಲ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ ಆದರೆ ಶರಣರವೇ ಎಂದು ಹೇಳಲಿಕ್ಕೆ ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಇವರು ಮಾಡುತ್ತಾ ಹೀಗೆ ಅಭಿಪ್ರಾಯಪಡುತ್ತಾರೆ. "ಸ್ವರವಚನಗಳೆಂದು ವಿದ್ವಾಂಸರು ಗುರುತಿಸುವ ಹಾಡುಗಳು ಶರಣರ ರಚನೆಗಳಲ್ಲ, ಅವರ ಅಂಕಿತಗಳನ್ನು ಬಳಸಿಕೊಂಡು ನಂತರದರು ಇವುಗಳನ್ನು ಕಟ್ಟಿದ್ದಾರೆ. ಈ ಹಾಡುಗಳ ಭಾಷೆ ಖಂಡಿತವಾಗಿಯೂ ವಚನಗಳ ಭಾಷೆಯಲ್ಲ. ಗ್ರಾಂಥಿಕ ಸರಿಧಿಗೆ ಜೋತುಬಿದ್ದು ಛಂದೋಬಂಧಗಳ ನಿಬಂಧನೆಯಲ್ಲಿ ಹೊರಳಾಡುವ ಕೃತಕ ಶೈಲಿಯ ಇಂತಹ ಹಾಡುಗಳನ್ನು ಶರಣರು ರಚಿಸಿದ್ದಾರೆಂದು ನಂಬುವುದಾದರೆ ಅವರ ಸೃಜನಗುಣ, ಲವಲವಿಕೆಯ ಭಾಷಾ ಪ್ರಯೋಗಗಳನ್ನು ಅಲ್ಲಗಳೆದಂತಾಗುತ್ತದೆ."[೨೧೭] ಡಾ.ಮಲಶೆಟ್ಟರ ಅಭಿಪ್ರಾಯದಂತೆ ಸ್ವರವಚನಗಳು ಶರಣರ ಸಾಹಿತ್ಯ ಅಲ್ಲ. ಏಕೆಂದರೆ ಈ ಹಾಡುಗಳು ವ್ಯಾಕರಣಬದ್ಧ ಹಾಗೂ ರಾಗ ತಾಳ ಸಂಯೋಜಿತವಾಗಿರುವುದರಿಂದ ಶರಣರ ರಚನೆಯಲ್ಲ ಎಂದು ಹೇಳುತ್ತಾರೆ. ಮುಂದುವರೆದು ಎಂ.ಚಿದಾನಂದಮೂರ್ತಿ ಹೇಳಿಕೆಯನ್ನು ಉಲ್ಲೇಖ ಮಾಡಿದ್ದಾರೆ. "ಈ ಪದಗಳು ವಚನಕಾರರೇ ಹಾಡಿದುವೋ ಅಥವಾ ಮುಂದಿನವರು ಅವನ ಅಂಕಿತಗಳಲ್ಲಿ ಕಟ್ಟಿದ ಹಾಡುಗಳೋ ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕಾಗಿದೆ" ಎಂದು ಡಾ.ಎಂ.ಚಿದಾನಂದಮೂರ್ತಿಯವರು ಸಂಶಯ ವ್ಯಕ್ತಪಡಿಸಿರುವುದು ಸೂಕ್ತವಾಗಿದೆ."[೨೧೮] ಇವರ ಅಭಿಪ್ರಾಯ ಸ್ವರವಚನದ ಬಗ್ಗೆ ಸಂಶಯ ತಿಳಿಸಿ ಸಂಶೋಧನೆಯಾಗಬೇಕು ಎಂದು ಹೇಳಿದ್ದಾರೆ. ಡಾ.ಎಂ.ಎಂ.ಕಲಬುರ್ಗಿ ಸಂಪಾದಿತ ಸ್ವರವಚನ ವಿಚಾರ ಸಂಕಿರಣ ಸಂಪುಟ ಕೃತಿಯಲ್ಲಿ ಎಂ.ಬಿ.ನೇಗಿನಹಾಳರ ಬಸವಯುಗದ ಸ್ವರವಚನ ಸಾಹಿತ್ಯ ಲೇಖನದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. ಡಾ.ಎಂ.ಚಿದಾನಂದಮೂರ್ತಿ, ಡಾ.ವಿ.ಶಿವಾನಂದ ಮುಂತಾದ ಕೆಲವು ಜನ ವಿದ್ವಾಂಸರು "ಬಸವಾದಿ ಶರಣಗ ಹೆಸರಿನಲ್ಲಿ ಲಭ್ಯವಿರುವ ಸ್ವರವಚನಗಳು ನಿಜವಾಗಿ ಅವರಿಂದ ರಚಿತವಾದುವಲ್ಲ, ೧೫ನೆಯ ಶತಮಾನದಲ್ಲಿದ್ದ ಮಹಾಲಿಂಗದೇವ ಮೊದಲಾದ ಈಚಿನ ಸಂಕಲನಕಾರರು ಪ್ರಾಚೀನ ಶರಣರ ವಚನಗಳನ್ನಾಧರಿಸಿ ಬರೆದು ಅವನ್ನು ತಮಗೆ ಇಷ್ಟಬಂದ ಕಡೆಗೆ ಪ್ರಕ್ಷಿಪ್ತಗೊಳಿಸಿದರು' ಎಂಬರ್ಥದ ಹೇಳಿಕೆಗಳನ್ನಿತ್ತಿದ್ದಾರೆ. ಈ ಅಂಶ ವಿಚಾರಣೀಯ ವಾದುದಾದರೂ ಇನ್ನೂ ವಿಸ್ಕೃತ ಚರ್ಚೆ ನಡೆಸಲು ಈ ದಿಶೆಯಲ್ಲಿ ಅವಕಾಶವುಂಟೆಂದು ಹೇಳಬೇಕು."[೨೧೯] ಇವರ ಅಭಿಪ್ರಾಯದಂತೆ ಸ್ವರವಚನಗಳು ಬಸವಾದಿ ಶರಣರಲ್ಲದಿರಬಹುದು. ಆದರೆ ಇನ್ನೂ ಚರ್ಚೆಯ ಅವಶ್ಯಕತೆಯಿದೆ ಅಂತಿಮ ತೀರ್ಮಾನವಲ್ಲ ಎಂದು ಹೇಳುತ್ತಾರೆ.

ಬಸವಪಥ-೧೯೯೭, ಮೇ ಸಂಪುಟ-೧೯, ಸಂಚಿಕೆ-೩ರಲ್ಲಿ ಡಾ.ವೀರಣ್ಣ ರಾಜೂರವರು ಸ್ವರವಚನಗಳ ಉಗಮ-ಸ್ವರೂಪ-ಲಕ್ಷಣ ಎಂಬ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದು ಹೀಗೆ ಇದೆ.

“೧೯೮೧ರಲ್ಲಿ ಪ್ರಕಟವಾದ ಚೆನ್ನವೀರಾರ್ಯನ ಶಿವಯೋಗ ಪ್ರದೀಪಿಕೆಯ ಪ್ರಸ್ತಾವನೆಯಲ್ಲಿ ನಾನು ಡಾ.ಎಲ್. ಬಸವರಾಜು. ಡಾಚಿದಾನಂದಮೂರ್ತಿ ಮತ್ತು ಡಾ.ವಿ.ಶಿವಾನಂದ ಅವರ ಈ ಅಭಿಪ್ರಾಯಗಳನ್ನು ವಿಮರ್ಶಿಸುತ್ತ ಸ್ವರವಚನಗಳ ಉಗಮ ೧೨ನೆಯ ಶತಮಾನದಿಂದಲೇ ಎಂಬ ನನ್ನ ಸ್ಪಷ್ಟ ಅಭಿಪ್ರಾಯವನ್ನು ಸಾಧಾರ ಪೂರ್ವಕ ತಿಳಿಸಿದ್ದೆ. ಈಗಲೂ ಅದೇ ನಿಲುವಿಗೆ ನಾನು ಬದ್ಧನಾಗಿ, ಈಚೆಗೆ ದೊರೆತ ಇನ್ನಷ್ಟು ಆಧಾರಗಳನ್ನು ಸೇರಿಸಿಕೊಂಡು ಅದನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರಯತ್ನಿಸುತ್ತೇನೆ.”[೨೨೦] ಇವರ ಹೇಳಿಕೆಯಂತೆ ಸ್ವರವಚನಗಳು ೧೨ನೇ ಶತಮಾನದ್ದು ಆಗಿದೆ. ಹಾಗೆ ಹಲವು ವಿದ್ವಾಂಸರ ವಾದವನ್ನು ಈ ಲೇಖನದಲ್ಲಿ ಹೇಳುತ್ತಾ, ಇವರದು ಸ್ವರವಚನ ೧೨ನೇ ಶತಮಾನದಲ್ಲಿ ರಚನೆ ಆಗಿದೆನ್ನಬಹುದು. ಆದರೆ ಈ ಎಲ್ಲ ಹೇಳಿಕೆಗಳನ್ನು ಗಮನಿಸಿದಾಗ ಮತ್ತು ಅಧ್ಯಯನ ಪ್ರಕಾರ ಸ್ವರವಚನಗಳು ೧೨ನೇ ಶತಮಾನದವು ಹಾಗೂ ಶರಣರಿಂದ ರಚಿತಗೊಂಡಿರಬಹುದೆಂದು ಊಹಿಸಬಹುದು.

ಸ್ವರವಚನಗಳು ೧೨ನೇ ಶತಮಾನದಲ್ಲಿ ರಚನೆಯಾಗಿದ್ದವು. ಇದಕ್ಕೆ ಇನ್ನಷ್ಟು ಮಾಹಿತಿಯನ್ನು ಎಂ.ಬಿ.ನೇಗಿಹಾಳರು ನೀಡುತ್ತಾರೆ. “ಆನು=ಶರಣೆಯಾದಂಥ ನೀಲಲೋಚನೆ ನಾನು” ಶರಣ=ಜಗದಾಧಾರನಾದಂಥ ಚೆನ್ನಬಸವೇಶ್ವರನೆಂಬ ಷಟ್ಸ್ಥಲಾಚಾರ್ಯರು” ಎಂದು ಮುಂತಾಗಿ ವ್ಯಾಖ್ಯಾನಕಾರರು ಹೇಳುವ ಮಾತುಗಳಿಂದ ಇವು ಮಹಾಲಿಂಗದೇವನ ಅಥವಾ ಅವನ ಶಿಷ್ಯ ಜಕ್ಕಣಾರ್ಯರಂಥವರು ರಚಿಸಿರುವುಗಳು ಎಂಬಂಶ ಸ್ಪಷ್ಟವಾಗುತ್ತದೆ. ಇವರಲ್ಲದೆ ಸಿಂಗಿರಾಜನ ಸಿಂಗಿರಾಜಪುರಾಣ, ಶೂನ್ಯ ಸಂಪಾದನೆಗಳು, ಪರಮ ಮೂಲಜ್ಞಾನ, ಷಟ್ಸ್ಥಲ ಇತ್ಯಾದಿ ಕಾವ್ಯ ಮತ್ತು ಸಂಕಲನಗಳಲ್ಲೂ ‘ಸ್ವರವಚನಗಳು’ ಸಂಕಲಿತವಾಗಿವೆ. ಹಾಗೂ ಅವುಗಳಿಗೆ ಬಸವಾದಿ ಪ್ರಮಥರ ಅಂಕಿತಗಳಿವೆ. ಈ ಎಲ್ಲ ಆಧಾರಗಳಿಂದ ಈ ಸ್ವರವಚನಗಳನ್ನು ಬಸವಾದಿ ಪ್ರಮಥರು ರಚಿಸಿರುವರೆಂಬ ಪ್ರಮೇಯಕ್ಕೆ ಹೆಚ್ಚು ಬಲಬರುತ್ತದೆ.”[೨೨೧] ಇವರ ಅಭಿಪ್ರಾಯದಂತೆ ಸ್ವರವಚನಗಳು ೧೨ನೇ ಶತಮಾನದ ಶರಣರ ರಚನೆಯಿಂದ ಆಗಿದ್ದು, ಇದಕ್ಕೆ ಹಲವಾರು ಪುರಾತನ ಕೃತಿಗಳು ಸಾಕ್ಷಿಯಾಗಿವೆ ಎಂದು ಹೇಳುತ್ತಾರೆ. ಹಾಗಾಗಿ ಸ್ವರವಚನಗಳು ೧೨ನೇ ಶತಮಾನದಲ್ಲಿಯ ಬಳುವಳಿಯಾಗಿ ಬಂದಿದೆ ಎನ್ನಬಹುದು.

ಸ್ವರವಚನವೆಂದರೆ ರಾಗ, ತಾಳ, ಸಂಯೋಜನೆಯಿಂದ ಕೂಡಿದ್ದೆ, ಸ್ವರವಚನವಾಗಿದೆ. ಸ್ವರವಚನಗಳು ಜನಪದ ಶೈಲಿಯನ್ನು ಹೋಲುತ್ತವೆ. ಹಾಗು “ಶಿವಶರಣರು ವಚನ–ಸ್ವರವಚನಗಳೆಂಬ ಎರಡು ರೀತಿಯ ಸಾಹಿತ್ಯವನ್ನು ಸೃಷ್ಟಿಸಿದರು. ವಿದ್ವಾಂಸರು ಅನುಭಾವಗೀತೆ, ಹಾಡು, ಎಂತಲೂ; ಅಧ್ಯಾತ್ಮಿಗಳು ಕೈವಲ್ಯ ಪದವೆಂತಲೂ; ಜನಪದರು ಭಜನೆ ಹಾಡುಗಳೆಂತಲೂ ಕರೆದಿದ್ದಾರೆ. “ಸ್ವರವಚನ ಪದದಲ್ಲಿ ಸ್ವರ ಮತ್ತು ವಚನ ಎಂಬೆರಡು ಶಬ್ದಗಳಿವೆ. ಸ್ವರವೆಂದರೆ ಧ್ವನಿದಾಟಿ,

ರಾಗ, ಎಂಬರ್ಥಗಳಿವೆ. ಅಂದರೆ ರಾಗಹಿಡಿದು ಹಾಡಲು ಬರುವ ವಚನ ಸ್ವರವಚನ"[೨೨೨]ವಾಗಿದೆ ಎಂದು ಡಾ.ಕೆ.ರವೀಂದ್ರನಾಥ ಅಭಿಪ್ರಾಯಪಡುತ್ತಾರೆ. ಹಾಗೆ ವೀರಣ್ಣ ರಾಜೂರವರರು ಸ್ವರವಚನಗಳ ಉಗಮ ವಿಕಾಸದ ಬಗ್ಗೆ ಗೊಂದಲಗಳಿವೆ. ಆದರೆ ಈ ಸ್ವರ ವಚನಗಳ ಸ್ವರೂಪ "ಆರಂಭದಲ್ಲಿ 'ಪಲ್ಲ' ಇರುವುದು ಸ್ವರವಚನದ ಪ್ರಥಮ ಲಕ್ಷಣ. ಇಡೀ ಪದ್ಯದ ಸಾರಸಂಗ್ರಹವನ್ನೊಳಗೊಂಡ ಇದು ಪಲ್ಲ, ಪಲ್ಲವಿ, ಪಲ್ಲವ ಎಂಬ ಬಳಕೆಯಾಗಿದೆ. ಇದು ಒಂದು ಪಾದದಿಂದ ೪ ಪಾದದವರೆಗಿನ ವ್ಯಾಪ್ತಿಯನ್ನು ಪಡೆದಿದೆ. ಎರಡು ಪಾದದ ನುಡಿಗಳಿದ್ದರೆ ಒಂದು ಪಾದದ ಪದ, ನಾಲ್ಕು ಪಾದದ ನುಡಿಗಳಿದ್ದರೆ ಹೆಚ್ಚಾಗಿ ಎರಡು ಪಾದದ ಪಲ್ಲ, ಕ್ವಚಿತ್ತಾಗಿ ನಾಲ್ಕು ಪಾದಗಳ ಪಲ್ಲ, ಷಟ್ಪದಿಯಾಗಿದ್ದರೆ ಅದರ ಅರ್ಧದಷ್ಟು ಅಂದರೆ ಮೂರು ಪಾದದ ಪಲ್ಲ ಇರುವುದುಂಟು. ಇದು ಹಾಡಿದಾಗ ಪ್ರತಿಯೊಂದು ನುಡಿಯ ಅಂತ್ಯಕ್ಕೆ ಪುನರುಕ್ತಗೊಳ್ಳುತ್ತ ನಡೆಯುತ್ತದೆ."[೨೨೩] ಇವರ ಹೇಳಿಕೆಯನ್ನು ಗಮನಿಸಿದಾಗ ಸ್ವರವಚನ ಸ್ವರೂಪಗಳೊಂದಿಗೆ ಮುಕ್ತಾಯಗೊಳ್ಳುತ್ತವೆ ಎಂದು ಹೇಳುತ್ತಾರೆ.

ವಚನ ಎನ್ನುವ ಪದದೊಂದಿಗೆ ಸ್ವರ ಕೂಡಿದ್ದರಿಂದ ಸ್ವರವಚನವಾಗಿದೆ. ಹಾಗೂ ಸ್ವರವಚನಗಳಿಗೆ ಶರಣನಾದ ಶಿವದಾಸರು ಮೊದಲಿಗರು ಆಗಿದ್ದಾರೆಂದು ಹೇಳುತ್ತಾರೆ ಎಲ್.ಬಸವರಾಜರು. ಅದರಂತೆ "ಈ 'ಸ್ವರಪದ'ವೆಂಬ ಮಾತು ಕ್ರಮೇಣ ಜನಸಾಮಾನ್ಯದಲ್ಲಿ ಬಳಕೆಗೆ ಬಂದು ಆ ನಾಮಪದವೇ ಹಾಡಿನ ಪ್ರಕಾರದ ಸಾಹಿತ್ಯಕ್ಕೆ ಖಚಿತವಾಯಿತು. ಹೀಗಾಗುವುದಕ್ಕೆ ಮೊದಲು 'ವಚನ'ವೆಂಬ ಪದವು ಬಸವಾದಿ ಪ್ರಮಥರ ಕೃತಿ ವೈವಿಧ್ಯಗಳನ್ನೆಲ್ಲ ಒಳಗೊಳ್ಳುವ ಒಂದು ವ್ಯಾಪಕವಾದ ಪ್ರಯೋಗವಾಗಿತ್ತು. ಏಕೋತ್ತರ ಶತಸ್ಥಲ" ಶೂನ್ಯಸಂಪಾದನೆ, ಲಿಂಗ ಲೀಲಾ ವಿಲಾಸ ಚಾರಿತ್ರ ಮುಂತಾದ ಗ್ರಂಥಗಳನ್ನು ರೂಪಿಸುವಲ್ಲಿ ತಮಗೆ ಬಸವಾದಿ ಪ್ರಮಥರ 'ವಚನ'ಗಳೇ ಮೂಲ ಸಾಮಗ್ರಿಯೆಂದು ಆ ಗ್ರಂಥ ಕರ್ತೃಗಳು ಹೇಳಿಕೊಂಡು, ಆ ತಮ್ಮ ಕೃತಿಗಳಲ್ಲಿ ಬಸವಾದಿ ಪ್ರಮಥರ ಅಂಕಿತವಿರುವ ಷಟ್ಪದಿ, ಹಾಡು ಮುಂತಾದ ವಚನೇತರ ಪ್ರಕಾರಗಳನ್ನೂ ಸೇರಿಸಿರುವುದರಿಂದ...."[೨೨೪] ಇವುಗಳು ಸಹಿತ ಶಿವಶರಣರ ಸ್ವರವಚನಗಳು ಅಥವಾ ಹಾಡುಗಳು ಆಗಿವೆ ಎಂದು ಹೇಳುತ್ತಾರೆ. ಸ್ವರವಚನಗಳು ಛಂದೋ ಬದ್ಧವಾಗಿವೆ ಎಂದು ಹೇಳುತ್ತಾರೆ.

ಕಲ್ಯಾಣದ ಈ ಎಲ್ಲಾ ಶರಣರ ವಚನವಲ್ಲದೆ, ವಚನೇತರ ಸಾಹಿತ್ಯವಾದ ಸ್ವರವಚನಗಳು ಉತ್ತಮ ರೀತಿಯಲ್ಲಿ ಮೂಡಿಬಂದಿವೆ ಎಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಇಂತಹ ಶಿವಶರಣ ಶರಣೆಯರಲ್ಲಿ ನೀಲಾಂಬಿಕೆಯ ಸ್ವರವಚನಗಳು ಈಕೆಯ ವ್ಯಕ್ತಿತ್ವದ ಇನ್ನೊಂದು ಮುಖವಾಗಿದೆ. ಈಕೆಯ ಸ್ವರವಚನಗಳಲ್ಲಿ "ವೀರಶೈವ ಧರ್ಮದ ತತ್ವಗಳನ್ನು ನಿರೂಪಿಸುವ

ಈ ಸ್ವರವಚನಗಳು ವೈಶಿಷ್ಟ್ಯಪೂರ್ಣವಾಗಿವೆ. ಅಷ್ಟಾವರ್ಣಗಳಲ್ಲಿ ಒಂದಾದ ರುದ್ರಾಕ್ಷಿಯ ಮಹತ್ವವನ್ನು ಕುರಿತಾದ ಸ್ವರವಚನ ಮನಂಬುವಂತಿದೆ. ಹನ್ನೆರಡನೆಯ ಶತಮಾನದಲ್ಲಿಯೇ ಸಾಹಿತ್ಯಕ್ಕೆ ಸಂಗೀತವನ್ನು ಜೋಡಿಸಿದ ಹಿರಿಮೆ ಇವರದು”[೨೨೫] ಎಂದು ನೀಲಾಂಬಿಕೆ ಸ್ವರವಚನ ಸಂಪಾದನೆ ಮಾಡಿರುವ ಎಸ್.ಎಸ್.ಭೂಸರಡ್ಡಿಯವರು ಅಭಿಪ್ರಾಯಪಡುತ್ತಾರೆ. ಈಕೆಯ ಸ್ವರವಚನ ವಿಶಿಷ್ಟ ರೀತಿಯಲ್ಲಿ ರಚನೆಗೊಂಡು, ಆಧ್ಯಾತ್ಮಕ ವಿಚಾರಗಳು ತುಂಬಿ ಹಾಗೆ ರಾಗ, ತಾಳಗಳಿಂದ ಹಾಡಲಿಕ್ಕೆ ಬರುವಂತೆ ಇದ್ದಾವೆ ಎಂದು ಹೇಳುತ್ತಾರೆ. ಹಾಡಿನ ರೂಪದಲ್ಲಿ “ವಚನಗಳನ್ನು ಬರೆದಂತೆ, ಹಾಡಿದಂತೆ ಸ್ವರವಚನಗಳನ್ನು ರಚಿಸಿದ್ದಾಳೆ, ಹಾಡಿದ್ದಾಳೆ.”[೨೨೬] ಎಂದು ಪ್ರೊ.ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ ಅಭಿಪ್ರಾಯಪಡುತ್ತಾರೆ. ನೀಲಾಂಬಿಕೆಯೂ ಕೇವಲ ವಚನಗಳಷ್ಟೆ ಅಲ್ಲದೆ ಸ್ವರವಚನ ರಚಿಸಿ ಅದರಲ್ಲಿ ಆಧ್ಯಾತ್ಮಿಕ ವಿಚಾರಗಳೊಂದಿಗೆ ಸೂತಕಗಳ ಬಗ್ಗೆ, ಶೀಲದ ಬಗ್ಗೆ, ಕೂಡಿಬಾಳುವುದರ ಬಗ್ಗೆ, ಮತ್ತು ನಿರಾಭಾರಿ ತತ್ವವನ್ನು ಹೇಳುವಂತದ್ದು, ಚೆನ್ನಬಸವಣ್ಣ ಮಮತೆಯ ತಾಯಿಯಾಗಿ ಆತನ ಕುರಿತು ಹಾಗೂ ಇತರ ಶರಣರ ಕುರಿತಾಗಿರುವಂತಹ ಸ್ವರವಚನಗಳನ್ನು ಕಾಣಬಹುದು. ನೀಲಾಂಬಿಕೆಯ ಈ ಕೆಳಗಿನ ಸ್ವರವಚನ ರುದ್ರಾಕ್ಷಿ ಮಹತ್ವವನ್ನು ಕುರಿತು ಹೇಳುತ್ತದೆ. ಅಲ್ಲದೆ ಪಲ್ಲವಿ ಸೇರಿ ಆರು ಪದ್ಯಗಳ ಸಾಲನ್ನು ಈ ಸ್ವರವಚನ ಹೊಂದಿದೆ.

“ಮಂತ್ರ ಮೂಲ ಗೂಢ ಪದದ
ಚಿಂತಾಮಣಿ ರುದ್ರಾಕ್ಷಿಗಳವ-
ರಂತುವರಿದು ಧರಿಸಬಲ್ಲಡಾತ ರುದ್ರನು ॥ಪ॥
ಮಾರಮಥನ ತ್ರಿಪುರದಹನ ಕಾರಣದೊಳು ನೋಡೆ, ನಮನ
ವಾರಿಬಿಂದು ಬೀಳಲು ದಯವಾಗಿ, ಮರ್ತರ
ಘೋರ ಪಾತಕಂಗಳನ್ನುದಹಿಸಿ, ಭಕ್ತಜನದೊಳೊಪ್ಪಿ
ತೋರುತಿರ್ಪ ರುದ್ರಾಕ್ಷಿಯು ಪುಣ್ಯ ಪುಂಜವು ॥೧॥
..................................................
...............................................
.........................................
ಪರಮ ಶಿವನ ಪರಬ್ರಹ್ಮ ದೇಹದಲ್ಲಿ ತೊಡಿಗೆಯಾಗಿ
ಪರಮಪುಣ್ಯ ಪುಂಜಮಾಲೆಯೆನಿಸಿಯೊಪ್ಪುವ
ಶರಣಜನ ಮನೋರಥವೆನಿಪ ರುದ್ರಾಕ್ಷಿಗಳನು
ಧರಿಸಿಯಾನು ಬದುಕಿದೆನು ಸಂಗ ನಿಮ್ಮೊಳು ॥೫॥”[೨೨೭]

ಈ ಸ್ವರವಚನದಲ್ಲಿ ರುದ್ರಾಕ್ಷಿಯ ಮಹಿಮೆಯನ್ನು ಹಾಗೂ ಧರಿಸುವುದರಿಂದ ಏನು ಲಾಭ ಎಂಬುದನ್ನು ಹೇಳುತ್ತಾಳೆ. ಅಲ್ಲದೆ ವೀರಶೈವರಿಗೆ ಶ್ರೇಷ್ಠವಾದದ್ದು, ಹಾಗೂ ಅಷ್ಟಾವರ್ಣಗಳಲ್ಲಿ ರುದ್ರಾಕ್ಷಿ ಒಂದಾಗಿದೆ. ಇಂತಹ ರುದ್ರಾಕ್ಷಿಯನ್ನು ದೇಹದ ಮೇಲೆ ಧರಿಸುವುದರಿಂದ ಸತ್ಯನಿತ್ಯನು ಹಾಗೂ ಪಾಪಕರ್ಮಗಳು ನಾಶವಾಗಲು ಈ ರುದ್ರಾಕ್ಷಿ ಜಪ ಮಾಡಬೇಕು ಇದು ಪರಶಿವನ ತೊಡಿಗೆಯಾಗಿದೆ. ಹಾಗೆ ಮನಸ್ಸಿನ ಇಷ್ಟಾರ್ಥವು ಕೂಡ ನೆರವೇರಿಸುತ್ತದೆ. ಈ ರುದ್ರಾಕ್ಷಿ ಧರಿಸಿ ನಾನು ಸುಖಿಯಾದೆ ಸಂಗನೊಳಗೆ ಎಂದು ಹೇಳುತ್ತಾಳೆ.

"ಅವಾಶ್ರಯದಲ್ಲಿ ಜನಿತನಾದಡೇನು
ಪೂರ್ವವಳಿದು ಪುನರ್ಜಾತನಾದ ಶರಣನು? ॥ಪ॥
ಭೂತಾಹಿಗಳ್ಳೈದು ಕೂಡಿದ ತನುಗುಣದ
ಭ್ರಾಂತನಳಿದು, ಗುರೂ ಕರುಣಿಸಿ ಪೂರ್ವಕರ್ಮದ
ಪಾತಕಲಪಿಯ ತೊಡೆದ, ಪುನರ್ಜಾತ ನೆನಿಸಲು
ಆತನೆ ಸರ್ವಂಗ ಶುದ್ಧ ಲಿಂಗದೇಹಿ
.........................................
ಕ್ಷೀರದಿಂದಲಾದ ತುಪ್ಪ ಕ್ಷೀರವಪ್ಪುದೆ?
ನೀರೊಳಾದ ಮುತ್ತು ಮರಳಿ ಉದಕವಪ್ಪುದೆ?
ಮೀರಿ ಪೂರ್ವಕರ್ಮವನ್ನು ಹರಿವ ಭಕ್ತಗೆ
ಬೇರೆ ಮತ್ತೆ ಜನ್ಮವುಂಟೆ ಲಿಂಗವಲ್ಲದೆ?
..................................................
ಬಂದ ಬಟ್ಟೆಯಳಿದು ಲಿಂಗಸುಕದ ಪಥದಲಿ
ಮುಂದನರಿದು ಭಾವಶುದ್ಧವಾಗಿ ಚರಿಸುತ
ಸಂದು ಶಂಕೆಯನಳಿದು ನಿಜನೊಳೊಮಡಿ ಬೆರಸಿದಾ-
ನಂದಮಯನು, ಸಂಗ ನಿಮ್ಮ ಶರಸಶನ ನನುಪಮ ॥೫॥"[೨೨೮]

ನಾನು ಯಾವ ಜನ್ಮದಲ್ಲಿ ಹುಟ್ಟಿದರೇನು ಪೂರ್ವದ ಕರ್ಮಾದಿಗಳನ್ನು ಕಳೆಯಲು ಮುಂದಾಗಬೇಕು. ಹಾಗೆ ಅನೇಕ ಭ್ರಾಂತಿ ಈ ಸಂಸಾರದಲ್ಲಿ ಬರುತ್ತೆ, ಗುರುಕರಣೆಯಿಂದ ಪರಿಹರಿಸಿಕೊಂಡು ಸರ್ವಾಂಗ ಶುದ್ಧ ಲಿಂಗದೇಹಿಯಾಗಬೇಕು, ಸೂತಕಗಳನ್ನು ಕಳೆದು ನಿಂತು ನಿತ್ಯನಾಗಬೇಕು. ಹಾಲಿನಿಂದ ಉಂಟಾದ ತುಪ್ಪದಿಂದ ಮತ್ತೆ ಹಾಲು ಆಗುವುದಿಲ್ಲ, ನೀರಲ್ಲಿ ಹುಟ್ಟಿದ ಮುತ್ತು ಉದಕ ಸೇರುವುದಿಲ್ಲ. ಹಾಗೆ ಪೂರ್ವಕರ್ಮವನ್ನು ಹರಿದ ಭಕ್ತ ಬೇರೆ

ಜನ್ಮವಿದ್ದರೆ ಲಿಂಗದೇಹಿಯಾಗಿ, ಜಂಗಮ ಪ್ರಸಾದದಿಂದ ಅಂತರಂಗ ಶುದ್ಧಗೊಳಿಸಿ ಸೂತಕವ ಕಳೆದುಕೊಳ್ಳುವ ಈ ಶರೀರ ಬಂದ ಮೇಲೆ, ಭಾವಶುದ್ಧವಾಗಬೇಕು ನಿಜಾತ್ಮನನ್ನು ಕಂಡು ಸಂಗಯ್ಯನಲ್ಲಿ ಒಂದಾಗಬೇಕು ಎಂಬುದಾಗಿದೆ.

"ಕಾಮ ಕ್ರೋಧ ಲೋಭ ಮೋಹ-
ತಾಮಸ ಮದ ಮಾಯಾತ್ಸರ್ಯಂಗಳ
ಸೀಮೆಗೆ ಸಿಲುಕದ ಶೀಲದೊಳಗೆ ಶಿವ
ತಾ ಮನೆಗಟ್ಟಿಹನನವರತ ॥ಪ॥

...................................

ಅಂಗದೊಳಗೆ ಗುರು, ಲಿಂಗದೊಳಗೆ ಮನ
ಜಂಗಮದಲಿ ಧನವನರ್ಪಿತವಾಗಿಯೇ
ಲಿಂಗಾಲಿಂಗಿತವಾಗಿರಬಲ್ಲಡೆ ಸಂಗನೊಳದು ಶೀಲ ॥೫॥[೨೫]

ಅರಿಷಡ್ ವರ್ಗಗಳನ್ನು ಕಳೆದು ತಾಮಸಿ ಭಾವನೆಗಳನ್ನು ಯೋಚಿಸದೆ ಸೀಮಾತೀತಾನಾಗಿ ಶಿವನನ್ನು ಶೀಲದೊಳೆ ನೋಡಿ, ಶಿವನಲ್ಲಿ ಲೀನವಾಗುವೆ ಎಂಬ ಭಾವನೆಯಲ್ಲಿ ಹೇಳುತ್ತಾಳೆ. ಈ ಅಂಗನು ಮಾಯಸಂಗನ ಹಿಂಗದಿದ್ದರೆ ಉಪಯೋಗವಿಲ್ಲ ಅದರಿಂದ ದೂರವಾಗಿ ಕರುಣಾದಿ ವಿಕಾರವ ಕಳೆದು ಲಿಂಗದೊಳಗೆ ಬೆರೆಯಬೇಕು. ಅಂತಃಕರಣ ಸೃಷ್ಟಿಯಾಗಿ, ಸದಾ ಲಿಂಗಾಂಗ ಸಮರಸದ ಮೂಲಕ ಸೀಮೆದಾಟಿ ನಿಸ್ಸೀಮನನಲ್ಲಿರುವುದೇ ಶೀಲ. ಶಿವಶರಣರ ನಂಬುವುದೇ ಶೀಲ. ಕಲ್ಮಶಗುಣ ಕಳೆಯುವುದು, "ದಾಸೋಹ ಭಾವನೆ ಬರುವುದೇ ಶೀಲ ಗುರುಲಿಂಗ ಜಂಗಮರಿಗೆ ತನು, ಮನ, ಧನ ಅರ್ಪಿಸುವುದೆ, ಲಿಂಗಾಲಿಂಗಿತವಾಗಿದೆ. ಇಂಥ ಶಿವಸಂಭೂತನಾಗಿ ಬದುಕುವುದೇ ನಿಜವಾದ ಶೀಲ ಎಂದು ಹೇಳುತ್ತಾಳೆ. ಮುಖ್ಯವಾಗಿ ಶೀಲ ಎಂಬುದು ಮಡಿ ಮೈಲಿಗೆಯಲ್ಲ, ಸತ್ಯಶೀಲದಿಂದ ಬದುಕುವುದು ಆಗಿದೆ ಎಂದು ಸಾರ್ವತ್ರಿಕವಾದ ವೈಚಾರಿಕತೆಯನ್ನು ಮೂಡಿಸಿದ್ದಾಳೆ.

"ಹಸಿವು ತೃಷೆ ನಿದ್ರೆ ಜಡ ವಿಷಯದೊಡನುಂಬ ದು-
ರ್ವಸನಿಗಹುದೇ ಲಿಂಗ ಸಹ ಭೋಜನ? ॥ಪ॥
ಅಂಗದ ಜ್ಞಾನ ಗುಣ ಸಂಗದೊಳಗಿರ್ದು ಶಿವ-
ಲಿಂಗದೊಳು ಸಹ ಭೋಜನವ ಮಾಡುವ
ಭಂಗಿ ತರಿಗಿಹದರವು ಹಿಂಗಿ, ನರಕದ ಪಥವ
ಜಂಗುಳಿಯ ಕೂಡಿಹರು ಕಲ್ಪಾಂತರ

.......................................

ಅಮಲಭಾವೈಕ್ಯದಿಂದೊಂದುಗೂಡಿ

ಕಮಳನಾಳದ ಭೇದ ಸಮಸೂತ್ರ ಸಂಗನೊಳು

ಸಮನಿಸಲು ಸಹಭೋಜನಮದಪ್ಪುದು ॥೫॥"[೨೩೦]

ಈ ಸ್ವರವಚನದಲ್ಲಿ ಕೂಡಿ ಸಹಭೋಜನ ಮಾಡಿ, ಅಂದರೆ ಲಿಂಗಾಂಗ ಸಾಮರಸ್ಯದ ಕಲ್ಪನೆಯನ್ನು ಮಾಡಿದ್ದಾಳೆ. ಇಂತಹ ತಾತ್ವಿಕ ನಿಲುವುಗಳಿಂದ ಪರಿಪೂರ್ಣತೆಯತ್ತ ಸಾಗಲು ಇಲ್ಲಿ ತಿಳಿಸಿದ್ದಾಳೆ. ಈ ಸ್ವರವಚನ ಕುರಿತು ಪ್ರೊ.ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ ಹೀಗೆ ಅಭಿಪ್ರಾಯ ಪಡುತ್ತಾರೆ. "ನೀಲಲೋಚನೆಯು ಸಹಭೋಜನದ ಬಗೆಯನ್ನು ತನ್ನ ಸ್ವರವಚನವನ್ನು ಷಿಳ ತತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮನಮುಟ್ಟುವಂತೆ ಚಿತ್ರಿಸಿರುವರು. ಗುರು-ಜಂಗಮ ಪ್ರಸಾದವನ್ನು ಲಿಂಗಕ್ಕೆ ಕೊಟ್ಟು ಕೊಂಬಾತನಿಗೆ ಸಹಭೋಜನವು ಘಟಿಸುವುದು. ಲಿಂಗೈಕ್ಯನು ದೇಹದ ಸೋಂಕುವಿಡಿದಿದ್ದರೂ ಪಂಚೇಂದ್ರಿಯ ಮುಖದರ್ಪವನನು ಭಂಗಿಸಿ, ಶಿವಾರ್ಪಣ ಬುದ್ಧಿಯಿಂದ ಭೋಗಿಸುವುದೇ ಸಹಭೋಜನವಾಗಿರುತ್ತದೆ. ತಾವರೆದಂಟಿನ ನಾರಿನ ಎಳೆಯಂತೆ ಸರ್ವಾಂಗದಲ್ಲಿಯೂ ಲಿಂಗವೂ ಪರಿಪೂರ್ಣವಾಗಿರುವುದೇ ಸಹಭೋಜನವೆನಿಸಿರುತ್ತದೆ."[೨೩೧] ಇವರ ಅಭಿಪ್ರಾಯದಂತೆ ವೀರಶೈವ ಸಿದ್ಧಾಂತಕ್ಕೂ ಈ ಸ್ವರವಚನಕ್ಕೂ ಸ್ವಲ್ಪ ವ್ಯತ್ಯಾಸ ಕಾಣುತ್ತೇವೆ. ಅಲ್ಲಿ ವೀರಶೈವ ಸಿದ್ದಾಂತವಿದ್ದರು ಆಧ್ಯಾತ್ಮ ವಿಚಾರಗಳು ತುಂಬಿದ್ದವು. ಇಲ್ಲಿ ಆಧ್ಯಾತ್ಮಿಕದೊಂದಿಗೆ ಮೇಲ್ನೋಟದಲ್ಲಿ ಕೂಡಿ ಬಾಳಿ, ಕೂಡಿ ಭೋಜನ ಮಾಡಿ ಕೊಡುವುದೇ ಸ್ವರ್ಗ ಸುಖ ಎಂಬ ರೀತಿಯಲ್ಲಿ ಈ ಸ್ವರ ವಚನ ಭಾಸವಾಗುತ್ತದೆ. ಅಹಂಕಾರ ಮರೆತು ಸ್ವತಂತ್ರವಾದ ಪರವಸ್ತು, ಉಪಾಧಿರಹಿತನಿಗೆ ನಿತ್ಯ ದಾಸೋಹಿಯಾಗು ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಾಳೆ.

"ಹಮ್ಮಿಲ್ಲದೆ ಬಿಮ್ಮಿಲ್ಲದೆ, ಮಾಟದ

ಹೆಮ್ಮೆಯ ಬೀರದೆ, ತನುಮನಧನ ಶಿವ

ಸೊಮ್ಮೆಂದರ್ಪಿಸ ಬಲ್ಲಾತನೆ

ನಿರುಪಾಧಿಕ ದಾಸೋಹಿ ॥ಪ॥

...............................

..............................

ಒಡೆಯರಿಗೊಡವೆಯನೊಪ್ಪಿಸಿ ಶುದ್ಧನು

ಎಡೆಯೊಳಗಾಂ ಮಾಡಿದುದಿಲ್ಲೆಂದರಿ-

ದೊಡಲ ಶರಣರನು ಕಂಡವರಡಿಗಳ

ಪಿಡಿದು ಸದಾ ಸುಖಿಯಾಗಿಪ್ಪುರ ಮೆ-
ಲ್ಲಡಿಗಳೊಳಗೆ ಹಾವುಗೆಯಾಗಿರಿಸೆನ್ನನು ಸಂಗಪ್ರಭುವೆ"[೨೩೨]

ಮಾಡುವ ಕೆಲಸದಲ್ಲಿ ನಿಷ್ಠೆಯಿರಬೇಕು. ಅಲ್ಲಿ ಅಹಂಕಾರವ ಅಡಗಿಸಿ ತನುಮನವನ್ನು ಶಿವನಿಗೆ ಅರ್ಪಿಸಬಲ್ಲಾತನೆ ನಿಜವಾದ ಸಾತ್ವಿಕ ದಾಸೋಹಿಯಾಗುತ್ತಾನೆ. ಮನಸ್ಸಿನೊಳಗೆ ತುಂಬಿದ ಕಲ್ಮಶ ಬಿಟ್ಟು ದಾಸೋಹ ಭಾವನೆಯಲ್ಲಿ ಧೃತಿಗೆಡದೆ, ಸದಾಚಾರದೊಳಗೆ ಎಚ್ಚತ್ತು ನಮ್ಮ ಸೇವೆ ಮುಟ್ಟಿ ಲಿಂಗಯ್ಯ ತೃಪ್ತನಾಗಬೇಕು. ಪದಾರ್ಥಕ್ಕೆ, ಅಂದರೆ ಭಾವಕ್ಕೆ ದೇಹದ ಅಭಿಮಾನವಿರದೆ ಶುದ್ಧವಾಗಿ ಒಡೆಯನಿಗೆ ಸುಖವನ್ನು ನೀಡುವನೆ ದಾಸೋಹಿ. ಹಾಗೆ ಶರಣಸತಿ ಲಿಂಗಪತಿ ಭಾವಕ್ಕೆ ಬಂದು ಘನಪುರಾಣದ ಆಸೆಯನ್ನು ಹೊಂದಿದವನೆ ಸಾತ್ವಿಕ ಭಕ್ತ. ಸಕಲ ರೀತಿಯಲ್ಲಿ ಭೃತ್ಯಾಚಾರ ಸ್ಥಲದಲ್ಲಿ ನಡೆಯುವನೆ ಜಂಗಮ ದಾಸೋಹಿ ಎನ್ನ ಮನವನ್ನು ಎನ್ನ ಒಡೆಯನಾದ ಸಂಗಯ್ಯನಿಗೆ ಒಪ್ಪಿಸಿ ಸದಾಸುಖಿಯಾದೆನಯ್ಯ ಹಾಗೆ ನನ್ನನ್ನು ಪರಿಶುದ್ಧಳನ್ನಾಗಿ ಮಾಡಿ ನಿನ್ನ ಪಾದದ ಹಾವುಗೆಯಾಗಿಸಿ ಕಾಯೋ ಎಂದು ಹೇಳುತ್ತಾಳೆ. ಈ ಸ್ವರವಚನಕ್ಕೆ ಪ್ರೊ.ಮಲ್ಲಿಕಾರ್ಜುನ ಶಿವಪ್ಪ ಲಠ್ಠೆಯವರ ಅಭಿಪ್ರಾಯ "ನೀಲಲೋಚನೆಯು ಮಹಾದಾಸೋಹಿ ಎನಿಸಿದ್ದಳು. ದಾಸೋಹ ಸೇವೆ ಅವಳ ನಿತ್ಯ ಉಸಿರಾಗಿತ್ತು. ತನು, ಮನ, ಧನಗಳನ್ನು ಗುರುಲಿಂಗ ಜಂಗಮಕ್ಕೆ ನಿರ್ವಂಚನೆಯಿಂದ ಸಮರ್ಪಣೆ ಮಾಡಿ ಗುರುವಿನಲ್ಲಿ ತನುವನ್ನು, ಲಿಂಗದಲ್ಲಿ ಮನವನ್ನು, ಜಂಗಮದಲ್ಲಿ ಪ್ರಾಣವನ್ನು ಏಕರಸ ಮಾಡಿ ಕೂಡಿ ಸುಖಿಸುವವನೇ ದಾಸೋಹಿ ಎಂದು ಸಾರಿರುವರು. ನೀಲಲೋಚನೆಯವರು ನನ್ನನ್ನು ಶಿವಶರಣರು ಮೆಟ್ಟಿ ಜೋಗೈಸುವ ಪಾದರಕ್ಷೆಯನ್ನಾಗಿ ಮಾಡಿ ಮಡಗು ಎಂದಿದ್ದಾರೆ."[೨೩೩]

"ಜೋ ಜೋ ಪರಮಹಂಸ।
ಜೋ ಜೋ ಎನ್ನ ಪರಂಜ್ಯೋತಿ ॥ಪ॥
ಗುದವ ಬಿಗಿದೊತ್ತಿ, ಅನಿಲಜ್ವಾಲೆ ಪಲ್ಲವಿಸಿ
ಮುದಡಿಕೊಂಡಿರುವ ಸರ್ಪ ಹೆಡೆಯನೆತ್ತಿ
ಗದಗದಿಪ ಪವನ ಗ್ರಂಥಿಯನೊಡೆದು, ಪಶ್ಚಿಮದ
ಕದವ ತೆಗೆದೊಳಗೆ ಜ್ಯೋತಿ ಕಂಡ ಶಿಶುವೆ
.............................................
.............................................
ಸೋಮ ಸೂರ್ಯನಾಳದಲ್ಲಿ ಧ್ಯಾನವ ಮಾಡಿ
ಗ್ರಾಮ ಮೂರರ ಮಧ್ಯದಲ್ಲಿ ನಿಂದು

ಸೀಮೆಯನು ದಾಂಟಿ ನಿಸ್ಸೀಮ ಸಂಗಯ್ಯನೊಳು
ಏಕವಾದ ಚೆನ್ನಬಸವಣ್ಣ ಶಿಶುವೆ ॥೫॥"[೨೩೪]

ಅಧ್ಯಾತ್ಮ ಸಾಧಕ, ಶಿವಯೋಗಕ್ಕೆ ಹೋಗಬೇಕಾದರೆ ಮೊದಲು ಚಕ್ರಗಳನ್ನು ಭೇದಿಸಬೇಕು. ಅಂತಹ ಚಕ್ರಗಳನ್ನು ಭೇದಿಸಿದಾಗ ಪರಂಜ್ಯೋತಿ ಸ್ವರೂಪನಾಗುತ್ತಾನೆ. ಅಂತವನೆ ಶಿಶು, ಚೆನ್ನ ಬಸವಣ್ಣ ಆತನ ಜೋಗುಳ ಹಾಡುವೆ ಎಂದು ಹೇಳಿದಂತೆ ತೋರುತ್ತದೆ. ಈ ಸ್ವರವಚನ ಮೊದಲನೆ ಪದ್ಯದಲ್ಲಿ ಕುಂಡಿಲಿನಿ ಜಾಗ್ರತೆ ಮಾಡಿದರೆ ಯೋಗ ಸಾಧನೆಯಲ್ಲಿ ಯಶಸ್ಸನ್ನು ಕಾಣಬಹುದು ಎಂದು ಹೇಳುತ್ತಾಳೆ. "ಆಧಾರ ಚಕ್ರದಲ್ಲಿ ಮುಖವನ್ನಿರಿಸಿ ಬ್ರಹ್ಮರಂಧ್ರದಲ್ಲಿ ಬಾಲವನ್ನು ಚಾಚಿರುವ 'ಸರ್ಪ' ಸಂಜ್ಞಿತವಾದ ಒಂದು ನಾಡಿ ವಿಶೇಷ. ಶರಣರ ವಚನಗಳಲ್ಲಿ ಅನೇಕ ಸಲ ಮನಸ್ಸಿಗೂ 'ಕುಂಡಲಿನಿ' ಎಂದು ಕರೆಯುವುದುಂಟು."[೨೩೫] ಎಂದು ವಚನ ಪರಿಭಾಷಾಕೋಶದಲ್ಲಿ ಬರುತ್ತದೆ. ಇಂತಹ ಕುಂಡಲಿನಿ ಜಾಗ್ರತವಾದ ಮೇಲೆ ಆ ಶಿವಕಳೆ ಮೇಲೆ ಏರುತ್ತ ಕುಂಭವನೆ ದಾಲೆ ಅಲ್ಲಿ ಪರಮಾನಂದ ಎಂಬ ಹಾಲಸವಿದು ಪೃತ್ವಿಯೆಂಬ ತೊಟ್ಟಿಲೊಳಗೆ, ಅಂದರೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳು ಈ ಮಗುವನ್ನು ಸುಖದಲ್ಲಿಟ್ಟವೆ. ಇಂಥ ಸುಖಕ್ಕೆ ಹೋದ ಮಗು ಓಂಕಾರ ಊರ್ಧ್ವಕ್ಕೆ ಏರಿಸಿ ಅದು ಭ್ರೂಮಧ್ಯಕ್ಕೆ ತಲುಪಿ ನಂತರ ಬ್ರಹ್ಮರಂಧ್ರದ ಮುಖಾಂತರ ಪಶ್ಚಿಮ ಶಿಖಾಚಕ್ರಕ್ಕೆ ಹೋಗಿ ಅಮೃತದಂತ ಜ್ಞಾನ ಸವಿಯುಂಡು ದರ್ಪಣದ ಬೆಳಗಿನಲಿ ಚಿತ್ ಸ್ವರೂಪನಾಗಿ ಈಡಾ, ಪಿಂಗಳ, ಮೂಲಕ ಧ್ಯಾನ ಮಾಡಿ ಕುಂಬಕದ ಮೂಲಕ ಬಿಂದು ನಿಲ್ಲಿಸಿ, ಬಯಲನು ಕಂಡ ಅಥವಾ ನಿರಾಕಾರವ ಕಂಡು ಸಂಗಯ್ಯನೊಳಗೆ ಏಕವಾದ ಚೆನ್ನಬಸವಣ್ಣ ಶಿಶುವೆ ಎಂದು ಈತನ ಆಧ್ಯಾತ್ಮ ಜ್ಞಾನವನ್ನು ತಿಳಿಸುತ್ತಾಳೆ. ಈ ಸ್ವರವಚನದಲ್ಲಿಯ ಆಧ್ಯಾತ್ಮದ ಚೆನ್ನ ಬಸವಣ್ಣ ನಿಮಿತ್ಯ, ಆದರೆ ಈ ಜ್ಞಾನವನ್ನು ತಿಳಿಯಬೇಕು ಹಂಬಲವಿರಬಹುದು. ಹಾಗೆ ಈ ಮೂಲಕ ನಾನು ನಿರಾಕಾರ ಶಿಶುವಾಗಿದ್ದೇನೆ. ಶಿವಯೋಗ ಸಾಧನೆ ಮಾಡಿದ್ದೇನೆ ಎಂದು ಹೇಳಿರಬಹುದು ಎಂದು ತೋರುತ್ತದೆ. ನೀಲಾಂಬಿಕೆ ಬಸವಣ್ಣನವರನ್ನು ಕುರಿತು ಈ ಕೆಳಗಿನ ಸ್ವರವಚನದಲ್ಲಿ ಸ್ಮರಿಸಿದಂತೆ ತೋರುತ್ತದೆ.

"ಹುಯ್ಯಲ ಲಾಲಿಸಿರೋ ಶರಣರು! ಹೂ
ಹುಯ್ಯಲ ಲಾಲಿಸಿರೋ!
ಅಯ್ಯಯ್ಯೋ ನಾ ನಿಮ್ಮ ಕರುಣದ ಶಿಶುವೆಂದು
ಹುಯ್ಯಲ ಲಾಲಿಸಿರೊ॥ಪ॥
ಕಲ್ಯಾಣದೊಳಗೊಂದು ವೃಕ್ಷವು
ಎಲ್ಲಕೆ ನೆರಳಾಗಿ

ಅಲ್ಲಮ ಪ್ರಭುವಿನೊಳ್ವೆದುತಲಿದೆ ಕೋ
ಬಲ್ಲವರೊಳಕೊಳ್ಳಿರೊ ॥೧॥
..................................
ಎಲೆಯಿಲ್ಲದ ಮರದಿ, ಒಂಬತ್ತು
ತಲೆಗಳು ನಡವುಲೆವೆ!
ಕಲಿಗಳ ಕೈಗಳ ನೋಡಿರೆ, ಉಳುವಿಗೆ
ಹೊಲಬಿಗರಾದವರು ॥೪॥
ಶಿರಮುಂಡ ಬೇರಾಗಿ ಶರಣರ
ವರವ ಪಡೆಯಬಂದೆ
ಕರುಣಿಸಿ ಸಲಹಿರೋ ನಿಜಲಿಂಗ
ಸಂಗಯ್ಯ ನೊಲವಿನ ಶರಣರೆಲ್ಲ ॥೫॥"[೨೩೬]

ನೀಲಾಂಬಿಕೆಯು ತನ್ನ ದುಃಖವನ್ನು ಶರಣರಿಗೆ ನಿವೇದನೆ ಮಾಡುತ್ತಿದ್ದಾಳೆ. ಹಾಗೂ ಇವರಿಗೆ ನನ್ನ ನೋವನ್ನು ಹಂಚಿಕೊಳ್ಳಲು ಕಾರಣ ನಾನು ಇದ ಕರುಣೆಯ ಶಿಶುವಾಗಿದ್ದರಿಂದ ನನ್ನ ಸುಖದುಃಖಗಳಿಗೆ ಕಾರಣರಾಗಿದ್ದಾರೆ ಎಂದು ಹೇಳುತ್ತಾರೆ. ಈ ಸ್ವರವಚನಗಳಲ್ಲಿ ಸಂಕೇತಗಳ ಮೂಲಕ ಬಸವನ ಬಗೆಯನ್ನು ಹೇಳುತ್ತಾ, ಕಲ್ಯಾಣದೊಳಗೆ ವೃಕ್ಷವಾಗಿದ್ದನು ಎಲ್ಲರನ್ನು ಅಪ್ಪಿಕೊಳ್ಳುವನು. ಅಲ್ಲಮರಿಗೆ ಬಳ್ಳಿಯಾಗಿದ್ದಾನೆ. ಇಂತಹ ಬಸವಣ್ಣ ವಿಶ್ವದ ಪರಿಯಾಗಿದ್ದಾನೆ. ಇಂತಹ ಮರಕ್ಕೆ ಎಲೆಯಿಲ್ಲದೆ, ಬರಡಾಗಿದೆ. ಹಾಗೂ ನನ್ನ ಮನದಾಳಕ್ಕೆ ಪ್ರೀತಿಯೆರೆದ ಈತ, ಎಲ್ಲಿ ಹೋಗಿದ್ದಾನೆ ಎಂಬುದರ ಮೂಲಕ ಕರುಣೆಯ ತೋರಿ ಎಂಬುದಾಗಿದೆ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಆಗ ತಾನೆ ಆಧ್ಯಾತ್ಮಿಕ ಹಂತಕ್ಕೆ ಕಾಲಿಟ್ಟ ಈಕೆ ನನಗೆ ಅನುಭಾವದ ಪ್ರಸಾದ ನೀಡಿ ಕರುಣಿಸಿ ಹಾಗೂ ಪಂಚೇಂದ್ರಿಯಗಳ ವಿಷಯವಾಸನೆ ಸುಟ್ಟುಹಾಕಿ, ಲಿಂಗದ ಸಮರಸಕ್ಕೆ ಮುಂದಾಗಿ ಈ ಎಲೆಯಿಲ್ಲದ ಮರಕ್ಕೆ ಒಂಬತ್ತು ತಲೆಗಳು ಅಂದ ಇಷ್ಟಲಿಂಗಕ್ಕೆ ನವಲಿಂಗ ಜಪಮಾಡಿದಾಗ ಶರೀರ ಸ್ಥೂಲ, ಹೋಗಿ, ಸೂಕ್ಷ್ಮವಾಗಿ, ಸೂಕ್ಷ್ಮದಿಂದ ಕಾರಣಿಕ ಕಡೆಗೆ ಬಂದು ಮುಕ್ತಿ ಪಥದತ್ತ ಸಾಗಲು ಈ ಸಿದ್ಧಾಂತವನ್ನು ಕರುಣೆಯ ತೋರಲು ಕೇಳುವಂತಿದೆ ಎನ್ನಬಹುದು.

ನೀಲಾಂಬಿಕೆಗೆ ಬಸವಣ್ಣನವರು ಸಂಗಮಕ್ಕೆ ಕರೆದುಕೊಂಡು ಬಾ ಎಂದು ಅಪ್ಪಣ್ಣನವರಿಗೆ ಹೇಳಿದಾಗ ಈ ಕೆಳಗಿನ ಸ್ವರವಚನ ಹೇಳುತ್ತಾಳೆ.

"ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನಾ ಮಾಡಿದಾಟವ ॥ಪ॥

ಅಲ್ಲಗೆನ್ನನು ಬರಹೇಳಿದರಂತೆ
ಇಲ್ಲಿ ತಾವಿಲ್ಲವೆ ಸಂಗಯ್ಯನು
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ ॥೧॥
ಪೊಡವಿಯ ಭಕ್ತಗಣಂಗಳು ಸಹವಾಗಿ
ಮಡಗಿದ ಶ್ರೀಗುರುಕರದಲ್ಲಿ
ದೃಢಚಿತ್ತ ಕರಿಗೊಂಡು ಕೂಡಿಹೆನೆಂದಡೆ
ನ್ನೊಡೆಯ ಸಂಗಮನಾಥನೀತನಲ್ಲವೆ? ॥೨॥
ಸಂಗನ ಬಸವಣ್ಣನೆಂದ ನಿರೂಪಕೆ
ಹಿಂಗದೆ ಕರವೆತ್ತಿ ಮುಗಿಯುತಲಿ
ಸಂಗಮ ನಾಥನೆ ಈತನೆಂದು ಎ
ನ್ನಂಗೈಯ ಲಿಂಗದೊಳಡಗುವೆನು ॥೩॥"[೨೩೭]

ಈ ಸ್ವರವಚನದಲ್ಲಿ ಹಡಪದ ಅಪ್ಪಣ್ಣನವರಿಗೆ ಹೇಳಿದ ಉತ್ತರವಾಗಿದೆ. ಏಕೆಂದರೆ ಬಸವಣ್ಣ ವಿಚಾರವಂತ ಆಗಿದ್ದು ನನ್ನನ್ನು ಬರ ಹೇಳಿದ್ದು ಯಾಕೆ? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವಿದೆ. ಇಂಥ ಶ್ರೇಷ್ಠ ಬಸವಣ್ಣಗೆ ಈ ಉಭಯಗುಣ ಹೋಗಿಲ್ಲ ಎಂದ ಮೇಲೆ ಸಾಮಾನ್ಯರ ಗತಿಯೇನು ಎಂಬ ಪ್ರಶ್ನೆ ಈಕೆಯಲ್ಲಿ ಮೂಡಿರಬಹುದು. ಆದರೆ ಈ ಸ್ವರವಚನದಲ್ಲಿ ಆಕೆಯ ಘನ ನಿರ್ಧಾರ ಸ್ಪಷ್ಟವಾಗುತ್ತೆ ನಾನು ಗುರುಕೊಟ್ಟ ಲಿಂಗ ಸಂಗಯ್ಯ ಹಾಗಾಗಿ ಕೂಡಲಸಂಗನೀತನಾಗಿದ್ದಾನೆ. ನಾನು ಇಲ್ಲಿಯೇ ಐಕ್ಯವಾಗಿವೆ. ಹಾಗೆ ಹೇಳಿ ಅಪ್ಪಣ್ಣನನ್ನು ಕಳಿಸಿದಳು ಎಂದು ತಿಳಿಯುತ್ತದೆ. ಆದರೆ ಯಾವ ಸ್ಥಳದಲ್ಲಿ ಹಾಡಿದಳು? ಕಲ್ಯಾಣದಲ್ಲಿಯೋ ತಂಗಡಗಿಯಲ್ಲಿಯೋ ಎಂಬುದು ತಿಳಿದುಬರುವುದಿಲ್ಲ. ಆದರೆ ಶಾಂತಾ ಇಮ್ರಾಪೂರರು "ಲೋಕನೀತಿಗಾಗಿ ಪತಿಯನ್ನು ಹಿಂಬಾಲಿಸಿ ಕೂಡಲಸಂಗಮಕ್ಕೆ ನಡೆಯುತ್ತಾಳೆ. ಮಧ್ಯದಲ್ಲಿಯೇ ಬಸವಣ್ಣನವರು ಲಿಂಗೈಕ್ಯರಾದ ವಾರ್ತೆಯನ್ನು ಕೇಳಿ ತಂಗಡಗಿಯಲ್ಲಿ ಲಿಂಗೈಕ್ಯವಾದಳೆನ್ನುವುದನ್ನು ಮೇಲಿನ ಸ್ವರವಚನ ಸ್ಪಷ್ಟಪಡಿಸುತ್ತದೆ"[೨೩೮] ಎಂದು ಅಭಿಪ್ರಾಯ ಪಡುತ್ತಾರೆ.

## ಇ. ನೀಲಾಂಬಿಕೆಯ ಕಾಲಜ್ಞಾನ ವಚನಗಳು

ನೀಲಾಂಬಿಕೆಯ ವಚನ, ಸ್ವರವಚನಗಳು ಆಕೆಯ ಆತ್ಮಶುದ್ಧಿಯನ್ನು ಜೊತೆಗೆ ಆಕೆಯಲ್ಲಿ ಅಡಗಿದ್ದ ನಿಷ್ಠೆಯನ್ನು ಕುರಿತು ಹೇಳಿದರೆ ಆಕೆಯ ಕಾಲಜ್ಞಾನ ವಚನಗಳು ಮುಂದಿನ ಆಗು–ಹೋಗುಗಳನ್ನು ಹೇಳಿರುವುದು ಕಾಣುತ್ತೇವೆ. ಕಾಲಜ್ಞಾನ ವಚನಗಳನ್ನು ಹಲವಾರು ಶರಣರ–

ಶರಣೆಯರು ಬರೆದಿರುವುದು ಕಾಣುತ್ತೇವೆ. ಅವರಲ್ಲಿ ಭಿನ್ನವಾಗಿ ನೀಲಾಂಬಿಕೆಯ ಕಾಲಜ್ಞಾನ ಕಂಡುಬರುತ್ತದೆ. ಏಕೆಂದರೆ ಹಲವಾರು ಶರಣರು ಮುಂದಿನ ವಚನಗಳ ಆಗು-ಹೋಗುಗಳ ಕುರಿತು ಹೇಳಿದ್ದಾರೆ. ನೀಲಾಂಬಿಕೆ ಪ್ರಕೃತಿಯಲ್ಲಿ ಕುರಿತು ಆಗುವ ಬದಲಾವಣೆ ಕುರಿತು ಮನುಷ್ಯ ಮನುಷ್ಯರೊಳಗಿನ ಸಂಬಂಧವನ್ನು ಕುರಿತು ಹೇಳಿದ್ದನ್ನು ಕಾಣಬಹುದು. ಅಷ್ಟೇ ಅಲ್ಲದೆ ಅನುಭವದ ಜ್ಞಾನ ಮತ್ತೆ ಮರಳಿ ಬರುತ್ತದೆ ಎಂಬುದನ್ನು ಹೇಳುತ್ತಾಳೆ. ಈಕೆಯ ಕಾಲಜ್ಞಾನ ವಚನದಲ್ಲಿ ಪಲ್ಲವಿಯಲ್ಲೇ ತನ್ನ ಅಂಕಿತನಾಮವನ್ನು ಹೇಳುವ ಪರಿ ವಿಶಿಷ್ಟವಾಗಿದೆ. ನೀಲಾಂಬಿಕೆಯ ಕಾಲಜ್ಞಾನ ವಚನಗಳು ಅಕ್ಕನಾಗಮ್ಮನ ನೆನಕೆಯಿಂದ ಪ್ರಾರಂಭವಾಗುವಂತಹ ಪರಿಯನ್ನು ಕಾಣುತ್ತೇವೆ.

ನೀಲಾಂಬಿಕೆಯ ಕಾಲಜ್ಞಾನ ವಚನವನ್ನು ಈ ಕೆಳಗಿನಂತೆ ನೋಡಬಹುದು

"ಸುವ್ವಿ ಬಾ ಸಂಗಯ್ಯ । ಸುವ್ವಿ ಬಾ ಲಿಂಗಯ್ಯ ಸುವ್ವಿ ಬಾ ಚೆನ್ನಬಸವಯ್ಯ ಸುವ್ವಿ ॥ಪ॥ ಸುವ್ವಿ ಬಾ ಚೆನ್ನಬಸವಯ್ಯ ಬರುವಾಗ ಹುಯ್ಯಾಲೆ ಬೊಬ್ಬೆ ಒನಕೆಯ ಜಗಕ್ಕೆಲ್ಲ ಅಕ್ಕನಾಗಮ್ಮನು ಚಿಕ್ಕ ಒನಕೆಯ ಪಿಡಿದು ಅಕ್ಕಿ ಒಮ್ಮಾನ ತೊಳೆಸುತ್ತ ॥ಸು॥ ಅಕ್ಕಿ ಒಮ್ಮಾನ ತೊಳೆಸುತ್ತ ಪಾಡಿದಳು ಮುಕ್ಕಣ್ಣ ಶಿವನು ಬರುವಾಗ ॥ಸು॥ ಕುಟ್ಟೋಣ ಬನ್ನೀರಿ ಪಟ್ಟಣನ ಸತಿಯಾರ ಹುಟ್ಟು ಕರ್ಮಗಳು ಅಳಿವಂತೆ ॥ಸು॥ ಹುಟ್ಟು ಕರ್ಮಗಳು ಅಳಿವಂತೆ ತೊಳೆಸುತ್ತಾ ಪಟ್ಟಣಕ್ಕೆ ಶಿವನು ಬರುವಾಗ ॥ಸು॥ ನಮ್ಮಯ್ಯ ಬರುವಾಗ ॥ಸು॥ ಕಾರಣೀಕದ ದಿನವು ಮುಂದಿನ್ನು ಘೋರಪಾತಕ ದಿನ ಬಂತು ॥ಸು॥ ಏಳೂರಿಗೊಂದೂರ ಏಳುಸುತ್ತಿನ ಕೋಟೆ ಹಾಳಾಗುತಾವೆ ಜಗವಿಲ್ಲಾ ॥ಸು॥ ದಿನ ಮಾನದುರ್ಗಿಯು ಅನುವಾಗ ಬರುವಾಗ ಮನುಜಾರ ದುಃಖ ವಿಪರೀತ ಮಹಾಮಾಯಿ ಘನದಂಡು ಕೂಡಿ ಬರುವಾಗ ॥ಸು॥ ಆಕಳು ಅಳಿದಾವು ಗೂಗೆಗಳ್ಳಾಗದವು ಕಾಗೆ ದಂಡು ಬರುವಾಗ ॥ಸು॥ ಕಾಯ ದಂಡು ಬರುವಾಗ ಜಗವೆಲ್ಲ ಕೂಗು ಬೊಬ್ಬೆಗಳು ಮನೆ ಮನೆಗೆ ॥ಸು॥..."[೨೫]

ಈ ಕಾಲಜ್ಞಾನ ವಚನವು ಮನುಜ ಜನ್ಮದ ಮುಂದಿನ ಅವಾಂತರಗಳು ಹಾಗೂ ಪ್ರಾಣಿ-ಪಕ್ಷಿ-ಪರಿಸರ ಕುರಿತು ಮುಂದಾಗುವ ಘಟನೆಗಳನ್ನು ಹೇಳುತ್ತದೆ. ಹಾಗೆ ಈ ಭೂಮಿಯಲ್ಲಿ ಸತ್ಯ-ಶರಣರು ಹುಟ್ಟಿ ದುಃಖವ ನಾಶ ಮಾಡುತ್ತಾರೆ ಎಂದು ಹೇಳುತ್ತಾ ಹಾಗೆ ಬೆಟ್ಟಗಳು ನಡುಗಿ ಅಲ್ಲಿಯ ಗುಂಡು ಉರುಳಿ ಅದನ್ನು ಕಾಯುವಂತಹ ಸೃಷ್ಟಿ ಪಾಲಕ ಚೆನ್ನಬಸವ ಹುಟ್ಟಿಬರುತ್ತಾನೆ. ಪ್ರಾಣಿ-ಪಕ್ಷಿಗಳಲ್ಲಿ ದ್ವೇಷ-ಅಸೂಯೆ ಮೂಡಿ ಸಂಬಂಧವಿಲ್ಲದ ಪ್ರಾಣಿ ಅದರ ವಿರುದ್ಧ ಈಜಿ ನುಂಗುವಂತಹ ಭ್ರಮೆ ಬರುವಂತಹದ್ದನ್ನು ಹಾಗೂ ಕಲ್ಯಾಣ ದಿಕ್ಕಿಗೆ ವೀರವಸಂತ ವೆಂಬುವನು ಹುಟ್ಟಿ ಆತನಿಂದ ಕಲ್ಯಾಣ ನಾಡಿಗೆ ಒಳಿಗಾಗಿ ಎಂದು ನೀಲೀಂಬಿಕೆ ಈ

ಕಾಲಜ್ಞಾನ ವಚನದಲ್ಲಿ ನುಡಿದದ್ದು ಕಂಡುಬರುತ್ತದೆ. ಈ ಕಾಲಜ್ಞಾನ ವಚನವು ಈ ಕಾಲಘಟ್ಟದಲ್ಲಿಯ ಸ್ಥಿತಿ-ಗತಿಗಳನ್ನು ಹೇಳುವಂತಹದ್ದಾಗಿದೆ. ಈಕೆಯ ವಚನವನ್ನು ಆಧರಸಿ ಹೇಳುವುದಾದರೆ ಮಳೆ, ಬೆಳೆ, ಪ್ರಕೃತಿಯಲ್ಲಿಯ ವಿಕೋಪ ಒಂದು ಕಡೆಯಾದರೆ ಮನುಷ್ಯ-ಮನುಷ್ಯರಲ್ಲಿಯ ಮತ್ಸರ ಭಾವವನ್ನು ಈ ಕಾಲಜ್ಞಾನ ವಚನ ಹಿಂದಿನ ಸ್ಥಿತಿಯನ್ನು ಸುಳ್ಳು ಎನ್ನುತ್ತಾರೆ ಅದು ಹೇಗೆ ಸುಳ್ಳು ಎಂಬುದನ್ನು ನೀಲಾಂಬಿಕೆ ತನ್ನ ಕಾಲಜ್ಞಾನ ವಚನದ ಮೂಲಕ ಹೀಗೆ ವ್ಯಕ್ತಪಡಿಸುತ್ತಾಳೆ.

"ಸುಳ್ಳು ಸುಳ್ಳೆನುತಾರೆ ಕಾಲಜ್ಞಾನ । ಸುಳ್ಳಾಗಬಹುದೇನೋ ಕಾಲಜ್ಞಾನ । ಸುಳ್ಳಾಗಬಲ್ಲದೇನೊ। ಕಲ್ಯಾಣದವರು ಹೇಳಿದ ಮಾತು ಸಟೆಯಲ್ಲ ಬಲ್ಲವರೇ ಬಲ್ಲರಣ್ಣ॥1॥ ಅಣ್ಣ ತಂಗಿಯ ಹೋಗಲಿಲ್ಲೆ। ಮುಂದಿನ್ನು ಸಣ್ಣ ನಾಮದವರು ಬರುವದಿಲ್ಲೆ॥ ಬಣ್ಣಾದ ಅರಮನೆ ಹಾಳು ಬಿದ್ದಂತದನು ಕಣ್ಣೀಲಿ ಕಾಣಲಿಲ್ಲೆ॥2॥ ಕನಕೆಳು ವೆತ್ತಲಿಲ್ಲೆ ಒಡಹುಟ್ಟದಕ್ಕನ ಹೋಗಲಿಲ್ಲೆ। ಬಡವರು ಬಡಿದಾಡಿ ಮನೆ-ಮನೆಗೆ ಕೂಳಿಗೆ ಭಿಕ್ಷವನು ಬೇಡಲಿಲ್ಲೆ ॥3॥ ಸನ್ಯಾಸಿ ಕೆಟ್ಟದ್ದಿಲ್ಲೆ ಹೊನ್ನುಳ್ಳ ಅರಗರು ಅಣಿಯಲಿಲ್ಲೆ । ಅನ್ಯಾಯ ಹೆಚ್ಚಾಗಿ ಅಷ್ಟದಿಕ್ಕಿನ ಸೂರೆ ಇನ್ನಾರು ಕಾಣಲಿಲ್ಲೆ । ರಂಡೆಯರು ಮನೆಮನೆಗೆ ಅಣ್ಣಾ । ಗರ್ಭಿಣಿಯರಾಗಿ ಕೆಡು ರಣ್ಣಾ ಗಂಡ ಮಿಂಡರು ಒಂದೇ ಪಂಕ್ತಿಯಲ್ಲಿ ಊಟದಂಡ ಪೊರಿಗೆಗಳಣ್ಣಾ ॥4॥ ಹೊಲ ಮನೆ-ಉದ್ಯೋಗವು ಕಟ್ಟು ಮಳೆಗಳ ಗತಿ ಶೂನ್ಯವು ಹಲವು ಪರಿಯಲಿ ಚಿಂತೆ ಸುಖ ಜನವೆಲ್ಲ ಇಲ್ಲಾ । ವಲಹ ಉದುರಿದರಣ್ಣಾ ॥5॥ ಧರ್ಮವು ಮುಳಗಲಿಲ್ಲೇ ಮನೆಯ ಮನೆ ಕರ್ಮವು ಹೆಚ್ಚಲಿಲ್ಲೆ ಅರಮನೆಯವರ ನಾಲಿಗೆ ತಪ್ಪಿರೊಕ್ಕವನು ನೇಮ ನೇಮದಿ ಸುಲಿಯಲೆಲ್ಲೆ॥6॥..."[೨೮೦]

ಈ ಕಾಲಜ್ಞಾನ ವಚನವು ಒಬ್ಬರಿಬ್ಬರು ಸಂಬಂಧವಿಲ್ಲದಂತೆ ಆಗುತ್ತಾರೆ ಎಂಬುದನ್ನು ಹೇಳುತ್ತದೆ. ಅಣ್ಣ-ತಂಗಿ, ಅಕ್ಕ-ತಮ್ಮ ಬಡವ-ಬಲ್ಲಿದ ಇವು ಇಲ್ಲವಾಗಿ ಅನ್ಯಾಯ ಹೆಚ್ಚಾಗಿ ಪುಂಡ-ಗಂಡರ ಗಾಳಿಯಿಂದ ನೋವು ಉಂಟಾಗುತ್ತದೆ. ಹಾಗೆ ಮಾತಿನಲ್ಲಿ ನಡೆಯಲ್ಲಿ, ಹಾಗೂ ಭಕ್ತಿ-ಭಾವ ಮರೆತು ಧಾರ್ಮಿಕ ಕಟ್ಟಳೆಗಳು ಇಲ್ಲವಾಗಿ ಹಾಳಾದ ಅರಮನೆಯಂತೆ ಬದುಕು ಆಗುತ್ತದೆ. ಈ ಎಲ್ಲಾ ಹಿಂಸೆ ಆದ ಮೇಲೆ ಗುದುಗಿನೊಳು ರಥಯೆಳೆದು ಮಹಾತ್ಮರ ಉದಯವಾಗಿ ದುಷ್ಟರು ಇಲ್ಲವಾಗುತ್ತಾರೆ. ಸುಳ್ಳು ಹೋಗಿ ಸತ್ಯದ ಕಾಲ ಬರುತ್ತದೆ ಎಂದು ಈ ಕಾಲಜ್ಞಾನದಲ್ಲಿ ತಿಳಿಯಬಹುದು.

ಒಟ್ಟಾರೆಯಾಗಿ ನೀಲಮ್ಮನ ಕಾಲಜ್ಞಾನ ವಚನದಲ್ಲಿ ಮುಂದೆ ಆಗುವ ಆಗುಹೋಗುಗಳನ್ನು ವಿವರಿಸುವುದಲ್ಲದೆ ಧರ್ಮದ ಹಾದಿಯಲ್ಲಿ ನಡೆಯಬೇಕು ಎಂಬುದನ್ನು ಸೂಚಿಸುವ ಮಾರ್ಗದರ್ಶಿ ವಚನವಿದೆ.

ಕನ್ನಡ ನಾಡಿನ ಶರಣ ಚಳುವಳಿಯ ಕಾರಣೀಕ ವ್ಯಕ್ತಿಯಾದ ಬಸವಣ್ಣನವರ ಸತಿಯಾದ ನೀಲಾಂಬಿಕೆ ಅನುಭಾವಿ ಶರಣೆ, ಈಕೆಯ ಪಾರಮಾರ್ಥಿಕ ತಾತ್ವಿಕ ಚಿಂತನೆಗಳನ್ನು ತನ್ನ ವಚನಗಳ ಒಡಲಲ್ಲಿ ತುಂಬಿಕೊಟ್ಟಿದ್ದಾಳೆ. ಹಾಗೆ ಬಸವಾದಿ ಶರಣರ ಸಮಕಾಲೀನಳಾದ ಈಕೆ ತನ್ನದೆ ಆದ ಸಾಧನೆಯನ್ನು ಮಾಡಿದ್ದಾಳೆ. ಈಕೆಯು ಕೇವಲ ವಚನಕಾರ್ತಿಯಲ್ಲದೆ, ಬಸವಣ್ಣನಿಗೆ ವಿಚಾರಪತ್ನಿಯಾಗಿದ್ದೆ ಎಂದು ತನ್ನ ಒಂದು ವಚನದಲ್ಲಿ ಎಂದು ಹೇಳಿ ಕೊಂಡಿದ್ದಾಳೆ. ಹಾಗಾಗಿ ನೀಲಾಂಬಿಕೆಯಲ್ಲಿ ಉತ್ಕಟವಾದ ಚಿಂತನೆಯು ತಿಳಿದುಬರುತ್ತದೆ. ಹಾಗೆ ಸಂಪೂರ್ಣತ್ವದ ನಿಜಸುಖದ ಇರುವು ಈಕೆಯಲ್ಲಿ ಜಾಗೃತವಾಗಿದೆ. ಮತ್ತು ವೈಯಕ್ತಿಕ ಭಾವನೆಯಿಂದ ಊರ್ಧ್ವ ಮುಖದ ಆಲೋಚನೆಗಳನ್ನು ಹಾಗೂ ಶಕ್ತಿ ಭಕ್ತಿಗಳ ಮೂಲಕ ಎತ್ತರದ ಸ್ಥಿತಿಯತ್ತ ಸಾಗಿದ್ದಾಳೆ. ಮತ್ತು ಪರಶಿವನಲ್ಲಿಯ ವ್ಯಕ್ತ ರೂಪತೆಯನ್ನು ಕಾಣಲು ಬೇಕಾಗುವ ಪರಿಕರ ಮೂಲಕ ತಿಳಿಯಲು ಹವಣಿಸಿದ್ದಾಳೆ. ಆದರೆ ಸೂಕ್ಷ್ಮಾತಿ ಸೂಕ್ಷ್ಮವಾಗಿಯೂ ತನ್ನ ವಚನಗಳಲ್ಲಿ ಮನೋ ವೇದನೆಯನ್ನು ತುಂಬಿದ್ದಾಳೆ ಎಂಬುದು ಕಂಡುಬರುತ್ತದೆ.

ನೀಲಾಂಬಿಕೆ ತನ್ನ ವಚನಗಳಲ್ಲಿ ಉಭಯಭಾವವನ್ನು ಅಲ್ಲಗೆಳೆದು ಏಕತ್ವದ ಸ್ಥಿತಿಗೆ ಬಂದು ನಿಲ್ಲುತ್ತಾಳೆ. ಹಾಗೂ ಆಧ್ಯಾತ್ಮಿಕ ಅನುಭಾವದ ಚಿಂತನೆಯಲ್ಲಿ ದೈವತ್ವದ ಕುರುಹು ಕಾಣಲು ಸಾಧ್ಯ ಎನ್ನುತ್ತಾರೆ. ಅಷ್ಟೆಯಲ್ಲದೆ ಲೌಕಿಕವು ದುಃಖದ ಹೆಮ್ಮರವಾಗಿದೆ. ಅಲೌಕಿಕ ಚಿಂತನೆಯ ಮೂಲಕ ಸರಿಪಡಿಸಿ ಏಕತೆಯತ್ತ ಸಾಗುವ ಆಧ್ಯಾತ್ಮದ ತುಮುಲವನ್ನು ಈಕೆಯ ವಚನಗಳಲ್ಲಿ ನೋಡಬಹುದು. ಈಕೆ ತೀರ ಬಸವನಲ್ಲಿಯ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದಾಳೆ. ಏಕೆಂದರೆ ಈಕೆಯ ಪ್ರತಿಯೊಂದು ಹಂತದಲ್ಲಿ ಬಸವನ ಸ್ಮರಣೆ, ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನು ನೆನೆದ ಪರಿಯಂತಿದೆ. ಕಾರಣ ನನಗೆ ಬಸವನೆ ಸರ್ವಸ್ವವೆಂಬುದು ಈಕೆಯ ಭಾವನೆಯಾಗಿದೆ. ಹಾಗೆ ವ್ಯಕ್ತಿಗತವಾದ ಪರಿಸರದ ವಿಶಿಷ್ಟ ಭಾವ, ಅದರಲ್ಲೂ ಶರಣಪತಿ–ಲಿಂಗಪತಿ ಭಾವ ಉಲ್ಬಣಿಸಿದ್ದು, ನಿರಾಕಾರ ಸ್ಥಿತಿಯ ಹಂತದ ಪಯಣವಾಗಿದೆ. ಹಾಗೆ ಈಕೆಯ ವಚನಗಳಲ್ಲಿ ಊರ್ಧ್ವಮುಖಿ ಚಿಂತನೆಯನ್ನು ಕಾಣುತ್ತೇವೆ. ಹೇಗೆಂದರೆ ವೈಯಕ್ತಿಕದಿಂದ ಬಸವನಿಷ್ಠೆ, ಬಸವನಿಷ್ಠೆಯಿಂದ ಲಿಂಗನಿಷ್ಠೆ, ಈ ಮೂಲಕ ಅನುಭವ ಅನುಭಾವ, ಹಾಗೂ ಶರಣರನ್ನು ಕುರಿತ ನಿಲುವುಗಳ ಮೂಲಕ ಈಕೆಯ ವಿರಹ ವೇದನೆ, ಮನೋವಿಕಾರತೆ, ನಿರ್ಮೋಹ, ನಡೆನುಡಿ, ಹಂಗು ಇಲ್ಲದ್ದು, ಮನಃಶಾಂತಿ, ಅರಿವು ಆಚಾರ ಮುಂತಾದ ಅಂಶಗಳನ್ನು ಅಲ್ಲದೆ ಈಕೆಯ ಸ್ವರವಚನದ ಅನುಭವಸಾರ ಮತ್ತು ನೀಲಾಂಬಿಕೆಯಲ್ಲಿನ ವೈಚಾರಿಕ ಸಂವೇದನೆಯನ್ನು

ಒಟ್ಟಾರೆಯಾಗಿ ಈಕೆಯ ವಚನ ಸ್ವರವಚನ ಹಾಗೂ ಕಾಲಜ್ಞಾನ ವಚನಗಳಲ್ಲಿ ಆಧ್ಯಾತ್ಮಿಕ ವಿಚಾರಗಳು ಬಹುಮುಖ್ಯವಾಗಿವೆ. ಹಾಗೆ ಈ ಮೂಲಕ ತನುಮನ ಭಾವ ಶುದ್ಧಗೊಳಿಸುವ ಕ್ರಿಯೆ ನಡೆಯಬೇಕು ಎಂದು ಹೇಳುತ್ತಾ ಹೆಚ್ಚಾಗಿ ಬಸವನ ಅಗಲುವಿಕೆಯನ್ನು ತಿಳಿಸುತ್ತಾಳೆ.

ಬಸವಣ್ಣನ ಮೇಲೆ ಇರುವ ಅಚಲ ನಿಷ್ಠೆ, ಆಕೆಯನ್ನು ತಾತ್ವಿಕ ನೆಲೆಯತ್ತ ಕೊಂಡೊಯ್ಯುತ್ತವೆ ಹಾಗೂ ಇತರ ಅನುಭವಿ ಶರಣರಿಂದ ತಾತ್ವಿಕ ಅಂಶವನ್ನು ತಿಳಿದುಕೊಂಡು ನಡೆದ ಪರಿಯನ್ನು ಹೇಳುತ್ತಾಳೆ.

ನೀಲಾಂಬಿಕೆ ಅನುಭವ ಮತ್ತು ಅನುಭಾವದ ಮೂಲಕ ತನ್ನ ವಚನಗಳಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಚಿಂತನೆಗಳೊಂದಿಗೆ ಪರಮ ನಿರಾಕಾರದ ಅಸ್ತಿತ್ವವನ್ನು ಕಂಡುಕೊಳ್ಳುವ ಛಾಯೆಯನ್ನು ಕಾಣುತ್ತೇವೆ. ಕಾಯದ ನಿಶ್ಚಲ ಸ್ಥಿತಿಗೆ ಬರಬೇಕಾದರೆ ನಿಷ್ಠೆಗಳು ಬಹಳ ಮುಖ್ಯ ಎಂಬುದರಿಂದ ಈಕೆಯ ವೈಯಕ್ತಿಕ ಭಾವನೆಗಳು ಬಸವನಿಷ್ಠೆಯಲ್ಲಿ ಲೀನವಾಗಿದ್ದು, ಜೊತೆಗೆ ಪರಸ್ಪರರ ಪ್ರೇಮತ್ವ ಆಧ್ಯಾತ್ಮಿಕ ನಂಟು ಈಕೆಯನ್ನು ಸಮರ್ಥ ಚಿಂತಕಳಾಗಿ ಮಾಡಿದಂತೆ ಕಾಣುತ್ತದೆ. ಈ ಚಿರಂತನ ಸತ್ವವನ್ನು ಬಸವನಿಂದ ಕಂಡುಕೊಂಡು ಲಿಂಗನಿಷ್ಠೆಯ ಮುಖಾಂತರ ಲಿಂಗಾನುಭಾವಿಯಾಗಿದ್ದಾಳೆ. ಇಲ್ಲಿ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ ಅನುಸಂಧಾನದಿಂದ ಲಿಂಗಸಂಬಂಧಿಯಾಗಿ ತನ್ನ ಮನದ ಜಿಜ್ಞಾಸೆ ತೊಡೆದು ಹಾಕಿ ಇಷ್ಟಲಿಂಗವನ್ನು ಅಂಗದಲ್ಲಿ ಪೂಜಿಸಿ, ನಂತರದಲ್ಲಿ ಮನದಲ್ಲಿ ಪೂಜೆ ಮಾಡಿ ಭಾವಾತೀತವಾದ ನಿರಾಕಾರ ಪೂಜೆಯನ್ನು ಮಾಡುವುದರೊಂದಿಗೆ ಅನುಭವದಿಂದ ಅನುಭಾವದೆಡೆಗೆ ಸಾಗುತ್ತಾಳೆ. ಇಲ್ಲಿ ಸ್ಥೂಲ, ಸೂಕ್ಷ್ಮ, ಕಾರಣಿಕ ಮೂಲಕ ದೇಹ, ದೇವಾಲಯವಾಗಬೇಕು. ಅಜ್ಞಾನ ಹೋಗಿ ಸುಜ್ಞಾನ ಬರಬೇಕು. ಅಂತರಿಕ ನಿಲುವುಗಳು ಹೆಚ್ಚಿ ವಿಷಯಾದಿಗಳು ಸುಜ್ಞಾನ ಎಂಬ ಅಗ್ನಿಯಲ್ಲಿ ನಾಶವಾಗಿ ಪರಿಶುದ್ಧತೆಯತ್ತ ಸಾಗುವ ಪರಿಣಾಮ ಸ್ಥಿತಿ ಬರಬೇಕು ಎಂಬುದು ಮುಖ್ಯ ಆಶಯವಾಗಿದೆ.

ಈ ಎಲ್ಲಾ ನಿಷ್ಠೆಗಳು ಈಕೆಯ ಆಚಲವಾದ ಜ್ಞಾನ ಹಾಗೂ ಭವಮುಕ್ತಳಾಗಬೇಕು ಎಂಬ ಸಮರ್ಪಣ ಭಾವವನ್ನು ಎತ್ತಿ ತೋರಿಸುತ್ತವೆ. ನಂತರದಲ್ಲಿ ಈಕೆ ಶರಣರನ್ನು ಕುರಿತು ಹೇಳುತ್ತಾ ಅವರೊಂದಿಗಿನ ಭಾವನಾತ್ಮಕ ಸಂಬಂಧವನ್ನು ಸೂಚಿಸಿ ಅವರಲ್ಲಿ ಅಡಗಿದ್ದ ತತ್ವ ವಿಚಾರಗಳನ್ನು ಈ ಶರೀರಕ್ಕೆ ಧರಿಸುವತ್ತ ಸಾಗಿ ಆ ಮೂಲಕ ಬಯಲ ಸ್ಥಿತಿಗೆ ತಲುಪುವ ಹಂತಕ್ಕೆ ಸಾಗಿದುದರಿಂದ ಅನುಭಾವವುಳ್ಳ ಪ್ರಸಾದಿಯಾಗಲು ಮುಂದಾಗಿದ್ದಾಳೆ. ಹಾಗೆ ವಚನ ಸ್ವರವಚನಗಳಲ್ಲಿ ತಾತ್ವಿಕ ದರ್ಶನವನ್ನು ಮಾಡಿಸುತ್ತಾಳೆ.

**ಅಡಿಟಿಪ್ಪಣಿಗಳು**

೧. ವೀರಣ್ಣ ರಾಜೂರ, **ಶಿವಶರಣೆಯರ ವಚನ ಸಂಪುಟ,** ಪು.೨೬೬, ವಚನ.೨೪೪

೨. ಅದೇ, ಪು.೨೯೭, ವ.೯೭೮

೩. ಅದೇ, ಪು.೩೧೨, ವ.೧೦೪೮

೪. ಅದೇ, ಪು.೨೬೪, ವ.೮೩೩

೫. ಅದೇ, ಪು.೨೮೨, ವ.೯೦೮

೬. ಅದೇ, ಪು.೨೭೦, ವ.೮೫೩

೭. ಅದೇ, ಪು.೩೧೫, ವ.೧೦೬೧

೮. ಅದೇ, ಪು.೨೭೭, ವ.೮೮೩

೯. ಅದೇ, ಪು.೩೦೩, ವ.೧೦೦೪

೧೦. ಅದೇ, ಪು.೩೧೬, ವ.೧೦೬೪

೧೧. ಅದೇ, ಪು.೨೮೧, ವ.೯೦೫

೧೨. ಅದೇ, – –

೧೩. ಅದೇ, ಪು.೨೮೭, ವ.೯೪೦

೧೪. ಅದೇ, ಪು.೫೫, ವ.೧೭೪

೧೫. ಅದೇ, ಪು.೨೮೯–೨೫೭, ವ.೯೪೦–೮೦೧

೧೬. ಅದೇ, ಪು.೨೭೯, ವ.೮೯೩

೧೭. ಅದೇ, ಪು.೪, ವ.೯

೧೮. ಅದೇ, ಪು.೨೯೭, ವ.೯೭೮

೧೯. ಅದೇ, ಪು.೩೦೭, ವ.೧೦೨೪

೨೦. ಅದೇ, ಪು.೨೯೮, ವ.೯೮೨

೨೧. ಅದೇ, ಪು.೩೦೭, ವ.೧೦೨೪

೨೨. ಅದೇ, ಪು.೩೧೯, ವ.೧೦೮೦

೨೩. ಅದೇ, ಪು.೩೧೯, ವ.೧೦೮೦

೨೪. ಅದೇ, ಪು.೨೭೪, ವ.೮೬೮

೨೫. ಅದೇ, ಪು.೨೭೬, ವ.೮೭೪

೨೬. ಅದೇ, ಪು.೩೦೬, ವ.೧೦೨೩

೨೭. ಅದೇ, ಪು.೩೨೦, ವ.೧೦೮೫

೨೮. ಅದೇ, ಪು.೨೮೦–೩೨೦, ವ.೯೪೦–೧೦೮೧

೨೯. ಅದೇ, ಪು.೨೯೪, ವ.೯೬೭

೩೦. ಅದೇ, ಪು.೨೭೧, ವ.೮೫೬

೩೧. ಅದೇ, ಪು.೩೦೭, ವ.೧೦೨೬

೩೨. ಅದೇ, ಪು.೨೮೦, ವ.೯೯೭

೩೩. ಅದೇ, ಪು.೨೮೭, ವ.೯೩೩

೩೪. ಅದೇ, ಪು.೨೫೭, ವ.೮೦೧

೩೫. ಅದೇ, ಪು.೨೯೨, ವ.೯೫೪೨೨೪

೩೬. ಶ್ರೀಮತಿ ಎಚ್.ಎಂ.ಬೀಳಗಿ, **ಶಿವಶರಣೆಯರ ಜೀವನ ಮತ್ತು ಸಾಧನೆ,** ಪು.೩೬

೩೭. ಸಿ.ಕೆ.ಪರಶುರಾಮಯ್ಯ(ಸಂ), **ನೀಲಲೋಚನೆಯ ವಚನಗಳು,** ಪು.೭, ೮

೩೮. ಎಂ.ಎಂ.ಕಲ್ಬುರ್ಗಿ(ಸಂ), **ಮಾರ್ಗ** ಸಂಪುಟ ೧, ಪು.೨೨೪

೩೯. ಸಾ.ಶಿ.ಮರುಳಯ್ಯ(ಸಂ),, ಎಸ್.ಶಿವಣ್ಣ, **ನೀಲಮ್ಮನ ವಚನಗಳು,** ಪು.೧(ಮುಮ್ಮಾತು)

೪೦. ಎಸ್.ವಿದ್ಯಾಶಂಕರ(ಸಂ),, **ಸಿದ್ಧರಾಮೇಶ್ವರ ವಚನ ಸಂಪುಟ,** ಪು.೩೬೦, ವಚನ ಸಂಖ್ಯೆ ೧೯೯೨

೪೧. ವೀರಣ್ಣ ರಾಜೂರ(ಸಂ),, ಶಿವಶರಣೆಯರ ವಚನ ಸಂಪುಟ, ಪು.೨೯೯, ವ.೮೪೮

೪೨. ಅದೇ, ಪು.೨೭೬, ವ.೮೭೮

೪೩. ಅದೇ, ಪು.೨೮೯, ವ.೯೪೦, ೯೪೧, ೯೪೨

೪೪. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೬೭

೪೫. ವೀರಣ್ಣರಾಜೂರು(ಸಂ), **ಶಿ.ಶ.ವ.ಸಂಪುಟ,** ಪು.೨೮೯, ವ.೯೪೩

೪೬. ಅದೇ, ಪು.೨೯೦, ವ.೯೪೪

೪೭. ಅದೇ, ಪು.೨೯೦, ವ.೯೪೫

೪೮. ಅದೇ, ಪು.೨೯೦, ವ.೯೪೬

೪೯. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೬೮

೫೦. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ೨೭೩, ೨೭೪, ವ.೮೬೮

೫೧. ಅದೇ, ಪು.೩೦೬, ವ.೧೦೨೦

೫೨. ಅದೇ, ಪು.೩೦೭, ವ.೧೦೨೩

೫೩. ಅದೇ, ಪು.೩೦೭, ವ.೧೦೨೪

೫೪. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೫೬

೫೫. ಎಸ್.ಎಸ್.ಭೂಸರಡ್ಡಿ, **ನೀಲಲೋಚನೆಯ ವಚನಗಳಲ್ಲಿ ಬಸವಣ್ಣ,** ಪು.೨೫

೫೬. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ಪು.೩೦೧, ವ.೯೯೫

೫೭. ಎಂ.ಎಂ.ಕಲ್ಬುರ್ಗಿ(ಸಂ), **ಮಾರ್ಗ ಸಂಪುಟ ೧,** ಪು.೨೨೪

೫೮. ವೀರಣ್ಣರಾಜೂರ, **ಶಿ.ಶ.ವ.ಸಂಪುಟ,** ಪು.೩೧೨, ವ.೧೦೪೮

೫೯. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೬೦

೬೦. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ಪು.೨೭೨, ವ.೮೬೦

೬೧. ಅದೇ, ಪು.೨೬೪, ವ.೮೩೫

೬೨. ಎಚ್.ಎಂ.ಬೀಳಗಿ, **ಶಿವಶರಣೆಯರು ಜೀವನ ಮತ್ತು ಸಾಧನೆ,** ಪು.೩೮

೬೩. ಬುರಡೇಕಟ್ಟಿ ಮಂಜಪ್ಪ, **ಶಿವಶರಣೆಯರು,** ಪು.೬೦, ೬೧

೬೪. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ಪು.೨೯೭, ವ.೯೭೭

೬೫. ಅದೇ, ಪು.೨೯೫, ವ.೯೭೦

೬೬. ಅದೇ, ಪು.೨೮೮, ವ.೯೩೭

೬೭. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೬೫

೬೮. ಎಸ್.ಎಸ್.ಭೂಸರಡ್ಡಿ, **ನೀಲಲೋಚನೆಯ ವಚನಗಳಲ್ಲಿ ಬಸವಣ್ಣ,** ಪು.೧೨

೬೯. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೩೦೦, ವ.೯೯೨

೭೦. ಅದೇ, ಪು.೩೧೩, ವ.೧೦೫೦

೭೧. ಅದೇ, ಪು.೩೧೩, ವ.೧೦೫೦

೭೨. ಅದೇ, ಪು.೩೧೨, ವ.೧೦೪೭

೭೩. ಅದೇ, ಪು.೩೧೨, ವ.೧೦೪೯

೭೪. ಅದೇ, ಪು.೩೦೯, ೩೧೦, ವ.೧೦೩೫, ೧೦೩೫, ೧೦೩೭, ೧೦೩೮

೭೫. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೬೧

೭೬. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ಪು.೩೧೦, ವ.೧೦೩೯

೭೭. ಅದೇ, ಪು.೩೧೦, ವ.೧೦೪೦

೭೮. ಅದೇ, ಪು.೩೨೦, ವ.೧೦೮೦

೭೯. ಅದೇ, ಪು.೩೨೦, ವ.೧೦೮೧

೮೦. ಅದೇ, ಪು.೩೨೦, ವ.೧೦೮೩

೮೧. ಅದೇ, ಪು.೩೨೦, ವ.೧೦೮೫

೮೨. ಅದೇ, ಪು.೨೬೫, ವ.೮೪೦

೮೩. ಜಯಶ್ರೀ ದಂಡೆ, **ಫಲದೊಳಗಣ ರುಚಿ**, ಪು.೧೫೩

೮೪. ಅದೇ, ಪು.೧೫೪

೮೫. ಗುಂಬೀಶಂ, **ಲಿಂಗನುಭಾವಿ ನೀಲಾಂಬಿಕೆ**, ಪು.೪೬

೮೬. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ**, ಪು.೨೮೬, ವ.೯೨೦

೮೭. ಅದೇ, ಪು.೨೫೯, ವ.೮೧೧

೮೮. ಜಯಶ್ರೀ ದಂಡೆ, **ಫಲದೊಳಗಣ ರುಚಿ**, ಪು.೧೬೨

೮೯. ಶಾಂತಾ ಇಮ್ರಾಪೂರ, **ಧರ್ಮ, ಮಹಿಳೆ ಮತ್ತು ಸಮಾಜ**, ಪು.೫೧

೯೦. ಅದೇ, ಪು.೫೧

೯೧. ಎಂ.ಎಸ್.ವೇದಾ, **ವಚನಕಾರ್ತಿಯರು**, ಪು.೯೫

೯೨. ವೀರಣ್ಣ ರಾಜೂರ(ಸಂ),, **ಶಿ.ಶ.ವ.ಸಂಪುಟ**, ಪು.೨೫೯, ವ.೮೧೨

೯೩. ಅದೇ, ಪು.೨೫೯, ವ.೮೧೪

೯೪. ಅದೇ, ಪು.೨೬೦, ವ.೮೧೫

೯೫. ಅದೇ, ಪು.೨೬೪, ವ.೮೩೪

೯೬. ಅದೇ, ಪು.೨೫೮, ವ.೮೯೧

೯೭. ಅದೇ, ಪು.೨೫೮, ವ.೮೯೨

೯೮. ಅದೇ, ಪು.೨೮೦, ವ.೮೯೯

೯೯. ಅದೇ, ಪು.೨೮೫, ವ.೯೨೪, ೯೨೫

೧೦೦. ಅದೇ, ಪು.೨೭೪, ವ.೮೭೧

೧೦೧. ಅದೇ, ಪು.೨೭೫, ವ.೮೭೨

೧೦೨. ಬಾ.ವಿಜಯಶ್ರೀ ಸಬರದ, **ಬಸವ ಪಥ**, ೧೯೯೯, ಸಂಪುಟ ೨೧, ಸಂಚಿಕೆ ೧, ಏಪ್ರಿಲ್ ೨, ನೀಲಾಂಬಿಕೆ, ಪು.೪೪

೧೦೩. ಅದೇ, ಪು.೪೪

೧೦೪. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ**, ಪು.೨೭೬, ವ.೮೭೭

೧೦೪. ಸಾವಿತ್ರಿ ನಾಗರಾಜಯ್ಯ, **ನೀಲಾಂಬಿಕೆಯ ನಿಲುವು**, ಪು.೫೬, ಬಸವಪಥ, ಸಂಪುಟ-೨೮, ಸಂಚಿಕೆ ೧೧, ಫೆಬ್ರವರಿ, ೨೦೦೭

೧೦೬. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ**, ಪು.೫೩

೧೦೭. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ**, ಪು.೨೬೩, ವ.೮೯

೧೦೮. ಅದೇ, ಪು.೨೬೨, ವ.೮೨೫

೧೦೯. ಅದೇ, ಪು.೨೬೨, ವ.೮೨೭

೧೧೦. ಅದೇ, ಪು.೨೬೨, ವ.೮೨೪

೧೧೧. ಅದೇ, ಪು.೨೭೫, ವ.೮೭೪

೧೧೨. ಅದೇ, ಪು.೨೭೮, ವ.೮೮೯

೧೧೩. ಅದೇ, ಪು.೨೮೧, ವ.೯೦೪

೧೧೪. ಅದೇ, ಪು.೨೮೩, ವ.೯೧೧

೧೧೫. ಅದೇ, ಪು.೨೮೬, ವ.೯೨೬

೧೧೬. ಅದೇ, ಪು.೨೯೬, ವ.೯೭೫

೧೧೭. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೭೪

೧೧೮. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೩೦೪, ವ.೧೦೧೧

೧೧೯. ಅದೇ, ಪು.೩೧೬, ವ.೧೦೬೪

೧೨೦. ಅದೇ, ಪು.೩೧೭, ವ.೧೦೬೫

೧೨೧. ಅದೇ, ಪು.೩೧೮, ವ.೧೦೭೪

೧೨೨. ಅದೇ, ಪು.೩೧೯, ವ.೧೦೭೬

೧೨೩. ಅದೇ, ಪು.೨೫೮, ವ.೮೦೮, ೮೦೭, ೮೦೯

೧೨೪. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೧೯

೧೨೫. ವೀರಣ್ಣರಾಜೂರ, **ಶಿ.ಶ.ವ.ಸಂಪುಟ,** ಪು.೨೬೨, ವ.೮೨೦

೧೨೬. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೩೯

೧೨೭. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೬೫, ವ.೮೩೮

೧೨೮. ಗುಂಬೀಶ್ರೀ, **ಲಿಂಗಾನುಭಾವಿ ನೀಲಾಂಬಿಕೆ,** ಪು.೪೫

೧೨೯. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೭೭, ವ.೮೮೨

೧೩೦. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೫೪

೧೩೧. ವೀರಣ್ಣರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೯೦, ವ.೯೪೭

೧೩೨. ಅದೇ, ಪು.೨೮೮, ವ.೯೩೬

೧೩೩. ಅದೇ, ಪು.೨೯೩, ವ.೯೫೯

೧೩೪. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೭೨

೧೩೫. ಅದೇ, ಪು.೨೮೫, ವ.೯೩೦

೧೩೬. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೬೩

೧೩೭. ವೀರಣ್ಣ ರಾಜೂರ, **ಶಿ.ಶ.ವ.ಸಂಪುಟ,** ಪು.೨೯೭, ವ.೯೭೭

೧೩೮. ಎ.ಗಾಯತ್ರಿ, **ಕನ್ನಡದ ವಚನಕಾರ್ತಿಯರು: ಒಂದು ಅಧ್ಯಯನ,** ಪು.೧೪೯

೧೩೯. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೬೩

೧೪೦. ವೀರಣ್ಣರಾಜೂರ, **ಶಿ.ಶ.ವ.ಸಂಪುಟ,** ಪು.೨೫೯, ವ.೮೧೩

೧೪೧. ಜಯಶ್ರೀ ದಂಡೆ, **ಫಲದೊಳಗಣ ರುಚಿ,** ಪು.೧೬೩

೧೪೨. ಎಸ್.ಎಸ್.ಭೂಸರಡ್ಡಿ, **ನೀಲಲೋಚನೆಯ ವಚನಗಳಲ್ಲಿ ಬಸವಣ್ಣ,** ಪು.೨೬

೧೪೩. ವೀರಣ್ಣರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೯೯, ವ.೯೮೭

೧೪೪. ಅದೇ, ಪು.೩೦೪, ವ.೧೦೦೮

೧೪೫. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೮೦

೧೪೬. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೩೦೪, ವ.೧೦೦೯

೧೪೭. ಅದೇ, ಪು.೩೦೩, ವ.೧೦೦೫

೧೪೮. ಅದೇ, ಪು.೩೦೩, ವ.೧೦೦೬

೧೪೯. ಅದೇ, ಪು.೩೦೪, ವ.೧೦೦೭

೧೫೦. ಅದೇ, ಪು.೨೭೯, ವ.೯೯೩, ೯೯೪, ೯೯೫, ೯೯೬

೧೫೧. ಅದೇ, ಪು.೨೮೦, ವ.೯೯೭

೧೫೨. ಗುರುದೇವಿ ಹುಲೆಪ್ಪನವರ ಮಠ, **ಶರಣಧರ್ಮ ಹಾಗೂ ಮಹಿಳೆ,** ಪು.೪೮

೧೫೩. ಕುಮಾರದೇವರು(ಸಂ), **ಶಿವಯೋಗ,** ಪು.೯

೧೫೪. ಅದೇ, ಪು.೯

೧೫೫. ಎಂ.ಎಂ.ಕಲ್ಬುರ್ಗಿ(ಸಂ), ಬಸವಣ್ಣನವರ ವಚನ ಸಂಪುಟ, ಪು.೪೮, ವ.೧೮೭

೧೫೬. ವೀರಣ್ಣರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೯೧, ವ.೯೫೧

೧೫೭. ಅದೇ, ಪು.೩೧೬, ವ.೧೦೬೬

೧೫೮. ಅದೇ, ಪು.೩೧೬, ವ.೧೦೬೭

೧೫೯. ಅದೇ, ಪು.೨೬೬, ವ.೮೪೧

೧೬೦. ಅದೇ, ಪು.೨೬೨, ವ.೮೨೬

೧೬೧. ಅದೇ, ಪು.೨೭೧, ೨೭೨, ವ.೮೬೩, ೮೬೪, ೮೬೫, ೮೬೬, ೮೬೭

೧೬೨. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ,** ಪು.೨೬

೧೬೩. ವೀರಣ್ಣರಾಜೂರ, **ಶಿ.ಶ.ವ.ಸಂಪುಟ,** ಪು.೨೭೫, ವ.೮೭೩

೧೬೪. ಅದೇ, ಪು.೨೭೫, ವ.೮೭೫

೧೬೫. ಅದೇ, ಪು.೨೭೫, ವ.೮೭೬

೧೬೬. ಅದೇ, ಪು.೨೯೨, ವ.೯೫೫

೧೬೭. ಅದೇ, ಪು.೨೬೦, ವ.೮೧೬

೧೬೮. ಅದೇ, ಪು.೨೭೧, ವ.೮೫೪

೧೬೯. ಅದೇ, ೨೮೭, ವ.೯೩೩

೧೭೦. ಅದೇ, ಪು.೯೬೨, ವ.೯೬೭

೧೭೧. ಅದೇ, ಪು.೨೭೧, ವ.೮೫೬

೧೭೨. ಅದೇ, ಪು.೨೮೬, ವ.೯೨೮

೧೭೩. ಅದೇ, ಪು.೩೧೩, ವ.೧೦೫೨

೧೭೪. ಅದೇ, ಪು.೩೧೮, ವ.೧೦೭೨

೧೭೫. ವ್ಹಿ.ಜಿ.ಮಾರಿಹಾಳ, **ಶಿವಯೋಗ ಆಧ್ಯಾತ್ಮ ವಿಜ್ಞಾನ,** ಪು.೪೯

೧೭೬. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ,** ಪು.೨೬೬, ೨೬೭, ೬೬೮, ೨೯೯, ವ.೮೪೪

೧೭೭. ಅದೇ, ಪು.೩೨೦, ವ.೧೦೮೨

೧೭೮. ಅದೇ, ಪು.೨೬೪, ವ.೮೩೪

೧೭೯. ಅದೇ, ಪು.೨೫೭, ವ.೮೦೪, ೮೦೩, ೮೦೧

೧೮೦. ಅದೇ, ಪು.೨೬೦, ವ.೮೧೭

೧೮೧. ಅದೇ, ಪು.೨೬೫, ವ.೮೩೭

೧೮೨. ಅದೇ, ಪು.೨೭೧, ವ.೮೫೫

೧೮೩. ಅದೇ, ಪು.೨೭೭, ವ.೮೮೪

೧೮೪. ಅದೇ, ಪು.೨೭೭, ಪು.೮೮೩

೧೮೫. ಅದೇ, ಪು.೨೯೫, ವ.೯೯

೧೮೬. ಅದೇ, ಪು.೩೦೬, ವ.೧೧೧೯

೧೮೭. ಅದೇ, ಪು.೩೧೧, ವ.೧೦೪೧

೧೮೮. ಅದೇ, ಪು.೩೧೫, ವ.೧೦೫೯

೧೮೯. ಅದೇ, ಪು.೩೧೫, ವ.೧೦೬೦

೧೯೦. ವ್ಹಿ.ಜಿ.ಮಾರಿಹಾಳ, **ಶಿವಯೋಗ ಆಧ್ಯಾತ್ಮ ವಿಜ್ಞಾನ**, ಪು.೯೭

೧೯೧. ಅದೇ, ಪು.೯೭

೧೯೨. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ**, ಪು.೨೮೧, ವ.೯೦೩

೧೯೩. ಅದೇ, ಪು.೨೬೩, ವ.೮೩೦

೧೯೪. ಅದೇ, ಪು.೨೬೯, ವ.೮೪೫

೧೯೫. ಅದೇ, ಪು.೨೮೪, ವ.೯೧೭

೧೯೬. ಅದೇ, ಪು.೨೮೪, ವ.೯೧೬

೧೯೭. ಅದೇ, ಪು.೩೦೨, ವ.೧೦೦೨

೧೯೮. ಅದೇ, ಪು.೩೧೭, ವ.೧೦೬೯

೧೯೯. ಅದೇ, ಪು.೨೮೮, ವ.೯೩೮

೨೦೦. ಅದೇ, ಪು.೩೧೪, ವ.೧೦೫೧

೨೦೧. ಗುಂಬೀಶಂ, **ಲಿಂಗನುಭಾವಿ ನೀಲಾಂಬಿಕೆ**, ಪು.೮೮

೨೦೨. ವೀರಣ್ಣರಾಜೂರ, **ಶಿ.ಶ.ವ.ಸಂಪುಟ**, ಪು.೨೮೧, ೨೮೨, ವ.೯೦೫, ೯೦೬, ೯೦೭

೨೦೩. ಅದೇ, ಪು.೨೭೪, ವ.೮೭೦

೨೦೪. ಅದೇ, ಪು.೨೬೩, ವ.೮೩೧

೨೦೫. ಅದೇ, ಪು.೩೦೩, ವ.೧೦೦೪

೨೦೬. ಅದೇ, ಪು.೨೬೪, ವ.೮೩೨

೨೦೭. ಅದೇ, ಪು.೨೬೪, ವ.೮೩೩

೨೦೮. ಗುಂಬೀಶಂ, **ಲಿಂಗಾನುಭಾವಿ ನೀಲಾಂಬಿಕೆ**, ಪು.೪೪

೨೦೯. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ**, ಪು.೨೭೦, ವ.೮೫೩

೨೧೦. ಎಸ್.ಎಸ್.ಭೂಸರಡ್ಡಿ, **ನೀಲಲೋಚನೆಯ ವಚನಗಳಲ್ಲಿ ಬಸವಣ್ಣ**, ಪು.೧೧

೨೧೧. ವೀರಣ್ಣ ರಾಜೂರ(ಸಂ), **ಶಿ.ಶ.ವ.ಸಂಪುಟ**, ಪು.೩೧೫, ವ.೧೦೬೧

೨೧೨. ಅದೇ, ಪು.೨೮೨, ವ.೯೦೮

೨೧೩. ಅದೇ, ಪು.೨೭೬, ವ.೮೮೦

೨೧೪. ಅದೇ, ಪು.೨೭೬, ವ.೮೭೯

೨೧೫. ಅದೇ, ಪು.೩೧೭, ವ.೧೦೭೦

೨೧೬. ಅದೇ, ಪು.೨೯೮, ವ.೯೮೨

೨೧೭. ಗಿರಡ್ಡಿ ಗೋವಿಂದ ರಾಜು(ಸಂ), ಸಾಹಿತ್ಯ ವಿಮರ್ಶೆ, ೧೯೯೯, ಪು.೧೪೬

೨೧೮. ಅದೇ, ಪು.೧೪೬

೨೧೯. ಎಂ.ಎಂ.ಕಲ್ಬುರ್ಗಿ(ಸಂ), ಸ್ವರವಚನ ವಿಚಾರ ಸಂಕೀರಣ ಸಂಪುಟ, ಪು.೧೧೪

೨೨೦. ವೀರಣ್ಣ ರಾಜೂರ(ಸಂ), ಸ್ವರವಚನಗಳ ಉಗಮ–ಸ್ವರೂಪ, ಲಕ್ಷಣ, ಪು.೭, ಬಸವಪಥ, ೧೯೯೭, ಸಂಪುಟ–೧೯, ಸಂಚಿಕೆ ೩, ಮೇ.

೨೨೧. ಎಂ.ಎಂ.ಕಲ್ಬುರ್ಗಿ(ಸಂ), ಸ್ವರವಚನ ವಿಚಾರ ಸಂಕೀರಣ ಸಂಪುಟ, ಪು.೧೧೪

೨೨೨. ಕೆ.ರವೀಂದ್ರನಾಥ(ಸಂ), ಬಸವಯುಗದ ವಚನೇತರ ಸಾಹಿತ್ಯ, ಪು.೨೫, ಪ್ರಸ್ತಾವನೆ

೨೨೩. ವೀರಣ್ಣ ರಾಜೂರ(ಸಂ), ಸ್ವರವಚನಗಳ ಉಗಮ–ಸ್ವರೂಪ–ಲಕ್ಷಣ, ಪು.೧೧, ಬಸವಪಥ, ೧೯೯೭, ಸಂಪುಟ ೧೯, ಸಂಚಿಕೆ ೩, ಮೇ.

೨೨೪. ಎಲ್.ಬಸವರಾಜು(ಸಂ), ಶಿವದಾಸ ಗೀತಾಮಜಲಿ, ಪು.೮೦, ೮೧

೨೨೫. ಎಸ್.ಎಸ್.ಭೂಸರಡ್ಡಿ(ಸಂ), ಮಹಾಶರಣೆ ನೀಲಾಮಬಿಕೆ, ಪು.೪೮

೨೨೬. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ(ಸಂ), ಸ್ವರವಚನಗಳು–ಒಂದು ವಿವೇಚನೆ, ಪು.೭೧

೨೨೭. ಎಸ್.ಎಸ್.ಭೂಸರೆಡ್ಡಿ(ಸಂ), ಮಹಾಶರಣೆ ನೀಲಾಂಬಿಕೆ, ಪು.೪೯

೨೨೮. ಅದೇ, ಪು.೫೦, ೫೧

೨೨೯. ಅದೇ, ಪು.೫೧, ೫೨

೨೩೦. ಅದೇ, ಪು.೫೨, ೫೩

೨೩೧. ಮಲ್ಲಿಕಾರ್ಜುನ ಶಿವಪ್ಪಲಠ್ಠೆ, **ಸ್ವರವಚನಗಳು–ಒಂದು ವಿವೇಚನೆ,** ಪು.೭೩, ೭೪

೨೩೨. ಎಸ್.ಎಸ್.ಭೂಸರಡ್ಡಿ, **ಮಹಾಶರಣೆ ನೀಲಾಂಬಿಕೆ,** ಪು.೫೩, ೫೪

೨೩೩. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ, **ಸ್ವರವಚನಗಳು ಒಂದು ವಿವೇಚನೆ,** ಪು.೭೫

೨೩೪. ಎಸ್.ಎಸ್.ಭೂಸರಡ್ಡಿ, **ಮಹಾಶರಣೆ ನೀಲಾಂಬಿಕೆ,** ಪು.೫೬

೨೩೫. ಎಸ್.ವಿದ್ಯಾಶಂಕರ(ಸಂ), **ವಚನ ಪರಿಭಾಷಾಕೋಶ,** ಪು.೪೪

೨೩೬. ಎಸ್.ಎಸ್.ಭೂಸರಡ್ಡಿ, **ಮಹಾಶರಣೆ ನೀಲಾಂಬಿಕೆ,** ಪು.೫೭

೨೩೭. ಶ್ರೀಮತಿ ಜಿ.ವಿ.ಜಯರಾಜಶೇಕರ್, **ಶೂನ್ಯ ಸಂಪಾದನೆ, ಅನುಸಂಧಾನ,** ಪು.೭೪೯

೨೩೮. ಶಾಂತಾ ಇಮ್ರಾಪೂರ, **ಧರ್ಮ–ಮಹಿಳೆ ಮತ್ತು ಸಮಾಜ,** ಪು.೫೩

೨೩೯. ಕೃಷ್ಣಯ್ಯ ಶೆಟ್ಟಿ(ಸಂ), **ಕಲಿಯುಗದ ಕಾಜ್ಞಾನ,** ಪು.೨೪

೨೪೦. ಅದೇ, ಪು.೨೬

ಅಧ್ಯಾಯ ಏಳು

# ಗಂಗಾಂಬಿಕೆ ನೀಲಾಂಬಿಕೆ ಹಾಗೂ ಬಸವಣ್ಣನವರು

## ಅಧ್ಯಾಯ ಏಳು

# ಗಂಗಾಂಬಿಕೆ ನೀಲಾಂಬಿಕೆ ಹಾಗೂ ಬಸವಣ್ಣನವರು

ಗಂಗಾಂಬಿಕೆ–ನೀಲಾಂಬಿಕೆ ಮತ್ತು ಬಸವಣ್ಣನವರು ಈ ಮೂವರ ಕುರಿತ ವಿಚಾರ ಎಂಬುದು ಸರಳೀಕೃತ ಸೂತ್ರವಲ್ಲ ಹಾಗೂ ಸರ್ವಗ್ರಹೀತ ನೆಲೆಯಲ್ಲ ಎಂಬ ಸಂದಿಗ್ಧತೆಗಳಿವೆ, ಅರ್ಥಗೊಂದಲಗಳಿವೆ. ಮುಖ್ಯವಾಗಿ ಎಲ್ಲಿಯೂ ಈ ಮೂವರ ವಿಷಯಗಳಿಗೆ ಸಂಬಂಧಿಸಿದಂತೆ ಸಿಗುವ ಮಾಹಿತಿಗಳು ತೀರ ಅಪೂರ್ಣ ಹಾಗೂ ಅತ್ಯಲ್ಪ ಆದರೂ ಇತರ ಶರಣರ ವಚನಗಳು ಹಾಗೂ ಕವಿಗಳ ಕಾವ್ಯ, ಪುರಾಣಗಳು ಹಾಗೂ ವೈಯಕ್ತಿಕವಾಗಿ ಇವರು ರಚಿಸಿದ ವಚನಗಳ ನೆಲೆಯಿಂದ ಕೌಟುಂಬಿಕ ಹಾಗೂ ಸಾಮಾಜಿಕ ಜೀವನವನ್ನು ನಿರ್ವಹಿಸಿದ ರೀತಿಯನ್ನು ವಿವೇಚಿಸಬಹುದಾಗಿದೆ. ಅಧ್ಯಯನದ ಅಗತ್ಯವಾಗಿ ಈ ಅಂಶವನ್ನು ಎರಡು ಭಾಗಗಳನ್ನಾಗಿ ಮಾಡಬಹುದಾಗಿದೆ ೧. ಪತ್ನಿಯರ ನಿಲುವಿನಲ್ಲಿ ಬಸವಣ್ಣನವರು, ೨. ಬಸವಣ್ಣನವರ ನಿಲುವಿನಲ್ಲಿ ಪತ್ನಿಯರು. ಈ ಎರಡು ಹಂತಗಳ ಮೂಲಕ ಈ ಮೂವರಲ್ಲಿ ಇದ್ದ ಬಾಂಧವ್ಯವನ್ನು ಈ ಅಧ್ಯಯದಲ್ಲಿ ಚರ್ಚಿಸಲಾಗುವುದು.

### ಪತ್ನಿಯರ ನಿಲುವಿನಲ್ಲಿ ಬಸವಣ್ಣನವರು

ಮೊದಲಿಗೆ ಗಂಗಮ್ಮನ ನಿಲುವನ್ನು ಇಲ್ಲಿ ವಿವರಿಸಬಹುದಾಗಿದೆ. ಗಂಗಮ್ಮ ಬಸವಣ್ಣನವರ ಮೊದಲ ಪತ್ನಿಯೆಂದು ಬಹುತೇಕ ಕಾವ್ಯಗಳು ಹಾಗೂ ಎರಡನೆಯ ಪತ್ನಿಯೆಂದು ಕೆಲವು ಕಾವ್ಯ/ಆಕರಗಳು ವಿವರಿಸುತ್ತವೆ. ಒಟ್ಟಿನಲ್ಲಿ ಆಕೆ ಧರ್ಮಪತ್ನಿಯೆಂದೂ, ಆಚಾರಪತ್ನಿಯೆಂದೂ ಗ್ರಹಿಸಲಾಗಿದೆ. ಆಚಾರ ಎಂಬುದನ್ನು ವ್ರತವಾಗಿ ಸ್ವೀಕರಿಸಿದ ಜೀವನಕ್ರಮ ಎಂದು ಗ್ರಹಿಸಿದರೆ ಹೆಚ್ಚು ಸೂಕ್ತ ಎನ್ನಬಹುದು, ಜೀವನದಲ್ಲಿ ನಂಬಿದ ದೈವ ಹಾಗೂ ತತ್ವವನ್ನು ಏಕನಿಷ್ಠೆಯಿಂದ ಪಾಲಿಸಿದ ಕ್ರಮವಾಗಿ ಗ್ರಹಿಸಿದರೆ ಆಚಾರ ಶಬ್ದದ ಅರ್ಥವೈಶಿಷ್ಟ್ಯ ಸರಿಯಾಗುವದು ವಚನ ನಿಷ್ಠೆ ಬಸವನಿಷ್ಠೆಯನ್ನು ವ್ರತವಾಗಿ ಆಚರಿಸಿ, ಬದುಕಿದ ಗಂಗಮ್ಮ ನಿಜಕ್ಕೂ ಆಚಾರಪತ್ನಿಯೇ.

ಒಂಬತ್ತು ವಚನಗಳು ಸಿಕ್ಕಿದರೂ ಅವುಗಳಿಂದ ಅವಳ ಮನೋ ಭೂಮಿಕೆಯ ನೇಪಥ್ಯದ ಅರಿವಾಗುತ್ತದೆ ಸಾಂಸಾರಿಕವಾಗಿ ಅವಳ ಜೀವನ ಕಡುಕಷ್ಟವೇ ಎಂಬುದು ಅವಳ ವಚನಗಳಿಂದಲೇ ತಿಳಿದುಬರುತ್ತದೆ.

"ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ,

ಎಂದು ಹೇಳಿದರಮ್ಮಾ ಎನ್ನ ಒಡೆಯರು......."[೧]

ಕೆಲವು ಕಾವ್ಯಗಳು ಅವಳಿಗೊಬ್ಬ ಮಗನಿದ್ದ ಎಂಬುದನ್ನು ತಿಳಿಸುತ್ತವೆ. ಆದರೆ ಎನಗೆ ಫಲವಿಲ್ಲ, ಕಂದನಿಲ್ಲ ಎಂಬುದರಿಂದ ಮಕ್ಕಳಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೂ ಈಕೆಯ ವಚನದಲ್ಲಿ ಕಂದನಿದ್ದು ಇಲ್ಲವೆಂದು ಹೇಳುವುದನ್ನು ನೋಡಿದರೆ ಆ ಮಗು ಚಿಕ್ಕವನಿರುವಾಗಲೆ ಸಾವನ್ನಪ್ಪಿರಬೇಕು ಅಥವಾ ಚೆನ್ನಲಿಂಗವೆಂಬ ಹೆಸರನ್ನು ಬಳಸುವುದರಿಂದ ಚೆನ್ನಬಸವಣ್ಣನಿಗೆ ಈ ಮಾತನ್ನು ಹೇಳಿರಬೇಕೆಂದನಿಸುತ್ತದೆ. ಹಾಗಾಗಿ ಗಂಗಾಂಬಿಕೆಗೆ ಮಗು ಇದ್ದಿರಬಹುದು. ಆದರೆ ಆ ಮಗು ಇಲ್ಲವಾದಾಗ ಈ ಮಾತು ಸಹಜವಾಗಿ ಬರುತ್ತದೆ. ಎಂಬುದನ್ನು ಈಕೆಯ ವಚನ ಸ್ಪಷ್ಟವಾಗಿ ಹೇಳುತ್ತದೆ. ಈಕೆಯ ಈ ಕೆಳಗಿನ ವಚನವನ್ನು ನೋಡಿದಾಗ

"ಒಂದು ಹಾಳ ಭೂಮಿಯ ಹುಲಿ ಬಂದು..."[೨]

ಇಲ್ಲಿ ಕೂಡ ಮಗನಿದ್ದು ಕಳೆದುಕೊಂಡು ಪ್ರಲಾಪಿಸುವಂತೆ ತೋರಿಬಂದರೂ, ವಚನ ಚಳವಳಿಯೆಂಬ ಎಳಗರುವ, ರಾಜಕೀಯವೆಂಬ ವ್ಯವಸ್ಥೆಯ ಹುಲಿ ಬಂದು ಸರ್ವನಾಶ ಮಾಡಿದ ವಿವರ ಇನ್ನೊಂದು ಅರ್ಥವಾಗಿ ತೋರಿಬರುತ್ತದೆ. ಇವುಗಳೆಲ್ಲ ಸಂಸಾರ ಕ್ಲೇಶವನ್ನೆ ಬಿಂಬಿಸುವ ವಿಚಾರಗಳಾಗಿವೆ. ಸಾಮಾಜಿಕ ಮನ್ನಣೆ ಇರುವಲ್ಲಿಯೂ ಕೌಟುಂಬಿಕ ದುಃಖ, ದಂದುಗ ಇರುವುದನ್ನು ಇಲ್ಲಿ ಕಾಣಬಹುದಾಗಿದೆ. ಇಷ್ಟೆಲ್ಲ ಸಂಸಾರದ ನೋವುಗಳಲ್ಲಿಯೂ ಬಸವಣ್ಣನವರ ಬಗೆಗೆ ಅಪಾರಭಕ್ತಿ. ಗೌರವಗಳಿವೆ. ಗಂಗಾಂಬಿಕೆ ಪತಿಯಲ್ಲಿ ಅಚಲವಾದ ನಿಷ್ಠೆ ಇಟ್ಟುಕೊಂಡವಳಾಗಿದ್ದಾಳೆ. ಅದರಂತೆ ಬಸವಣ್ಣನ ಕಾರ್ಯದಲ್ಲಿ ಸದಾ ಭಾಗಿಯಾಗಿ ಆತನ ಕಾರ್ಯಕ್ಕೆ ನೆರವಾಗಿದ್ದಳು ಎಂದು ಎಂ.ಟಿ. ವಿಶ್ವನಾಥಯ್ಯ ಹೀಗೆ ಅಭಿಪ್ರಾಯ ಪಡುತ್ತಾರೆ.

"ಗಂಗಾಂಬಿಕೆ ಪತಿಗೆ ತಕ್ಕ ಸತಿಯಾಗಿ ಬಾಳುತ್ತಿದ್ದಳು. ಕಾಯಕವೇ ಕೈಲಾಸವೆಂಬ ಬಗೆದ ಬಸವಣ್ಣನೊಂದಿಗೆ ಸಂತೋಷದಿಂದ ಕಾಯಕ ನಿರತಳಾಗುತ್ತಿದ್ದಳು. ಗಂಗಾಂಬಿಕೆ ಬಸವಣ್ಣನವರ ಮಂತ್ರಿಕಾರ್ಯದಲ್ಲಿ ಸದಾ ನೆರವಿಗಿರುತ್ತಿದ್ದಳು. ಮನೆಗೆ ಬರುವ ಅತಿಥಿ ಅಭ್ಯಾಗತರನ್ನು ಉಪಚರಿಸುತ್ತಿದ್ದಳು"[೩] ಎಂದು ಅಭಿಪ್ರಾಯ ಪಡುತ್ತಾರೆ.

ಗಂಗಾಂಬಿಕೆ ಸತಿಯಾಗಿ ಅಷ್ಟೇ ಅಲ್ಲಾ ಒಬ್ಬ ಕಾರ್ಯಕರ್ತೆಯಾಗಿಯೂ ಮಹಾಮನೆಯ ಸೇವೆಯನ್ನು ಮಾಡಿದಳು ಎಂದು ಇವರು ಅಭಿಪ್ರಾಯ ಪಡುತ್ತಾರೆ. ವ್ಯಕ್ತಿಯ ಚಾರಿತ್ರ್ಯ

ಪ್ರಾಮಾಣಿಕತೆ ಹಾಗೂ ಮಾನವೀಯತೆಯ ಜೀವನ ಮೌಲ್ಯಗಳ ಅರಿತು ಈಕೆ ಬಸವಣ್ಣನೊಂದಿಗೆ ಬಾಳಿದ್ದಳು. ಹಾಗಾಗಿ ಇವಳ ವಚನಗಳನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

"ಇದೇನೊ, ಮಿರಿ ತೋರುವ ಮೂರುತಿ
ಪುಷ್ಪಗುಂಪಿನಲ್ಲಿ..............................
..................................................
ಇಂತಪ್ಪ ಮೂರ್ತಿಯ ಕಂಡು
ಗಂಗಾಪ್ರಿಯ ಕೂಡಲಸಂಗನ ಶರಣನ ಸತಿಯಳು
ಧನ್ಯಳಾದಳು ಚೆನ್ನಬಸವಣ್ಣಾ"[೪]

ಎನ್ನುವಲ್ಲಿ ತನ್ನ ಕುಟುಂಬದ ಸಂತೋಷಕ್ಕಿಂತ ಹಾಗೂ ಸ್ವಂತ ಸುಖಕ್ಕಿಂತ ಬಸವಣ್ಣನವರು ಸಾಮಾಜಿಕವಾಗಿ ಎತ್ತರದ ಸ್ತರದಲ್ಲಿರುವುದನ್ನು ಗುರುತಿಸಿ ಇಂತಹ ಮೂರ್ತಿಯ(ವ್ಯಕ್ತಿಯ) ಕಂಡು ಧನ್ಯಳಾದೆನು ಎನ್ನುತ್ತಾಳೆ. ಬಸವಣ್ಣನವರಂತೆ ಕೂಡಲಸಂಗಯ್ಯನನ್ನು ಅಂಕಿತವಾಗಿ ಸ್ವೀಕರಿಸಿ ಗಂಗಾಪ್ರಿಯನಾದ ಕೂಡಲಸಂಗನು ಎನ್ನುವಲ್ಲಿ ಗಂಗಾ-ಶಿವನಂತೆ ಎಂಬರ್ಥ ವಿರಬಹುದು ಅಥವಾ ಗಂಗಾಂಬಿಕೆಗೆ ಪ್ರಿಯನಾದ ಬಸವಣ್ಣನವರೇ ಕೂಡಲಸಂಗಮನು ಅಥವಾ ಕೂಡಲಸಂಗಮದೇವನನ್ನು ಆರಾಧ್ಯದೇವವಾಗಿಸಿದ ಬಸವಣ್ಣನವರೇ ಕೂಡಲಸಂಗಮ ವಾಗಿರಬಹುದು. ಕೂಡಲಸಂಗನ ಶರಣನ ಸತಿಯಳು ಎಂದು ತನ್ನ ಮತ್ತು ಬಸವಣ್ಣನವರ ಸುಮದುರ ಭಾವ-ಬಾಂಧವ್ಯವನ್ನು ಎತ್ತಿ ತೋರಿಸಿದ್ದಾಳೆ. ಅಷ್ಟೇ ಅಲ್ಲ ಸಾಮಾಜಿಕವಾಗಿ ಏರಿಕೆ ಸ್ತರದಲ್ಲಿದ್ದ ಬಸವಣ್ಣನವರು ಕರದಲ್ಲಿಯ ಲಿಂಗದಂತೆ ಮೌನವಾದರೂ ಕೂಡ ಎಂಬ ಉಪಮೆ ಹತ್ತಿರವಿದ್ದರೂ ಕೌಟುಂಬಿಕ ಮೌನ ಹಾಗೂ ಸಾಮಾಜಿಕ ಜಾಗೃತಿಯೆಡೆಗಿನ ಪ್ರಯತ್ನವನ್ನು ಧ್ವನಿಸುತ್ತದೆ. ಹೀಗಿದ್ದರೂ ನಾನು ಧನ್ಯ ಎಂಬ ಮಾತು ಬಸವಣ್ಣನವರು ಅವಳ ಆರಾಧ್ಯ ದೈವವಾದದ್ದನ್ನು ತಿಳಿಸುತ್ತದೆ. ಬಸವನಿಷ್ಠೆ, ನಮ್ಮ ನಿಷ್ಠೆ ಎಂಬ ಮಾತನ್ನು ಹೇಳಿದ ಪರಿಯನ್ನು ಈ ವಚನದಲ್ಲಿ ಕಾಣಬಹುದಾಗಿದೆ.

"ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯೆ?
ಪ್ರತಿಜ್ಞೆಯ ಪತಿಕರದಲ್ಲಿ ಪೊಪದಿರೆ ಯಾತನೆಯಲ್ಲವೆ?
ಇವಳ ಲಿಂಗ ನಿಷ್ಠೆ ಇವಳಿಗೆ
ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾಪ್ರಿಯ ಕೂಡಲಸಂಗಮದೇವ"[೫]

ಪತಿಯಾಜ್ಞೆಯಲ್ಲಿ ನಡೆಯುವುದೇ ಸತಿಯ ಕರ್ತವ್ಯವು. ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಎಂದು ಸ್ಪಷ್ಟಪಡಿಸಿದ್ದಾಳೆ. ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ ಎಂದು ಬಸವಣ್ಣನವರು

ಕರೆಕಳುಹಿಸಿರುವುದನ್ನು ಸ್ಪಷ್ಟಪಡಿಸಿರಬಹುದು. ಅಲ್ಲದೇ ನೀಲಮ್ಮ ಲಿಂಗನಿಷ್ಠೆಯಲ್ಲಿ ಅಲ್ಲಿಯೇ ಉಳಿದಿರಬಹುದು ಎಂಬುದನ್ನು ಇವಳ ಮಾತು ಸೂಚಿಸುತ್ತದೆ. ಅಷ್ಟೇ ಅಲ್ಲ ಲಿಂಗನಿಷ್ಠೆಗಿಂತಲೂ ಪತಿ(ಬಸವ)ನಿಷ್ಠೆ ಇಲ್ಲಿ ಕಾಣಬರುತ್ತದೆ. ನೇರವಾಗಿ ಹೇಳದೆ ಹೋದರೂ ತಾವಿಬ್ಬರೂ ಬಸವ ಪತ್ನಿಯರು ಹಾಗೂ ತನ್ನ ನಿಷ್ಠೆ ಬಸವಣ್ಣನವರಲ್ಲಿ ಎಂದು ಸ್ಪಷ್ಟಪಡಿಸಿದ್ದಾಳೆ. ತಮ್ಮ ಕುಟುಂಬವನ್ನು ಸೂಚಿಸಿದ್ದಾಳೆ. ಅಲ್ಲದೇ ಕವಿಗಳು ಕಲ್ಪಿಸಿದಂತೆ ಅಪ್ಪಣ್ಣನವರು ನೀಲಮ್ಮನವರು ಕರೆಯ ಬಂದು ಅಪ್ಪಣ್ಣನವರು ಮತ್ತು ನೀಲಮ್ಮನವರು ಲಿಂಗದಲ್ಲಿಯೇ ಐಕ್ಯರಾದರು ಎಂಬುದನ್ನು ಗಂಗಾಂಬಿಕೆಯ ವಚನದ ಮೂಲಕ ಪರಾಮರ್ಶಿಸಬಹುದಾಗಿದೆ. ಇಲ್ಲಿ ಗಂಗಮ್ಮನಿಗೂ ಕರೆ ಬಂದಿರುವದನ್ನು ಪತಿಯಾಜ್ಞೆಯ ಪ್ರಕಾರ ಸನ್ನದ್ಧಳಾಗಿ ಹೊರಟಿರುವುದನ್ನು ವಚನ ಸ್ಪಷ್ಟಪಡಿಸಿದೆ.

"ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೊ  
ಮಾದಲಾಂಬಿಕಾ ನಂದನನು?  
ಸಾಂದ್ರವಾಗಿ ಬಿಜ್ಜಳರ ಮನೆಯ ನ್ಯಾಯ  
ನೋಳ್ಪನೆಂತೊ ಮಾದರಸನ ಮೋಹದ ಮಗನು?  
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಆನಂಗೆಯ್ವನೆಂತೊ  
ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ"[೬]

ಇಲ್ಲಿ ಕೂಡ ಬಸವಣ್ಣನವರ ಶ್ರೇಯೋಭಿವೃದ್ಧಿ ಅವರ ಕೀರ್ತಿ ಅವರ ನೆರಳಾಗಿ ತಾನು ಉಳಿಯುವ ಧೋರಣೆ ವ್ಯಕ್ತವಾಗಿದೆ. ಬಸವಣ್ಣನವರ ಕಾರ್ಯಭಾರದ ವಿವರವನ್ನು ಒದಗಿಸುವ ಮೂಲಕ ಅವರ ಸಾಮಾಜಿಕ ಔನ್ನತ್ಯವನ್ನು ಹಾಗೂ ಈ ಕಾರ್ಯಭಾರವನ್ನು ಈಡೇರಿಸುವ ಮೂಲಕ ಬಸವಣ್ಣನವರು ಪಡೆಯುವ ಕೀರ್ತಿಯನ್ನು ಹಾರೈಸುವ ಬಗೆ ಇಲ್ಲಿದೆ. ಅಷ್ಟೇ ಅಲ್ಲ ಲಿಂಗಾರ್ಚನೆ, ಲಿಂಗತೃಪ್ತಿ ಅವಳಿಗೆ ಸಿಗುವುದಕ್ಕಿಂತ ಬಸವಣ್ಣನವರ ಶ್ರೇಯೋಭಿವೃದ್ಧಿ ಅವಳಿಗೆ ತೃಪ್ತಿ ತಂದಿದೆ.

ಗಂಗಾಂಬಿಕೆಯು ಬಸವಣ್ಣನವರಿಗೆ ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಗಳೆರಡರಿಂದಲೂ ಪ್ರೋತ್ಸಾಹದಾಯಕ ನಿಲುವನ್ನು ವ್ಯಕ್ತಪಡಿಸಿದ್ದಾಳೆ. ಶಿವನಿಗೆ ಗಂಗೆಯಂತೆ ಎಂದು ಕವಿಗಳು ವರ್ಣಿಸಿದ್ದಾರೆ. ಹೀಗೆ ಗಂಗೆಯು ಲೋಕ ಕಲ್ಯಾಣಕ್ಕಾಗಿ, ಜನೋಪಯೋಗಿಯಾಗಿ ನಿಂತಳೋ ಹಾಗೇ ಗಂಗಾಂಬಿಕೆ ಕೂಡ ಶರಣರನ್ನು ಹಾಗೂ ಅವರ ವಚನ ಕಟ್ಟುಗಳನ್ನು ಕಾಪಾಡಲು ಬಿಜ್ಜಳನ ಸೈನಿಕರೊಂದಿಗೆ ಕಾದಾಡುತ್ತಾ ಕಾದ್ರೊಳ್ಳಿಯಲ್ಲಿ ಪ್ರಾಣಬಿಟ್ಟಳು. ಇವಳ ಬಗ್ಗೆ ಕಾವ್ಯಗಳು ಉಲ್ಲೇಖಿಸದೇ ಹೋದರೂ ಕಾದ್ರೊಳ್ಳಿಯಲ್ಲಿ ಯುದ್ಧ ನಡೆದಿರುವುದನ್ನು ಚೆನ್ನಬಸವಪುರಾಣ ಉಲ್ಲೇಖಿಸುತ್ತದೆ. ಹಾಗಾಗಿ ಇವಳ ಬಸವನಿಷ್ಠೆ ಬಸವೈಕ್ಯದ ನಂತರವೂ ಮುಂದುವರಿಯುತ್ತದೆ.

ಹೀಗೆ ಬಸವಣ್ಣನವರ ಸಾಧನೆಗೆ ಗಂಗಮ್ಮ ಸಿದ್ಧ ಮಾರ್ಗವಾಗಿದ್ದಾಳೆ ಎನ್ನಬಹುದು. ಬಸವನಿಷ್ಠೆ ಮೊದಲಿನಿಂದ ಕೊನೆಯವರೆಗೂ ಎಷ್ಟೇ ಕಷ್ಟನಷ್ಟಗಳಲ್ಲಿಯೂ ಏಕಪ್ರಕಾರವಾಗಿ ಮುಂದುವರೆದಿರುವುದನ್ನು ಕೂಡ ಗಮನಿಸಬಹುದಾಗಿದೆ. ಒಟ್ಟಿನಲ್ಲಿ ಬಸವಣ್ಣನವರ ಕುರಿತು ಗಂಗಮ್ಮನ ನಿಲುವು ಅಚಲ ಹಾಗೂ ನಿಶ್ಚಲ ದಾಂಪತ್ಯ ಪ್ರಾರಂಭವಾದಾಗಿನಿಂದ ಕೊನೆಯವರೆಗೂ ಆ ನಿಷ್ಠೆ ಏಕಪ್ರಕಾರವಾದುದು. ಅನೇಕ ಆಘಾತಗಳು, ನೋವುಗಳು ಎದುರಾದರೂ ಅದರ ಪರಿಣಾಮ ಮಾತ್ರ ಒಂದೇ ಗಂಗಾಂಬಿಕೆ-ಬಸವಣ್ಣ ಪರಿಶುದ್ಧತೆಯ ಜೀವನವನ್ನು ನಡೆಸಿದ್ದರು ಹಾಗೂ ಬದುಕಿನಲ್ಲಿ ಪರಸ್ಪರ ಸಹವರ್ತಿಗಳಾಗಿ ಬಾಳಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ಆದರೆ ಬಸವಣ್ಣನವರ ವಚನಗಳಲ್ಲಿ ಈಕೆಯ ಕುರಿತು ವ್ಯಕ್ತವಾಗಿಲ್ಲ. ಆದರೆ ಸಾಂಸಾರಿಕ ವಚನಗಳನ್ನು ಬಸವಣ್ಣ ಹೇಳಿದರೂ ಈಕೆಗೆ ಅನ್ವಯವಾಗುವಂತೆ ಹಾಗೂ ಉನ್ನತ ಆಲೋಚನೆಯಿಂದ ಕೂಡಿದ್ದಿರಬಹುದು.

ನೀಲಾಂಬಿಕೆ ವಚನಗಳ ಮೂಲಕ ಬಸವಣ್ಣನವರ ಕುರಿತ ಅವಳ ಧೋರಣೆಯನ್ನು ಪ್ರಸ್ತಾಪಿಸಬಹುದು. ನೀಲಮ್ಮ ಬಸವಣ್ಣನವರ ಎರಡನೆಯ ಪತ್ನಿಯೆಂದು ಬಹುತೇಕ ಕಾವ್ಯಗಳು ವಿವರಿಸುತ್ತವೆ. ನೀಲಮ್ಮನನ್ನು ವಿಚಾರಪತ್ನಿಯೆಂದು ಸ್ವೀಕರಿಸಲಾಗಿದೆ. ಅವಳ ವಚನವೇ ಇದನ್ನು ದೃಢಪಡಿಸುತ್ತದೆ. ವಿಚಾರ ಎಂಬುದನ್ನು ಆಕೆ ಏರಿದ ಎತ್ತರದ ಸ್ತರವಾಗಿ ಗ್ರಹಿಸಬಹುದಾಗಿದೆ. ವೈಯಕ್ತಿಕ ಸಂವೇದನೆಯಿಂದ ಬಸವಣ್ಣನವರನ್ನು ಅರಿತುಕೊಂಡ ಹಂತವಾಗಿ ಬಸವಣ್ಣನವರಿಂದ ಶರಣರನ್ನು ಹಾಗೂ ಶರಣ ತತ್ವಗಳನ್ನು ಹಂತ ಹಂತವಾಗಿ ಲಿಂಗಾರ್ಚನೆಯಿಂದ ಲಿಂಗನಿಷ್ಠೆಳಾಗಿ ತನ್ನನ್ನು ತಾನರಿತ ಹಂತವಾಗಿ ಎಂದು ಅವಳು ಕ್ರಮಿಸಿದ ಮಾರ್ಗವನ್ನು ಗ್ರಹಿಸಿದರೆ ಅವಳು ಏರಿದ ಎತ್ತರ, ವೈಚಾರಿಕ ನಿಲುವು ಸ್ಪಷ್ಟವಾಗುತ್ತದೆ. ಊರ್ಧ್ವಮುಖಿ ಚಿಂತನೆಗಳಿಂದಾಗಿ ಆಕೆ ಬಸವಣ್ಣನವರಿಗೆ ಕೌಟುಂಬಿಕದಲ್ಲಿ ದಾಸೋಹ ಲಿಂಗಾರ್ಚನೆಗಳಿಗೆ ಕಾಯಕಯೋಗಿಣಿಯಾಗಿ ಗೋಚರಿಸಿದ್ದಾಳೆಂದರೆ ತಪ್ಪಾಗಲಿಕ್ಕಿಲ್ಲ.

ಬಸವಣ್ಣನವರನ್ನು ಕುರಿತ ನಿಲುವನ್ನು ಅವಳ ವಚನಗಳೇ ಸ್ಪಷ್ಟಪಡಿಸುತ್ತವೆ. ಬಸವಣ್ಣನವರನ್ನು ಕುರಿತ ಸಮಗ್ರ ವ್ಯಕ್ತಿ ಚಿತ್ರವೊಂದನ್ನು ನೀಲಮ್ಮ ಕೊಟ್ಟಿದ್ದಾಳೆ. ಬಸವಣ್ಣನವರು ಭೂಲೋಕವನ್ನೇ ಕೈಲಾಸ ಮಾಡಿದರೆಂಬುದನ್ನು ಹೀಗೆ ಹೇಳುತ್ತಾಳೆ.

> "ಕೈಲಾಸವನೆ ಕಲ್ಯಾಣವ ಮಾಡಿದಾತ ನಮ್ಮ ಬಸವಯ್ಯನು
> ಆ ಕೈಲಾಸವೇ ಕಲ್ಯಾಣವಾಗಲೂ ಕಲ್ಯಾಣಕ್ಕೆ
> ತಂದು ನೆರಹಿತಾರ ನಮ್ಮ ಬಸವಯ್ಯನು
> ಮರ್ತ್ಯ ಲೋಕವನೆ ಮಹಾಪ್ರಮಥರ ಬಿಡಾರವ
> ಮಾಡಿದಾತ ನಮ್ಮ ಬಸವಯ್ಯನು."[೬]

ಕೈಲಾಸದ ಗಣಗಳನ್ನು ಕಲ್ಯಾಣದಲ್ಲಿ ಶಿವಶರಣರೆನಿಸಿ ಸಲುಹಿದಾತ ಎಂದು ಬಸವಣ್ಣನವರ ಹಿರಿಮೆಯನ್ನು ಕೊಂಡಾಡಿದ್ದಾಳೆ. ಹಾಗೆಯೇ ಬಸವಣ್ಣನನ್ನು ಉನ್ನತೀಕರಿಸಿ ಹೇಳುವುದರೊಂದಿಗೆ ಈತನ ಕಾರ್ಯವೈಖರಿಯನ್ನು ಹೇಳುತ್ತಾಳೆ. ಅನೇಕ ಶರಣರನ್ನು ತೊಂಬತ್ತಾರು ಸಾವಿರ ಜನರಿಗೆ ದಾಸೋಹ ಮಾಡಿದ್ದನ್ನು ಸ್ಮರಿಸಿದ್ದಾಳೆ.

"ಬಯಲನೊಂದು ರೂಪಮಾಡಿ ಬಣ್ಣಕ್ಕೆ ತಂದು
ಆ ಬಣವ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು.
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಇಚ್ಫೆಯನರಿದು ಅರ್ಪಿತವ ಮಾಡಿದಾತ ನಮ್ಮ ಬಸವಯ್ಯನು"[೮]

ನೀಲಾಂಬಿಕೆ ತನ್ನ ವಚನದ ಮೂಲಕ ಬಸವಣ್ಣನನ್ನು ಕ್ರಿಯಾಶೀಲ ವ್ಯಕ್ತಿವೆಂಬಂತೆ ತೋರ್ಪಡಿಸಿದ್ದಾಳೆ. ಅಲ್ಲದೆ ಪವಾಡ ಪುರುಷನು ಎಂಬ ರೀತಿಯಲ್ಲಿ ವ್ಯಕ್ತಪಡಿಸಿದ್ದು ಸ್ಪಷ್ಟವಾಗಿ ಈ ಕೆಳಗಿನ ವಚನದಲ್ಲಿ ಕಾಣುತ್ತದೆ.

"ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ,
ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲವಯ್ಯ"[೯]

ಎಂಬಲ್ಲಿ ಹೆಣ್ಣುತನದ ಬಗ್ಗೆ ತಾತ್ಸಾರವಿದೆ. ಸ್ಪಷ್ಟವಾಗಿ ಎರಡು ಅಂಶಗಳನ್ನು ಆಕೆ ತಿಳಿಸುತ್ತಾಳೆ.

ಸಿರಿಯಿದ್ದ ವಸ್ತುವಿನ ವಧುವಾದ ಕಾರಣ ಎಂದರೆ ಸಿರಿ=ಭಾಂಡಾರದ ಒಡೆಯ ಕೋಶಾಧಿಕಾರಿ ಯಾದವರ ವಧು ಹಾಗೂ ಬಸವನ ವಧು ಎಂಬುದಾಗಿ ಹೇಳಿ ಹೆಣ್ಣುನಾಮವೇ ಇಲ್ಲವಯ್ಯ ಎನ್ನುತ್ತಾಳೆ. ಬಸವಣ್ಣನವರಿಗೆ ಇಬ್ಬರು ಪತ್ನಿಯರು ಎಂಬುದು ಅವರ ವಚನಗಳೇ ಸ್ಪಷ್ಟಪಡಿಸುತ್ತವೆ. ಅಷ್ಟೇ ಅಲ್ಲದೆ ರಾಜ್ಯಾಧಿಕಾರ ಇರುವುದರಿಂದ. ಶರಣತ್ವ ಇರುವುದರಿಂದ ವೈಯಕ್ತಿಕವಾದ ರಾಗದ್ವೇಷಗಳನ್ನು ಮೀರಿದ ರೀತಿಯನ್ನು ಇದು ಧ್ವನಿಸುತ್ತದೆ. ರಾಜ್ಯ ಹಾಗೂ ಸಾಮಾಜಿಕ ಸುಭಿಕ್ಷೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವುದನ್ನು ಗಂಗಾಬಿಕೆ-ನೀಲಾಂಬಿಕೆ ವಚನಗಳಿಂದ ಗ್ರಹಿಸಬಹುದಾಗಿದೆ.

"ಕಾಮವನಳಿದ ಹೆಣ್ಣಲ್ಲ ನಾನು, ಕಾಮ ಪಂಟೆನಗೆ
ಕಾಯ ಸಂಸಾರ ವಳಿಯಿತ್ತೆಂಬ........................
ಕಾಮಿಯಾನಾಗಿ ಕಾಮದ ಹಂಗ ಹರಿದೆನು ಬಸವಾ
.................................................................

..................................................................

ನಾನು ಸುಖಿಯಾದೆನಯ್ಯಾ, ಸಂಗಯ್ಯ, ಬಸವನಲ್ಲಿ"[೧೦]

ಈ ಮೇಲಿನ ವಚನ ಕಾಯಕ್ಕೆ ಇರಬೇಕಾದ ಆಸೆಗಳನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಈ ಆಸೆಗಳಿಂದ ಮುಕ್ತಳಾಗಿ ಬಸವನಲ್ಲಿ ಸುಖಿಯಾಗಿದ್ದೇನೆ ಎಂದು ಹೇಳುವ ಪರಿ ಇವರ ಸಾಂಸಾರಿಕ ಬದುಕು ಹಾಗೂ ಕೌಟುಂಬಿಕ ವೇದನೆಗಳನ್ನು ಸಹಿಸಿಕೊಳ್ಳುತ್ತಲೇ ಸಾಮಾಜಿಕವಾಗಿ ತೊಡಗಿಸಿಕೊಂಡು ಎತ್ತರಕ್ಕೆ ಬೆಳೆದು ನಿಂತ ಸ್ಥಿತಿ ಮತ್ತು ಕಾರಣ ಇಲ್ಲಿದೆ,

"ಪಾರ್ವತಿಯ ರೂಪ ಕಂಡು ಪರಿಶಿವನಸಂಗ ನಿಸ್ಸಂಗವಾಗಿ

.........................................................................

ವಿಚಾರ ಪತ್ನಿಯಾದೆನಯ್ಯ ಸಂಗಯ್ಯಾ.

ಹೆಸರಿಲ್ಲದ ರೂಪ ಕಂಡು

.................................

..................................

ಪರಂಜ್ಯೋತಿಲಿಂಗ ವಾದೆವಯ್ಯಾ ಸಂಗಯ್ಯಾ"[೧೧]

ಈ ವಚನ ನೀಲಮ್ಮ ಸಾಗಿದ ಬಂದ ಪಥವನ್ನು ಸ್ಪಷ್ಟೀಕರಿಸುತ್ತದೆ. ಅದರಂತೆ ಬಸವನ ಸಂಗದಿಂದ ಅನುಭವ ಹೊಂದಿ ನಾನು ವಿಚಾರ ಪತ್ನಿಯೆಂಬುದರ ಮುಖಾಂತರ ನನಗೆ ಮುಕ್ತವಾದ ಬದುಕು ಕಂಡುಕೊಳ್ಳಲಿಕ್ಕೆ ಬಸವಣ್ಣ ಮಾರ್ಗದರ್ಶಿ ಅಲ್ಲದೆ ಪ್ರಣವರೂಪಿ, ಪರಂಜ್ಯೋತಿ ಸ್ವರೂಪ ಎಂದು ಕೊಂಡಾಡಿದ್ದಾಳೆ. ಆತನ ಅನುಭವ ವಚನದ ಮೂಲಕ ನಾನು ಕೂಡ ಅನುಭವಮೂರ್ತಿಯಾದೆನು, ಎಂದು ಬಸವಣ್ಣನವರ ವ್ಯಕ್ತಿಚಿತ್ರವೊಂದನ್ನು ನೀಲಾಂಬಿಕೆ ನಿರ್ಮಿಸುತ್ತಾಳೆ. ಹಾಗೆಯೇ ತನ್ನ ವೈಯಕ್ತಿಕ ವಿಚಾರಗಳನ್ನು ತಿಳಿಸುತ್ತಾಳೆ.

ಅದರಂತೆ ಆಕೆ ಸಂಸಾರದಲ್ಲಿ ಬಸವನ ಮೂರ್ತಿಯ ಕಂಡು ಸಂಸಾರದಲ್ಲಿ ಕಡು ಕಷ್ಟಗಳನ್ನು ಕಂಡದ್ದನ್ನು ಕೆಳಗಿನ ವಚನದಲ್ಲಿ ಪ್ರಸ್ತುತಪಡಿಸಿದ್ದಾಳೆ.

"ಇಬ್ಬರು ನಾವು ಒಂದೆಡೆಯ ನುಂಡೆವು

ಎಂಬ ಊಟದಲ್ಲಿ ತೃಪ್ತಿಯ ತಳಿದು

ತನು ಸೋಜಿಗವಾಯಿತ್ತಯ್ಯ.

ಮನ ಮಗ್ನವನ್ನೈದಿ ಮಹಾಲಿಂಗದತ್ತ

ಶುದ್ಧಿ ನಿಃಶುದ್ಧಿಯಾಯಿತ್ತಯ್ಯ

ಅಡಗಿದೆ ನಡಗಿದೆನತ್ತತ್ತಲೆ ನಾನು
ಉಡಿಗಿದೆನೀ ಕಾಯವ
ಉಭಯದ ಸಂಗದ ಹರಿದು
ಉಲಾಹಡಗಿದ ವೃಕ್ಷವಾದೆವಯ್ಯ ಸಂಗಯ್ಯ"[೧೨]

ಬಹುಶಃ ಅಕ್ಕ ತಂಗಿಯರಿಬ್ಬರು ಎಂಬರ್ಥವಿರಬಹುದು. ಇಬ್ಬರೂ ಒಂದೇ ಎಡೆ-ಉಂಡರೂ ನೀಲಮ್ಮ ಮಾತ್ರ ಲಿಂಗನಿಷ್ಠೆಯೆಡೆಗೆ ಸಾಗಿದ ರೀತಿಯನ್ನು ಇದು ಧ್ವನಿಸುತ್ತದೆ.

ಅಲ್ಲದೆ ಈಕೆಯಲ್ಲಿ ಅಡಗಿದ್ದ ಆಧ್ಯಾತ್ಮಿಕ ವೃಕ್ಷದ ಚಿಗುರಾದ ಬಗೆಯನ್ನು ಈ ವಚನ ತಿಳಿಸುತ್ತದೆ. ಅದರಂತೆ ಅಧ್ಯಾತ್ಮರ ಸವಿಯನ್ನು ಉಂಡ ಎನಗೆ ಎನ್ನ ಕಾಮದ ಆತುರತೆ ಹಿಗಿತ್ತು ಎಂದು ಹೇಳುವುದನ್ನು ನೋಡಿದರೆ ಬಸವಣ್ಣನವರು ಸಮಾಜಮುಖಿ ಧೋರಣೆಯ ವರಾದ್ದರಿಂದ ತಾನು ಕೂಡ ಕೌಟುಂಬಿಕ ನೆಲೆಯಿಂದ ಸಾಮಾಜಿಕ ಹಾಗೂ ಅಧ್ಯಾತ್ಮದೆಡೆಗೆ ಸಾಗಿದ ಹಾದಿಯನ್ನು ಈ ವಚನದಲ್ಲಿ ತಿಳಿಸಿದ್ದಾಳೆ. ಇಂತಹ ಅಧ್ಯಾತ್ಮಕತೆಯ ನಿಲುವು ನೀಲಾಂಬಿಕೆಯಲ್ಲಿ ಒಡಮೂಡಿ, ನಾನು ಬಸವನಿಗೆ ಮಡದಿಯಲ್ಲ ಆತನು ಎನಗೆ-ಪುರುಷನಲ್ಲ ಇದರಿಂದ ಮುಂದೆ ಹೋಗಿ ಬಸವನಿಗೆ ನಾನು ಶಿಶು ನನಗೆ ಬಸವ ಶಿಶು ಎಂಬುದರ ಮುಖಾಂತರ ಮಾತೃ ಬಾಂದವ್ಯವನ್ನು ವ್ಯಕ್ತಪಡಿಸುವುದರೊಂದಿಗೆ ಗಂಡ ಹೆಂಡತಿಯರಿಬ್ಬರೂ ಪೂರಕವಾಗಿ ಬದುಕಬೇಕು. ಮತ್ಸರ ಇರಬಾರದು ಎಂಬುದನ್ನು ಸ್ಪಷ್ಟಪಡಿಸುತ್ತಾಳೆ. ಹಾಗೆಯೇ ಬಸವಣ್ಣನವರ ಬದುಕಿನಲ್ಲಿ ನೀಲಾಂಬಿಕೆ ಒಬ್ಬ ವ್ಯಕ್ತಿ ಆಗದೆ ಶಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಳು. ಅಲ್ಲದೆ ಸಾಮಾಜಿಕ ಸುಧಾರಣೆಯ ಹಾಗೂ ಧಾರ್ಮಿಕ ಜಾಗೃತಿಯ ಕಡೆ ಹೆಚ್ಚು ಒಲವನ್ನು ಕೊಟ್ಟಿದ್ದಳು, ಹಾಗಾಗಿ ಇವರಿಬ್ಬರ ಸಂಬಂಧ ತಾಯಿ-ಮಗುವಿನ ಸಂಬಂಧದ ಹಾಗೆ ಇರುತ್ತದೆ. ಆ ರೀತಿಯಲ್ಲಿ ಭಾವನಾತ್ಮಕ ಸಂಬಂಧವನ್ನು ಪಡೆದು ಬಸವನ ಭಕ್ತಿ ಕಳಕಳಿ ಹಾಗೂ ಸುಂದರ ಸಮಾಜದ ಕಟ್ಟುವಿಕೆಯಲ್ಲಿ ಸದಾ ಪ್ರಯತ್ನ ಶೀಲನಾದ ಬಸವಣ್ಣನಿಗೆ ಜೀವನದಲ್ಲಿ ಸಹಧರ್ಮಿಣೀಯಾಗಿದ್ದಾಳೆ, ಅಕ್ಷಯ ಇಲ್ಲು ಬಸವನೆ ಎನಗೆ ಗತಿ ಮತಿಯಾಗಿದ್ದಾನೆ ಎಂದು ಈಕೆಯಲ್ಲಿ ಸಂಸಾರ ಜಿಗುಪ್ಸೆ ಬಂದದ್ದನ್ನು ಈಕೆಯ ವಚನದಲ್ಲಿ ಕಾಣಬಹುದು.

"ಎನಗೆ ಸಂಸಾರ ಬಂದ ಕಾರಣವೇನೆಂದು ಕೇಳಲು ಎನಗೆ ಸಂಸಾರವಿಲ್ಲವಂದೆ ಹೋಯಿತ್ತು ಇಲ್ಲವೆಂದೆ ಹೇಳಿತ್ತು"[೧೩]

ನೀಲಾಂಬಿಕೆಯಲ್ಲಿ ಸಂಸಾರ ನಿಃಶೂನ್ಯ ಎಂಬ ರೀತಿಯಲ್ಲಿ ಹೇಳುವುದನ್ನು ನೋಡಿದರೆ ಈಕೆಯಲ್ಲಿ ಪಾರಮಾರ್ಥಿಕ ನಿಲುವು ಉಚ್ಚಲವಾಗಿ ವ್ಯಕ್ತವಾಗಿದ್ದರಿಂದಲೇ ಎಂಬ ರೀತಿಯಲ್ಲಿ ಈಕೆಯ ಭಾವನೆಗಳು ಮೂಡಿದಂತೆ ತೋರುತ್ತದೆ. ಆದರೆ ಪತಿ-ಪತ್ನಿಯರ ಲೌಕಿಕ ಸಂಬಂಧ ಕ್ಕಿಂತಲೂ ಅಲೌಕಿಕ ಸಂಬಂಧ ಇವರಲ್ಲಿ ಹೆಚ್ಚು ಕಾಣುತ್ತದೆ.

ಹಾಗಾಗಿ ಈ ಇಬ್ಬರಲ್ಲಿ ಭಾವನಾತ್ಮಕ ಸಂಬಂಧವನ್ನು ಕಾಣುತ್ತೇವೆ. ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದ ಸಂದರ್ಭವನ್ನು ನೆನೆಸಿಕೊಂಡ ಈಕೆ ಅಟ್ಟಡವಿಯಲ್ಲಿ ನಮ್ಮನ್ನು ಬಿಟ್ಟು ಹೋದಿರಿ, ನಮಗೆ ಯಾರು ಗತಿ-ನಮಗೆ ಯಾರುಮತಿ ಎಂದು ಅಗಲುವಿಕೆಯ ನೋವವನ್ನು ತನ್ನ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ. ಅಲ್ಲದೆ ಬಸವಣ್ಣನವರು ಐಕ್ಯರಾಗುವ ಸಂದರ್ಭದಲ್ಲಿ ಅಲ್ಲಿದ್ದ ಸಂಗಯ್ಯ ಇಲ್ಲಿಲ್ಲವೆ? ಎಂದು ಪ್ರಶ್ನಿಸಿ ಲಿಂಗೈಕ್ಯಳಾಗುತ್ತಾಳೆ. ಲಿಂಗನಿಷ್ಠೆಯ ಪರಿ ಈ ಹಂತ ತಲುಪಿದ ಸ್ಥಿತಿಯಲ್ಲಿರುತ್ತಾಳೆ ಹಿಗಿರುವಲ್ಲೂ ಬಸವಣ್ಣನವರ ಐಕ್ಯವನ್ನು ಸಹಿಸದ ಸ್ಥಿತಿಯನ್ನು ಕಾಣಬಹುದಾಗಿದೆ. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನು ಹುಡುಕಿದಂತೆ, ನಾಡಿನ ಹೆಣ್ಣುಗಳೆಲ್ಲಾ ಬನ್ನಿರೆ ಅಕ್ಕಗಳಿರಾ.............., ಎಲೆ ಅಯ್ಯಗಳಿರಾ, ಎಲೆಗಳೆದ ವೃಕ್ಷವ ಕಂಡಿರೆ ಬಸವನ.... ಸಂಗಯ್ಯನಲ್ಲಿ ಸ್ವಯವಳಿದ ಬಸವನ ಕುರುಹ ಕಂಡಿರೆ"[೧೪]

ಪ್ರಕೃತಿಯ ಮಡಿಲನ್ನೆಲ್ಲಾ ಹುಡುಕುತ್ತಾಳೆ. ಒಮ್ಮೆ ಭಾವನಾಜೀವಿಯಾಗಿ ರೋದಿಸಿದರೆ ಮತ್ತೊಮ್ಮೆ ವೈಚಾರಿಕ ನೆಲೆಯಲ್ಲಿ ಮಾತನಾಡುತ್ತಾಳೆ, ಆತ್ಮವಿಮರ್ಶೆ ಕೂಡ ಮಾಡಿಕೊಳ್ಳುತ್ತಾಳೆ. ಒಟ್ಟಿನಲ್ಲಿ ನೀಲಮ್ಮನ ವಚನಗಳನ್ನು ನೋಡಿದಾಗ ನೀಲಮ್ಮನ ನಿಲುವು ದ್ವಂದ್ವಾತ್ಮಕವಾಗಿಯೇ ತೊರುತ್ತದೆ. ಅವಳ ಜೀವನ(ದಾಂಪತ್ಯ) ಪ್ರಾರಂಭವಾದಾಗಿನಿಂದ ಬಸವನಿಷ್ಠೆ ಬೆಳೆದ ಬಗೆ ಒಂದು ಘಟ್ಟ, ಇದಾದ ನಂತರ ಬಸವಣ್ಣನವರ ಐಕ್ಯದ ಸಂದರ್ಭದಲ್ಲಿ ಮತ್ತೆ ಬಸವನಿಷ್ಠೆ ಬರುತ್ತದೆ. ಸಾಂದರ್ಭಿಕವಾಗಿ ಎರಡು ಹಂತಗಳಾಗಿ ಗುರುತಿಸಿದರೂ ಕೂಡ ಅದು ವೃತ್ತವಾಗಿ ಸುತ್ತಿಕೊಳ್ಳುತ್ತದೆ ಎನ್ನಬಹುದು. ವ್ಯಕ್ತಿನಿಷ್ಠೆ-ಬಸವನಿಷ್ಠೆ-ಲಿಂಗನಿಷ್ಠೆ-ಅಂದರೆ ಬಸವನಿಷ್ಠೆಗಳು ಚಕ್ರಾಕಾರವಾಗಿ ಸುತ್ತುತ್ತವೆ.

**೨. ಬಸವಣ್ಣನವರ ನಿಲುವಿನಲ್ಲಿ ಪತ್ನಿಯರು**

ಮಾನವ ಮೂಲತಃ ಸಮಾಜ ಜೀವಿ. ಅವನು ಒಂಟಿಯಾಗಿ ಜೀವನ ನಡೆಸಲು ಸಾಧ್ಯವಿಲ್ಲ. ವ್ಯಕ್ತಿ ಬೇರೆಯವರೊಂದಿಗೆ ಅರಿತು ಜೀವನ ನಡೆಸಿದಾಗ ಮಾತ್ರವೇ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಹಾಗಾಗಿ ಪರಿಪೂರ್ಣತೆಯತ್ತ ಸಾಗುವುದು ಬದುಕಿನ ಪರಮಗುರಿ. ಕೇವಲ ನಾಲ್ಕು ಗೋಡೆಗೆ ಸೀಮಿತವಾಗದೆ ಶರಣ ಸಮಾಜವನ್ನು ಕಟ್ಟಿ-ಸಾರ್ವಕಾಲೀಕ ವಾದ ವಿಚಾರಭಾವನೆಗಳನ್ನು ಹಂಚು ಕಾರ್ಯಕ್ಕೆ ಮುಂದಾದವರು ಬಸವಣ್ಣನವರು. ಇಂತಹ ಬಸವಣ್ಣನವರ ಬದುಕಿಗೆ ಸ್ವಾನುಭವದ ಸಾಧಕಿಯರಾಗಿ ಈತನ ಪತ್ನಿಯರು ಮಾದರಿಯಾಗಿದ್ದಾರೆ. ಹಿರಿಯ ಪತ್ನಿ ಗಂಗಾಂಬಿಕೆ, ಕಿರಿಯ ಪತ್ನಿ ನೀಲಾಂಬಿಕೆ. ಈ ಇಬ್ಬರನ್ನು ಬಸವಣ್ಣ ವಿವಾಹವಾಗಿದ್ದ ಎಂಬುದನ್ನು ಸಾಹಿತ್ಯವಲಯದಲ್ಲಿ ಕಂಡಿದ್ದೇವೆ. ಬಸವಣ್ಣನವರು ಸ್ತ್ರೀ ಸಮಾನತೆಗೆ ಭದ್ರಬುನಾದಿ ಯನ್ನು ಹಾಕಿದ್ದು ಕಾಣುತ್ತೇವೆ. ಮಹಿಳೆಯನ್ನು ಗೌರವದಿಂದ ಕಾಣುವಂತಹ ಭಾವವನ್ನು

ತುಂಬಿಕೊಟ್ಟಿದ್ದು ಕಾಣುತ್ತೇವೆ. ಅಲ್ಲದೆ ಪರಸ್ತ್ರೀಯನ್ನು ಮಹಾದೇವಿಯಕ್ಕನಿಗೆ ಹೋಲಿಸಿದ್ದಾರೆ. ಇಂತಹ ಪರಿಪಕ್ವಗೊಂಡ ಇವರ ಬದುಕಿನಲ್ಲಿ ಬಂದವರು ಗಂಗಾಂಬಿಕೆ-ನೀಲಾಂಬಿಕೆಯರು ಬಸವಣ್ಣನಿಗೆ ಪ್ರೇರಕಶಕ್ತಿಯಾಗಿ ಇದ್ದಿರಬಹುದು.

ಬಸವಣ್ಣನವರ ವೈಯಕ್ತಿಕ ಜೀವನದಲ್ಲಿ ಗಂಗಾಂಬಿಕೆಯನ್ನು ವಿವಾಹವಾದರು. ನೀಲಾಂಬಿಕೆಯನ್ನು ಏಕೆ ವಿವಾಹವಾದರು ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಈ ವಿವಾಹಕ್ಕೆ ಮೊದಲ ಹೆಂಡತಿಯ ಒತ್ತಾಯವೋ ಅಥವಾ ಬಿಜ್ಜಳ ಮಹಾರಾಜನ ಒತ್ತಾಯವೋ ಅಥವಾ ಬಸವಣ್ಣನವರ ಮತ್ತು ಶರಣರ ಒತ್ತಾಯವೋ ಎಂಬುದು ಬಸವಣ್ಣ-ಗಂಗಾಂಬಿಕೆ-ನೀಲಾಂಬಿಕೆ ಹಾಗೂ ಸಮಕಾಲೀನ ಶರಣರ ವಚನಗಳಲ್ಲಿ ಮತ್ತು ಕಾವ್ಯಗಳಲ್ಲಿ ತಿಳಿದುಬರುವುದಿಲ್ಲ. ಆದರೆ ಕೆಲವು ಕಾವ್ಯಗಳಲ್ಲಿ ಬಿಜ್ಜಳನ ಅರಮನೆಯಲ್ಲಿ ಓಲೆಯನ್ನು ಓದಿದ ನಂತರ ನೀಲಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ವಿವಾಹ ಮಾಡಿದ್ದು ಕಂಡುಬರುತ್ತದೆ ಹೊರತು, ಮೊದಲಪತ್ನಿ ಗಂಗಾಂಬಿಕೆ ಇದ್ದರೂ ನೀಲಾಂಬಿಕೆಯನ್ನು ವಿವಾಹ ಏಕೆ ಆದರು ಎಂಬುದು ತಿಳಿದು ಬರುವುದಿಲ್ಲ.

ಕಾವ್ಯ-ಪುರಾಣಗಳಲ್ಲಿ ಬಸವಣ್ಣನವರ ಜೀವನಚರಿತ್ರೆ ಹೇಳುವ ಸಂದರ್ಭದಲ್ಲಿ ಗಂಗಾಂಬಿಕೆ ನೀಲಾಂಬಿಕೆಯರ ಕುರಿತು ಅಲ್ಪ ಮಾಹಿತಿ ಸಿಗುತ್ತದೆ. ಆದರೆ ಪೂರ್ಣ ಪ್ರಮಾಣದ ವಿಚಾರಗಳು ವ್ಯಕ್ತವಾಗುವುದಿಲ್ಲ. ಆದರೆ ಕೆಲವು ವಿಮರ್ಶಕರ ಅಭಿಪ್ರಾಯದಂತೆ ಗಂಗಾಂಬಿಕೆ-ನೀಲಾಂಬಿಕೆ ಅಕ್ಕ ತಂಗಿಯರು. ಮೇಲಾಗಿ ಇವರಿಬ್ಬರೂ ಬಿಟ್ಟಿರಲಾರದಂತವರು ಎಂದು ಕಂಡು ಸ್ವತಃ ಇವರ ತಂದೆಯರೆ ನೀಲಾಂಬಿಕೆಯ ವಿವಾಹವನ್ನು ಮಾಡಿರಬಹುದು. ಏಕೆಂದರೆ ಬಸಪ್ಪ ಶಂಕ್ರಪ್ಪನವರು ಹೇಳುವಂತೆ "ಗಂಗಮ್ಮ ನೀಲಮ್ಮ ಇಬ್ಬರೂ ಅಣ್ಣ-ತಮ್ಮಂದಿರ ಮಕ್ಕಳು. ಮೇಲಾಗಿ ಮಂತ್ರಿಗಳ ಮಕ್ಕಳು ಮತ್ತು ಇಬ್ಬರು ಎಳೆ ತನದಲ್ಲಿಯೇ ತಾಯಿಯನ್ನು ಕಳೆದುಕೊಂಡ ತಬ್ಬಲಿಗಳು. ಅವರಿಬ್ಬರಲ್ಲಿ ಎಷ್ಟೊಂದು ಆತ್ಮೀಯತೆ ಎಂದರೆ ಒಂದೇ ಜೀವ ಎರಡು ದೇಹದಂತೆ ಇದ್ದವರು."[೧೫]

ಇವರ ಅಭಿಪ್ರಾಯವನ್ನು ಗಮನಿಸಿದಾಗ ಈ ಇಬ್ಬರು ತಮ್ಮ ಅಗಲುವಿಕೆ ವಿಚಾರವಿಲ್ಲವೆಂಬಂತೆ ಕಂಡುಬರುತ್ತದೆ. ಅಲ್ಲದೆ ಗಂಗಾಂಬಿಕೆ ಬಸವಣ್ಣನ ವಿವಾಹ ನಂತರವೂ ಇವರ ಬಾಂಧವ್ಯ ಅನನ್ಯತೆಯಿಂದ ಕೂಡಿತ್ತು. ಇವರಿಬ್ಬರ ಈ ಬಾಂಧವ್ಯವನ್ನು ಕಂಡು ಅಕ್ಕನಾಗಮ್ಮ ಬಸವಣ್ಣನಿಗೆ ನೀಲಾಂಬಿಕೆಯನ್ನು ವಿವಾಹವಾಗು ಎಂದು ಹೇಳುತ್ತಾರೆ ಎಂಬುದನ್ನು ಬಸಪ್ಪ ಶಂಕ್ರಪ್ಪನವರು ಮುಂದುವರೆದು ಹೀಗೆ ಅಭಿಪ್ರಾಯ ಪಡುತ್ತಾರೆ.

"ಗಂಗಮ್ಮ-ನೀಲಮ್ಮನವರ ಒಡನಾಟ ಹಾಗೂ ನೀಲಮ್ಮನ ನಿರ್ಮಲ ನಿಗರ್ವಿ ಸುಶೀಲ ಮನಸ್ಸನ್ನು ಅರಿತ ಅಕ್ಕನಾಗಮ್ಮನವರು ಬಸವಣ್ಣನವರಿಗೆ ನೀಲಮ್ಮನನ್ನು ಮದುವೆಯಾಗುವಂತೆ

ಒತ್ತಾಯಿಸ ತೊಡಗಿದಳು. ಗಂಗಮ್ಮನು ಸಹ ನೀಲಮ್ಮನನ್ನು ಬಿಟ್ಟು ಅಗಲಿ ಇರುವುದು ನನ್ನಿಂದಾಗುವುದಿಲ್ಲ. ಆದ ಕಾರಣ ನೀವು ನೀಲಮ್ಮಳನ್ನು ಮದುವೆಯಾಗಲೇಬೇಕು ಎಂದು ಹಟ ಹಿಡಿದಳು. ಅರಸ ಬಿಜ್ಜಳನು ಸಹ ಬಸವಣ್ಣನವರ ಅಪೂರ್ವ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರು, ಅದರಿಂದ ಅವನು ಸದ್ಧರಸನ ಮರಣದಿಂದ ತೆರವಾದ ಭಂಡಾರಿಗನ ಸ್ಥಾನಕ್ಕೆ ಬಸವಣ್ಣನವರನ್ನು ನೇಮಿಸಿದ್ದನು. ತನ್ನ ಸಾಕು ತಂಗಿ ನೀಲಮ್ಮನಿಗೆ ಬಸವಣ್ಣನೇ ಯೋಗ್ಯ ವರವೆಂದು ನಿಶ್ಚಯಿಸಿ. ಬಸವಣ್ಣನಿಗೆ–ಅಕ್ಕನಾಗಮ್ಮನಿಗೆ, ಶಿವಸ್ವಾಮಿಗೆ, ತನ್ನ ಆಸ್ಥಾನದ ಮಂತ್ರಿಗಳಿಗೆ ತನ್ನ ಮನೋಭಿಲಾಷೆಯನ್ನು ತಿಳಿಸಿದನು. ನೀಲಮ್ಮನು ಬಸವಣ್ಣನನ್ನು ತಾನು ಮದುವೆಯಾಗುವುದು ತನ್ನ ಪುಣ್ಯವೆಂದು ತಿಳಿದಿದ್ದಳು. ಬಸವಣ್ಣನು ಸಹ ಅತ್ಯಂತ ಸಮೀಪದಿಂದ ನೀಲಮ್ಮನ ಗುಣ,ಶೀಲ, ವ್ಯಕ್ತಿತ್ವವನ್ನು ಬಲ್ಲವನಾಗಿದ್ದನು."[೧೬]

ಇವರ ಅಭಿಪ್ರಾಯದಂತೆ ಬಸವಣ್ಣ ತಪ್ಪಿಸ್ಥನಲ್ಲ ಎನಿಸುತ್ತದೆ. ಏಕೆಂದರೆ ಕುಟುಂಬದ ಒತ್ತಾಯ ಒಂದಾದರೆ ನಾಡನಾಳುವ ರಾಜನ ಒತ್ತಾಯ ಇನ್ನೊಂದಾಗಿದೆ.

ಆದರೆ ಬಸವಣ್ಣ ಇವರ ಹೇಳಿಕೆಯನ್ನು, ಹೀಗೆ ಒಪ್ಪಿದ ಪರಸ್ತ್ರೀಯನ್ನು ಮಹಾದೇವಿ ಎನ್ನುವ ಈತನು ಏಕೆ ಒಪ್ಪಿದ ವಿವಾಹಕ್ಕೆ ಎನ್ನುವುದಕ್ಕೆ ಬಸವಪಥದಲ್ಲಿಯ ಲೇಖನವಾದ ಬಸವಣ್ಣನವರ ದ್ವಯ ವಿವಾಹಕ್ಕೆ ಬಿಜ್ಜಳನ ಸ್ವಯಂ ನಿರ್ವಾಹವೇ ಕಾರಣ ಎಂಬ ಲೇಖನ ಕರ್ತೃ ಬಿ.ಮಹಾದೇವಪ್ಪ ಹೀಗೆ ಅಭಿಪ್ರಾಯ ಪಡುತ್ತಾರೆ. "ಬಿಜ್ಜಳನು ಆಲೋಚಿಸಿದಷ್ಟು ನೀಲಾಂಬಿಕೆಗೆ ಯೋಗ್ಯ ವರನಾಗಿ ಕಾಣುವವನು ಬಸವರಸ ಮಂತ್ರಿಯೇ. ಒಂದನೆಯದಾಗಿ ಸಿದ್ಧರಸ ಮತ್ತು ಬಲದೇವರಸರು ಕಳಚೂರ್ಯರ ಆಳ್ವಿಕೆಯಲ್ಲಿ ಬೇರೆ ಬೇರೆ ಮಂತ್ರಿಗಳಾಗಿದ್ದರೂ ಅವರು ಬೇರೆ–ಬೇರೆ. ಮನೆಗಳಲ್ಲಿ ಇರುತ್ತಿರಲಿಲ್ಲ. ಇಬ್ಬರ ಆಸ್ಥೆ ಅಖಂಡವಾಗಿದ್ದಿತು. ಈಗ ನೀಲಾಂಬಿಕೆಗೆ ಬೇರೆ ಗಂಡನ್ನು ನೋಡಿದರೆ ಆ ಅಖಂಡ ಆಸ್ತಿಯನ್ನು ತುಂಡು ಮಾಡಬೇಕಾಗುತ್ತದೆ. ಎರಡನೆಯದಾಗಿ ಗಂಗಾಂಬಿಕೆ–ನೀಲಾಂಬಿಕೆಯರು ಒಂದೇ ತಾಯಿಯ ತೊಡೆಯ ಮೇಲೆ ಬೆಳೆದವರಾದುದರಿಂದ ಪದ್ಮಮ್ಮಳ ಮಾತೃಹೃದಯದಲ್ಲಿ ಕಿಂಚಿತ್ತು ಊನ ಉಂಟಾಗಿರಲಿಲ್ಲ. ತಂಗಿಯ ಮಗಳೆಂಬ ಕಲ್ಪನೆ ಬಾರದ ರೀತಿಯಲ್ಲಿ ಮಾತೃಪ್ರೇಮವನ್ನು ಇಬ್ಬರಿಗೂ ಸಮಾನವಾಗಿ ಉಣಿಸಿದ್ದಳು. ಬೇರೆ ಅಳಿಯ ದೊರೆತರೆ ಅದು ನಿಷ್ಕಲ್ಮಶ ಉಳಿಯುವುದು ಸಾಧ್ಯವೇನು? ಮೊದಲನೆಯದಾಗಿ ತಮ್ಮ ಅಳಿಯ ಬಸವರಾಜನ ಮಾನವೀಯ ಮೌಲ್ಯಗಳಿಗೆ ತ್ಯಾಗ ಸಮರ್ಪಣೆ ಭಾವನೆಗಳಿಗೆ ಮಾರುಹೋದ ಸಿದ್ಧರಸ ಮತ್ತು ಬಲದೇವರಸ ಮಂತ್ರಿಗಳು ತಾವು ಜೀವಂತವಾಗಿರು ವಾಗ ನೀಲಾಂಬಿಕೆಯನ್ನು ಬಸವರಾಜನ ಕೊರಳಿಗೆ ಕಟ್ಟುವ ಆಪ್ತಾಲೋಚನೆಗಳನ್ನು ಹಲವು ಸಾರಿ ಮಾಡಿಕೊಂಡಿದ್ದರು. ಈ ವಿಷಯ ಬಿಜ್ಜಳ ಮಹಾರಾಜನಿಗೆ ಚೆನ್ನಾಗಿ ತಿಳಿದಿತ್ತು."[೧೭]

ಇವರ ಅಭಿಪ್ರಾಯದಂತೆ ನೀಲಾಂಬಿಕೆಯ ವಿವಾಹಕ್ಕೆ ಈಕೆಯ ಕುಟುಂಬದಲ್ಲಿ ಬಸವಣ್ಣನಿಗೆ ಧಾರೆಯರೆಯುವುದನ್ನು ತಿಳಿದುಕೊಂಡಿದ್ದ. ಜೊತೆಗೆ ಲೇಖಕರು ಮುಂದುವರೆದು ಇವರಿಬ್ಬರೂ ಅಗಲುವಿಕೆಯ ಲಕ್ಷಣವಿರಲಿಲ್ಲ ಎಂಬುದಾಗಿದ್ದು ಕಂಡುಕೊಂಡ. "ಬಿಜ್ಜಳ ತನ್ನ ರಾಜ್ಯಾಧಿಕಾರವನ್ನು ಉಪಯೋಗಿಸಿ ತನ್ನ 'ತಂಗಿ'ಯ ವಿವಾಹವನ್ನು ಬಸವಣ್ಣನೊಂದಿಗೆ ಮುಗಿಸಿರಬೇಕು."[೧೮] ಇವರ ಹೇಳಿಕೆಯಂತೆ ನೀಲಾಂಬಿಕೆ–ಗಂಗಾಂಬಿಕೆಯ ಕುಟುಂಬ ನಿರ್ಣಯ ಜೊತೆಗೆ ರಾಜನ ತಿರ್ಮಾನವೂ ಆಗಿತ್ತು ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ. ಹಾಗಾಗಿ ಇವರೆಲ್ಲರ ಒತ್ತಾಯದ ಮೇಲೆ ಬಸವಣ್ಣ ಮದುವೆಯಾದನು ಎಂದು ಲೇಖಕರ ಅಭಿಪ್ರಾಯವಾಗಿದೆ. ಆದರೆ ಊಸವಣ್ಣ ಎಲ್ಲ ದೃಷ್ಟಿಯಿಂದ ಆಲೋಚಿಸಿ ಹೇಳಿರಬೇಕು ಎನಿಸುತ್ತದೆ. ಜೊತೆಗೆ ನೀಲಾಂಬಿಕೆ ಹೆಸರನ್ನು ತನ್ನ ವಚನದಲ್ಲಿ ಬಳಸಿದ್ದರಿಂದ ಮತ್ತು ನೀಲಾಂಬಿಕೆ ನಾನು ನಿನಗೆ ವಿಚಾರ ಪತ್ನಿಯಾದೆನಯ್ಯ ಎಂದಿದ್ದರಿಂದ ತೋರಿಕೆಯ ಜೀವನಕ್ಕೆ ಸತಿಪತಿಗಳಾಗಿದ್ದಿರಬಹುದು.

ಬಸವಣ್ಣ ಒತ್ತಡಕ್ಕೆ ಮಣಿದು ಎರಡನೆ ಮದುವೆಗೆ ಒಪ್ಪಿದ ಎಂದು ಡಾ.ಎಚ್. ತಿಪ್ಪೇರುದ್ರಸ್ವಾಮಿ ಅವರು ಬಸವಣ್ಣನವರ ಐತಿಹಾಸಿಕತೆ ಎಂಬ ಲೇಖನದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ.

"ಬಿಜ್ಜಳನ ಪ್ರೇಮಪೂರ್ವಕವಾದ ಒತ್ತಾಯ ಒಂದು ಕಡೆ. ಇನ್ನೊಂದು ಕಡೆ ನೀಲಾಂಬಿಕೆಯ ವ್ಯಕ್ತಿತ್ವ ಮತ್ತು ಶರಣ ಮನೋಧರ್ಮವೂ ಗಂಗಾಂಬಿಕೆಯ ಹೃದಯದ ಔದಾರ್ಯವೂ ಸೇರಿ ಬಸವಣ್ಣನವರು ಈ ಇನ್ನೊಂದು ಮದುವೆಗೆ ಒಪ್ಪಿಗೆಯನ್ನೀಯುವಂತೆ ಮಾಡಿರಬೇಕು."[೧೯]

ಬಸವಣ್ಣ ಎರಡನೆಯ ಮದುವೆಯ ವಿಚಾರದಲ್ಲಿ ನಿರಪರಾಧಿಯಾಗಿದ್ದಾನೆ. ಏಕೆಂದರೆ ಈ ಎಲ್ಲರ ಒತ್ತಡಕ್ಕೆ ಮಣಿದ ಬಸವಣ್ಣ ಪ್ರಶ್ನಿಸಲಿಲ್ಲವೆ? ಪ್ರಶ್ನಿಸಿದ್ದರೆ ತನ್ನ ವಚನಗಳಲ್ಲಿ ವ್ಯಕ್ತವಾಗುತ್ತಿತ್ತು. ಕೇವಲ ಸ್ತ್ರೀ ಪರವಾದ ವಿಚಾರ ಮಾಡಿದ ಈತನಿಗೆ ಅಗ್ನಿ ಪರೀಕ್ಷೆಯೂ ಆಗಿರಬಹುದು. ಆದರೆ ಒಬ್ಬರಿಗೆ ಒಳ್ಳೆಯದು ಆಗುತ್ತದೆಂದರೆ ಸದಾ ಸಿದ್ಧನಾಗಿರವಂತೆ ತೋರುತ್ತದೆ. ಆದರೆ ಎಲ್ಲ ವಿಷಯದಲ್ಲಿ ಅಲ್ಲ. ಈಕೆಯ ವಿಚಾರವಾಗಿ ತನ್ನ ಮನಸ್ಸನ್ನು ಧಾರೆಯರೆದಿದ್ದಾನೆ. ಏಕೆಂದರೆ ನೀಲಾಂಬಿಕೆ ತನ್ನ ಪ್ರತಿ ವಚನದಲ್ಲಿ ಬಸವನ ಸ್ಮರಣೆ, ಬಸವನ ನೆನಪು, ರೂಪ ಅವಳಲ್ಲಿ ಕಂಡದ್ದು ಬಸವಣ್ಣನ ವ್ಯಕ್ತಿತ್ವದ ರಾಶಿ ರಾಶಿ ಮಾತುಗಳಂತೆ ಕಾಣಬಹುದಾಗಿದೆ. ಎಂದರೆ ಈತನ ಬಗೆಗೆ ಇರುವ ಅಭಿಮಾನವೂ ಮದುವೆಗೆ ಕಾರಣವಾಗಿರಬಹುದು.

ಮದುವೆ ಎಂಬುದು ಕೇವಲ ಶರೀರ ಸಂಬಂಧವಲ್ಲವೆಂಬುದನ್ನು ಡಾ.ಗಂಗಮ್ಮ ಸತ್ಯಂ ಪೇಟೆಯವರು ಸೂಕ್ಷ್ಮ ರೀತಿಯಿಂದ ಇವರಿಬ್ಬರನ್ನು ನೋಡಬೇಕು ಎಂದು ಹೇಳುತ್ತಾ ಈ ಅಬಿಪ್ರಾಯ ವ್ಯಕ್ತಪಡಿಸುತ್ತಾರೆ.

"ಮದುವೆ ಎಂಬುದು ಕೇವಲ ಯಾವುದೋ ಗಂಡು ಹೆಣ್ಣುಗಳೆರಡರ ಸಮ್ಮಿಲನವಲ್ಲ ಮದುವೆಯೆಂಬುದು ಆ ವ್ಯಕ್ತಿಗಳಿಬ್ಬರ ಅತ್ಯಂತ ಖಾಸಗಿಯಾದ ಒಂದು ಅನುಬಂಧ ತೀರ ವೈಯಕ್ತಿಕವಾದ ನೆಲೆಯಲ್ಲಿ ಘಟಿಸಬಹುದಾದ ಈ ಸಂಬಂಧಕ್ಕೆ ಮದುವೆಯೆಂಬ ಮೂರಕ್ಷರದ ಸಾರ್ವಜನಿಕ ಮುದ್ರೆ ಬೀಳುತ್ತದಷ್ಟೆ, ಇದರಲ್ಲಿ ಸಾರ್ವಜನಿಕರ ಒಪ್ಪಿಗೆಯ ಮುದ್ರೆಗಿಂತ ವೈಯಕ್ತಿಕದ ಪರಸ್ಪರ ಅವಲೋಕನ ಕ್ರಿಯೆ ತುಂಬಾ ಮುಖ್ಯವಾದುದು"[೨೦] ಎಂದು ಹೇಳುತ್ತಾರೆ. ಆದರೆ ಇಬ್ಬರ ಸಂಬಂಧವನ್ನು ಗಟ್ಟಿಗೊಳಿಸುವ ಮನಸ್ಸು ಬಹಳ ಮುಖ್ಯ ಎಂಬುದನ್ನು ತಿಳಿಸುತ್ತಾರೆ. ಮೇಲಾಗಿ ನೀಲಾಂಬಿಕೆಯ ನಿಶ್ಚಲವಾದ ಮನಸ್ಸು ಇಡೀ ಕುಟುಂಬಕ್ಕೆ ಪ್ರೇರಣೆಯಾಗಿದೆ. ಹೀಗಾಗಿ ಬಸವಣ್ಣ ಈ ಎರಡನೆ ವಿವಾಹಕ್ಕೆ ಒಪ್ಪಿದ್ದಾರೆ ಎಂದು ಹೇಳಬಹುದು. ಇಂತಹ ಒತ್ತಾಯದ ಪ್ರಸಂಗಕ್ಕೆ ಒಳಗಾದ ಬಸವಣ್ಣ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ ಎನ್ನಬಹುದು.

"ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು
ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು
ಸತಿ ಪತಿರತಿ ಸುಖವ ಬಿಟ್ಟರೆ ಸಿರಿಯಾಳಚಂಗಳೆಯವರು
..............................................................
............................................................
.........................................................
ನಿಮ್ಮ ಮುಟ್ಟಿ ಪರಧನಪರಸತಿಯರಿಗೆಳಸಿದಡೆ
ನಿಮ್ಮಾಚಾರಕ್ಕೆ ದೂರ, ಕೂಡಲಸಂಗಮದೇವಾ"[೨೧]

ಮನಸ್ಸಿನ ವಿಕಾರ ಗುಣಗಳನ್ನು ನಿಗ್ರಹ ಮಾಡದಡೆ ಮನದ ಆಸೆಗಳು ಹೆಚ್ಚುತ್ತವೆ. ಹಾಗೆಯೇ ಮುಂದೆ ಒಂದು ಆ ರೂಪದಲ್ಲಿ ಪಂಚೇಂದ್ರಿಯಗಳು ನಿಲ್ಲುತ್ತವೆ. ಹಾಗಾಗಿ ನಾನು ಸಹಿತ ಸಂಸಾರಕ್ಕೆ ಬಂಧಿತನಾಗಿ ಬದುಕು ಸಾಗಿಸುತ್ತಿದ್ದೇನೆ. ಆದರೆ ಶರಣರ ಮಾರ್ಗದಲ್ಲಿ ನಡೆಯುವ ಜೀವಿಯು ಎಂದು ಹೇಳುತ್ತಾ ಸಹಜವಾದದ್ದು ಶರೀರ ಸಂಬಂಧ, ಈ ರೀತಿ ಸಿರಿಯಾಳ ಚಂಗಳೆಯವರು ಬದುಕಿ ಬಾಳಿದ್ದಾರೆ. ಆ ನಿಟ್ಟಿನಲ್ಲಿ ನಾನು ನಡೆಯುವೆ, ಆದರೆ ಪರಧನ, ಪರಸತಿ ಯರಿಗೆಳಸಿದಡೆ ನಿಮ್ಮಾಚಾರಕ್ಕೆ ಬರಲು ನನಗೆ ಹಕ್ಕು ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ನಾನು ಕೂಡ ಒಬ್ಬ ಸಹಜ ವ್ಯಕ್ತಿ ಎಂಬ ರೀತಿಯಲ್ಲಿ ವ್ಯಕ್ತ ಪಡಿಸಿದಂತಿದೆ.

ಬಸವಣ್ಣ ಮತ್ತು ಪತ್ನಿಯರ ಸಂಬಂಧ ಲೌಕಿಕಕ್ಕಿಂತಲೂ ಅಲೌಕಿಕ ಸಂಬಂಧ ಹೆಚ್ಚು ಎಂಬಂತೆ ಕಾಣುತ್ತದೆ. ಈ ಮೂವರ ವಚನಗಳಲ್ಲಿ ತಮ್ಮ ವೈಯಕ್ತಿಕ ಜೀವನಕ್ಕಿಂತಲೂ

ಇನ್ನೊಬ್ಬರ ಒಳತಿಗಾಗಿ ಹೇಳಿದ್ದಿರಬಹುದು ಎಂದು ಭಾಸವಾಗುತ್ತದೆ. ಅದರಂತೆ ಬಸವಣ್ಣನವರು ಸಾಂಸಾರಿಕ ಬದುಕನ್ನು ಕುರಿತು "ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ..."[೨೨] ಬಸವಣ್ಣನವರು ಸಮಾಜ ಸುಖವಾಗಿರ ಬೇಕಾದರೆ ಸಂಸಾರಜೀವನ ಸರಿಯಾಗಿರಬೇಕು ಎಂದು ಹೇಳುವ ರೀತಿಯನ್ನು ಅವರ ವಚನ ತಿಳಿಸುತ್ತದೆ. ಅಲ್ಲದೆ ಸಂಸಾರದ ಬಲೆಯಲ್ಲಿ ಸಿಲುಕಿದ ಮೇಲೆ ಅದರಲ್ಲಿಯೇ ತೃಪ್ತಿ ಕಾಣುವ ನಿಲುವಿಗೆ ಮುಂದಾಗಬೇಕು. ಆದರೆ ಬಸವಣ್ಣ ತನ್ನ ಸಂಸಾರಿಕ (ಕುಟುಂಬ)ಅಥವಾ ಶರಣಧರ್ಮದ ಸಂಸಾರದ ಕಾರ್ಯದಲ್ಲಿ ಮಗ್ನನಾದ ಬಸವಣ್ಣ ಮನ ನೊಂದು ಹೇಳಿದಂತೆ ತೋರುತ್ತದೆ. ಆದರೆ ಈ ಸಂಸಾರದಲ್ಲಿ ಹುರುಳಿಲ್ಲ ಎಂದು ಹೇಳಿರು ವುದರಿಂದ ಲೌಕಿಕ ಸಂಸಾರಕ್ಕೆ ಹೇಳಿದರೋ ಅಥವಾ ಪಾರಮಾರ್ಥಿಕ ಸಂಸಾರಕ್ಕೆ ಹೇಳಿದರೋ ಎಂಬುದು ಇಲ್ಲಿ ಮುಖ್ಯವಾಗಿದೆ. ಆದರೆ ಲೌಕಿಕ ಸಂಸಾರವೇ ಇವರಿಗೆ ಬೇಸರ ತಂದಿರಬೇಕು. ಹಾಗಾಗಿ ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದು ಕಾಣಬಹುದಾಗಿದೆ.

"ಸಂಸಾರ ಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆಯುತ್ತಲಿದೆ
.......................................
ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ!
ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ
ಕೂಡಲ ಸಂಗಮದೇವಾ ನಾನೇವೆನೇವೆನಯ್ಯಾ"[೨೩]

ಬಸವಣ್ಣನವರು ಸಂಸಾರ ಸಾಗರವಿದ್ದಂತೆ. ಇಲ್ಲಿ ಕಷ್ಟಗಳು ತೆರೆಗಳಂತೆ ಬರುತ್ತವೆ. ಆ ಕಷ್ಟವನ್ನು ಭಗವಂತನಿಗೆ ಅರ್ಪಿಸುವಂತಹ ಮನೋಭಾವ ಕಂಡುಬರುತ್ತದೆ. ಮನಸ್ಸಿನ ಚಂಚಲತೆಗೆ ಸಂಸಾರವು ಕಾರಣವಾಗಿದೆ ಎಂಬ ರೀತಿಯಲ್ಲಿ ಈ ವಚನ ಗೋಚರಿಸುತ್ತದೆ. ಆದರೆ ತಮ್ಮ ಕುಟುಂಬದಲ್ಲಿ ಒಡಕಾದ ಸ್ಥಿತಿಯನ್ನು ಹೇಳಿದ್ದು ಇರಬಹುದು. ಆದರೆ ಗಂಗಾಂಬಿಕೆ-ನೀಲಾಂಬಿಕೆಯರ ವಚನಗಳಲ್ಲಿ ಬಸವಣ್ಣನನ್ನು ಮಾದರಿಯನ್ನಾಗಿ ಇಟ್ಟುಕೊಂಡದ್ದು ಬಹುಸಂಖ್ಯೆ ಯಲ್ಲಿ ಕಾಣುವುದರಿಂದ ಈ ಮೂವರ ಸಾಂಸಾರಿಕ ಜೀವನವು ಸರಿಯಾಗಿತ್ತು ಎಂದು ಭಾವಿಸಬಹುದು.

ಗಂಗಾಂಬಿಕೆ-ನೀಲಾಂಬಿಕೆ ಹಾಗೂ ಬಸವಣ್ಣನವರ ಜೀವನದಲ್ಲಿ ಅನನ್ಯತೆ ಒಳಗೊಂಡಿದ್ದು ಹಾಗೂ ಈ ಮೂವರಲ್ಲಿ ಸಮರಸ ಜೀವನದಿಂದ ಇವರ ಮನೆ ಮಹಾಮನೆಯಾಗಿದೆ. ಎನ್ನಬಹುದು. ಅಷ್ಟೇ ಅಲ್ಲ ಬಸವಣ್ಣನಿಗೆ ಇವರಿಬ್ಬರೂ ಆತನ ಕಾಯಕದಲ್ಲಿ ಉತ್ಸಾಹ ತುಂಬಿ ಪಾರದರ್ಶಕವಾದ ಕಾರ್ಯಕ್ಕೆ ಮುಂದಾದವರು ಹಾಗೆಯೇ ಗಂಗಾಂಬಿಕೆ-ನೀಲಾಂಬಿಕೆಯರಲ್ಲಿ

ಸಹೋದರಿ ಗುಣವಿತ್ತೇ ಹೊರತು ಸವತಿಮತ್ಸರ ಭಾವನೆ ಇಲ್ಲ ಎಂಬುದು ಈ ಹೇಳಿಕೆಯಿಂದ ತಿಳಿಯಬಹುದು. ಗಂಗಾಂಬಿಕೆ-ನೀಲಾಂಬಿಕೆಯರು ತಮ್ಮ ಬದುಕನ್ನು ಸಮಾಜ ಹಿತಕ್ಕಾಗಿ ಅಪೇಕ್ಷಿಸಿದರು ಹಾಗೆಯೇ ಬಸವಣ್ಣನೊಂದಿಗೆ ಆತ್ಮೀಯತೆಯಿಂದ ಜೀವಿಸಿ ಆತನ ಪ್ರಗತಿಗೆ ಪ್ರೇರಕರಾಗಿ ಬಾಳಿದ ಶರಣ ದಂಪತಿಗಳಾಗಿದ್ದಾರೆ. ನಿಜಕ್ಕೂ ಈ ಇಬ್ಬರಲ್ಲಿ ಬಸವಣ್ಣನ ಸುಖ ಸಂತೋಷ ನಮ್ಮದಾಗಿದೆ ಎಂಬ ಬಾಂದವ್ಯ ಒಡಮೂಡಿತ್ತು ಎಂಬುದನ್ನು ಕಾಣಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ಸತಿ-ಪತಿಗಳಲ್ಲಿ ವಿರಸ ಇದ್ದಿರಬಹುದು. ಆದರೆ ಸಮನ್ವಯತೆಯ ಬದುಕನ್ನು ಕಾಣಲು ಹೊರಟ ಬಸವಣ್ಣ ತನ್ನ ಬದುಕಿನಲ್ಲಿ ಮಾದರಿಯಾಗುವಂತಹ ಕಾರ್ಯಕ್ಕೆ ಮುಂದ್ರಾಗಿರಬಹುದು. ಆತನ ಪತ್ನಿಯರೂ ಆತನ ಆದರ್ಶ ಬದುಕಿಗೆ ಸಾಕ್ಷೀ ಭೂತರಾಗಿದ್ದಾರೆ. ಕೇವಲ ದೈಹಿಕ ಸಂಬಂಧ ಮುಖ್ಯವಲ್ಲ ಪರಸ್ಪರವಾಗಿ ಅರಿತು ಬದುಕುವಂತಹ ಮನೋಭಾವವನ್ನು ಈತನ ಪತ್ನಿಯರಲ್ಲಿ ಕಾಣಬಹುದು. ಬಸವಣ್ಣನ ಬದುಕಿನ ಹಲವು ನೋವುಗಳಿಗೆ ಸ್ಪಂದಿಸಿ, ಆತನ ಬಾಳಿಗೆ ಬೆಳಕು ಚೆಲ್ಲುವಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರ ಪಾತ್ರ ಬಹಳಷ್ಟಿದೆ. ಅನುಭವ ಪೂರ್ಣವಾದ ಆಚಾರ-ವಿಚಾರಗಳನ್ನು ಅರಿತು ಪ್ರತಿಯೊಂದು ಕಾರ್ಯಕ್ಕೂ ಪ್ರೇರಕಶಕ್ತಿಯಾಗಿ ಬಸವಣ್ಣನವರ ಎಲ್ಲಾ ಕಾರ್ಯಸಾಧನೆಯಲ್ಲಿ ನಿಂತು ಗಂಧದ ಕೊರಡಿನಂತೆ ಸವೆದವರಾಗಿದ್ದಾರೆ. ಹಿರಿಯರ ಪತ್ನಿಗಂಗಾಂಬಿಕೆ ಸರಳ ವ್ಯಕ್ತಿತ್ವ, ಜೊತೆಗೆ ಪತಿನಿಷ್ಠೆಯಿಂದ ಕೂಡಿದವಳು ಆಗಿದ್ದಾಳೆ. ಈಕೆಯ ಸಮ್ಮತಿಯ ಮೇರೆಗೆ ನೀಲಾಂಬಿಕೆ ವಿವಾಹ ಜರುಗಿತ್ತು ಎಂದು ಈ ಅಧ್ಯಯನದಿಂದ ತಿಳಿಯುವುದಲ್ಲದೆ ಇಡೀ ಕುಟುಂಬ ಮತ್ತು ಬಿಜ್ಜಳನ ಸಮ್ಮತಿ ಮತ್ತು ಒತ್ತಾಯದಿಂದ ಎರಡನೇ ಮದುವೆ ನಡೆಯಿತು ಎಂಬುದನ್ನು ತಿಳಿಯಬಹುದಾಗಿದೆ. ಹಾಗೇ ಬಸವಣ್ಣನೊಂದಿಗೆ ಇವರ ಬಾಂಧವ್ಯ ಆತ್ಮೋನ್ನತಿಯನ್ನು ಪಡೆಯುವ ಭಾವನಾತ್ಮಕ ಸಂಬಂಧವಾಗಿದೆ ಎಂದು ಹೇಳುವ ಸಾಧ್ಯತೆ ಇದೆ. ಅಲ್ಲದೆ ನೀಲಾಂಬಿಕೆಯ ಸಹಿತ ಬಸವಣ್ಣನ ವ್ಯಕ್ತಿತ್ವವನ್ನು ಹೇಳುವಂತದ್ದು ಭಾವನಾತ್ಮಕ ಸಂಬಂಧವನ್ನು ತೋರಿಸುತ್ತದೆ.

ಬಸವಣ್ಣನ ಸಾಧನೆಯ ಹಾದಿಯನ್ನು ಅರ್ಥವನ್ನು ಹಾಗೂ ಸಮರ್ಪಕವಾದ ಕಾರ್ಯ ವೈಖರಿಯನ್ನು ಅವರು ಅರಿತಿದ್ದರು. ಹಾಗಾಗಿ ಗಂಗಮ್ಮ ಸತ್ಯಂಪೇಟೆ ಅಭಿಪ್ರಾಯಪಡುವಂತೆ "ಗಂಗಾಂಬಿಕೆ-ನೀಲಾಂಬಿಕೆಯರು ಮೇಲುನೋಟಕ್ಕೆ ಬೇರೆ ಬೇರೆ ಆಗಿ ಕಾಣಿಸಿದರೂ ಒಂದೇ ಆತ್ಮವೇ ಕುಡಿಯೊಡೆದ ಬಳ್ಳಿಯಾಗಿ ಬಸವಣ್ಣನವರನ್ನು ಸುತ್ತಿದರು. ಒಬ್ಬಳು ಅವರ ಧರಗುಟ್ಟುವ ಶಿರೋಭೂಷಣಕ್ಕೆ ಒಪ್ಪುವ ವಜ್ರದ ಹರಳಾದರೆ, ಇನ್ನೊಬ್ಬಳು ಅವರ ಲಿಂಗಪ್ರಜೆಯ ಹರಳಾದಳು. ಅವರಿಗೆ ಒಬ್ಬಳು ಅವರ ಕನಸಾದರೆ, ಇನ್ನೊಬ್ಬಳು ನನಸಾದಳು. ಒಬ್ಬಳು ಅವರ ಹೃದಯವಾದರೆ ಇನ್ನೊಬ್ಬಳು ಅವರ ಆತ್ಮವಾದಳು. ಒಬ್ಬಳು ಅವರ ಪತ್ನಿಯಾದರೆ ಇನ್ನೊಬ್ಬಳು ಆಚಾರ ಪತ್ನಿಯಾದಳು. ಆಗ ಬಸವಣ್ಣನವರ ವೈಯಕ್ತಿಕ ಬದುಕಿನ ಭಕ್ತಿ ರುಮದಲ್ಲಿ ಹೊಸದೊಂದು ಬಗೆಯ ಬೀಜವಂಕುರಿಸಿತು"[೨೪]

ಇವರ ಅಭಿಪ್ರಾಯದಂತೆ ಇವರಿಬ್ಬರೂ ಬಸವಣ್ಣನ ಬಾಳಿನಲ್ಲಿ ಸ್ತುತ್ಯಕಾರ್ಯವನ್ನು ನಿರ್ವಹಿಸಿದ್ದು ಕಾಣಬಹುದು. ಕೇವಲ ದೈಹಿಕ ಕಾಮನೆಗಳು ಇವರಲ್ಲಿ ದೂರವಾಗಿ ತಾವು ಕೈಹಿಡಿದ ಪತಿಯೊಂದಿಗೆ ಧರ್ಮದ ಚಿಂತನೆ ಹಾಗೂ ಸಾರ್ವತ್ರಿಕವಾದ ಸುಸಮಾಜವನ್ನು ಹಾಗೂ ಆದರ್ಶಪೂರ್ಣವಾದ ಆಚಾರ-ವಿಚಾರಗಳಿಂದ ಸಮತಾಭಾವದ ಧರ್ಮವನ್ನು ಕಟ್ಟುವ ಕಾರ್ಯಕ್ಕೆ ಮುಂದಾದ ಬಸವಣ್ಣನಿಗೆ ಪ್ರೇರಕಶಕ್ತಿಯಾಗಿದ್ದರು ಎಂದು ತೋರುತ್ತದೆ. ಹಾಗೆಯೇ ಬಸವಣ್ಣ ತನ್ನ ವಚನದಲ್ಲಿ ತನ್ನ ಪತ್ನಿಗೆ 'ಎನ್ನ ಒಡೆಯನ ಕೈನೊಂದಿತ್ತು ಕಿತ್ತುಕೊಡು ಎಲೆ ಚಾಂಡಾಲಗಿತ್ತಿ' ಎಂಬ ಮಾತನ್ನು ಹೇಳಿದ್ದು, ಆಭರಣದ ವ್ಯಾಮೋಹ ಕಳೆಯಲಿಕ್ಕೆ ಹೊರತು ಅನ್ಯತಾ ಅವಲ್ಲ ಎಂಬುದು ತಿಳಿಯುತ್ತದೆ. ಈ ಮೂವರು ಸಮಾಜದ ಪಕ್ವತೆಗೆ ದುಡಿದವರು. ಅಲ್ಲದೆ ಶರಣ ಸಂಸ್ಕೃತಿಯ ಉಳಿವಿಗೆ ತಮ್ಮ ವೈಯಕ್ತಿಕ ಬದುಕನ್ನು ಲಕ್ಷಿಸದೆ ಬಾಳಿದವರು ಇವರಾಗಿದ್ದಾರೆ ಎನ್ನಬಹುದು.

**ಅಡಿಟಿಪ್ಪಣಿಗಳು**

೧. ವೀರಣ್ಣ ರಾಜೂರು(ಸಂ), **ಶಿವಶರಣೆಯರ ವಚನ ಸಂಪುಟ,** ಪು.೨೧೮

೨. ಅದೇ ಪು.೨೧೮

೩. ಎಂ.ಟಿ. ವಿಶ್ವನಾಥಯ್ಯ, **ಶರಣ ದಂಪತಿಗಳು ಮತ್ತು ವಿರಾಗಿಣಿಯರು,** ಪು.೨೬

೪. ವೀರಣ್ಣ ರಾಜೂರ(ಸಂ), **ಶಿವಶರಣೆಯರ ವಚನ ಸಂಪುಟ,** ಪು.೨೧೮

೫. ಅದೇ, ಪು.೨೧೯

೬. ಅದೇ, ಪು.೨೨೦

೭. ಅದೇ, ಪು.೨೬೬. ವ.ಸಂ.೮೪೪

೮. ಅದೇ, ಪು.೨೬೮. ವ.ಸಂ. ೮೪೪

೯. ಅದೇ, ಪು.೨೮೪. ವ.ಸಂ. ೯೨೦

೧೦. ಅದೇ, ಪು.೨೮೯. ವ.ಸಂ. ೯೪೨

೧೧. ಅದೇ, ಪು.೩೦೧, ಹಾಗೂ ೩೨೦, ವ.ಸಂ.೯೫-೧೦೮೫

೧೨. ಅದೇ, ಪು.೨೭೧, ವ.ಸಂ.೮೫೪

೧೩. ಅದೇ, ಪು.೨೭೬

೧೪. ಅದೇ, ಪು.೨೯೭ ಹಾಗೂ ೨೭೯ ವ.ಸಂ.೯೭೮-೮೯೪

೧೫. ಬಸಪ್ಪ ಶಂಕ್ರಪ್ಪನವರ, ವೀರಮಹಾಮಾತೆ ಅಕ್ಕನಾಗಮ್ಮನವರು ಬಸವಪಥ, ೧೯೯೮, ಸಂಪುಟ ೩೦, ಸಂಚಿಕೆ ೫, ಅಗಸ್ಟ್ ೨, ಪು.೭

೧೬. ಅದೇ, ಪು.೭

೧೭. ಬಿ.ಮಹಾದೇವಪ್ಪ, ಬಸವಣ್ಣನವರ ದ್ವಯ ವಿವಾಹಕ್ಕೆ ಬಿಜ್ಜಳನ ಸ್ವಯ ನಿರ್ವಾಹವೇ ಕಾರಣ, ಪು.೬೮

೧೮. ಅದೇ, ಪು.೬೯

೧೯. ಹಾ.ಮಾ.ನಾಯಕ, ಬಸವ ಪರುಷ, ಪು.೧೧೯

೨೦. ಗಂಗಮ್ಮ ಸತ್ಯಂಪೇಟೆ, ಮಹಾಮನೆಯ ಮಹಾತಾಯಿ, ಪು.೧೬

೨೧. ಎಂ.ಎಂ. ಕಲುಬುರ್ಗಿ, ಬಸವಣ್ಣನವರ ವಚನಸಂಪುಟ, ಪು.೧೬೦. ವಚನ ಸಂ.೬೩೯

೨೨. ಆರ್.ಸಿ.ಹಿರೇಮಠ(ಸಂ), ಶಿವದೀಪ್ತಿ, ಪು.೧೩೮

೨೩. ಎಂ.ಟಿ.ವಿಶ್ವನಾಥಯ್ಯ, ಶರಣ ದಂಪತಿಗಳು ಮತ್ತು ವಿರಾಗಿಣಿಯರು, ಪು.೨೬

೨೪. ಗಂಗಮ್ಮ ಸತ್ಯಂಪೇಟೆ, ಮಹಾಮನೆಯ ಮಹಾತಾಯಿ, ಪು.೨೨

# ಅಧ್ಯಾಯ ಎಂಟು

# ಸಮಾರೋಪ

ಅಧ್ಯಾಯ ಎಂಟು

# ಸಮಾರೋಪ

ಕರ್ನಾಟಕ ಇತಿಹಾಸದಲ್ಲಿ ಗುರುತಿಸಲೇಬೇಕಾದ ಘಟ್ಟ ೧೨ನೇ ಶತಮಾನ. ಮಾನವೀಯತೆ ಎಂಬುದಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಿದ ಕಾಲಘಟ್ಟವದು. ಆವರೆಗೆ ಭಾರತೀಯ ಸಂದರ್ಭದಲ್ಲಿ ಅಸ್ಪೃಶ್ಯತೆ ಎಂಬ ರೋಗ ಶ್ರೇಷ್ಠ ಕನಿಷ್ಠ ಅಥವಾ ಉಚ್ಚ–ನೀಚ, ಗಂಡು ಸಮರ್ಥ, ಹೆಣ್ಣು ಅಸಮರ್ಥ ಎಂಬ ಭೇದಭಾವಗಳು ಭಾರತೀಯ ಜನಮಾನಸದಲ್ಲಿ ಆಳವಾಗಿ ಬೇರೂರಿದ್ದವು. ಎಲ್ಲ ತರಾತಮಾ ಭಾವಗಳನ್ನು ವ್ಯವಸ್ಥಿತವಾಗಿ ಸಮಾಜದಲ್ಲಿ ನೆಲೆಗೊಳ್ಳುವಂತೆ ಮಾಡುವಲ್ಲಿ ಪುರೋಹಿತ ವರ್ಗ ಯಶಸ್ವಿಯಾಗಿತ್ತು. ಬ್ರಾಹ್ಮಣ ಶ್ರೇಷ್ಠ ಉಳಿದವರು ಕನಿಷ್ಠ ಎಂಬ ಭಾವನೆಯನ್ನು ಮಾನವ ಕುಲವನ್ನೆ ಒಡೆದಾಳುವ ನೀತಿಯನ್ನು ಮನು ಎಂಬ ಋಷಿ ತುಂಬ ವ್ಯವಸ್ಥಿತವಾಗಿಯೇ ರೂಪಿಸಿದ್ದ. ಈತ ರೂಪಿಸಿದ ಸಿದ್ಧಾಂತವನ್ನು ಸ್ಮೃತಿಯೆಂದು ಕರೆಯಲಾಗಿದೆ. ಈ ಸ್ಮೃತಿಯನ್ನೆ ರಾಜ್ಯಭಾರ ಮಾಡುವ ರಾಜರು ಇದನ್ನು ರಾಜ್ಯದ ಕಾನೂನು ಎಂಬಂತೆ ಜಾರಿಗೊಳಿಸಿ, ಆಡಳಿತ ನಡೆಸಿದ್ದನ್ನು ನಾವು ಕಾಣಬಹುದು. ಈ ತರಾತಮ ಭಾವನೆಯನ್ನು ಮೊದಲಿಗೆ ಪ್ರಶ್ನಿಸಿದವರು ಬಸವಾದಿ ಶಿವಶರಣರು.

ಬಸವಾದಿ ಶಿವಶರಣರು ಸಮಾಜದಲ್ಲಿ ನೆಲೆಯುರಿದ್ದ ಮೌಢ್ಯಗಳನ್ನು ದುಷ್ಟ ಆಚರಣೆಗಳನ್ನು ಭೇದ ನೀತಿಗಳನ್ನು ಅಳಿಸಿ ಹಾಕಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಚಳುವಳಿ ಪ್ರಾರಂಭಿಸಿದರು. ಈ ಚಳುವಳಿಯಲ್ಲಿ ಎಲ್ಲಾ ಸ್ತರದ ಜನರು, ಸ್ತ್ರೀಯರು, ದುರ್ಬಲರನ್ನು ಒಳಗೊಂಡ, ಶರಣ ಪಡೆ ಸಮಾಜವನ್ನು ಆರೋಗ್ಯಕರವಾಗಿ ರೂಪಿಸಲು ಪ್ರಯತ್ನಿಸಿತು. ಶೂದ್ರಳು, ಮಾರಿಯೂ ಆಗಿದ್ದ ಮಹಿಳೆ ಈ ಸಂದರ್ಭದಲ್ಲಿ ದೇವತೆಯಾಗಿ ಮಾರ್ಪಟ್ಟಂತೆ ಕಾಣಿಸುತ್ತದೆ. ಅಂತಹ ನೂರಾರು ಅಸಮರ್ಥ ಸ್ತ್ರೀಯರು ಅನುಭವ ಮಂಟಪವನ್ನು ಸರಿ ಸಶಕ್ತರಾಗಿದ್ದನ್ನು ವಚನಗಳು, ಕಾವ್ಯಕೃತಿಗಳಿಂದ ತಿಳಿಯಬಹುದಾಗಿದೆ. ಇಂತಹ ಧೋರಣೆಗಳನ್ನು ಹೊಂದಿ, ಮಹಿಳೆಯರಿಗೆ ಆತ್ಮವಿಶ್ವಾಸ ತುಂಬಿ ಅವರನ್ನು ಸಬಲರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದರು ಗಂಗಾಂಬಿಕೆ ನೀಲಾಂಬಿಕೆರೆಂದರೆ ಅತಿಶಯೋಕ್ತಿಯಾಗಲಾರದು.

ಬಸವಣ್ಣನವರಿಗೆ ಧರ್ಮಪತ್ನಿಯರಾಗಿ ಬಂದ ಮೇಲೆ ಬಸವಣ್ಣನ ಎಲ್ಲಾ ವಿಚಾರ ಧಾರೆಗಳಿಗೆ ಇವರುಗಳು ಸ್ಫೂರ್ತಿದಾಯಕರು ಆಗಿದ್ದರೆಂದು ಗ್ರಹಿಸಬಹುದಾಗಿದೆ. ಬಸವಣ್ಣನವರ ಸರ್ವಕೆಲಸಗಳಲ್ಲಿ ಸಮಭಾಗಿಯಾಗಿ ಹಾಗೂ ಪ್ರೇರಕ ಶಕ್ತಿಯಾಗಿ ನಿಂತು ಶರಣ ಸಂಕುಲವನ್ನು ಸನ್ಮಾರ್ಗದತ್ತ ಕೊಂಡೊಯ್ಯುವಲ್ಲಿ ಯಶಸ್ಸು ಸಾಧಿಸಿದರು. ಸ್ತ್ರೀ, ಮನುಕುಲದ ಉದ್ಧಾರಕ್ಕಾಗಿ ಹಗಲು ರಾತ್ರಿಯೆನ್ನದೇ ಅಹರ್ನಿಶ(ನಿರಂತರ) ದುಡಿದ ಇವರುಗಳನ್ನು ೧೨ನೇ ಶತಮಾನದ ಮಾನವತಾವಾದಿಗಳೆಂದು ಭಾವಿಸಿದರೆ ತಪ್ಪಾಗಲಾರದು. ಇವರಿಬ್ಬರ ವೈಯಕ್ತಿಕ ವಿಚಾರ ಗೊಂದಲವಾಗಿದ್ದರು ಅಂತಿಮವಾಗಿ ಅಕ್ಕ-ತಂಗಿಯರಾಗಿ ಆದರ್ಶ ಬದುಕನ್ನು ನಡೆಸಿದರೆಂದು ಸಾಹಿತ್ಯ ಕೃತಿಯಿಂದ ಅರ್ಥೈಸಿಕೊಳ್ಳಬಹುದು. ಬಸವಣ್ಣನ ಇಡೀ ವ್ಯಕ್ತಿತ್ವದಲ್ಲಿ ಇವರದು ಸಿಂಹಪಾಲು ಎನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗಂಗಾಂಬಿಕೆ, ನೀಲಾಂಬಿಕೆ ಬಸವಣ್ಣನಷ್ಟೇ ಎತ್ತರದ ವ್ಯಕ್ತಿತ್ವವನ್ನು ಹೊಂದಿದ್ದರೆಂದು ನಾವು ಅರ್ಥೈಸಿಕೊಂಡರೆ ತಪ್ಪಾಗಲಿಕ್ಕಿಲ್ಲ.

ಒಟ್ಟಿನಲ್ಲಿ ವಚನ ಚಳುವಳಿಯ ಅಧ್ವರ್ಯುವಾದ ಬಸವಣ್ಣನವರ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು ತಮ್ಮದೇ ಆದ ಸ್ಥಾನ ಪಡೆದುಕೊಳ್ಳುತ್ತಾರೆ. ಬಸವಣ್ಣನವರಿಗೆ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಸಹವರ್ತಿಗಳಾದ ಗಂಗಾಂಬಿಕೆ, ನೀಲಾಂಬಿಕೆಯರು ವಚನ ಚಳುವಳಿಗಾಗಿ ಜೀವತೆಯ್ದವರು. ಮನೆಯ ಒಳಗೂ, ಹೊರಗು ವಚನ ಚಳುವಳಿಯನ್ನು ಧ್ಯೇಯವಾಗಿಸಿ ದುಡಿದ ಇವರಿರ್ವರ ಬಗ್ಗೆ ಚರಿತ್ರೆಯಲ್ಲಿ ಸಿಗುವುದು ಅತ್ಯಲ್ಪ ವಿವರ. ಬಸವಣ್ಣನವರ ಬಗೆಗೆ ಇಷ್ಟೆಲ್ಲಾ ಮಾಹಿತಿ ಇರುವಲ್ಲಿಯೂ ಇವರಿರ್ವರ ಬಗ್ಗೆ ಯಾವುದೇ ಪ್ರಸ್ತಾಪ ದಾಖಲೆಗಳಿಲ್ಲದಿರುವುದು ಅತ್ಯಾಶ್ಚರ್ಯ. ಬಸವಣ್ಣನವರನ್ನು ಕುರಿತು ಬರೆದ ಸುದೀರ್ಘ ಕಾವ್ಯಗಳು ಒಂದು ಅಥವಾ ಎರಡು ವಾಕ್ಯಗಳಲ್ಲಿ ಇವರಿರ್ವರನ್ನು ಚಿತ್ರಿಸಿವೆ. ಇವರ ಕುರಿತು ಅತ್ಯಲ್ಪ ಮಾಹಿತಿ ಹಾಗೂ ಅಪೂರ್ಣ ಮಾಹಿತಿಯೇ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಗಂಗಾಂಬಿಕೆ, ನೀಲಾಂಬಿಕೆಯರ ಕುರಿತು ಸಮಗ್ರವಾಗಿ ವ್ಯಕ್ತಿಚಿತ್ರವನ್ನು ರೂಪಿಸುವುದು ಅಧ್ಯಯನದ ಪ್ರಮುಖ ಆದ್ಯತೆ. ದೊರೆತಿರುವ ಸಾಹಿತ್ಯಿಕ ದಾಖಲೆಗಳನ್ನು ಕಾವ್ಯ-ಪುರಾಣಗಳನ್ನು ಅಧ್ಯಯನಕ್ಕೆ ಒಳಪಡಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಚರಿತ್ರೆಯಲ್ಲಿ ದಾಖಲಾಗದ ಇವರಿಬ್ಬರನ್ನು ಸಮಗ್ರ ಚಿತ್ರಣದ ಮೂಲಕ ಚರಿತ್ರಾರ್ಹ ವ್ಯಕ್ತಿಗಳನ್ನಾಗಿ ಗ್ರಹಿಸಲಾಗಿದೆ.

* ಸಮಗ್ರ ಚಿತ್ರಣಕ್ಕಾಗಿ ಕಾವ್ಯಪುರಾಣಗಳನ್ನು, ಮೌಖಿಕ ಜಾನಪದ, ಆಕರಗಳನ್ನು ಹಾಗೂ ಅಧ್ಯಯನಕಾರರ ಅಭಿಪ್ರಾಯಗಳನ್ನು ಅನುಸರಿಸಿ ಕ್ರೋಢೀಕರಿಸಲಾಗಿದೆ.
* ಇಷ್ಟೇ ಅಲ್ಲದೇ ಸಮಕಾಲೀನ ಶರಣ-ಶರಣೆಯರ ವಚನಗಳನ್ನು ಹಾಗೂ ಗಂಗಾಂಬಿಕಾ ನೀಲಾಂಬಿಕೆಯರ ವಚನಗಳನ್ನು ಸಮರ್ಥನೆಗಾಗಿ ಬಳಸಿಕೊಳ್ಳಲಾಗಿದೆ.

* ಇತಿವೃತ್ತದಲ್ಲಿ ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಸಮಗ್ರ ಜೀವನ ವಿವರಗಳನ್ನು ಹುಟ್ಟಿನಿಂದ ಬಸವಣ್ಣನವರನ್ನು ಮದುವೆಯಾಗುವ ಘಟ್ಟ, ಬಸವಣ್ಣನವರನ್ನು ಮದುವೆಯಾದಾ.............. ಎಂಬ ಮೂರು ಘಟ್ಟಗಳಾಗಿ ವಿಭಾಗಿಸಿ ಸವಿವರವಾಗಿ ವಿವರಸಲಾಗಿದೆ.

* ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ವಚನಗಳ ವಿಶ್ಲೇಷಣೆಯ ಮೂಲಕ ಹಲವಾರು ಸೂಕ್ಷ್ಮ ಹಾಗೂ ಸ್ಥಲ ಅಂಶಗಳನ್ನು ಗುರುತಿಸಲಾಗಿದೆ. ಮೇಲ್ನೋಟದ ಅಂಶಗಳು ಸ್ಥೂಲ ಅಂಶಗಳಾಗಿ ಹಾಗೂ ಒಳನೋಟಗಳನ್ನು ಸೂಕ್ಷ್ಮ ಅಂಶಗಳಾಗಿ ಗ್ರಹಿಸಲಾಗಿದೆ. ಅವರ ಕೌಟುಂಬಿಕ ಬದುಕು, ಅಧ್ಯಾತ್ಮಿಕ ಬದುಕು, ಬಸವಣ್ಣನವರ ಬಗೆಗೆ ಅಪಾರ ನಿಷ್ಠೆ, ಶರಣರ ಕುರಿತ ಗೌರವ ಇವುಗಳನ್ನು ಬಾಹ್ಯ ಅಂಶಗಳಾಗಿ ಗ್ರಹಿಸಿದರೆ, ಅಂದಿನ ಸಮಕಾಲೀನ ಬದುಕು, ರಾಜಕೀಯ ಒಡನಾಟ–ಸಂಘರ್ಷ, ಸಾಹಿತ್ಯಿಕ ಒಲವು–ನಿಲುವುಗಳು, ಸಾಮಾಜಿಕ ಅಡೆ ತಡೆಗಳು ಇವುಗಳನ್ನೆಲ್ಲ ಆಂತರಿಕ ಅಂಶಗಳಾಗಿ ಗ್ರಹಿಸಲಾಗಿದೆ.

* ನೀಲಾಂಬಿಕೆ–ಗಂಗಾಂಬಿಕೆ ಮತ್ತು ಬಸವಣ್ಣನವರ ಕುರಿತ ಅಧ್ಯಾಯದಲ್ಲಿ ಬಸವಣ್ಣನವರ ಬಗೆಗಿನ ನಿಷ್ಠೆ ಇವರಿರ್ವರಲ್ಲಿದ್ದ ಬಗೆಯನ್ನು ಇಲ್ಲಿ ವಿವರಿಸಲಾಗಿದೆ.

ಒಟ್ಟಿನಲ್ಲಿ ವಿಚಾರಪತ್ನಿ, ಆಚಾರಪತ್ನಿಯರಾಗಿ ಐಕ್ಯದವರೆಗೂ ತಮ್ಮ ಕರ್ತವ್ಯ ನಿರ್ವಹಿಸಿದ ಗಂಗಾಂಬಿಕೆ–ನೀಲಾಂಬಿಕೆಯರು ನಿಜಕ್ಕೂ ತಮ್ಮತನವನ್ನು ಕಾಪಾಡಿಕೊಳ್ಳುತ್ತಲೇ ಅಂದರೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುತ್ತಲೇ ಬಸವ ನಿಷ್ಠೆಯನ್ನು ತತ್ವಶಃ ಪಾಲಿಸಿದವರು. ಅವರ ವಚನಗಳು ಈ ವಿಷಯವನ್ನು ಸ್ಪಷ್ಟಗೊಳಿಸುತ್ತವೆ.

## ಅನುಬಂಧಗಳು

೧. ಗ್ರಂಥ ಋಣ

೨. ವಕ್ತೃಗಳ ವಿವರ

೩. ಛಾಯಾಚಿತ್ರಗಳು

# ೧. ಗ್ರಂಥಋಣ


**೧. ಪುಸ್ತಕಗಳು**

೧. ಅನಂತಮೂರ್ತಿ ಯು.ಆರ್.(ಸಂ), ೨೦೦೩, **ವೀರಶೈವ ಧರ್ಮದರ್ಶನ,** ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೨. ಇಮ್ರಾಪೂರ(ಸಂ), ೨೦೦೧, **ಧರ್ಮ ಮತ್ತು ಮಹಿಳೆ, ಸಮಾಜ,** ಚೇತನ ಪ್ರಕಾಶನ, ಧಾರವಾಡ.

೩. ಉಪಾಧ್ಯ ಜಿ.ಎನ್.(ಸಂ), ೨೦೦೨, **ಗೋದವರಿವರಂ ಇರ್ದ ಕನ್ನಡ ನಾಡು,** ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೪. ಉಳವಪ್ಪ ಮಲ್ಲಪ್ಪ ಅನಿಗೋಳ(ಸಂ), ೨೦೧೨, **ಗಂಗಾಬಿಕೆ, ಬಸವಣ್ಣ ಹಾಗೂ ಸಮಕಾಲೀನರು,** ಯು.ಎಂ.ಅನಿಗೋಳ ಆ್ಯಂಡ್ ಸನ್ಸ್, ಬೆಳಗಾವಿ.

೫. **ಕರ್ನಾಟಕ ಪರಂಪರೆ ಸಂಪುಟ ೧,** ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬. ಕಲಬುರ್ಗಿ ಎಂ.ಎಂ.(ಸಂ), ೨೦೧೦, **ಮಾರ್ಗ ಸಂಪುಟ ೧,** ಸ್ವಪ್ನ ಬುಕ್ ಹೌಸ್, ಬೆಂಗಳೂರು.

೭. ಕಲಬುರ್ಗಿ ಎಂ.ಎಂ.(ಸಂ), **ಸ್ವರವಚನ ವಿಚಾರ ಸಂಕಿರಣ ಸಂಪುಟ,** ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭.

೮. ಕುಮಾರದೇವರು(ಸಂ), ೨೦೧೧, **ಶಿವಯೋಗ(ಸ್ಮರಣ ಸಂಚಿಕೆ),** ಶ್ರೀ ಸದಾಶಿವದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಸಮಿತಿ, ಹುಕ್ಕೇರಿ ಮಠ, ಹಾವೇರಿ.

೯. ಕಾಶೀನಾಥ ಅಂಬಲಗೆ, **ಶಬ್ದದ ಬೆಡಗು,** ೨೦೦೨, ಜಯನಗರ ಅಭಿವೃದ್ಧಿ ಸಂಘ, ಸೇಡಂ ರಸ್ತೆ, ಗುಲಬರ್ಗಾ.

೧೦. ಗಂಗಮ್ಮ ಸತ್ಯಂಪೇಟೆ, ೧೯೯೪, **ಮಹಾಮನೆಯ ಮಹಾತಾಯಿ,** ವಿಶ್ವಾರಾಧ್ಯ ಸತ್ಯಂಪೇಟೆ ಅಗ್ನಿ ಅಂಕುರ ಪ್ರಕಾಶನ, ಶಹಪುರ, ಕಲಬುರ್ಗಿ.

೧೧.ಗಿರಿಡ್ಡಿ ಗೋವಿಂದರಾಜ(ಸಂ), ೨೦೦೧, **ಸಾಹಿತ್ಯ ವಿಮರ್ಶೆ ೧೯೯೯**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

೧೨.ಗುರುದೇವಿ ಹುಲ್ಲೇಪ್ಪನವರ ಮಠ, ೧೯೯೭, **ಶರಣಧರ್ಮ ಹಾಗೂ ಮಹಿಳೆ**, ಶ್ರೀ ಪೂಜ್ಯ ಲಿಂ.ಶ್ರೀ ಮಹಾಂತ ಶಿವಯೋಗಿಗಳ ೨೫ನೇ ವಾರ್ಷಿಕ ಪುಣ್ಯಸ್ಮರಣೋತ್ಸವ, ಮುರಗೋಡ.

೧೩.ಚನ್ನಕ್ಕ ಪಾವಟೆ, ೨೦೦೪, **ಶರಣ ಸಂಸ್ಕೃತಿ ಮುಖಾಮುಖಿ**, ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನ ಮಠ, ಇಲಕಲ್.

೧೪.ಚನ್ನಕ್ಕ ಪಾವಟೆ, ೧೯೯೩, **ವಚನ ಸನ್ನಿಧಿ**, ಚನ್ನಕ ಪಾವಟೆ ಪ್ರಕಾಶನ, ಚನ್ನನಗರ, ಧಾರವಾಡ.

೧೫.ಚಕ್ಕರೆ ಶಿವಶಂಕರ್(ಸಂ), ೨೦೦೬, **ಕಲ್ಯಾಣದೊಳಗೊಂದು ಪಂಚಾಯಿತಿ**, ಸಾಗರ ಪ್ರಕಾಶನ, ಬೆಂಗಳೂರು.

೧೬.ಚಂದ್ರಶೇಖರ ವಸ್ತ್ರದ, ೧೯೯೯, **ನಿರ್ವಚನ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

೧೭.ಚಿದಾನಂದಮೂರ್ತಿ ಎಂ., ೨೦೧೧, **ವಚನಸಾಹಿತ್ಯ**, ಸ್ವಪ್ನಬುಕ್ ಹೌಸ್, ಬೆಂಗಳೂರು.

೧೮.ಚಿದನಾಂದಮೂರ್ತಿ ಎಂ., ೨೦೧೦, **ಬಸವಣ್ಣನರು**, ಸ್ವಪ್ನಬುಕ್ ಹೌಸ್, ಬೆಂಗಳೂರು.

೧೯.ಜಯಶ್ರೀ ದಂಡೆ, ೨೦೦೧, **ಫಲದೊಳಗಿನ ರುಚಿ**, ಕವಿಮಾರ್ಗ ಪ್ರಕಾಶನ, ತೇಜಸ್ವಿನಿ ಸರಸ್ವತಿಪುರ, ಕಲಬುರ್ಗಿ.

೨೦.ಜವರಯ್ಯ, ೧೯೯೭, **ದಲಿತವರ್ಗದ ಶರಣರು ಮತ್ತು ಶರಣೆಯರು: ಒಂದು ಅಧ್ಯಯನ**, ಸಿದ್ಧಾರ್ಥ ಗ್ರಂಥಮಾಲೆ, ಕುವೆಂಪುನಗರ, ಮೈಸೂರು.

೨೧.ಜಯದೇವಪ್ಪ ಜೈನಕೇರಿ, **ಶರಣಸಂಪದ**, ಶಾಂತಲಾ ಪ್ರಕಾಶನ, ಕುವೆಂಪು ರಸ್ತೆ, ಶಿವಮೊಗ್ಗ.

೨೨.ಜತ್ತಿ ಬಿ.ಡಿ(ಸಂ), ೨೦೦೭, **ಬಸವೇಶ್ವರ ಸಮಕಾಲೀನರು**, ಬಸವ ಸಮಿತಿ, ಬೆಂಗಳೂರು.

೨೩.ಜತ್ತಿ ಬಿ.ಡಿ.(ಸಂ), ೧೯೬೭, **ಬಸವೇಶ್ವರ**, ಶ್ರೀ ಬಸವೇಶ್ವವರ ೮ನೇ ಶತಮಾನೋತ್ಸವ ಸಮಿತಿ ಮೈಸೂರು ಸರ್ಕಾರ.

೨೪.ಜಯಾರಾಜಶೇಖರ ಜಿ.ವಿ.(ಸಂ), ೧೯೯೨, **ಶೂನ್ಯ ಸಂಪಾದನೆಯಲ್ಲಿ ಸ್ತ್ರೀ ಪಾತ್ರಗಳು**, ಬಸವ ಸಮಿತಿ, ಬೆಂಗಳೂರು.

೨೫. ದೇವರಕೊಂಡಾರೆಡ್ಡಿ(ಸಂ), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ದೇವರಕೊಂಡಾರೆಡ್ಡಿ(ಸಂ), ೨೦೦೬, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೮, ಬೀದರ್ ಜಿಲ್ಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ನಾರಾಯಣ ಪಿ.ವಿ., ೧೯೯೪, **ವಚನ ಪರಿಸರ,** ತಂಗಾಳಿ, ಬೆಂಗಳೂರು.

೨೮. ನಾರಾಯಣ ಪಿ.ವಿ., ೧೯೯೦, **ವಚನ-ನಿರ್ವಚನ,** ಪುಸ್ತಕಾಲಯ ಪ್ರಕಾಶಕರು, ಮೈಸೂರು.

೨೯. ನಾರಾಯಣ ಪಿ.ವಿ., ೧೯೯೭, **ವಚನಸಾಹಿತ್ಯ,** ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಬೆಂಗಳೂರು.

೩೦. ನಾರಾಯಣ ಪಿ.ವಿ., ೨೦೦೫, **ವಚನ ಸಮಗ್ರ,** ವಸಂತ ಪ್ರಕಾಶನ, ತುಳಸಿವನ, ಬೆಂಗಳೂರು.

೩೧. ನಾರಾಯಣ ಪಿ.ವಿ., ೨೦೦೮, **ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ,** ವಸಂತ ಪ್ರಕಾಶನ, ಜಯನಗರ, ಬೆಂಗಳೂರು.

೩೨. ನಾಯಕ ಹಾ.ಮಾ., ೧೯೭೫, **ಬಸವ ಪುರುಷ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೩. ನೀಲಗಂಗಾ ಚರಂತಿಮಠ, ೧೯೯೬, **ಶಿವಶರಣೆಯರ ಚರಿತಾಮೃತ,** ಶ್ರೀ ಶಿವಶರಣೆ ಅಕ್ಕಮಹಾದೇವಿ, ಅಕ್ಕನಬಳಗ, ಬೆಳಗಾವಿ

೩೪. ಪ್ರಭು ಎಚ್.ಆರ್., **ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಮಹಾದೇವಿಯಕ್ಕ ಒಂದು ತೌಲನಿಕ ಅಧ್ಯಯನ,** ಸೌರಭ ಪ್ರಕಾಶನ, ನಾಗರಭಾವಿ, ಬೆಂಗಳೂರು

೩೫. ಬರಗೂರ ರಾಮಚಂದ್ರಪ್ಪ, ೨೦೦೬, **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೬. ಬಸವಣ್ಣ ಹೆಚ್.(ಸಂ), ೧೯೯೦, **ಶರಣಸಂಗಮ,** ಅಖಿಲ ಭಾರತ ತೃತೀಯ ಶರಣ ಸಾಹಿತ್ಯ ಸಮ್ಮೇಳನ, ಹೊಸಪೇಟೆ.

೩೭. ಬಸವರಾಜ ಮಲಶೆಟ್ಟಿ, ೨೦೦೫, **ಹರಿದ ಹೆದ್ದೊರೆ,** ಗುರುವಂದನಾ ಸಮಿತಿ, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ.

೩೮. ಬಸವಾರಾಧ್ಯ ಎನ್., ೨೦೦೦, **ಪಾಲ್ಕುರಿಕೆ ಸೋಮನಾಥ: ಒಂದು ಅಧ್ಯಯನ,** ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು.

೩೯. ಬಸವಾತ್ಮಜೆ, ಜಗದ್ಗುರು ಮಾತೆಮಾಹದೇವಿ(ಸಂ), ೨೦೦೦, **ಬಸವದರ್ಶನ**, ವಿಶ್ವಕಲ್ಯಾಣ ಮಿಷನ್, ರಾಜಾಜಿನಗರ, ಬೆಂಗಳೂರು.

೪೦. ಬಾಳಪ್ಪ ಸೀಗೀಹಳ್ಳಿ(ಸಂ), **ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಕಾವ್ಯ ಸಾಹಿತ್ಯ ೩**, ವಚನ ಪಿತಾಮಹ ಡಾ.ಫ.ಗು.ಹಳ್ಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ.

೪೧. ಬುರಡೇಕಟ್ಟಿ ಮಂಜಪ್ಪ, ೨೦೦೮, **ಶಿವಶರಣೆಯರು**, ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ದಗಂಗಾಮಠ, ತುಮಕೂರು.

೪೨. ಭೂಸರೆಡ್ಡಿ ಎಸ್.ಎಸ್., ೧೯೮೬, **ನೀಲಲೋಚನೆಯ ವಚನಗಳಲ್ಲಿ ಬಸವಣ್ಣ**, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವರಿ ಮಠ, ಹುಬ್ಬಳ್ಳಿ.

೪೩. ಭೂಸರೆಡ್ಡಿ ಎಸ್.ಎಸ್., ೧೯೮೨, **ಮಹಾಶರಣೆ ನೀಲಾಂಬಿಕೆ**, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೪೪. ಮಹೇಶ ಚಿಂತಾಮಣಿ, ೧೯೯೭, **ಶರಣರು ಹಾಗೂ ಸಮಾಜ**, ಪೂಜ್ಯ ಲಿಂ.ಮಹಾಂತ ಶಿವಯೋಗಿಗಳ ವಾರ್ಷಿಕ ಪುಣ್ಯಸ್ಮರಣೆ ಸಮಿತಿ ದುರದುಂಡೇಶ್ವರ ಮಠ, ಮುಂಡಗೋಡ.

೪೫. ಮಲ್ಲಾಪುರ ಬಿ.ವ್ಹಿ, ೧೯೯೮, **ಸುಧಾರ್ಣ ವಚನ ೧**, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿ ಮಠ, ಬೆಳಗಾವಿ.

೪೬. ಮಹಾದೇವಿ ಆರ್.ಹಿರೇಮಠ, ೨೦೦೭, **ಬಸವಣ್ಣನವರ ವಚನಗಳಲ್ಲಿ ಮಾನವತಾವಾದಿ**, ಲಿಂಗಾಯತ ಅಧ್ಯಯನ ಅಕಾಡೆಮಿ, ಶಿವಬಸವನಗರ, ಬೆಳಗಾವಿ.

೪೭. ಮಹಾದೇವಪ್ಪ ಬಿ., ೧೯೯೯, **ಅರಿವು–ಆಚಾರ**, ಅರಿವು–ಆಚಾರ ಪ್ರಕಟನಾಲಯ, ವೀರನಿಕೇತನ, ಯಾದಗಿರಿ.

೪೮. ಮಟ್ಟಿ ಎಸ್.ಎಸ್.(ಸಂ), ೧೯೮೮, **ಗಂಗಾಂಬಿಕೆಯ ವಚನಗಳು**, ವನ ಪ್ರಕಾಶನ, ಲಕ್ಷ್ಮೀನಗರ, ಧಾರವಾಡ.

೪೯. ಮಲ್ಲಿಕಾ ಘಂಟಿ, ೨೦೦೦, **ತನುಕರಗದವರಲ್ಲಿ**, ಗೌತಮ ಪ್ರಕಾಶನ, ಬಳ್ಳಾರಿ.

೫೦. ಮಲ್ಲಿಕಾರ್ಜುನ ಯಾಳವಾರ(ಸಂ), ೨೦೦೬, **ಪದ ಪದಾರ್ಥ**, ಅಡವೀಶ ಪ್ರಕಾಶನ, ಮರೆಗದ್ದಿ, ಬಾಗಲಕೋಟೆ.

೫೧. ಮರುಳಯ್ಯ ಸಾ.ಶಿ.(ಸಂ), ೧೯೯೩, **ನೀಲಮ್ಮನ ವಚನಗಳು**, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು.

೫೨. ಮುಳಗುಂದ ಚ.ವಿ.(ಸಂ), ೧೯೮೬, **ಮಾತೋಶ್ರೀ(ಅಭಿನಂದನ ಗ್ರಂಥ)**, ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ.

೫೩. ಮಲ್ಲಾಪುರ ಬಿ.ವ್ಹಿ.(ಸಂ), **ಸುಕುಮಾರ ಸಂಪುಟ ೫, ಸಂಚಿಕೆ ೫–೬**, ಶ್ರೀ ಮದ್ವೀರಶ್ವರ ಶಿವಯೋಗಮಂದಿರ.

೫೪. ಮಲ್ಲಿಕಾರ್ಜುನ ಶಿವಪ್ಪ ಲಠ್ಠಿ, ೨೦೦೦, **ಸ್ವರವಚನಗಳು: ಒಂದು ವಿವೇಚನೆ**, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೫. ರಮೇಶ ಪಂ.ಲಿಂಗದಳ್ಳಿ, ೨೦೧೨, **ಲಿಂಗನಿಷ್ಠೆ ನೀಲಾಂಬಿಕೆ**, ಶ್ರೀ ನೀಲಾಂಬಿಕಾ ಪ್ರಕಾಶನ, ತಂಗಡಗಿ.

೫೬. ರವೀಂದ್ರನಾಥ ಕೆ., ೨೦೦೦, **ಬಸವಯುಗದ ವಚನೇತರ ಸಾಹಿತ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ರಾಜಶೇಖರ ಪಿ.ಕೆ.(ಸಂ), ೧೯೯೫, **ಕರಪಾಲ ಬಸವಪುರಾಣ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟಾದಾರ್ಯ ಮಠ, ಗದಗ.

೫೮. ರಾಜಶೇಖರ ಇಚ್ಚಂಗಿ, ೨೦೦೩, **ಸಂಸ್ಕೃತಿ ಶೋಧ**, ಅಕ್ಕಮಹಾದೇವಿ ಪ್ರಕಾಶನ, ಹುಕ್ಕೇರಿ.

೫೯. ಲಲ್ಲೇಶ್ವರಿ ಶಂ.ಮೂಗಿ, ೧೯೮೧, **ಬಸವಯುಗದ ಶಿವಶರಣರೆಯರು**, ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು.

೬೦. ವಿದ್ಯಾಶಂಕರ್ ಎಸ್., ೧೯೯೭, **ವಚನಗಳು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೧. ವಿಜಯಾದೇವಿ, ೨೦೦೩, **ಭಕ್ತಿಪರಂಪರೆ ಮತ್ತು ಸಾಹಿತ್ಯ**, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.

೬೨. ವಿಜಯಕುಮಾರ ಮಹಾನುಭಾವಿಗಳು, ೨೦೦೯, **ಬಸವನಣ್ಣವರ ಚರಿತ್ರೆ ಮತ್ತು ಸಂಸ್ಕೃತಿ ಶೋಧಗಳು**, ಪ್ರಭುದೇವರ ಪ್ರಕಾಶನ, ಸಿದ್ಧಾಪುರ, ಉತ್ತರ ಕನ್ನಡ.

೬೩. ವಿಶ್ವನಾಥಯ್ಯ ಎಂ.ಟಿ., ೧೯೯೯, **ಶರಣದಂಪತಿಗಳು ಮತ್ತು ವಿರಾಗಿಣೆಯರು**, ಸರ್ವಮಂಗಳ ಪ್ರಕಾಶನ, ಮೈಸೂರು.

೬೪. ಶ್ರೀಮತಿ ಎಚ್.ಎಸ್.(ಸಂ), ೨೦೦೬, **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೬೫. ಶಾಂತಾ ಇಮ್ರಾಪೂರ, ೨೦೦೫, **ನಿರ್ಭಯದ ನಿಲುವು**, ಚಿತ್ತಾರ ಪ್ರಕಾಶನ, ನಿರ್ಮಲನಗರ, ಧಾರವಾಡ,

೬೬. ಶೈಲಜಾ ಉಡಚಣಾ, ೨೦೦೭, **ವಚನ ಸಾಹಿತ್ಯ ಮತ್ತು ಮಹಿಳೆ,** ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು, ಬೆಂಗಳೂರು.

೬೭. ಶಂಕರಗೌಡ ಮ.ಬಿರಾದಾರ, ೨೦೧೨, **ಲಿಂಗಾನುಭಾವಿ ನೀಲಾಂಬಿಕೆ,** ಶ್ರೀ ಜಗದ್ಗುರು ಅನ್ನದಾನೇಶ್ವರ ಧರ್ಮಸಂಸ್ಕೃತಿ ಪ್ರಚಾರ ಮಂಡಳಿ, ಮುಂಡರಗಿ.

೬೮. ಶಿವಲಿಂಗಮ್ಮ ಕಟ್ಟಿ, ೧೯೭೭, **ಶರಣೆಯರ ಸೂಳ್ನುಡಿಗಳು,** ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವಿರ ಮಠ, ಹುಬ್ಬಳ್ಳಿ.

೬೯. ಶಿವಕುಮಾರ ಪಾವಟೆ, ೨೦೦೯, **ಮಂಗಳವಾಡ ಮತ್ತು ಇತರೆ ಲೇಖನಗಳು,** ಅಖಿಲಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು.

೭೦. ಶಕುಂತಲಾ ಎಂ.ಹೆಗಡೆ, ೨೦೦೧, **ಗಂಗಾಂಬಿಕೆ,** ಕಲ್ಯಾಣ ನಾಡಿನ ಶೃಣ ಪರಿಷತ್ತು, ಅನುಭವ ಮಂಟಪ, ಬಸವ ಕಲ್ಯಾಣ, ಬೀದರ್ ಜಿಲ್ಲೆ,

೭೧. ಶ್ರೀಮತಿ ಎಚ್.ಎಂ.ಬೀಳಗಿ, ೧೯೮೯, **ಶಿವಶರಣೆಯರು ಜೀವನ ಮತ್ತು ಸಾಧನೆ,** ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.

೭೨. ಶ್ರೀಮತಿ ಜಿವಿ.ಜಯರಾಜಶೇಖರ, ೨೦೦೦, **ಶೂನ್ಯ ಸಂಪಾದನೆ: ಅನುಸಂಧಾನ,** ಬಸವ ಸಮಿತಿ, ಬೆಂಗಳೂರು.

೭೩. ಸರಸ್ವತಿ ದೇವಿಗೌಡ(ಸಂ), ೧೯೬೫, **ಶಿವಶರಣೆಯರ ಚರಿತ್ರೆಗಳ ಸಂಗ್ರಹ,** ಶ್ರೀ ಮ.ನಿ.ಪ್ರ.ಮಹಾಂತ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ.

೭೪. ಸುಂದರೇಶನ್ ಚ.(ಸಂ), ೧೯೮೪, **ಹನ್ನೊಂದನೆಯ ಶತಮಾನ ವೀರಶೈವ ಉತ್ಕ್ರಾಂತಿ,** ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ನಿವಾಸ, ಬಸವನಗುಡಿ, ಬೆಂಗಳೂರು.

೭೫. ಸರೋಜಿನಿ ಮಹಿಷಿ, ೧೯೬೫, **ಕರ್ನಾಟಕದ ಕವಿಯತ್ರಿಯರು,** ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ.

೭೬. ಸರೋಜಿನಿ ಚವಲಾರ, ೧೯೮೬, **ನೀಲಾಂಬಿಕೆಯ ವಚನಗಳು,** ಶ್ರೀ ಜಗದ್ಗುರು ಗಂಗಾಧರಧರ್ಮ ಪ್ರಚಾರಕ ಮಂಡಳಿ ಮೂರುಸಾವಿರ ಮಠ, ಹುಬ್ಬಳ್ಳಿ.

೭೭. ಸಿದ್ಧರಾಮಸ್ವಾಮಿಗಳು, **ವಚನಾರ್ಥ ಚಿಂತನೆ,** ವಚನ ಅಧ್ಯಯನ ಕೇಂದ್ರ, ನಾಗನೂರ ಶ್ರೀ ರುದ್ರಾಕ್ಷಿಮಠ, ಬೆಳಗಾವಿ.

೭೮. ಸುಂಕಾಪುರ ಎಂ.ಎಸ್., ೧೯೭೬, **ಚಾಮರಸನ ಪ್ರಭುಲಿಂಗಲೀಲೆ,** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭೯. ಹನ್ನೆರಡುಮಠ ಜಿ.ಎಚ್.(ಸಂ), ೧೯೮೭, **ರಜತದೀಪ್ತಿ,** ಮೂರುಸಾವಿರ ಮಠದ ಪಿಠಾರೋಹಣ ಸಮಿತಿ, ಅಭಿನಂದನಾ ಗ್ರಂಥ, ಹುಬ್ಬಳ್ಳಿ.

೮೦. ಹಿರೇಮಠ ಆರ್.ಸಿ.(ಸಂ), **ವೀರಶೈವಮೃತ ಪುರಾಣ,** ಎನ್.ಎಸ್.ಎಸ್.ಕಲ್ಯಾಣಕೇಂದ್ರ, ಬೆಂಗಳೂರು.

**ಕಾವ್ಯ ಪುರಾಣಗಳು**

೧. ಕೌಜಗೇರಿ ಬಸವಕುಮಾರ, **ಬಸವಣ್ಣನವರ ಲೀಲೆಯು,** ಚು.ಶಿ.ಸಾಲಿಮಠ, ಗದಗ

೨. ಕೃಷ್ಣಯ್ಯಶೆಟ್ಟಿ(ಸಂ), **ಕಲಿಯುಗದ ಕಾಲಜ್ಞಾನ,** ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್, ಬೆಂಗಳೂರು

೩. ಚಂದ್ರಯ್ಯ ಬಿ.ನಂ., ೧೯೬೭, **ಬಸವ ಪವಾಡ,** ಶರತ್ ಪ್ರಕಾಶನ, ಸರಸ್ವತಿಪುರಂ, ಮೈಸೂರು.

೪. ದೇವೀರಪ್ಪ ಎಚ್., ೨೦೦೩, **ಬಸವರಾಜ ದೇವರ ರಗಳೆ,** ಬಸವ ಸಮಿತಿ, ಬಸವ ಭವನ, ಬೆಂಗಳೂರು.

೫. ದೇವೀರಪ್ಪ ಎಚ್., ೧೯೬೦, **ಶಿವತತ್ವ ಚಿಂತಾಮಣಿ,** ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ದೇವೀರಪ್ಪ ಎಚ್., ೧೯೭೧, **ಸಿಂಗಿರಾಜ ಚಾರಿತ್ರ(ಸಿಂಗಿರಾಜ ಪುರಾಣ),** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೭. ನಂಜಪ್ಪ ಮಾ.ನಂ.(ಸಂ), ೧೯೬೦, **ಶ್ರೀ ಬಸವೇಶ್ವರ ಸ್ತೋತ್ರ ಮುಕ್ತಾಫಲ,** ಕಲ್ಯಾಣ ಸಾಹಿತ್ಯ ಭಂಡಾರ, ಬೆಂಗಳೂರು.

೮. ನಾರಾಯಣ ಪಿ.ವಿ.(ಸಂ), ೧೯೮೨, **ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ,** ತರಳಬಾಳು ಪ್ರಕಾಶನ, ಸಿರಿಗೇರಿ.

೯. ಬಸವರಾಜ ಚೆ.ಜವಳಿ(ಸಂ), ೧೯೮೦, **ಬಸವರಾಜದೇವರ ರಗಳೆ,** ಜಗದ್ಗುರು ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ, ಬಳ್ಳಾರಿ.

೧೦. ಬಸವರಾಜ ಎಲ್.(ಸಂ), ೧೯೬೩, **ಶಿವದಾಸ ಗೀತಾಂಜಲಿ,** ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೧೧.ಬುದ್ಧಯ್ಯಸ್ವಾಮಿ(ಸಂ), ೧೯೪೦, **ಎಳೆಂದೂರ ಹರೀಶ್ವರ ವಿರಚಿತ ಶ್ರೀ ಪ್ರಭುದೇವರ ಪುರಾಣ,** ಶ್ರೀ ಬುದ್ಧಯ್ಯಸ್ವಾಮಿ ಮ.ಪುರಾಣಿ ಉಳವಿಬಸಪ್ಪನಗುಡ್ಡ, ಧಾರವಾಡ.

೧೨.ಮಲ್ಲಿಕಾಜುನ ಪರಡ್ಡಿ(ಸಂ), ೧೯೯೩, **ಕಂಚಿ ಶಂಕರಾರಾಧ್ಯ ವಿರಚಿತ ಶ್ರೀ ಬಸವ ಪುರಾಣ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩.ಮಂಜುನಾಥನ್ ಜಿ.ಬಿ.(ಸಂ), ೧೯೯೭, **ಲಿಂಗಪುರಾಣಂ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೪.ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ), ೧೯೫೪, **ಧರಣಿ ಪಂಡಿತನ ಬಿಜ್ಜಳರಾಯನ ಚರಿತ್ರೆ,** ಗೌರ್ನಮೆಂಟ್ ಮ್ಯಾನ್‌ಸ್ಕ್ರಿಪ್ಟ್ಸ್ ಲೈಬ್ರರಿ, ಮದರಾಸು.

೧೫.ರಾಜಶೇಖರ ಪಿ.ಕೆ.(ಸಂ), ೧೯೮೧, **ಜನಪದ ಬಸವ ಪುರಾಣ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

೧೬.ರಾಜಶೇಖರ ಪಿ.ಕೆ.(ಸಂ), ೧೯೯೫, **ಕರಪಾಲ ಬಸವಪುರಾಣ,** ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ.

೧೭.ರಾಜಶೇಖರ ಪಿ.ಕೆ.(ಸಂ), ೨೦೧೦, **ಜನಪದ ಶರಣ ಕಾವ್ಯಗಳು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೮.ರಾಜೇಗೌಡ ಹ.ಕ.(ಸಂ), ೧೯೮೨, **ಗರಣಿಬಸವಲಿಂಗ ವಿರಚಿತ ಬಸವೇಶ್ವರ ಕಾವ್ಯ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯.ವೀರಭದ್ರಪ್ಪ ಹಾಲಭಾವಿ, ೧೯೩೪, **ಚೆನ್ನಬಸವ ಪುರಾಣ,** ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ವಾಙ್ಮಯ ಶಾಖೆ, ಧಾರವಾಡ.

೨೦.ಶಿರೂರ ಬಿ.ವಿ.(ಸಂ), ೧೯೮೭, **ಮೊಲ್ಲೆ ಬೊಮ್ಮಯ್ಯಗಳ ಕಾವ್ಯ,** ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

೨೧.ಶಿವಬಸವಸ್ವಾಮಿಗಳು(ಸಂ), ೧೯೯೦, **ಚೆನ್ನಪ್ಪ ಕವಿಯ ಶರಣಲೀಲಾಮೃತ,** ಶ್ರೀ ಮ.ನಿ.ಪ್ರ ಮಹಾಂತ ಸ್ವಾಮಿಗಳು, ಗುರುಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠ, ದೇವನೂರು.

೨೨.ಸಂಗಮ್ಮ ಕರವೀರಶೆಟ್ಟರ(ಸಂ), **ಶ್ರೀ ಬಸವೇಶ್ವರ ಲಾವಣಿ ಪದ,** ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ.

೨೩.ಸಣ್ಣಯ್ಯ ಬಿ.ಎಸ್.(ಸಂ), ೧೯೧೮, **ಕವಿಕಾಡ ವಿರಚಿತ ಬಸವ ಶಿಖಾಮಣಿ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೪. ಸುಂಕಾಪುರ ಎಂ.ಎಸ್., ೧೯೭೧, **ಶಂಕರ ಕವಿ ವಿರಚಿತ ಚೋರಬಸವೇಶ್ವರ ಕಾವ್ಯ,** ಶ್ರೀ ಮ.ನಿ.ಪ್ರ.ಮಹಾಂತಸ್ವಾಮಿಗಳು, ಮುರುಘಾಮಠ, ಧಾರವಾಡ.

೨೫. ಹಿರೇಮಠ ಆರ್.ಸಿ.(ಸಂ), ಬಸವಪುರಾಣ(ಭೀಮಕವಿ), ೨೦೧೦, **ಶ್ರೀ ಬಾಲಲೀಲಾ ಮಹಾಂತ,** ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀ ಮುರುಘಾಮಠ, ಧಾರವಾಡ.

೨೬. ಹಿರೇಮಠ ಆರ್.ಸಿ.(ಸಂ), ೧೯೬೮, **ಬಸವರಾಜ ವಿಜಯಂ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೭. ಹಿರೇಮಠ ಆರ್.ಸಿ.(ಸಂ), ೧೯೬೮, **ಭೈರವೇಶ್ವರ ಕಾವ್ಯದ ಕಥಾ ಮಣಿ ಸೂತ್ರ ರತ್ನಾಕರ,** ಭಾಗ ೨ (ಶಾಂತಲಿಂಗದೇಶಿಕೃತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೮. ಹಿರೇಮಠ ಆರ್.ಸಿ.(ಸಂ), **ಗುಬ್ಬಿ ಮಲ್ಲಣಾರ್ಯ ವಿರಚಿತ, ವೀರಶಯವಮೃತ ಪುರಾಣ,** ಭಾಗ ೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೯. ಹಿರೇಮಠ ಆರ್.ಸಿ.(ಸಂ), ೧೯೫೮, **ಪದ್ಮಾನಾಂಕ ಕವಿಕೃತ, ಪದ್ಮರಾಜ ಪುರಾಣ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ವಚನ ಸಂಪುಟಗಳು**

೧. ಕಲಬುರ್ಗಿ ಎಂ.ಎಂ., ೧೯೯೩, **ಬಸವಣ್ಣನವರ ವಚನ ಸಂಪುಟ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨. ಕಲಬುರ್ಗಿ ಎಂ.ಎಂ., ೨೦೦೧, **ಬಸವಣ್ಣನವರ ವಚನ ಸಂಪುಟ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. ಮಲ್ಲಾಪುರ ಬಿ.ವ್ಹಿ., ೧೯೯೩, **ಅಲ್ಲಮ ಪ್ರಭುದೇವರ ವಚನ ಸಂಪುಟ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪. ವಿದ್ಯಾಶಂಕರ್ ಎಸ್., ೧೯೯೩, **ಸಿದ್ಧರಾಮೇಶ್ವರ ವಚನ ಸಂಪುಟ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫. ವಿದ್ಯಾಶಂಕರ್ ಎಸ್., ೧೯೯೩, **ಸಂಕೀರ್ಣ ವಚನ ಸಂಪುಟ ೨,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬. ವೀರಣ್ಣ ರಾಜೂರ, ೧೯೯೩, **ಶಿವಶರಣೆಯರ ವಚನ ಸಂಪುಟ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭. ವೀರಣ್ಣ ರಾಜೂರ, ೨೦೦೧, **ಶಿವಶರಣೆಯರ ವಚನ ಸಂಪುಟ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೮. ವೀರಣ್ಣ ರಾಜೂರ, ೧೯೯೩, **ಸಂಕೀರ್ಣ ವಚನ ಸಂಪುಟ ೫,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೯. ಶಿವಣ್ಣ ಎಸ್., ೧೯೯೩, **ಸಂಕೀರ್ಣ ವಚನ ಸಂಪುಟ ೬,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೦. ಹಿರೇಮಠ ಬಿ.ಆರ್., ೧೯೯೩, **ಸಮಗ್ರ ವಚನ ಸಂಪುಟ ೮,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**ಪತ್ರಿಕೆಗಳು**

೧. ಬಸವರಾಜ ಹೂಗಾರ, *ಅನುಭಾವದ ಮುಕಟಮಣಿ–ಮುಕ್ತಾಯಕ್ಕ,* **ಬಸವ ಪಥ,** ಸಂಪುಟ ೧೯, ಮೇ ಮತ್ತು ಅಕ್ಟೋಬರ್ ೧೯೯೭.

೨. ಬಸಪ್ಪ ಶಂಕರಪ್ಪನವರು, *ವೀರಮಹಾಮಾತೆ ಅಕ್ಕಮ್ಮನವರು,* **ಬಸವಪಥ,** ಸಂಪುಟ ೩೦, ಸಂಚಿಕೆ ೫, ಆಗಸ್ಟ್ ೨, ೧೯೯೮.

೩. ಮಹಾದೇವಪ್ಪ ಬಿ., *ಬಸವಣ್ಣವರ ಸ್ವಯಂ ವಿವಾಹಕ್ಕೆ ಬಿಜ್ಜಳನ ಸ್ವಯಂ ನಿರ್ವಾಹಕವೇಕಾರಣ,* **ಬಸವಪಥ,** ಸಂಪುಟ ೨೧, ಸಂಚಿಕೆ ೨, ಮೇ, ೧೯೯೯.

೪. ವಿಜಯಶ್ರೀ ಸಬರದ, **ಬಸವಪಥ,** ಸಂಪುಟ ೨೧, ೨ಂಚಿಕೆ ೧೧, ಫೆಬ್ರವರಿ ೨೦೦೦.

೫. ವಿಜಯಶ್ರೀ ಸಬರದ, **ನೀಲಾಂಬಿಕೆ, ಬಸವಪಥ,** ಸಂಪುಟ ೨೧, ಸಂಚಿಕೆ ೧, ಏಪ್ರಿಲ್ ೨, ೧೯೯೯

೬. ವೀರಣ್ಣ ರಾಜೂರ, *ಸ್ವರವಚನಗಳ ಉಗಮ–ಸ್ವರೂಪ–ಲಕ್ಷಣ,* **ಬಸವಪಥ,** ಸಂಪುಟ ೧೯, ಸಂಚಿಕೆ ೨,

೭. ವೃಷಭೇಂದ್ರಸ್ವಾಮಿ ಎಸ್.ಎಂ., *ಚೆನ್ನಬಸವಣ್ಣರ ತಂದೆ ಇಂಗಳೇಶ್ವರ ಶಿವ(ದೇವ)ರಾಯ,* ಪ್ರಪಂಚ ಪತ್ರಿಕೆ ಹುಬ್ಬಳ್ಳಿ, ಜುಲೈ ೨೩, ೧೯೮೯.

೮. ಸಾವಿತ್ರಿ ನಾಗರಾಜಯ್ಯ, *ನೀಲಾಂಬೆಯ ನಿಲುವು,* **ಬಸವಪಥ,** ಸಂಪುಟ ೨೮, ಸಂಚಿಕೆ ೧೧, ಫೆಬ್ರವರಿ ೨೦೦೭.

೯. ಸಿದ್ಧಲಿಂಗಯ್ಯ ಜಿ.ಎಸ್., *ವಚನಗಳಲ್ಲಿ ಮೌಲ್ಯ ವಿವಚೇನೆ,* **ಬಸವಪಥ,** ಸಂ.೧೫, ಸಂಚಿಕೆ ೧೨, ೧೯೯೪.

೧೦.ಹಿರೇಮಠ ಬಿ.ಕೆ., **ಸುಕುಮಾರ(ತ್ರೈಮಾಸಿಕ ಪತ್ರಿಕೆ)**, ಸಂಪುಟ ೭, ಸಂಚಿಕೆ ೩, ಫೆಬ್ರವರಿ ೨೦೦೯.

**ಅಭಿನಂದನ ಗ್ರಂಥ**

೧. ಈಶ್ವರಚಂದ್ರ ಚಿಂತಾಮಣಿ(ಸಂ), ೨೦೦೦, **ಭಕ್ತಾನುರಾಗಿ ಬಂಥನಾಳ ಶಿವಯೋಗಿ**, ಶ್ರೀ ಸಿದ್ಧೇಶ್ವರ ಸಂಸ್ಥೆ, ಬಿಜಾಪುರ.

೨. ತಿಪ್ಪೇರುದ್ರಸ್ವಾಮಿ(ಸಂ), ೧೯೬೪, **ಪ್ರಸಾದ**, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೩. ಮಲ್ಲಿಕಾರ್ಜುನ ತೆಲಸಂಗ, ೧೯೭೮, **ಅರ್ಚನ**, ಜಗದ್ಗುರು ಮೂರುಸಾವಿರ ಮಠ, ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕ ಮಹೋತ್ಸವ ಸಮಿತಿ, ಹುಬ್ಬಳ್ಳಿ.

೪. ಬಸವರಾಜ ಮಲಶೆಟ್ಟಿ(ಸಂ), ೨೦೦೫, **ಹರಿದ ಹೆದ್ದೊರೆ**, ಗುರುವಂದನ ಸಮಿತಿ, ಶ್ರೀ ಜಗದ್ಗುರು ಕೊಟ್ಟೂರಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ.

೫. ಮುಳುಗುಂದ ಚ.ವಿ.(ಸಂ), ೧೯೮೬, **ಮಾತೋಶ್ರೀ**, ಅಭಿನಂದನ ಗ್ರಂಥ, ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ.

೬. ಹಿರೇಮಠ ಆರ್.ಸಿ.(ಸಂ), **ಶಿವದೀಪ್ತಿ**, ಅಭಿನಂದನಾ ಗ್ರಂಥ, ಶ್ರೀ ಮ.ನಿ.ಪ್ರಸ್ವ.ಡಾ.ಶಿವಬಸವ ಮಹಾಸ್ವಾಮಿಗಳು ರುದ್ರಾಕ್ಷಿಮಠ, ನಾಗನೂರು, ಬೆಳಗಾವಿ

**ಸಂಶೋಧನೆ**

೧. ಅಕ್ಕಮಹಾದೇವಿ ಆರ್. ೨೦೦೧, **ಸರಗಣಚಾರಿ**, ಅಲಕ್ಷಿತ ವಚನಕಾರ್ತಿಯರು, ವಚನಗಳ ಆಶಯ ಮತ್ತು ಅಭಿವ್ಯಕ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಗಾಯತ್ರಿ ಎ., ೨೦೦೧, **ಕನ್ನಡ ವಚನ ಕಾರ್ತಿಯರ ಒಂದು ಅಧ್ಯಯನ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

# ೨. ವಕ್ತೃವಿವರ

೧. ಶ್ರೀ.ಮ.ನಿ.ಪ್ರ. ಗುಹೇಶ್ವರ ಸ್ವಾಮಿಗಳು, ಮಂಠಾಳ, ತಾ॥ ಬಸವಕಲ್ಯಾಣ ಜಿ॥ ಬೀದರ್, ವಯಸ್ಸು–೬೦, ವೃತ್ತಿ–ಸಮಾಜ ಸೇವೆ

೨. ಶ್ರೀಮತಿ ಮಲ್ಲಮ್ಮ ತಾಯಿ, ಬಸವಕಲ್ಯಾಣ, ಬೀದರ್.ಜಿ॥, ವಯಸ್ಸು–೬೩, ವೃತ್ತಿ– ಕೌಟುಂಬಿಕ ಕೆಲಸ

೩. ಶ್ರೀ ಬಸಪ್ಪ ಕೋಲಶೆಟ್ಟರ, ಸಾ॥ ಅಯನಾಪುರ, ತಾ॥ ಬಸವಕಲ್ಯಾಣ, ಜಿ॥ ಬೀದರ್, ವಯಸ್ಸು–೭೫, ವೃತ್ತಿ–ರೈತರು

೪. ಶ್ರೀಮತಿ ನೀಲಾವತಿ ಇಸ್ಲಾಂಪುರ, ಸರ್ವೋದಯ ಕಾಲೋನಿ, ಬಸವಕಲ್ಯಾಣ, ತಾ॥, ಬೀದರ್ ಜಿ॥, ವಯಸ್ಸು–೪೮, ವೃತ್ತಿ–ಪ್ರೌಢಶಾಲೆ ಶಿಕ್ಷಕಿ

೫. ಶ್ರೀ.ಮ.ನಿ.ಪ್ರ. ನೀಲಕಂಠ ಸ್ವಾಮಿಗಳು, ಮುರಗೋಡ, ತಾ॥ ಬೈಲಹೊಂಗಲ,ಜಿ॥ ಬೆಳಗಾವಿ ವಯಸ್ಸು–೬೨.

೬. ಶ್ರೀ ಬಸಪ್ಪನವರು, ಸಾ॥ ಮುರಕಿಬಾವಿ, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ, ವಯಸ್ಸು–೬೦, ವೃತ್ತಿ–ರೈತರು.

೭. ಎಂ.ಹನಮಂತಪ್ಪ, ಸಾ॥ ಮುರಕಿಬಾವಿ, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ, ವಯಸ್ಸು–೬೭, ವೃತ್ತಿ–ರೈತರು.

೮. ರವಿ ಕುಂಬಾರಿ, ಸಾ॥ ಕಾದ್ರವಳ್ಳಿ, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ

೯. ಚನ್ನವೀರಪ್ಪ, ಕುಂಬಾರ, ಸಾ॥ ಕಾದ್ರವಳ್ಳಿ, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ, ವಯಸ್ಸು–೫೫, ವೃತ್ತಿ– ಕಬ್ಬಿನ ಫ್ಯಾಕ್ಟರಿ ನೌಕರ

೯. ಎಂ.ಎಚ್. ನದಾಪ್, ಸಾ॥ ಅಮರಗೋಳ, ತಾ॥ ಮುದ್ದೇಬಿಹಾಳ, ಜಿ॥ ಬಿಜಾಪುರ, ವಯಸ್ಸು–೭೦. ವೃತ್ತಿ–ರೈತರು

೧೦. ಶ್ರೀ ಶಿವಶಂಕರ ಸ್ವಾಮಿಗಲು, ವಿರಕ್ತ ಮಠ ತಮದಡ್ಡಿ, ತಾ॥ ಮುದ್ದೇಬಿಹಾಳ, ಜಿ॥ ಬಿಜಾಪುರ, ವಯಸ್ಸು–೬೩, ವೃತ್ತಿ– ಸಮಾಜ ಸೇವೆ.

೧೦. ಶ್ರೀಮ.ನಿ.ಪ್ರ.ಚನ್ನಬಸವ ಮಹಾಸ್ವಾಮಿಗಳು, ವಿರಕ್ತ ಮಠ ಇಂಗಳೇಶ್ವರ, ತಾ॥ ಬಸವಣ ಬಾಗೇವಾಡಿ, ಜಿ॥ ಬಿಜಾಪುರ, ವಯಸ್ಸು-೮೦.

೧೧. ಶ್ರೀ ವೀರಯ್ಯ ಮಠಪತಿ, ಸಾ॥ ಇಟಗಿ, ತಾ॥ ಬಸವನ ಬಾಗೇವಾಡಿ, ಜಿ॥ ಬಿಜಾಪುರ, ವಯಸ್ಸು-೮೫, ವೃತ್ತಿ-ಹೋಟೆಲ್ ಮಾಲೀಕರು.


೧೨. ಹಡಪದ ಚನ್ನಪ್ಪ, ಸಾ॥ ತಂಗಡಗಿ, ತಾ॥ ಮುದೇಬಿಹಾಲ, ಜಿ॥ ಬಿಜಾಪುರ, ವಯಸ್ಸು-೬೫, ವೃತ್ತಿ-ವ್ಯಾಪಾರಸ್ಥರು

೧೨ ಕೊಡ್ಲಯ್ಯ ಸಾರಂಗಮಠ ಸಾ॥ ತಂಗಡಗಿ, ತಾ॥ ಮುದ್ದೇಬಿಹಾಳ, ಜಿ॥ ಬಿಜಾಪುರ, ವಯಸ್ಸು-೬೦, ವೃತ್ತಿ-ರೈತರು.

೧೩. ವೀರಮ್ಮ ಹೀರೇಮಠ, ಸಾ॥ ಬೆಳಗಲ್, ಸಾ॥ ಹುನಗುಂದ, ಜಿ॥ ಬಾಗಲಕೋಟೆ, ವಯಸ್ಸು-೭೦.

೧೪. ತಳ್ಳಿಹಾಳ. ಶರಣಬಸವ ಸ್ವಾಮಿಗಳು, ಸಾ॥ ತಳ್ಳಿಹಾಳ, ತಾ॥ ರೋಣ, ಜಿ॥ ಗದಗ

## ಅ. ಗಂಗಾಂಬಿಕೆ ತಂದೆ ಬಲದೇವ ಹಾಗೂ ನೀಲಾಂಬಿಕೆ ತಂದೆ ಸಿದ್ದರಸ ಇವರುಗಳ ವಂಶಾವಳಿ




ಕೃಪೆ: ಸಂಯುಕ್ತ ಕರ್ನಾಟಕ, ಶುಕ್ರವಾರ ೨೧ನೇ ಜುಲೈ ೧೯೪೮, ಪು.೪

# ಆ. ಗಂಗಾಂಬಿಕೆ ಮತ್ತು ನೀಲಾಂಬಿಕೆಯರಿಗೆ ಸಂಬಂಧಿಸಿದ ಛಾಯಾಚಿತ್ರಗಳು



ಗಂಗಾಂಬಿಕೆಯ ಶಿವಯೋಗ ಸಾಧನೆಗೈಯ್ದ ಗವಿ, ತ್ರಿಪುರಾಂತೇಶ್ವರ ದೇಗುಲ ಹಿಂಭಾಗ, ಬಸವಕಲ್ಯಾಣ, ಬೀದರ್ ಜಿಲ್ಲೆ



ಗಂಗಾಂಬಿಕೆ ಗವಿಯ ಒಳನೋಟ, ಬಸವಕಲ್ಯಾಣ, ಬೀದರ್ ಜಿಲ್ಲೆ




ಕೃಪೆ: ಶ್ರೀನಿವಾಸ ಯ. ತಾಳೂಕರ ಫೋಟೊ ಹಾಗೂ ಲ್ಯಾಮಿನೇಷನ್



ಮಲಪ್ರಭಾ ನದಿ ದಂಡೆಯಲ್ಲಿರುವ ಗಂಗಾಂಬಿಕೆ ಐಕ್ಯಸ್ಥಳದ ಗರ್ಭಗುಡಿ, ಎಂ.ಕೆ.ಹುಬ್ಬಳ್ಳಿ



ಗಂಗಾಂಬಿಕೆ ಐಕ್ಯಸ್ಥಳದ ಶಿವಲಿಂಗ ಗರ್ಭಗುಡಿ, ಎಂ.ಕೆ.ಹುಬ್ಬಳ್ಳಿ



ನೀಲಾಂಬಿಕೆ ಶಿವಯೋಗ ಸಾಧನೆಗೈಯ್ದ ಗವಿ(ತ್ರಿಪುರಾಂತೇಶ್ವರ ದೇವಾಲಯ ಹಿಂಭಾಗ),
ಬಸವಕಲ್ಯಾಣ, ಬೀದರ್ ಜಿಲ್ಲೆ



ನೀಲಾಂಬಿಕೆ ಗವಿಯ ಒಳನೋಟ, ಬಸವಕಲ್ಯಾಣ, ಬೀದರ್ ಜಿಲ್ಲೆ



ನೀಲಾಂಬಿಕೆ ಐಕ್ಯಸ್ಥಳ, ತಂಗಡಗಿ, ಬಿಜಾಪುರ ಜಿಲ್ಲೆ(ಹೊರ ನೋಟ)



ನೀಲಾಂಬಿಕೆ ಐಕ್ಯ ಮಂಟಪದಲ್ಲಿರುವ ಶಿವಲಿಂಗ, ತಂಗಡಗಿ, ಬಿಜಾಪುರ ಜಿಲ್ಲೆ



ನೀಲಾಂಬಿಕೆಯ ತೋರುಗದ್ದಿಗೆಯ ಮಂಟಪ, ಮುರಕಿ ಬಾವಿ
ಬೈಲಗಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ



ನೀಲಾಂಬಿಕೆಯ ತೋರುಗದ್ದುಗೆ, ಮುರುಕಿಬಾವಿ
ಕೃಪೆ: ಶರಣ ಕ್ಷೇತ್ರಗಳು ಪುಸ್ತಕದಿಂದ



ಅಕ್ಕನಾಗಮ್ಮ ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಗವಿಗಳ ಮುಂಭಾಗದ ನೋಟ
ಬಸವಕಲ್ಯಾಣ, ಬೀದರ್ ಜಿಲ್ಲೆ